'ಸಮುದಾಯ' : ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಮುನಿರಾಜು ಎಂ.

ಮಾರ್ಗದರ್ಶಕರು
ಡಾ.ಸಿ.ಆರ್. ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬
೨೦೨೦

‘ಸಮುದಾಯ’ : ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಮುನಿರಾಜು ಎಂ.

ಮಾರ್ಗದರ್ಶಕರು
ಡಾ.ಸಿ.ಆರ್. ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

'ಸಮುದಾಯ' : ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪಿಎಚ್.ಡಿ. ಪದವಿಗಾಗಿ **ಮುನಿರಾಜು ಎಂ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಸಿ.ಆರ್. ಗೋವಿಂದರಾಜು
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : ೧೨·೨·೨೦೧೦

ಸ್ಥಳ : ವಿದ್ಯಾರಣ್ಯ

<u>ಸಂಶೋಧಕರ ಪ್ರಮಾಣಪತ್ರ</u>

'ಸಮುದಾಯ' : ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸಿ.ಆರ್. ಗೋವಿಂದರಾಜು,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಮುನಿರಾಜು ಎಂ.)
ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ: ೧೩·೨·೨೦೨೦
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಹಿನ್ನೆಲೆ, ಆಶಯ ಮತ್ತು ಮಹತ್ವ, ಸಮೀಕ್ಷೆ, ವ್ಯಾಪ್ತಿ ಹಾಗೂ ಮಿತಿಗಳು, ವೈಧಾನಿಕತೆ, ಸ್ವರೂಪ

೧.೧ ಅಧ್ಯಯನದ ಹಿನ್ನೆಲೆ, ಆಶಯ ಮತ್ತು ಮಹತ್ವ

೧.೨ ಅಧ್ಯಯನದ ಸಮೀಕ್ಷೆ

೧.೩ ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

೧.೪ ಅಧ್ಯಯನದ ವಿಧಿ-ವಿಧಾನಗಳು

೧.೫ ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಹಿನ್ನೆಲೆ, ಆಶಯ ಮತ್ತು ಮಹತ್ವ, ಸಮೀಕ್ಷೆ, ವ್ಯಾಪ್ತಿ ಹಾಗೂ ಮಿತಿಗಳು, ವೈಧಾನಿಕತೆ, ಸ್ವರೂಪ

೧.೧. ಅಧ್ಯಯನದ ಹಿನ್ನೆಲೆ, ಆಶಯ ಮತ್ತು ಮಹತ್ವ

ಆಧುನಿಕ ಕನ್ನಡ ರಂಗಭೂಮಿಯ ಚರಿತ್ರೆ ಒಂದು ಶತಮಾನಕ್ಕೂ ಕಡಿಮೆಯಿರುವಂಥದ್ದು. ಚಿಕ್ಕ ಅವಧಿಯಾದರೂ ಸಾಹಿತ್ಯ ಮತ್ತು ರಂಗಭೂಮಿಯ ಚಳವಳಿಗಳ ನೋಟದಿಂದ ಅಲ್ಲಿ ಗಮನಿಸಲೇಬೇಕಾದ ಕೆಲವು ಪ್ರತ್ಯೇಕವಾದ ದಾರಿಗಳಿವೆ. ಆದರೆ ಅವೆಲ್ಲ ಪರಸ್ಪರ ಪೂರಕವಾಗಿದ್ದು ರಂಗಭೂಮಿಯನ್ನು ಈ ಹೊತ್ತಿಗೂ ಜೀವಂತವಾಗಿ ಜತನ ಮಾಡಿಕೊಂಡು ಬರುತ್ತಿರುವುದು ಗಮನಾರ್ಹ. ಸರಳವಾಗಿ ಹೇಳುವುದಾದರೆ ೧೯೦೦ ರಿಂದ ೧೯೩೦ರ ಅವಧಿಯನ್ನು ವೃತ್ತಿ ರಂಗಭೂಮಿಯ 'ವೈಭವದ ಕಾಲ'ವೆಂದೂ, ೧೯೩೦ರಿಂದ ೧೯೬೦ರ ಅವಧಿಯನ್ನು ಆಧುನಿಕ ನವೋದಯ ನಾಟಕ ಮತ್ತು ಹವ್ಯಾಸಿ ರಂಗಭೂಮಿಯನ್ನು 'ಅಭಿವೃದ್ಧಿ ಹೊಂದಿದ ಕಾಲ' ವೆಂದೂ ೧೯೬೦ ರಿಂದ ೧೯೮೦ರ ಅವಧಿಯನ್ನು ನವ್ಯ ನಾಟಕಕಾರರಿಗೆ 'ಮಹತ್ವ ಸಿಕ್ಕಿದ ಕಾಲ' ವೆಂದೂ ೧೯೮೦ ರಿಂದ ಇತ್ತೀಚಿನವರೆಗಿನ ಕಾಲವನ್ನು 'ನವ್ಯೋತ್ತರ ಕಾಲ' ವೆಂದೂ ಗುರುತಿಸುತ್ತೇವೆ. ಆದರೆ ವೃತ್ತಿ ರಂಗಭೂಮಿಯು ವೈಭವದ ಸ್ಥಿತಿಯಲ್ಲಿದ್ದಾಗಲೆ ಅದಕ್ಕೆ ಪ್ರತಿಯಾಗಿ ಹವ್ಯಾಸಿ ರಂಗಭೂಮಿ ಮತ್ತು ನವೋದಯ ನಾಟಕರರು ಕಾರ್ಯಪ್ರವೃತ್ತರಾದುದನ್ನು ನೋಡುತ್ತೇವೆ. ೧೯೬೦ ರಿಂದ ೧೯೮೦ರ ಅವಧಿಯಲ್ಲಿ ನವ್ಯದ ಜೊತೆ ಜೊತೆಗೆ ಶ್ರೀರಂಗರಂತಹ ಪ್ರತಿಭಾವಂತ ನವೋದಯದ ಹಿರಿಯ ನಾಟಕಕಾರರು ಮಹತ್ವದ ದಾಖಲೆಗಳನ್ನು ನಾಟಕದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆಯಾಗಿ ನೀಡಿರುವುದನ್ನು ಮರೆಯುವಂತಿಲ್ಲ. ಎಪ್ಪತ್ತರ ದಶಕದ ಹವ್ಯಾಸಿ ರಂಗಭೂಮಿಯು 'ಹೊಸ ನಾಟಕಗಳ ಚಿಂತನೆ ಹಾಗೂ ಸಾಂಸ್ಕೃತಿಕ ಚಳವಳಿ'ಗಳನ್ನು ಹುಟ್ಟುಹಾಕಿತು. ಮೊದಲಿಗೆ ಸಿ.ಜಿ.ಕೃಷ್ಣಸ್ವಾಮಿ(ಸಿ.ಜಿ.ಕೆ) ಮತ್ತು ಪ್ರಸನ್ನ ಅವರುಗಳನ್ನು ಈ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಪ್ರಾರಂಭಿಕ ಎರಡು ಕಣ್ಣುಗಳು ಎಂತಲೇ ಗುರುತಿಸಲಾಗುತ್ತದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ 'ಸಮುದಾಯ' ಎಂಬ ಸಾಂಸ್ಕೃತಿಕ ಸಂಘಟನೆಯೊಂದು ಹೇಗೆ ರಂಗ ಚಳವಳಿಗಳನ್ನು ರೂಪಿಸಿತು ಎಂಬುದನ್ನು ಚಾರಿತ್ರಿಕವಾಗಿ ವಿಶ್ಲೇಷಣೆಗೊಳಪಡಿಸುವುದು ಪ್ರಸ್ತುತ ಅಧ್ಯಯನದ ಆಶಯವೂ ಹೌದು.

'ಸಮುದಾಯ' ಎಂಬುದು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಗುರುತಿಸಿಕೊಂಡಿದ್ದು ೧೯೭೫ರಲ್ಲಿ. 'ಸಮುದಾಯ'ವೆಂದು ಹೆಸರು ಸೂಚಿಸಿದವರು ಕರ್ನಾಟಕದ ಪ್ರಮುಖ ವಿಮರ್ಶಕರಲ್ಲಿ ಒಬ್ಬರಾದ ಕಿ.ರಂ. ನಾಗರಾಜ ಅವರು. ಈ 'ಸಮುದಾಯ'ವು ಸಾಂಸ್ಕೃತಿಕ ಸಂಘಟನೆಯಾಗಿ ಹುಟ್ಟಲು ಎಪ್ಪತ್ತರ ದಶಕದ ತುರ್ತು ಪರಿಸ್ಥಿತಿಯೇ ಕಾರಣ. ಏಕೆಂದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಭಾರತದ ಸಂವಿಧಾನದ ಮೂಲ ಆಶಯವಾದ ಪ್ರಜಾಪ್ರಭುತ್ವೀಯ ಹಕ್ಕುಗಳ ದಮನಕಾರಿ ಆಡಳಿತದ ನಿಲುವು, ಜನರ ಮೇಲಿನ ದಬ್ಬಾಳಿಕೆ ಹಾಗೂ ಸ್ವಾತಂತ್ರ್ಯಪೂರ್ವದ ಬ್ರಿಟಿಷರ ದಬ್ಬಾಳಿಕೆಯಂತೆಯೇ ಅನುಭೂತಿ ನೀಡತೊಡಗಿದ್ದವು.

ಎಪ್ಪತ್ತರ ದಶಕದಲ್ಲಿ ದೇಶದ ಜನರಿಗೆ ಮೂಲಭೂತ ಹಕ್ಕುಗಳಷ್ಟೇ ಅಲ್ಲದೆ ಜೀವಿಸುವ ಹಕ್ಕು ಕೂಡ ಇಲ್ಲವಾಗಿತ್ತು. ಉದಾಹರಣೆಗೆ ಕೇರಳದಲ್ಲಿ ರಾಜನ್ ಎಂಬ ಇಂಜಿನಿಯರಿಂಗ್ ವಿದ್ಯಾರ್ಥಿ ಕಾಲೇಜಿನ ಹಾಸ್ಟೆಲ್‌ನಿಂದ ಕಣ್ಮರೆ ಆಗುತ್ತಾನೆ. ಈ ರಾಜನ್ ಪ್ರಕರಣ ರಾಷ್ಟ್ರವ್ಯಾಪಿ ಚರ್ಚೆಯಾಗುತ್ತದೆ. ಇಂತಹ ಗಂಭೀರ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಮುಖಂಡರನ್ನು, ಚಳವಳಿಕಾರರನ್ನು ಹಾಗೂ ಪತ್ರಿಕಾ ಸ್ವತಂತ್ರವು ಸೇರಿದಂತೆ ಜನರ ಸಾಂಸ್ಕೃತಿಕ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಹತ್ತಿಕ್ಕಲಾಯಿತು. ಈ ಹಿನ್ನೆಲೆಯಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಪ್ರಗತಿಪರ ಹೋರಾಟಗಾರರು, ರಂಗಭೂಮಿಯಲ್ಲಿನ ಕಲಾವಿದರು ಹಾಗೂ ಪ್ರಗತಿಪರ ಚಿಂತಕರು ಆಲೋಚಿಸಿ ಮುಂದುವರೆಯುವಂತೆ ಮಾಡಿತ್ತು. 'ಸಮುದಾಯ'ದ ಬಗೆಗೆ ಇಲ್ಲಿಯವರೆಗಿನ ಅಧ್ಯಯನಗಳು ಅದನ್ನು ಒಂದು ಸಾಂಸ್ಕೃತಿಕ ವಿಚಾರವನ್ನಾಗಿಯಷ್ಟೇ ಗುರುತಿಸುವ ಪ್ರಯತ್ನಗಳನ್ನು ಮಾಡಿವೆಯೇ ಹೊರತು, 'ಸಮುದಾಯ'ದ ಒಂದು ತಾತ್ವಿಕ ನೆಲೆಗಟ್ಟಿನಲ್ಲಿ ಉಗಮವಾದ ಚಳವಳಿಯ ಹಿನ್ನೆಲೆಯಲ್ಲಿ ಇರುವಂಥ ಒಂದು ರಾಜಕಾರಣದ ಸ್ವರೂಪವನ್ನು ಚಾರಿತ್ರಿಕವಾಗಿ ಹೇಳುವ ಸಂಶೋಧನೆಗಳನ್ನಾಗಿ ನೋಡಿಲ್ಲ. ಇದೇ ಕಾರಣಕ್ಕಾಗಿ ತಾತ್ವಿಕ ವಿಮರ್ಶೆಗೆ ಒಳಪಡಿಸಿ, 'ಸಮುದಾಯ' ರಂಗ ಚಳವಳಿಗಳನ್ನು ತೌಲನಿಕವಾಗಿ ಚರ್ಚಿಸಿ, ಪ್ರಸ್ತುತ ಸಾಂಸ್ಕೃತಿಕ ರಂಗ ಚಳವಳಿಗಳಿಗೆ ಪೂರಕವಾಗುವ ನಿಟ್ಟಿನಲ್ಲಿ ಚರಿತ್ರೆಯ ವಿಧಿ-ವಿಧಾನಗಳ ಮೂಲಕ ಅಧ್ಯಯನ ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ.

೧.೨. ಅಧ್ಯಯನದ ಸಮೀಕ್ಷೆ

'ಸಮುದಾಯ' ಸಂಘಟನೆಯು ಕನ್ನಡ ರಂಗಭೂಮಿ ಚರಿತ್ರೆಯಲ್ಲಿ ಬಹುಮುಖ್ಯವಾದ ಸಾಂಸ್ಕೃತಿಕ ಸಂಘಟನೆಯಾಗಿದೆ. ಈ ಸಂಘಟನೆಯು ಕರ್ನಾಟಕ ರಂಗಭೂಮಿ ಚಳವಳಿಯ ದಿಕ್ಕನ್ನೇ ಚಾರಿತ್ರಿಕವಾಗಿ ಹಾಗೂ ಸೈದ್ಧಾಂತಿಕವಾಗಿ ಜನರೆಡೆಗೆ ಕೊಂಡೊಯ್ಯುವ ರಂಗ ಚಳವಳಿಯನ್ನಾಗಿ ಬದಲಾಯಿಸಿತು. 'ಸಮುದಾಯ' ಸಂಘಟನೆಯು ಕರ್ನಾಟಕದಾದ್ಯಂತ ಹೊಸ ಅಲೆಯ ಸೃಷ್ಟಿಗೂ ಕಾರಣವಾಗಿದೆ. ಅಲ್ಲದೆ ಹೊಸ ಸಾಹಿತ್ಯ ಸೃಷ್ಟಿಗೆ ಪ್ರೇರಣೆ ನೀಡಿದ ರಂಗ ಸಂಘಟನೆಯೇ 'ಸಮುದಾಯ'. ಜೊತೆಗೆ ವಿಶೇಷವಾಗಿ ಎಡ-ಪ್ರಜಾಸತ್ತಾತ್ಮಕ ಚಳವಳಿ ಹಾಗೂ ಇತರೆ ಸಾಮೂಹಿಕ ಸಂಘಟನೆಗಳಿಗೆ ಪೂರಕವಾಗಿ ಜಾಥಾ ಹಾಗೂ ಬೀದಿನಾಟಕಗಳ ಮೂಲಕ ಕರ್ನಾಟಕ ರಂಗಭೂಮಿ

ಚಳವಳಿಯನ್ನು ಕಟ್ಟಿದ್ದು ದಾಖಲಾರ್ಹವಾದುದು. ಹೀಗೆ ಕನ್ನಡ ಹವ್ಯಾಸಿ ರಂಗಭೂಮಿಯನ್ನು ಎಪ್ಪತ್ತರ ಹಾಗೂ ಎಂಬತ್ತರ ದಶಕದಲ್ಲಿ **ಕಲೆಯು ಕಲೆಗಾಗಿ ಅಲ್ಲ, ಜನರ ಬದುಕಿಗಾಗಿ ಕಲೆ** ಎಂಬ ಧ್ಯೇಯ-ಆಶಯದೊಂದಿಗೆ ೧೯೭೫ ರಲ್ಲಿ ಹುಟ್ಟಿಕೊಂಡಿತು. ಇಂತಹ ಸಾಂಸ್ಕೃತಿಕ ಸಂಘಟನೆಯ ರಂಗಚಳವಳಿಗಳ ಬಗೆಗೆ ಚಾರಿತ್ರಿಕ ಸಂಶೋಧನೆಯ ಅಧ್ಯಯನಗಳು ತೀರ ವಿರಳ. ಪ್ರಸ್ತುತ ಈ ಅಧ್ಯಯನವು ಸಾಹಿತ್ಯಿಕ ಅಂಶಗಳನ್ನೂ ಇಟ್ಟುಕೊಂಡು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನಗಳಾಗಿರುವುದರ ಬಗೆಗೆ ಈ ಕೆಳಗಿನ ಸಮೀಕ್ಷೆಗಳೊಂದಿಗೆ ಪರಿಶೀಲಿಸಿದೆ.

ಕರ್ನಾಟಕ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು ಎಂಬ ರವಿಕುಮಾರ್ ಬಾಗಿ ಅವರ ಈ ಸಂಶೋಧನ ಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ೨೦೧೯ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಇವರು ದಲಿತ, ಪ್ರಗತಿಪರ ಚಳವಳಿಗಳಲ್ಲಿ ಭಾಗವಹಿಸಿದ್ದು, ಇವುಗಳ ಅನುಭವ ಪಡೆದು ಸಾಂಸ್ಕೃತಿಕ ರಂಗ ಚಳವಳಿಯ ಅಧ್ಯಯನದಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಒಂದು ಅಧ್ಯಾಯದಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ. 'ಸಮುದಾಯ'ದ ಹುಟ್ಟು-ಪ್ರೇರಣೆ, ಉದ್ದೇಶಗಳ ಜೊತೆಗೆ 'ಸಮುದಾಯ'ದ ಸಾಂಸ್ಕೃತಿಕ ಜಾಥಾಗಳಿಗೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುತ್ತಾರೆ. ಈ 'ಸಮುದಾಯ' ಸಂಘಟನೆಯಲ್ಲಿ ವಿವಿಧ ಜಾತಿ, ವರ್ಗಗಳು ಹೇಗೆ ಭಾಗವಹಿಸಿವೆ? ಹಾಗೂ 'ಸಮುದಾಯ'ದ ರಂಗ ಚಳವಳಿಯ ಯಶಸ್ಸು ಹಾಗೂ ಅದರ ತೊಡಕುಗಳ ಬಗ್ಗೆ ವಿಮರ್ಶೆಗೆ ಒಳಪಡಿಸಿರುವುದನ್ನು ಗಮನಿಸಲಾಗಿದೆ. 'ಸಮುದಾಯ' ರೂಪಿಸಿದ ರಂಗ ಚಳವಳಿಗೆ ಇತರ ಸಮಾಜವಾದಿ, ದಲಿತ, ಬಂಡಾಯ, ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸಮಗ್ರವಾಗಿ ರಂಗ ಚಳವಳಿಯನ್ನು ಕಟ್ಟುವಲ್ಲಿ ರೂಪಿಸಿದ ಚಾರಿತ್ರಿಕ ಅಂಶಗಳ ಬಗ್ಗೆ ಈ ಅಧ್ಯಯನದಲ್ಲಿ ಗಮನಹರಿಸಿರುವುದನ್ನು ಕಾಣುತ್ತೇವೆ. ಆದರೆ 'ಸಮುದಾಯ' ಸಂಘಟನೆಯ ಚಾರಿತ್ರಿಕ ನೆಲೆಗಟ್ಟಿನ ಅಧ್ಯಯನ, ರಾಜಕಾರಣದ ಆಶಯ, ಸೈದ್ಧಾಂತಿಕ ಬದ್ಧತೆಗಳನ್ನು ಈ ಅಧ್ಯಯನದಲ್ಲಿ ಗಮನಿಸಿರುವುದಿಲ್ಲ. ಹಾಗಾಗಿ ಪ್ರಸ್ತುತ ಸಂಶೋಧನೆಯಲ್ಲಿ ಈ ಅಂಶಗಳನ್ನು ಕುರಿತು ಮತ್ತಷ್ಟು ಅಧ್ಯಯನ ಮಾಡುವುದರ ಮೂಲಕ ಕರ್ನಾಟಕದಲ್ಲಿರುವ 'ಸಮುದಾಯ'ದ ಎಲ್ಲಾ ಘಟಕಗಳು ಹಾಗೂ 'ಸಮುದಾಯ' ರಂಗ ಚಳವಳಿಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಕನ್ನಡದ ಬೀದಿನಾಟಕಗಳು ಎಂಬ ಪ್ರಬಂಧವನ್ನು ಕೃಷ್ಣಮೂರ್ತಿ ಅವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪಿಎಚ್.ಡಿ. ಅಧ್ಯಯನದಲ್ಲಿ ಬೀದಿನಾಟಕಗಳ ಪರಿಕಲ್ಪನೆ, ಸ್ವರೂಪ, ವಿಶ್ವದ ಪ್ರಮುಖ ದೇಶಗಳ ಬೀದಿನಾಟಕ ಸಂಸ್ಥೆಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಿದ್ದಾರೆ. ಹಾಗೂ ಭಾರತದ ಸ್ವಾತಂತ್ರ್ಯ ಪೂರ್ವದ ಇಪ್ಟಾ (IPTA) ಸಾಂಸ್ಕೃತಿಕ ಸಂಘಟನೆಯ ಬೀದಿನಾಟಕಗಳ ಬಗ್ಗೆ ವಿವರಣೆಯನ್ನು ನೀಡಿರುತ್ತಾರೆ. ಜೊತೆಗೆ 'ಸಮುದಾಯ' ರೂಪಿಸಿದ ಬೀದಿನಾಟಕಗಳ ವಿಶ್ಲೇಷಣೆಯನ್ನೂ ಮಾಡಿದ್ದಾರೆ. 'ಸಮುದಾಯ' ಸಂಘಟನೆಯನ್ನು ಸಾಹಿತ್ಯಕ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿದ್ದು, ಸೈದ್ಧಾಂತಿಕವಾಗಿ 'ಸಮುದಾಯ'ವು ಕಮ್ಯುನಿಸ್ಟ್ ಪಕ್ಷಗಳ ಚಳವಳಿಗಳಲ್ಲಿ

ಭಾಗವಹಿಸುವಿಕೆ ಹಾಗೂ ರೈತ ಚಳವಳಿ, ಕಾರ್ಮಿಕ ಚಳವಳಿ, ವಿದ್ಯಾರ್ಥಿ ಚಳವಳಿ ಹಾಗೂ ಮಹಿಳಾ ಚಳವಳಿಗಳ ಜೊತೆಗೆ ಹೇಗೆ ನಂಟನ್ನು ಬೆಳೆಸಿಕೊಂಡಿತ್ತು ಎನ್ನುವುದರ ಬಗೆಗೂ ಗುರುತಿಸಲಾಗಿದೆ. 'ಸಮುದಾಯ'ದ ಚಾರಿತ್ರಿಕ ರಾಜಕಾರಣದ ಆಶಯಗಳ ಸೈದ್ಧಾಂತಿಕ ಸ್ಥಿತ್ಯಂತರಗಳ ವಿಮರ್ಶೆಗೂ ಹೆಚ್ಚು ಒತ್ತು ನೀಡಿರುವುದನ್ನು ಕಾಣುತ್ತೇವೆ. ಕನ್ನಡ ಬೀದಿ ನಾಟಕಗಳ ಮೇಲೆ ಸಾಹಿತ್ಯಿಕ ಆಕರಗಳನ್ನು ಬಳಸಿಕೊಂಡು ಅಧ್ಯಯನ ಮಾಡಿರುವುದನ್ನು ವಿಶೇಷವಾಗಿ ಗಮನಿಸಬಹುದು. ಜೊತೆಗೆ 'ಸಮುದಾಯ' ರೂಪಿಸಿದ ಬೀದಿ ರಂಗ ಚಳವಳಿ ಹಾಗೂ ಬೀದಿನಾಟಕಗಳ ಬಗ್ಗೆ ಹೆಚ್ಚು ಒತ್ತು ನೀಡಿರುವುದು ಈ ಸಂಶೋಧನಾ ಪ್ರಬಂಧದಲ್ಲಿ ಕಂಡುಬರುತ್ತದೆ. ಈ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪೂರಕವಾಗಿ ಪರಿಶೀಲಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ನಾಗೇಶ್ ಬೆಟ್ಟಕೋಟೆ ಅವರ ಪಿಎಚ್.ಡಿ ಸಂಶೋಧನ ಪ್ರಬಂಧವಾದ **ಬೀದಿ ರಂಗಭೂಮಿಯು** ಬೀದಿನಾಟಕಗಳ ಚಾರಿತ್ರಿಕ ದೃಷ್ಟಿಕೋನ ಹಾಗೂ ಎಪ್ಪತ್ತರ ದಶಕದ ಆರಂಭ ಕಾಲದ ಚಿತ್ರ ರಂಗತಂಡಗಳನ್ನು ಕುರಿತು ವಿಶ್ಲೇಷಿಸುವಂಥದ್ದು. ಹಾಗೂ ಗೆಳೆಯರ ಗುಂಪು ಮತ್ತು 'ಸಮುದಾಯ' ಎಂಬ ರಂಗ ಸಂಘಟನೆಗಳ ಬೀದಿನಾಟಕಗಳ ಚಿತ್ರಣವನ್ನೂ ಅಧ್ಯಯನಕ್ಕೆ ಒಳಪಡಿಸಲಾಗಿದೆ. 'ಸಮುದಾಯ'ದ ಪ್ರಮುಖ ನಾಟಕಗಳಲ್ಲಿ ಬೆಲ್ಚಿ ನಾಟಕವು ಪ್ರಮುಖವಾದದ್ದು. ಈ ನಾಟಕದ ಮುಖೇನ ಸಾಮಾಜಿಕ ಬದಲಾವಣೆಯು ಕಲಾ ಮಾಧ್ಯಮದ ಉದ್ದೇಶವಾಗಿರುತ್ತದೆ ಎಂದು ಹೇಳುವುದರ ಮೂಲಕ ಬೀದಿ ರಂಗಭೂಮಿಯ ಮಹತ್ವದ ಬಗ್ಗೆ ಚರ್ಚಿಸಿದ್ದಾರೆ. 'ಸಮುದಾಯ'ವು ಪಶ್ಚಿಮ ಬಂಗಾಳದ ಇಪ್ಟಾ(IPTA) ಹಾಗೂ ಬ್ರೆಕ್ಟ್‌ನ 'ಮೂರನೇ ರಂಗಭೂಮಿ'ಯಿಂದ ಪ್ರಭಾವಗೊಂಡಿರುವುದರ ಬಗೆಗೂ ಚರ್ಚೆಗಳುಂಟು. ಈ ಬೀದಿನಾಟಕವು ಸಾಮಾನ್ಯ ಜನರಿಗೆ ಹೇಗೆ ಅರಿವನ್ನು ಮೂಡಿಸಿತು, ಪ್ರತಿಭಟನೆಯನ್ನು 'ಸಮುದಾಯ'ವು ತನ್ನ ಅಸ್ತ್ರವನ್ನಾಗಿ ಹೊಂದಿ ಎಪ್ಪತ್ತರ ದಶಕದಲ್ಲಿ ಹೇಗೆ ಪ್ರಾಮುಖ್ಯತೆ ಪಡೆಯಿತು ಎಂಬ ಸಂಗತಿಗಳೂ ಪ್ರಧಾನವಾದವು. ಸಾಹಿತ್ಯಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬೀದಿ ರಂಗಭೂಮಿ ಹೇಗೆ ಪ್ರಾಮುಖ್ಯತೆ ಪಡೆಯಿತು ಎಂಬುದನ್ನು ಸಹ ಗುರುತಿಸಿದ್ದಾರೆ. ಜೊತೆಗೆ ಬೀದಿ ರಂಗಭೂಮಿಯ ಚರಿತ್ರೆ ಹಾಗೂ ಭಾರತ-ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಬೀದಿ ರಂಗಭೂಮಿ ಹುಟ್ಟು ಬೆಳವಣಿಗೆಗಳ ವಿವರಣೆಗಳನ್ನು ಇಲ್ಲಿ ನೀಡಲಾಗಿದೆ. 'ಸಮುದಾಯ' ಸಂಘಟನೆಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶಯದ ಬಗ್ಗೆ ಹಾಗೂ ಅದರ ಚಾರಿತ್ರಿಕತೆಯ ಬಗೆಗೆ ಬೆಳಕನ್ನು ಚಲ್ಲದಿರುವುದನ್ನು ಗಮನಿಸಬಹುದು. ಹಾಗಾಗಿ 'ಸಮುದಾಯ'ದ ರಂಗ ಚಳವಳಿಯ ಚಾರಿತ್ರಿಕ ಅಧ್ಯಯನದ ಕೊರತೆಗಳನ್ನು ನೀಗಬೇಕಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಬಸವರಾಜ.ಕೆ. ಅವರ **ಕನ್ನಡದ ಬೀದಿನಾಟಕಗಳು** ಎಂಬ ಸಂಶೋಧನ ಪ್ರಬಂಧವು ಗುಲ್ಬರ್ಗ ಜಿಲ್ಲೆಯ ಬೀದಿ ರಂಗಭೂಮಿಯ ಅಧ್ಯಯನವಾಗಿದೆ. ಕರ್ನಾಟಕದ ಬೀದಿ ರಂಗ ಸಂಸ್ಥೆಗಳು ಹಾಗೂ 'ಸಮುದಾಯ'ದ ಬೀದಿನಾಟಕಗಳ ರಂಗಚಳವಳಿಯನ್ನು ಸಾಹಿತ್ಯಕ ದೃಷ್ಟಿಕೋನದಲ್ಲಿ ಚರ್ಚಿಸಲಾಗಿದೆ. ಆದರೆ ಕರ್ನಾಟಕದ ನಾಲ್ಕುವರೆ ದಶಕಗಳ ರಾಜಕಾರಣದ

(೧೯೭೫ ರಿಂದ ೨೦೨೦) ಚರಿತ್ರೆಯನ್ನು 'ಸಮುದಾಯ' ರಂಗ ಚಳವಳಿಯ ಮೂಲಕ ಕಟ್ಟಿಕೊಟ್ಟ ನೆಲೆಗಳನ್ನು ಇದರಲ್ಲಿ ಗಮನಿಸಿಲ್ಲ. ಈ ಹಿನ್ನೆಲೆಯಲ್ಲಿ 'ಸಮುದಾಯ' ಸಂಘಟನೆಯನ್ನು ಸೈದ್ಧಾಂತಿಕವಾಗಿ ಹಾಗೂ ಚರಿತ್ರೆಯ ವೈಧಾನಿಕತೆಯ ಮೂಲಕ ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ರಾಮುಲಮ್ಮ ಅವರ **ಸಿ.ಜಿ.ಕೃಷ್ಣಸ್ವಾಮಿ ಜೀವನ ಮತ್ತು ಸಾಧನೆಯ** ಸಂಶೋಧನ ಪ್ರಬಂಧವು ಸಿ.ಜಿ.ಕೃಷ್ಣಸ್ವಾಮಿ ಅವರ ಜೀವನ ಹಾಗೂ ಅವರು ರಂಗಕ್ಷೇತ್ರಕ್ಕೆ ನೀಡಿದ ಕೊಡುಗೆ ಮತ್ತು ಬೀದಿ ರಂಗಭೂಮಿಯ ಕುರಿತ ಅಧ್ಯಯನವಾಗಿದೆ. ಸಿ.ಜಿ.ಕೆ. ಅವರ ಜೀವನವು ಹೇಗೆ ಹೋರಾಟದ ಜೀವನವಾಗಿತ್ತು ಎಂಬುದರ ಜೊತೆಗೆ ಯಾವುದೇ ರಂಗಸಂಸ್ಥೆಯಲ್ಲಿ ತರಬೇತಿ ಪಡೆಯದೇ ಏಕಲವ್ಯನ ರೀತಿಯ ರಂಗಕರ್ಮಿಯಾಗಿ ಕನ್ನಡ ಹವ್ಯಾಸಿ ರಂಗಭೂಮಿಯನ್ನು ಬೆಳೆಸಿದ ಬಗೆಯನ್ನು ಇಲ್ಲಿ ಗುರುತಿಸಲಾಗಿದೆ. ಸಿ.ಜಿ.ಕೆ ಅವರ ನಾಟಕಗಳು ಹಾಗೂ 'ಸಮುದಾಯ', 'ರಂಗನಿರಂತರ', ಸಾಣೇಹಳ್ಳಿಯ 'ಶಿವಸಂಚಾರ' ರಂಗಸಂಸ್ಥೆಗಳನ್ನು ಕಟ್ಟುವಲ್ಲಿ ಇವರ ಶ್ರಮವನ್ನು ಕುರಿತ ಮಾಹಿತಿಗಳನ್ನು ಈ ಪ್ರಬಂಧ ಒಳಗೊಂಡಿದೆ. ಸಿ.ಜಿ. ಕೃಷ್ಣಸ್ವಾಮಿಯ ಬೀದಿನಾಟಕ ಹಾಗೂ ರಂಗನಾಟಕಗಳು ಎರಡರಲ್ಲೂ ಹೇಗೆ ಸಾಧನೆ ಮಾಡಿದರು ಎಂಬುದನ್ನು ಸಾಹಿತ್ಯಿಕ ಆಕರಗಳ ಮೂಲಕ ಈ ಪ್ರಬಂಧದಲ್ಲಿ ಸಂಶೋಧಕರು ಗುರುತಿಸಿದ್ದಾರೆ.

ವೆಂಕಟೇಶ್.ಆರ್ ಅವರು **ಜನಪದ ರಂಗಭೂಮಿ ಮತ್ತು ಆಧುನಿಕ ಜನಪದ ರಂಗಭೂಮಿ ಸ್ವರೂಪ–ಸಂರಚನೆ** ಎಂಬ ಮಹಾಪ್ರಬಂಧದಲ್ಲಿ ಜನಪದ ರಂಗಭೂಮಿಯು ಬೆಳೆದುಬಂದ ಸಾಹಿತ್ಯಾತ್ಮಕ ಅಂಶಗಳನ್ನು ಇಟ್ಟುಕೊಂಡು ತಮ್ಮ ಅಧ್ಯಯನವನ್ನು ಕೈಗೊಂಡಿರುತ್ತಾರೆ. ಜೊತೆಗೆ ಜನಪದ ರಂಗಭೂಮಿಯು ಯಾವ ಯಾವ ರೀತಿಯಲ್ಲಿ ಬದಲಾವಣೆಗಳು ಹೊಂದಿದೆ, ಬೆಳೆದಿದೆ. ಈ ಆಧುನಿಕ ಜನಪದ ರಂಗಭೂಮಿಯು ಪ್ರಸುತ್ತ ಸಮಾಜದ ಮೇಲೆ ಹೇಗೆ ಪ್ರಭಾವಿಸಿದೆ. ಅದರಲ್ಲೂ 'ಸಮುದಾಯ' ಸಂಘಟನೆಯನ್ನು ಪ್ರಾಯೋಜಿಸಿ ನಾಟಕಗಳನ್ನಾಡಿದವು ಅದರಲ್ಲಿ 'ಸಮುದಾಯ'ವು ಜನಪದ ಮತ್ತು ಹವ್ಯಾಸಿ ರಂಗಭೂಮಿಯು ಮುಖ್ಯ ರಂಗ ಸಂಘಟನೆ ಎಂದು ಈ ಅಧ್ಯಯನವು ಗುರುತಿಸಿದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಮಹಾಪ್ರಬಂಧವು ಜನಪದ ರಂಗಭೂಮಿಯು ಅದರಲ್ಲೂ 'ಸಮುದಾಯ'ವು ಜನಪದ ದೇಶಿಯ ಪರಿಕಲ್ಪನೆಯ ನಾಟಕಗಳ ಮುಖೇನ ಚಾರಿತ್ರಿಕ ಅಂಶಗಳನ್ನು ಕಟ್ಟಿಕೊಟ್ಟಿದೆ. ಹಾಗೆ 'ಸಮುದಾಯ'ವನ್ನು ಕುರಿತು ಹೇಗೆ ಬೆಳಕು ತಂದಿದೆ ಎಂಬ ಅಂಶಗಳ ಬಗೆಗೆ ತೀರ ವಿರಳವಾದ ಮಾಹಿತಿಯನ್ನು ಹೊಂದಿದ್ದು ಇಂತಹ ಅಂಶಗಳನ್ನು ಇನ್ನಷ್ಟು ಪರಿಶೀಲಿಸಿ ವಿಶ್ಲೇಷಣೆಗೆ ಒಳಪಡಿಸವುದು ಪ್ರಸ್ತುತ ಅಧ್ಯಯನದ ಅತ್ಯಗತ್ಯವಾಗಿದೆ.

ನಾಗಭೂಷಣಗೌಡ ಪಾಟೀಲ ಎಂಬ ಸಂಶೋಧಕರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ **ಸಮಾಜವಾದಿ ಚಳವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯ** ಎಂಬ ಪಿಎಚ್.ಡಿ ಮಹಾಪ್ರಬಂಧವು ಸಮಾಜವಾದಿ ಚಳವಳಿಗಳಿಗೆ ಪ್ರೇರಣೆಯನ್ನು ನೀಡಿದ ಆಧುನಿಕ ಕನ್ನಡ ಸಾಹಿತ್ಯ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸುತ್ತದೆ. ಅದರಲ್ಲಿ ಆಧುನಿಕ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಹೇಗೆ

ಸಮಾಜವಾದಿ ಅಂಶಗಳಾದ 'ಸಮಾನತೆ'ಯ ಅಂಶಗಳನ್ನು ಜಾರಿಗೆ ತರಲು 'ಕಾಗೋಡು ಸತ್ಯಾಗ್ರಹ', 'ನರಗುಂದ ರೈತ ಬಂಡಾಯ' ಹಾಗೂ ಭೂಮಿ ಪ್ರಶ್ನೆಗಳನ್ನು ಇಟ್ಟುಕೊಂಡಂತಹ ಚಳವಳಿಗಳಿಗೆ ಕನ್ನಡ ಸಾಹಿತ್ಯವು ಕಾವ್ಯ, ಕಾದಂಬರಿ, ಕಥೆಗಳು, ನಾಟಕ, ಹಾಡುಗಳ ಪ್ರಕಾರಗಳ ಮೂಲಕ ಹೇಗೆ ಪ್ರತಿಕ್ರಿಯೆಯನ್ನು ನೀಡಿದವು ಅದರಲ್ಲೂ ಸಮಾಜವಾದಿ ಚಳವಳಿಗಳಿಗೆ ಕ್ರಾಂತಿಗೀತೆಗಳು, ಇತರೆ ರಂಗ ಗೀತೆಗಳು ಹಾಗೂ ಗಾಯಕರು, ಹಾಡುಗಾರರ ಪ್ರಭಾವದ ಜೊತೆಗೆ ರಂಗ ಚಳವಳಿ ಪ್ರೇರಣೆಯೊಂದಿಗೆ 'ಸಮುದಾಯ' ಸಂಘಟನೆ ರೂಪಿಸಿದ ಸಾಹಿತ್ಯದ ಮೂಲಕ ಸಮಾಜವಾದಿ ಚಳವಳಿಗಳು ಕರ್ನಾಟಕದಲ್ಲಿ ಹೇಗೆ ಬಲಿಷ್ಟಗೊಂಡವು ಎಂಬ ವಿಷಯಗಳ ಬಗೆಗೆ ಚರ್ಚಿಸಿರುತ್ತಾರೆ. 'ಸಮುದಾಯ'ವನ್ನು ಒಂದು ರಂಗವೇದಿಕೆಯ ಸ್ವರೂಪದಲ್ಲಿ ಗುರುತಿಸಲಾಗಿದ್ದು. 'ಸಮುದಾಯ' ರೂಪಿಸಿದ ಅಖಿಲ ಭಾರತ ರಂಗ ಚಳವಳಿಯ ಚಾರಿತ್ರಿಕ ಅಂಶಗಳನ್ನು ಈ ಸಂಶೋಧನ ಅಧ್ಯಯನದಲ್ಲಿ ಗುರುತಿಸದೆ ಇರುವುದನ್ನು ಕಾಣುತ್ತೇವೆ. ಜೊತೆಗೆ 'ಸಮುದಾಯ' ರೂಪಿಸಿದ ಸಮಾಜವಾದಿ ಕ್ರಾಂತಿಯ ಆಶಯಕ್ಕೆ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಹೇಗೆ ಕಾರಣವಾಯಿತು ಎಂಬುದಕ್ಕೆ ಈ ಅಧ್ಯಯನವನ್ನು ಮರು ನಿರೂಪಿಸುವ ಆಶಯವನ್ನು ಹೊಂದಲಾಗಿದೆ.

ರಶ್ಮಿ.ಎಸ್ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ **ತುರ್ತುಪರಿಸ್ಥಿತಿ : ಪ್ರಭಾವ ಮತ್ತು ಪರಿಣಾಮಗಳು** ಎಂಬ ಮಹಾಪ್ರಬಂಧದಲ್ಲಿ ತುರ್ತುಪರಿಸ್ಥಿತಿಯಂತಹ ಚಾರಿತ್ರಿಕ ವಿಷಯಗಳನ್ನು ಹಂತ ಹಂತವಾಗಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ತುರ್ತುಪರಿಸ್ಥಿತಿಯಲ್ಲಿ ಬಲಪಂಥೀಯ ಪಕ್ಷಗಳ ಹಾಗೂ ಎಡಪಂಥೀಯ ಪಕ್ಷಗಳ ಪಾತ್ರ ತುರ್ತುಪರಿಸ್ಥಿತಿಯಲ್ಲಿ ಪೊಲೀಸರು ಪ್ರಧಾನಿ ಇಂದಿರಾಗಾಂಧಿ ಬೆಂಬಲಕ್ಕೆ ನಿಂತು ವಿರೋಧಿ ಪಕ್ಷಗಳ ಹಾಗೂ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡಿದರು. ಜೊತೆಗೆ ತುರ್ತುಪರಿಸ್ಥಿತಿಯ ವಿರೋಧಿಯಾಗಿದ್ದ ಮಾಧ್ಯಮರಂಗದ ಪತ್ರಕರ್ತರು ಹಾಗೂ ಹೋರಾಟಗಾರರನ್ನು ಜೈಲುಗಳಲ್ಲಿ ತುಂಬುವ ಅಂಶಗಳ ಬಗ್ಗೆ ತಮ್ಮ ಅಧ್ಯಯನದಲ್ಲಿ ಬೆಳಕು ಚೆಲ್ಲಿದ್ದು, ಇದರ ಜೊತೆಗೆ ತುರ್ತುಪರಿಸ್ಥಿತಿಯ ಮೇಲೆ ಭಾರತೀಯ ರಂಗಭೂಮಿ ಹೇಗೆ ಪ್ರಭಾವ ಬೀರಿತು ಎಂಬ ಅಂಶಗಳು ಹಾಗೂ ಈ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಹುಟ್ಟಿಗೊಂಡಂತಹ 'ಸಮುದಾಯ' ಸಂಘಟನೆಯ ಚಾರಿತ್ರಿಕ ಚಲನೆಯು ಮುಂದೆ ಈ ಸಂಘಟನೆಯು ತುರ್ತುಪರಿಸ್ಥಿತಿಯನ್ನು ವಿರೋಧಿಸಿದ ಚಾರಿತ್ರಿಕ ಅಂಶಗಳನ್ನೂ ಇಲ್ಲಿ ಸ್ವಲ್ಪ ಮಟ್ಟಿಗೆ ವಿವರಿಸಲಾಗಿದೆ. 'ಸಮುದಾಯ' ಸಂಘಟನೆಯು ತುರ್ತುಪರಿಸ್ಥಿತಿಯ ಕರಾಳತೆಯನ್ನು ಚಾರಿತ್ರಿಕ ಅಂಶಗಳಲ್ಲಿ ಒಂದಾದ ಕೇರಳದ 'ರಾಜನ್ ಪ್ರಕರಣ'ದಲ್ಲಿ ರಾಜನ್ ತಂದೆಯ ಹೋರಾಟದ ಸಂಬಂಧಗಳನ್ನು ವಿಶ್ಲೇಷಣೆಗಳಿಗೆ ಒಳಪಡಿಸಿದೆ. 'ಸಮುದಾಯ' ಸಂಘಟನೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಎಡ-ಪ್ರಜಾಸತಾತ್ಮಕ ಪಕ್ಷಗಳು, ಸಂಘಟನೆಗಳ ಮೂಲಕ ಮಾಡಿದ ರಂಗ ಚಳವಳಿಯ ಚಾರಿತ್ರಿಕ ನೆಲಗಟ್ಟುಗಳನ್ನು ಹಂತ ಹಂತವಾಗಿ ಅಧ್ಯಯನಕ್ಕೆ ಒಳಪಡಿಸುವುದು ಅತ್ಯಗತ್ಯ. ಕಾರಣ ಪ್ರಸ್ತುತ ಸಂವಿಧಾನದ ಮೇಲೆ ನಡೆಯುತ್ತಿರುವ ದಾಳಿಯನ್ನು ಹಾಗೂ ಆರ್ಥಿಕ ಮುಗ್ಗಟ್ಟನ್ನು ನೋಡಿದರೆ ಮತ್ತೇ ತುರ್ತುಪರಿಸ್ಥಿತಿಯ ಅಂಶಗಳು ಈಗಲೂ ಗೋಚರಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ

ಪ್ರಸ್ತುತ ವರ್ತಮಾನಕ್ಕೆ ಹೇಗೆ ಮುಖಾಮುಖಿಗೊಳ್ಳುವುದು ಎಂಬುದರ ಬಗೆಗೆ ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಕೊಟ್ರೇಶ್.ಕೆ.ಎಚ್ ಅವರ **ಎಪ್ಪತ್ತರ ದಶಕದ ಹತ್ತು ನಾಟಕಗಳ ಸ್ವರೂಪ-ಸಂರಚನೆ** ಎಂ.ಫಿಲ್ ಸಂಪ್ರಬಂಧದಲ್ಲಿ ಎಪ್ಪತ್ತರ ದಶಕದ ಕನ್ನಡದ ಹವ್ಯಾಸಿ ರಂಗಭೂಮಿಯ ಪ್ರಮುಖ ನಾಟಕಗಳನ್ನು ಕುರಿತು ಚರ್ಚಿಸಲಾಗಿದೆ. ಈ ನಾಟಕಗಳು ರೂಪಿಸಿದ ರಂಗಚಳವಳಿ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಗಳನ್ನು ನೀಡಿಲಾಗಿದ್ದು, ಇದರಲ್ಲಿ 'ಸಮುದಾಯ' ಸಂಘಟನೆಯ ಪಾತ್ರದ ಬಗ್ಗೆ ಸಾಹಿತ್ಯಕ ಆಕರಗಳನ್ನು ಬಳಸಿ ಸಂಕ್ಷಿಪ್ತ ವಿವರಣೆಯನ್ನು ನೀಡಿರುತ್ತಾರೆ. 'ಸಮುದಾಯ' ಸಂಘಟನೆಯ ಚಾರಿತ್ರಿಕ ನೆಲೆಗಟ್ಟಿನ ಅಂಶಗಳ ಬಗೆಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿಲ್ಲ. ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು 'ಸಮುದಾಯ' ರಂಗ ಚಳವಳಿಯನ್ನು ಹಾಗೂ 'ಸಮುದಾಯ'ದ ನಾಟಕಗಳ ಮೂಲಕ ಸಮಾಜದ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಿತು ಎಂಬುದನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಬಾನುಕುಮಾರ್.ಆರ್. ಅವರ **ಬೀದಿನಾಟಕಗಳು ಮತ್ತು ಜಾಗತೀಕರಣ** ಎಂ.ಫಿಲ್ ಸಂಪ್ರಬಂಧದಲ್ಲಿ ಬೀದಿನಾಟಕಗಳು ಬೆಳೆದು ಬಂದ ಅಂಶಗಳ ಜೊತೆಗೆ ೧೯೯೨ರ ಎಲ್.ಪಿ.ಜಿ. ನೀತಿಗಳ ಜಾರಿಯಿಂದ ಸಮಾಜದಲ್ಲಿ ಆದ ಕೃಷಿ, ಕೈಗಾರಿಕೆ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಆದ ಖಾಸಗೀಕರಣದ ಹುನ್ನಾರಕ್ಕೆ ಸಮಾಜದಲ್ಲಿನ ಸಾಮಾನ್ಯ ಜನರ ಮೇಲೆ ಆದ ಪರಿಣಾಮಗಳ ಕುರಿತು ಚರ್ಚಿಸುತ್ತಾರೆ. ಬೀದಿನಾಟಕಗಳು ಜನರಲ್ಲಿ ಹೇಗೆ ಜಾಗತೀಕರಣಕ್ಕೆ ಪ್ರತ್ಯುತ್ತರವಾಗಿ ಜನಸಾಮಾನ್ಯರಲ್ಲಿ ಹೋರಾಟದ ಬಗ್ಗೆ ತಿಳುವಳಿಕೆ ಮೂಡಿಸಿದವು. ಜಾಗತೀಕರಣಕ್ಕೆ ಬೀದಿನಾಟಕಗಳು ಸ್ಪಂದಿಸಿದ ವಿರೋಧಭಾಸವನ್ನು ಈ ಅಧ್ಯಯನದಲ್ಲಿ ಅಧ್ಯಯನ ಮಾಡಿದ್ದು, ಇಲ್ಲಿ 'ಸಮುದಾಯ' ಮೂಡಿಸಿದ ಪ್ರಜ್ಞೆ ಬೀದಿ ಮತ್ತು ರಂಗಚಳವಳಿಯ ಪಾತ್ರದ ಬಗ್ಗೆ ವಿವರಣೆಗಳನ್ನು ನೀಡಲಾಗಿದೆ. 'ಸಮುದಾಯ' ರಂಗ ಚಳವಳಿಯಿಂದ ಸಮಾಜದಲ್ಲಿ ಮೂಡಿಸಿದ ಸೈದ್ಧಾಂತಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲದಿರುವುದು ಈ ಅಧ್ಯಯನದ ಕೊರತೆಯಾಗಿದೆ. 'ಸಮುದಾಯ' ರೂಪಿಸಿದ ಸೈದ್ಧಾಂತಿಕ ಸ್ಥಿತ್ಯಂತರಗಳ ಬಗ್ಗೆ ಚರ್ಚಿಸಲು ಈ 'ಸಮುದಾಯ' ಸಂಘಟನೆಗೆ ಇರುವ ಸೈದ್ಧಾಂತಿಕ ಬದ್ಧತೆಯ ಮಿತಿಗಳನ್ನು ಪ್ರಸ್ತುತ ಅಧ್ಯಯನದ ವಿಮರ್ಶೆಯ ಮೂಲಕ ಚರ್ಚಿಸಿ, ರಂಗ ಚಳವಳಿಯ ಉದ್ದೇಶ ಮತ್ತು ಆಶಯ, ಗುರಿಗಳ ಪ್ರಾಮುಖ್ಯತೆಯನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಸಿ.ಜಿ.ಕೆ ಅವರ ಜೀವನ ಚರಿತ್ರೆಯಾದ **ಕತ್ತಲೆ ಬೆಳದಿಂಗಳೊಳಗ** ಇದು ಸಿ.ಜಿ.ಕೃಷ್ಣಸ್ವಾಮಿ ಅವರ ಜೀವನ ಚರಿತ್ರೆಯಾಗಿದೆ. ಸಿ.ಜಿ.ಕೆ ಅವರ ಜೀವನದ ಆರಂಭದಿಂದ ಕೊನೆಯವರೆಗಿನ ಪಲ್ಲಟಗಳನ್ನು ಮುಕ್ತವಾಗಿ ಚರ್ಚೆಗೆ ಒಳಪಡಿಸಲಾಗಿದೆ. ಹಾಗೆ ಇನ್ನು ಹೆಚ್ಚು ವಿಷಯಗಳನ್ನು ಮರೆತಿದ್ದೇನೆ ಎಂದೂ ಹೇಳಿದ್ದಾರೆ. ೫೬೦ ಪುಟಗಳ ಈ ಬೃಹತ್ ಕೃತಿಯ ಆರಂಭದಲ್ಲಿ ವಿಮರ್ಶಕರಾದ ಜಿ.ರಾಜಶೇಖರ್, ಎಚ್.ಜಿ.ಸಿದ್ದರಾಮಯ್ಯ ಹಾಗೂ ಕಿ.ರಂ.ನಾಗರಾಜ ಅವರುಗಳ ಅಭಿಪ್ರಾಯಗಳು ಬಹುಮುಖ್ಯವೆನಿಸುತ್ತವೆ. ಅವುಗಳ ವಿವರಣೆಯನ್ನು ಈ ಕೆಳಗಿನಂತೆ ನೀಡಲಾಗಿದೆ.

ಜಿ.ರಾಜಶೇಖರ ಅವರು ಸಿ.ಜಿ.ಕೆ ಅವರನ್ನು **'ಒಡನಾಡಿಯ ಒಡಲಾಳ'** ಎಂಬ ಶೀರ್ಷಿಕೆಯಲ್ಲಿ ತಮ್ಮ ಅನಿಸಿಕೆಯನ್ನು ಬರೆದುಕೊಂಡಿದ್ದಾರೆ. ಸಿ.ಜಿ.ಕೆ ಅವರು 'ಸಮುದಾಯ', ದಲಿತ-ಬಂಡಾಯ ಸಂಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದವರು. ಏಕೆಂದರೆ ಅವರು ನಂಬಿದ್ದ ಸಮಾಜವಾದಿ (ಮಾರ್ಕ್ಸ್‌ವಾದಿ) ಸಿದ್ಧಾಂತಕ್ಕೆ ರೂಪಕವಾಗಿ ಕಾರ್ಯನಿರ್ವಹಿಸಿದವರು ಬಾಲ್ಯದ ಮತ್ತು ಕಾಲೇಜಿನ ದಿನಗಳಲ್ಲಿ ಅಸಂಖ್ಯಾತ ಗೆಳೆಯರ ಬಳಗದೊಳಗಿದ್ದವರು. ಸಮಾಜವಾದಿ ಆಶಯಗಳೊಳಗೊಂಡ ಚಿಂತನೆಯಲ್ಲಿ ಸದಾತೊಡಗಿದ್ದರು. ಆದರೆ ಇಲ್ಲಿ ಇತರ ರಂಗಕರ್ಮಿಗಳ ಮೇಲೆ ಇದ್ದಂತಹ ಅಭಿಪ್ರಾಯ, ಭಿನ್ನಾಭಿಪ್ರಾಯಗಳನ್ನು ಹೇಳಲು ಸಿ.ಜಿ.ಕೆ. ಅವರು ಪ್ರಯತ್ನಸಿಲ್ಲ ಎನ್ನಬಹುದು ಸಿ.ಜಿ.ಕೆ. ಅವರ ನಾಟಕಗಳು ಸದಾ ಜನರಿಗೆ ತೆರೆದ ಪಠ್ಯವಾಗಿ ರೂಪಗೊಂಡಿದ್ದವು ಎಂದು ಹೇಳಬಹುದು.

ಸಾಂಸ್ಕೃತಿಕ ಜನಪದ ಚಿಂತಕರಾದ ಎಸ್.ಜಿ.ಸಿದ್ಧರಾಮಯ್ಯ ಅವರು ಸಿ.ಜಿ.ಕೆ ಅವರನ್ನು **'ಕಳ್ಳುಬಳ್ಳಿಯ ಕಥಾನಾಯಕ'** ಎಂಬ ಶಿರ್ಷಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಸಿ.ಜಿ.ಕೆ ಅವರು ಮಂಡ್ಯದ ಹಳ್ಳಿಯಿಂದ ಬೆಂಗಳೂರು ನಗರಕ್ಕೆ ಬಂದು ಭಾಷೆ-ದೇಶಿತ್ವವನ್ನು ಮತ್ತು ತನ್ನ ಜೀವನದುದ್ದಕ್ಕೂ ಜನಪರ ಪ್ರಜ್ಞೆಯನ್ನು ತಮ್ಮ ನಾಟಕಗಳಲ್ಲಿ ಮೂಡಿಸಿದವರು. ದೇಹದ ದೌಬಲ್ಯವನ್ನು ಮೆಟ್ಟಿನಿಂತ ಸಿ.ಜಿ.ಕೆ. ಎಪ್ಪತ್ತರ ದಶಕ ನಮ್ಮ ದೇಶದ ಚರಿತ್ರೆಯಲ್ಲಿ ವಿಶೇಷವಾಗಿ ನಮ್ಮ ಕನ್ನಡ ನೆಲದ ಚರಿತ್ರೆಯಲ್ಲಿ ಬಹಳ ಮುಖ್ಯವಾದ ಕಾಲಘಟ್ಟ, ಈ ಅವಧಿಯಲ್ಲಿ ಹಲವು ಜನಪರ ಚಳವಳಿಗಳು ಹುಟ್ಟಿಕೊಂಡವು. ಈ ಎಲ್ಲಾ ಚಳವಳಿಗಳೂ ಶೂದ್ರ, ಬ್ರಾಹ್ಮಣ ಪ್ರಜ್ಞೆಯನ್ನು ತೀವ್ರಗೊಳಿಸಿದ ಚಲನೆಯ ಬಂಡಾಯಗಾರರ, ರೈತ ಚಳವಳಿಗಳು, ಶ್ರಮಿಕ ಮೂಲದ ಭೂ ಒಡೆತನದ ಮಧ್ಯಮ ಹಾಗೂ ಕೆಳಮಧ್ಯಮ ವರ್ಗದವರ ವೇದಿಕೆಗಳಾಗಿ ಹುಟ್ಟುಪಡೆದವು. ಇದರ ಪರಿಣಾಮದಿಂದ ಮಧ್ಯಮವರ್ಗದ ಹೋರಾಟಗಾರರ ಬಣ್ಣ ಬಯಲಾಗಿದ್ದು ಎಲ್ಲರಿಗೂ ಗೊತ್ತಿರುವ ಸತ್ಯ. ಇವುಗಳಿಗಿಂತ ಭಿನ್ನವಾಗಿ ದಲಿತ ಚಳವಳಿ ಅಕ್ಷರ ಜಗತ್ತಿಗೆ ತೆರೆದುಕೊಂಡು ಹಸಿವು ಅವಮಾನಿತರ ನೆಲೆಯ ಸಂಘಟನೆಯ ಫಲವಾಗಿ ಮೂಡಿತು. 'ಸಮುದಾಯ' ಸಂಘಟನೆಯು ನಗರ ಮೂಲದ ಸಂಘಟನೆಯಿಂದ ಗ್ರಾಮ ಪರಿಸರಕ್ಕೆ ಸಾಂಸ್ಕೃತಿಕ ಚಟುವಟಿಕೆಗಳ ದೀವಟಿಗೆ ಹಿಡಿದು ನಡೆದ ಸಂಘಟನೆಯಾಗಿದೆ. ಇದರಲ್ಲಿ ಸಿ.ಜಿ.ಕೆ. ಪಾತ್ರ ಪ್ರಮುಖ ಎಂದು ಹೇಳಿದ್ದಾರೆ. ಸಿ.ಜಿ.ಕೆ.ಯು ಶ್ರಮನಿಷ್ಠೆ ಹಾಗೂ ಸೌಂದರ್ಯಗಳೇ ಸಂಘಟನೆಯ ಪ್ರಾಣರೂಪಗಳೆಂದುಕೊಂಡು ಬದುಕಿನುದ್ದಕ್ಕೂ ಅದನ್ನು ಅಳವಡಿಸಿಕೊಂಡವರು. ಸಿ.ಜಿ.ಕೆ ಅವರು ದೇವರಾಜ ಅರಸರನ್ನು ಸೈದ್ಧಾಂತಿಕವಾಗಿ ವಿಮರ್ಶೆಗೆ ಒಳಪಡಿಸಿದರು. ಅವರ ಸಿದ್ಧಾಂತಕ್ಕೆ ರೂಪಿತ ಅಂಶವಾಗಿದೆ. ಹೀಗೆ ಸಿ.ಜಿ.ಕೆ. ಏಕಲವ್ಯನ ರೀತಿಯಲ್ಲಿ ನಿರಂತರ ಹೋರಾಟವನ್ನು ನಡೆಸಿದವರು ಸಿ.ಜಿ.ಕೆ. ಹವ್ಯಾಸಿ ರಂಗಭೂಮಿ ಚರಿತ್ರೆಗೆ ಬಹುಜನ 'ಸಮುದಾಯ' ಶ್ರಮ ಸಂಸ್ಕೃತಿಯ ಕಥನಾಯಕ ಎಂದು ಚರ್ಚಿಸಿರುತ್ತಾರೆ.

ಸಿ.ಜಿ.ಕೆಯ ಆತ್ಮೀಯ ವಿಮರ್ಶಕರಾದ ಕಿ.ರಂ.ನಾಗರಾಜ ಅವರು ಸಿ.ಜಿ.ಕೆ. ಅವರನ್ನು **'ಹೊಸ ಸಾಧ್ಯತೆಗಳ ಶೋಧಕ'** ಎಂದು ಕರೆಯುತ್ತಾರೆ. ಏಕೆಂದರೆ ಸಿ.ಜಿ.ಕೆ. ಸದಾ ಭಿನ್ನ ರೀತಿಯ ಚಿಂತನೆ ಮಾಡುವವರು. ಅದರಲ್ಲಿಯೂ ರಂಗಭೂಮಿಯಲ್ಲಿ ನಮ್ಮ ಸುತ್ತಣದ ಸಾಮಾಜಿಕ-ರಾಜಕೀಯ ಚಳವಳಿಗಳು, ರಂಗಭೂಮಿ, ಕಾವ್ಯ, ಆರ್ಥಿಕ ವಿಚಾರಗಳು, ಸ್ನೇಹ-ಸಂಬಂಧ, ವ್ಯಕ್ತಿಗಳ ಸಮಸ್ಯೆಗಳಿಗೆ ತಕ್ಷಣದ ಪರಿಹಾರ ಸೂಚಿಸುವ ಸೂಕ್ಷ್ಮ ವ್ಯಕ್ತಿತ್ವ ಅವರದು. ಸಿ.ಜಿ.ಕೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ರಂಗಭೂಮಿಯ ಸಾಂಸ್ಕೃತಿಕ ಕ್ಷೇತ್ರದ ಮುಖ್ಯ ಚಿಂತಕರಾಗಿದ್ದರು. ಹವ್ಯಾಸಿ ರಂಗಭೂಮಿಯ ಗಟ್ಟಿ ನಿರ್ದೇಶಕರಲ್ಲಿ ಇವರು ಒಬ್ಬರು. 'ಮಹಾಚೈತ್ರ', 'ಒಡಲಾಳ'ದಂತಂಹ ರಂಗನಿರ್ಮಿತಿಗಳನ್ನು ಸಾಜೀತು ಮಾಡಿರುತ್ತಾರೆ. ರಂಗಚಿಂತನೆಗಳನ್ನು ಪ್ರಶ್ನಿಸುವ ಮನೋಚಾಲನೆಯನ್ನು ನಿರ್ಮಾಣ ಮಾಡಿದರು. ಆದ್ದರಿಂದ ಸಿ.ಜಿ.ಕೆ. ಬೇರೆ ನಿರ್ದೇಶಕರಿಗಿಂತ ಭಿನ್ನ ಹಾಗೂ ಕ್ರಿಯಾತ್ಮಕ ರಂಗನಿರ್ದೇಶಕ. ಜೊತೆಗೆ ಕನ್ನಡ ರಂಗಭೂಮಿಯಲ್ಲಿ ಸೋಮಾರಿಯನ್ನು ಕ್ರಿಯಾಶೀಲರನ್ನಾಗಿ ಮಾಡಬಲ್ಲ ಸಾಮರ್ಥ್ಯ ಹಾಗೂ ಅಗತ್ಯತೆಯು ಸಿ.ಜಿ.ಕೆಗೆ ಇತ್ತು ಎಂದು ಹೇಳಬಹುದು. ಹೀಗೆ 'ಕತ್ತಲೆ ಬೆಳದಿಂಗಳೊಳಗೆ' ಸಿ.ಜಿ.ಕೆಯ ಜೀವನ ಚರಿತ್ರೆಯನ್ನು ತನ್ನ ಜೊತೆಗಿದ್ದ ಒಡನಾಡಿ ಸಂಗಾತಿಗಳನ್ನು ನೆನಪಿಸಿಕೊಳ್ಳುವ ರಂಗ ಚಳವಳಿಯ ಹಿನ್ನಲೆಯ ಜೀವನದ ಸಾರವಾಗಿದೆ. ಈ ಮೇಲ್ಕಂಡ ರಂಗವಿಮರ್ಶಕರ ಅಭಿಪ್ರಾಯದಂತೆ ಈ ಕೃತಿಯು 'ಸಮುದಾಯ' ರಂಗ ಚಳವಳಿಯ ಚಾರಿತ್ರಿಕ ನೆಲೆಗಟ್ಟಿನಲ್ಲಿದೆ ಎಂದು ಗುರುತಿಸಬಹುದಾಗಿದೆ.

ಲೇಖನಗಳ ಸಾಹಿತ್ಯಕ ಅಂಶಗಳನ್ನು ಇಟ್ಟುಕೊಂಡು 'ಸಮುದಾಯ' ರಂಗ ಚಳವಳಿಯ ಬಗ್ಗೆ ಸಂಕ್ಷಿಪ್ತ ವಿವರಗಳು ಇರುವುದನ್ನು ಕಾಣುತ್ತೇವೆ. ಕೆ.ವಿ.ನಾರಾಯಣ ಅವರ 'ತೊಂಡು ಮೇವು' ಕಂತೆಯಲ್ಲಿ, ಬಿ.ವಿ.ವೈಕುಂಠರಾಜು ಅವರ 'ಕನ್ನಡ ರಂಗಭೂಮಿ', ಪ್ರಸನ್ನರವರ 'ಸಮುದಾಯ', ಟಿ.ಬಿ.ಈಳಿಗೇರ ಅವರ ಅಭಿನಂದನ ಗ್ರಂಥವಾದ 'ಸಂಗಾತಿ', ಎಂ.ಎಚ್.ಕೃಷ್ಣ ಸಂಪಾದನೆಯ 'ಬೆಂಗಳೂರು ದರ್ಶನ', ಕೆ.ಮರುಳಸಿದ್ದಪ್ಪ ಅವರ 'ಸಂಗಾತಿ', ಮಾಲತಿ.ಎಸ್ ಅವರ 'ಹೊಸದಿಕ್ಕು', ನಟರಾಜ್ ಹುಳಿಯಾರ್ ಅವರ 'ತೆರೆದ ಪಠ್ಯ', ಸಿದ್ದಲಿಂಗಯ್ಯ ಅವರ ಜೀವನ ಚರಿತ್ರೆಯಾದ 'ಊರು ಕೇರಿ', ಹನುಮಂತಯ್ಯ.ಎಲ್ ಅವರ 'ಸಿ.ಜಿ.ಕೆ' ಎಂಬ ಕಿರುಹೊತ್ತಿಗೆ ಪ್ರಮುಖವಾದವು. 'ಸಮುದಾಯ' ರೂಪಿಸಿದ ರಂಗ ಚಳವಳಿ ಇವು ಹಾಗೂ 'ಸಮುದಾಯ' ಸಂಘಟನೆಯ ಕುರಿತ ಅಂಶಗಳನ್ನು ಒಳಗೊಂಡಿವೆ. 'ಅಂಕಣ' ದ್ವೈಮಾಸಿಕ ಪತ್ರಿಕೆಯ (೧೯೮೪) ಪ್ರಸನ್ನರ 'ನಾಟಕೀಯತೆಯ ಪರಿಕಲ್ಪನೆಯಲ್ಲಿ' ಎಂಬ ಲೇಖನವು 'ಸಮುದಾಯ' ನಾಟಕಗಳ ತಾತ್ವಿಕ ಪರಿಕಲ್ಪನೆಯನ್ನು ಚಿತ್ರಿಸುತ್ತದೆ. 'ಸಂಕ್ರಮಣ' ಮಾಸಪತ್ರಿಕೆಯಲ್ಲಿ (೧೯೭೬ ಜೂನ್)ಪ್ರಕಟವಾದ ಕಿ.ರಂ.ನಾಗರಾಜ ಅವರ 'ನಮ್ಮ ರಂಗಭೂಮಿಯ ಧೋರಣೆಗಳು' ಎಂಬ ಲೇಖನವು 'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯ ನೀತಿ-ನಿಯಮಗಳ ಬಗ್ಗೆ ಮಾಹಿತಿ ನೀಡುತ್ತದೆ. 'ಅಗ್ನಿ' ಪತ್ರಿಕೆಯಲ್ಲಿ ಪ್ರಕಟವಾದ ಶಶಿಕಾಂತ ಯಡಹಳ್ಳಿ ಅವರ ಲೇಖನವಾದ 'ಸಿ.ಜಿ.ಕೆ ಮತ್ತು ಸಾಮಾಜಿಕ ಸವಾಲುಗಳು', ಎಂಬ ಲೇಖನ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆಯಾದ ಟಿ.ಎಸ್.ಸೀತಾರಾಮ್ ಅವರ

ಲೇಖನ 'ಸಿ.ಜಿ.ಕೆ. ಬೆಳದಿಂಗಳು', ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಬಿ.ಸುರೇಶ್ ಅವರ ಲೇಖನ 'ನನ್ನ ನೆನಪಿನಲ್ಲಿ 'ಸಮುದಾಯ'ದ ನಾಲ್ಕು ದಶಕ...!' ಎಂಬ ಲೇಖನ 'ಸಮುದಾಯ' ಸಂಘಟನೆಯ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಜೊತೆಗೆ ಇದೇ ಪತ್ರಿಕೆಯಲ್ಲಿ ಪದ್ಮನಾಭಭಟ್ ಅವರ ಲೇಖನವಾದ 'ಸಮುದಾಯ'ದ ಆ ದಿನಗಳು... ಈ ದಿನಗಳು', ಎಂಬ ಲೇಖನಗಳಲ್ಲಿ 'ಸಮುದಾಯ'ದ ರಂಗಚಳವಳಿ ಹಾಗೂ ಮೂರನೇ ರಂಗಭೂಮಿಯ ಪರಿಕಲ್ಪನೆ ಹಾಗೂ 'ಸಮುದಾಯ' ರಂಗಚಳವಳಿಯಲ್ಲಿ ಸಿ.ಜಿ.ಕೃಷ್ಣಸ್ವಾಮಿ ಅವರ ಹೊಸ ಕ್ರಿಯಾತ್ಮಕ ರಂಗಚಿಂತನೆ ಬಗ್ಗೆ ಗುರುತಿಸುತ್ತಾರೆ. ರಘುನಂದನ ಅವರ 'ರಂಗಭೂಮಿ', 'ಚಳವಳಿಗಳ ತಳಮಳ', 'ಮಿಡಿತ', ಚಳವಳಿ ಎಂಬ ಲೇಖನವನ್ನು ಸಂಶೋಧನ ಪತ್ರಿಕೆಯಾದ 'ಲೋಕಜ್ಞಾನ'ದಲ್ಲಿ ಬರೆದಿದ್ದಾರೆ. ಈ ಮೇಲಿನ ಎಲ್ಲಾ ಪ್ರಬಂಧ ಹಾಗೂ ಲೇಖನಗಳನ್ನು ಗಮನಿಸಿದಾಗ 'ಸಮುದಾಯ' ಸಂಘಟನೆಯು ಸಾಹಿತ್ಯಿಕ ರಂಗಭೂಮಿ ಚಳವಳಿಗಳ ಚರಿತ್ರೆ ಹಾಗೂ ಸಾಂಸ್ಕೃತಿಕ ಅಂಶಗಳಿಗೆ ಒತ್ತು ನೀಡಿರುವುದು ಕಂಡುಬರುತ್ತದೆ. ಆದರೆ 'ಸಮುದಾಯ' ರಂಗ ಚಳವಳಿಯ ಚಿಂತನೆಗಳು ಹಾಗೂ 'ಸಮುದಾಯ' ಸೈದ್ಧಾಂತಿಕತೆಯ ಕುರಿತಂತೆ ಪಿಎಚ್.ಡಿ ಸಂಶೋಧನಾ ನೆಲೆಯಲ್ಲಿ ಎಲ್ಲಿಯೂ ಗಂಭೀರವಾದ ಅಧ್ಯಯನಗಳು ನಡೆದಿಲ್ಲ ಎಂದರೆ ತಪ್ಪಾಗಲಾರದು. ಆದ್ದರಿಂದ ಈ ಕೊರತೆಯನ್ನು ನೀಗುವ ದಿಸೆಯಲ್ಲಿ ಪ್ರಸ್ತುತ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಜೊತೆಗೆ ಇಲ್ಲಿ ಕೆಲವು ತಾತ್ವಿಕ, ಚಾರಿತ್ರಿಕ, ರಾಜಕಾರಣದ ಅಂಶಗಳನ್ನು ಗಮನಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಚಾರಿತ್ರಿಕ ದೃಷ್ಟಿಕೋನದಲ್ಲಿ ರಂಗ ಚಳವಳಿಗಳ ಹಿನ್ನೆಲೆಯಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ರೂಪಿಸಿದ ಚಳವಳಿಗಳನ್ನು ಸಮಗ್ರವಾಗಿ ನೋಡುವ ಒಟ್ಟು ಪ್ರಯತ್ನವನ್ನು ಮಾಡಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

ಸ್ಥಳೀಯ ಚರಿತ್ರೆಯ ಅಧ್ಯಯನದ ಹಿನ್ನೆಲೆಯಲ್ಲಿ ರಂಗ ಚಳವಳಿಗಳ ಮೌಖಿಕ ಅಂಶಗಳನ್ನು ಒಳಗೊಂಡಂತೆ, ಸಾಂಸ್ಕೃತಿಕ ತಾತ್ವಿಕ ಅಂಶಗಳನ್ನು ಸಹ ಹೆಕ್ಕಿ ತೆಗೆಯುವುದು ಇಲ್ಲಿನ ಅಧ್ಯಯನ ವ್ಯಾಪ್ತಿ ಆಗಿರುತ್ತದೆ. ಈ ಅಧ್ಯಯನಕ್ಕೆ ತನ್ನದೇ ಆದ ಕಾರ್ಯಕ್ಷೇತ್ರವಿದೆ. ನಾಡಿನ ಜಿಲ್ಲೆಗಳು ಹಾಗೂ ಐದು ರಾಜ್ಯಗಳು, ಕರ್ನಾಟಕದ ರಂಗ ಚಳವಳಿಗಳಿಗೆ ಪ್ರೇರಣೆ ಮತ್ತು ಪ್ರಭಾವವನ್ನು 'ಸಮುದಾಯ'ದ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಲಿಖಿತ-ಮೌಖಿಕ ಆಕರಗಳನ್ನು ತೌಲನಿಕ ಅಧ್ಯಯನದ ಮುಖೇನ ಚರಿತ್ರೆಯ ಪುನರ್‌ರಚನೆ ಆಗುವ ರೀತಿಯಲ್ಲಿ ಅಧ್ಯಯನ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನ ಇಲ್ಲಿನದು. ೧೯೭೫ ರಿಂದ ೨೦೨೦ ರವರೆಗಿನ ಕಾಲಾನುಕ್ರಮಣಿಕೆಯಲ್ಲಿ 'ಸಮುದಾಯ'ದ ಪ್ರಕ್ರಿಯೆಯನ್ನು ಚಾರಿತ್ರಿಕ ನೆಲೆಗಟ್ಟುಗಳಲ್ಲಿ ಗುರುತಿಸಲಾಗಿದೆ. ಜಿಲ್ಲಾ-ರಾಜ್ಯಗಳ ಮಿತಿಗಳನ್ನು ಎಚ್ಚರಿಕೆಯ ನಡುವೆ ಲಿಖಿತ ದಾಖಲೆಗಳನ್ನು ಮೌಖಿಕ ದಾಖಲೆಗಳ ಜೊತೆಗೆ ವಿಶ್ಲೇಷಿಸಿ ಪರಿಶೀಲಿಸಲಾಗುವುದು. ಒಟ್ಟಾರೆ ಪ್ರಸ್ತುತ ಪ್ರಬಂಧವು ನಾಡಿನ ರಾಜಕಾರಣ, ಆರ್ಥಿಕತೆ, ಸಮಾಜ ಹಾಗೂ ಸಾಂಸ್ಕೃತಿಕ ಅಂಶಗಳೊಂದಿಗೆ 'ಸಮುದಾಯ'ದ ಪ್ರತಿಕ್ರಿಯೆ ಹಾಗೂ

ಪ್ರತಿಭಟನೆಗಳೊಂದಿಗೆ ಹೇಗೆ ಅನುಸಂಧಾನಗೊಂಡಿತು ಎಂಬುದನ್ನು ಪರಿಶೀಲಿಸುವ ವ್ಯಾಪ್ತಿಯನ್ನು ಗುರುತಿಸಿಕೊಂಡಿದೆ.

೧.೪. ಅಧ್ಯಯನದ ವಿಧಿ-ವಿಧಾನಗಳು

'ಸಮುದಾಯ': ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಹೇಳುವಂತೆ ಇದೊಂದು ಸಾಂಸ್ಕೃತಿಕವಾದ ಅಂಶಗಳನ್ನು ಚಾರಿತ್ರಿಕ ದಾಖಲಿಸಿ ವಿಶ್ಲೇಷಿಸುವಂಥದ್ದು. ಚರಿತ್ರೆ ಶಿಸ್ತಿನ ವೈಧಾನಿಕತೆಗೆ ಅನುಗುಣವಾಗಿ 'ಸಮುದಾಯ' ಸಂಘಟನೆಯ ಸಂವಿಧಾನ, ಆಶಯ, ಕಾರ್ಯಚಟುವಟಿಕೆ, ರಂಗ ಪ್ರಯೋಗಗಳನ್ನು ಚಾರಿತ್ರಿಕವಾಗಿ ದಾಖಲಿಸುವುದು ಅನಿವಾರ್ಯ. ಅಲ್ಲದೆ ಸಾಹಿತ್ಯಕ-ಸಾಂಸ್ಕೃತಿಕ ಅಂಶಗಳು ಆಯಾ ಕಾಲಘಟ್ಟದಲ್ಲಿ ಬೀರಿದ ಪ್ರಭಾವ-ಪರಿಣಾಮಗಳನ್ನು ಸಹ ವಿಶ್ಲೇಷಿಸಿ, ವ್ಯಾಖ್ಯಾನಕ್ಕೆ ಒಳಗು ಮಾಡಲಾಗಿದೆ. ಈ ಅಧ್ಯಯನವು ರಂಗ ಚಳವಳಿಗಳ ಮೌಖಿಕ ಅಕರಗಳನ್ನು ಸಹ ಬಳಸಿಕೊಳ್ಳುವಂಥದ್ದು. 'ಸಮುದಾಯ' ಘಟಕಗಳು, ಸಾಹಿತಿಗಳ, ಮೌಖಿಕ ವಕ್ತಗಳು ಹಾಗೂ 'ಸಮುದಾಯ'ದ ಸದಸ್ಯರನ್ನು ಒಳಗೊಂಡ ಆಕರಗಳ ಸಂಗ್ರಹ ಕಾರ್ಯ ಪ್ರಧಾನವಾದದ್ದು. ಈ ಸಂಗ್ರಹಕ್ಕೆ ಪ್ರಶ್ನಾವಳಿಗಳ ಮೂಲಕ ಕ್ಷೇತ್ರಕಾರ್ಯವನ್ನು ಮಾಡಿಕೊಳ್ಳಲಾಗಿದೆ. ದೊರೆತ ಮೌಖಿಕ ಆಕರಗಳ ಕ್ರಮಬದ್ಧವಾಗಿ ವರ್ಗೀಕರಿಸಿಕೊಂಡು ವೈಜ್ಞಾನಿಕವಾಗಿ ಪರಿಶೀಲಿಸುವ ಜರೂರು ಇದೆ. ಈ ಮೌಖಿಕ ರೂಪದ ಆಕರಗಳನ್ನು ಈಗಾಗಲೇ ಲಭ್ಯವಿರುವ ಲಿಖಿತ ದಾಖಲೆಗೊಂದಿಗೆ ತೌಲನಿಕವಾಗಿ ಪರಿಶೀಲಿಸುವ ಅಗತ್ಯತೆ ಇದೆ. ಇಂಥ ಸನ್ನಿವೇಶದಲ್ಲಿ ಚರಿತ್ರೆಯ ವಿಧಿ-ವಿಧಾನಗಳನ್ನು ಬಳಸಿಕೊಳ್ಳುವುದು ಅನಿವಾರ್ಯ. ಆಗಮಾತ್ರ ಮೌಖಿಕ ಅಂಶಗಳನ್ನು ಸೋಸಿ ಸಾಂಸ್ಕೃತಿಕ ಚಳವಳಿಗಳ 'ವಾಸ್ತವಿಕ ಚರಿತ್ರೆ'ಯನ್ನು ಪುನರ್‌ರಚಿಸಲು ಸಾಧ್ಯ.

ಕರ್ನಾಟಕದ ಬಹುತೇಕ ಜಿಲ್ಲಾ-ತಾಲ್ಲೂಕುಗಳಲ್ಲಿನ ನಿರೂಪಕರನ್ನು ಸಂದರ್ಶಿಸಿ ವ್ಯಕ್ತಿ-ಸ್ಥಳ-ಘಟನೆ-ಕಾಲ ಮೊದಲಾದ ವಿಚಾರಗಳಿಗೆ ಸಂಬಂಧಿಸಿದಂತೆ ಮೌಖಿಕ ಆಕರಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಏಕೆಂದರೆ ರಂಗ ಚಳವಳಿಗಳ ಬಗ್ಗೆ ಹಲವು ವಿಭಿನ್ನ ರೀತಿಯ ಚಿಂತನೆಗಳು, ನಿರೂಪಣೆಗಳು ದೊರೆಯುವ ಸಾಧ್ಯತೆಗಳಿರುವುದರಿಂದ ಇಂಥ ತಾತ್ವಿಕ ಭಿನ್ನತೆಗಳನ್ನು ಸರಿಯಾದ ರೀತಿಯಲ್ಲೂ ವಿಶ್ಲೇಷಣೆಯ ಮೂಲಕ ಪರಿಶೀಲಿಸಿ ತಾಳೇ ನೋಡಿ ಪ್ರಮಾಣೀಕರಿಸಕೊಳ್ಳಲಾಗಿದೆ. ಕರ್ನಾಟಕದ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಜಿಲ್ಲೆಗಳನ್ನು, ಜೊತೆಗೆ ಇತರೆ ಐದಕ್ಕೂ ಹೆಚ್ಚು ರಾಜ್ಯಗಳನ್ನು ಕುರಿತಂತೆ ಅಭ್ಯಾಸ ಮಾಡಲು ಅಧ್ಯಯನ ಕಾರ್ಯಕ್ಷೇತ್ರವನ್ನು ಗುರುತಿಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ವಿವಿಧ ಸಮಾಜ, ಸಾಹಿತ್ಯ ಮತ್ತು ಸಂಸ್ಕೃತಿಗಳೇ ಪ್ರಧಾನವಾಗಿರುತ್ತದೆ. ಚರಿತ್ರೆಯ ಜ್ಞಾನಶಾಖೆಯ ವಿಧಿ-ವಿಧಾನಗಳು ಇಲ್ಲಿ ಮುಖ್ಯವಾಗಿರುತ್ತದೆ. ಈ ಅಧ್ಯಯನವು ಸಮಾಜಶಾಸ್ತ್ರ-ರಾಜ್ಯಶಾಸ್ತ್ರ-ಅರ್ಥಶಾಸ್ತ್ರ ಮೊದಲಾದ ಸಮಾಜವಿಜ್ಞಾನಗಳ ಜೊತೆಗೆ ವಿಶೇಷವಾಗಿ ಚರಿತ್ರೆ ಶಿಸ್ತಿನ ಅನ್ವಯವಾಗುವ ವಿಧಿ-ವಿಧಾನಗಳನ್ನು ಬಳಸಿಕೊಳ್ಳುವ ಅಂಶಗಳನ್ನು ಸಹ ಹೊಂದಿದೆ.

ಚರಿತ್ರೆಯ, ರಚನೆ, ಪುನಾರ್ರಚನೆ, ವಿಶ್ಲೇಷಣೆ ಹಾಗೂ ವ್ಯಾಖ್ಯಾನಗಳ ಕಡೆಗೂ ಇಲ್ಲಿ ಗಮನಹರಿಸಲಾಗಿದೆ. ಪೂರ್ವಾಗ್ರಹಕ್ಕೆ ಒಳಗಾಗುವ ಅಂಶಗಳನ್ನು ಎಚ್ಚರದಿಂದ ಪರಿಶೀಲಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

'ಸಮುದಾಯ' : ರಂಗ ಚಳವಳಿಯ ಚಾರಿತ್ರಿಕ ವಿಶ್ಲೇಷಣೆ ಎಂಬ ಶೀರ್ಷಿಕೆಯ ಪ್ರಸ್ತುತ ಅಧ್ಯಯನವು ಈ ಕೆಳಕಂಡ ಒಟ್ಟು ಏಳು ಅಧ್ಯಾಯಗಳು ಹಾಗೂ ಅನುಬಂಧಗಳನ್ನು ಒಳಗೊಂಡಿರುವಂಥದ್ದು. ಒಂದೊಂದು ಅಧ್ಯಾಯದ ಸ್ವರೂಪವನ್ನು ವಿವರಿಸುವುದಾದರೆ–

ಮೊದಲನೆಯ ಅಧ್ಯಾಯದಲ್ಲಿ **ಅಧ್ಯಯನದ ಹಿನ್ನೆಲೆ, ಆಶಯ ಹಾಗೂ ಮಹತ್ವ** ಯಾವ ಥರದ್ದು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿನ ಸಮಸ್ಯೆ ಹಾಗೂ ಕುತೂಹಲಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಬಹಳ ಮುಖ್ಯವಾದುದು. ಸಮೀಕ್ಷೆ ಜೊತೆಗೆ ಇಂಥ ಅಧ್ಯಯನಕ್ಕೆ ಒಪ್ಪುವ ಚರಿತ್ರೆಯ ವಿಧಾನಗಳನ್ನು ಅಳವಡಿಸಿಕೊಂಡು ಯಾವ ರೀತಿ, ಹೇಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ ಎಂಬುದನ್ನು ಪರಿಶೀಲಿಸಿದೆ. ಚರಿತ್ರೆಯ ವಿಧಾನದ ಅಂಶಗಳನ್ನು ಹೇಗೆ ಅಳವಡಿಸಿಕೊಳ್ಳಲು ಸಾಧ್ಯ ಎಂಬುದನ್ನು ಈ ಅಧ್ಯಾಯಗಳ ಸ್ವರೂಪದಲ್ಲಿಯೇ ನಿರ್ಧರಿಸಿಕೊಂಡು ಅಭ್ಯಾಸ ಮಾಡಲಾಗಿದೆ. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಕುರಿತ ಸಮಗ್ರ ಅಧ್ಯಯನದ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಅಳವಡಿಸಿಕೊಂಡಿರುವುದು ವಿಶೇಷ.

ಎರಡನೆಯ ಅಧ್ಯಾಯದಲ್ಲಿ **'ಸಮುದಾಯ'ದ ಅರ್ಥ–ಹುಟ್ಟು ಮತ್ತು ಇತರೆ ರಂಗ ಸಂಸ್ಥೆಗಳ** ಚಿತ್ರಣವನ್ನು ನೀಡಲಾಗಿದೆ. 'ಸಮುದಾಯ' ಬಗ್ಗೆ ವಿವಿಧ ಅರ್ಥಗಳು ಹಾಗೂ ವ್ಯಾಖ್ಯಾನಗಳು ಜೊತೆಗೆ 'ಸಮುದಾಯ' ಸಂಘಟನೆಯ ಸ್ಥಾಪನೆಗೆ ಪ್ರೇರಣೆ ಹಾಗೂ ಪ್ರಭಾವಗಳ ಅಧ್ಯಯನವನ್ನು ಮಾಡಲಾಗಿದೆ. ಮುಖ್ಯವಾಗಿ 'ಸಮುದಾಯ'ದ ಆಶಯ–ಸೈದ್ಧಾಂತಿಕತೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡುತ್ತಾ 'ಸಮುದಾಯ' ಹಾಗೂ ಕರ್ನಾಟಕದ ಇತರೆ ರಂಗ ಸಂಘಟನೆಗಳೊಂದಿಗೆ ಇರುವ ಸಂಬಂಧ ಹಾಗೂ ಸೈದ್ಧಾಂತಿಕ ಬಿನ್ನತೆಗಳ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಮೂರು, **ಎಪ್ಪತ್ತರ ದಶಕ ಹಾಗೂ ಸಾಂಸ್ಕೃತಿಕ ಚಳವಳಿಗಳ ಸನ್ನಿವೇಶ** ಎಂಬ ಶೀರ್ಷಿಕೆಯಲ್ಲಿ ಅಧ್ಯಯನವನ್ನು ಮಾಡಲಾಗಿದ್ದು, ಎಪ್ಪತ್ತರ ದಶಕದ ರಾಜಕಾರಣ ಹಾಗೂ ೧೯೭೩ರ 'ಬೂಸಾ ಚಳವಳಿ'ಯ ಪರಿಣಾಮದ ಅಂಶಗಳನ್ನು ಚರ್ಚಿಸಲಾಗಿದೆ. ಈ ಎಪ್ಪತ್ತರ ದಶಕದಲ್ಲಿ ಸಾಂಸ್ಕೃತಿಕ ರಂಗಭೂಮಿಯ ಚಳವಳಿಗಳು ಹುಟ್ಟಲು ಕಾರಣಗಳನ್ನು ತಿಳಿಸುವ ತುರ್ತುಪರಿಸ್ಥಿತಿಯ ಬಗ್ಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಜೊತೆಗೆ ಸಾಂಸ್ಕೃತಿಕ ರಂಗ ಚಳವಳಿಯ ರಾಜಕಾರಣ ಹಾಗೂ ಬೆನ್ನಲುಬಾಗಿದ್ದ ಸಾಮಾಜಿಕ ಹೋರಾಟಗಳಲ್ಲಿ ಒಂದಾದ ಜಾತಿ ನಿರ್ಮೂಲನ ಚಳವಳಿಗಳ ಬಗೆಗೆ ಈ ಅಧ್ಯಾಯದಲ್ಲಿ ಅಧ್ಯಯನವನ್ನು ಮಾಡಿರುವುದು ಮಹತ್ವದ ಸಂಗತಿಯಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ **'ಸಮುದಾಯ' ಹಾಗೂ ಎಂಬತ್ತರ ದಶಕದ ಸಾಮಾಜಿಕ ಚಳವಳಿಗಳು** ಎಂಬುದನ್ನು ಕುರಿತು ವಿವೇಚನೆಯನ್ನು ಮಾಡಲಾಗಿದೆ. ಎಂಬತ್ತರ ದಶಕದ ಆರಂಭದಲ್ಲಿ ರೈತ–

ಚಳವಳಿಯು ಇತರೆ ಎಲ್ಲಾ ಸಾಮಾಜಿಕ ಸಂಘಟನೆಗಳನ್ನು ಒಗ್ಗೂಡಿಸಿಕೊಂಡ ಐಕ್ಯಚಳವಳಿಯನ್ನು ರೂಪಿಸಿದ್ದು ಹೇಗೆ ಎಂಬುದನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆ, ಕಾರ್ಮಿಕ ಜಾಗೃತಿಯ ಜೊತೆಗೆ ದಲಿತ-ಬಂಡಾಯ ಹಾಗೂ ಕನ್ನಡ ಭಾಷಿಕ ಚಳವಳಿಗಳ ಜೊತೆಯಲ್ಲಿ ಅದರ ಐಕ್ಯತೆಯ ಹೋರಾಟಗಳ ಗುರುತಿಸುವಿಕೆಯನ್ನು ನೋಡುತ್ತೇವೆ. 'ಸಮುದಾಯ' ಮಹಿಳಾ ಜಾಗೃತಿಯ ನೆಲೆಗಳಿಗೆ ಪೂರಕವಾದ ಚಳವಳಿಯನ್ನು ರೂಪಿಸಿ 'ಸಮುದಾಯ'ದ ಜೊತೆಗೆ ಇದ್ದ ವಿದ್ಯಾರ್ಥಿ-ಯುವಜನರ ಎಚ್ಚರದ ಮೊದಲಾದ ಹಿನ್ನೆಲೆಯ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲದರ ಜೊತೆಗೆ ಎಂಬತ್ತರ ದಶಕದ ರಾಜಕಾರಣದ ಸ್ಥಿತ್ಯಂತರಗಳನ್ನು ಸಂಘಟನೆಗಳ ವಿಘಟನೆಯ ಜೊತೆ ಜೊತೆಗೆ ಜಾಗತೀಕರಣಕ್ಕೆ 'ಸಮುದಾಯ'ದ ಪ್ರತಿಕ್ರಿಯೆ ಎಂಥಹದ್ದು ಎಂಬುದನ್ನು ಸಹ ಈ ಅಧ್ಯಾಯದಲ್ಲಿ ನೋಡಲಾಗಿದೆ.

ಐದನೆಯ ಅಧ್ಯಾಯವು **ಕರ್ನಾಟಕ ಸಾಂಸ್ಕೃತಿಕ ರಂಗ ಚಳವಳಿಗೆ 'ಸಮುದಾಯ'ದ ಕೊಡುಗೆಯ** ಚಿತ್ರಣವನ್ನು ನೀಡುವಂಥದ್ದು. 'ಸಮುದಾಯ' ರೂಪಿಸಿದ ಚಾರಿತಾರ್ಹ ಜಾಥಾಗಳು ಹಾಗೂ ಜನರೆಡೆಗೆ ಕೊಂಡೊಯ್ದ ಬೀದಿನಾಟಕಗಳು, ಇದಕ್ಕೆ ಪೂರಕವಾಗಿ ತೃತೀಯ ರಂಗಭೂಮಿಯ ಅಗತ್ಯತೆಯನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ. 'ಸಮುದಾಯ' ಸಂಘಟನೆ ರೂಪಿಸಿದ ಕ್ರಿಯಾತ್ಮಕ ಸೃಜನಶೀಲ ಹವ್ಯಾಸಿ ರಂಗ ಭೂಮಿಯಲ್ಲಿ ರಂಗಕರ್ಮಿಗಳ, ನಿರ್ದೇಶಕರು, ನಾಟಕ ರಚನೆಕಾರರು, ಕ್ರಾಂತಿಗೀತೆಗಳ ಹೊಸ ಅಲೆ ಹಾಗೂ ಗಾಯಕರ ಮೇಲೆ 'ಸಮುದಾಯ' ಪ್ರಭಾವ, 'ಸಮುದಾಯ'ವು ಸಿನಿಮಾರಂಗದ ಮೇಲೆ ಬೀರಿದ ಪರಿಣಾಮಗಳನ್ನು ಚರ್ಚಿಸಲಾಗಿದೆ. ವಿಶೇಷವಾಗಿ ಮಾಧ್ಯಮರಂಗ, ವ್ಯಂಗ್ಯಚಿತ್ರ ರಚನೆ ಹಾಗೂ ವಿಜ್ಞಾನಕ್ಕೆ 'ಸಮುದಾಯ'ದ ಕೊಡುಗೆ ಇದರ ಜೊತೆಗೆ ಚಿತ್ರಕಲೆಗೆ ನೀಡಿದ ಪ್ರೋತ್ಸಾಹದೊಂದಿಗೆ 'ಚಿತ್ರಕಲಾ ಜಾಥಾ'ಗಳ ಮೂಲಕ ಕನ್ನಡ ಸಾಹಿತ್ಯಕ್ಕೆ 'ಸಮುದಾಯ'ವು ನೀಡಿದ ಕೊಡುಗೆ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯವು **ರಾಜ್ಯ-ರಾಷ್ಟ್ರ ರಾಜಕಾರಣ : 'ಸಮುದಾಯ'ದ ಸಾಂಸ್ಕೃತಿಕತೆ ಹಾಗೂ ಸೈದ್ಧಾಂತಿಕ ನೆಲೆಗಳು** ಎಂಬ ಶೀರ್ಷಿಕೆಯಲ್ಲಿ ನಿರೂಪಿತವಾಗಿದೆ. ಕರ್ನಾಟಕದ ರಂಗಭೂಮಿಯ ತಾತ್ವಿಕ ನೆಲೆಗಟ್ಟುಗಳ ಹಿನ್ನೆಲೆ ಹಾಗೂ 'ಸಮುದಾಯ'ದ ನಾಟಕಗಳ ಸಮಾಜದಲ್ಲಿ ಚರ್ಚೆ ಹಾಗೂ ವಿವಾದಕ್ಕೆ ಒಳಗಾದ ಪ್ರಮುಖ ನಾಟಕಗಳ ಬಗೆಗೆ ಚರ್ಚಿಸುವಂಥದ್ದು. 'ಸಮುದಾಯ'ವು ರೂಪಿಸಿದ ಕಾರ್ಯಗಾರ-ಶಿಬಿರಗಳು, ನಾಟಕೋತ್ಸವಗಳು ಕೋಮು ಸೌಹಾರ್ದ ಉತ್ಸವಗಳ ಜೊತೆಗೆ 'ಸಮುದಾಯ'ದ ತಾತ್ವಿಕ ಚಿಂತನೆಯು ಕರ್ನಾಟಕದ ಕಮ್ಯುನಿಸ್ಟ್ ಚಳವಳಿಗೆ ಹೇಗೆ ಪೂರಕವಾಗಿತ್ತು. ಕರ್ನಾಟಕದ ರಾಜಕಾರಣ ಹಾಗೂ ಸಾಂಸ್ಕೃತಿಕ ಚಳವಳಿಗಳ ಸಂಬಂಧ 'ಸಮುದಾಯ' ಸಂಘಟನೆ ಹಾಗೂ ಕರ್ನಾಟಕದ ಪ್ರಗತಿಪರ ಚಿಂತಕರ ಭಿನ್ನ ಸೈದ್ಧಾಂತಿಕತೆಯನ್ನು ಗುರುತಿಸಲಾಗಿದೆ. 'ಸಮುದಾಯ' ರಂಗ ಚಳವಳಿಗಳಲ್ಲಿ ಐಕ್ಯತೆ ಹೊಂದಿ ಇತರೆ ಸಾಮಾಜಿಕ ಸಂಘಟನೆಗಳ ನಂತರ ಎಂಬತ್ತರ ದಶಕದ ಕೊನೆಯ ಭಾಗದಲ್ಲಿ ಸೈದ್ಧಾಂತಿಕವಾಗಿ 'ಸಮುದಾಯ'ದ ನಾಯಕರಲ್ಲಿ ಸಂಘರ್ಷವಾಯಿತು. ಇದರ ಪರಿಣಾಮ 'ಸಮುದಾಯ'ವು ಸ್ಥಿತ್ಯಂತರಗಳನ್ನು ಕಂಡಿದ್ದನ್ನು

ಸಹ ನೋಡುತ್ತೇವೆ. ಇದರ ಹಿನ್ನೆಲೆಯಲ್ಲಿ 'ಸಮುದಾಯ'ವು ರೂಪಿಸಿದ ಅಖಿಲ ಭಾರತ ಮಟ್ಟದ ಸಾಂಸ್ಕೃತಿಕ ರಂಗ ಚಳವಳಿಯ ಪ್ರಭಾವವನ್ನು ಹುಟ್ಟು ಹಾಕಿದ್ದು ಗಮನಾರ್ಹ. ತೊಂಭತ್ತರ ದಶಕದ ಕೊನೆಯ ಭಾಗದಲ್ಲಿ 'ಸಮುದಾಯ' ಸದಸ್ಯ ಹಾಗೂ ಘಟಕಗಳಲ್ಲಿ ಏರಿಳಿತ ಕಂಡದ್ದು, 'ಸಮುದಾಯ' ಸಮ್ಮೇಳನಗಳನ್ನು ಹಾಗೂ 'ಸಮುದಾಯ' ರಾಜ್ಯ ಸಮಿತಿಯ ಕಾರ್ಯವೈಖರಿಯನ್ನು ಕುರಿತು ವಿಮರ್ಶೆಯನ್ನು ಮಾಡಲಾಗಿದೆ. ಸಮಕಾಲೀನ 'ಸಮುದಾಯ'ದ ಸಾಂಸ್ಕೃತಿಕ ಸಮನ್ವಯ ಸಂಘಟನೆಯ ನೆಲೆಗಳ ಅಧ್ಯಯನವನ್ನು ಈ ಆರನೆಯ ಅಧ್ಯಾಯದಲ್ಲಿ ಹೆಚ್ಚು ವಿಮರ್ಶೆಗೆ ಒಳಪಡಿಸಿರುವುದನ್ನು ಗಮನಿಸಬಹುದು.

ಅಧ್ಯಾಯ ಏಳರಲ್ಲಿ, ಸಮಾರೋಪವನ್ನು ಅಂದರೆ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹಾಗೂ ತಳೆದಂಥ ನಿಲುವುಗಳನ್ನು ಕುರಿತು ದಾಖಲಿಸಲಾಗಿದೆ. ಉಳಿದಂತೆ ಇಂದಿನ ಅಧ್ಯಯನಕ್ಕೆ ಪೂರಕವಾಗಿ ನಾಲ್ಕು ಅನುಬಂಧಗಳಲ್ಲಿ ಮೂಲ ಗ್ರಂಥಗಳು, ಪರಾಮರ್ಶನ ಗ್ರಂಥಗಳು ಹಾಗೆಯೇ ಕರಪತ್ರಗಳು, ಬೀದಿನಾಟಕಗಳು-ರಂಗನಾಟಕಗಳು, 'ಸಮುದಾಯ'ದ ನಕ್ಷೆ, ಛಾಯಾಚಿತ್ರಗಳು ಇತ್ಯಾದಿಗಳನ್ನು ಸಂಯೋಜಿಸಲಾಗಿದೆ. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ರೂಪಿಸಿದ ಜಾಥಾ, ಚಳವಳಿ, ಪ್ರತಿಕ್ರಿಯೆ, ಪ್ರತಿಭಟನೆ, ಹೋರಾಟ, ಚಳವಳಿ, ಜಾಥಾಗಳು, ಇತರೆ ಕಾರ್ಯ ಚಟುವಟಿಕೆಗಳೆಲ್ಲವು ಕರ್ನಾಟಕದ ಅಲಕ್ಷ್ಯಕ್ಕೆ ಒಳಗಾದ 'ಜನಸಮುದಾಯ'ಗಳ ಕಲೆಯನ್ನು ಜನರ ಬದುಕಿಗಾಗಿ ರೂಪಿಸುವ ಸಮಾಜವಾದಿ ಚಿಂತನೆಗಳನ್ನು ಒಳಗೊಂಡಿರುವಂಥವು. ಅಲ್ಲದೆ 'ಸಮುದಾಯ' ರೂಪಿಸಿದ ಸಾಂಸ್ಕೃತಿಕ ರಂಗಚಳವಳಿ ಹಾಗೂ ಸೈದ್ಧಾಂತಿಕ ಬದ್ಧತೆಯು ಕರ್ನಾಟಕ ರಾಜಕಾರಣ, ಸಾಂಸ್ಕೃತಿಕ ಹವ್ಯಾಸಿ ರಂಗಭೂಮಿಗೆ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದು ಮಹತ್ವವಾದ ಸಂಗತಿಯಾಗಿದೆ. 'ಸಮುದಾಯ' ಸಂಘಟನೆಯ ಪ್ರಕಾರ ವ್ಯಕ್ತಿಗೆ ಹೆಚ್ಚಿನ ಆದ್ಯತೆ ನೀಡದೆ ಸಿದ್ಧಾಂತವೇ ಮುಖ್ಯವೆಂಬ ಪರಿಕಲ್ಪನೆಯೊಂದಿಗೆ ದಲಿತ-ಬಂಡಾಯ ಸಂಘಟನೆಗಳ ಹಾಗೂ ಇತರೆ ಸಾಮೂಹಿಕ ಸಂಘಟನೆಗಳ ಐಕ್ಯತೆಯೊಂದಿಗೆ ಕರ್ನಾಟಕದ ಕಮ್ಯುನಿಸ್ಟ್ ಚಳವಳಿಗೆ 'ಸಮುದಾಯ'ವು ತನ್ನದೇ ಆದ ಕೊಡುಗೆ ನೀಡಿದ್ದು ಪ್ರಮುಖ ಅಂಶವೆಂಬುದನ್ನು ಪರಿಗಣಿಸಲಾಗಿದೆ.

ಅಧ್ಯಾಯ : ಎರಡು

'ಸಮುದಾಯ'ದ ಅರ್ಥ - ಹುಟ್ಟು ಮತ್ತು ಇತರೆ ರಂಗ ಸಂಸ್ಥೆಗಳು

ಅಧ್ಯಾಯ : ಎರಡು

'ಸಮುದಾಯ'ದ ಅರ್ಥ – ಹುಟ್ಟು ಮತ್ತು ಇತರೆ ರಂಗ ಸಂಸ್ಥೆಗಳು

೨.೧. 'ಸಮುದಾಯ'ದ ಅರ್ಥ

ಜನಸಮೂಹದ ಗುಂಪನ್ನು 'ಸಮುದಾಯ' ಎಂದು ಕರೆಯುತ್ತೇವೆ. 'ಸಮುದಾಯ'ದ ಅರ್ಥಗಳು ಬಹುರೂಪಿಯಾಗಿದ್ದು ಸಂದರ್ಭಕ್ಕೆ ತಕ್ಕಂತೆ ಈ ಪದ ಬಳಕೆಗೆ ಬರುತ್ತದೆ. 'ಸಮುದಾಯ' ಪದದ ಅರ್ಥವನ್ನು ಪ್ರಾರಂಭದಲ್ಲಿ 'ಗಣ' ಎಂತಲು ಕರೆಯುವುದುಂಟು. ಕ್ರಿಪೂ.೪ನೇ ಶತಮಾನದಲ್ಲಿ ಅಂದರೆ ಮೌರ್ಯ ಸಾಮ್ರಾಜ್ಯದ ಮುಂಚಿತವಾಗಿ ಗಣರಾಜ್ಯಗಳ ಒಕ್ಕೂಟ ಆಗುವುದನ್ನು ಪ್ರಾಚೀನ ಚರಿತ್ರೆಯಲ್ಲಿ ತಿಳಿಯುತ್ತೇವೆ.[೧] ಹೀಗೆ ಗಣ–ಸಮೂಹ–ಗುಂಪು ಅರ್ಥದಲ್ಲಿ ಬುಡಕಟ್ಟು ಸಂಸ್ಕೃತಿಯಿಂದ ಹಳ್ಳಿ–ಪಟ್ಟಣ–ನಗರ ಸಂಸ್ಕೃತಿಯ ಪಲ್ಲಟಗಳ ಚಾರಿತ್ರಿಕ ಸನ್ನಿವೇಶಗಳಿಂದ ಸಮೂಹ–'ಸಮುದಾಯ' ಎಂದು ನಿರಂತರ ಬದಲಾಗುತ್ತಾ ಬಂದಿದೆ. ಸಮುದಾಯ ಎನ್ನುವುದು ದಕ್ಷಿಣ ಕರ್ನಾಟಕದ ಭಾಗದಲ್ಲಿ ಗುಂಪು ಎಂದು ಜನಸಮೂಹ ತಿಳಿದರೆ, ಉತ್ತರ ಕರ್ನಾಟಕದ ಭಾಗದಲ್ಲಿ ಸಮುದಾಯ ಎಂದರೆ ಜಾತಿ (ಕುಲ) ಎಂಬ ಪರಿಕಲ್ಪನೆ ಇರುವುದು ನೋಡುತ್ತೇವೆ. ಆದರೆ ೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಪ್ರಾರಂಭವಾದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಹೆಸರನ್ನು ಸೂಚಿಸಿದವರು ಕರ್ನಾಟಕದ ನಡೆದಾಡುವ ವಿಶ್ವಕೋಶ ಹಾಗೂ ಪ್ರಗತಿಪರ ಚಿಂತಕರು, ರಂಗವಿಮರ್ಶಕರು ಆದ ಕಿ.ರಂ.ನಾಗರಾಜ ಅವರು. ಭಾರತ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯಿಂದ ಜನರ ಗುಂಪು ಸೇರುವ ಅಥವಾ ಸರ್ಕಾರದ ವಿರುದ್ಧ ಮಾತನಾಡುವ ಹಕ್ಕುಗಳು ಮೊಟಕುಗೊಂಡ ಕಾರಣದಿಂದ, ಇದನ್ನು ಪ್ರತಿಭಟಿಸಲು ಎಡ ಪ್ರಜಾಸತ್ತಾತ್ಮಕ ಚಿಂತಕರು ೧೯೭೫ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಉದ್ಯಾನವನದ ಮರದ ಕೆಳಗೆ ಮೊದಲ ಸಭೆ ಸೇರಿ ಒಂದು ಸಾಂಸ್ಕೃತಿಕ ಸಂಘಟನೆ ಅತ್ಯಗತ್ಯ ಎಂದು ಒಪ್ಪಿ ಆ ಸಭೆಯಲ್ಲಿ ಕಿ.ರಂ.ನಾಗರಾಜ ಅವರು 'ಸಮುದಾಯ' ಎಂದು ಹೆಸರು ಸೂಚಿಸಿದರು.

ಈ ಸಂದರ್ಭದಲ್ಲಿ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಪಿ.ಗಂಗಾಧರ ಸ್ವಾಮಿ, ಕೆ.ಮರಳಸಿದ್ದಪ್ಪ, ಕೆ.ವಿ.ನಾರಾಯಣ, ಲಿಂಗದೇವರು ಹಳೆಮನೆ, ಕೆ.ಎಸ್.ನಿಸಾರ್ ಅಹಮ್ಮದ್, ಆರ್.ಕೆ.ಹುಡುಗಿ, ಚಂದ್ರಶೇಖರ್ ಪಾಟೀಲ, ಬರಗೂರು ರಾಮಚಂದ್ರಪ್ಪ, ಟಿ.ಎನ್.ನರಸಿಂಹನ್, ಕರೀಗೌಡ ಬೀಚನಹಳ್ಳಿ

ಮುಂತಾದ ಸಾಹಿತಿಗಳು, ಕಲಾವಿದರು, ವಿಚಾರವಾದಿಗಳು, ಸೇರಿ 'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯ ಮೊದಲ ಸಭೆಯಾಗಿದ್ದು ಚಾರಿತ್ರಾರ್ಹ ವಿಚಾರವಾಗಿದೆ. ಇದರ ಜೊತೆಗೆ ಯುವ ಬರಹಗಾರರಾಗಿ–ಕಲಾವಿದರಾಗಿ ರೂಪುಗೊಳ್ಳುತ್ತಿದ್ದ ಡಿ.ಆರ್.ನಾಗರಾಜ, ಸಿದ್ಧಲಿಂಗಯ್ಯ, ಶೂದ್ರ ಶ್ರೀನಿವಾಸ್, ಅಗ್ರಹಾರ ಕೃಷ್ಣಮೂರ್ತಿ, ಸಿ.ಕೆ.ಗುಂಡಣ್ಣ, ಲಕ್ಷ್ಮೀಪತಿಕೋಲಾರ, ಭಾಸ್ಕರಮಯ್ಯ, ಎಸ್.ಜಿ.ಸಿದ್ಧರಾಮಯ್ಯ, ಬೋಳುವಾರು ಮಹಮ್ಮದ್ ಕುಂಞ, ಸುರೇಶ್ ಆನಗಳ್ಳಿ, ಜಿ.ಕೆ.ಗೋವಿಂದರಾವ್, ಲಕ್ಷ್ಮೀಚಂದ್ರಶೇಖರ್, ಎಸ್.ಮಾಲತಿ, ಜನಾರ್ಧನ್, ಸಿ.ಬಸವಲಿಂಗಯ್ಯ, ವಾಸುದೇವ ಉಚ್ಚಿಲ್, ಜಿ.ರಾಜಶೇಖರ್, ಕೆ.ಫಣಿರಾಜ್, ಲಕ್ಷ್ಮೀನಾರಾಯಣರಾವ್, ಚಂದ್ರಶೇಖರ್ ನಂಗಲಿ, ಯತಿರಾಜ್, ಲೋಹಿತಾಶ್ವ, ರಂಗಾರೆಡ್ಡಿ ಕೋಡಿರಾಮಾಪುರ, ಜಿ.ಎನ್.ಮೋಹನ್, ಎಂ.ಜಿ.ವೆಂಕಟೇಶ್, ಸಿ.ಆರ್.ಭಟ್, ಸಿ.ಎಸ್.ಬಾಳೆ, ಪ್ರತಾಪ್ ಸಿಂಗ್ ತಿವಾರಿ, ರಮೇಶ್, ನೀಲಾ.ಕೆ. ಮೀನಾಕ್ಷಿಬಾಳಿ, ಶಂಕ್ರಯ್ಯ ಘಂಟಿ, ವಿ.ಎನ್.ಅಕ್ಕಿ, ಬಿ.ಐ.ಈಳಿಗೇರ್, ಜೀವಮಾನಕರ, ರವೀಂದ್ರನಾಥ ಸಿರಿವರ, ಎಸ್.ಎಸ್.ಚಿಕ್ಕಮಠ, ಶ್ರೀದೇವಿಜೋಶಿ, ಹೆಚ್.ಎ.ಪಾರ್ಶ್ವನಾಥ್, ಜಿ.ವಿ.ಕಾರಂತ, ಶಶಿಧರ್ ಬಾರಿಘಟ್, ಅಚ್ಯುತ, ಟಿ.ಸುರೇಂದ್ರರಾವ್, ಶ್ರೀಪಾದ್‌ಭಟ್, ಕೆ.ಎಸ್.ವಿಮಲಾ, ಶಾಂತ, ಷರೀಫಾ, ಡಿ.ಬಿ.ಬಡಿಗೇರ್, ದೇವೇಂದ್ರಗೌಡ, ಮೊದಲಾದವರು ತಾತ್ವಿಕ ಚಿಂತನೆಗಳ ಚರ್ಚೆಯಲ್ಲಿ 'ಸಮುದಾಯ' ಗಟ್ಟಿಯಾದ ಒಂದು ಸಾಂಸ್ಕೃತಿಕ ಸಂಘಟನೆಯಾಯಿತು.[೨] ಹೀಗೆ 'ಸಮುದಾಯ' ಎಂಬ ಸಂಘಟನೆಯು ಕರ್ನಾಟಕ ಸಾಂಸ್ಕೃತಿಕ ರಂಗ ಚಳವಳಿಯ ಬೆಳವಣಿಗೆ ಪೂರಕ ವಾತಾವರಣ ಸೃಷ್ಟಿಸಿದ್ದು ಚಾರಿತ್ರಿಕವಾದದ್ದು.

'ಸಮುದಾಯ'ದ ಸಂವಿಧಾನ ಹೇಳುವಂತೆ 'ಸಮುದಾಯ'ದ ಅರ್ಥ 'ಸಮುದಾಯ'ವು 'ಕಲೆಗಾಗಿ ಕಲೆ' ಎಂಬ ವಾದಕ್ಕೆ ಸವಾಲಾಗಿ 'ಬದುಕಿಗಾಗಿ ಕಲೆ' ಎಂಬ ದೃಢನಂಬಿಕೆಯಿಂದ ಕಲೆಯ ವಿವಿಧ ಪ್ರಕಾರಗಳನ್ನು ಸಾಮೂಹಿಕ, ಸಾಂಸ್ಕೃತಿಕ ಮಾಧ್ಯಮಗಳನ್ನಾಗಿ ಗುರುತಿಸಿದೆ. ಅವು ಜನತೆಯ ವಿಶೇಷವಾಗಿ ದೀನದಲಿತರ, ಅಲ್ಪಸಂಖ್ಯಾತರ ಮತ್ತು ಈವರೆಗೆ ಎಲ್ಲಾ ಸವಲತ್ತುಗಳಿಂದಲೂ ವಂಚಿತವಾಗಿರುವವರ ನೋವು ನಲಿವುಗಳಿಗೆ ಸ್ಪಂದಿಸುವಂತೆ ಮಾಡುವ ಉದ್ದೇಶ ಹೊಂದಿರುತ್ತದೆ. ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಅಜ್ಞಾನ, ಮೌಢ್ಯ, ಜಾತೀಯತೆ, ಕೋಮುವಾದ, ಮತಾಂಧತೆ, ಅಸ್ಪೃಶ್ಯತೆ, ಲಿಂಗತಾರತಮ್ಯ ಹಾಗೂ ಸಾಮಾಜಿಕ ಅಸಮಾನತೆಯಂತಹ ಜೀವ ವಿರೋಧಿ ನೆಲೆ ಹಾಗೂ ಮೌಲ್ಯಗಳನ್ನು ವಿರೋಧಿಸುತ್ತದೆ. ಜೊತೆಗೆ ಜನತೆಯ ಸರ್ವಾಂಗೀಣ ಪ್ರಗತಿಗೆ ಅತ್ಯಗತ್ಯವಾದ ಪ್ರಜಾಸತ್ತಾತ್ಮಕ ಹಾಗೂ ವೈಜ್ಞಾನಿಕ ಮನೋಭಾವವನ್ನು ರೂಢಿಸಿ ಬೆಳೆಸುವುದು ತನ್ನ ಚಾರಿತ್ರಿಕ ಕರ್ತವ್ಯವೆಂದು 'ಸಮುದಾಯ'ವು ನಂಬಿದೆ. ಜನಮಾನಸವನ್ನು ಗಾಬರಿಗೊಳಿಸುವ ಮಾನವನಿಂದ ಮಾನವನ ಶೋಷಣೆ ಸಾಧ್ಯವಾಗಿಸುವಂತಹ ಸಾಮಾಜಿಕ ವ್ಯವಸ್ಥೆಯನ್ನು ನಿರ್ನಾಮ ಮಾಡಿ 'ಸರ್ವಸಮತೆ'ಯಿಂದ ಕೂಡಿದ ಹೊಸ ಸಮಾಜವನ್ನು ನಿರ್ಮಿಸಲು ಶ್ರಮಿಸುವ ಎಲ್ಲಾ ವ್ಯಕ್ತಿ, ಶಕ್ತಿ, ಸಂಘಟನೆಗಳನ್ನು 'ಸಮುದಾಯ'ವು ಬೆಂಬಲಿಸುತ್ತದೆ. ಸಮಾಜದ ಆಮೂಲಾಗ್ರ ಬದಲಾವಣೆಗಾಗಿ ನಡೆಸಲಾಗುವ ರೈತ, ದಲಿತ ಕಾರ್ಮಿಕರಾದಿಯಾಗಿ ಎಲ್ಲಾ ಶ್ರಮಜೀವಿಗಳ

ಹೋರಾಟಗಳಿಗೆ ಅವಶ್ಯಕವಾಗಿರುವ ರಾಷ್ಟ್ರೀಯ ಸ್ವಾತಂತ್ರ್ಯ, ಸಮಗ್ರತೆ, ಸಾರ್ವಭೌಮತೆ, ಸ್ವಾವಲಂಬನೆ, ಪ್ರಜಾಪ್ರಭುತ್ವ ಮತ್ತು ವಿಶ್ವಶಾಂತಿಯ ರಕ್ಷಣೆಗಾಗಿ ಅತ್ಯಗತ್ಯವಾದ ಜಾಗತಿಕ ಶ್ರಮಜೀವಿಗಳ ಸೌಹಾರ್ದತೆಯ ಸ್ಥಾಪನೆಗೆ 'ಸಮುದಾಯ'ವು ಶ್ರಮಿಸುತ್ತದೆ. ದೇಶದ ಸ್ವಾವಲಂಬನೆ, ಸಾರ್ವಭೌಮತೆ, ಐಕ್ಯತೆ ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡುವಂಥ ಯಾವುದೇ ಪ್ರಯತ್ನಗಳ ವಿರುದ್ಧ ನಾಡಿನ ಶ್ರಮಜೀವಿಗಳು ಹಾಗೂ ಅವರ ನೇತೃತ್ವದಲ್ಲಿ ಇತರ ಜನರು ನಡೆಸುವ ಚಳವಳಿಗಳನ್ನು 'ಸಮುದಾಯ'ವು ಸಾಂಸ್ಕೃತಿಕ ಮಾಧ್ಯಮ ಹಾಗೂ ಸಾಧನಗಳ ಮೂಲಕ ಬೆಂಬಲಿಸುತ್ತದೆ. ವ್ಯಾಪಕವಾಗಿ ದುಡಿಯುವ ಜನರ ಸಂಸ್ಕೃತಿಯ ರಕ್ಷಣೆಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ 'ಸಮುದಾಯ'ವು ತನ್ನನ್ನು ತಾನು ತೊಡಗಿಸಿಕೊಳ್ಳಲು ಶ್ರಮಿಸುತ್ತದೆ.[೩] ದೇಶದ ಒಟ್ಟು ಜನಸಮುದಾಯದ ಐಕ್ಯತೆಗೆ ಭಂಗ ತರುವ ಜಾತಿವಾದ, ಕೋಮುವಾದ, ಪ್ರಾದೇಶಿಕವಾದ ಹಾಗೂ ಪ್ರತ್ಯೇಕವಾದದ ವಿರುದ್ಧ ಜನಜಾಗೃತಿ ಮೂಡಿಸಲು 'ಸಮುದಾಯ'ವು ನೆಲೆನಿಂತಿತು. ನಮ್ಮ ದೇಶದ ಬಹುಭಾಷಿಕ, ಬಹುಜನಾಂಗೀಯ, ಬಹುಧರ್ಮೀಯ ಒಟ್ಟಾರೆಯಾಗಿ ಬಹುಸಾಂಸ್ಕೃತಿಕ ವೈವಿಧ್ಯತೆಯಿಂದೊಡಗೂಡಿದ ವಿಶಿಷ್ಟ ಗುಣಲಕ್ಷಣಗಳನ್ನು ಕಾಪಾಡಲು 'ಸಮುದಾಯ'ವು ಸದಾ ಬದ್ಧವಾಗಿರುತ್ತದೆ.

ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ 'ಸಮುದಾಯ' ಎಂದರೆ ಬೇರೆ-ಬೇರೆ ಅರ್ಥಗಳನ್ನು ಕಾಣುತ್ತೇವೆ. ಅಂದು ಒಂದು ನಿರ್ದಿಷ್ಟ ಸಂದರ್ಭ, ಅರ್ಥ, ಭಾಷೆಯ ವ್ಯಾಖ್ಯಾನಗಳ ಬಳಕೆಯ ವಿಧಾನವಾಗಿ ಬೇರೆ-ಬೇರೆ ಪದಪುಂಜಗಳನ್ನು ನೀಡಿದ್ದರು. ಇವೆಲ್ಲದರ ಭಾವಾರ್ಥ ಒಂದೇ ಎಂದು ಹೇಳಲಾಗುತ್ತದೆ. ಉದಾಹರಣೆಗೆ : ಗುಂಪು, ಸಮೂಹ, ಒಂದೇ ವಿಚಾರ, ಸಮಾನ ಮನಸ್ಸುಳ್ಳ, ಐಕ್ಯ, ಸಾಂಘಿಕ ಜೀವನ, ಒಂದೇ ಬುಡಕಟ್ಟು, ಸಮಷ್ಟಿ ಹಿತ, ಕ್ರಿಯಾತ್ಮಕಗುಂಪು, ಕಳ್ಳು-ಬಳ್ಳಿಯ ಜನ, ಸಾಮೂಹಿಕ ಜೀವನ, ಒಕ್ಕೂಟ, ಸಾಮಾಜಿಕ ರಚನೆ ಹೀಗೆ ಅನೇಕ ಪದಗಳು ಒಂದೇ ಅರ್ಥ, ಭಾವವನ್ನು ನೀಡುವುದು ಕಾಣುತ್ತೇವೆ. ಸಾಮಾನ್ಯ ಅರ್ಥದಲ್ಲಿ ಒಂದು ಭೌಗೋಳಿಕ ಪ್ರದೇಶದಲ್ಲಿದ್ದು ಒಂದೇ ರೀತಿಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಒಂದು ಜನಸಮೂಹಕ್ಕೆ 'ಸಮುದಾಯ' ಎಂದು ಕರೆಯುವುದು ವಾಡಿಕೆ. ಸಮಾಜಶಾಸ್ತ್ರಜ್ಞರು, ಸಮಾಜಿಕ ಕಾರ್ಯಕರ್ತರು ಹಾಗೂ ಸಂಘಟಕರಲ್ಲಿ ಈ ಶಬ್ದಕ್ಕೆ ಇದಕ್ಕಿಂತ ಹೆಚ್ಚಿನ ಅರ್ಥವನ್ನು ನೀಡಿರುವುದುಂಟು. ಒಂದು ಗ್ರಾಮ, ಒಂದು ಪ್ರಾಂತ್ಯ, ಒಂದು ರಾಜ್ಯ, ಒಂದು ದೇಶ ಹಾಗೂ ಇಡೀ ಪ್ರಪಂಚವೇ ಒಂದು ಸಮುದಾಯ ಎಂದು ಅರ್ಥೈಸಲಾಗಿದೆ. ಹಾಗಾಗಿ ಸಮಯ ಹಾಗೂ ಸಂದರ್ಭಕ್ಕೆ ತಕ್ಕಂತೆ 'ಸಮುದಾಯ'ದ ಅರ್ಥಗ್ರಹಿಕೆ ಬೇರೆ-ಬೇರೆ ಆಗಿರುತ್ತದೆ. ವಿಶ್ವಸಂಸ್ಥೆಯು ಸಮುದಾಯ ಸಂಘಟನೆಯ ಯೋಜನೆಗಳನ್ನು ಬೇರೆ-ಬೇರೆ ಸದಸ್ಯ ರಾಷ್ಟ್ರಗಳಲ್ಲಿ ಅನುಷ್ಠಾನ ಮಾಡುವಾಗ, ಇಡೀ ವಿಶ್ವವನ್ನೇ 'ಅಂತರರಾಷ್ಟ್ರೀಯ ಸಮುದಾಯ' ಎಂದು ಹೇಳುವುದುಂಟು. ಹೀಗೆ ಒಂದು ವರ್ಗವಾಗಿ ಸಮುದಾಯ ಕರ್ನಾಟಕದಲ್ಲಿ ಆರಂಭವಾಗಿದ್ದೂ ಉಂಟು. ಜೊತೆಗೆ ಜಾತಿಗೊಂದು ಸಮುದಾಯ, ರೈತ ಸಮುದಾಯ, ಕಾರ್ಮಿಕ ಸಮುದಾಯ, ನೌಕರರ ಸಮುದಾಯ,

ಮಹಿಳಾ ಸಮುದಾಯ, ವಿದ್ಯಾರ್ಥಿ–ಯುವಜನ ಸಮುದಾಯ, ಅಹಿಂದ ಸಮುದಾಯ ಹೀಗೆ ಬೇರೆ–ಬೇರೆ ರೀತಿ ಅರ್ಥಗಳನ್ನು ನೀಡುವ ರೀತಿಯಲ್ಲಿ ಪರಿಭಾವಿಸಲಾಗಿದೆ.

ಹೀಗೆ 'ಜನ ಸಮುದಾಯ' ಅಂದರೆ ಸಮುದಾಯದ ಮೊದಲನೆ ಅಂಶ, ಸಮುದಾಯದ ಸದಸ್ಯರಿಲ್ಲದೆ, ಸಮುದಾಯವಿಲ್ಲ. ಸದಸ್ಯರಲ್ಲಿ ಮಹಿಳೆಯರು, ಪುರುಷರು, ಯುವಕರು, ಯುವತಿಯರು, ಮಕ್ಕಳು, ವೃದ್ಧರು ಮುಂತಾದ ಅನೇಕ ಗುಂಪಿನವರು ಇರಬಹುದು, ಒಂದೇ ವೃತ್ತಿಯವರಿರಬಹುದು, ಬೇರೆ–ಬೇರೆ ವೃತ್ತಿಯವರಿರಬಹುದು, ಒಂದೇ ಪ್ರವೃತ್ತಿಯವರಿರಬಹುದು ಇಲ್ಲವೇ ಬೇರೆ–ಬೇರೆ ಪ್ರವೃತ್ತಿಯವರಿರಬಹುದು, ಆದರೆ ಅವರಲ್ಲಿ ಸಾಮಾನ್ಯ ಆಸಕ್ತಿಗಳಿರುತ್ತವೆ. ಒಂದೇ ಜಾಗದಲ್ಲಿ ವಾಸಿಸುತ್ತಿರಬಹುದು. ಮಾನವ ಜನಾಂಗ ಹುಟ್ಟಿ ಬೆಳೆದಿರುವುದು ಸಮುದಾಯಗಳಲ್ಲಿಯೇ. ಅದರಂತೆಯೇ ಅವರ ವಿಕಾಸವು ಸಮುದಾಯದಲ್ಲಿಯೇ. ಹಾಗಾಗಿ ಸಮುದಾಯ 'ಜನರಿಂದ ಕೂಡಿದ ಗುಂಪು' ಎಂದು ಸಮಾಜಶಾಸ್ತ್ರಜ್ಞರಾದ ಆಗ್ಬರ್ನ್ ಮತ್ತು ನಿಮ್ಕಾಫ್ ಅವರುಗಳು ತಮ್ಮ ಅಭಿಪ್ರಾಯ ಹಾಗೂ ಅರ್ಥವನ್ನು ನೀಡಿದ್ದಾರೆ. ಹೀಗೆ ಒಂದೇ ರೀತಿಯ ಅಲೋಚನೆಯುಳ್ಳ ಸಾಂಸ್ಕೃತಿಕ ಚಳವಳಿಗಳನ್ನು ಗಟ್ಟಿಗೊಳಿಸುವ ಕ್ರಾಂತಿಯ ಬಯಕೆಗೋಸ್ಕರ (ಬದಲಾವಣೆ) ಸಮಾನತೆಯ ತುಡಿತವೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆ.

'ಸಮುದಾಯ'ದ ವ್ಯಾಖ್ಯಾನಗಳು

೧. **'ಸಮುದಾಯ'ದ ಮೂಲ ಸಂವಿಧಾನ** : ದೇಶದ ಐಕ್ಯತೆ–ಸಮಗ್ರತೆ, ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಗೆ ಧಕ್ಕೆ ಬರದ ಹಾಗೆ ಶ್ರಮಜೀವಿಗಳ 'ಸಮಾಜವಾದ'ದ ಸ್ಥಾಪನೆಗೆ ದುಡಿಯುವ ವರ್ಗವನ್ನು ಒಂದುಗೂಡಿಸುವ ಎಡ–ಪ್ರಜಾಸತ್ತಾತ್ಮಕ ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೨. **ಕಿ.ರಂ.ನಾಗರಾಜ** : ಜನಸಮುದಾಯಗಳ ಬಹುತ್ವದ ಸಾಂಸ್ಕೃತಿಕತೆಯನ್ನು ಉಳಿಸುವ ಒಂದು ಕ್ರಾಂತಿಕಾರಿ ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೩. **ಗಿರೀಶ್ ಕಾರ್ನಾಡ್** : ಎಡ–ಪ್ರಜಾಸತ್ತಾತ್ಮಕ ರಂಗ ಚಳವಳಿಯ ಧರ್ಮನಿರಪೇಕ್ಷಿತ ಸಿದ್ಧಾಂತದಿಂದ ಕೂಡಿದ ನಾಡಿನ ಒಂದು ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೪. **ಚಂದ್ರಶೇಖರ ಕಂಬಾರ** : ಸ್ಥಳೀಯ ದೇಶಿ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಬಹು ಸಾಂಸ್ಕೃತಿಕ ಚಿಂತನಾ ರಂಗ ಚಳವಳಿಯೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆ.

೫. **ಪ್ರಸನ್ನ** : ಬ್ರೆಕ್ಟ್‌ನ 'ಎಪಿಕ್' ರಂಗಭೂಮಿಯ ಚಿಂತನಾ ಮಾರ್ಗದಲ್ಲಿ ಕನ್ನಡ ರಂಗ ಚಳವಳಿಯನ್ನು ಉತ್ತುಂಗಕ್ಕೆ ಏರಿಸಿದ ಹವ್ಯಾಸಿ ರಂಗಭೂಮಿಯೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆ.

೬. **ಪಿ.ಲಂಕೇಶ್** : ಎಪ್ಪತ್ತರ ದಶಕದ ರಂಗಭೂಮಿಯ ಅನೈತಿಕತೆಯ ಪರ್ಯಾಯವಾಗಿ ಮಾರ್ಕ್ಸ್‌ವಾದಿ ಚಿಂತನೆಗಳ ಸಮಾನತೆಯ ರಾಜಕಾರಣದ ಸಿದ್ಧಾಂತವನ್ನು ಪ್ರತಿಪಾದಿಸಿದ ಹವ್ಯಾಸಿ ರಂಗ ಚಳವಳಿಯೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆ.

೭. **ಸಿ.ಜಿ. ಕೃಷ್ಣಸ್ವಾಮಿ** : ಬೀದಿ ರಂಗಭೂಮಿಗೆ ತಾತ್ವಿಕ ರಾಜಕೀಯ ಪ್ರಜ್ಞೆ ಮೂಡಿಸಿದ ಎಡಪಂಥೀಯ ರಂಗ ಚಳವಳಿಯ ಕ್ರಾಂತಿಕಾರಿ ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೮. **ಎಸ್. ಮಾಲತಿ** : ಜನತಾ ಪ್ರಜಾಪ್ರಭುತ್ವದ ಕ್ರಾಂತಿಯ ಆದರ್ಶ ಹೊಂದಿರುವ ಎಡಪಂಥೀಯ ಸಾಂಸ್ಕೃತಿಕ ಸಂಘಟನೆಯಾಗಿದ್ದು ಶಿಸ್ತು ಹಾಗೂ ಪ್ರಾಮಾಣಿಕತೆಯ ಜೊತೆಗೆ ಎಡಪಂಥೀಯ ಸಿದ್ಧಾಂತವನ್ನು ಕಲಿಸುವ ಸಂಘಟನೆಯೇ 'ಸಮುದಾಯ'.

೯. **ಡಿ.ಆರ್. ನಾಗರಾಜ** : ಕರ್ನಾಟಕದಲ್ಲಿ ಎಡಪಂಥೀಯ ಸಾಂಸ್ಕೃತಿಕ ಹವ್ಯಾಸಿ ರಂಗಭೂಮಿ ಚಳವಳಿಯನ್ನು ಸೈದ್ಧಾಂತಿಕವಾಗಿ ಗಟ್ಟಿಗೊಳಿಸಿದ ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೧೦. **ಕೋಟಿಗಾನಹಳ್ಳಿ ರಾಮಯ್ಯ** : ಕರ್ನಾಟಕದಲ್ಲಿ ಶೋಷಿತ ದಲಿತ, ಧಮನಿತರ ಪರನಿಂತ ರಂಗ ಚಳವಳಿಯಾಗಿ ಬೆಳೆದ ಒಂದು ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

೧೧. **ಸಿದ್ಧಲಿಂಗಯ್ಯ** : ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ದಲಿತ–ಬಂಡಾಯ ಸಾಹಿತ್ಯಗಾರರನ್ನು ಪರಿಚಯಿಸಿದ್ದು 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿ.

೧೨. **ಜಿ.ಎನ್.ನಾಗರಾಜ್** : ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಚಳವಳಿಯು ಬೆಳೆಯಲು ಬೆನ್ನೆಲುಬಾಗಿ ನಿಂತು ನಿರಂತರವಾಗಿ ಶ್ರಮಿಸಿದ ಸಾಂಸ್ಕೃತಿಕ ಸಂಘಟನೆಯೇ 'ಸಮುದಾಯ'.

ಸಮಾಜಶಾಸ್ತ್ರಜ್ಞರ ಪ್ರಕಾರ

೧೩. **ಮುರ್ರೇ.ಜಿ.ರೋಸ್** : ಒಂದು ಭೌಗೋಳಿಕ ಪ್ರದೇಶದಲ್ಲಿರುವ ಜನರನ್ನು ಸಮುದಾಯ ಎಂದು ಕರೆಯಬಹುದಾಗಿದೆ. ಒಂದು ಗ್ರಾಮ, ಒಂದು ಪಟ್ಟಣ, ಒಂದು ನಗರ, ಒಂದು ಶಹರ(ವಲಯ) (ಉದಾಹರಿಸುವುದು) ಒಂದು ಪ್ರಾಂತ್ಯ, ಒಂದು ರಾಜ್ಯ, ಒಂದು ದೇಶ ಹಾಗೂ ಇಡೀ ಪ್ರಪಂಚವೇ ಒಂದು ಸಮುದಾಯ.

೧೪. **ಕಾರ್ಲ್‌ಮಾರ್ಕ್ಸ್** : ಶೋಷಕ ಮತ್ತು ಶೋಷಿತ ಸಮುದಾಯಗಳ ನಿರಂತರ ಸಂಘರ್ಷವೇ 'ಚರಿತ್ರೆ'. ಹೀಗೆ ವರ್ಗದ ನೆಲೆಯಲ್ಲಿ ಕಾರ್ಲ್‌ಮಾರ್ಕ್ಸ್‌ರವರು 'ಸಮುದಾಯ', ಗುಂಪು, ಸಮೂಹ ಎಂಬ ಪದಕ್ಕೆ ಅರ್ಥವನ್ನು ನೀಡುತ್ತಾರೆ.

೧೫. **ಪ್ರೊ. ಅರ್ಥರ್ ಡನ್ಹ್ಯಾಮ್** : ಸಮುದಾಯ ಒಂದು ಯಾಂತ್ರಿಕ ವ್ಯವಸ್ಥೆಯಲ್ಲಿ, ಅದರ ಬೆಳವಣಿಗೆಗೆ ಕಾಣುತ್ತಿರುವ ಒಂದು ಚೈತನ್ಯ ಪೂರ್ವಕ ಘಟಕ. ಇನ್ನೊಂದು ಪರ್ಯಾಯ ರಾಜಕೀಯ ಸಂಸ್ಥೆ ಅಥವಾ ಘಟಕದಲ್ಲಿ ಒಂದು ಸಮುದಾಯದಲ್ಲಿ ಅನೇಕ ಚಿಕ್ಕ–ಚಿಕ್ಕ ಸಮುದಾಯಗಳಿರಬಹುದು. ಸಮುದಾಯ ಹತ್ತಾರು ಮನೆಗಳಿಂದ ಕೂಡಿದ್ದಾಗಿರಬಹುದು ಅಥವಾ ಒಂದು ದೊಡ್ಡ ಶಹರ ಅಥವಾ ಒಂದು ವಿಶಾಲ ಭೂ ಪ್ರದೇಶವಾಗಿರಬಹುದು. ಆದರೆ ಅವರು ಒಟ್ಟಿಗಿರಬೇಕು ಮತ್ತು ಸಹಬಾಳ್ವೆ ನಡೆಸಬೇಕಷ್ಟೆ.

೧೬. **ಮ್ಯಾಕ್ ಐವರ್** : ಯಾವಾಗ ಯಾವುದೇ ಒಂದು ಗುಂಪು, ಅದು ಚಿಕ್ಕದಾಗಿರಲಿ ಇಲ್ಲವೇ ದೊಡ್ಡದಾಗಿರಲಿ, ಯಾವುದೇ ನಿಗದಿತ ಆಸಕ್ತಿ ಇಲ್ಲದೆ, ಸಾಮಾನ್ಯ ಜೀವನದ ಮೂಲಭೂತ ಪರಿಸ್ಥಿತಿಗಳನ್ನು ಹರಡಿಕೊಂಡು, ಒಟ್ಟಾಗಿ ಜೀವಿಸುತ್ತಾರೋ ಅಂತಹ ಗುಂಪಿಗೆ ನಾವು 'ಸಮುದಾಯ' ಎಂದು ಕರೆಯುತ್ತೇವೆ.

೧೭. **ಬರ್ಟೋಲ್ಟ್ ಬ್ರೆಕ್ಟ್** : ಚರಿತ್ರೆಯಲ್ಲಿ ಮನುಷ್ಯ ಮಾರ್ಪಡಬಲ್ಲ, ಮಾರ್ಪಡುತ್ತಿದ್ದಾನೆ. ಸಮುದಾಯಗಳ ಹೊರಾಂಗಣದಲ್ಲಿ ಮಾನವರ ಹಾವ-ಭಾವನೆ ರೂಪುಗೊಳ್ಳುತ್ತದೆ. ವಿಶಾಲ ನಾಟಕಗಳ ರೀತಿಯಲ್ಲಿ ವಿಶಾಲವಾದ ಚಿಂತನೆಗಳಿಗೆ 'ಸಮುದಾಯ' ಒಳಗಾಗಬೇಕು.

೧೮. **ಇ.ಎಂ.ಎಸ್.ನಂಬೂದಿರಿ ಪಾಡ್** : ಸಮುದಾಯದಂತಹ ಚಳವಳಿಯು ವಿಶಾಲ ತಳಹದಿಯ ಮತ್ತು ಪಂಥವಾದಿಯಲ್ಲದೆ ಎಲ್ಲಾ ಪ್ರಗತಿಪರ ಕಲಾವಿದರು ಮತ್ತು ಬರಹಗಾರರನ್ನು ಒಳಗೊಂಡಿರಬೇಕು. ಆದರೆ ಹೆಚ್ಚು ವರ್ಗಪ್ರಜ್ಞೆಯುಳ್ಳ ಮತ್ತು ರಾಜಕೀಯವಾಗಿ ಸಕ್ರಿಯವಾಗಿರುವ ಕಲಾವಿದರು ಸಂಘಟಿತರಾಗಿ ಅಂತಹ ಒಂದು ವಿಶಾಲ ಚಳವಳಿಗೆ ನಾಯಕತ್ವ ನೀಡುವಂತಾಗಬೇಕು.

ಈ ಮೇಲಿನ ದೇಶೀಯ ಹಾಗೂ ವಿದೇಶೀಯ ಸಮಾಜಶಾಸ್ತ್ರಜ್ಞರು ಹಾಗೂ ರಂಗಕರ್ಮಿಗಳು, ಸಮಾಜ ಚಿಂತಕರು ತಮ್ಮ ವ್ಯಾಖ್ಯಾನಗಳಲ್ಲಿ 'ಸಮುದಾಯ'ವನ್ನು ಅರ್ಥೈಸಿದ್ದಾರೆ.

೨.೨. 'ಸಮುದಾಯ'ದ ಹುಟ್ಟು

ಭಾರತದಲ್ಲಿ ೧೯೭೦ರ ರಾಜಕಾರಣದ ಸಂಕ್ರಮಣದ ಘಟ್ಟದಲ್ಲಿತ್ತು. ಇಂದಿರಾ ಗಾಂಧಿ ಅವರ ಸರ್ವಾಧಿಕಾರತ್ವದ ಕರಿ ನೆರಳು ದೇಶದ ಮೇಲೆ ಹರಡಿತ್ತು. ಸಾಮಾನ್ಯ ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಕ್ರೂರ ದೃಷ್ಟಿ ಬೀಳದೆ ಇರಲಿಲ್ಲ. ದೇಶದ ಶಾಂತಿ, ಸುವ್ಯವಸ್ಥೆಯ ಸಮತೋಲನವನ್ನು ಕಾಪಾಡುವ ಬುದ್ಧಿಜೀವಿ ಮತ್ತು ದುಡಿಯುವ ವರ್ಗದ ಮೇಲೆ ಯಾವುದೇ ಮುನ್ಸೂಚನೆ ಕೊಡದೆ ಆಳುವ ವರ್ಗ ಹಲ್ಲೆ ನಡೆಸಲು ಪ್ರಾರಂಭಿಸಿತ್ತು. ಇದೇ ಪರಿಪಾಠ ಕಾನೂನು ಆಗಿ ಪರಿವರ್ತನೆಗೊಳ್ಳುವ ಕಾಲ ಬಹಳ ಹತ್ತಿರದಲ್ಲಿತ್ತು. ಇಂತಹ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದು ಹೊಸ ನಾಟಕ ತಂಡದ ಪ್ರಾರಂಭಕ್ಕೆ ಕೆಲವೇ ಕೆಲವು ಜನ ಚಿಂತನೆ ಮಾಡುತ್ತಿದ್ದರು.[೪] ಇವರುಗಳು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು, ಕಲಿಸುತ್ತಿದ್ದ ಅಧ್ಯಾಪಕರುಗಳು ಹಾಗೂ ಜನಪರ ಚಿಂತನೆ, ಕಾಳಜಿಯನ್ನು ಹೊಂದಿದ್ದ ಜನಗಳು. ಇವರಿಗೆಲ್ಲಾ ನಾಟಕದ ಮುಖಾಂತರ ಸಾಮಾಜಿಕ ಬಹು ಧರ್ಮೀಯರು ಒಟ್ಟಾರೆಯಾಗಿ ಬಹು ಸಾಂಸ್ಕೃತಿಕ ವೈವಿಧ್ಯತೆಯಿಂದೊಡಗೂಡಿದ ವಿಶಿಷ್ಟ ಗುಣಲಕ್ಷಣಗಳನ್ನು ಕಾಪಾಡಲು 'ಸಮುದಾಯ'ವು ಬದ್ಧವಾಗುವಂತೆ ಆಯಿತು.

ಬದಲಾವಣೆ ಮಾಡಬಹುದೆಂದು ಈ ಸಮಾಜದ ಓರೆ-ಕೋರೆಗಳನ್ನು ಸಮಂಜಸವಾಗಿ ಜನರಿಗೆ ತೋರಿಸಿ ಅವರನ್ನು ಹಾಗೂ ಸಮಾಜವನ್ನು ತಿದ್ದುವ ಕೆಲಸದಲ್ಲಿ ತೊಡಗಿಸಿಕೊಳ್ಳಬಹುದೆಂದು

ಬಲವಾಗಿ ಸಂಬದ್ಧ ಪ್ರಸನ್ನ, ಸಿ.ಜಿ.ಕೆ ಮುಂಚೂಣಿಯಲ್ಲಿದ್ದರು. ಪ್ರತಿದಿನ ಸೆಂಟ್ರಲ್ ಕಾಲೇಜಿನ ಹುಲ್ಲುಗಾವಲಿನಲ್ಲಿ ಸಭೆ ನಡೆಸಿ, ಹೊಸ ತಂಡವನ್ನು ಹೇಗೆ ಕಟ್ಟಬೇಕು? ಅದರ ಹೆಸರೇನು? ಮೊದಲನೇ ನಾಟಕ ಯಾವುದು? ಮುಂತಾದ ಗಹನವಾದ ವಿಷಯಗಳಲ್ಲಿ ಮುಳುಗುತ್ತಿದ್ದರು. ಕೊನೆಗೆ ಸರ್ವಕಾಲಕ್ಕೆ ಸರಿಹೊಂದುವ 'ಸಮುದಾಯ' ಎಂಬ ಹೆಸರನ್ನು ಸೂಚಿಸಿದವರು 'ನಡೆದಾಡುವ ವಿಶ್ವಕೋಶ' ಹಾಗೂ ಖ್ಯಾತ ವಿಮರ್ಶಕರೂ ಆದ ಕಿ.ರಂ.ನಾಗರಾಜ ಅವರು. ಆರಂಭದ ಈ ಘಟ್ಟದಲ್ಲಿ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಪಿ.ಗಂಗಾಧರಸ್ವಾಮಿ, ಸಿ.ವೀರಣ್ಣ, ಟಿ.ಎನ್.ನರಸಿಂಹನ್, ಕಿ.ರಂ.ನಾಗರಾಜ, ಕೆ.ವಿ.ನಾರಾಯಣ, ಹಾ.ಸ.ಕೃ, ಕೆ.ಮರುಳಸಿದ್ದಪ್ಪ, ಕೆ.ಎಸ್.ನಿಸಾರ್ ಅಹಮ್ಮದ್, ಲಿಂಗದೇವರು ಹಳೆಮನೆ, ಕಾ.ವೆಂ.ವೇಣುಗೋಪಾಲ್, ಕರೀಗೌಡ ಬೀಚನಹಳ್ಳಿ, ಬರಗೂರು ರಾಮಚಂದ್ರಪ್ಪ, ಮುಂತಾದ ಪ್ರಾಧ್ಯಾಪಕರು, ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಎಡ-ಪ್ರಗತಿಪರ ಹೋರಾಟಗಾರರು ಕೂಡಿ ಬೆಂಗಳೂರಿನಲ್ಲಿ 'ಸಮುದಾಯ'ದ ಘಟಕ ಪ್ರಾರಂಭ ಮಾಡಿದರು. 'ಸಮುದಾಯ'ದ ಮೊದಲನೇ ನಾಟಕವಾಗಿ 'ಯಾವುದೇ ಅನ್ಯ ಭಾಷೆಯ ನಾಟಕ ಬೇಡ, ಸ್ವತಂತ್ರ ಕನ್ನಡ ನಾಟಕವೇ ಇರಲಿ', ಎಂದು ಒಮ್ಮತದ ಅಭಿಪ್ರಾಯ ಮೂಡಿ ಸಂಸರ 'ವಿಗಡ ವಿಕ್ರಮರಾಯ' ಆಧಾರಿತ 'ಹುತ್ತವ ಬಡಿದರೆ' ನಾಟಕವನ್ನು ಬರೆದವರು ನಾಡಿನ ಭಾಷಾ ಚಿಂತಕ ಕೆ.ವಿ.ನಾರಾಯಣ ಅವರು.

'ಸಮುದಾಯ'ದ ಪ್ರಾರಂಭದ ಗಟ್ಟ (೧೯೭೫-೧೯೭೮)

ಕರ್ನಾಟಕದಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ ಶ್ರೀರಂಗರು, ಲಂಕೇಶ್, ಕಾರಂತ, ಕಾರ್ನಾಡ್, ಕಂಬಾರರು, ಚಂಪಾರಂತಹ ಮಹತ್ವದ ನಾಟಕಕಾರರು ಹುಟ್ಟಿಕೊಂಡರು. ಇದೇ ಸಂದರ್ಭದಲ್ಲಿ ಬಿ.ವಿ.ಕಾರಂತರ ಹವ್ಯಾಸಿ ರಂಗಭೂಮಿಯನ್ನು ವೃತ್ತಿರಂಗಭೂಮಿಯಂತೆ ವೈಭವಯುತವಾಗಿ ಕಟ್ಟಬೇಕೆಂದು ನಾಟಕಗಳಿಗೆ ಅಧಿಕ ಪ್ರಮಾಣದ ಹಣವನ್ನು ಖರ್ಚುಮಾಡಲು ಆರಂಭ ಮಾಡಿದರು. ಈ ಹಣವನ್ನು ಅವರು ಹಲವಾರು ಪ್ರಾಯೋಜಕರಿಂದ ಪಡೆಯುತ್ತಿದ್ದರು. ಇದು ರಂಗಭೂಮಿಗೆ ಆಗತಾನೆ ಕಾಲಿರಿಸಿದ ಪ್ರಸನ್ನ, ಸಿ.ಜಿ.ಕೆ, ಕಿ.ರಂ.ನಾಗರಾಜ, ಕೆ.ವಿ.ನಾರಾಯಣ, ಆರ್.ನಾಗೇಶ್, ಡಿ.ಆರ್.ನಾಗರಾಜ, ಮೊದಲಾದವರ ಅಸಮಾಧಾನಕ್ಕೆ ಕಾರಣವಾಯಿತು. ಈ ರೀತಿ ಹಣವುಳ್ಳವರ ಆಶ್ರಯ ಪಡೆದು ನಾಟಕ ಮಾಡುವುದು ಜನವಿರೋಧಿ ನಿಲುವು ಎಂದು ಕಾರಂತರ ರಂಗ ಚಳವಳಿಯನ್ನು ವಿರೋಧಿಸಿ ಸಂಘಟಿತರಾಗಲು ಮುಂದಾದರು. ಈ ಎಲ್ಲಾ ವಿದ್ಯಮಾನಗಳ ನಡುವೆಯೇ ೧೯೭೫ರ ಹೊತ್ತಿಗೆ ತುರ್ತುಪರಿಸ್ಥಿತಿಯನ್ನು ಹೇರಲಾಯಿತು. ಇಂತಹ ಸಂದರ್ಭದಲ್ಲಿ ದೇಶದ ಹಾಗೂ ರಾಜ್ಯದ ರಾಜಕಾರಣ, ರಾಜಕೀಯದಲ್ಲಾದ ಬದಲಾವಣೆ, ಪ್ರಭುತ್ವದ ವಿರುದ್ಧವಾಗಿ ಎಡಪಂಥೀಯ ಹಾಗೂ ಪ್ರಗತಿಪರ ಚಿಂತಕರು ಬಹಿರಂಗವಾಗಿ ಹೋರಾಟಕ್ಕೆ ಮುಂದಾದರು. ಇವಕ್ಕೆ ಪೂರಕವಾಗಿ ಸಾಹಿತಿಗಳು, ಬುದ್ಧಿಜೀವಿಗಳು ಜನಪರ ಹೋರಾಟಕ್ಕೆ ಅನುಗುಣವಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ಗಮನಾರ್ಹ.

ತುರ್ತುಪರಿಸ್ಥಿತಿಯ ಪರಿಣಾಮವಾಗಿ ಹುಟ್ಟಿಕೊಂಡಿದ್ದ 'ಸಮುದಾಯ' ಸಾಂಸ್ಕೃತಿಕ ಸಂಘಟನೆ. ಈ ಮೂಲಕ ರಂಗಚಟುವಟಿಕೆಗಳು ಸೈದ್ಧಾಂತಿಕವಾಗಿ ಜನಪರವಾದ ಹಾಗೂ ಜೀವಪರವಾದ ಸಾಹಿತ್ಯವನ್ನು ರಂಗಭೂಮಿಯ ಮೂಲಕ ಜನಸಾಮಾನ್ಯರ ಕಡೆಗೆ ಕೊಂಡೋಯ್ಯುವ ಉದ್ದೇಶ 'ಸಮುದಾಯ' ಸಂಘಟನೆಯದಾಗಿತ್ತು. 'ತಾಯಿ' ನಾಟಕದ ಮೂಲಕ ಅಭೂತ ಪೂರ್ವ ಯಶಸ್ಸು ಪಡೆದ 'ಸಮುದಾಯ'ವು ಮೈಸೂರು, ಮಂಗಳೂರು, ಧಾರವಾಡ ಮತ್ತು ತುಮಕೂರುಗಳಲ್ಲಿ ತನ್ನ ಅನೇಕ ಘಟಕಗಳನ್ನು ಸ್ಥಾಪಿಸಲು ಧೈರ್ಯ ತೋರಿತು. ಈ ಘಟಕಗಳಲ್ಲಿ ಅನುಕ್ರಮವಾಗಿ 'ತಾಯಿ', 'ಮಾರೀಚನ ಬಂಧುಗಳು' 'ಪಂಚಮ' ಹಾಗೂ 'ಯಾರು ಗೆಳೆಯ ಯಾರು' ನಾಟಕಗಳು ಸ್ವತಂತ್ರವಾಗಿ ಪ್ರದರ್ಶನಗೊಂಡವು. ಆಗಸ್ಟ್ ೧೯೭೭ರಲ್ಲಿ ಬೆಂಗಳೂರು ಕೇಂದ್ರವಾಗಿ 'ಸಮುದಾಯ ಸಮನ್ವಯ ಸಮಿತಿ' ರಚನೆಗೊಂಡು ರಾಜ್ಯದ ಹೊಸ ಸಾಂಸ್ಕೃತಿಕ ಆಂದೋಲನದ ಸಂಘಟನೆಯಾಗಿ ರೂಪು ತಳೆಯಿತು. ಜೊತೆಗೆ 'ಸಮುದಾಯ' ಪ್ರಕಾಶನ ಹಾಗೂ ವಾರ್ತಾಪತ್ರ, ರಂಗದ ನಿಯತಕಾಲಿಕೆ ಪ್ರಾರಂಭವಾದವು. ಜನವರಿ ೧೯೭೭ರಲ್ಲಿ ಬದಲಾದ ರಾಜಕೀಯ ಪರಿಸ್ಥಿಯಲ್ಲಿ ಧಾರವಾಡ, ರಾಯಚೂರು, ಗುಲ್ಬರ್ಗಾ, ಉಡುಪಿ, ಶಿವಮೊಗ್ಗ, ಭದ್ರಾವತಿ, ಮಂಗಳೂರು, ಹರಪನಹಳ್ಳಿ, ಕೆ.ಜಿ.ಎಫ್, ಕುಂದಾಪುರ ಮೊದಲಾದ ಕಡೆಗಳಲ್ಲಿ 'ಸಮುದಾಯ'ದ ಘಟಕಗಳನ್ನು ಸ್ಥಾಪಿಸಿ ರಂಗ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ನವೆಂಬರ್ ೧೯೭೭ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಹತ್ತು ಘಟಕಗಳ ಪ್ರತಿನಿಧಿಗಳು ಭಾಗವಹಿಸಿದ್ದು "ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿ" ಎಂಬ ರಾಜ್ಯ ಮಟ್ಟದ ಸಾಂಸ್ಕೃತಿಕ ಸಂಘಟನೆಯು ನಿಯಮಾನುಸಾರವಾಗಿ ಅಸ್ತಿತ್ವಕ್ಕೆ ಬಂದಿತು. ಸಂಘಟನೆಗೆ ಒಂದು ಸಂವಿಧಾನವನ್ನು ರಚಿಸಿ, ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ೧೯೬೦ರ ಅನ್ವಯ ನೊಂದಾಯಿಸಲು ನಿರ್ಧರಿಸಲಾಯಿತು." ಈ ಮೊದಲ ಸಮ್ಮೇಳನದಲ್ಲಿ ಪ್ರಸನ್ನ ಮತ್ತು ಸಿ.ಜಿ.ಕೃಷ್ಣಸ್ವಾಮಿಯವರನ್ನು 'ಸಮುದಾಯ'ದ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಈ ಕೆಳಗಿನಂತೆ ತನ್ನ ಉದ್ದೇಶಗಳನ್ನು ರಚಿಸಿಕೊಂಡಿದೆ.

'ಸಮುದಾಯ'ದ ಉದ್ದೇಶಗಳು

* 'ಕಲೆಗಾಗಿ ಕಲೆ' ಎಂಬ ಪ್ರತಿಗಾಮಿ ನಿಲುವಿಗೆ ಸವಾಲಾಗಿ ಸಾಮಾಜಿಕ ಬದ್ಧತೆಯುಳ್ಳ 'ಜನರ ಬದುಕಿಗಾಗಿ ಕಲೆ' ಎಂಬ ಅರಿವಿನಿಂದ ಸಾಂಸ್ಕೃತಿಕ ಆಂದೋಲನಕ್ಕೆ ಪ್ರೋತ್ಸಾಹಿಸುವುದು.

* 'ಸಮುದಾಯ'ದ ಮೂಲ ಗುರಿಯಾದ ವೈಜ್ಞಾನಿಕ ಮನೋಭಾವನೆಯನ್ನು ಜನರಲ್ಲಿ ಮೂಡಿಸಲು ದೃಶ್ಯಮಾಧ್ಯಮಗಳಾದ ನಾಟಕ, ಸಿನಿಮಾಗಳನ್ನು ಬಳಸಿಕೊಳ್ಳುವುದು ಗ್ರಂಥಾಲಯಗಳನ್ನು ಸ್ಥಾಪಿಸುವುದು. ಪ್ರಗತಿಪರ ವಿಚಾರಧಾರೆಯ ಪುಸ್ತಕಗಳು ಬೆಂಗಳೂರಿನ ಹೊರಗೆ ಸಿಗುವಂತೆ ಮಾಡಲು 'ರಂಗ ಸಮುದಾಯ', 'ಚಿತ್ರ ಸಮುದಾಯ'ಗಳೊಂದಿಗೆ 'ಗ್ರಂಥ ಸಮುದಾಯ'ಗಳನ್ನು ಸ್ಥಾಪಿಸುವುದು.

* ಮಾನವನಿಂದ ಮಾನವನ ಶೋಷಣೆ ಅವಕಾಶವಿಲ್ಲದ ಹೊಸ ಸಮಾಜವನ್ನು ನಿರ್ಮಿಸಲು ದುಡಿಯುವ ಎಲ್ಲಾ ಶಕ್ತಿಗಳನ್ನು ಬೆಂಬಲಿಸುವುದು. ಸಾಮಾಜಿಕ ಪರಿವರ್ತನೆಗಾಗಿ ನಡೆಯುವ ಹೋರಾಟಗಳಿಗೆ ಮೂಲಭೂತ ಅವಶ್ಯಕತೆಗಳಾಗಿರುವ ರಾಷ್ಟ್ರೀಯ ಸ್ವಾತಂತ್ರ್ಯ, ಸಮಗ್ರತೆ, ಪ್ರಜಾಪ್ರಭುತ್ವ ಮತ್ತು ವಿಶ್ವ ಶಾಂತಿಯ ರಕ್ಷಣೆಗಾಗಿ ಶ್ರಮಿಸುವುದು.

೨.೩. 'ಸಮುದಾಯ'ದ ಸ್ಥಾಪನೆಗೆ ಪ್ರೇರಣೆ-ಪ್ರಭಾವಗಳು

ಸ್ವಾತಂತ್ರ್ಯ ಪೂರ್ವದ ಚರಿತ್ರೆಯಲ್ಲಿ ಸಾಂಸ್ಕೃತಿಕ ರಂಗ ಚಳವಳಿಗಳನ್ನು ನಾವು ಭಿನ್ನವಾಗಿ ಗ್ರಹಿಸಬಹುದು. ೧೯೩೬ರಲ್ಲಿ ಮೊದಲ ಭಾರಿಗೆ ಒಂದು ಸಾಂಸ್ಕೃತಿಕ ಸಂಘಟನೆ ಅಗತ್ಯವಿದೆ ಎಂದು ಕವಿ ಮುನ್ಷಿ ಪ್ರೇಮಚಂದ್ ಅಭಿಪ್ರಾಯ ಪಡುತ್ತಾರೆ. ಅವರ ಮುಖೇನ ಪ್ರಾರಂಭವಾಗಿ ೧೯೪೦ರಲ್ಲಿ ಇಪ್ಟಾ (ಇಂಡಿಯನ್ ಪೀಪಲ್ಸ್ ಥೀಯೇಟರ್ ಅಸೋಸಿಯೇಶನ್) ಎಂಬ ಸಂಘಟನೆಯಿಂದ ಒಂದು ಸಾಂಸ್ಕೃತಿಕ ಸಂಘಟನೆ ಪ್ರಾರಂಭವಾಗುತ್ತದೆ. ಈ ಇಪ್ಟಾ ಸಾಂಸ್ಕೃತಿಕ ಸಂಘಟನೆ ಬೀದಿನಾಟಕ ಹಾಗೂ ರಂಗ ನಾಟಕಗಳ ಮೂಲಕ ಬ್ರಿಟೀಶ್ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಪದ್ಧತಿಗಳ ವಿರುದ್ಧ ಸ್ವಾತಂತ್ರ್ಯ ಚಳವಳಿಯಲ್ಲಿ ತನ್ನದೇ ಆದ ರೀತಿಯಲ್ಲಿ ರಂಗ ಚಳವಳಿಯನ್ನು ಆರಂಭಿಸಿ ಯಶಸ್ವಿಯಾಗುತ್ತದೆ. ಈ ಸಾಂಸ್ಕೃತಿಕ ಸಂಘಟನೆಗೆ ಬೆಂಬಲವಾಗಿ ಅಂದಿನ ಎಡ-ಪಕ್ಷವಾದ ಸಿ.ಪಿ.ಐ ಭಾರತೀಯ ಕಮ್ಯುನಿಸ್ಟ್ ಪಕ್ಷದ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಬಹುತೇಕ ಭಾರತದಲ್ಲಿ ತನ್ನ ಘಟಕಗಳನ್ನು ವಿಸ್ತರಿಸಿಕೊಳ್ಳುತ್ತದೆ. ಇದರ ಪ್ರಭಾವದಿಂದಲೇ ಕರ್ನಾಟಕದಲ್ಲಿ ಸಾಹಿತಿ ನಿರಂಜನ ಅವರು ೧೯೪೩ ಬಾಂಬೆ ಇಪ್ಟಾದ ಕಾರ್ಯಕ್ರಮಕ್ಕೆ ಭೇಟಿ ನೀಡಿ ಬಂದು ಮೈಸೂರು ರಾಜ್ಯದಲ್ಲಿ 'ನಾವು ಮನುಷ್ಯರು' ಎಂಬ ಬೀದಿನಾಟಕವನ್ನು ಮಂಗಳೂರಿನ ಕ್ರೀಡಾ ಮೈದಾನದಲ್ಲಿ ಪ್ರದರ್ಶಿಸಿದ್ದು.

ರಷ್ಯಾದ ಸಮಾಜವಾದಿ ಚಿಂತನೆಗಳ ಪ್ರಭಾವ

ಸಮಾಜವಾದಿ ಚಿಂತನೆಗಳಾದ ಎಡಪಂಥವನ್ನು ಮೈಗೂಡಿಸಿಕೊಂಡು ಹುಟ್ಟಿಕೊಂಡ ಸಂಘಟನೆಗಳಲ್ಲಿ 'ಇಪ್ಟಾ' ಹೊರತುಪಡಿಸಿದರೆ ಕರ್ನಾಟಕದಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯೂ ಒಂದು. ಎಪ್ಪತ್ತರ ದಶಕದಲ್ಲಿ ಹಲವಾರು ರಂಗತಂಡಗಳು ಕೇವಲ ಮನರಂಜನೆಗಾಗಿಯೋ ಅಥವಾ ನಾಟಕಕ್ಕೋಸ್ಕರ ನಾಟಕವನ್ನು ಮಾಡಿ ತೃಪ್ತಿ ಪಡೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ 'ಸಮುದಾಯ' ತನ್ನ ವಿಶಿಷ್ಟ ಆಶಯದೊಂದಿಗೆ ಸಮತಾವಾದದ ತಾತ್ವಿಕ ಚಿಂತನೆಯಲ್ಲಿ ಹುಟ್ಟಿತು. ಹೀಗಾಗಿ ರಂಗಭೂಮಿ ಜನಸಾಮಾನ್ಯರಿಗೆ ವಿಮುಖವಾಗಿದ್ದ ಕಾಲದಲ್ಲಿ 'ಸಮುದಾಯ' ಸಮಾಜಮುಖಿಯಾಗಿ ಜನರಿಗೆ ಸ್ಪಂದಿಸಲು ಮುಂದಾಯಿತು. ಇದೇ ಸಂದರ್ಭದಲ್ಲಿ ಜಾಗತಿಕಮಟ್ಟದಲ್ಲಿ ಪ್ರಗತಿಪರ ಸಾಂಸ್ಕೃತಿಕ ಆಂದೋಲನದ ಮುಖ್ಯಸ್ಥರಲ್ಲಿ ಒಬ್ಬರಾದ ಸೋವಿಯತ್ ಒಕ್ಕೂಟದ ಪ್ರಖ್ಯಾತ ಕವಿಯಾದ ಮ್ಯಾಕ್ಸಿಂ ಗೋರ್ಕಿ ಅವರು ಕೆಲವು ಸವಾಲುಗಳನ್ನು ಪ್ರಪಂಚದ ಜನಸಮುದಾಯ ಮುಂದೆ ಹಾಗೂ ಸಾಂಸ್ಕೃತಿಕ ಕಾರ್ಯಕರ್ತರ ಮುಂದೆ ಇಟ್ಟರು. 'ಜಗತ್ತಿನ ಸಾಂಸ್ಕೃತಿಕ ಕಾರ್ಯಕರ್ತರೇ

ನೀವು ಯಾರ ಪರವಿದ್ದೀರಿ? ಸಾಮ್ರಾಜ್ಯಶಾಹಿ ಅಥವಾ ಯುದ್ಧದ ಪರವಿರುವಿರಾ? ಅಥವಾ ಸಮಾಜವಾದ ಮತ್ತು ಶಾಂತಿಯ ಪರವಿರುವಿರಾ? ತಮ್ಮ ಬಂಧ ವಿಮೋಚನೆಗಾಗಿ ಹೋರಾಡುತ್ತಿರುವ ಮಿಲಿಯಾಂತರ ಜನರನ್ನು ರಾಜ್ಯದಲ್ಲಿ ಕಾಡುತ್ತಿರುವ ಬ್ರಿಟನ್ ಹಾಗೂ ಅದರ ಮಿತ್ರ ರಾಷ್ಟ್ರಗಳ ಸಾಮ್ರಾಜ್ಯಶಾಹಿಗಳ ಪರವಿರುವಿರಾ?' ಎನ್ನುವ ಮಾತುಗಳು ವಿಶ್ವದ ಪ್ರಗತಿಪರರನ್ನಷ್ಟೇ ಅಲ್ಲದೆ ಭಾರತ ಮತ್ತು ಕರ್ನಾಟಕದಲ್ಲಿಯೂ ಪ್ರಭಾವಿಸಿತು. ಅಲ್ಲಿಯವರೆಗೂ ವಸಹತುಶಾಹಿಯ ಕಪಿಮುಷ್ಠಿಗೆ ಸಿಲುಕಿ ಎಚ್ಚೆತ್ತುಕೊಳ್ಳುತ್ತಿದ್ದ ಸಂದರ್ಭದಲ್ಲಿ ಸರ್ವಾಧಿಕಾರಿ ಹಾಗೂ ಬಂಡವಾಳಶಾಹಿಗಳ ವಿರೋಧಿದ ಪ್ರವೃತ್ತಿಗಳ ಜನಸಾಮಾನ್ಯರನ್ನು ಇನ್ನಷ್ಟು ಎಚ್ಚರಗೊಳ್ಳುವಂತೆ ಮಾಡಿದವು.

ಮ್ಯಾಕ್ಸಿಂ ಗೋರ್ಕಿ ಎತ್ತಿದ ವಿಶ್ವವ್ಯಾಪಿ ಮೂಲಭೂತ ಪ್ರಶ್ನೆಗಳು ಭಾರತ ಪುರೋಗಾಮಿ ಬರಹಗಾರರು ಮತ್ತು ಪುರೋಗಾಮಿ ಸಾಂಸ್ಕೃತಿಕ ಆಂದೋಲನದ ಕ್ರಿಯಾಶೀಲ ಕಾರ್ಯಕರ್ತರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತು. ಅದಕ್ಕೆ 'ನೀವು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬಾಲಬಡಕವಾಗಿ ವರ್ತಿಸುತ್ತಿರುವ ಭಾರತದ ಪ್ರತಿಗಾಮಿ ಆಳುವ ವರ್ಗಗಳ ಪರವಿರುವಿರಾ? ಅಥವಾ ಸಾಮ್ರಾಜ್ಯಶಾಹಿ ಹಾಗೂ ಅದರ ಏಜೆಂಟರ ವಿರುದ್ಧ ಹೋರಾಡುತ್ತಿರುವ ದುಡಿಯುವ ಜನರ ಪರವಿರುವಿರಾ'? ಎಂಬ ಇನ್ನೊಂದು ಪ್ರಶ್ನೆಯನ್ನು ಸೇರಿಸಿದರು. ಈ ಘಟ್ಟದಲ್ಲಿಯೇ ಕವಿ ಮುನ್ಷಿ ಪ್ರೇಮ್‌ಚಂದರ ನೇತೃತ್ವದಲ್ಲಿ ೧೯೩೬ರಲ್ಲಿ 'ಅಖಿಲ ಭಾರತ ಪುರೋಗಾಮಿ ಬರಹಗಾರರ ಒಕ್ಕೂಟ' ಸ್ಥಾಪನೆ ಆದದ್ದು. ಇದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇದ್ದವರೆಲ್ಲರೂ ಒಟ್ಟುಗೂಡಿ ಜನಪರವಾದ ಸಾಂಸ್ಕೃತಿಕ ಆಂದೋಲನಗಳನ್ನು ರೂಪಿಸಲೆತ್ನಿಸಿದರು. ಈ ನಡುವೆ ಕಲೆ, ಸಾಹಿತ್ಯ ಮತ್ತು ಚರಿತ್ರೆ ಕೇವಲ ಕೆಲವೇ ಜನರ ಸ್ವತ್ತಾಗಿ ಜನಸಾಮಾನ್ಯರಿಗೆ ಮರೀಚಿಕೆಯಾಗಿತ್ತು. 'ಕಲೆಗಾಗಿ ಕಲೆ' ಎನ್ನುವ ಬೂರ್ಜ್ವಾ ಧೋರಣೆ ಕಳಚಿ ಬಿದ್ದಿತ್ತು.[೬] "ಕಲೆ ಕಲೆಯಾಗುವುದು ಮುಖ್ಯವೇ ಹೊರತು ಎಲ್ಲರಿಗೂ ಅರ್ಥವಾಗಬೇಕೆಂಬ ಅಗತ್ಯವಿಲ್ಲ ಎಂಬ ಮನೋಭಾವ ರೂಪಿತವಾಗಿದೆ. 'ನಾನೇ ಪ್ರದರ್ಶಿಸುತ್ತೇನೆ ಮತ್ತು ನಾನೇ ಅರ್ಥಮಾಡಿಕೊಳ್ಳುತ್ತೇನೆ ಬೇರೊಬ್ಬರಿಗೆ ಅದು ಅರ್ಥವಾಗದಿದ್ದರೆ ಅವರಿಗೇ ನಷ್ಟ" ಎಂಬ ಮನೋಭಾವ ಸಮೂಹ ದೃಷ್ಟಿಕೋನದಿಂದ ಅನ್ಯಾಯವಾದದ್ದು ಮತ್ತು ಅದರ ಪರಿಣಾಮಗಳು ಕಲೆಗೆ ಮಾರಕವಾದವು. ಇಂತಹ ಪ್ರತಿಗಾಮಿ ಧೋರಣೆಯನ್ನು ಧಿಕ್ಕರಿಸಿ 'ಜನರಿಗಾಗಿ ಕಲೆ, ಬದುಕಿಗಾಗಿ ಕಲೆ' ಎನ್ನುವ ಆಶಯವನ್ನು ಪ್ರತಿಪಾದಿಸಲಾಯಿತು. 'ಸಮಾಜದ ಅಭಿವೃದ್ಧಿಗಾಗಿ ಉಪಯೋಗವಾಗದ ಕಲೆ ಅಪ್ರಯೋಜಕ', 'ಕಲೆ ಎಲ್ಲರಿಗಾಗಿ, ಸಮಾಜದ ನೈಜ ಶೋಷಿತರ ಉನ್ನತಿಗಾಗಿ' ಎಂಬ ಧೋರಣೆ ಜಗತ್ತಿನ ಸಾಹಿತ್ಯ-ಚರಿತ್ರೆ ವಲಯಗಳಲ್ಲಿ ಕಾಣಿಸಿಕೊಂಡಿತು.

ಬ್ರೆಕ್ಟ್‌ನ 'ಎಪಿಕ್' ರಂಗಭೂಮಿಯ ಪ್ರಭಾವ

'ಎಪಿಕ್' ರಂಗಭೂಮಿಯು ೧೯೨೦ರ ದಶಕದಲ್ಲಿ ಜರ್ಮನಿಯಲ್ಲಿ ಆ ಕಾಲದ ಸಮಾಜ, ರಾಜಕಾರಣ ಹಾಗೂ ರಂಗಭೂಮಿಯ ಸಾಂಸ್ಕೃತಿಕ ಕಲೆಗಳ ವಿಶಿಷ್ಟ ಸನ್ನಿವೇಶದಲ್ಲಿ ರೂಪುತಳೆದ ಒಂದು ತಾತ್ವಿಕ ಪರಿಕಲ್ಪನೆಯಾಗಿದ್ದು, ಮುಂದಿನ ಕೆಲವು ದಶಕಗಳಲ್ಲಿ ಈ ಪರಿಕಲ್ಪನೆಯ ಪ್ರಭಾವವು ಬೇರೆ-ಬೇರೆ ದೇಶಗಳಲ್ಲಿ ಹರಡಿತು. ಅಮೇರಿಕಾ ಸೇರಿದಂತೆ ಭಾರತದಲ್ಲೂ ಪ್ರಭಾವ ಬೀರಿತು.

೧೯೪೫ ರಲ್ಲಿ ಎರಡನೇ ಮಹಾಯುದ್ಧ ಮುಗಿಯುವ ವೇಳೆಗಾಗಲೆ ಈ ಪರಿಕಲ್ಪನೆಯು ಪಶ್ಚಿಮದ ಜಗತ್ತಿನಲ್ಲಿ ಸಾಕಷ್ಟು ವಿಶಾಲವಾದ ವ್ಯಾಪ್ತಿಯನ್ನು ಗಳಿಸಿಕೊಂಡದ್ದು ಗಮನಾರ್ಹ. ಮುಂದಿನ ದಶಕಗಳಲ್ಲಿ ಈ ಪರಿಕಲ್ಪನೆ ಭಾರತದಲ್ಲಿಯೂ ವಿಶಾಲವಾಗಿ ಹರಡಿತ್ತು 'ಎಪಿಕ್' ರಂಗಭೂಮಿಯು ಜನಪರವಾದ ಧೋರಣೆಗಳನ್ನು ಹೊಂದಿದ್ದು, ರಂಗಭೂಮಿಯ ಸಾಂಪ್ರದಾಯಿಕ ಮಾದರಿಗಳನ್ನು ನಿರಾಕರಿಸಿತು. ರಂಗಭೂಮಿ ನಿಜವಾದ ಸಮಕಾಲೀನ ಸಮಸ್ಯೆಗಳನ್ನು ಜನರೆದುರು ತೆರೆದಿಟ್ಟು, ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಯೋಚಿಸಲು ದಾರಿ ಮಾಡಿಕೊಟ್ಟದ್ದನ್ನು ಗಮನಿಸಬಹುದು.

ಜಗತ್ತಿನಾದ್ಯಂತ ಶೋಷಣೆಗೆ ಒಳಗಾದ ರೈತ ಕೂಲಿ-ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ನೌಕರರು, ಮಹಿಳೆ, ವಿದ್ಯಾರ್ಥಿ-ಯುವಜನರು ಇವರೆಲ್ಲರೂ ರಂಗ ಚಳವಳಿಗಳ ಮೂಲಕ ಪ್ರೇರಣೆ ಪಡೆಯುವ ಸಮಾಜವಾದದ ಆಶಯದಿಂದ ಬ್ರೆಕ್ಟ್‌ನ ಎಪಿಕ್ ರಂಗಭೂಮಿ, ಪಶ್ಚಿಮ ಬಂಗಾಳದ ರಂಗಕರ್ಮಿ ಬಾದಲ್ ಸರ್ಕಾರ್‌ರವರ 'ತೃತೀಯ ರಂಗಭೂಮಿ' ಹಾಗೂ ಆಂಧ್ರ ಪ್ರದೇಶದ ಶ್ರೀಕಾಕುಳಂ ರೈತ ಚಳವಳಿಯ ಮೂಲಕ 'ಪ್ರಜಾ ನಾಟ್ಯ ಮಂಡಳಿ' ಪ್ರಭಾವದಿಂದ, ಎಡಪಂಥೀಯ ಕಮ್ಯುನಿಸ್ಟ್ ಚಳವಳಿಗಳಿಂದ ಕರ್ನಾಟಕದಲ್ಲಿ 'ಸಮುದಾಯ' ರಂಗ ಚಳವಳಿಯು ಚಾರಿತ್ರಿಹಾರ್ಹ ಸ್ಥಾನವನ್ನು ಪಡೆಯಿತು ಎಂದು ಹೇಳಿದರೆ ತಪ್ಪಲ್ಲ. ಏಕೆಂದರೆ ೧೯೬೨ ರಲ್ಲಿ ಭಾರತ-ಚೀನಾ ಯುದ್ದದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯವನ್ನು ಸಿ.ಪಿ.ಐ ಪಕ್ಷದಲ್ಲಿ ಕಾಣಲಾಗುತ್ತದೆ. ನಂತರ ೧೯೬೪ರಲ್ಲಿ ಸಿ.ಪಿ.ಐ ಪಕ್ಷವು ಎರಡು ಭಾಗಗಳಾಗಿ ವಿಂಗಡನೆಯಾಗಿ ಹೊರಬಂದ ರಾಜಕೀಯ ಪಕ್ಷವೇ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸವಾದಿ)ವಾಗಿ ರೂಪುಗೊಂಡಿತು. ಸಿ.ಪಿ.ಐ.(ಎಂ) ಪಕ್ಷವು ಎಪ್ಪತ್ತರ ದಶಕದ ಹೊತ್ತಿಗಾಗಲೇ ಭಾರತ ಬೇರೆ ಬೇರೆ ರಾಜ್ಯಗಳಲ್ಲಿ ಸಾಂಸ್ಕೃತಿಕವಾಗಿ ಒಂದು ಸಂಘಟನೆಯನ್ನು ಆರಂಭಿಸುತ್ತದೆ. ಉದಾಹರಣೆಗೆ ಆಂಧ್ರ ಪ್ರದೇಶದಲ್ಲಿ 'ಪ್ರಜಾ ನಾಟ್ಯ ಮಂಡಳಿ' ಹಾಗೆಯೇ ಕರ್ನಾಟಕದಲ್ಲಿ ಸಿ.ಪಿ.ಐ ಪಕ್ಷವು 'ಇಪ್ಟಾ' ಸಾಂಸ್ಕೃತಿಕ ಸಂಘಟನೆಯಾದರೆ, ಸಿ.ಪಿ.ಐ(ಎಂ) ಪಕ್ಷದ ಯಾವುದೆ ಸಾಂಸ್ಕೃತಿಕ ಸಂಘಟನೆ ಇಲ್ಲದ ಕಾರಣ, ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದ ಪ್ರಸನ್ನ, ಸಿ.ಜಿ.ಕೆ, ಕಿ.ರಂ.ನಾಗರಾಜ, ಮೋಹನ್ ಕೊಂಡಜ್ಜಿ, ಡಿ.ಆರ್ ನಾಗರಾಜ್, ಸಿದ್ಧಲಿಂಗಯ್ಯ ಮುಂತಾದವರು ಒಳಗೊಂಡಂತೆ ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಸಮಿತಿಯಲ್ಲಿ ಚರ್ಚೆಗಳ ಆಧಾರಿತವಾಗಿ ಕರ್ನಾಟಕದಲ್ಲಿ ಪ್ರಬಲವಾದ ಸಾಂಸ್ಕೃತಿಕ ಸಂಘಟನೆಯನ್ನು ಪ್ರಾರಂಭಿಸಬೇಕು ಎಂದು ತಿರ್ಮಾನಿಸಿಲಾಯಿತು. ಈ ಪರಿಣಾಮದಿಂದಲೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ೧೯೭೫ ರಲ್ಲಿ ಪ್ರಾರಂಭಗೊಂಡದ್ದು. 'ಚಾರಿತ್ರಿಕ ತುರ್ತು' ಎಂತಲೇ ಹೇಳಲಾಗುತ್ತದೆ.

'ಸಮುದಾಯ' ಸಂಘಟನೆಯಲ್ಲಿ ಮಾರ್ಕ್ಸ್‌ವಾದಿಗಳು, ಲೋಹಿಯಾ ಸಮಾಜವಾದಿಗಳು, ಅಂಬೇಡ್ಕರ್‌ವಾದಿಗಳು ಒಂದಾಗಿ ರಂಗ ಚಳವಳಿಯ ಮೂಲಕ ಜಾಥಾಗಳು, ಬೀದಿನಾಟಕಗಳು, ರಂಗನಾಟಕಗಳು, ವಿಚಾರ ಸಂಕಿರಣಗಳು, ವಿಚಾರ ಗೋಷ್ಠಿ, ಚಿತ್ರ ಸಮುದಾಯ, ಗ್ರಂಥ

ಸಮುದಾಯ, ಪ್ರಸಾರ 'ಸಮುದಾಯ' ಹಾಗೂ ನಾಟಕೋತ್ಸವಗಳು ಆರಂಭವಾದವು. 'ಸಮುದಾಯ' ನಾಟಕವೆಂದರೆ ಜನರ ನಿಜವಾದ ಸಮಸ್ಯೆಗಳ ಅನಾವರಣ ಹಾಗೂ ಆ ಸಮಸ್ಯೆಗಳ ಪರಿಹಾರದ, ಜೊತೆಗೆ ನಾಟಕಕ್ಕೆ ರಾಜಕೀಯ ಸಿದ್ಧಾಂತದ ಪ್ರತಿಪಾದನೆಯಾಗಿದೆ. ಮೊದಲ ಭಾರಿಗೆ ಕರ್ನಾಟಕದ ರಂಗಭೂಮಿಯ ಪ್ರಯೋಗ ಮಾಡಿದ ಸಂಘಟನೆಯಾದ 'ಸಮುದಾಯ'ಕ್ಕೆ ಸಲ್ಲುತ್ತದೆ. ಜನ ಸಮುದಾಯದ ಆಶಯಗಳ ವಿರುದ್ಧವಾಗಿ ನಡೆಯುವ, ವ್ಯವಸ್ಥೆಗೆ ಎದುರಾಗಿ ಹರಿಯುವ ನದಿಯ ನೀರಿನ ವಿರುದ್ಧ ದಿಕ್ಕಿನಲ್ಲಿ ಈಜುವ ಮೀನಿನಂತೆ 'ಸಮುದಾಯ' ಸಂಘಟನೆ ಭಾರತ ಕಮ್ಯುನಿಸ್ಟ್ ಪಕ್ಷದ ಚಳವಳಿಗೆ ಪ್ರೇರಣೆ ಮತ್ತು ಪ್ರಭಾವವಾಗಿರುತ್ತದೆ ಅಂದರೂ ತಪ್ಪಾಗಲಾರದು.

೨.೪ 'ಸಮುದಾಯ'ದ ಆಶಯ-ಸೈದ್ಧಾಂತಿಕತೆ

"ಸಂಘಟನೆಯಿಲ್ಲದ ಚಳವಳಿ
ಚಳವಳಿಯಿಲ್ಲದ ಸಂಘಟನೆ
ನಿಷ್ಪ್ರಯೋಜಕ"

'ಕಲೆಗಾಗಿ ಕಲೆ' ಎಂಬ ಬೂರ್ಜ್ವಾ ಪರಿಕಲ್ಪನೆಯನ್ನು ಕಿತ್ತೆಸೆದು 'ಜನರಿಗಾಗಿ ಕಲೆ', 'ಬದುಕಿಗಾಗಿ ಕಲೆ' ಎಂಬ ಸಿದ್ಧಾಂತಕ್ಕೆ ಬದ್ಧವಾದ ಆಶಯದೊಂದಿಗೆ ಹುಟ್ಟಿದ 'ಸಮುದಾಯ', ತನ್ನ ಜನಪರ ಕಾರ್ಯಕ್ರಮಗಳ ಮೂಲಕ ಜನಸಾಮಾನ್ಯರ ಆಶೋತ್ತರಗಳಿಗೂ ಸ್ಪಂದಿಸತೊಡಗಿತು. ಆರಂಭದಲ್ಲಿ 'ಸಮುದಾಯ'ವು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿ.ಪಿ.ಐ(ಎಂ)ನ ಚಾರಿತ್ರಿಕ ಚಳವಳಿಗಳ ಮೂಲಕ ಹುಟ್ಟಿಕೊಂಡು ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕದಲ್ಲಿ ಗುರುತಿಸಿಕೊಂಡಿದೆ.[೬] ಏಕೆಂದರೆ ಮಾರ್ಕ್ಸ್‌ವಾದಿ ಪಕ್ಷದಲ್ಲಿ ಸದಸ್ಯರಾಗಿದ್ದ ಸಾಂಸ್ಕೃತಿಕ ನಾಯಕರೇ ಹುಟ್ಟು ಹಾಕಿದ ಸಂಘಟನೆಯೇ 'ಸಮುದಾಯ'ವಾದರೆ, ಭಾರತ ಕಮ್ಯುನಿಸ್ಟ್ ಪಕ್ಷ(ಸಿ.ಪಿ.ಐ)ವು 'ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್'(ಇಪ್ಟಾ)ದ ಮಾದರಿಯಲ್ಲೇ ಎಡಪಂಥೀಯ ಸಾಂಸ್ಕೃತಿಕ ಸಂಘಟನೆಯಾಗಿದೆ. ೧೯೭೫ರಲ್ಲಿ ಸಿ.ಪಿ.ಐ(ಎಂ)ನ ರಾಜ್ಯ ಕಾರ್ಯದರ್ಶಿಯಾದ ಎಂ.ಕೆ.ಭಟ್ ಅವರ ಸಹಕಾರದಿಂದ ರೈತ, ಕೃಷಿ ಕೂಲಿಕಾರ, ಕಾರ್ಮಿಕ, ವಿದ್ಯಾರ್ಥಿ-ಯುವಜನ, ಮಹಿಳಾ ಮತ್ತು ಸೇವಾ ನೌಕರರ ಸಂಘಟನೆಗಳ ರೀತಿಯಲ್ಲಿಯೇ 'ಸಮುದಾಯ'ವು ಒಂದು ಸಾಂಸ್ಕೃತಿಕ ಸಮನ್ವಯ ರಾಜ್ಯ ಸಮಿತಿಯಾಗಿ ಕಾರ್ಯನಿರ್ವಹಿಸಬೇಕು ಎಂಬುದು ಎಂ.ಕೆ.ಭಟ್ ಅವರ ಆಲೋಚನೆ ಆಗಿತ್ತು.

'ಸಮುದಾಯ' ಸಂಘಟನೆಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಗಂಗಾಧರಸ್ವಾಮಿ ಮತ್ತು ಎಸ್.ಮಾಲತಿ ಅವರು ಇದ್ದರು. ಇವರಿಗೆ ತಿಂಗಳ ಗೌರವಧನ ಧನವಾಗಿ ೧೫೦ ರೂಪಾಯಿಗಳನ್ನು ಪಡೆದು ನಾಡಿನಾದ್ಯಂತ ನಾಟಕಗಳನ್ನು ಮಾಡುವ, ಸಂಘಟನೆಯನ್ನು ಕಟ್ಟುವ ಕೆಲಸದಲ್ಲಿ ತೊಡಗಿದರು. ಆರಂಭದಲ್ಲಿ 'ಸಮುದಾಯ'ದ ಆಶಯದಂತೆ ಪ್ರಮುಖ ನಾಟಕಗಳಾದ 'ಹುತ್ತವ ಬಡಿದರೆ', 'ತಾಯಿ', 'ಗೆಲಿಲಿಯೋ', 'ಮಾರೀಚನ ಬಂಧುಗಳು',

'ಕತ್ತಲೆದಾರಿದೂರ', 'ಪಂಚಮ', 'ದಂಗೆಯ ಮುಂಚಿನ ದಿನಗಳು' ಹಾಗೂ 'ಯಾರು ಗೆಳೆಯಾ ಯಾರು' ಮೊದಲಾದ ನಾಟಕಗಳನ್ನು ಬೆಂಗಳೂರಿನ ವಿವಿಧ ಭಾಗಗಳಲ್ಲಿ, ನಂತರ ಉಡುಪಿ, ತುಮಕೂರು, ಮೈಸೂರು ಹಾಗೂ ಧಾರವಾಡದಲ್ಲಿ ನಾಟಕಗಳು ಪ್ರದರ್ಶನಗೊಂಡು 'ಸಮುದಾಯ'ದ ಘಟಕಗಳನ್ನು ಆರಂಭಿಸತೊಡಗಿದರು. ಮೊಟ್ಟಮೊದಲು ಈ ನಾಲ್ಕು ಜಿಲ್ಲೆಗಳಲ್ಲಿ 'ಸಮುದಾಯ'ದ ಘಟಕಗಳು ಆರಂಭವಾದವು. ಮೈಸೂರು ಹಾಗೂ ಉಡುಪಿ ಜಿಲ್ಲೆಗಳು ಪ್ರಸನ್ನ ಅವರ ಜವಾಬ್ದಾರಿಯಾದರೆ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳನ್ನು ಸಿ.ಜಿ.ಕೃಷ್ಣಸ್ವಾಮಿ ಅವರದ್ದು, ಹಾಗೆಯೇ ಧಾರವಾಡ ಜಿಲ್ಲೆಯನ್ನು ಗಂಗಾಧರ ಸ್ವಾಮಿ ಅವರಿಗೆ ವಹಿಸಲಾಗಿತ್ತು. 'ಸಮುದಾಯ' ಘಟಕಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳ ಮುಖೇನ ಜಾಥಾಗಳನ್ನು ಸಂಘಟಿಸಿ 'ಸಮುದಾಯ'ದ ಗುರಿ–ಉದ್ದೇಶಗಳನ್ನು ಜನರಿಗೆ ತಿಳಿಸಲಾಗುತಿತ್ತು. "ಜನತಾ ಪ್ರಜಾಪ್ರಭುತ್ವ ಕ್ರಾಂತಿ"ಗೆ ಸಾಂಸ್ಕೃತಿಕವಾಗಿ ಎಲ್ಲರನ್ನು ಒಟ್ಟಿಗೆ ಸೇರಿಸಿ ರಂಗ ಚಳವಳಿಗೆ ಮುಂದಾಗಬೇಕು ಎನ್ನುವ 'ಮಾರ್ಕ್ಸ್' ಅವರ ಸಿದ್ಧಾಂತದಂತೆ ಅಂದರೆ 'ವೈಜ್ಞಾನಿಕ ಸಮಾಜವಾದ'ವನ್ನು ಒಪ್ಪುತ್ತಾ ಅದರ ತಾತ್ವಿಕ ಚಿಂತನೆಗಳ ನೀತಿ–ನಿಯಮಗಳನ್ನು ಪಾಲಿಸುವ ಆಶಯ ಹೊಂದಲಾಗಿತ್ತು.

'ಸಮುದಾಯ'ದ ಮೊದಲ ನಾಟಕವಾದ ಸಂಸ ಅವರ 'ವಿಗಡ ವಿಕ್ರಮರಾಯ' ಆಧಾರಿತ ಕೆ.ವಿ.ನಾರಾಯಣ ಅವರಿಂದ ರಚಿತವಾದ 'ಹುತ್ತವ ಬಡಿದರೆ' ರಂಗಪ್ರಯೋಗವು ಸರಿಯಾದ ಬುನಾದಿಯನ್ನೇ ಹಾಕಿತು. ಈ ನಾಟಕದಲ್ಲಿ ಸಾಮ್ರಾಜ್ಯಶಾಹಿ(ಫ್ಯೂಡಲ್ ಶಕ್ತಿಗಳು), ತಮ್ಮ ಹಿತಕ್ಕಾಗಿ ಸಾಮಾನ್ಯ ಜನತೆಯನ್ನು ಬಳಸಿಕೊಳ್ಳುವ ಶೋಷಣೆಯ ಅಂಶವನ್ನು ಮುಖ್ಯವಾಗಿ ತೋರಿಸಲಾಗಿದೆ. ಅರಸೊತ್ತಿಗೆಯ ಕತ್ತಲೆಯಲ್ಲಿ ನಡೆಯುವ ಅರಮನೆಯ ಪಿತೂರಿಗಳ ಮೇಲೆ ಬೆಳಕು ಚೆಲ್ಲುವುದರ ಜೊತೆಗೆ ರಾಜರ ನಡುವಿನ ರಾಜಶಾಹಿಗಳ ವರ್ಗದ ಹಿತಾಸಕ್ತಿಯನ್ನು ಹೇಗೆ ಕಾಪಾಡಿಕೊಳ್ಳಲಾಗುತ್ತದೆ ಎಂಬುದನ್ನು ಈ ಪ್ರಯೋಗ ಬಹಿರಂಗಗೊಳಿಸಿತು. ಆಳುವ ವರ್ಗಕ್ಕೆ ಸೋಲು–ಗೆಲುವುಗಳು ಇದ್ದರೂ, ಪ್ರತೀ ಸಾರಿ ಸೋಲನ್ನು ಅನುಭವಿಸುವವರು 'ಸಾಮಾನ್ಯ ಜನತೆ' ಮಾತ್ರ ಎಂಬ ಅಂಶವನ್ನು ಬಹಳ ಪರಿಣಾಮಕಾರಿಯಾಗಿ ಈ ನಾಟಕದಲ್ಲಿ ಅನಾವರಣಗೊಳಿಸಲಾಯಿತು. ಹೀಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ತನ್ನ ಬದ್ಧತೆ ಮತ್ತು ವಿಶಿಷ್ಟತೆಗಳಿಂದ ಸಮರ್ಥವಾದ ಜನಮುಖಿ ನಾಟಕಗಳನ್ನು ಚಾರಿತ್ರಿಕವಾಗಿ ಹವ್ಯಾಸಿ ರಂಗಭೂಮಿಯ ಮೂಲಕ ಉಂಟು ಮಾಡಿತು. ಒಟ್ಟಾರೆ ಜನಜೀವನದ ಮೌಲ್ಯಗಳನ್ನು, ಐತಿಹಾಸಿಕ ಘಟನೆಗಳನ್ನು ಮರುವ್ಯಾಖ್ಯಾನ ಮಾಡಿ ಕಲೆಯ ಮೂಲಕ ತೀವ್ರ ಅನುಭವವನ್ನು ಜನರಿಗೆ ಉಂಟುಮಾಡುವ ಪ್ರಯತ್ನದಲ್ಲಿ ನಿರಂತರವಾಗಿ ಶ್ರಮಿಸಿದೆ ಎಂಬುದು ಈ ನಾಟಕದಲ್ಲಿ ಅನಾವರಣ ಆಗಿದೆ.

'ಸಮುದಾಯ'ದ ಇನ್ನೊಂದು ಮಹತ್ವದ ನಾಟಕವೇ 'ತಾಯಿ'. ಈ ನಾಟಕದಲ್ಲಿ ಪ್ರಧಾನವಾಗಿ ಕಂಡು ಬರುವುದು ಹೊಸ ಮನುಷ್ಯನ, ಹೊಸ ಸಮಾಜದ ಜೀವನ ಮೌಲ್ಯಗಳ ಹುಟ್ಟಿನ ಕಥನ. ಹೊಸ ಸಮಾಜದ ಅಂತರಂಗದ ಸೌಂದರ್ಯ ವಿಕಸನದ ಅನಾವರಣಗೊಂಡಿದೆ. ರಷ್ಯಾ ಕ್ರಾಂತಿಯ ಸಂದರ್ಭದಲ್ಲಿ ಕೈಗಾರಿಕಾ ಕಾರ್ಮಿಕರು ಅಲ್ಲಿನ ಬಂಡವಾಳಶಾಹಿಗಳ ವಿರುದ್ಧ ಹೋರಾಟದ

ಸಂಕೇತವಾದ ಕೆಂಪು ಪತಾಕೆಯನ್ನು ಎತ್ತಿದರು. ಆದರೆ ರಷ್ಯಾದ ಜಾರ್ ಪ್ರಭುತ್ವದ ಕ್ರೂರತೆ ಹಾಗೂ ಶೋಷಣೆಯ ವಿರುದ್ಧ ನಡೆದ ಕ್ರಾಂತಿಕಾರಿ ಚಳವಳಿಯ ಕಥೆಯನ್ನು ತಿಳಿಸುತ್ತದೆ. ರಷ್ಯಾದ ಕ್ರಾಂತಿಯ ಆರಂಭದ ದಿನಗಳಲ್ಲಿ ಜನರು ಅನುಭವಿಸುತ್ತಿದ್ದ ಕನಿಷ್ಟ ಕೂಲಿ, ಹಸಿವಿನ ಪ್ರಶ್ನೆಗಳು ಹಾಗೂ ಕಾರ್ಮಿಕ ಸಂಘಟನೆಯು ಧರ್ಮದ ಮೂಲಕ ಶೋಷಣೆಯನ್ನು ಮಾಡುವ ಜಾರ್ ದುರಾಡಳಿತವನ್ನು ಮಾರ್ಕ್ಸ್‌ವಾದಿ ಕವಿ ಮ್ಯಾಕ್ಸಿಂ ಗೋರ್ಕಿ ಅವರ ಕಾದಂಬರಿಯ ಆಧಾರಿತ ನಾಟಕವೇ 'ತಾಯಿ'ಯಾಗಿದೆ. ಹೊಸ ಸಮಾಜದ ತಾಯಿಯಾಗಿ ಪರಿವರ್ತನೆಗೊಳಿಸುವುದು ಹೊಸ ಸಮಾಜವಾದ ಹುಟ್ಟಿಗೆ ಕಾರಣವಾಗುವುದು ಇದರ ಆಶಯ. ತಾಯಿಯ ಸಂದೇಶ ಇಲ್ಲಿ ಸ್ಪಷ್ಟವಾಗಿದೆ. 'ಹೊಸ ಮನುಷ್ಯ ಹುಟ್ಟದೇ ಹೊಸ ಸಮಾಜ ಹುಟ್ಟದು. ಹೊಸ ಮನುಷ್ಯ ಎಂದರೆ ಹೊಸ ಮೌಲ್ಯಗಳು ಎಂಬಂತೆ. 'ಹೊಸ' ಎಂದರೆ ಬರ್ಬರತೆಯಿಂದ ನಾಗರಿಕತೆಯೆಡೆಗೆ ಮಾನವಕುಲ ನಡೆಸಿರುವ ಚಾರಿತ್ರಿಕ ಪಯಣದಲ್ಲಿ, ಪ್ರತಿ ನಿರ್ಣಯಾತ್ಮಕ ನೆಗೆತಗಳು ಮಾನವಕುಲವನ್ನು ಇನ್ನಷ್ಟು ಮಾನವೀಯಗೊಳಿಸಿದೆ. ಆದರೆ ಪ್ರತಿ ಕಾಲಘಟ್ಟದಲ್ಲಿ ಹೊಸ ಶೋಷಿತವರ್ಗ ಹುಟ್ಟಿಕೊಳ್ಳತ್ತಾ ಮನುಷ್ಯ ಮನುಷ್ಯನ್ನು ಸುಲಿಗೆ ಮಾಡುವ ಅನಾಗರಿಕತೆ ಇನ್ನೂ ಮರೆಯಾಗಿಲ್ಲ ಎಂಬ ತಾತ್ವಿಕ ಸೈಂದ್ಧಾತಿಕ ಅಂಶಗಳು ಈ ನಾಟಕದಲ್ಲಿ ಗೋಚರಿಸುತ್ತವೆ.

ಸಿದ್ಧಾಂತವಿಲ್ಲದ ಚಳವಳಿ
ಚಳವಳಿಯಿಲ್ಲದ ಸಿದ್ಧಾಂತ
ನಿಷ್ಪ್ರಯೋಜಕ

ಈ 'ತಾಯಿ' ನಾಟಕದ ತಾತ್ವಿಕ ಚಿಂತನೆಯಲ್ಲಿ ಕ್ರಾಂತಿಯ ಸೈದ್ಧಾಂತಿಕ ಅಂಶಗಳನ್ನು ನೋಡುತ್ತೇವೆ. ಅಲ್ಲದೆ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಕ್ಕೆ ಪೂರಕವಾದ ತಾತ್ವಿಕ ಚಿಂತನೆಗಳನ್ನು ಈ ನಾಟಕದಲ್ಲಿ ನೋಡಬಹುದಾಗಿದೆ. ಮಾರ್ಕ್ಸ್ ಹೇಳುವಂತೆ 'ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವಿಶೇಷ ಸವಲತ್ತುಗಳನ್ನು ಹೊಂದಿದ್ದವರೇ ತಮ್ಮ ಕೈಲಾದಮಟ್ಟಿಗೆ ಸಮಾಜವಾದ ಹುಟ್ಟುವುದಕ್ಕೆ ಅಡ್ಡಿ ಉಂಟುಮಾಡುವುದು ಕಾರ್ಲ್‌ಮಾರ್ಕ್ಸ್‌ಗೆ ಖಚಿತವಾಗಿ ಗೊತ್ತಿತ್ತು. ೧೮-೧೯ನೇಯ ಶತಮಾನದಲ್ಲಿ ನಡೆದ ಕ್ರಾಂತಿಗಳ ಕಾಲದಲ್ಲಿ ಇದ್ದವರ ಪರಿಸ್ಥಿತಿಯೇ ಇದ್ದಂತೆ ಎಂಬುಬನ್ನು ಮಾರ್ಕ್ಸ್ ಬೊಟ್ಟು ಮಾಡಿ ತೋರಿಸಿದ. ಗುಲಾಮರು ಮಾಲೀಕರ ವಿರುದ್ಧ ಹೋರಾಡದೆಯೇ ಗುಲಾಮ ಪದ್ಧತಿಯನ್ನು ನಿರ್ಮೂಲನೆ ಮಾಡುವುದಕ್ಕೆ ಆಗುವುದಿಲ್ಲ. ಬಂಡವಾಳಗಾರರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಎಂಬುದು ಮಾಧ್ಯಮವನ್ನು ನಡೆಸುವ ಸ್ವಾತಂತ್ರ್ಯ ಇತರರನ್ನು ಶೋಷಿಸಿ ಲಾಭ ಪಡೆಯುವ ಸ್ವಾತಂತ್ರ್ಯವೇ ಆಗಿದ್ದುದರಿಂದ ಸಹಜವಾಗಿಯೇ ಶೋಷಣೆಗೆ ಅನುಮತಿ ನೀಡುವ ಸಮಾಜಕ್ಕಿಂತ ಕಡಿಮೆ ಸ್ವಾತಂತ್ರ್ಯವುಳ್ಳದ್ದು ಎಂದು ಹೇಳುತ್ತಾರೆ.

ಸಮಾಜವಾದ ಅಸ್ತಿತ್ವಕ್ಕೆ ಬರುವುದನ್ನು ಸ್ವಾತಂತ್ರ್ಯದ ಹೆಸರಿನಲ್ಲಿ ಎಂಗೆಲ್ಸ್ ವಿರೋಧಿಸುತ್ತಾರೆ. ಆದರೆ ವಾಸ್ತವವಾಗಿ, ಸಮಾಜವಾದ ಬಂದಾಗ ಹೆಚ್ಚು ಜನಕ್ಕೆ ಹೆಚ್ಚು ಸ್ವಾತಂತ್ರ್ಯ ದೊರಕುತ್ತದೆ.

ಸಮಾಜದಲ್ಲಿ ಸಂಪೂರ್ಣ ಸಮಾನತೆ, ಸಮಾನ ಕೂಲಿ ಮುಂತಾದವು ಇರುತ್ತವೆ ಎಂಬುವುದನ್ನು ಮಾರ್ಕ್ಸ್ ಹಾಗೆಯೇ ನಂಬಿರಲಿಲ್ಲ. ಸಮಾಜವಾದ ಎಂಬುದು ಉತ್ಪಾದನ ಸಾಧನಗಳ ಮಾಲೀಕತ್ವವು ಎಲ್ಲರಿಗೂ ಸೇರಿದುದ್ದು ಮತ್ತು 'ಪ್ರತಿಯೊಬ್ಬರಿಂದಲೂ ಅವರವರ ಸಾಮರ್ಥ್ಯಕ್ಕನುಗುಣವಾಗಿ ಪ್ರತಿಯೊಬ್ಬರಿಗೂ ಅವರ ಕೆಲಸಕ್ಕನುಗುಣವಾಗಿ' ಎಂಬ ತತ್ವದ ಮೇಲೆ ಕೆಲಸ ಮಾಡುತ್ತದೆ ಎಂಬುದು ಮಾರ್ಕ್ಸ್‌ವಾದದ ಮೂಲ ಸಿದ್ಧಾಂತ. ಪ್ರತಿಯೊಬ್ಬ ವ್ಯಕ್ತಿ ತನ್ನ ನೈಪುಣ್ಯತೆಯ ಮೂಲಕ ಇಷ್ಟಕ್ಕನುಗುಣವಾಗಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಾನೆ. ಅವನ ಕೆಲಸದಿಂದ ಸಮಾಜಕ್ಕೆ ದೊರೆತ ಮೌಲ್ಯಕ್ಕನುಗುಣವಾಗಿ ಅವನಿಗೆ ಹಣ(ಸಂಬಳ) ನೀಡಲಾಗುತ್ತದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವರು ಆ ಹಣದ ನೆರವಿನಿಂದ ಇತರರನ್ನು ಶೋಷಿಸುವುದು ಸಾಧ್ಯವಿಲ್ಲ, ಅವರು ಕೈಗಾರಿಕೆಯೊಂದರ ಮಾಲೀಕರಾಗಲು ಸಹ ಸಾಧ್ಯವಿಲ್ಲ, ಸ್ಟಾಕ್ ಮಾರುಕಟ್ಟೆಯಲ್ಲಿ (ಗೋದಾಮು) ಅವರು ಹಣ ಹೂಡುವಂತಿಲ್ಲ, ಮಾರ್ಕ್ಸ್ ಎಲ್ಲದಕ್ಕಿಂತಲೂ ಹೆಚ್ಚಾಗಿ ಒಬ್ಬ ಕ್ರಾಂತಿಕಾರಿ, ಬಂಡವಾಳಶಾಹಿ ಸಮಾಜದ ಪರಿಕಲ್ಪನೆಯ ಅರಿವನ್ನು ಹೊಂದಿರುತ್ತಾರೆ. ಕಾರ್ಲ್‌ಮಾರ್ಕ್ಸ್‌ನನ್ನು ಸಂಪ್ರದಾಯವಾದಿ ಬೂರ್ಜ್ವಾಗಳೂ ಹಾಗೂ ಪ್ರಜಾತಂತ್ರವಾದಿ ಬೂರ್ಜ್ವಾಗಳೂ 'ಪ್ರಭುತ್ವ ವಿರೋಧಿ'ಯೆಂದು ಆರೋಪ ಹೊರಿಸಿದರು. ಈ ಆರೋಪ ಹೊರಿಸಲು ಮುಖ್ಯಕಾರಣ ಅಂದು ಬಂಡವಾಳಶಾಹಿಗಳು ಒಬ್ಬರನ್ನೊಬ್ಬರು ಪೈಪೋಟಿ ನಡೆಸುತ್ತಿದ್ದುದು. ಅವೆಲ್ಲವನ್ನು ಮಾರ್ಕ್ಸವಾದಿಗಳು ಒಸಕಿಹಾಕಿ ಅಗತ್ಯ ಬಿದ್ದಾಗ ಮಾತ್ರ ಉತ್ತರ ಕೊಡುತ್ತಿದ್ದರು. ಇದೇ ಹಂತದಲ್ಲಿ ಅವನು ದುಡಿದು ಸೈಬೀರಿಯಾ ಗಣಿಗಳಿಂದ ಹಿಡಿದು ಕ್ಯಾಲಿಪೋರ್ನಿಯವರೆಗೂ ಯುರೋಪ್ ಮತ್ತು ಅಮೇರಿಕದ ಎಲ್ಲಾ ಏಷ್ಯಾಖಂಡಗಳಲ್ಲಿಯು ಕ್ರಾಂತಿಕಾರಿ ಸಹೋದರರು ಶೋಷಣೆಯಿಲ್ಲದಂತೆ ಮಾಡಿದ್ದು ಗಮನಾರ್ಹ. ಮಾರ್ಕ್ಸ್‌ಗೆ ಅನೇಕ ವಿರೋಧಿಗಳಿದ್ದಾರಾದರೂ ಒಬ್ಬ ವೈಯಕ್ತಿಕ ಶತ್ರುವೂ ಇರಲಿಲ್ಲ ಎಂದು ನಾವು ಧೈರ್ಯವಾಗಿ ಹೇಳುತ್ತೇವೆ.[೮] ಎಂದು ಮಾರ್ಕ್ಸ್‌ರ ಆತ್ಮೀಯ ಸ್ನೇಹಿತ ಏಂಗೆಲ್ಸ್ ಅವರು ತಮ್ಮ ಅಭಿಪ್ರಾಯ ಅಭಿಪ್ರಾಯಪಡುತ್ತಾರೆ.

ಜನ ಸಮುದಾಯದ
ಕಷ್ಟಕೋಟಲೆಗೆ ಆಗಿಬರದ ತತ್ವ
ಒಣ ಸಿದ್ಧಾಂತವಷ್ಟೆ

'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆ ಕಮ್ಯುನಿಸ್ಟ್ ಸಿದ್ಧಾಂತದ ಚಿಂತನೆಗಳಿಂದಾಗಿ ೧೯೭೭ ರಿಂದಲೇ ಬೀದಿನಾಟಕಗಳ ಪರ್ವ ಶುರುವಾಯಿತು. ಈ ಬೀದಿನಾಟಕಗಳು ಕರ್ನಾಟಕದ ಹಳ್ಳಿಗಳಿಗೂ, ಸ್ಲಂಗಳಲ್ಲೂ ಪ್ರದರ್ಶನ ಕಂಡವು. ಇದರ ಭಾಗವಾಗಿ ಶೋಷಣೆಗೆ ಒಳಗಾದ ಹಳ್ಳಿಗಳ, ಸ್ಲಂಗಳ ವಿದ್ಯಾರ್ಥಿ-ಯುವಜನ-ಕಲಾವಿದರು 'ಸಮುದಾಯ' ಸಂಘಟನೆಯಲ್ಲಿ ಸೇರಿಕೊಂಡರು. ಅಂಥವರಲ್ಲಿ ಪ್ರಮುಖರು ಸಿ. ಬಸವಲಿಂಗಯ್ಯ, ಕೆ.ರಾಮಯ್ಯ, ಸಿದ್ಧಲಿಂಗಯ್ಯ, ಜನಾರ್ಧನ, ಪಿಚ್ಚಳ್ಳಿ ಶ್ರೀನಿವಾಸ, ಶೂದ್ರ ಶ್ರೀನಿವಾಸ ಇನ್ನೂ ಅನೇಕ ನಾಟಕಕಾರರು, ಹಾಡುಗಾರರು, ನಿರ್ದೇಶಕರು, ನಾಟಕ ರಚನಕಾರರು ಹೊಸ ರೀತಿಯ-ರಂಗ ಚಿಂತನೆಗಳನ್ನು 'ಸಮುದಾಯ' ರಂಗ ಚಳವಳಿಗೆ ಪೂರಕವಾಗುವ

ದೃಷ್ಟಿಯಲ್ಲಿ ಪ್ರಗತಿಪರವಾಗಿ ಮೂಡಿಸಿದರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ 'ಸಮುದಾಯ'ದ 'ಬೆಲ್ಚಿ' ಯಂತಹ ನಾಟಕಗಳು ಪ್ರದರ್ಶನ ಕಂಡಿದ್ದು ಸೈದ್ಧಾಂತಿಕ ಚಿಂತನೆಗಳ ವಿಚಾರಗಳಿಂದಲೇ ಎಂದರೂ ತಪ್ಪಾಗಲಾರದು.

೨.೫. ಸ್ವಾತಂತ್ರ್ಯೋತ್ತರ ಕರ್ನಾಟಕದ ರಂಗ ಚರಿತ್ರೆಯ ಹಿನ್ನೆಲೆ

ಸ್ವಾತಂತ್ರ್ಯದ ನಂತರ ಕರ್ನಾಟಕದಲ್ಲಿ ಕಾಲೇಜುಗಳ ಸಂಖ್ಯೆ ಜಾಸ್ತಿಯಾಯಿತು. ಈ ಕಾಲೇಜುಗಳು ವಾರ್ಷಿಕೋತ್ಸವ ಸಂದರ್ಭಗಳನ್ನು ಹಮ್ಮಿಕೊಳ್ಳುತ್ತಿದ್ದವು. ಆಗ ನಾಟಕ ಪ್ರದರ್ಶನಗಳು, ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅಧೀನಕೊಳಪಟ್ಟ ಸ್ಥಾಪನೆಗೊಂಡ ನಾಟ್ಯ ಸಂಘ 'ಥೀಯೆಟರ್ ಸಂಸ್ಥೆ'ಯು, ಅಂತರ ಕಾಲೇಜು ನಾಟಕ ಸ್ಪರ್ಧೆಗೆ ವೇದಿಕೆಯನ್ನು ನಿರ್ಮಿಸಿತು. ಈ ಹಿನ್ನೆಲೆಯಲ್ಲಿ ಕಾಲೇಜಿನ ರಂಗ ಚಟುವಟಿಕೆಗಳು ಇನ್ನಷ್ಟು ವ್ಯಾಪಕಗೊಂಡವು. ಅವುಗಳ ಕರಾವಳಿಯ ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು ಸಹ ಒಂದು. ಇದರೊಂದಿಗೆ ಮಂಗಳೂರಿನ ಮಾನಸ ಗಂಗೋತ್ರಿಯ ಯುವಕರ ನಾಟಕ ಸಂಘ, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜು. ಕೊಡುಗು ಜಿಲ್ಲೆಯ ಕೋಪ್ಪಲುವಿನ ಕಾವೇರಿ ಕಾಲೇಜು, ಬೆಂಗಳೂರಿನ ಚಿತ್ರಕಲಾ ಪರಿಷತ್ತು, ಎಂ.ಇ.ಎಸ್.ಕಾಲೇಜು, ನ್ಯಾಷನಲ್ ಕಾಲೇಜುಗಳು ಮುಖ್ಯವಾಗುತ್ತವೆ. ನಾಟ್ಯ ಸಂಘದ ನೇತೃತ್ವದಲ್ಲಿ ೧೯೫೦ ರಿಂದ ಬೆಂಗಳೂರಿನಲ್ಲಿ ಆರಂಭಿಸಿದ ಉಲ್ಲಾಳದ 'ಕಾಲೇಜು ನಾಟಕ ಸ್ಪರ್ಧೆ'ಯು ಕಾಲೇಜುಗಳಲ್ಲಿ ಅತ್ಯುತ್ತಮ ನಾಟಕಗಳ ಹುಟ್ಟಿಗೆ ಕಾರಣವಾಯಿತು. ಅಲ್ಲದೆ ಇಂಥ ನಾಟಕ ಚಟುವಟಿಕೆಗಳನ್ನು ತೀವ್ರಗೊಳಿಸಿತು.

ಇದೇ ರೀತಿಯಲ್ಲಿ ಬೆಂಗಳೂರಿನ ಕಾಲೇಜು ರಂಗ ಚಳುವಳಿಯಲ್ಲಿ ದೊಡ್ಡ ಪಾತ್ರ ನಿರ್ವಹಿಸಿದ ಬೆಂಗಳೂರಿನ ಮೆಡಿಕಲ್ ಕಾಲೇಜು, ಲಾ ಕಾಲೇಜು, ರೇಣುಕಾಚಾರ್ಯ ಕಾಲೇಜು, ಬಸವನಗುಡಿಯ ನ್ಯಾಷನಲ್ ಕಾಲೇಜು ಮತ್ತು ಎಂ.ಇ.ಎಸ್ ಕಾಲೇಜುಗಳು ಮುಖ್ಯವಾದವುಗಳು. ಈ ಚಟುವಟಿಕೆಗಳಿಂದ ಹೊರಬಂದ ಅನೇಕರು ರಂಗಭೂಮಿಯಲ್ಲಿ ಮುಖ್ಯರಾಗಿದ್ದಾರೆ. ಅವರಲ್ಲಿ ನಾಣಿ(ಮೇಕಪ್ ನಾಣಿ), ಆರ್.ನಾಗೇಶ್, ಸುಂದರ್ ರಾಜ್, ಲೋಕೇಶ್, ಕಪ್ಪಣ್ಣ, ಮುಖ್ಯಮಂತ್ರಿ ಚಂದ್ರು ಇನ್ನೂ ಮೊದಲಾದ ಅನೇಕರನ್ನು ಕಾಣುತ್ತೇವೆ. ಈ ಮಧ್ಯೆ ಬಂದುದ್ದೇ ಅಸಂಗತ ನಾಟಕ ಪರಂಪರೆ, ಬೆಂಗಳೂರಿನ ರಂಗತಂಡಗಳಲ್ಲದೆ, ಮೈಸೂರು, ಧಾರವಾಡಗಳಲ್ಲೂ ಅಸಂಗತ ನಾಟಕಗಳ ಪ್ರಯೋಗ, ಚರ್ಚೆಗಳು ಕೆಲಕಾಲಕ್ಕೆ ನಡೆದವು. ಚಂದ್ರಕಾಂತ ಕುಸನೂರು, ನ.ರತ್ನ, ಪಿ.ಲಂಕೇಶ್, ಚಂದ್ರಶೇಖರ ಪಾಟೀಲರ ಅಸಂಗತ ನಾಟಕಗಳು ಯಶಸ್ವಿಯಾದವು. ಕನ್ನಡ ಕಲಾಸಂಘ ಬೆಂಗಳೂರು, ಶ್ರೀರಂಗರ ನಾಟಕಗಳ ಪ್ರದರ್ಶನಕ್ಕೆ ವೇದಿಕೆ ಮಾಡಿಕೊಟ್ಟಿತು. ೧೯೫೬ ರಲ್ಲಿ ಶ್ರೀರಂಗರು ಬೆಂಗಳೂರಿಗೆ ಬಂದು ನೆಲೆಸಿದರು. ಹರಿತವಾದ ಸಂಭಾಷಣೆಯ, ಬುದ್ಧಿ ಪ್ರಧಾನವಾದ ಅವರ ನಾಟಕಗಳು ಆ ನಂತರದಿಂದ ಬೆಂಗಳೂರಿನಲ್ಲಿ ಹೆಚ್ಚಾಗಿ ಪ್ರದರ್ಶನಗೊಂಡವು. ಶ್ರೀರಂಗರು ರಂಗಶಿಕ್ಷಣಕ್ಕೆ ಒತ್ತು ನೀಡಿ ಆ ನಿಟ್ಟಿನಲ್ಲಿ ಒಂದು ಪರಿಪಾಠ ಹಾಕಿಕೊಟ್ಟದ್ದು, ಅವರು ನಾಟಕಗಳಿಗೆ ನೀಡಿದ ಕೊಡುಗೆಗಿಂತ

ದೊಡ್ಡದು. ಮೊದಲ ಬಾರಿಗೆ ಶಿಕ್ಷಕರಿಗೆ ರಂಗ ತರಬೇತಿ ಕಾರ್ಯಾಗಾರ ಏರ್ಪಡಿಸಿದರು. ದೆಹಲಿಯಲ್ಲಿ ಆಗತಾನೇ ಆರಂಭವಾಗಿದ್ದ 'ರಾಷ್ಟ್ರೀಯ ನಾಟಕ ಶಾಲೆ'(ಎನ್.ಎಸ್.ಡಿ)ಗೆ ೧೯೫೯ರಲ್ಲಿ ಕರ್ನಾಟಕದಿಂದ ಹೆಚ್ಚು ಜನ ಸೇರಿಕೊಳ್ಳುವಂತೆ ಒತ್ತಾಯಿಸಿದರು. ಭರತನ ನಾಟ್ಯಶಾಸ್ತ್ರದ ಅನುವಾದದ ಜೊತೆಗೆ, ಭಾರತೀಯ ರಂಗಭೂಮಿಯ ಪರಿಚಯವನ್ನು ಅವರ ಕೃತಿಗಳು ಹಾಗೂ ಸಂಪಾದಿತ ಕೃತಿಗಳು ಕಟ್ಟಿಕೊಟ್ಟವು. ನಾಟಕಗಳ ಪ್ರಯೋಗಗಳಿಗೆ ಬೇಕಾದ ಬೌದ್ಧಿಕ ಪರಿಸರವನ್ನು ಕಟ್ಟಿಕೊಡುವಲ್ಲಿ ಅವರ ಕೊಡುಗೆ ಗಣನೀಯವಾದುದು. ನಾಟಕದಲ್ಲಿ ಅಭಿನಯದ ಜೊತೆ, ಬೆಳಕು, ರಂಗಪರಿಕರಗಳ ಹೆಚ್ಚಿನ ಶಿಸ್ತಿಗೆ ಒಳಪಡಿಸಿದ ಬಿ.ಚಂದ್ರಶೇಖರ್ ಅವರ ಪ್ರಯತ್ನಗಳ ನಂತರ ನಾಣಿ, ಆರ್.ನಾಗೇಶ್, ಶಶಿಧರ್ ಅಡಪ, ಎಲ್.ಕೃಷ್ಣಪ್ಪರಂತಹ ನೇಪಥ್ಯ ರಂಗಕರ್ಮಿಗಳನ್ನು ಸಹ ಹೆಚ್ಚು ಕ್ರಿಯಾಶೀಲರಾಗಿಸಿ. ರಾಷ್ಟ್ರೀಯ ನಾಟಕಶಾಲೆಯ ಪದವಿ ನಂತರ ಹಿಂದಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಬಿ.ವಿ.ಕಾರಂತರನ್ನು ಕರೆಸಿ ೧೯೬೯ರಲ್ಲಿ ಅವರಿಂದ ಪಿ.ಲಂಕೇಶ್ ಅವರ 'ಏವಂ ಇಂದ್ರಜಿತ್' ಎಂಬ ನಾಟಕ ಪ್ರಯೋಗಿಸಲಾಯಿತು. ರಾಷ್ಟ್ರೀಯ ನಾಟಕ ಶಾಲೆಯ ಮೊದಲ ತಂಡದಲ್ಲಿ ಅಭ್ಯಾಸ ಮಾಡಿದ ಜಿ.ವಿ.ಶಿವಾನಂದ, ವಿ.ರಾಮಮೂರ್ತಿ, ಬಿ.ವಿ.ಕಾರಂತ, ಪ್ರಸನ್ನ ಅವರುಗಳು ತಮ್ಮ ಹೊಸ ಚಿಂತನೆಗಳಿಗೆ ಬೆಂಗಳೂರನ್ನು ವೇದಿಕೆ ಮಾಡಿಕೊಂಡರು. ಬೆಂಗಳೂರಿಗೆ ಸ್ಯಾಟಲೈಟ್ ಬಳಕೆ ಬಂದಾಗ ಅದನ್ನು ಮೊದಲು ಮೆಡಿಕೋಸ್ ತಂಡದವರು ಬಳಸಿದರು. ಅಲ್ಲಿಂದ ಮುಂದಕ್ಕೆ ಬೆಂಗಳೂರು ಹವ್ಯಾಸಿ ರಂಗಭೂಮಿಯು ತಾಂತ್ರಿಕವಾಗಿ, ಅಪಾರವಾಗಿ ಪ್ರಗತಿ ಹೊಂದಿದ್ದನ್ನು ಕಾಣುತ್ತೇವೆ.

ಬೆಂಗಳೂರು ಕೈಗಾರಿಕೆಗಳ ಆಡಳಿತ ಮಂಡಳಿಯವರು ಸ್ವತಃ ನಾಟಕಗಳ ಬೆಂಬಲಕ್ಕೆ ನಿಂತದ್ದು ಮತ್ತೊಂದು ಬೆಳವಣಿಗೆ. ಕಾರ್ಖಾನೆಯ ಕಾರ್ಮಿಕರು ನಾಟಕ ಸಂಘಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದರಷ್ಟೇ ಅಲ್ಲದೆ ನಾಟಕಗಳಿಗೆ ಪ್ರಾಯೋಜಕತ್ವವನ್ನು ನೀಡಿದರು. ಅನ್ಯಕಾರ್ಯನಿಮಿತ್ತ ರಜೆ, ಪಾಳಿ ಕೆಲಸದ ವೇಳೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಸಹಕರಿಸಿದರು. ಮಾಲೀಕರು ನೀಡಿದ ಈ ಸೌಲಭ್ಯಗಳನ್ನು ಬಳಸಿಕೊಂಡು ಕಾರ್ಖಾನೆಯ ಕಾರ್ಮಿಕ ಸಂಘಗಳು ನಾಟಕ ತಂಡಗಳನ್ನು ಕಟ್ಟಿಕೊಂಡರು. ಅಂದಿನ ಕಾರ್ಖಾನೆಗಳಲ್ಲಿ ಬೆಂಗಳೂರಿನ ಬಿನ್ನಿಮಿಲ್, ಕಿರ್ಲೋಸ್ಕರ್, ಎಚ್.ಎ.ಎಲ್, ಬಿ.ಇ.ಎಲ್, ಎಚ್.ಎಂ.ಟಿ, ಐ.ಟಿ.ಐ, ಬಿ.ಇ.ಎಂ.ಎಲ್, ಎನ್.ಜಿ.ಇ.ಎಫ್ ಎಂಬ ಸಾರ್ವಜನಿಕ ಕಾರ್ಖಾನೆಗಳಲ್ಲಿ ನಾಟಕ ತಂಡಗಳು ಹುಟ್ಟಿಕೊಂಡವು. ೧೯೭೦ರಲ್ಲಿ ರವೀಂದ್ರ ಕಲಾಕ್ಷೇತ್ರದ 'ಬಯಲು ಸಂಸ ರಂಗಮಂದಿರ'ದಲ್ಲಿ ಏರ್ಪಡಿಸಿದ್ದ 'ಬಯಲು ನಾಟಕೋತ್ಸವ'ಗಳು ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಇದು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ನವ್ಯದ ಉಚ್ಛ್ರಾಯ ಕಾಲವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಪ್ರಪಂಚಕ್ಕೆ ನವ್ಯಪಂಥ ಬಂದ ಹತ್ತು ವರ್ಷಗಳ ಅನಂತರ ಅದು ನಾಟಕಕ್ಕೆ ಬಂದಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಜಿ.ಎಸ್.ಶಿವರುದ್ರಪ್ಪ ಅವರು ಏರ್ಪಡಿಸಿದ್ದ 'ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ' ವಿಚಾರ ಸಂಕಿರಣ ಇದಕ್ಕೆ ಪೂರಕವಾದ

ವಾತಾವರಣವನ್ನು ಕಲ್ಪಿಸಿಕೊಟ್ಟಿತು. ಇಲ್ಲಿ ಪ್ರದರ್ಶನಗೊಂಡ ಕಂಬಾರರ 'ಜೋಕುಮಾರ ಸ್ವಾಮಿ', ಲಂಕೇಶ್‌ರ 'ಸಂಕ್ರಾಂತಿ' ಹಾಗೂ ಲಂಕೇಶರೇ ಅನುವಾದಿಸಿದ 'ದೊರೆ ಈಡಿಪಸ್' ನಾಟಕಗಳು ಕನ್ನಡ ರಂಗಭೂಮಿಯಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದವು. ಈ ಮೂರು ನಾಟಕಗಳನ್ನು ನಿರ್ದೇಶಿಸಿದ ಬಿ.ವಿ.ಕಾರಂತರ ಸಂಗೀತ, ನೃತ್ಯಗಳಿಂದ ನಾಟಕವನ್ನು ಮತ್ತಷ್ಟು ಕಳೆಗಟ್ಟಿಸಬಹುದಾದ ಸೂಚನೆ ನೀಡಿದರೆ, ಈ ಉತ್ಸವದ ಯಶಸ್ಸಿನ ಸೂತ್ರಧಾರರಾಗಿ ಲಂಕೇಶ್ ಅವರೇ ಕೆಲಸ ಮಾಡಿದರು. ಟಿಕೆಟ್ ತೆಗೆದುಕೊಂಡು ನಾಟಕ ನೋಡುವ ಪರಿಪಾಠ ಹವ್ಯಾಸಿ ರಂಗಭೂಮಿಯಲ್ಲಿ ಗಟ್ಟಿಯಾಗಿ ನೆಲೆಯಾಗಿದ್ದು. ಈ ಎಪ್ಪತ್ತರ ದಶಕದ ಆರಂಭದಲ್ಲೇ ಎಂದು ಕನ್ನಡ ರಂಗ ಚಳವಳಿಯ ಚರಿತ್ರೆಯಲ್ಲಿ ಗುರುತಿಸುತ್ತೇವೆ. ಈ ಬಯಲು ನಾಟಕೋತ್ಸವದ ಮತ್ತೊಂದು ಪ್ರಮುಖ ಬೆಳವಣಿಗೆ ಎಂದರೆ ಯಾವುದೇ ಒಬ್ಬ ನಟ ಅಥವಾ ನಾಟಕಕಾರನ ಹಿಂದೆ ಇರುತ್ತಿದ್ದ ಕಲಾವಿದರು, ರಂಗಕರ್ಮಿಗಳು ಒಂದು ತಂಡದ ವ್ಯಾಪ್ತಿಗೆ ಬಂದದ್ದು. ನಿರ್ದೇಶಕನಾದವನು ಪ್ರಮುಖ ಸ್ಥಾನವನ್ನು ಪಡೆದು, ಗಂಭೀರ ಕಥಾವಸ್ತು ಹಾಗೂ ಅದನ್ನು ಅಷ್ಟೇ ಆಕರ್ಷಕವಾಗಿ ರಂಗದ ಮೇಲೆ ತರುವ ಪ್ರಯತ್ನಗಳು ತೀವ್ರಗೊಂಡವು.

ರಂಗಸಂಪದ, ಅಂತರಂಗ, ಬೆನಕ, ಕಲಾ ಗಂಗೋತ್ರಿ, ನಟರಂಗದಂತಹ ನಾಟಕ ತಂಡಗಳು ಈ ಹಂತದಿಂದ ಪ್ರಾಮುಖ್ಯತೆ ಗಳಿಸಿಕೊಂಡವು. ಅಲ್ಲದೆ ಈ ಸಂದರ್ಭದ ನಾಟಕಗಳು ಸತ್ತವರ ನೆರಳು, ಕದಡಿದ ನೀರು, ಸಂಗ್ಯಾ ಬಾಳ್ಯಾ, ಹರಕೆಯ ಕುರಿ, ಯಯಾತಿ, ಹ್ಯಾಮ್ಲೆಟ್, ಒಡಲಾಳ, ಮಹಾ ಚೈತ್ರ, ಸುಲ್ತಾನ್ ಟಿಪ್ಪು, ತುಘಲಕ್‌ನಂತಹ ವಿಶ್ವದ ಯಾವುದೇ ಒಳ್ಳೆಯ ನಾಟಕವನ್ನು ಸರಿಗಟ್ಟುವಂತಹ ನಾಟಕಗಳು ರಂಗದ ಮೇಲೆ ಬಂದದ್ದು ಚಾರಿತ್ರಿಕ ಸನ್ನಿವೇಶದ ಪ್ರತಿಬಿಂಬ ಎಂಬಂತೆ ಕನ್ನಡ ಹವ್ಯಾಸಿ ರಂಗಭೂಮಿಯ ಚರಿತ್ರೆಯಲ್ಲಿ ದಾಖಲಾಗಿದೆ. ೧೯೭೫ ರಲ್ಲಿ ಹುಟ್ಟಿದ 'ಸಮುದಾಯ' ತಂಡವು ನಾಟಕವನ್ನು ಮಧ್ಯಮವರ್ಗದಿಂದ ಶ್ರಮಜೀವಿಗಳ ಬಳಿಗೆ ಕೊಂಡೊಯ್ಯಿತು. ಹುತ್ತವ ಬಡಿದರೆ, ತಾಯಿ, ಗೆಲಿಲಿಯೋ, ಪಂಚಮ, ಬೆಲ್ಚಿ, ಏಕಲವ್ಯ, ದಂಗೆಯ ಮುಂಚಿನ ದಿನಗಳು ಮುಂತಾದ ನಾಟಕಗಳು ದುಡಿಯುವ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸಿದವು. ಜೊತೆಗೆ ಬೀದಿನಾಟಕಗಳ ದೊಡ್ಡ ಆಂದೋಲನವೇ ನಡೆದು ರಂಗ ಚಳವಳಿಯನ್ನು ಈ ಹಂತದಿಂದ ಮುನ್ನಡೆಸಿತು. ಚಿತ್ರತಂಡ, ರಾಗ್ ಕಲಾವಿದರು, ಬೀದಿನಾಟಕಗಳನ್ನು ಬೆಂಗಳೂರಿಗೆ ಪರಿಚಯಿಸಿದರೆ, 'ಸಮುದಾಯ' ಅದನ್ನು ರಾಜ್ಯದ ಮೂಲೆ ಮೂಲೆಗಳಿಗೆ ಕೊಂಡೊಯ್ಯಿತು. 'ಸಮುದಾಯ'ದ 'ರೈತನತ್ತ ಜಾಥಾ'ದಂತಹ ರಾಜ್ಯವ್ಯಾಪ್ತಿ ಕಾರ್ಯಕ್ರಮಗಳು ಬೀದಿನಾಟಕಗಳನ್ನು ಮನೆಮಾತಾಗಿಸಿತು. 'ಸಮುದಾಯ'ವು ಬೆಂಗಳೂರಿನಲ್ಲಿ ಸಂಘಟಿಸಿದ್ದ (ಕುಂಬಳಗೋಡಿನಲ್ಲಿ) ೧೯೭೮ರಲ್ಲಿ ರಂಗ ತರಬೇತಿ ಕಾರ್ಯಾಗಾರವನ್ನು ಪಶ್ಚಿಮಬಂಗಾಳದ ರಂಗಕರ್ಮಿ ಬಾದಲ್ ಸರ್ಕಾರ್ ನಡೆಸಿಕೊಟ್ಟರು ಅದಾದ ಮೇಲೆ ಬೀದಿನಾಟಕಕ್ಕೆ ಒಂದು ಸೈದ್ಧಾಂತಿಕ ಸ್ವರೂಪವೇ ರಂಗಭೂಮಿಗೆ ದೊರಕಿತು. ಮುಂದೆ ಇಲ್ಲಿನ ಎಲ್ಲಾ ಜನಪರ ಚಳವಳಿಗೆ ಬೀದಿನಾಟಕಗಳನ್ನು ಬಳಸಿಕೊಳ್ಳಲಾಯಿತು. ತುರ್ತುಪರಿಸ್ಥಿತಿಯನ್ನು ೧೯೭೫ರಲ್ಲಿ ಘೋಷಿಸಿ ಪ್ರಜಾಸತ್ತೆಯ ಕತ್ತು ಹಿಚುಕಿದ ಕಾರಣಕ್ಕೆ ಇಂದಿರಾ

ಗಾಂಧಿ ಮೇಲೆ ಜನತೆಗೆ ಅಪಾರವಾದ ಸಿಟ್ಟಿದ್ದ ಕಾಲಘಟ್ಟ ಅದು. ಅದರ ಬೆನ್ನಿಗೇ ಇಂದಿರಾ ಗಾಂಧಿ ೧೯೭೮ರಲ್ಲಿ ಚಿಕ್ಕಮಂಗಳೂರಿನ ಉಪಚುನಾವಣೆಯಲ್ಲಿ ಬಂದು ಲೋಕಸಭೆಗೆ ಸ್ಪರ್ಧಿಸಿದರು, ಇಂದಿರಾ ವಿರುದ್ಧ 'ಸಮುದಾಯ' ಸಂಘಟನೆಯಿಂದ 'ಇಂದಿರಾ ಗಾಂಧಿಯ ಸುಳ್ಳಿನ ಪ್ರಮಾಣ ಪತ್ರ' ಬೀದಿನಾಟಕಗಳ ಆಂದೋಲನವೇ ನಡೆಯಿತು. ಇದು 'ಸಮುದಾಯ'ದ ಒಂದು ರಾಜಕಾರಣದ ನಿರ್ಣಯಾತ್ಮಕ ಚಳವಳಿಯೇ ಎಂದು ಎಪ್ಪತ್ತರ ದಶಕದಲ್ಲಿ ಗುರುತಿಸುತ್ತೇವೆ.

ಕನ್ನಡ ಹವ್ಯಾಸಿ ರಂಗಭೂಮಿಯ ಮುಂದಿನ ದಿನಗಳು ಪ್ರಯೋಗಶೀಲತೆಗಾಗಿ ಮತ್ತಷ್ಟು ತೀವ್ರಗೊಂಡ ಕಾಲ. ಪ್ರತಿ ಪ್ರಯೋಗದ ಅನಂತರ ಹುಟ್ಟಿಕೊಳ್ಳುತ್ತಿದ್ದ ಹೊಸ ಸವಾಲುಗಳಿಗೆ ಪರಿಹಾರಗಳನ್ನು ಹುಡುಕುವ ದಾರಿಯಲ್ಲಿ ಮತ್ತಷ್ಟು ಒಳ್ಳೆಯ ಪ್ರಯೋಗಗಳಾಗಿ ಮೂಡಿಬಂದವು. ಕನ್ನಡದಲ್ಲಿ ನಾಟಕಗಳ ಕೊರತೆ ಎಂದಾಗ ಕಥೆ, ಕಾದಂಬರಿಗಳನ್ನು ನಾಟಕಕ್ಕೆ ಅಳವಡಿಸಲಾಯಿತು. ಇಂತಹದೊಂದು ಪರಿಪಾಠ ಕಳೆದ ನಾಲ್ಕೂವರೆ ದಶಕಗಳ ಕಾಲ ಯಶಸ್ವಿಯಾಗಿ ನಡೆದುಕೊಂಡು ಬಂದಿರುವುದು ಮಹತ್ವದ್ದು.

ಕನ್ನಡದ ಬಹುಮುಖ್ಯ ಕಥೆ, ಕಾದಂಬರಿಗಳು ಲಂಕೇಶರು ಕೊಟ್ಟ 'ಮುಸ್ಸಂಜೆಯ ಕಥಾ ಪ್ರಸಂಗ', ತೇಜಸ್ವಿಯವರ 'ತಬರನ ಕಥೆ', 'ಕೃಷ್ಣೇಗೌಡರ ಆನೆ', ಕುಂ.ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ' ಇತ್ಯಾದಿ ನಾಟಕಗಳಾಗಿಯೂ ಪ್ರಯೋಗಗೊಂಡವು. ನಾಟಕಗಳಲ್ಲಿ ಬರೀ ಮಾತಾಯಿತು, ನೀರಸವಾಯಿತು ಎನಿಸಿದಾಗ ಹಾಡು, ನೃತ್ಯಗಳಿಂದ ರಂಜಿಸಿದರು. ಗುಬ್ಬಿ ಕಂಪನಿ ಹಿನ್ನೆಲೆಯ ಕಾರಂತರೆ ಸಂಗೀತ ಪ್ರಧಾನ ನಾಟಕಗಳಿಗೆ ನಾಂದಿ ಹಾಡಿಬಿಟ್ಟರು. ಒಳ್ಳೆಯ ಹಾಡುಗಾರರಾದ ಬಿ.ಜಯಶ್ರೀ 'ಸ್ಪಂದನ' ರಂಗ ತಂಡದ ಮೂಲದ ಸಂಗೀತ, ಕುಣಿತ ಪ್ರಧಾನವಾದ ಜಾನಪದ ನಾಟಕಗಳ ಪ್ರತೀತಿಯನ್ನು ಹುಟ್ಟುಹಾಕಿದರು. 'ಲಕ್ಷಾಧಿಪತಿ ರಾಜನಕಥೆ', 'ಕರಿಮಾಯಿ', 'ಚಿತ್ರಪಟ ರಾಮಾಯಾಣ' ಜನಪದ ಸೊಗಡಿನ ನಾಟಕಗಳು ಸಂಗೀತ ಪ್ರಧಾನ ನಾಟಕಗಳಾಗಿದ್ದವು. ಸಿ.ಆರ್.ಸಿಂಹ, ಮುಖ್ಯಮಂತ್ರಿ ಚಂದ್ರು, ಏಣಗಿ ನಟರಾಜ್, ಹುಲುಗಪ್ಪ ಕಟ್ಟಿಮನಿ, ಉಷಾ ಭಂಡಾರಿ, ಮಂಜುನಾಥ ಬೆಳಕೆರೆಯಂತಹ ಮುಖ್ಯ ನಟರ ಪಡೆಯೇ ನಿರ್ಮಾಣವಾಯಿತು. ಮೂಖಾಭಿನಯದಲ್ಲಿ ವಿ.ರಾಮಮೂರ್ತಿ, ಜೆ.ವಿ.ಶಿವಾನಂದ, ವಾಲ್ಟರ್ ಡಿ ಸೋಜ, ಬಿ.ವಿ.ರಾಜಾರಾಂ ಮಾಡಿದ ಸಾಧನೆ ಮುಖ್ಯವಾದದ್ದು. ಏಕವ್ಯಕ್ತಿ ನಾಟಕ ಪ್ರದರ್ಶನಗಳಲ್ಲಿ ಸಿ.ಆರ್.ಸಿಂಹ(ಟಿಪಿಕಲ್ ಟಿ.ಪಿ.ಕೈಲಾಸಂ) ಬಿ.ಜಯಶ್ರೀ(ಉರಿಯ-ಉಯ್ಯಾಲೆ), ಕೃಷ್ಣಮೂರ್ತಿ ಕವತ್ತಾರ್(ಸಾಯುವನೇ ಚಿರಂಜೀವಿ), ಲಕ್ಷ್ಮೀ ಚಂದ್ರಶೇಖರ್(ಹೆಣ್ಣಲ್ಲವೇ?), ಎನ್.ಮಂಗಳಾ(ಊರ್ಮಿಳಾ), ರಾಮನಂದಸ್ವಾಮಿ (ತುಘಲಕ್) ಅವರ ಸಾಧನೆಗಳು ಗಮನಾರ್ಹವಾದುವು.

ಮುಂಬೈನ 'ಪೃಥ್ವಿ ಥೀಯೆಟರ್' ಮಾದರಿಯಲ್ಲಿ ಅರುಂಧತಿನಾಗ್ 'ರಂಗಶಂಕರ' ನಿರ್ಮಿಸಿದ್ದು, 'ನಂದನ' ರಂಗ ತಂಡದಿಂದ ಸತತ ನೂರು ಗಂಟೆ ನಾಟಕ ಪ್ರದರ್ಶನ, ಇದು 'ವಿಶ್ವರಂಗಭೂಮಿ ಆಚರಣೆ' ಪರಿಪಾಠ ಇವೆಲ್ಲ ಹವ್ಯಾಸಿ ರಂಗಭೂಮಿಯ ಕೆಲವು ಮೈಲುಗಲ್ಲುಗಳು. ತಮ್ಮ ಅಸಾಧಾರಣ

ರಂಗವಿನ್ಯಾಸದಿಂದ 'ಸಮುದಾಯ'ದ ಸುರೇಶ ಅನವಳ್ಳಿ ಗಮನಾರ್ಹ ನಿರ್ದೇಶಕರೆನಿಸಿದರು. ಪಾತ್ರಗಳ ಚಲನ-ವಲನಕ್ಕೆ ತುಡಿಯುವ ಜೀವಂತಿಕೆ ನೀಡಿ ರಂಗದ ಮೇಲೆ ಅನನ್ಯ ಲವಲವಿಕೆಯನ್ನು ಉಂಟು ಮಾಡುವ ಇಕ್ಬಾಲ್ ಅಹಮದ್ ಅವರ ಪ್ರಯೋಗಕ್ಕೆ ವೈಭವದ ಮೆರುಗು ತರುವ ಸಿ.ಬಸವಲಿಂಗಯ್ಯ, ಜಾನಪದ ರೂಪಕಗಳ ಮೂಲಕ ಸಾಂಸ್ಕೃತಿಕ ನಾಟಕಗಳಿಗೆ ಮರುಜೀವ ನೀಡಿದರು ಗೋಪಾಲಕೃಷ್ಣ ನಾಯಿರಿ, ದೇಶಿ ರಂಗಭೂಮಿ ಹುಡುಕಾಟದಲ್ಲಿರುವ ರಘುನಂದನ, ಈಗಾಗಲೇ ತಮ್ಮ ಅತ್ಯುತ್ತಮ ರಂಗ ಪ್ರಯೋಗಗಳನ್ನು ನೀಡಿರುವ ಪ್ರಸನ್ನ, ಚಿದಂಬರರಾವ್ ಜಂಬೆ, ನಿರ್ಲಕ್ಷ್ಯಕ್ಕೆ ಒಳಗಾದ ಕಥಾವಸ್ತು ಅವಕಾಶ ವಂಚಿತರನ್ನು ರಂಗದ ಮೇಲೆ ತರುವ ಮೂಲಕ ಸಿ.ಜಿ.ಕೃಷ್ಣಸ್ವಾಮಿ(ಸಿ.ಜಿ.ಕೆ) ಮೊದಲಾದವರು ರಂಗಭೂಮಿಯ ಮೂಲ ಸ್ವರೂಪವಾದ ಜಾತ್ಯಾತೀತತೆಯನ್ನು ಪೋಷಿಸಿ ರಂಗಭೂಮಿಗೆ ವಿದ್ರೋಹ(ವಿಮರ್ಶಿಸುವ) ಬದಲಾವಣೆಯ ಅಂಶಗಳನ್ನು ಬೆಳೆಸಿದರು. ಜೊತೆಗೆ ಹಲವಾರು ರಂಗಕರ್ಮಿಗಳನ್ನು ಅವರು ಬೆಳೆಸಿದರು. ಸಿದ್ಧ ನಾಟಕಗಳಿಗೆ ಕಟ್ಟುಬೀಳದೆ ಹತ್ತಾರು ಹೊಸ ನಾಟಕಗಳನ್ನು ಬರೆಯಿಸಿದ ಶ್ರೇಯಸ್ಸು ಸಿ.ಜಿ.ಕೆ ಅವರಿಗೆ ಸಲ್ಲುತ್ತದೆ. ರಂಗ ವಿಮರ್ಶಕರಾದ ಕಿ.ರಂ.ನಾಗರಾಜ ಅವರನ್ನು ದುಂಬಾಲು ಬಿದ್ದು ಸಿ.ಜಿ.ಕೆ ಅವರು ನಿರಂತರವಾಗಿ ಅವರಿಂದ ಎರಡು ನಾಟಕಗಳನ್ನು ಬರೆಯುವಂತೆ ಮಾಡಿದರು. ಅಲ್ಲದೆ ಅವುಗಳನ್ನು ರಂಗರೂಪಕ್ಕೆ ತರುವಂತೆ ಮಾಡಿದ ಸಿ.ಜಿ.ಕೆಯು ಸೃಜನಶೀಲ ರಂಗನಿಪುಣರೇ ಹೌದು. ಆದ್ದರಿಂದ ಸಿ.ಜಿ.ಕೆ, 'ರಂಗಭೂಮಿ ಅಂದರೆ ಅದು ಹೇಳುವುದಲ್ಲ, ಅದರಲ್ಲಿ ಭಾಗವಹಿಸಿ ಅನುಭವಿಸಬೇಕು' ಎಂದು ತಮ್ಮ ಹೇಳಿಕೆಯನ್ನು ತುಂಬಾ ಸೂಕ್ಷ್ಮವಾಗಿ ಪ್ರತಿಪಾದಿಸಿದ್ದಾರೆ.

೨.೬. 'ಸಮುದಾಯ' ಹಾಗೂ ಇಪ್ಟಾ, ನೀನಾಸಂ, ರಂಗಭಾರತಿ, ಬೆನಕ, ರಂಗಸಂಪದ, ನಟರಂಗ, ಕಲಾಗಂಗೋತ್ರಿ, ಚಿತ್ರ, ರಂಗನಿರಂತರ, ಎನ್.ಎಸ್.ಡಿ, ಸಾಣೇಹಳ್ಳಿ ಶಿವಸಂಚಾರ, ರಂಗಾಯಣ, ಜನಮನ, ನಟನ.

ಅ. 'ಸಮುದಾಯ' ಹಾಗೂ ಇಪ್ಟಾ-೧೯೪೦

'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಪ್ರಾರಂಭವಾಗಿದ್ದು ೧೯೭೫ರಲ್ಲಿ, ಆದರೆ ಇಪ್ಟಾ (Indian people theatre association-IPTA) ಮೊದಲು ಬೆಂಗಳೂರಿನಲ್ಲಿ ೧೯೪೦ರಲ್ಲಿ ಶುರುವಾಯಿತು. ಅದು ಸಹ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'(ಬೆಂಗಳೂರು)ನಲ್ಲಿ, ಆಗ ಅಲ್ಲಿ ಹೋಮಿ ಜಹಾಂಗೀರ್ ಬಾಬಾ ಅವರು ನಿರ್ದೇಶಕರಾಗಿದ್ದರು. ಬೆಂಗಳೂರಿನಲ್ಲಿ ಜರುಗಿದ ಇಪ್ಟಾದ ಮೊದಲ ಸಭೆಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಹರೀಂದ್ರನಾಥರು, ಹಾಸನದ ರಾಜಾರಾಯರು, ಬರಹಗಾರರು ಆದ ಇವರೆಲ್ಲರು ಜೊತೆಗೂಡಿ ಸಭೆಗೆ, ಶ್ರೀಲಂಕಾದಿಂದ ಅನಿಲ್ ಸೆಲ್ವ ಅನ್ನೋ ಕಮ್ಯುನಿಸ್ಟ್ ನಾಯಕರನ್ನು ಕರೆಸಿದ್ದರು. ಇವರಿಗೆ ಭಾರತದ 'ಇಂಡಿಪೆಂಡೆನ್ಸ್ ಮೂವ್‌ಮೆಂಟ್'ಗೆ ಪೂರಕವಾದ ಸಾಂಸ್ಕೃತಿಕ ಸಂಘಟನೆ ಬೇಕು ಅಂತ ಅನ್ನಿಸಿರಬೇಕು. ಏಕೆಂದರೆ ರಷ್ಯಾ, ಬ್ರೆಜಿಲ್, ಫ್ರಾನ್ಸ್ ದೇಶಗಳು ಸಾಂಸ್ಕೃತಿಕ ಕ್ರಾಂತಿಯ ಮೂಲಕವೇ ಸ್ವಾತಂತ್ರ್ಯ ಪಡೆದ ದೇಶಗಳಾಗಿದ್ದುದರಿಂದ.

ಈ ಐತಿಹಾಸಿಕ ಕ್ರಾಂತಿಯ ಘಟನೆಗಳ ಪ್ರಭಾವಕ್ಕೆ ಒಳಗಾದ ಸಂಘಟನೆಯಲ್ಲಿ ಇಪ್ಟಾ, ಬೆಂಗಳೂರಿನ ರೈಲ್ವೇ ಲೈನ್ ಪಕ್ಕದಲ್ಲಿ 'ಸ್ಟಾರ್ ಹೌಸ್' ಅಂತ ಇತ್ತು. ಈಗಿನ ಕ್ಲೂನಿ ಕಾನ್‌ವೆಂಟ್ ಹತ್ತಿರ ಈಗಲೂ ಆ ಬಂಗ್ಲೆಯನ್ನು ಕಾಣುತ್ತೇವೆ. ಅದೊಂದು ಸಾಂಸ್ಕೃತಿಕ ಕೇಂದ್ರ ಆಗಿತ್ತು. ಹಾಡು, ನೃತ್ಯ, ನಾಟಕಗಳು ಸದಾ ನಡೆಯುತ್ತಿದ್ದವು. ಇಲ್ಲಿಗೆ ವಿಕ್ರಮ್ ಸಾರಾಭಾಯ್ ಬರುತ್ತಿದ್ದರು. ಎಂ.ಆರ್.ಗೌತಮ್ ಅಂತಹ ದೊಡ್ಡ ಸಂಗೀತಗಾರರು ಹಾಗೂ ಅಚ್ಯುತ್ ಪಟವರ್ಧನ್, ಅವರ ಸೋದರ ಮಗ ಆನಂದ್ ಪಟವರ್ಧನ್ ಅವರ ಮಡದಿ ಸುನಂದಾ ಎಲ್ಲರೂ ಅಲ್ಲಿ ಸೇರುತ್ತಿದ್ದರು. ೧೯೪೧ರ ಹೊತ್ತಿಗೆ ಈ 'ಇಪ್ಟಾ' ಸಂಘಟನೆಯು ಬಾಂಬೆಯಲ್ಲಿಯೂ ಪ್ರಾರಂಭವಾಯಿತು. ನಂತರ ಪಶ್ಚಿಮ ಬಂಗಾಳದಲ್ಲಿ ಹೆಚ್ಚು ಪ್ರಭಾವವನ್ನು ಹೊಂದಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಇಪ್ಟಾ ರಂಗ ಚಳವಳಿಯು ಪ್ರಮುಖ ಪಾತ್ರವಹಿಸಿದೆ. ಬೀದಿನಾಟಕಗಳ ಮುಖೇನ ಜನರಲ್ಲಿ ಸ್ವಾತಂತ್ರ್ಯ ಚಳವಳಿಯ ಕಿಚ್ಚನ್ನು ಹಚ್ಚಿತು. ಇಪ್ಟಾ ಸಂಘಟನೆ ಮೊದಲ ಬಾರಿಗೆ 'ಐಕ್ಯರಂಗ' ವಾರಪತ್ರಿಕೆಯ ಸಂಪಾದಕರು ಹಾಗೂ ಕನ್ನಡ ನಾಡಿನ ಸಾಹಿತಿಗಳು ಆದ ನಿರಂಜನ ಅವರು ೧೯೪೩ರಲ್ಲಿ ಬಾಂಬೆಯಲ್ಲಿ ಇಪ್ಟಾ ಸಮ್ಮೇಳನಕ್ಕೆ ಹೋಗಿ ಬಂದ ಮೇಲೆ ನಿರಂಜನರು ಇದರಿಂದ ಪ್ರೇರೇಪಿತರಾಗಿ 'ನಾವು ಮನುಷ್ಯರು' ಎನ್ನುವ ಬೀದಿನಾಟಕವನ್ನು ಬರೆದು ಮಂಗಳೂರಿನ ಮೈದಾನದಲ್ಲಿ ಪ್ರದರ್ಶಿಸಿದರು. ಇದಕ್ಕೆ ಬೆಂಬಲವಾಗಿ ನಿಂತವರು ಮಂಗಳೂರು ಕಮ್ಯುನಿಸ್ಟ್ ಪಕ್ಷದ ಸಂಗಾತಿಗಳು, ನಿರಂಜನರು ಸಹ ನೇರವಾಗಿ ಕಮ್ಯುನಿಸ್ಟ್ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು. ಆ ನಂತರವೂ ಈ ಬೀದಿನಾಟಕವನ್ನು ಸ್ಟೇಜ್ ಮೇಲೆ ಕೂಡ ಇಪ್ಟಾ ತಂಡ ಪ್ರದರ್ಶಿಸಿದೆ. ಹೀಗೆ ಬಾಂಬೆ ಇಪ್ಟಾ ಸಂಘಟನೆಯು ಮುಂಬೈ ಕರ್ನಾಟಕ ಪ್ರದೇಶದಲ್ಲಿ ಹಲವಾರು ಬೀದಿನಾಟಕಗಳನ್ನು ಕನ್ನಡ ಹಾಗೂ ಹಿಂದಿ ಭಾಷೆಯಲ್ಲೂ ಬೇಕಾದಷ್ಟು ಬಾರಿ ಪ್ರದರ್ಶಿಸಿದೆ.

ಹೀಗೆ ಇಪ್ಟಾ ಸಂಘಟನೆಯು ನೇರವಾದ ಭಾರತೀಯ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ)ದ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕ ಹಾಗೂ ಭಾರತದಲ್ಲಿ ಗುರುತಿಸಿಕೊಂಡಿತು. ಕರ್ನಾಟಕದಲ್ಲಿ ಬೀದಿನಾಟಕಗಳ ಪರಂಪರೆಯನ್ನು ಮೊದಲು ಪ್ರಾರಂಭಿಸಿದ ಕೀರ್ತಿ ಇಪ್ಟಾ ಸಂಘಟನೆಗೆ ಸಲ್ಲುತ್ತದೆ. ಹಾಗೂ ಕಮ್ಯುನಿಸ್ಟ್ ಚಳವಳಿಯನ್ನು ಕರ್ನಾಟಕದಲ್ಲಿ ಗಟ್ಟಿಗೊಳಿಸಿದ ಮಹತ್ವದ ಅಂಶವು ಇಪ್ಟಾಕ್ಕೆ ಸೇರಬೇಕು. ಭಾರತ ಮತ್ತು ಚೀನಾ ಯುದ್ಧವು ೧೯೬೨ರಲ್ಲಿ ಪ್ರಾರಂಭವಾಗುವ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳು ಪ್ರಾರಂಭವಾದವು. ಏಕೆಂದರೆ ಕೇಂದ್ರ ಸಮಿತಿಯಲ್ಲಿ ಕೆಲವರು ಚೀನಾದ ಜೊತೆ ಯುದ್ಧಬೇಡ ಮಾತುಕತೆಯ ಮುಖೇನ ಭಾರತ-ಚೀನಾದ ಗಡಿಸಮಸ್ಯೆ ಬಗೆಹರಿಸಿಕೊಳ್ಳಿ ಎಂದರೆ, ಇನ್ನು ಕೆಲವರು ಯುದ್ಧ ಮಾಡುವುದು ಉತ್ತಮ ಎಂದು ಆಗಿನ ಕೇಂದ್ರ ಸರ್ಕಾರದ ಪರವಾಗಿ ತೀರ್ಮಾನಕ್ಕೆ ಬಂದು ಕಾಂಗ್ರೇಸ್ ಪಕ್ಷಕ್ಕೆ ಯುದ್ಧಪರವಾಗಿ ಬೆಂಬಲಿಸಿದರು. ಈ ನಿಲುವಿನಿಂದ ೧೯೬೪ರಲ್ಲಿ ಸಿ.ಪಿ.ಐ ಪಕ್ಷದಿಂದ ಹೊರಬಂದ ನಾಯಕರಾದ ಇ.ಎಂ.ಎಸ್.ನಂಬೂದರಿ ಪಾಡ್, ಜ್ಯೋತಿ ಬಸು, ಎ.ಕೆ.ಗೋಪಾಲನ್, ಪಿ.ಸುಂದರಯ್ಯ, ಕರ್ನಾಟಕದ ಪಿ.ರಾಮಚಂದ್ರರಾವ್

ಮುಂತಾದವರು ಸೇರಿ ಸಿ.ಪಿ.ಐ(ಎಂ) ಪಕ್ಷವನ್ನು ಸ್ಥಾಪಿಸಿದರು, ಇಪ್ಟಾ ಸಂಘಟನೆ ಮೂಲ ಸಿ.ಪಿ.ಐ(ಎಂ) ಪಕ್ಷಕ್ಕೆ ಅಂಟಿಕೊಂಡಿತು. ಆದರೆ 'ಮಂಗಳೂರು ಇಪ್ಟಾ' ಸಂಘಟನೆ ಮಾತ್ರ ಸಿ.ಪಿ.ಐ(ಎಂ) ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿತ್ತು. ನಂತರ ಸಿ.ಪಿ.ಎಂ ಪಕ್ಷದಲ್ಲಿ ತೀರ್ಮಾನದಂತೆ ನಿರಂತರ ಪ್ರಯತ್ನದಿಂದ ೧೯೬೪ರಿಂದ ೧೯೭೫ ವರೆಗೂ ಸಿ.ಪಿ.ಎಂ ಪಕ್ಷಕ್ಕೆ ಒಂದು ಸಾಂಸ್ಕೃತಿಕ ಸಂಘಟನೆ ಇರಲಿಲ್ಲ.

'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಕಟ್ಟಲು ನಿರಂಜನರ ಪ್ರಭಾವಕ್ಕೆ ಒಳಗಾದ ಸಾಹಿತ್ಯವರ್ಗ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ)ಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ವಿದ್ಯಾರ್ಥಿಗಳ ಪಡೆಯು ಹಾಗೂ ಇವರ ಜೊತೆಗೆ ಬೆಂಬಲಕ್ಕೆ ನಿಂತ ಪ್ರಾಧ್ಯಾಪಕರ ವರ್ಗ ಅದರಲ್ಲೂ ಪ್ರಸನ್ನ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ್, ಕೆ.ವಿ.ನಾರಾಯಣ, ಕೆ.ಮರುಳಸಿದ್ಧಪ್ಪ, ಬರಗೂರು ರಾಮಚಂದ್ರಪ್ಪ, ಸಿ.ಜಿ.ಕೃಷ್ಣಸ್ವಾಮಿ, ಜಿ.ಕೆ.ಗೋವಿಂದರಾವ್, ಲಿಂಗದೇವರು ಹಳೇಮನೆ, ಜೊತೆಗೆ ಗಂಗಾಧರ ಸ್ವಾಮಿ, ಕೆ.ಎಸ್.ನಿಸಾರ್ ಅಹಮ್ಮದ್, ಸಿದ್ಧಲಿಂಗಯ್ಯ, ಶೂದ್ರ ಶ್ರೀನಿವಾಸ್, ಸಿ.ಕೆ.ಗುಂಡಣ್ಣ ಮುಂತಾದವರು 'ಸಮುದಾಯ' ಪ್ರಾರಂಭ ಮಾಡಲು ಸಹಕರಿಸಿದರು. ಹೀಗೆ ಇಪ್ಟಾ ಹಾಗೂ ಸಮುದಾಯ ಕರ್ನಾಟಕದ ಎಡ-ಪ್ರಜಾಸತ್ತಾತ್ಮಕ ಚಿಂತನೆಗಳನ್ನು ರಂಗ ಚಳವಳಿಯಾಗಿ ಬೆಳೆಸಿತು. 'ಕಲೆಗಾಗಿ ಕಲೆ ಅಲ್ಲ, 'ಬದುಕಿಗಾಗಿ ಕಲೆ', 'ಜನರಿಗಾಗಿ ಕಲೆ' ಎಂಬ 'ವಾದ'ವನ್ನು ಪ್ರತಿಪಾದಿಸಿದ ಈ 'ಸಮುದಾಯ' ಸಂಘಟನೆಯು ನಿರಂತರವಾಗಿ ರಂಗಚಳವಳಿಯ ಸಾಂಸ್ಕೃತಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಿತು. ೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಇಪ್ಟಾಗಿಂತಲೂ ಮುಂಚೂಣಿಯಲ್ಲಿ ಬೆಳೆಯಲು ಚಾರಿತ್ರಿಕ ಸನ್ನಿವೇಶ ಒದಗಿಬಂತು. ಏಕೆಂದರೆ ಆಗ ಇದ್ದ ವಿದ್ಯಾರ್ಥಿ-ಯುವಜನ ಚಳವಳಿಯ ಪ್ರಭಾವದಿಂದ 'ಸಮುದಾಯ' ಸಂಘಟನೆಗೆ ಪಲ್ಲಟವಾಗಲು ಕಾರಣವಾಯಿತು. 'ಸಮುದಾಯ' ನಾಟಕಗಳು ಒಂದು 'ರಾಜಕೀಯ ಪ್ರಜ್ಞೆ'ಯನ್ನು ಸಹ ಮೂಡಿಸಿದವು. ಜೊತೆಗೆ ಕ್ರಾಂತಿಯ ವಿಚಾರಗಳನ್ನು ಮೈಗೂಡಿಸಿಕೊಂಡ ಸಾಹಿತಿ-ವಿದ್ಯಾರ್ಥಿ-ಯುವಜನವರ್ಗ, ನಿಸ್ವಾರ್ಥ ಸೇವಾ ಮನೋಭಾವದಿಂದ ಪ್ರಾಮಾಣಿಕವಾಗಿ ಸಂಘಟನೆಯಲ್ಲಿ ಪೂರ್ಣಾವಧಿ ಕಾರ್ಯಕರ್ತ ಸಂಗಾತಿಗಳಾಗಿ(ಕಾಮ್ರೇಡ್ಸ್‌ಗಳಾಗಿ) ದುಡಿಯಲು (ಸಂಘಟಿಸಲು) ಪ್ರೇರಣೆಯಾಯಿತು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಸೈದ್ಧಾಂತಿಕತೆ ಹೆಚ್ಚು ಪ್ರಭಾವ ಬೀರುದ್ದು ಈ ಅವಧಿಯಲ್ಲೇ ಎಂದು ಗುರುತಿಸಲಾಗಿದೆ. ಆದರಿಂದ ಎಪ್ಪತ್ತರ ದಶಕವನ್ನು 'ರಂಗ ಚಳವಳಿಗಳ ಕಾಲ' ಎಂದು ಕರೆಯುವುದು ಉಂಟು. ಒಟ್ಟಾರೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಕರ್ನಾಟಕ ರಂಗ ಚಳವಳಿಗೆ ತನ್ನದೇ ಆದ ಚಾರಿತ್ರಿಕ ನೆಲೆಗಳನ್ನು ಒದಗಿಸಿಕೊಟ್ಟಿತು ಎಂದರೂ ತಪ್ಪಲ್ಲ.

ಆ. 'ಸಮುದಾಯ' ಮತ್ತು ನೀನಾಸಂ-೧೯೪೯

ಕೆ.ವಿ.ಸುಬ್ಬಣ್ಣನವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡಿನಲ್ಲಿ ೧೯೪೯ರಲ್ಲಿ 'ನೀನಾಸಂ' (ನೀಲಕಂಠೇಶ್ವರ ನಾಟ್ಯ ಕಲಾ ಸಂಘ) ಸ್ಥಾಪನೆಯಾಯಿತು. ಹೆಗ್ಗೋಡಿನ ಸುತ್ತ-

ಮುತ್ತಲಿನ ರಂಗಾಸಕ್ತರನ್ನು ಒಟ್ಟುಗೂಡಿಸಿ, ಅವರ ಆಸಕ್ತಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಪ್ರಾರಂಭಿಸಿದ ಈ ನೀನಾಸಂ ಸಂಸ್ಥೆಯ ಚಟುವಟಿಕೆಗಳು ಹಲವಾರು ಕ್ಷೇತ್ರಗಳಲ್ಲಿ ಹಬ್ಬಿಕೊಂಡಿತು. ಸಮಾಜವಾದಿ ಚಿಂತನೆಯ ಕೆ.ವಿ.ಸುಬ್ಬಣ್ಣನವರು ಆರಂಭಿಕ ರಂಗ ಪ್ರಯೋಗಗಳಿಗೆ ಶ್ರಮವಹಿಸಿದವರು. ಅಲ್ಲಿ 'ಶಿವರಾಮಕಾರಂತ ರಂಗಮಂದಿರ' ಎಂಬ ಸುಸಜ್ಜಿತ ರಂಗಮಂದಿರವು ಸ್ಥಾಪನೆಯಾಗಿದೆ. ಜೊತೆಗೆ ನೀನಾಸಂ ರಂಗಶಿಕ್ಷಣ ಕೇಂದ್ರ, ನೀನಾಸಂ ಚಿತ್ರಸಮಾಜ, ನೀನಾಸಂ ಜನಸ್ಪಂದನ, ನೀನಾಸಂ ಮಾತುಕತೆ, ನೀನಾಸಂ ಪ್ರತಿಷ್ಠಾನವೆಂಬ ಉಪ ಸಂಸ್ಥೆಗಳ ಸ್ಥಾಪನೆ, ಅಕ್ಷರ ಪ್ರಕಾಶನ, 'ನೀನಾಸಂ ಸಂಸ್ಕೃತಿ ಶಿಬಿರ'ಗಳೆಂಬ ರಂಗ ತರಬೇತಿಗಳು ನಡೆಯುತ್ತಿವೆ. ಸಂಗ್ಯಾ ಬಾಳ್ಯ, ಪಂಜರ ಶಾಲೆ, ಗೋಕುಲ ನಿರ್ಗಮನ, ಅಹಲ್ಯೆ, ಮಧ್ಯಮ ಯಾಮೋಗ, ಪೋಲಿ ಕಿಟ್ಟಿ, ಅಶ್ವತ್ಥಾಮನ್, ಯಾರೋ ಅಂದರು, ಆಲಿಬಾಬಾ, ಸೇಜುವನ್ ನಗರದ ಸಾಧ್ವಿ, ತದ್ರೂಪಿ, ಮುಂತಾದ ನಾಟಕಗಳು 'ನೀನಾಸಂ' ತಂಡದಿಂದ ಪ್ರದರ್ಶನಗಳು ಕಂಡಿವೆ. ನೀನಾಸಂ ನಾಟಕಗಳ ಸ್ವರೂಪ ಅಧಿಕ ವೆಚ್ಚ, ಕಠಿಣ ಭಾಷೆ ಹಾಗೂ ಹೆಚ್ಚು ವಿಜೃಂಭಣೆಗಳಿಂದ ಕೂಡಿರುತ್ತವೆ. 'ನೀನಾಸಂ'ನಲ್ಲಿ 'ಕಲೆಗಾಗಿ ಕಲೆ' ಎಂಬ ಚಿಂತನೆಯನ್ನು ಪ್ರತಿಪಾದಿಸುವ ಹಾಗೂ ಕಲೆಯಿಂದ ಆರ್ಥಿಕ ಸದೃಢವಾಗುವ ಅಂಶಗಳನ್ನು ಬಹುಮಟ್ಟಿಗೆ ಗುರುತಿಸುತ್ತೇವೆ. ಸಮಾಜದಲ್ಲಿನ ಅನಿಷ್ಟ ಪದ್ಧತಿಗಳ ವಿದ್ರೋಹ(ವಿಮರ್ಶಿಸಿಸುವ) ಕಾರ್ಯಗಳಿಗೆ ತೀವ್ರ ರಾಜಕೀಯ ಪ್ರೇರಿತವಾಗದೆ ಇರುವುದನ್ನು ಕಾಣುತ್ತೇವೆ. ನಂತರ 'ಸಮುದಾಯ' ಹಾಗೂ ಇತರೆ ರಂಗ ಸಂಸ್ಥೆಗಳ ಹೊಸ ಚಿಂತನೆಗಳಿಂದ ನೀನಾಸಂ ಕೂಡ ತನ್ನ ಚಿಂತನೆಗಳನ್ನು ಬದಲಾಯಿಸಿಕೊಂಡಿತು. ನಾಟಕದಲ್ಲಿನ ಸಂಪ್ರದಾಯಿಕ ಅಂಶಗಳನ್ನು ವಿಜೃಂಭಿಸುವ ಪದ್ಧತಿಯು ಈಗಲು ಕಾಣಲು ಸಾಧ್ಯ. ಉದಾಹರಣೆಗೆ 'ಅಶ್ವತ್ಥಾಮನ' ನಾಟಕ ಈ ರೀತಿಯಲ್ಲಿ. 'ಸಮುದಾಯ' ಹಾಗೂ 'ನೀನಾಸಂ'ಗಳ ನಡುವೆ ಸೈದ್ಧಾಂತಿಕವಾಗಿ ತಾತ್ವಿಕ ಭಿನ್ನತೆಗಳನ್ನು ರಂಗಭೂಮಿಯ ಚರಿತ್ರೆಯ ವಿಮರ್ಶೆಗೆ ಒಳಪಡಿಸಲು ಸಾಧ್ಯವಿದೆ.

'ಸಮುದಾಯ' ದೇಶಿಯ ಪರಿಕಲ್ಪನೆಗಳನ್ನು 'ನೀನಾಸಂ' ನಾಟಕಗಳಿಗಿಂತಲೂ ಭಿನ್ನ ರೀತಿಯಲ್ಲಿ ಪ್ರಚಾರ ಪಡಿಸುತ್ತದೆ. ಉದಾಹರಣೆಗೆ 'ತುಘಲಕ್' ನಾಟಕವನ್ನು 'ಸಮುದಾಯ'ವು ಮಾರ್ಕ್ಸ್ ಚಿಂತನೆಯ ರಾಜಕಾರಣದ ಪ್ರಸ್ತುತತೆಯನ್ನು ಹೇಳಿದರೆ, 'ನೀನಾಸಂ' ರಾಜಕಾರಣವನ್ನು ಹೊರತುಪಡಿಸಿ ರಾಜನ ಆಡಳಿತದ ಅಧಃಪತನದ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಇಲ್ಲಿ ನಿರ್ದೇಶನ ಮಾಡುವವರ ತಾತ್ವಿಕ ಸಿದ್ಧಾಂತಗಳು ಸಮಾಜವಾದದ ಭಿನ್ನ ಚಿಂತನೆಗಳನ್ನು ಕಟ್ಟಿಕೊಡುತ್ತವೆ. ಹೀಗೆ 'ನೀನಾಸಂ' ಮತ್ತು 'ಸಮುದಾಯ'ಗಳು ಹವ್ಯಾಸಿ ರಂಗಭೂಮಿಗೆ ತಮ್ಮದೆ ಆದ ರಂಗ ಸಾಹಿತ್ಯವನ್ನು ನೀಡಿವೆ. ಆದರೂ ನೀನಾಸಂ ಒಂದು ವೇದಿಕೆ ಅಥವಾ ಸಂಸ್ಥೆ (ಪ್ರಾದೇಶಿಕವಾಗಿ) ಒಂದೇ ಜಿಲ್ಲೆಯಲ್ಲಿ ಬೆಳೆದಂಥದ್ದು. ಆದರೆ 'ಸಮುದಾಯ' ಜನರ ನಡುವೆ ಇದ್ದುದರಿಂದ ೩೬ 'ಸಮುದಾಯ' ಘಟಕಗಳಾಗಿ ಕರ್ನಾಟಕ ರಾಜ್ಯವೆಲ್ಲ ಆವರಿಸಿದ್ದು, ಚಾರಿತ್ರಿಕ ರಂಗ ಚಳವಳಿಗೆ ಸಹಕಾರಿಯಾಗಿದ್ದನ್ನು ನೋಡುತ್ತೇವೆ. ಹೀಗೆ 'ಸಮುದಾಯ' ಎಡಪಂಥೀಯ ಸಿದ್ಧಾಂತವನ್ನು ಮತ್ತು ನೀನಾಸಂ ಲೋಹಿಯಾ ಸಮಾಜವಾದಿ ಸಿದ್ಧಾಂತವನ್ನು ತಮ್ಮ ನಾಟಕಗಳಲ್ಲಿ ಪ್ರತಿಪಾದಿಸುತ್ತಾ ಬಂದಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಸಾಧ್ಯ.

೩. 'ಸಮುದಾಯ' ಮತ್ತು ರಾಷ್ಟ್ರೀಯ ನಾಟಕ ಶಾಲೆ(ಎನ್.ಎಸ್.ಡಿ)-೧೯೫೯

೧೯೫೯ರಲ್ಲಿ 'ರಾಷ್ಟ್ರೀಯ ನಾಟಕ ಶಾಲೆ' ದೆಹಲಿಯಲ್ಲಿ ಆರಂಭವಾಯಿತು. ಅರವತ್ತರ ದಶಕದಲ್ಲಿ ಆರಂಭವಾದ ಈ 'ರಾಷ್ಟ್ರೀಯ ನಾಟಕ ಶಾಲೆ' ಭಾರತೀಯ ರಂಗಭೂಮಿಗೆ ಒಂದು ಹೊಸ ಚಲನೆಯನ್ನೇ ನೀಡಿತು. ಇಲ್ಲಿ ರಂಗಭೂಮಿಯನ್ನು ಒಂದು ಅಧ್ಯಯನದ ಶಿಸ್ತಿಗೆ ಒಳಪಡಿಸಿ ಅಕಾಡೆಮಿಕ್ ಪರಿಸರವನ್ನು ರೂಪಿಸಿದ್ದು ಗಮನಾರ್ಹ. ಇದರಲ್ಲಿ ಮೊದಲಿಗರು ಹಾಗೂ ಪ್ರಗತಿಪರ ಚಿಂತಕಿಯಾದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಪಟ್ಟ ಶ್ರಮ ಬಹುಮುಖ್ಯ. ಏಕೆಂದರೆ ಇಡೀ ಭಾರತದಲ್ಲಿ ರಂಗಭೂಮಿ ತರಬೇತಿಗೆ ಪ್ರತ್ಯೇಕವಾಗಿ ನುರಿತ ಸಂಸ್ಥೆ ಇಲ್ಲದ ಕಾರಣ ರಾಷ್ಟ್ರೀಯ ನಾಟಕ ಶಾಲೆಯನ್ನು ಪ್ರಾರಂಭಿಸಲಾಯಿತು. ಕರ್ನಾಟಕದಿಂದ ಹಾಗೂ ಭಾರತದ ಬಹುತೇಕ ರಾಜ್ಯಗಳ ರಂಗ ವಿದ್ಯಾರ್ಥಿಗಳು ರಂಗ ಶಿಕ್ಷಣವನ್ನು ಪಡೆದಿದ್ದು ಇದೆ. ಅದರಲ್ಲಿ ಕರ್ನಾಟಕದಿಂದ ಪ್ರಸನ್ನ, ಕೆ.ವಿ.ಸುಬ್ಬಣ್ಣ, ಎಸ್.ಮಾಲತಿ, ಸಿ.ಬಸವಲಿಂಗಯ್ಯ, ಸುರೇಶ್ ಆನವಳ್ಳಿ, ಜನಾರ್ದನ(ಜನ್ನಿ) ಮುಂತಾದವರು ಎನ್.ಎಸ್.ಡಿಯಲ್ಲಿಯೇ ತರಬೇತಿ ಪಡೆದವರು. ಇವರ ನಂತರ 'ಸಮುದಾಯ' ಸಾಂಸ್ಕೃತಿಕ ತಂಡದಿಂದ ಮತ್ತು ೧೨ ಕಲಾವಿದರನ್ನು ಎನ್.ಎಸ್.ಡಿನಲ್ಲಿ ರಂಗ ತರಬೇತಿಗೆ ಕರ್ನಾಟಕದಿಂದ ಕಳುಹಿಸಿಕೊಡಲಾಯಿತು. ನಂತರ ದೆಹಲಿಯ ಎನ್.ಎಸ್.ಡಿ ರಂಗ ತರಬೇತಿ ಮುಗಿದ ಮೇಲೆ ಇವರು 'ಸಮುದಾಯ'ದ ರಂಗ ಚಳುವಳಿಯನ್ನು ಕರ್ನಾಟಕದಲ್ಲಿ ಕಟ್ಟಲು ಮುಂದಾಗುವ ಪದ್ಧತಿ ರೂಢಿಗೆ ಬಂತು. ಹೀಗೆ 'ಸಮುದಾಯ' ಹಾಗೂ ಎನ್.ಎಸ್.ಡಿಯು ರಂಗ ಚಟುವಟಿಕೆಗಳನ್ನು ಮುಂದುವರಿಸುವ ರಂಗ ಕಾರ್ಮಿಕರನ್ನು ರೂಪಿಸುವ ಒಂದು ಕಾರ್ಖಾನೆಯಾಯಿತು.

'ಸಮುದಾಯ'ದ ರಂಗ ಘಟಕಗಳನ್ನು ೧೯೭೫ರ ನಂತರ ವಿವಿಧ ಜಿಲ್ಲೆಗಳಲ್ಲೂ ವಿಸ್ತರಣೆಯಾಗಲು ಹಿಂದೆ ಎನ್.ಎಸ್.ಡಿಯಿಂದ ರಂಗತರಬೇತಿ ಪಡೆದ ರಂಗಚಿಂತಕರು ಹೊಸ ರೀತಿಯಲ್ಲಿ ಹವ್ಯಾಸಿ ರಂಗಭೂಮಿಯನ್ನು ಮುಂದುವರೆಸಿದ್ದು ಗಮನಾರ್ಹ. ನಾಟಕಗಳಲ್ಲಿ ತಾತ್ವಿಕ ಚಿಂತನೆ, ರಾಜಕೀಯ ವಿಡಂಬಣೆ, ಸಮಕಾಲೀನ ಸಮಾಜದ ಸಾಮಾಜಿಕ ಸಮಸ್ಯೆಗಳ (ಅಸ್ಪೃಶ್ಯತೆಯ ವಿರುದ್ಧ) ಬೀದಿನಾಟಕಗಳು-ರಂಗನಾಟಕಗಳ ಮೂಲಕ ಜನರ ಮುಂದಿಟ್ಟು ಸಮಸ್ಯೆಗಳನ್ನು ಪರಿಹಾರ ವ್ಯವಸ್ಥೆಯನ್ನು ನೀಡುವ ಚಿಂತನ ಪದ್ಧತಿ ಈ ಎನ್.ಎಸ್.ಡಿ ಸೇರಿದಂತೆ ಹಾಗೂ 'ಸಮುದಾಯ' ರಂಗ ಸಂಸ್ಥೆಗಳ ಕಾರ್ಯಸ್ವರೂಪದಲ್ಲಿ ಸೇರಿಕೊಂಡಿತು. ನಿರಂತರವಾಗಿ ಬೀದಿನಾಟಕ, ಸಿನಿಮಾ-ಮಾಧ್ಯಮ, ವ್ಯಂಗ್ಯಚಿತ್ರ, ಚಿತ್ರಕಲೆ, ಸಾಹಿತ್ಯ, ಕಥೆಗಳು ಕೂಡ ರಂಗ ಪಠ್ಯವಾಗಿ ಹೊಸ ಚಳವಳಿಯ ಚಿಂತನೆಗಳ ಮೂಲಕ ಸಾಹಿತ್ಯವು ಸಹ ಜನರ ಸಮಸ್ಯೆಗಳ ಪರಿಹಾರಕ್ಕೆ ಮದ್ದು ಆಗಬೇಕು ಎಂಬ ಚಿಂತನೆಗಳು ರಂಗ ಚಟುವಟಿಕೆಗಳಿಂದ ಹೆಚ್ಚು ಪ್ರಚಾರವಾದವು. ಪರಿಣಾಮವಾಗಿ ಪ್ರಸನ್ನ ಅವರು ಮುಂದೆ ಎನ್.ಎಸ್.ಡಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುವ ಮೂಲಕ ರಂಗಭೂಮಿಯಲ್ಲಿಯೇ ಬೆಳೆದರು. ರಂಗಭೂಮಿಯಲ್ಲಿ ಪ್ರಸನ್ನರಿಗೆ ಶಿಷ್ಯವರ್ಗ ಹೆಚ್ಚಾಗುತ್ತಾ ಬಂದದ್ದೂ ಉಂಟು. 'ಸಮುದಾಯ' ಹಾಗೂ 'ಎನ್.ಎಸ್.ಡಿ'ಗಳ ಸೈದ್ಧಾಂತಿಕವಾಗಿ ಒಂದೇ ಎಂಬುವುದನ್ನು ರುಜುವಾತು ಪಡಿಸಿದವು.

ಅಲ್ಲದೆ ಕರ್ನಾಟಕದಲ್ಲಿಯೂ ಕೂಡ 'ರಾಷ್ಟ್ರೀಯ ನಾಟಕ ಶಾಲೆ'ಯು ೨೦೦೯ರಲ್ಲಿ ಪ್ರಸನ್ನ ಹಾಗೂ ಚಿದಂಬರರಾವ್ ಜಂಬೆ ಅವರ ಸಹಭಾಗಿತ್ವದಲ್ಲಿ, ಬೆಂಗಳೂರಿನ ಗುರುನಾನಕ್ ಭವನದಲ್ಲಿ ತಾತ್ಕಾಲಿಕ ಕಟ್ಟಡವೊಂದರಲ್ಲಿ ಆರಂಭವಾಯಿತು. ದೆಹಲಿಯ 'ಎನ್.ಎಸ್.ಡಿ' ರೀತಿಯಲ್ಲೆ ರಂಗಪಠ್ಯ, ರಂಗ ತರಬೇತಿ, ರಂಗಸಜ್ಜಿಕೆ, ವಸ್ತ್ರಾಲಂಕಾರಗಳನ್ನು ಕಲಿಸುವ ಒಂದು ರಂಗಶಾಲೆಯಾಗಿಯೂ ಮುಂದುವರಿಯುತ್ತಿರುವುದನ್ನು ಕಾಣುತ್ತಿದ್ದೇವೆ. ಎನ್.ಎಸ್.ಡಿಯ 'ಈ ಕೆಳಗಿನವರು', 'ಮಲೆಗಳಲ್ಲಿ ಮದುಮಗಳು', ಹಾಗೂ 'ಗುಣಮುಖ' ಮುಂತಾದ ನಾಟಕಗಳನ್ನು ಚಿದಂಬರರಾವ್ ಜಂಬೆ, ಸಿ.ಬಸವಲಿಂಗಯ್ಯ ಹಾಗೂ ಬಿ.ಜಯಶ್ರೀ ಅವರ ಜೊತೆ ಜೊತೆಗೆ ಕಾಣುತ್ತೇವೆ. 'ಸಮುದಾಯ' ಹಾಗೂ 'ಎನ್.ಎಸ್.ಡಿ' ನಾಟಕಗಳಲ್ಲಿ ಒಂದಕ್ಕೊಂದು ಸಂಬಂಧದ ಪೂರಕ ಅಂಶಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಎನ್.ಎಸ್.ಡಿಯಲ್ಲಿ ತಾತ್ವಿಕವಾಗಿ ವ್ಯವಸ್ಥೆಯ ವಿದ್ರೋಹ ಕಾರ್ಯಗಳನ್ನು ಒಡೆಯುವ ಸೈದ್ಧಾಂತಿಕತೆ ಇರುವುದನ್ನು ಅದರ ನಾಟಕಗಳಿಂದ ಮತ್ತು ರಂಗವಿನ್ಯಾಸ, ಆಹಾರ್ಯ(ವಸ್ತು) ಹಾಗೂ ತಾತ್ವಿಕ ಪರಿಕಲ್ಪನೆಗಳಿಂದ ನೋಡಬಹುದಾಗಿದೆ.

ಈ. 'ಸಮುದಾಯ' ಹಾಗೂ 'ರಂಗಭಾರತಿ'-೧೯೬೪

೧೯೬೪ರಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ಎಂ.ಪಿ.ಪ್ರಕಾಶ್ ಅವರ ನೇತೃತ್ವದಲ್ಲಿ ಉತ್ತರ ಕರ್ನಾಟಕ ಹವ್ಯಾಸಿ ರಂಗ ತಂಡವಾದ 'ರಂಗಭಾರತಿ' ಪ್ರಾರಂಭವಾಯಿತು. ಎಂ.ಪಿ.ಪ್ರಕಾಶ್ ಅವರು ಬಹುವ್ಯಕ್ತಿತ್ವದ ಪ್ರತಿಭೆಯುಳ್ಳವರು. ಇವರು ವಕೀಲರಾಗಿ, ರಾಜಕಾರಣಿಯಾಗಿ, ರಂಗ ನಟರಾಗಿ, ಪ್ರಗತಿಪರ ಹೋರಾಟಗಳಲ್ಲಿ ಗುರುತಿಸಿಕೊಂಡ ಆರಂಭಿಕ ಸಮಾಜವಾದಿಗಳಲ್ಲಿ ಇವರು ಒಬ್ಬರು. ರಂಗಭಾರತಿ ತಂಡದ ಎಂ.ಪಿ.ಪ್ರಕಾಶ ಅವರು ಸಾಂಸ್ಕೃತಿಕ ರಂಗತಜ್ಞರ ಜೊತೆಯಲ್ಲಿ ಹಾಗೂ ಹೊಸ ಹೊಸ ರಂಗ ಪ್ರಯೋಗಗಳಿಗೆ ಬೆನ್ನಲುಬಾಗಿ ನಿಂತವರು. ಅಲ್ಲದೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆ 'ಸೂರ್ಯ ಶಿಕಾರಿ' ನಾಟಕದ ಅನುವಾದವನ್ನು ಸಹ ಮಾಡಿಕೊಟ್ಟರು. 'ಸೂರ್ಯ ಶಿಕಾರಿ' ನಾಟಕವು ರಂಗಭಾರತಿ ತಂಡದಿಂದ ಹಲವು ಪ್ರದರ್ಶನಗಳನ್ನು ಕಂಡಿದ್ದರೂ, 'ಸಮುದಾಯ'ದ ಮೂಲಕ ಹೆಚ್ಚು ಪ್ರಚಾರಗೊಂಡಿತು. 'ಸಮುದಾಯ' ಸಾಂಸ್ಕೃತಿಕ ತಂಡಕ್ಕೆ ಹೈದಾರಬಾದ್ ಕರ್ನಾಟಕ ಭಾಗದಲ್ಲಿ ರಂಗ ಚಳವಳಿಗಳಿಗೆ ಬೆನ್ನಲುಬಾಗಿ ನಿಂತಿದ್ದ ಸಾಂಸ್ಕೃತಿಕ ರಾಜಕಾರಣಿ ಎಂ.ಪಿ.ಪ್ರಕಾಶ ಅವರು ಅಂದರೂ ತಪ್ಪಗಲಾರದು.

೧೯೮೨ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೇ 'ಸಮುದಾಯ' ಸಂಘಟನೆ ಅಸ್ತಿತ್ವದಲ್ಲಿತ್ತು. ಅದರಲ್ಲೂ ಹೊಸಪೇಟೆ, ಹೂವಿನ ಹಡಗಲಿ ಹಾಗೂ ಹರಪ್ಪನಹಳ್ಳಿಗಳಲ್ಲಿ ಹೆಚ್ಚು ಕ್ರಿಯಾಶೀಲವಾಗಿತ್ತು. ಹೂವಿನ ಹಡಗಲಿ ಮತ್ತು ಹರಪ್ಪಹಳ್ಳಿಯಲ್ಲಿ ಎಸ್.ಎಸ್.ಹಿರೇಮಠ ಅವರ ನೇತೃತ್ವದಲ್ಲಿ ವೈಚಾರಿಕ ಚಿಂತನೆ, ಭಾಷಣ, ಕ್ರಾಂತಿ ಗೀತೆಗಳು ಹಾಗೂ ಬೀದಿನಾಟಕಗಳ ಮೂಲಕ ಸಾಮಾನ್ಯರಲ್ಲಿ ಜನಜಾಗೃತಿಯನ್ನು ಮೂಡಿಸುತ್ತಿತು. ಹಡಗಲಿ-ಹರಪ್ಪನಹಳ್ಳಿಯ ಸಂಘಟನೆಯ ಸ್ನೇಹಿತರಿಗೆ ಪ್ರಕಾಶ್ ಅವರ ಸ್ನೇಹ ಮತ್ತು ಸಹಕಾರ ಹೆಚ್ಚಿತ್ತು. ರಂಗಭಾರತಿ ತಂಡದ ಎಲ್ಲಾ ಕಲಾವಿದರು ಎಂ.ಪಿ.ಪ್ರಕಾಶ

ಅವರ ಸಹಕಾರದೊಂದಿಗೆ ಹವ್ಯಾಸಿ ನಾಟಕಗಳನ್ನು ಪ್ರದರ್ಶಿಸುವುದರ ಜೊತೆಗೆ 'ಸಮುದಾಯ'ದ ರಂಗ ಚಟುವಟಿಕೆ ಹಾಗೂ ರಂಗ ಚಳವಳಿಗಳಿಗೆ ಬೆಂಬಲವಾಗಿ ನಿಂತಿದ್ದರು.[೯] ಇದಕ್ಕೆ ಉದಾಹರಣೆಯಾಗಿ, ೧೯೮೦ರ ನರಗುಂದ ಹಾಗೂ ನವಲಗುಂದ ರೈತರ ಮೇಲೆ ನಡೆದ ಗೋಲಿಬಾರ್ ಘಟನೆಯನ್ನು ಖಂಡಿಸಿ ರೈತರೊಂದಿಗೆ 'ಸಮುದಾಯ'ವು ನರಗುಂದದಿಂದ ಬೆಂಗಳೂರಿನವರಿಗೆ ಹಮ್ಮಿಕೊಳ್ಳಲಾಯಿತು.

ಈ ಜಾಥವು ಬಳ್ಳಾರಿಗೆ ಪ್ರವೇಶಿಸಿದಾಗ ಹಡಗಲಿ-ಹರಪನಹಳ್ಳಿಯ ಭಾಗದಲ್ಲಿ ಅದ್ದೂರಿ ಸ್ವಾಗತ ನೀಡಿ, ಜಾಥಾದೊಂದಿಗೆ ಪಾಲ್ಗೊಂಡಿದ್ದರು. 'ಸಮುದಾಯ'ದ ಕಲಾವಿದರಿಗೆ ಊಟ, ವಸತಿ-ಬೀದಿನಾಟಕ ಹಾಗೂ ಭಾಷಣಗಳ ವ್ಯವಸ್ಥೆಯನ್ನು ಎಂ.ಪಿ.ಪ್ರಕಾಶರೇ ಮಾಡಿದರು. 'ರಂಗಭಾರತಿ'ಯ ಸಾಂಸ್ಕೃತಿಕ ಪ್ರಭಾವದಿಂದ 'ಸಮುದಾಯ' ಸಂಘಟನೆಯಿಂದ ಹರಪನಹಳ್ಳಿಯಲ್ಲಿ ಮುದೇನೂರು ಸಂಗಣ್ಣ, ಎಸ್.ಎಸ್.ಹೀರೆಮಠ ಅವರು 'ಜೋಗತಿಕಲ್ಲು' ಹಾಗೂ 'ಏಕಲವ್ಯ' ನಾಟಕವನ್ನು 'ಬಯಲಾಟ ಶೈಲಿ'ಯನ್ನು ನಿರ್ದೇಶಿಸಲು ಸಿ.ಬಸವಲಿಂಗಯ್ಯ ಅವರನ್ನು ಕರೆಯಿಸಿ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಇದರ ಜೊತೆಗೆ ಆಧುನಿಕ ನಾಟಕೋತ್ಸವನ್ನು ಚಿತ್ರಮಂದಿರದಲ್ಲಿ ಏರ್ಪಾಡಾಗುವಂತೆ ಹಾಗೂ ಶಿಬಿರಗಳ ವ್ಯವಸ್ಥೆ ಮೂಲಕ ರಂಗಭಾರತಿಯ ಎಂ.ಪಿ.ಪ್ರಕಾಶ್ ಅವರು 'ಸಮುದಾಯ' ಸಂಘಟನೆಗೆ ಬೆಂಬಲವಾಗಿ ನಿಂತಿದ್ದರು. ಇದರ ಜೊತೆಯಲ್ಲಿಯೇ ಎಪ್ಪತ್ತರ ದಶಕದ ಪ್ರಖ್ಯಾತ ಬರಹಗಾರರಾದ ಲಂಕೇಶ್, ಕಾರ್ನಾಡ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಕಿ.ರಂ.ನಾಗರಾಜ್, ಡಿ.ಆರ್.ನಾಗರಾಜ್ ಹಾಗೂ ಸಿದ್ಧಲಿಂಗಯ್ಯ ಮೊದಲಾದವರು ರಂಗ ಚಳವಳಿಗೆ ಪ್ರೇರಣೆ ನೀಡುವ ಅನೇಕ ವಿಚಾರ ಹಾಗೂ ನಾಟಕಗಳನ್ನು ಬರೆದರು. ಆಗ ರಂಗಭಾರತಿ-'ಸಮುದಾಯ'ದ ನಡುವೆ ಇದ್ದ ಬಿ.ವಿ.ಕಾರಂತರು ಅನೇಕ ನಾಟಕಗಳನ್ನು ನಿರ್ದೇಶಿಸಿ ಸಹಕರಿಸಿದ್ದೂ ಇದೆ. ಅಲ್ಲದೆ ಪ್ರಕಾಶ ಅವರು ಸಿ.ಜಿ.ಕೆ ಅವರನ್ನು ಪ್ರತಿಭಾವಂತ ರಂಗತಜ್ಞರಾಗಿ ಹೊಸ ಅಲೆಯ ನಾಟಕಗಳನ್ನು ಪ್ರಯೋಗಿಸಲು 'ಸಮುದಾಯ'ಕ್ಕೆ ಬೆನ್ನಲುಬಾಗಿ ಇದ್ದವರೇ ರಂಗಭಾರತಿಯ ಎಂ.ಪಿ.ಪ್ರಕಾಶ್. ಅಲ್ಲದೆ 'ಸಮುದಾಯ' ರಂಗ ಚಟುವಟಿಕೆ ಹಾಗೂ ರಂಗ ಚಳವಳಿಗಳಿಗೆ ಬಳ್ಳಾರಿಯಲ್ಲಿ ಹಾಗೂ ಕರ್ನಾಟಕದಲ್ಲಿ ತನ್ನ ಸಾಂಸ್ಕೃತಿಕ ದೇಶಿ ಹಿನ್ನೆಲೆಯಲ್ಲಿ ಹೊಸ ನಾಟಕಗಳನ್ನು ಹಾಗೂ ನಟ-ನಟಿಯರನ್ನು ಹಾಗೂ ನಿರ್ದೇಶಕರನ್ನು ನಿರಂತರವಾಗಿ ಪ್ರೋತ್ಸಾಹಿಸಿದ ಯಶಸ್ಸು ಹಿರಿಯ ರಾಜಕಾರಣಿ ರಂಗಭಾರತಿಯ ಎಂ.ಪಿ.ಪ್ರಕಾಶ್ ಅವರಿಗೆ ಸಲ್ಲುತ್ತದೆ.

'ಸಮುದಾಯ'ದ ಜೊತೆಗೆ ತಾತ್ವಿಕವಾಗಿ ಒಂದೇ ಚಿಂತನೆ ಇದ್ದರು ಕೂಡ ರಾಜಕಾರಣಿಯಾಗಿ ಸಮಾಜವಾದಿ ಹಾಗೂ ಜನತಾದಳ ಪಕ್ಷದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಹೊಂದಿದ್ದ ಎಂ.ಪಿ.ಪ್ರಕಾಶರು ಎಪ್ಪತ್ತರ ಹಾಗೂ ಎಂಬತ್ತರ ದಶಕದ ರಂಗ ಚಳವಳಿಯ ಭಾಗವಾಗಿ ಎಡ-ಪ್ರಜಾಸತ್ತಾತ್ಮಕ ಸಂಘಟನೆ ಒಂದಾಗುವಂತೆ ಮಾಡಿ ಇದರ ಶೋಷಣೆ ವಿರುದ್ಧ ಚಳವಳಿಯನ್ನು

ಕಟ್ಟುವಲ್ಲಿ 'ಸಮುದಾಯ' ಹಾಗೂ ರಂಗಭಾರತಿ ತನ್ನದೇ ಆದ ಪಾತ್ರ ವಹಿಸುತ್ತವೆ. ಆದರೆ ರಂಗಭಾರತಿ ಬಳ್ಳಾರಿ ಹಾಗೂ ಗುಲ್ಬರ್ಗಾ ಭಾಗಗಳಲ್ಲಿ ಮಾತ್ರ ತನ್ನ ವ್ಯಾಪ್ತಿಯನ್ನು ಹೊಂದಿರುತ್ತದೆ.[೧೦] ಆದರೆ 'ಸಮುದಾಯ'ವು ಇಡಿ ಕರ್ನಾಟಕವನ್ನು ಆವರಿಸುತ್ತದೆ. ಇದಕ್ಕೆ ಕಾರಣ 'ಸಮುದಾಯ'ಕ್ಕಿದ್ದ ಸೈದ್ಧಾಂತಿಕ ಬದ್ಧತೆ. ಜೊತೆಗೆ ಈ ಬದ್ಧತೆಯನ್ನು ರಂಗಭಾರತಿ ಕಲಾವಿದರು ನಿರಂತರವಾಗಿಸಿದ್ದನ್ನು ಚಾರಿತ್ರಿಕವಾಗಿ ಗುರುತಿಸಬಹುದು. ಪ್ರಸ್ತುತ ರಂಗಭಾರತಿ ತಂಡ ಹಡಗಲಿಗೆ ಮಾತ್ರ ಸೀಮಿತವಾಗಿದ್ದದ್ದು ಪ್ರಕಾಶ ಅವರ ನಿಧನದ ನಂತರ ಕುಂಟಿತವಾಗಲು ಕಾರಣವಾಯಿತು.

ಉ. 'ಸಮುದಾಯ' ಹಾಗೂ 'ಚಿತ್ರತಂಡ'-೧೯೭೨

'ಚಿತ್ರತಂಡ'ವು ಎಪ್ಪತ್ತರದಶಕದ ಪ್ರಮುಖ ರಂಗತಂಡವಾಗಿದ್ದು, ಎ.ಎಸ್.ಮೂರ್ತಿ ಹಾಗೂ ವಿಜಯಮ್ಮ ಅವರು ಜೊತೆಗೂಡಿ ಈ ಚಿತ್ರತಂಡವನ್ನು ೧೯೭೨ರಲ್ಲಿ ಕಟ್ಟಿದರು. ಎಪ್ಪತ್ತರ ದಶಕದಲ್ಲಿ ದೇಶದಲ್ಲಿ 'ತುರ್ತುಪರಿಸ್ಥಿತಿ' ಘೋಷಿಸಿದಾಗ ಪ್ರಜಾತಂತ್ರದ ಕೊರಳುಹಿಸುಕಿದ ಆ ಹೀನಾ ಆಡಳಿತ ಕ್ರಮದ ವಿರುದ್ಧ ದೇಶದ ಉದ್ದಗಲಕ್ಕೂ ಬಲವಾದ ಪ್ರತಿಭಟನೆ ಚಳವಳಿಗಳು ಹುಟ್ಟಿ, ನಾನಾ ವಲಯಗಳಲ್ಲಿ ರಾಜಕೀಯ ಎಚ್ಚರ, ಜನರಲ್ಲಿ ಉಂಟಾಗಲು ಶ್ರಮಿಸಿದರು. ಆ ಕಾಲಕ್ಕೆ ನಾಟಕಗಳನ್ನು ಬೀದಿನಾಟಕಗಳಲ್ಲೇ ಅಭಿನಯಿಸುವ ರಂಗ ಚಳವಳಿಯು ಕರ್ನಾಟಕದಲ್ಲೂ ನಡೆಯಿತು. ಇಂಥ 'ಬೀದಿನಾಟಕ' ಪ್ರಯೋಗವನ್ನು ಮಾಡಲಾಗಿದೆ. ಚಿತ್ರತಂಡದ ಮೊದಲ ಬೀದಿನಾಟಕ 'ಕಟ್ಟೆ'. ನಂತರ ಚಿತ್ರತಂಡದಲ್ಲಿ ಬೀದಿನಾಟಕಗಳನ್ನು ಅಭಿನಯಕ್ಕಾಗಿಯೇ ಏಳು ಬೀದಿನಾಟಕಗಳು ವಿಜಯಮ್ಮ ಬರೆದರು. ಅವುಗಳು 'ಬಂದರೋ ಬಂದರು', 'ಕೇಳಪ್ಪೋ ಕೇಳಿ', 'ಮುಖವಿಲ್ಲದವರು', 'ಕಸಿದವರು', 'ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ?', 'ಮಿಲೇಸುರ್ ಮೇರಾ ತುಮ್ಹಾರ', 'ಉಳ್ಳವರ ನೆರಳಲ್ಲಿ', 'ಧನ್ವಂತರಿ ಚಿಕಿತ್ಸೆ'(ಕುವೆಂಪು ಕಥೆಯ ನಾಟಕಗಳು) ಹಾಗೂ ಮಾಸ್ತಿ ಲೇಖನಗಳನ್ನು ರಂಗರೂಪಕ್ಕೆ ತಂದ ನಾಟಕಗಳು 'ಶಾಂತಾ ಮತ್ತು ಉಷಾ', 'ರೆಕ್ಕೆ ಕಟ್ಟುವಿರಾ?', 'ಕಾಮನಬಿಲ್ಲಿಗೆ' ಎಂಬ ನಾಟಕಗಳು ತಾಂತ್ರಿಕ ಸೂಕ್ಷ್ಮತೆಗಳನ್ನು ಹಾಗೂ ಅಭಿನಯದ ಕಲೆಯನ್ನು ಹೆಚ್ಚಿಸಿದವು. ವಿಜಯಮ್ಮ ಅವರ ಬೀದಿನಾಟಕಗಳು ಆರಂಭದ ಬೀದಿನಾಟಕಗಳಲ್ಲಿ ರಾಜಕಾರಣದ ತಾತ್ವಿಕ ಅಂಶಗಳು ಇಲ್ಲದೆ ಇರುವಾಗ ಹಲವಾರು ಸ್ನೇಹಿತರು ನಾಟಕದಲ್ಲಿ ಅದರಲ್ಲೂ ಬೀದಿನಾಟಕದಲ್ಲಿ ರಾಜಕಾರಣದ ವಿಡಂಬಣೆ ಅಗತ್ಯವಾಗಿ ಬೇಕು ಎಂಬುವುದನ್ನು ತಿಳಿಸಿದರು ನಂತರ ವಿಜಯಮ್ಮ ಅವರು ತಮ್ಮ ಚಿತ್ರ ತಂಡದಲ್ಲಿ ರಾಜಕೀಯ ವಿಡಂಬಣೆಯೇ ಇರುವ ನಾಟಕಗಳನ್ನು ಬರೆದು ಪ್ರದರ್ಶನಗಳನ್ನು ಮಾಡಿಸಿದರು.

'ಸಮುದಾಯ' ಹುಟ್ಟುವ ಮುಂಚಿತವಾಗಿಯೇ ಕರ್ನಾಟಕದಲ್ಲಿ ಚಿತ್ರತಂಡದ ಬೀದಿನಾಟಕಗಳು ಬೆಂಗಳೂರಿನ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದವು. ಆದರೆ 'ಸಮುದಾಯ' ಬೀದಿನಾಟಕಗಳು ಪ್ರಾರಂಭವಾದಾಗ ಅವು ಬೆಂಗಳೂರು ಸೇರಿದಂತೆ ಇತರ ಜಿಲ್ಲೆಗಳ ಹಳ್ಳಿಗಳಿಗೂ ಭೇಟಿ ನೀಡಿ 'ಜಾಥಾ'ಗಳ ಮುಖೇನ ಹಳ್ಳಿಗಳಲ್ಲಿ ರಾಜಕಾರಣದ ಜಾಗೃತಿ ಮೂಡಿಸಿದವು.[೧೧] 'ಚಿತ್ರತಂಡ'ಕ್ಕೂ

'ಸಮುದಾಯ'ಕ್ಕೂ ಇರುವ ವ್ಯತ್ಯಾಸಗಳು ಏನೆಂದರೆ ಚಿತ್ರ ತಂಡ ಕೇವಲ ಬೆಂಗಳೂರು ಮತ್ತು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿದರೆ 'ಸಮುದಾಯ' ಒಂದು ಎಡಪಂಥೀಯ ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕ ಹಾಗೂ ಹೊರ ರಾಜ್ಯಗಳಲ್ಲಿಯೂ ನಾಟಕಗಳ ಪ್ರದರ್ಶನವನ್ನು ಮಾಡಿತು. ಜೊತೆಗೆ 'ಸಮುದಾಯ' ಒಂದು ವೇದಿಕೆಯಾಗದೆ ಸದಸ್ಯತ್ವ ಮತ್ತು ಘಟಕಗಳನ್ನು ತಾಲ್ಲೂಕು, ಜಿಲ್ಲಾವಾರು 'ಸಮುದಾಯ'ದ ಘಟಕಗಳನ್ನಾ ಆರಂಭಿಸಲು ಮುಂದಾಗಿದ್ದನ್ನು ನೋಡುತ್ತೇವೆ. 'ಸಮುದಾಯ'ದ ಸಂಘಟನೆಯು ರಾಜಕಾರಣದ ಬದ್ಧತೆಯನ್ನು, ಅದರ ಶಿಸ್ತು ಮತ್ತು ಪ್ರಾಮಾಣಿಕತೆಗಳನ್ನು 'ಸಮುದಾಯ'ದ ಮುಖಂಡರಿಂದಲೇ ತೋರಿಸಿದ್ದು, ಒಂದು ಚಾರಿತ್ರಿಕ ಅಂಶವೆಂದು ರಂಗ ಚಳವಳಿಯ ಹಿನ್ನೆಲೆಯಲ್ಲಿ ಗುರುತಿಸುವುದು ಮುಖ್ಯ.

ಊ. 'ಸಮುದಾಯ' ಮತ್ತು 'ಕಲಾ ಗಂಗೋತ್ರಿ'–೧೯೭೧

೧೯೭೧ರಲ್ಲಿ ಕರ್ನಾಟಕ ರಂಗಭೂಮಿಯನ್ನು ಸಾಂಸ್ಕೃತಿಕ ಚಳವಳಿಯ ರೂಪದಲ್ಲಿ ಕಟ್ಟಿ ಬೆಳೆಸಿದ ಬೆಂಗಳೂರಿನ ಅತ್ಯಂತ ಹಳೆಯ ರಂಗತಂಡಗಳ ಪೈಕಿ 'ಕಲಾ ಗಂಗೋತ್ರಿ'ಯದೂ ಪ್ರಮುಖ ಹೆಸರು. ಈ ಕಲಾ ಗಂಗೋತ್ರಿ ಸ್ಥಾಪಕ ಬಿ.ವಿ.ರಾಜಾರಾಂ, ನಾಲ್ಕು ದಶಕಗಳಿಂದಲೂ ಬೆನ್ನೆಲುಬಾಗಿ ನಿಂತು ತಂಡಗಳನ್ನು ಮುನ್ನಡೆಸುತ್ತಿದ್ದಾರೆ. ಇವರಿಗೆ ಸದಾ ಬೆಂಗಾವಲಾಗಿ ನಿಂತ ಗೆಳೆಯ 'ಮುಖ್ಯಮಂತ್ರಿ' ಚಂದ್ರು(ಚಂದ್ರ ಶೇಖರ)ಇದ್ದಾರೆ. ಕಲಾ ಗಂಗೋತ್ರಿಯ ಬಹುತೇಕ ಎಲ್ಲಾ ನಾಟಕಗಳನ್ನು ರಾಜಾರಾಂ ಅವರೇ ನಿರ್ದೇಶನ ಮಾಡುತ್ತಿದ್ದರು. ನಾಟಕ ಪ್ರದರ್ಶನದ ಜೊತೆಗೆ ಬಡಾವಣೆ ರಂಗಚಟುವಟಿಕೆ, ಕಾಲೇಜು ರಂಗಶಿಬಿರ, ಬೀದಿನಾಟಕ, ಮಕ್ಕಳ ರಂಗಭೂಮಿ, ರಂಗವಸ್ತು, ಚಿತ್ರ ಪ್ರದರ್ಶನ, ಮೂಕಾಭಿನಯ ತರಬೇತಿ, ಚಂದ್ರು ಅವರ ಹೆಸರಿನೊಂದಿಗೆ 'ಮುಖ್ಯಮಂತ್ರಿ' ವಿಶೇಷಣವಾಗಿ ಸೇರಿಕೊಂಡಿದ್ದನ್ನೂ ಕಾಣುತ್ತೇವೆ. 'ಮುಖ್ಯಮಂತ್ರಿ' ನಾಟಕದ ಯಶಸ್ಸಿಗೆ ಸಾಕ್ಷಿಯಾಗಿ ಇದುವರೆಗೂ ೬೦೦ಭಾರಿ ಪ್ರದರ್ಶನಗೊಂಡ ಈ ನಾಟಕ ಕಲಾ ಗಂಗೋತ್ರಿಯ ಹೆಮ್ಮೆಯ ನಾಟಕಗಳಲ್ಲಿ ಒಂದು ಚಾರಿತ್ರಿಕವಾಗಿ ಗುರುತಿಸಲಾಗಿದೆ. ಅಲ್ಲದೆ ಪ್ರಮುಖ ನಾಟಕಗಳೆಂದರೆ ಮುಖ್ಯಮಂತ್ರಿ, ಮೋಡಗಳು, ಭರತಪ್ಪನ ಸೊಂಟಕ್ಕೆ ಗಂಟೆ, ಟೊಳ್ಳು ಗಟ್ಟಿ, ಎಸ್.ಎಲ್.ಭೈರಪ್ಪರ 'ಮಂದ್ರ', ಕೆ.ಎಸ್.ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ', ಮುದ್ರಾರಾಕ್ಷಸ, ಕನ್ನಂಬಾಡಿ ಕಟ್ಟದಿದ್ದರೆ? ಜೊತೆಗೆ ೨೦೦೦ರೂಗೆ ನಿರ್ಮಾಣಗೊಂಡ 'ಮೂಕಿಟಾಕಿ' ೧೭೫೦ಕ್ಕೂ ಹೆಚ್ಚು ಬಾರಿ ಪ್ರದರ್ಶನಗಳನ್ನು ಕಂಡಂಥವು. ಬೀದಿನಾಟಕವಾದ 'ಒಂದು ರೋಗದ ಕತೆ'ಯು ಸಹ ೫೦೦ ಭಾರಿ ಪ್ರದರ್ಶನಗಳನ್ನು ಕಂಡಿತು.

ಕಲಾ ಗಂಗೋತ್ರಿಯ ನಾಟಕಗಳಲ್ಲಿ ಅಭಿನಯಿಸಿದ ಅನೇಕರು ಸಿನಿಮಾ, ಧಾರವಾಹಿಗಳಲ್ಲಿ ಹೆಸರು ಮಾಡಿದರು. ದತ್ತಣ್ಣ, ಮುಖ್ಯಮಂತ್ರಿ ಚಂದ್ರು, ಸೇತುರಾಂ, ಪೃಥ್ವಿರಾಜ್, ಕಿಟ್ಟಿ, ಶ್ರೀನಿವಾಸ ಪ್ರಭು, ಕಲಾ ಗಂಗೋತ್ರಿಯ ಮಂಜು, ಮಂಜುನಾಥ ಹೆಗಡೆ, ಕಲಾಗಂಗೋತ್ರಿಯ ರವೀಂದ್ರ, ಶ್ರೀನಿವಾಸ ಮೇಷ್ಟ್ರು ಪ್ರಮುಖರು ಈ ಕಲಾ ಗಂಗೋತ್ರಿಯ ತಾತ್ವಿಕ ಚಿಂತನೆಯು ಸಹ ಆರಂಭದಲ್ಲಿ

ರವೀಂದ್ರನಾಥ ಠಾಗೂರ್, ಶೇಕ್ಸ್‌ಪಿಯರ್, ಗ್ರೀಕ್ ಭಾಷೆಯ ನಾಟಕವಾದ 'ಮೋಡಗಳು', 'ಮ್ಯಾಜಿಕ್', ಆಲ್ಬರ್ಟ್ ಕಾಮುವಿನ 'ಕಾಲಿಗುಲ', ಸ್ಟ್ರಿಂಡ್‌ಬರ್ಗ್ ಅವರ 'ಮಿಸ್ ಜೂಲಿ', ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ', 'ಬೆರಳ್‌ಗೆ ಕೊರಳ್', ಶ್ರೀರಂಗರ 'ಶೋಕಚಕ್ರ', 'ಕತ್ತಲೆಯ ಬೆಳಕು', ಸಂಸನ 'ವಿಗಡ ವಿಕ್ರಮರಾಯ' ಹಾಗೂ ಶಿವರಾಮಕಾರಂತರ 'ಮೂಕಜ್ಜಿಯ ಕನಸುಗಳು' ಆರಂಭದ ೭೦ ಹಾಗೂ ೮೦ರ ದಶಕಗಳಲ್ಲಿ ನಡೆಯುತ್ತಿದ್ದ ವ್ಯವಸ್ಥೆಯ ಬಗ್ಗೆ ರಂಗಚಿಂತನೆಯ ವಿದ್ರೋಹ ಕಾರ್ಯಮಾಡುವ ನಾಟಕಗಳೇ ಆಗಿದ್ದವು. ನಂತರ ತೊಂಬತ್ತರ ದಶಕದಲ್ಲಿ 'ಕಲಾಗಂಗೋತ್ರಿ'ಯನ್ನು ಬಿಟ್ಟು ಸಿನಿಮಾಕ್ಕೆ ಹೊರಟು ಹೋದವರು. ನಂತರ ರಾಜಾರಾಂ ಹಾಗೂ ಮುಖ್ಯಮಂತ್ರಿ ಚಂದ್ರು ನಿಧಾನವಾಗಿ ಇವರು ಸರ್ಕಾರದ ಜೊತೆಗೂಡಿ ಬಲಪಂಥೀಯ ಚಿಂತನೆಗಳ ಕಡೆಗೆ ವಾಲುವುದು ಕಲಾಗಂಗೋತ್ರಿಯ ನಾಟಕಗಳ ಆಯ್ಕೆಗಳಲ್ಲಿ ಮೂಡಿಬಂದಿದೆ.[೨] ಎಸ್.ಎಲ್.ಬೈರಪ್ಪನವರ 'ಮಂದ್ರ' ನಾಟಕವನ್ನು ಆಡಿಸುವ ಮೂಲಕ ಚಿಂತನೆಯು ರೂಪುಗೊಂಡಿದ್ದು ರಾಜಾರಾಂ ಹಾಗೂ ಚಂದ್ರು ಅವರಿಗೆ ಮುಖ್ಯಮಂತ್ರಿ ನಾಟಕದ ತಿರುಳು ಹೇಗಾದರು ಮಾಡಿ ಅನೇಕ ಕಲಾವಿದರು ತನ್ನ ಮುಖ್ಯಮಂತ್ರಿಯ ಸ್ಥಾನ ಭದ್ರಗೊಳಿಸಬೇಕೆನ್ನುವ ಬಲಪಂಥೀಯ ಚಿಂತನೆ ಹಾಗೂ ಮಂದ್ರ ಕಾದಂಬರಿಯ ಆಶಯದಂತೆ ಸಂಗೀತ ಆಧಾರಿತ ನಾಟಕದಲ್ಲಿ ಸಂಗೀತ ಕಲಿಸುವ ನೆಪದಲ್ಲಿ ಗುರು-ಶಿಷ್ಯೆಯಾದ ಹೆಣ್ಣನ್ನು ಲೈಂಗಿಕವಾಗಿ ಚಿತ್ರಿಸುವ ಅಂಶಗಳು ಈ ನಾಟಕದ ಚಿಂತನೆಗಳಾಗಿ ಎಸ್.ಎಲ್.ಬೈರಪ್ಪನವರಂತೆ ಬದಲಾಗದ ಪುರುಷ ಪ್ರಾಧಾನ್ಯತೆ ಹಾಗೂ ಏಕಪಕ್ಷೀಯ ತೀರ್ಮಾನಗಳನ್ನೇ ಕಾಣುತ್ತೇವೆ.

ಅಸಮಾನತೆಯ ಬದಲಾವಣೆಯನ್ನು ಬಯಸುವ ಕಮ್ಯುನಿಸ್ಟ್, ಸಮಾಜವಾದಿ ಚಿಂತಕ ಹಾಗೂ ಲೇಖಕರ ವಿರೋಧಿ ನೆಲೆಯಲ್ಲಿ ತಮ್ಮ ವಾದವನ್ನು ಮಂಡಿಸಿ 'ಚಾತುರ್ವರ್ಣ ಪದ್ಧತಿ' ಪೋಷಕರಾಗಿ ಮನುಸ್ಮೃತಿಯ ಚಿಂತನ ಪದ್ಧತಿಯನ್ನು ತಮ್ಮ ಬರವಣಿಗೆಯಲ್ಲಿ ನೇರವಾಗಿ ಪ್ರತಿಪಾದಿಸುವ 'ಮಂದ್ರ'ದಂತಹ ಕಾದಂಬರಿ ಆಧಾರಿತ ನಾಟಕಗಳನ್ನು ಪ್ರದರ್ಶಿಸುವ ಹಂತಕ್ಕೆ ರಾಜಾರಾಂ ಹಾಗೂ ಮುಖ್ಯಮಂತ್ರಿ ಚಂದ್ರು ಬರುತ್ತಾರೆ. ಆದರೆ 'ಸಮುದಾಯ' ಸಂಘಟನೆ ೧೯೭೮ರಲ್ಲಿ ಬೆಂಗಳೂರಿನ ರಿಸರ್ವ್ ಬ್ಯಾಂಕ್‌ನ ಪಕ್ಕದಲ್ಲಿ ವಾರದ ಕೊನೆಯಲ್ಲಿ ನಾಟಕಪ್ರದರ್ಶನ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆದುಕೊಂಡು ಬರುತ್ತಿರುತ್ತದೆ. ೧೯೭೮ರಲ್ಲಿ 'ಬೆಲ್ಚಿ' ನಾಟಕವು ಬೇರೆ ರಾಜ್ಯಗಳಿಗೆ ಪ್ರದರ್ಶನ ಮಾಡಲು ಹೋದಾಗ ನಿರಂತರವಾಗಿ ನಡೆಯುವ ವಾರದ ನಾಟಕಕ್ಕೆ ಕಲಾಗಂಗೋತ್ರಿಯ ಹೆಸರನ್ನೇ ಸೂಚಿಸಿ "ನಾವು ಬರುವವರೆಗೆ ನಿಮ್ಮ ತಂಡದಿಂದಲೇ ನಾಟಕ ಪ್ರದರ್ಶನಗಳನ್ನು ಮಾಡಿಕೊಳ್ಳಿ" ಎಂದು ಕೂಡಿಕೊಳ್ಳುವ ಚಿಂತನೆಗಳ ತಾತ್ವಿಕ ಅಂಶಗಳಲ್ಲಿ ಎರಡು ತಂಡಗಳ ಸಮನ್ವಯತೆ ಇತ್ತು. ಆದರೆ ಮಂದ್ರ ಹಾಗೂ ಇತರೆ ಬಲಪಂಥೀಯ ಚಿಂತನೆವುಳ್ಳ ನಾಟಕಗಳಿಗೆ ಒಳಗಾದ ನಂತರದ ಕಲಾಗಂಗೋತ್ರಿಯ ನಾಯಕರು ನಾಟಕಗಳ ಮೂಲಕ ಎಡ-ಸಮಾಜವಾದಿ ಚಿಂತನೆಗಳನ್ನು ತಮ್ಮ ನಾಟಕಗಳ ಮುಖೇನ ಒಡೆಯಲು ಮುಂದಾದಾಗ, 'ಸಮುದಾಯ'

ನೇರವಾಗಿ ರಾಜಕೀಯ ಚಿಂತನೆಗಳುಳ್ಳ ಪರ್ಯಾಯ 'ತೃತೀಯ ರಂಗಭೂಮಿ'ಯಾಗಿ ಬೀದಿನಾಟಕಗಳ ಮೂಲಕ ನಾಟಕಗಳನ್ನು ಮಾಡಲು ಮುಂದಾಯಿತು.

ಈ ಹಿನ್ನೆಲೆಯಲ್ಲಿ 'ತಾಯಿ', 'ಗೆಲಿಲಿಯೋ', 'ದಂಗೆಯ ಮುಂಚಿನ ದಿನಗಳು', 'ಕುರಿ', 'ತುಘಲಕ್', 'ಸಂಸ್ಕಾರ', 'ರಾವಿ ನದಿಯ ದಂಡೆಯಲ್ಲಿ', 'ಸಂಕ್ರಾಂತಿ' ಮೊದಲಾದವು ಹೋರಾಟ ಹಾಗೂ ಚಳವಳಿಯನ್ನು ಕಟ್ಟಲು, ಪ್ರೇರೇಪಿಸುವ ನಾಟಕಗಳ ಪ್ರದರ್ಶನಕ್ಕೆ 'ಸಮುದಾಯ' ಮುಂದಾಯಿತು. ಹೀಗೆ 'ಸಮುದಾಯ' ಎಡಪಂಥವಾದ ರಂಗ ಚಳವಳಿಯನ್ನು ಕರ್ನಾಟಕದಲ್ಲಿ ಗಟ್ಟಿಗೊಳಿಸುತ್ತಾ ಬಂದಿತು. ಆದರೆ ಕಲಾಗಂಗೋತ್ರಿಯ ನಾಟಕಗಳು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದು ಹಳೆಯ ತಂಡದ ನಾಟಕಕಾರರ ಚಿಂತನೆಗಳನ್ನು ಮೂಲೆಗುಂಪು ಮಾಡಿದನ್ನೂ ಕಾಣುತ್ತೇವೆ. ಉದಾಹರಣೆಗೆ 'ಮುಖ್ಯಮಂತ್ರಿ'ಯ ನಾಟಕವು 'ಚಂದ್ರು' ಅವರನ್ನು ಬಿಟ್ಟರೇ ಬೇರೆ ಯಾರು ಮಾಡಲು ಅಸಾಧ್ಯವೆಂಬ, ಕಲೆ ಒಬ್ಬರ ಸ್ವತ್ತು ಎಂಬ ಭೋಧನೆಯನ್ನು ಮಾಡಿದ ವ್ಯಕ್ತಿ ರಾಜಾರಾಂ. ಏಕೆಂದರೆ 'ಸಮುದಾಯ'ದ 'ತುಘಲಕ್' ನಾಟಕದಲ್ಲಿ ಅಭಿನಯಿಸಿದ ಸಿ.ಆರ್.ಸಿಂಹ ಅವರು ಮಾಡಿದ ಪಾತ್ರವನ್ನು ಯುವಕಲಾವಿದ 'ಸಮುದಾಯ'ದ ವೆಂಕಟೇಶ್ ಪ್ರಸಾದ್ ತುಘಲಕ್ ನಾಟಕ ಪಾತ್ರವನ್ನು ಅಭಿನಯ ಮಾಡಿದ ಎಂಬ ತಾತ್ವಿಕ ಪ್ರಶ್ನೆ ಕಲಾಗಂಗೋತ್ರಿಯು ನಿರ್ದೇಶಕರು ಹಾಕಿಕೊಳ್ಳಬೇಕು ಏಕೆಂದರೆ, ಈ ನಾಟಕದಲ್ಲಿ ಬರುವ ಬಹುಪಾಲು ರಾಜಾರಾಂ ಅವರಿಗೆ ಎಲ್ಲಾ ರೀತಿಯ ಗೌರವ ಸಲ್ಲಬೇಕು. ಜೊತೆಗೆ ಬೂರ್ಜ್ವಾ ಚಿಂತನೆಗಳ ರೂಢಿಯಿಂದ ಈ ರೀತಿಯ ಪರಿಕಲ್ಪನೆಗಳು ರಂಗಭೂಮಿಯಲ್ಲಿ ಹುಟ್ಟಿಕೊಳ್ಳುತ್ತವೆ. ಆದ್ದರಿಂದ ಈ ಚಿಂತನೆಯಿಂದ ಕಲಾಗಂಗೋತ್ರಿಯ ಮುಖ್ಯಮಂತ್ರಿ ಚಂದ್ರು ಹಾಗೂ ರಾಜಾರಾಂ ಅವರುಗಳು ಚಿಂತಿಸಬೇಕಾಗಿದೆ. ಆದರೆ 'ಸಮುದಾಯ' ಕೂಡ ಇಂತಹ ಚಿಂತನೆಗಳಿಗೆ ಒಳಗಾಗದಿರುವುದಕ್ಕೆ ಕಾರಣವೆಂದರೆ, ಅಲ್ಲಿ ನಾಟಕ ವಿಮರ್ಶೆ, ಚರ್ಚೆಗಳು, ಕಮ್ಮಟಗಳು ಹಾಗೂ ಸಮ್ಮೇಳನಗಳು ಆಗುವುದರಿಂದ ಈ ರೀತಿಯ ಬೂರ್ಜ್ವಾ ಚಿಂತನೆಗಳಿಗೆ ಅವಕಾಶ ಕಡಿಮೆ ಎಂದು ಹೇಳಲು ಬರುತ್ತದೆ. ಏಕವ್ಯಕ್ತಿಯ ಸರ್ವಾಧಿಕಾರಿ ಸಂಘಟನೆ ಮಾಡುವ ಅಧಿಕಾರ, ಎಡ-ಪ್ರಜಾಸತ್ತಾತ್ಮಕ ಸಂಘಟನೆಗಳಿಂದ ದೂರವೆಂದರೆ ತಪ್ಪಾಗಲಾರದು. ಇಲ್ಲವಾದಲ್ಲಿ ಆ ರಂಗಸಂಘಟನೆಯೇ ವಿಸ್ತಾರಗೊಳ್ಳುವುದಿಲ್ಲ.

ಖ. 'ಸಮುದಾಯ' ಹಾಗೂ 'ನಟರಂಗ'-೧೯೭೨

೧೯೭೨ರಲ್ಲಿ ಬೆಂಗಳೂರಿನ ಬಸವನಗುಡಿಯ ನ್ಯಾಶನಲ್ ಕಾಲೇಜಿನ ವಿದ್ಯಾರ್ಥಿಗಳು ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದರು. ಅದಕ್ಕೆ ಮಾರ್ಗದರ್ಶಕರಾಗಿದ್ದು ಇದೇ ಕಾಲೇಜಿನ ಸ್ಥಾಪಕರಲ್ಲಿ ಒಬ್ಬರಾದ ಹೆಚ್.ನರಸಿಂಹಯ್ಯ ಅವರು(ಪ್ರಾಂಶುಪಾಲರು). ಜೊತೆಗೆ ಮೇಕಪ್‌ನಾಣಿ ಬಿ.ವಿ.ಕಾರಂತ, ಎಂ.ಎಸ್.ಸತ್ಯು, ಬಿ.ಚಂದ್ರಶೇಖರ್ ಹಾಗೂ ಮುಖ್ಯವಾಗಿ ಸಿ.ಆರ್.ಸಿಂಹ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಕಪ್ಪಣ್ಣ ಅವರು ಕಾರ್ಯನಿರ್ವಹಿಸಲು ಮುಂದಾಗುತ್ತಾರೆ. ಸಿ.ಆರ್.ಸಿಂಹ ಹಾಗೂ ಕಪ್ಪಣ್ಣ ನಿರಂತರವಾಗಿ ಹೊಸಬಗೆಯ ನಾಟಕಗಳಿಗೆ ಹೊಸ ರೀತಿಯ ಮೇಕಪ್, ರಂಗ

ವಿನ್ಯಾಸಗಳನ್ನು ಮಾಡುವಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರು. ಈ 'ನಟರಂಗ'ದ ಪ್ರಮುಖ ನಾಟಕಗಳು, ಚಿಕ್ಕವೀರ ರಾಜೇಂದ್ರ, ಕುರುಡು ಕಾಂಚಾಣ, ಎಲ್ಲಾ ನನ್ ಮಕ್ಕಳೇ, ಅಧಃಪಾತಾಳ. ಸಮಾಜ ವಿಜ್ಞಾನಿ ಜಿ.ಎನ್.ನಾಗರಾಜ್ ಅವರು ಹೇಳುವಂತೆ 'ಸಮುದಾಯ' ಪ್ರಾರಂಭವಾಗುವ ಮುಂಚಿತವಾಗಿಯೇ ಪ್ರಗತಿಪರವಾದ ನಾಟಕಗಳನ್ನು ನಟರಂಗ ತಂಡ ನಡೆಸಿಕೊಡುತ್ತಿತ್ತು. ಜೊತೆಗೆ ನಿರಂತರವಾಗಿ ರಂಗಪ್ರಿಯರನ್ನು ಆಕರ್ಷಿಸಲು ಹೊಸರೀತಿಯ ಪ್ರಯೋಗಳನ್ನು ಮಾಡುತ್ತಿತ್ತು. ಈ ನಟರಂಗ ತಂಡ ನಾಟಕಗಳು ಮಧ್ಯಮವರ್ಗದಲ್ಲಿ ಜಾಗೃತಿಯನ್ನು ಸಹ ಮೂಡಿಸುತ್ತಿದ್ದವು. ಹೀಗೆ ನಟರಂಗದ ಸಿ.ಆರ್.ಸಿಂಹ ಸಿನಿಮಾದಲ್ಲಿ ಹೆಚ್ಚು ಜನಪ್ರಿಯ ನಟನಾಗಿ ಹೊರಬಂದರೆ, ಕಪ್ಪಣ್ಣ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮಗಳ ರೂವಾರಿಯಾಗಿ ತಮ್ಮನ್ನು ತಾವು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು ಈ ಘಟ್ಟದಲ್ಲಿ ಕಪ್ಪಣ್ಣ, ಬಿ.ವಿ.ಕಾರಂತ, ಸಿ.ಅಶ್ವತ್ಥ್, ಮಾಯಾರಾವ್, ಆರ್.ಕೆ.ಸೂರ್ಯನಾರಾಯಣ ಮುಂತಾದವರ ಜೀವನಾಧಾರಿತ ಸೂಕ್ಷ್ಮ ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ನಟರಂಗ ತಂಡವು ಪ್ರಗತಿಶೀಲ ಸಾಹಿತ್ಯದಿಂದ ಹೆಚ್ಚು ಪ್ರಭಾವಿತವಾಗಿ ಕರ್ನಾಟಕ ಹವ್ಯಾಸಿ ರಂಗಭೂಮಿಗೆ ತನ್ನದೇ ಆದ ಸೇವೆ ಸಲ್ಲಿಸಿದೆ. ೧೯೭೫ರಲ್ಲಿ 'ಸಮುದಾಯ' ಸಂಘಟನೆ ಪ್ರಾರಂಭವಾದಾಗ ನಟರಂಗ ಕೂಡ ರಂಗಚಟುವಟಿಕೆಗಳಲ್ಲಿ ಸಕ್ರೀಯವಾಗಿತ್ತು. ನಂತರ ನಟರಂಗ ಒಂದು ವೇದಿಕೆಯಾಗಿ ಬೆಂಗಳೂರು ತಂಡವಾಗಿ ಕಾರ್ಯಸ್ವರೂಪವನ್ನು ಹಾಕಿಕೊಂಡಿತು. ತಾತ್ವಿಕವಾಗಿ ಸಮಾಜದ ಸಮಸ್ಯೆಗಳಿಗೆ ವಿದ್ರೋಹವುಳ್ಳ ನಾಟಕಗಳ ಆಯ್ಕೆಯಲ್ಲಿ ನಟರಂಗ ನೈಪುಣ್ಯತೆ ತೋರಿತು ಎಂದು ಹೇಳಲಾಗುತ್ತದೆ. ಆದರೆ 'ಸಮುದಾಯ' ಸಂಘಟನೆಯು ಮಧ್ಯಮವರ್ಗದ ಜೊತೆಗೆ ಹಳ್ಳಿಗಳಿಗೆ ಪ್ರವೇಶಿಸಿದ್ದು ಸಹ ವಿಶೇಷವೇ. ಅದು ಬೀದಿನಾಟಕ ಹಾಗೂ ಜಾಥಾಗಳ ಮುಖೇನ ಈ ತಂಡಗಳು ಪರಸ್ಪರ ಕೂಡಿಕೊಳ್ಳುವಿಕೆ ಸಂಬಂಧವಿದ್ದು, ನಟರಂಗದಲ್ಲಿ ಇದ್ದವರು 'ಸಮುದಾಯ' ಸಂಘಟನೆಯಲ್ಲಿ ಸಕ್ರೀಯವಾಗಿ ಕಾರ್ಯನಿರ್ವಹಿಸಿದ್ದಾರೆ. ಆದರೆ ನಟರಂಗ ಒಂದು ತಾತ್ವಿಕ ಬದ್ಧತೆವುಳ್ಳ ಸಂಸ್ಥೆಯಾಗಿ ಬೆಳೆದಂಥದ್ದು. ೯೦ರ ದಶಕದಲ್ಲಿ ಸ್ವಲ್ಪಮಟ್ಟಿಗೆ ಕುಸಿತ ಕಂಡಿತು ಎಂದು ಚಾರಿತ್ರಿಕವಾಗಿಯೇ ಗುರುತಿಸಲು ಸಾಧ್ಯ

ಎ. 'ಸಮುದಾಯ' ಹಾಗೂ 'ರಂಗ ಸಂಪದ'-೧೯೭೨

೧೯೭೦ರ ದಶಕ ವೈಚಾರಿಕ ನಾಟಕಗಳ ಸುಗ್ಗಿ ಕಾಲ. ಎಪ್ಪತ್ತರ ಈ ದಶಕದಲ್ಲಿ ಸಾಂಸ್ಕೃತಿಕ ರಂಗ ತಂಡ ಹಾಗೂ ಸಂಘಟನೆಗಳು ರಂಗಭೂಮಿಯ ಸಾಂಸ್ಕೃತಿಕ ಚಳವಳಿಗಳಾಗಿ ಮಾರ್ಪಟ್ಟಿದ್ದು ತುಂಬಾ ವಿಶೇಷ. ೧೯೭೨ರಲ್ಲಿ ಜೆ.ಲೋಕೇಶ್, ಆನಂದ್, ಹರಿಕೃಷ್ಣ, ಆರ್.ನಾಗೇಶ್ ಎಲ್ಲರೂ ಸೇರಿ 'ರಂಗಸಂಪದ'ವನ್ನು ಹುಟ್ಟುಹಾಕಿದರು. ಜೊತೆಗೆ ಇವರು ೧೯೮೮ರಲ್ಲಿ ಮಾಲತಿರಾವ್ ಅವರೊಡನೆ ಸೂತ್ರಧಾರ, ಗಂಗಾಧರಯ್ಯ, ಅವರೊಡನೆ 'ಜನ ನಾಟ್ಯ ಮಂಡಳಿ' ಹೀಗೆ ಹಲವಾರು ನಾಟ್ಯ ಸಂಸ್ಥೆಗಳೊಡನೆ ಆರ್.ನಾಗೇಶ್ ಒಡನಾಟದಲ್ಲಿದ್ದರು. ಶ್ರೀರಂಗ, ಪಿ.ಲಂಕೇಶ್, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಪಾಟೀಲ, ಚಂದ್ರಶೇಖರ ಕಂಬಾರರ ನಾಟಕಗಳನ್ನು ರಂಗಕ್ಕೆ ತಂದು

ಪೂರ್ಣಚಂದ್ರ ತೇಜಸ್ವಿ, ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ, ಕಾರಂತರ ಕಾದಂಬರಿಗಳಿಗೆ ರಂಗ ರೂಪ ಕೊಟ್ಟವರು ಆರ್.ನಾಗೇಶ್. ಹೀಗೆ ಅವರು ಕಥೆಯಾಧಾರಿತ ನಾಟಕಗಳಿಗೆ ಹೊಸ ಪ್ರೇಕ್ಷಕ ವರ್ಗ ಹುಟ್ಟಲು ಕಾರಣಕರ್ತರಾದರು. ಕುಬಿ ಮತ್ತು ಇಯಾಲ, ನೀಕೊಡೆ ನಾಬಿಡೆ, ಗೆಲಿಲಿಯೋ, ಕದಡಿದ ನೀರು, ಬಿ.ವಿ.ವೈಕುಂಠರಾಜು ರವರ ಸನ್ನಿವೇಶ ನಾಟಕಕ್ಕೆ ಬೆಳಕಿನ ವಿನ್ಯಾಸಕ ಆರ್.ನಾಗೇಶ್, ಜೊತೆಗೆ ಅಸಂಗತ ನಾಟಕಗಳಿಗೆ ರಚಿಸಿದ ರಂಗ ಸಜ್ಜಿಕೆ, ಚೋಮ, ತಬರನ ಕಥೆ, ಯಯಾತಿ, ಕೃಷ್ಣೇಗೌಡನ ಆನೆ, ಹೀಗೆ ಹಲವಾರು ತಂಡಗಳನ್ನು ಸೇರಿಸಿಕೊಂಡು ನಡೆಸಿಕೊಟ್ಟರು.

ಬಿ.ಚಂದ್ರಶೇಖರ್ ನಿರ್ದೇಶಿಸಿದ 'ತುಘಲಕ್' ನಾಟಕಕ್ಕೆ ಭಿನ್ನರೀತಿಯಲ್ಲಿ ರಂಗಸಜ್ಜಿಕೆ ಮಾಡಲಾಯಿತು. ಆರ್.ನಾಗೇಶ್ ಜೊತೆಗೆ ದೂರದರ್ಶನಕ್ಕಾಗಿ 'ರಂಗವಿಹಂಗಮ' ಎಂಬ ಸಾಕ್ಷ್ಯಚಿತ್ರ ತಯಾರಿಸಿದ್ದರು. ರಂಗಪತ್ರಿಕೆ 'ಸೂತ್ರದಾರ' ಹೊರತಂದ ಕೀರ್ತಿಯೂ ಆರ್.ನಾಗೇಶ್ ಅವರಿಗೆ ಸಲ್ಲುತ್ತದೆ. ಹೀಗೆ ರಂಗಸಂಪದ ಜೊತೆ ಜೊತೆಗೆ ನಿರಂತರವಾಗಿ ಸಂಬಂಧವನ್ನು ಇಟ್ಟುಕೊಂಡಂತಹ ಆರ್.ನಾಗೇಶ್ ಅವರು ಕನ್ನಡ ರಂಗ ಚಳವಳಿಯ ಧೃವತಾರೆಯಾದ ಮ.ರಾಮಮೂರ್ತಿ ಅವರನ್ನು ಕಂಡರೆ ತುಂಬಾ ಆತ್ಮೀಯತೆ ಇತ್ತು. ಏಕೆಂದರೆ, ಆರ್.ನಾಗೇಶ್ ಅವರಿಗೆ ಕನ್ನಡ ನುಡಿಯ ಬಗ್ಗೆ ಇದ್ದಂತಹ ಅಪಾರ ಗೌರವವು ಮ.ರಾಮಮೂರ್ತಿಯ ಪ್ರಭಾವದಿಂದ ಸಿಕ್ಕಿದ್ದು ಎಂದು ಹೇಳಬಹುದಾಗಿದೆ. ಆದ್ದರಿಂದ ಮುಂದೆ ಆರ್.ನಾಗೇಶ್, ಸಿ.ಜಿ.ಕೆ ಅವರ ಪ್ರಭಾವದಿಂದ 'ಸಮುದಾಯ' ಸಂಘಟನೆಯಲ್ಲಿ ಸಕ್ರಿಯವಾಗಿ ರಂಗಸಜ್ಜಿಕೆ ಹಾಗೂ ಇತರ ರಂಗಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.[೧೩] ಇವರು 'ನಟರಂಗ', 'ಬೆನಕ', 'ಸಮುದಾಯ', 'ರಂಗಸಂಪದ' ಎಲ್ಲಾ ತಂಡಗಳಲ್ಲಿಯು ಸಕ್ರಿಯವಾಗಿ ಭಾಗವಹಿಸುತ್ತಿದ್ದುದು, ಅದರಲ್ಲೂ ಹೆಚ್ಚಾಗಿದ್ದುದು 'ರಂಗಸಂಪದ'ದಲ್ಲಿಯೇ ಎನ್ನಬಹುದು. ಹೀಗೆ ಆರ್.ನಾಗೇಶ್ ತನ್ನ ಜೀವನವನ್ನೇ ರಂಗಭೂಮಿಗೆ ಅದರಲ್ಲೂ ರಂಗದ ಹಿಂದಿನ ಕೆಲಸಗಳಿಗೆ ಮೀಸಲಾಗಿಟ್ಟಿದ್ದುದು ಗಮನಾರ್ಹ.

೧೯೭೨ರಲ್ಲಿ ರವೀಂದ್ರ ಕಲಾಕ್ಷೇತ್ರದ ಹೊರಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜತೆಗೂಡಿ ಬಿ.ವಿ.ಕಾರಂತರ ನಿರ್ದೇಶನದಲ್ಲಿ 'ದೊರೆ ಈಡಿಪಸ್', ಪಿ.ಲಂಕೇಶ್‌ರ ನಾಟಕ 'ಸಂಕ್ರಾಂತಿ', ಹಾಗೂ ಚಂದ್ರಶೇಖರ ಕಂಬಾರರ 'ಜೋಕುಮಾರ ಸ್ವಾಮಿ' ನಾಟಕಗಳ ಪ್ರದರ್ಶನವನ್ನು ಮಾಡಿದರು. ಇದು ರಂಗಭೂಮಿಯಲ್ಲಿ ಹೊಸ ಚರಿತ್ರೆಯನ್ನೇ ಸೃಷ್ಟಿಸಿತು. ಈ ಕಾರ್ಯಕ್ರಮದ ನಂತರ ರಂಗಸಂಪದ, ಬೆನಕ, ನಟರಂಗ, 'ಸಮುದಾಯ' ಹಾಗೂ ಸ್ಪಂದನ ಮುಂತಾದ ರಂಗ ತಂಡಗಳು ಹುಟ್ಟಿಕೊಂಡವು. ಆದರೆ 'ಸಮುದಾಯ' ತಂಡ ಮಾತ್ರವೇ ತನ್ನ ವ್ಯಾಪ್ತಿಯನ್ನು ಬೆಂಗಳೂರಿಗೆ ಸೀಮಿತಮಾಡದೆ, ಕರ್ನಾಟಕದಲ್ಲಿ ತನ್ನ 'ಸಮುದಾಯ' ಘಟಕಗಳನ್ನು ಸ್ಥಾಪಿಸಿತು ಅಲ್ಲಿ ರಂಗಶಿಕ್ಷಣದ ಮುಖೇನ ನಾಟಕಗಳ ತರಬೇತಿ ಕಾರ್ಯಗಳ ಮುಖಾಂತರ ಬೀದಿನಾಟಕ ಹಾಗೂ ರಂಗನಾಟಕಗಳ ಪ್ರದರ್ಶನದ ಮೂಲಕ ಕರ್ನಾಟಕದಲ್ಲಿ ರಂಗ ಚಳವಳಿಯನ್ನು ಗಟ್ಟಿಯಾಗಿ ಕಟ್ಟಲು ಮುಂದಾಗಿದ್ದು, ಒಂದು ಚಾರಿತ್ರಿಕ ಜರೂರು ಆಗಿತ್ತು.

ವಿ. 'ಸಮುದಾಯ' ಹಾಗೂ 'ರಂಗನಿರಂತರ'–೧೯೮೭

೧೯೭೫ರಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಮೊದಲ ಕಾರ್ಯದರ್ಶಿಯಾಗಿ ಸಿ.ಜಿ.ಕೃಷ್ಣಸ್ವಾಮಿ ಅವರು, ಅಧ್ಯಕ್ಷರಾದ ಪ್ರಸನ್ನ ನಂತರ(೧೯೮೭ರ ನಂತರ) ಸಿ.ಜಿ.ಕೆ. 'ಸಮುದಾಯ' ಸಂಘಟನೆಯಿಂದ ದೂರ ಉಳಿದು ತಮ್ಮದೇ ಆದ ಒಂದು ಹೊಸ ರಂಗತಂಡವನ್ನು ಕಟ್ಟುತ್ತಾರೆ. ಅದೇ 'ರಂಗನಿರಂತರ' ಇದರ ನಂತರ ಸಿ.ಜಿ.ಕೆ, ಸಾಣೇಹಳ್ಳಿಯ 'ಶಿವಸಂಚಾರ' ಎಂಬ ರಂಗತಂಡವನ್ನು ಕಟ್ಟುವಲ್ಲಿ ಮುಂದಾಳತ್ವ ವಹಿಸಿದ ರಂಗಕರ್ಮಿ. ಏಕೆಂದರೆ ಇಲ್ಲಿ ತಾತ್ವಿಕ ಸಂಘರ್ಷಗಳು, ವೈಯಕ್ತಿಕ ಕಾರಣಗಳು ಆರ್ಥಿಕ ಕಾರಣಗಳು ಹಾಗೂ ರಾಜಕೀಯ ಕಾರಣಗಳು ಏನೇ ಇದ್ದರೂ ಹೊಸ ರಂಗನಿರಂತರ ತಂಡ ಮಾಡಿದ ಚಟುವಟಿಕೆಯು ಚಾರಿತ್ರಿಕವಾದದ್ದು. ೧೯೮೭ರಲ್ಲಿ ಕಟ್ಟಿ ಪೋಷಿಸಿದ, ಬೆಳೆಸಿದ 'ರಂಗನಿರಂತರ' ತಂಡದ ರಂಗಭೂಮಿ ಚಟುವಟಿಕೆಗಳು ಜನಸಮೂಹದಿಂದ ಜನಸಮೂಹಕ್ಕಾಗಿ ಸಂವಹನ ಮಾಧ್ಯಮವಾಗಬೇಕು.[೧೪] ಒಂದರ ನಡುವೆ ಒಂದು ಕೊಂಡಿಯಿದ್ದಾಗಲೇ ಹವ್ಯಾಸಿ ರಂಗಭೂಮಿಗೆ ಉಳಿವು, ಗೆಲುವು ಎಂಬ ಸದಾಶಯವು ರಂಗನಿರಂತರದ ಹಿಂದೆ ಇತ್ತು. ಸಮಕಾಲೀನ ಚಿಂತನೆಗಳು ತಂಡದ ಮುಂದಿದ್ದವು. ಈ ಎಲ್ಲಾ ಪ್ರಶ್ನೆಗಳಿಗೂ ತಂಡ ತನ್ನ ನಾಟಕಗಳ ಮೂಲಕ ಹಾಗೂ ನಾಟಕಗಳಿಗೆ ಜನಸಮುದಾಯವನ್ನು, ವಿಶೇಷವಾಗಿ ಯುವಜನರನ್ನು ತೊಡಗಿಸಿಕೊಳ್ಳುವುದರ ಮೂಲಕ ಉತ್ತರ ಕೊಡಲು ಮುಂದಾಯಿತು.

೧೯೮೭ರ ೧೫ದಿನಗಳ ರಂಗನಿರಂತರ ನಾಟಕೋತ್ಸವ, ೧೯೮೮ರಲ್ಲಿ ನಡೆದ ಗ್ರಾಮಸಮಾಜ ನಾಟಕೋತ್ಸವ, ೧೯೮೯ರಲ್ಲಿ ವಿದ್ಯಾರ್ಥಿಗಳಿಗಾಗಿಯೇ ನಡೆದ ೧೦ದಿನಗಳ ರಂಗ ಚೈತ್ರೋತ್ಸವ, ರವೀಂದ್ರ ಕಲಾಕ್ಷೇತ್ರಕ್ಕೆ ೩೦ ತುಂಬಿದ ಸಂದರ್ಭದಲ್ಲಿ ನಡೆದ ಸಾಂಸ್ಕೃತಿಕ ಜಾತ್ರೆ ಮುಂತಾದವು ರಂಗನಿರಂತರ ತಂಡವು ಬೆಳೆಯಲು ಕಾರಣವಾಯಿತು. ನಾಟಕದ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎಂಬುದು 'ಸಮುದಾಯ'ದ ಸಂದರ್ಭದಲ್ಲೇ ಸಾಬೀತಾಗಿತ್ತು. ಅದೇ ಮಾದರಿಯನ್ನು ರಂಗನಿರಂತರದಲ್ಲೂ ಮುಂದುವರಿಸುವ ಬಯಕೆ ಸಿ.ಜಿ.ಕೆ ಅವರದಾಗಿತ್ತು. ಅದಕ್ಕೇಂದೇ ಅವರು 'ಗ್ರಾಮಸಮಾಜ ನಾಟಕೋತ್ಸವ' ಏರ್ಪಡಿಸಿದ್ದು. ಅದರಲ್ಲಿ ಸಣ್ಣ ಕತೆಗಳು, ಕಾದಂಬರಿಗಳು, ಸಾಮಾಜಿಕ ಘಟನೆಗಳಿಂದ ಒಂಬತ್ತು ನಾಟಕಗಳು ರೂಪುಗೊಂಡವು. ಅವುಗಳು 'ಕಳ್ಳಿಯಲ್ಲಿ ಕೆಂಪು ಹೂವು', ಕೊಂಬಿನವರು, ಮಟ್ಟಕ್ಕನ ಮೆಡಿಕಲ್ ಕಾಲೇಜು, ಊನ, ಸುರಂಗ, ಬೇಸ್ತು, ಗಾಂಧಿಸಂತಾನ, ಮೌನಿ, ದೇವರ ಹೂವು, ಮೊದಲಾದ ನಾಟಕಗಳನ್ನು ರಂಗನಿರಂತರ ತಂಡವು ಗ್ರಾಮಸಮಾಜ ರಂಗೋತ್ಸವಗಳು ನಿಜದ ಅರ್ಥದಲ್ಲಿ ರಾಜಕೀಯ, ಜಾತಿ–ಮತಗಳ ಪಾರಂಪರಿಕ ಯಜಮಾನಿಕೆಗೆ ಕೊನೆ ಹಾಡುವ ಪ್ರಯತ್ನಗಳೇ ಆಗಿದ್ದವು. ಜನರು ಹೇಳಬೇಕಿದ್ದ, ಕೇಳಬೇಕಿದ್ದ ಪ್ರಶ್ನೆಗಳನ್ನು, ಸವಾಲುಗಳನ್ನು ನಾಟಕಗಳು ಸರ್ಕಾರದ ಮುಂದೆ, ಸಮಾಜದ ಮುಂದಿಡುತ್ತಿದ್ದವು.

ರಂಗಭೂಮಿಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಹೊಣೆಗಾರಿಕೆಯು ಇದೆ ಎಂಬುದನ್ನು 'ಸಮುದಾಯ'ದ ನಂತರ ಎತ್ತಿ ಹಿಡಿದದ್ದು 'ರಂಗನಿರಂತರ' ತಂಡ. ಕನ್ನಡ ರಂಗಭೂಮಿಯ

ಚರಿತ್ರೆಯಲ್ಲಿ ಮರೆಯಲಾಗದ ಹೆಸರು ಸಿ.ಜಿ.ಕೃಷ್ಣಸ್ವಾಮಿ. ರಂಗದ ಜಂಗಮರಲ್ಲಿ ಬೆಳಗದ ಬ್ಯಾಕ್‌ಸ್ಟೇಜ್(ರಂಗದ ಹಿಂದಿನ) ಕುಶಲಕರ್ಮಿಗಳನ್ನು ಬೆಳಕಿಗೆ ಬರುವಂತೆ ಮಾಡಿದವರು. ಹಾಗೆ ೧೯೮೭ ಫೆಬ್ರವರಿ ಒಂಬತ್ತರಂದು ಸಿ.ಜಿ.ಕೆ ಅವರು ಕನ್ನಡ ರಂಗಭೂಮಿ ಬಗ್ಗೆ ಕಂಡಿದ್ದ ಕನಸನ್ನು ಕೈಹಿಡಿದು ನಡೆಸುತ್ತಿದೆ ರಂಗನಿರಂತರ ತಂಡ. ಈ ತಂಡದಲ್ಲಿ ಡಿ.ಕೆ.ಚೌಟ, ಚೆನ್ನಪ್ಪ, ಕೆ.ಜಿ.ವಿಶ್ವನಾಥ್, ಶಶಿಧರ್ ಅಡಪ, ಸರ್ವೆಶ್ ಪ್ರಸ್ತುತ ರಂಗನಿರಂತರ ಪ್ರಧಾನ ಕಾರ್ಯದರ್ಶಿ, ಜೆ.ಪಿ.ಒ.ಚಂದ್ರು ಅಧ್ಯಕ್ಷ ಬಿ.ವಿಠ್ಠಲ್ (ಅಪ್ಪಯ್ಯ), ಎಂ.ರವಿ, ಸೋಮಶೇಖರ್, ಮುಕುಂದಯ್ಯ, ಮೈಕೊ ಶಿವಣ್ಣ, ಬಿ.ಜಿ.ರಾಮಕೃಷ್ಣ, ರೇಣುಕಾರೆಡ್ಡಿ, ಅಜಯ್, ಅನಂತ ಪದ್ಮನಾಭ, ಪ್ರಶಾಂತ್ ಕುಲಕರ್ಣಿ, ಶೃಂಗೇಶ್, ಜೆ.ಪಿ.ಒ.ರವಿ, ಗೀತಾ ಸುರತ್ಕಲ್, ಜಯಶ್ರೀ ಅವರು ಪ್ರಸ್ತುತ ರಂಗನಿರಂತರ ಮುಖ್ಯಕಾರ್ಯಕರ್ತರು. ಹೀಗೆ ಸಿ.ಜಿ.ಕೆ ರಂಗನಿರಂತರ ತಂಡವನ್ನು ಬೆಂಗಳೂರಿಗೆ ಸೀಮಿತವಾಗಿ ಕಟ್ಟಿದರು. ಆದರೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಹಾಗೇ ಕಟ್ಟಲು ಸಾಧ್ಯವಾಗಿಲ್ಲ. ಕಾರಣ 'ಸಮುದಾಯ' ಬೆಂಬಲವಾಗಿ ಇದ್ದಂತಹ ರಾಜಕೀಯ ಪಕ್ಷ ಎಂದರೇ ಸಿ.ಪಿ.ಐ(ಎಂ). ಪಕ್ಷದ ರೀತಿಯಲ್ಲಿಯೇ 'ರಂಗನಿರಂತರ' ತಂಡಕ್ಕೆ ಇಲ್ಲದೇ ಇರುವುದು ಮತ್ತೆ ಸಿ.ಜಿ.ಕೆಗೆ. ತೊಂಬತ್ತರ ದಶಕದಲ್ಲಿ ಹೀಗೆ ಅನ್ನಿಸಿದೆ. 'ಸಮುದಾಯ' ಸಂಘಟನೆಗೆ "ಮತ್ತೆ ನಾನು ವಾಪಸ್ಸು ಬರಬೇಕು" ಎಂದು ಅನಿಸಿದರೂ ಸಿ.ಜಿ.ಕೆ ಅವರೇ ದೂರ ಇದ್ದರು. ಮಾನಸಿಕವಾಗಿ 'ಸಮುದಾಯ'ದ ಜೊತೆ ನಿರಂತರವಾಗಿ ಇದ್ದುದು ಕಾಣುತ್ತೇವೆ. ಹೀಗೆ 'ಸಮುದಾಯ' ಮತ್ತು 'ರಂಗನಿರಂತರ' ಒಂದೇ ತಾತ್ವಿಕ ಸಿದ್ಧಾಂತವನ್ನು ತನ್ನ ನಾಟಕಗಳಲ್ಲಿ ಪ್ರತಿಪಾದಿಸುತ್ತಾ ಬಂದಿವೆ. ಆದರೆ ಕರ್ನಾಟಕದಲ್ಲಿ ಬಹುತೇಕ ಜಿಲ್ಲೆಗಳಲ್ಲಿ 'ಸಮುದಾಯ' ಸಂಘಟನೆ ಮಾತ್ರ ಬೆಳೆದಿರುವುದು. 'ಸಮುದಾಯ' ಸಂಘಟನೆಗಿರುವ ಪ್ರಜಾಸತ್ತಾತ್ಮಕತೆಯ ರೀತಿಯಲ್ಲಿಯೇ 'ಸಮುದಾಯ'ದ ಘಟಕಗಳ ಮುಖಂಡರನ್ನು ಸಹ ಆಯ್ಕೆ ಮಾಡುವ ವಿಧಾನದಿಂದ 'ಸಮುದಾಯ' 'ಸಂವಿಧಾನ' ನೀತಿ–ನಿಯಮಗಳಿಂದ ಗುರುತಿಸಿಕೊಂಡಿದೆ.

ಐ. 'ಸಮುದಾಯ' ಮತ್ತು 'ರಂಗಾಯಣ'-೧೯೮೯

೧೯೮೯ರಲ್ಲಿ ಮೈಸೂರಿನಲ್ಲಿ ಬಿ.ವಿ.ಕಾರಂತರು ಮೊದಲ ನಿರ್ದೇಶಕರಾಗಿ 'ರಂಗಾಯಣ' ಪ್ರಾರಂಭವಾಗುತ್ತದೆ. ರಂಗಾಯಣವು ಒಂದು ರಾಜ್ಯಸರ್ಕಾರದ ಆಧೀನದಲ್ಲಿ ಕಾರ್ಯನಿರ್ವಹಿಸುವಂತಹ ಒಂದು ರಂಗಭೂಮಿ ತರಬೇತಿ ಸಂಸ್ಥೆಯಾಗಿ ಹುಟ್ಟುಕೊಳ್ಳುತ್ತದೆ. ಏಕೆಂದರೆ ಸರ್ಕಾರವು ರಾಜ್ಯದಲ್ಲಿ ರಂಗಚಟುವಟಿಕೆಗಳಿಗೆ ಒಂದು ನಿರ್ದಿಷ್ಟ ಸಂಸ್ಥೆ ಇರುವುದಿಲ್ಲ ಎಂಬ ಕಾರಣಕ್ಕಾಗಿ ಬಿ.ವಿ.ಕಾರಂತರ ಮುಖೇನ ಮೈಸೂರಿನ ಸಾಂಸ್ಕೃತಿಕ ನಗರದಲ್ಲಿ 'ರಂಗಾಯಣ'ವನ್ನು ಪ್ರಾರಂಭಿಸಿತು. ನಾಟಕಗಳು ಹಾಗೂ ಸಂಗೀತ ತರಬೇತಿ ಶಾಲೆಯಾಗಿ ಇದು ಪ್ರಾರಂಭವಾಗುತ್ತದೆ. ಹೀಗೆ ರಂಗಾಯಣ ಕಾರಂತರ ನಂತರ ಸಿ.ಬಸವಲಿಂಗಯ್ಯ, ಪ್ರಸನ್ನ, ಹಾಗೂ ಚಿದಂಬರರಾವ್ ಜಂಬೆ, ಜನಾರ್ಧನ್(ಜನ್ನಿ) ನಿರ್ದೇಶಕರಾಗಿದ್ದು ಕಾರಂತರ ಕನಸನ್ನು ನನಸು ಮಾಡುವಲ್ಲಿ ಬಹಳಷ್ಟು ದುಡಿದಿದ್ದಾರೆ.

ಇಂತಹ ಯಾವ ಕಡೆಯೂ ಮಾಡಿರದಂತಹ ವಿನ್ಯಾಸವನ್ನು 'ರಂಗಾಯಣ' ಅಳವಡಿಸಿಕೊಂಡು ವಿಕಸಿಸುವುದು ರಂಗಾಯಣದ ಗುರಿಯಾಗಿತ್ತು. ಹಾಗಾಗಿ ಕಲಾವಿದರ ಆಯ್ಕೆಯಿಂದಲೇ ತನ್ನ ವಿನೂತನ ಹೆಜ್ಜೆ ಗುರುತುಗಳನ್ನು ಹಾಗೂ ಸೂಕ್ಷ್ಮಾತಿಸೂಕ್ಷ್ಮ ವಿವರಗಳಿಗೆ ಗಮನ ಕೊಡುತ್ತ ಬಂದಿದೆ 'ರಂಗಾಯಣ'ದ ವಿನೂತನ ರಂಗಪ್ರಯೋಗಗಳನ್ನು ಮಾಡುವ ಚೈತನ್ಯದಿಂದ ದುಡಿಯುವ ಕಲಾವಿದರನ್ನು ರಂಗಾಯಣ ಆರಿಸಿಕೊಂಡಿತು. ಇಲ್ಲಿನ ಬಹುತೇಕ ಕಲಾವಿದರು ಗ್ರಾಮಾಂತರ ಭಾಗದ ಜೊತೆಗೆ ಕರ್ನಾಟಕದ ಮೂಲೆ ಮೂಲೆಯಿಂದ ಬಂದವರಾಗಿದ್ದಾರೆ.[೧೫] ಆರಂಭದಲ್ಲಿ ೧೯ ಮಂದಿ ಕಲಾವಿದರು ಹಾಗೂ ೬ ಮಂದಿ ಕಲಾವಿದೆಯರನ್ನು ಒಳಗೊಂಡ ರಂಗಾಯಣ ಏಕಕಾಲದಲ್ಲಿ ಮೂರು ಅಂಶಗಳನ್ನು ತನ್ನಲ್ಲಿಡಗಿಸಿಕೊಂಡಿತ್ತು. ವೃತ್ತಿಪರ ರೆಪರೆರ್ಟರಿ ರಂಗಭೂಮಿ, ರಾಷ್ಟ್ರಮಟ್ಟದ ರಂಗ ತರಬೇತಿ ಸಂಸ್ಥೆ, ಮತ್ತು ರಂಗ ಕಲೆಗಾಗಿ ಮುಡಿಪಾದ ದಾಖಲಾತಿ ಕೇಂದ್ರ, ಇಡೀ ಯೋಜನೆಗಳಿವೆ ಬಹು ಮುಖ್ಯವಾಗಿ ಚಾಲನೆ ಕೊಡಲು ರಂಗಭೂಮಿಗೆ ಹತ್ತಿರದ ಅನುಭವಿ ಶಿಕ್ಷಕರಿದ್ದರು. ಕರ್ನಾಟಕದಲ್ಲಿ ಆಧುನಿಕ ರಂಗಭೂಮಿ ಹೆಚ್ಚು ಕಡಿಮೆ ಹವ್ಯಾಸಿ ಸಂದರ್ಭವನ್ನೇ ಪ್ರತಿಫಲಿಸುವಂಥದ್ದಾಗಿದೆ. ಅದಾಗ್ಯೂ ರಂಗಭೂಮಿಯ ಅದೇ ವೃತ್ತಿಪರ ಹಿನ್ನೆಲೆಯಿಂದ ಬೆಳವಣಿಗೆಯನ್ನು ಕುಗ್ಗಿಸಿಲ್ಲ. ಈ ಬಗೆಯ ಸಂಕಲ್ಪದಿಂದಲೇ ಸಿ.ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ, ಬಿ.ಜಯಶ್ರೀ, ಲಿಂಗದೇವರು ಹಳೇಮನೆ, ಹಾಗೂ ಬಿ.ವಿ.ರಾಜಾರಾಂ ಅವರಂತಹ ನಿರ್ದೇಶಕರು ಪ್ರತಿಭಾನ್ವಿತರಾದ ಬಿ.ವಿ.ಕಾರಂತರ ನಂತರ ಮಾರ್ಗದರ್ಶನಕ್ಕೆ ಮುಂದಾದರು. ಜೊತೆಗೆ ಕರಾವಳಿ ರಂಗಾಯಣ, ಮಲೆನಾಡು ರಂಗಾಯಣ, ಹೈದ್ರಾಬಾದ್-ಕರ್ನಾಟಕ ರಂಗಾಯಣ ಮೊದಲಾದ ಪ್ರಾದೇಶಿಕ ಕಛೇರಿಗಳನ್ನು ತೆರೆದು ರಂಗತರಬೇತಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕದ ರಂಗಭೂಮಿ ಬೆಳವಣಿಗೆಗೆ ರಂಗಾಯಣವು ಕೂಡ ಬಹುಮುಖ್ಯವಾದ ಪಾತ್ರ ವಹಿಸಿದೆ ಎಂದು ಹೇಳಲೇಬೇಕಾಗುತ್ತದೆ.

ರಂಗಾಯಣದ ಪ್ರಮುಖ ನಾಟಕಗಳು ಶಿಕಾರಿ, ತುಘಲಕ್, ಸಂಸ್ಕಾರ, ಚೆಕ್‌ಮೇಟ್, ಪ್ರಗಳೇಂದಿ ಪ್ರಹಸನ, ಯುದ್ಧ ಬಂತು ಮನೆಯುವರೆಗೆ, ಮೊದಲಾದವು. 'ಸಮುದಾಯ'ದ ರೂಪದಲ್ಲಿ ರಂಗ ಚಳವಳಿಯನ್ನು ಕಟ್ಟಲು ಮುಂದಾಗಲು ರಂಗಾಯಣ ವಿಫಲವಾಯಿತು ಎಂದು ವಿಶ್ಲೇಷಣೆಗೆ ಒಳಪಡಿಸಬಹುದು.[೧೬] ಏಕೆಂದರೆ, 'ಸಮುದಾಯ' ಇತರ ರಂಗ ಚಳವಳಿಗಳನ್ನು ಮೊಟಕುಗೊಳಿಸಲು ಸರ್ಕಾರವೇ ತನ್ನ ವಿರುದ್ಧ ವಿರೋಧವಾದ ರಂಗ ಚಳವಳಿಗಳು ಎಪ್ಪತ್ತರ ದಶಕದ ರೀತಿಯಲ್ಲಿ ಮರುಕಳಿಸಬಾರದು ಎಂದು 'ಸಮುದಾಯ'ದಿಂದ ಪಳಗಿದ ರಂಗನಿರ್ದೇಶನವನ್ನೇ ನೀಡಲು ರಂಗಾಯಣದ ನಿರ್ದೇಶಕರನ್ನು ಮಾಡಿದ್ದು ಈ ಹೊತ್ತಿಗೂ ರಂಗ ಚಳುವಳಿಯಾಗಿ ಬೆಳೆಯದಿರಲು ಬಹುಮುಖ್ಯ ಕಾರಣ ಎಂದು ಹೇಳಬಹುದು.

೭. 'ಸಮುದಾಯ' ಮತ್ತು 'ಸಾಣೇಹಳ್ಳಿ ಶಿವಸಂಚಾರ'-೧೯೮೭

೧೯೮೭ರಲ್ಲಿ ಚಿತ್ರದುರ್ಗ ಜಿಲ್ಲೆಯ ತರಳಬಾಳು ಮಠದ ಸ್ವಾಮೀಜಿಯಾದ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಪ್ರೇರಣೆಯಿಂದ, ಸಿ.ಜಿ.ಕೃಷ್ಣಸ್ವಾಮಿ, ಕಿ.ರಂ.ನಾಗರಾಜ ಹಾಗೂ ಕೆ.ಮರುಳಸಿದ್ಧಪ್ಪ

ಅವರ ಸಹಕಾರದಿಂದ ಸಾಣೇಹಳ್ಳಿಯಲ್ಲಿ ರಂಗತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದನ್ನು ರಂಗದಾಸೋಹದ ರೂಪವೆಂದು ಕರೆಯುತ್ತಾರೆ. ಸಮಾಜದ ಮೌಢ್ಯ ಕಿತ್ತೊಗೆಯ್ಯಲು ಧರ್ಮ, ಸಾಹಿತ್ಯ, ಶಿಕ್ಷಣ ಕ್ಷೇತ್ರದ ಜೊತೆಗೆ ನಾಟಕ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡವರು ತರಳಬಾಳು ಮಠದ ಶಿವಕುಮಾರ ಸ್ವಾಮೀಜಿಗಳು. ಇಲ್ಲಿ ರಂಗಶಾಲೆ ಇದೆ, ನಿಗದಿತ ಪಠ್ಯವು ಇದೆ. ಹಿರಿಯ ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಪ್ರಸನ್ನ, ಉಮೇಶ್, ಚಿದಂಬರ್‌ರಾವ್ ಜಂಬೆ, ಇವರ ಮಾರ್ಗದರ್ಶನವು ಈ ಸಂಸ್ಥೆಗೆ ಇದೆ. ಕರ್ನಾಟಕದ ವಿವಿಧ ಭಾಗದ ೨೦ ಜನ ವಿದ್ಯಾರ್ಥಿಗಳನ್ನು ಪ್ರತಿವರ್ಷ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ತರಬೇತಿ ಜೊತೆಗೆ ಊಟ, ವಸತಿಯನ್ನು ಉಚಿತವಾಗಿ ಇಲ್ಲಿಯೇ ನೀಡಲಾಗುತ್ತದೆ. ಜೊತೆಗೆ ೫೦ಲಕ್ಷ ರೂಪಾಯಿಗಳ ವೆಚ್ಚದಲ್ಲಿ 'ಗ್ರೀಕ್ ರಂಗ ಮಂದಿರ' ಮಾದರಿಯಲ್ಲಿ ಇಲ್ಲಿ ಐದು ಸಾವಿರ ಜನರು ಕುಳಿತುಕೊಳ್ಳಬಹುದಾದ ರಂಗಮಂದಿರವನ್ನು ಇಲ್ಲಿ ನಿರ್ಮಾಣಮಾಡಲಾಗಿದೆ.[೧೭] ಅಷ್ಟೇ ಅಲ್ಲದೆ ಹುಣಸೆಮರದ ಬಯಲು ರಂಗಮಂದಿರ, ಶಿವಕುಮಾರ ರಂಗಮಂದಿರ, ವಿದ್ಯಾರ್ಥಿಗಳ ಪ್ರಯೋಗಕ್ಕಾಗಿ ಅಂತರಂಗ ಎಂಬ ರಂಗಮಂದಿರಗಳು ಇಲ್ಲಿವೆ. ಈ ಸಾಣೇಹಳ್ಳಿಯ ಶಿವ ಸಂಚಾರ ಅಮೇರಿಕಾ, ಮುಂಬೈ, ಪೂನಾ, ದೆಹಲಿ ಹೀಗೆ ಸಾಣೇಹಳ್ಳಿ ಪ್ರಾಚಾರ್ಯರಾಗಿ ನಟರಾಜ ಹೊನ್ನವಳ್ಳಿ ಹಾಗೂ ಚಿದಂಬರ್‌ರಾವ್ ಜಂಬೆ ಈ ರಂಗ ಶಾಲೆಯ ಪ್ರಾಚಾರ್ಯರು. ಎನ್.ಎಸ್.ಡಿ.ಯ ಪದವೀಧರರಾದ ಜಗದೀಶ್ ಪ್ರಸ್ತುತ ಪ್ರಾಂಶುಪಾಲರಾಗಿದ್ದು ತರಬೇತಿಯಲ್ಲಿ ಯಕ್ಷಗಾನ, ಕೋಲಾಟ, ಕಥಕ್ಕಳಿ, ನೆರಳು–ಬೆಳಕು, ವೀರಗಾಸೆ, ಪ್ರಸಾಧನ ಕಲರಿ, ಯೋಗಾಸನಗಳನ್ನು ಹೇಳಿಕೊಡಲಾಗುತ್ತಿದೆ.

'ಶಿವಸಂಚಾರ'ದ ನಾಟಕೋತ್ಸವದಲ್ಲಿ ನಾಟಕಗಳು 'ಜರ್ಮನ್ ಬಂಗ್ಲೆ', 'ಬಯಲು ಸೀಮೆ', 'ಕಟ್ಟೆ ಪುರಾಣ', 'ರಕ್ತರಾತ್ರಿ', 'ಚಿಕ್ಕದೇವಭೂಪ', 'ಸಂಗೀತ ಸೌಭದ್ರ', 'ಕೈಲಾಸಂ', 'ಕಾಲಚಕ್ರ', 'ವಿನುರ ವೇಮ' ಹೀಗೆ ರಾಜ್ಯದ ಬೇರೆ–ಬೇರೆ ಕಡೆಯಿಂದ ಬಂದಂತಹ ತಂಡಗಳಿಂದ ನಾಟಕೋತ್ಸವದ ಕಾರ್ಯಕ್ರಮಗಳು ನಡೆಯುತ್ತವೆ. ಹೀಗೆ ಸಾಣೇಹಳ್ಳಿ 'ಶಿವಸಂಚಾರಿ' ತಂಡ ಹೊಸದುರ್ಗ ತಾಲ್ಲೂಕಿನ ಒಂದು ರಂಗತರಬೇತಿ ಸಂಸ್ಥೆಯಾಗಿದ್ದು ಮಧ್ಯ ಕರ್ನಾಟಕದ ರಂಗ ಆಸಕ್ತ ವಿದ್ಯಾರ್ಥಿಗಳಿಗೆ ರಂಗ ತರಬೇತಿಯ ಸಂಸ್ಥೆಯಾಗಿದೆ. ಹೀಗೆ 'ಶಿವಸಂಚಾರ' ಹಾಗೂ 'ಸಮುದಾಯ' ತಾತ್ವಿಕ ವಿಚಾರಗಳಲ್ಲಿ ಭಿನ್ನತೆ ಇಲ್ಲದ ಒಂದೇ ರಂಗ ತಂಡಗಳಾಗಿವೆ ಏಕೆಂದರೆ ಸಾಣೇಹಳ್ಳಿ ಶಿವಸಂಚಾರ ಕರ್ತೃ ಸಿ.ಜಿ.ಕೃಷ್ಣಸ್ವಾಮಿ ಅವರು 'ಸಮುದಾಯ'ದ ಮೊದಲ ಕಾರ್ಯದರ್ಶಿಯಾಗಿದ್ದುದರಿಂದ ಅವರ ರಂಗದ ಅನುಭವಗಳು ಕರ್ನಾಟಕ ರಂಗನಿರಂತರ ಹಾಗೂ ಸಾಣೇಹಳ್ಳಿ ಶಿವಸಂಚಾರ ರಂಗತಂಡಗಳನ್ನು ಹುಟ್ಟುಹಾಕಿದವು.[೧೮] ಆದ್ದರಿಂದ 'ಸಮುದಾಯ' ಸಂಘಟನೆಯ ತರಬೇತಿ ಹೊಂದಿದ್ದ ರಂಗಭೂಮಿಯ ಎಲ್ಲಾ ವಿಭಾಗದ ಕಲಾವಿದರು ತಮ್ಮದೇ ಆದ ಕಲಾ ತಂಡಗಳನ್ನು ನಾಡಿನಾದ್ಯಂತ ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಇದಕ್ಕೆ ಮೂಲ 'ಸಮುದಾಯ' ರಂಗ ಚಳುವಳಿಯ ಪ್ರಭಾವ ಮತ್ತು ಪ್ರೇರಣೆಯೇ ಎಂದು ಚಾರಿತ್ರಿಕವಾಗಿ ಗುರುತಿಸಲು ಸಾಧ್ಯ.

೬. 'ಸಮುದಾಯ' ಮತ್ತು 'ಜನಮನ'

ಜನಾರ್ಧನ(ಜನ್ನಿ) ತೊಂಬತ್ತರ ದಶಕದಲ್ಲಿ 'ಜನಮನ' ಸ್ಥಾಪಿಸಿದರು. ಮೈಸೂರು ತಂಡ ಕರ್ನಾಟಕದಲ್ಲಿ 'ಜನ್ನಿ' ಎಂತಲೇ ಹೆಸರು ಪಡೆದವರು ಜನಾರ್ಧನ. ಇವರು 'ಸಮುದಾಯ' ಸಂಘಟನೆಯ ರಾಜ್ಯಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ನಿರಂತರವಾಗಿ 'ಸಮುದಾಯ' ಮೈಸೂರಿನ ಘಟಕವು ದೇವನೂರು ಮಹಾದೇವ ಅವರ ಕಾದಂಬರಿ 'ಕುಸುಮಬಾಲೆ'ಯನ್ನು ನಾಟಕಕ್ಕೆ ರೂಪಾಂತರಿಸಲು 'ಸಮುದಾಯ' ರಾಜ್ಯ ಸಮಿತಿಯು ಜನ್ನಿ ಅವರಿಗೆ ಜವಾಬ್ದಾರಿ ನೀಡಿತು. ಈ ಕಾದಂಬರಿಯನ್ನು ನಾಟಕವನ್ನಾಗಿ ನಿರ್ದೇಶಿಸಿದರು. ಹೀಗೆ ಮೈಸೂರು ತಮ್ಮ ರಂಗ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾಗಿ ಮಾಡಿಕೊಂಡರು. ನಂತರ ಜನ್ನಿ 'ಜನಮನ' ನಾಟಕ ತಂಡವನ್ನು ಕಟ್ಟಿ ಅದರಲ್ಲಿ ಜನ್ನಿ ನಿರ್ದೇಶಿಸಿದ ನಾಟಕಗಳನ್ನು ಪ್ರದರ್ಶಿಸಿದರು, ಜನಮನ ತಂಡ ಮೈಸೂರಿನಲ್ಲಿ ಹಲವಾರು ರಂಗಭೂಮಿ ಕಾರ್ಯಕ್ರಮಗಳನ್ನು ಮಾಡಿತು. ಅದರಲ್ಲಿಯೂ ಹೋರಾಟದ ಹಾಡುಗಳ ತರಬೇತಿಯನ್ನು ಜನಮನ ತಂಡದವರಿಗೆ ನಿರಂತರವಾಗಿ ಕಲಿಸುವ ಕಾರ್ಯಕ್ರಮಗಳು ಗಮನಾರ್ಹ.

ಹೀಗೆ ಜನ್ನಿ ಕರ್ನಾಟಕದಲ್ಲಿ ಹೋರಾಟದ ಹಾಡುಗಳು ಅದರಲ್ಲೂ ಕ್ರಾಂತಿಗೀತೆಗಳ, ಜನಪರ ಗೀತೆಗಳು, ತತ್ವಪದ ಹಾಡುಗಳನ್ನು ನಿರಂತರವಾಗಿ ತನ್ನ ಜನಮನ ತಂಡದವರಿಗೆ ಕಲಿಸಿದರು. ಹೀಗೆ 'ಸಮುದಾಯ' ತಾತ್ವಿಕ ಅಂಶಗಳನ್ನು ತನ್ನ ಜನಮನ ತಂಡದಲ್ಲಿ ಅಳವಡಿಸಿಕೊಂಡು ಮೈಸೂರಿನಲ್ಲಿ 'ಸಮುದಾಯ'ಕ್ಕಿಂತ ಭಿನ್ನರೀತಿಯ ನಾಟಕಗಳನ್ನು ಮಾಡಿದರು. 'ಸಮುದಾಯ'ಕ್ಕಿರುವ ಸೈದ್ಧಾಂತಿಕ ಬೆಂಬಲ, ಜನಮನಕ್ಕೆ ಇಲ್ಲದ ಕಾರಣ ಕುಂಟಿತವಾಗಲು ಕಾರಣವಾಯಿತು.[೧೯] ಈಗ ಮೈಸೂರಿಗೆ ಸೀಮಿತವಾಗಿ ನಾಟಕಗಳನ್ನು ಮಾಡಲಾಗುತ್ತಿದೆ. ಮೈಸೂರಿನ ಸಾಂಸ್ಕೃತಿಕ ನಗರದಲ್ಲಿ ಹಲವಾರು ರಂಗತಂಡಗಳಿದ್ದರೂ ಅದರಲ್ಲಿ 'ಸಮುದಾಯ', ರಂಗಾಯಣ, ಜನಮನ ಮುಂತಾದವುಗಳನ್ನು ನೋಡುತ್ತೇವೆ. ನಿರಂತರವಾಗಿ ಮೈಸೂರಿನಲ್ಲಿ ರಂಗ ಚಟುವಟಿಕೆಗಳನ್ನು ಈ ಮೂರು ತಂಡಗಳೇ ಮಾಡುತ್ತಾ ಬಂದಿರುವುದು ರಂಗ ಚಳವಳಿಯ ಭಾಗವಾಗಿ ದಾಖಲಾಗಿದ್ದಾರೆ.

೭. 'ಸಮುದಾಯ' ಮತ್ತು 'ನಟನ'

ಮಂಡ್ಯ ರಮೇಶ್ ರಂಗಭೂಮಿ ನಟರಾಗಿ, ನಿರ್ದೇಶಕರಾಗಿ, ಕಲಾಸಂಘಟಕರಾಗಿ ರಂಗಶಿಕ್ಷಕರಾಗಿ ರಂಗಭೂಮಿಗೆ ಸೇವೆಸಲ್ಲಿಸಿದ್ದಾರೆ. ಜೊತೆಗೆ 'ನಟನ' ತಂಡವನ್ನು ಸ್ಥಾಪಿಸಿ, ಮಂಡ್ಯದಲ್ಲಿ ಹಲವಾರು ರಂಗತರಬೇತಿಗಳನ್ನು ಹಾಗೂ ನಾಟಕಗಳನ್ನು ಮಾಡಿಸುತ್ತಾ ಬಂದಿದ್ದಾರೆ. ಕ್ರಿಯಾಶೀಲ ಕಲಾವಿದನಾಗಿ, ಸಿನಿಮಾ, ಹಾಸ್ಯ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ. 'ನೀನಾಸಂ' ನಾಟಕಶಾಲೆಯಲ್ಲಿ ತರಬೇತಿ ಪಡೆದು 'ರಂಗಾಯಣ'ದ ಕಲಾವಿದರಾಗಿ ಪಡೆದ ಶ್ರೀಮಂತ ಅನುಭವ. ಮಂಡ್ಯದ ಗೆಳೆಯರ ಬಳಗ, ಮಂಡ್ಯ ಕಲಾಸಂಘ, ಮೈಸೂರಿನ ನಟನ ನಾಟಕಶಾಲೆಯಾಗಿ ಬೆಳವಣಿಗೆ ಆಗಿರುವುದು ಕಾಣುತ್ತೇವೆ.

ದೇಸಿ ಶೈಲಿಯ 'ನಟರಂಗ ಮಂಟಪದ ರುವಾರಿಯಾಗಿದ್ದಾರೆ. ಕೆ.ವಿ.ಸುಬ್ಬಣ್ಣ ಹಾಗೂ ಬಿ.ವಿ.ಕಾರಂತರ ಹಾದಿಯಲ್ಲಿ ಸಾಗುತ್ತಾ ಕಟ್ಟಿದ ರಂಗನೆಲೆ 'ನಟನ'. ಇದು ಹೆಮ್ಮರವಾಗಿ ಬೆಳೆದಿದೆ. ಮಕ್ಕಳಿಗೆ ಎಳೆಯ ವಯಸ್ಸಿನಲ್ಲೇ ರಂಗತರಬೇತಿ ನೀಡುವ ಬೇಸಿಗೆ ಶಿಬಿರ 'ರಜಾ–ಮಜಾ'. 'ನಟನ'ದ ಒಂದು ಬಿಸಿಲು ಬಾಲ್ಯ ಸಹಜ ಆಟೋಟಗಳು, ತುಂಟಾಟಗಳಿಂದ ವಂಚಿತರಾಗಿರುವ ಭವಿಷ್ಯದ ಪ್ರಜೆಗಳಿಗೆ ಬೇಸಿಗೆ ರಜೆಯನ್ನು ಮಜವಾಗಿ ಸ್ಮರಣೀಯವಾಗಿ ಕಳೆಯುವುದರೊಂದಿಗೆ ಹಾಡು, ನಟನೆ, ಅಭಿನಯ, ಕರಕುಶಲ, ಕಲೆಗಾರಿಕೆಗಳ ಕಲಿಕೆಯೊಂದಿಗೆ ರಂಗಸಾಧಕರೊಂದಿಗೆ ಸಂವಾದ, ಬದುಕಿನ ಮೂಲಪಾಠಗಳು ಕಲಿಸುವ 'ರಜಾ–ಮಜಾ' ಮಂಡ್ಯ ರಮೇಶ್ ಅವರ ಕನಸಿನ ಕೂಸು. 'ಸಂಕ್ರಾಂತಿ', 'ಮಹಿಮಾಪುರ', 'ಮಾರನಾಯಕ', 'ಚೋರಚರಣದಾಸ', 'ನಾಗಮಂಡಲ', 'ಅಗ್ನಿ ಮತ್ತು ಮಳೆ', 'ಬಾಕಪುರದ ಬಯಲಾಟ', 'ಹರಕೆಯಕುರಿ', 'ಆಲಿಬಾಬ ೪೦ ಕಳ್ಳರು', 'ಯುಗಾಂತ', 'ತಿಲು ದೊರೆ', 'ಚಾಮ ಚೆಲುವೆ', 'ಸಾಯೋ ಆಟ', 'ವಲಸೆ ಹಕ್ಕಿಯ ಹಾಡು' ಮೊದಲಾದ ನಾಟಕಗಳನ್ನು ನಟನ ತಂಡದಲ್ಲಿ ಆಡಿಸಿದ್ದಾರೆ.[೨೦] ಮೈಸೂರಿಗೆ ಹತ್ತಿರದಲ್ಲಿ ಇರುವ ಮಂಡ್ಯವು 'ನಟನ' ತಂಡದ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಹೀಗೆ ನಟನತಂಡ ಮೈಸೂರು ರಂಗಕರ್ಮಿಯಾದ ಲಿಂಗದೇವರು ಹಳೇಮನೆ, ಜನ್ನಿ, ಗಂಗಾಧರಸ್ವಾಮಿ, ರಮೇಶ್.ಆರ್, ಸಿ.ಬಸವಲಿಂಗಯ್ಯ, ಮುಂತಾದವರ ಮಾರ್ಗದರ್ಶನದಲ್ಲಿ ಮಂಡ್ಯ ರಮೇಶ್ ರಂಗಕರ್ಮಿಯಾಗಿ ಬೆಳೆದರು. 'ಸಮುದಾಯ' ಸಂಘಟನೆಯಿಂದ ಹಲವಾರು ರಂಗಸಿದ್ಧಾಂತಗಳನ್ನು ಕಲೆತಿರುವ ನಟನ ತಂಡದ ನಾಟಕಗಳನ್ನು ಸೂಕ್ಷ್ಮವಾಗಿ ನೋಡಿದಾಗ ತಿಳಿದುಬರುತ್ತದೆ. ಹೀಗೆ ನಟನ ತಂಡ 'ಸಮುದಾಯ'ದ ನಾಟಕಗಳು, 'ಸಮುದಾಯ' ರಂಗಕರ್ಮಿಗಳ ಪ್ರಭಾವ ಬೀರಿರುವುದನ್ನು ಗುರುತಿಸುವುದು ಒಂದು ಚಾರಿತ್ರಿಕ ಸನ್ನಿವೇಶವಾಗಿದೆ.

ಟಿಪ್ಪಣಿಗಳು

೧. ರೊಮಿಲಾಥಾಪರ್(ಮೂಲ)., ಎಚ್.ಎಸ್.ಉಮೇಶ್, ಶಶಿಕುಮಾರ್.ಜೆ, ಮತ್ತು ದೀಪ್(ಅನು). ೨೦೧೬, **ಪ್ರಾಚೀನ ಭಾರತ ಉಗಮದಿಂದ ಕ್ರಿ.ಶ. ೧೩೦೦ರ ರವರೆಗೆ,** ಪುಟ–೧೬೯.

೨. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು,** ಪುಟ–೬೯.

೩. ಕರ್ನಾಟಕ ರಾಜ್ಯ ಸಮಿತಿ (ರಿ)., ೨೦೧೩, **ಸಮುದಾಯ, ಸಂವಿಧಾನ,** ಪುಟ– ೩.

೪. ವೆಂಕಟೇಶ್.ಎಂ.ಜೆ.(ಲೇ) ೨೦೦೦, **ಸಮುದಾಯ ೨೫ ಬಾನ ಸಂಸ್ಕೃತಿ ಜಾಥಾ ಉತ್ಸವಗಳು ಸಮುದಾಯ ನಡೆದುಬಂದ ದಾರಿ,** ಪುಟ–೧೧.

೫. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಚಳವಳಿಗಳು,** ಪುಟ–೭೨.

೬. ಅದೇ., ಪುಟ-೭೬

೭. ಆರ್ನಾಲ್ಡ್ ಕೆಟಲ್ (ಮೂಲ), ಜೆ.ಆರ್.ಲಕ್ಷ್ಮಣ್‌ರಾವ್, ಜೀವ್ಹೋಬಾಯಿ ಲಕ್ಷ್ಮಣ್‌ಬಾಯಿ (ಅನು) ೨೦೧೩, **ಕಾರ್ಲ್‌ಮಾರ್ಕ್ಸ್ ಆಧುನಿಕ ಕಮ್ಯೂನಿಸಂ ಸ್ಥಾಪಕ**, ಪುಟ- ೫೯.

೮. ಅದೇ., ಪುಟ-೬೨

೯. ಶಿವಪ್ರಕಾಶ್ ಎಂ.ಎಂ. (ಸಂ), ೨೦೧೧, **ಎಂ.ಪಿ. ಪ್ರಕಾಶ್ ಅವರ ಸಮಗ್ರ ಲೇಖನಗಳು**, ಪುಟ-೩೮

೧೦. ಅದೇ., ಪುಟ-೪೧

೧೧. ಮಲ್ಲಿಕಾರ್ಜುನ ಕಡಕೋಳ., ೨೦೧೬, **ದಾವಣಗೆರೆ ಜಿಲ್ಲಾ ರಂಗ ಮಾಹಿತಿ**, ಪುಟ-೧೨

೧೨. ಅದೇ., ಪುಟ-೫೧

೧೩. ನಾಗಚಂದ್ರ ನಾ., ರಾಜಶೇಖರ ಕದಂಬ, ೨೦೧೬, **ಮೈಸೂರು ಜಿಲ್ಲಾ ರಂಗ ಮಾಹಿತಿ**, ಪುಟ-೩೪

೧೪. ಅದೇ., ಪುಟ-೬೧

೧೫. ವಿಜಯಾ., ೨೦೧೭, **ರಂಗ ಸಮ್ಮಾನ**, ಪುಟ-೧೦೦

೧೬. ಅದೇ., ಪುಟ-೧೦೨

೧೭. ಪಾರ್ಶ್ವನಾಥ ಎಚ್.ಎ., ೨೦೦೩, **ರಂಗಲೋಕ**, ಪುಟ-೯೪

೧೮. ಅದೇ., ಪುಟ-೧೨

೧೯. ಖಾಜಾವಲಿ ಈಚನಾಳ., ೨೦೧೭, **ರಾಯಚೂರು ಜಿಲ್ಲಾ ರಂಗ ಮಾಹಿತಿ**, ಪುಟ-೬

೨೦. ಮುನಿನಾರಾಯಣ., ೨೦೧೬, **ಕೋಲಾರ ಜಿಲ್ಲಾ ರಂಗ ಮಾಹಿತಿ**, ಪುಟ-೪೨

ಅಧ್ಯಾಯ : ಮೂರು

ಎಪ್ಪತ್ತರ ದಶಕ ಹಾಗೂ ಸಾಂಸ್ಕೃತಿಕ ಚಳವಳಿಗಳ ಸನ್ನಿವೇಶ

೩.೧ ಎಪ್ಪತ್ತರ ದಶಕದ ರಾಜಕಾರಣ

೩.೨ ೧೯೭೩ರ ಬೂಸಾ ಚಳವಳಿ

೩.೩ ಎಪ್ಪತ್ತರ ದಶಕದ ಸಾಂಸ್ಕೃತಿಕ ಚಳವಳಿಗಳು

೩.೪ ೧೯೭೫ರ ಭಾರತದ ತುರ್ತುಪರಿಸ್ಥಿತಿ

೩.೫ ಕರ್ನಾಟಕದಲ್ಲಿ ತುರ್ತುಪರಿಸ್ಥಿತಿಯ ಸನ್ನಿವೇಶ

೩.೬ ಎಪ್ಪತ್ತರ ದಶಕದ ಜಾತಿ ನಿರ್ಮೂಲನ ಚಳವಳಿಗಳು.

ಅಧ್ಯಾಯ : ಮೂರು

ಎಪ್ಪತ್ತರ ದಶಕ ಹಾಗೂ ಸಾಂಸ್ಕೃತಿಕ ಚಳವಳಿಗಳ ಸನ್ನಿವೇಶ

೩.೧. ಎಪ್ಪತ್ತರ ದಶಕದ ರಾಜಕಾರಣ

ಎಪ್ಪತ್ತರ ದಶಕದ ರಾಜಕಾರಣ ಭಾರತ ಹಾಗೂ ಕರ್ನಾಟಕದಲ್ಲಿ ಹಲವಾರು ಚಳವಳಿಗಳು ಹುಟ್ಟಿದ ದಶಕವೆಂದೇ ಕರೆಯಲಾಗಿದೆ. ಏಕೆಂದರೆ ಭಾರತದಲ್ಲಿ ಆಂತರಿಕ ತುರ್ತುಪರಿಸ್ಥಿತಿ ಘೋಷಿಸಿದ ದಶಕ ಹಾಗೂ ಭಾರತದಲ್ಲಿ ಮೊದಲ ಕಾಂಗ್ರೆಸ್‌ಯೇತರ ಪಕ್ಷಗಳು ಕೇಂದ್ರ ಸರ್ಕಾರವನ್ನು ರಚನೆ ಮಾಡಿದ ದಶಕವು ಹೌದು. ಅಲ್ಲದೆ ಪ್ರಾದೇಶಿಕ ಪಕ್ಷಗಳ ಉಗಮ, ವಿದ್ಯಾರ್ಥಿ ಚಳವಳಿಗಳ ಮೂಲಕ ಸಾಂಸ್ಕೃತಿಕ ರಂಗ ಚಳವಳಿಯಾಗಿ ಹುಟ್ಟಿದ ಬೀದಿರಂಗಭೂಮಿ ಹಾಗೂ ರೈತ–ಕಾರ್ಮಿಕ–ದಲಿತ–ಬಂಡಾಯ–ಮಹಿಳಾ–ವಿದ್ಯಾರ್ಥಿ, ಯುವಜನ, ಸರ್ಕಾರಿ ನೌಕರರ ಸಂಘಗಳು, ಕೃಷಿಕೂಲಿಕಾರರ ಸಂಘ ಹಾಗೂ ತಳ ಸಮುದಾಯದಿಂದ ಹಿಡಿದು ಮೇಲ್‌ಸಮುದಾಯ ವರ್ಗಗಳವರೆಗೂ ಸಂಘಟನೆಗಳು ಪ್ರಾರಂಭವಾದವು. ಇದರೊಂದಿಗೆ ಅತಿಮುಖ್ಯವಾಗಿ 'ಎಕ್ಸ್‌ಪೋ–೭೦ ಚಳವಳಿ', ಹುಟ್ಟಿದ ದಶಕ ಹಾಗೂ ಬೂಸ ಚಳವಳಿ–ಜಾತಿ ವಿನಾಶ ಚಳವಳಿ ಹಾಗೂ ಅಹಿಂದ ಜಾಗೃತಿ ಸಮುದಾಯಗಳ ಕಾಲವಾಗಿದೆ. ಇದರೊಂದಿಗೆ ರಂಗ ಸಂಸ್ಥೆಗಳು(ಕರ್ನಾಟಕದಲ್ಲಿ) ಹಲವಾರು ಹುಟ್ಟಿಕೊಂಡು ರಂಗಚಳವಳಿಯಾಗಿ ರೂಪುಗೊಂಡ ದಶಕವೆಂದರೆ ಈ 'ಎಪ್ಪತ್ತರ ದಶಕ'ವೆಂದೇ ಕರೆಯಬಹುದು.

ಈ ಎಲ್ಲಾ ಸಂಘಟನೆಗಳಲ್ಲಿ ಇದ್ದವರು ಒಂದೇ ಗುರಿ–ಉದ್ದೇಶಗಳನ್ನು ಇಟ್ಟುಕೊಂಡು ತ್ಯಾಗಕ್ಕೆ ಒತ್ತುಕೊಟ್ಟು ನಿಸ್ವಾರ್ಥ ಸೇವಾ ಮನೋಭಾವದಿಂದ ಚಳವಳಿಗಳಲ್ಲಿ ಭಾಗವಹಿಸಿ, ಕಟ್ಟಿ ಬೆಳೆಸಿದ ಈ ಎಪ್ಪತ್ತರ ದಶಕವನ್ನು ಮುಖ್ಯವಾದ ದಶಕವೆಂದು ಕರೆಯುತ್ತೇವೆ. ಜೊತೆಗೆ ಎಲ್ಲಾ ರಂಗಕ್ಷೇತ್ರಗಳಲ್ಲಿಯೂ ಅನ್ಯಾಯದ ವಿರುದ್ಧ ಒಂದಾಗಿ ಹೋರಾಟ ಮಾಡುವ ಮನೋಭಾವ ಬೆಳೆಸಿಕೊಂಡಿದ್ದ ಕಾಲವೆಂದು ಗುರುತಿಸುತ್ತೇವೆ. ಇದಕ್ಕೆ ಹಲವಾರು ಕಾರಣಗಳು ಇವೆ. ಈ ದಶಕದಲ್ಲಿ ರಾಜಕೀಯ ಕಾರಣಗಳು, ಆರ್ಥಿಕ ಕಾರಣಗಳು ಸಾಮಾಜಿಕ ಹಾಗೂ ಶೈಕ್ಷಣಿಕ ಕಾರಣಗಳು ಸಾಕಷ್ಟು ಪ್ರಭಾವ ಬೀರಿದೆ. ವರ್ಣವ್ಯವಸ್ಥೆಯಲ್ಲಿ ಹಿಂದೂ ಧರ್ಮದ ಶೋಷಿತ ವರ್ಗಗಳಾಗಿ ಗುರುತಿಸಿಕೊಂಡಿರುವ ಶೂದ್ರ ಹಾಗೂ ಅಸ್ಪೃಶ್ಯರು ಈ ದಶಕದಲ್ಲಿ ಶಿಕ್ಷಣ ಪಡೆದು

ಸಂಘಟಿತರಾಗುವುದನ್ನು ಮೊದಲು ಕಾಣುತ್ತೇವೆ. ಅದರಲ್ಲೂ ಶೂದ್ರ ಶ್ರೀನಿವಾಸ್, ಬರಗೂರು ರಾಮಚಂದ್ರಪ್ಪ, ಲಕ್ಷ್ಮೀಪತಿ ಕೋಲಾರ, ಜಿ.ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಜನಾರ್ಧನ ಮೊದಲಾದವರನ್ನು ಹೆಸರಿಸಬಹುದು. ಹಾಗೇಯೇ ಕುವೆಂಪು ಹಾಗೂ ಅವರ ಶಿಷ್ಯರ ಬಳಗ, ನಿರಂಜನ ಅವರ ಶಿಷ್ಯಬಳಗ, ಅ.ನ.ಕೃಷ್ಣರಾಯರ ಶಿಷ್ಯ ಬಳಗ, ಲಂಕೇಶ್ ಶಿಷ್ಯ ಬಳಗ, ಕಿ.ರಂ.ನಾಗರಾಜ ಶಿಷ್ಯ ಬಳಗ ಹೀಗೆ ಬಹುತೇಕ ಶೂದ್ರ, ಅಸ್ಪೃಶ್ಯ ಸಮುದಾಯಗಳು ಶಿಕ್ಷಣ ಪಡೆದು ಎಪ್ಪತ್ತರ ದಶಕದಲ್ಲಿ 'ರಾಜಕಾರಣ ಪ್ರಜ್ಞೆ'ಯನ್ನು ಹೆಚ್ಚು ಬೆಳೆಸಿಕೊಂಡಿದ್ದರ ಪರಿಣಾಮವಾಗಿ ಚಳವಳಿಗಳನ್ನು ಕಟ್ಟಿ ಬೆಳೆಸಿದರು. ಜೊತೆಗೆ ಎಪ್ಪತ್ತರ ದಶಕದ ಅಹಿಂದ ನಾಯಕನಾಗಿ ಗುರುತಿಸಿಕೊಂಡವರು ಕಾಂಗ್ರೆಸ್ ಪಕ್ಷದ 'ಸಮಾಜವಾದಿ ರಾಜಕಾರಣಿ' ಎಂದೇ ಪ್ರಖ್ಯಾತಿ ಪಡೆದಿರುವ ದೇವರಾಜ ಅರಸು ಅವರು. ಎಪ್ಪತ್ತರ ದಶಕದ ರಾಜಕಾರಣದಲ್ಲಿ ತಳ ಸಮುದಾಯಗಳಾದ ಶೂದ್ರ–ದಲಿತ ಹಾಗೂ ಅಲ್ಪಸಂಖ್ಯಾತರನ್ನು ರಾಜಕಾರಣಕ್ಕೆ ತರಲು ಅರಸು ಪ್ರಮುಖ ಪಾತ್ರವಹಿಸಿದರು. ೧೯೭೩ರ 'ಬೂಸಾ ಪ್ರಕರಣ'ದ ನಂತರ ಕರ್ನಾಟಕ ದಲಿತ ಲೇಖಕರ ಸಂಘ, ೧೯೭೪ರ ವರ್ಷದಲ್ಲಿ ಹಾವನೂರು ವರದಿ ಜಾರಿ, ೧೯೭೫ರಲ್ಲಿ ಆಂತರಿಕ ತುರ್ತುಪರಿಸ್ಥಿತಿ ಘೋಷಣೆ, ೧೯೭೫ರಲ್ಲಿ 'ಸಮುದಾಯ' ರಂಗ ಚಳವಳಿಯ ಹುಟ್ಟು, ತುರ್ತುಪರಿಸ್ಥಿತಿ ವಿರೋಧಿ ಚಳವಳಿಗಳು ಹುಟ್ಟಿಕೊಂಡವು. ಇದೇ ಕಾಲಕ್ಕೆ ೧೯೭೭ರ ಲೋಕಸಭೆ ಚುನಾವಣೆ ಹಾಗೂ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಹೊಸ ಮೌಲ್ಯಗಳತ್ತ 'ಸಮುದಾಯ ರಾಜ್ಯಮಟ್ಟದ ಐತಿಹಾಸಿಕ ಜಾಥಾ', ಬೆಂಗಳೂರಿನ ಮೈಕೋ ಹೋರಾಟಗಳು ನಡೆದವು. ೧೯೮೦ರ ಜುಲೈ ೨೧ರಂದು ನರಗುಂದ ಹೋರಾಟದ ಕಿಡಿಯು ಎಪ್ಪತ್ತರ ದಶಕದ ಹೋರಾಟಗಳಿಗೆ ಹಾಗೂ ಹಲವಾರು ಸಂಘ ಸಂಸ್ಥೆಗಳ ಹುಟ್ಟಿಗೆ ಕಾರಣವಾಯಿತಲ್ಲದೆ ಚಳವಳಿಗಳನ್ನು ಗಟ್ಟಿಗೊಳಿಸ ತೊಡಗಿತು. ಇದರ ಪರಿಣಾಮವಾಗಿ ಎಂಬತ್ತರ ದಶಕದಲ್ಲಿ ಗೋಕಾಕ್ ಚಳವಳಿ ಹಾಗೂ ಗುಂಡೂರಾವ್ ಅವರ ನಿರಂಕುಶ ಆಡಳಿತದಿಂದ ಕಾಂಗ್ರೆಸ್ ಸರ್ಕಾರದ ಪತನವಾಗಿ ಎಪ್ಪತ್ತರ ದಶಕದ ಸಾಂಸ್ಕೃತಿಕ ಚಳವಳಿಗಳ ಸನ್ನಿವೇಶಕ್ಕೆ ಕಾರಣ ಅಯಿತು ಎಂದು ಹೇಳಿದರೆ ತಪ್ಪಾಗಲಾರದು.

ಅ. 'ಎಕ್ಸ್‌ಪೋ–೭೦ ಚಳವಳಿ'–೧೯೭೦

ಎಪ್ಪತ್ತರ ದಶಕದ ಆರಂಭದಲ್ಲಿ ಅಂದರೆ ೧೯೭೦ರಲ್ಲಿ ರಾಜ್ಯದ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಡೆಸಿದ 'ಎಕ್ಸ್‌ಪೋ–೭೦' ಚಳವಳಿಯು ರಾಜ್ಯ ಸರ್ಕಾರದ ವಿರುದ್ಧ ಮಾಡಿದ ದೊಡ್ಡ ಹೋರಾಟವಾಗಿದೆ. ಜಪಾನ್ ದೇಶದಲ್ಲಿ ನಡೆಯಲಿದ್ದ ವಿಶ್ವವಿದ್ಯಾಲಯ ಮಟ್ಟದ ಈ ಸಮಾವೇಶಕ್ಕೆ ಮೈಸೂರು ಸರಕಾರ ಆಯ್ಕೆಮಾಡಿದ ಪ್ರತಿನಿಧಿಗಳ ಪಟ್ಟಿ ಈ ಪ್ರತಿಭಟನೆಗೆ ಕಾರಣವಾಯಿತು. ಏಕೆಂದರೆ, ರಾಜ್ಯ ಸರ್ಕಾರದ ಮುಖಂಡರು ಮಾತ್ರ ವಿದ್ಯಾರ್ಥಿ ಪ್ರತಿನಿಧಿಗಳ ಹೆಸರಿನಲ್ಲಿ ವಿದೇಶಿ ಪ್ರವಾಸಕ್ಕೆ ಮುಂದಾಗಿದ್ದನ್ನು ತಿಳಿದ ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಇದನ್ನು ದೊಡ್ಡ ಚಳವಳಿಯನ್ನಾಗಿ ಪ್ರಾರಂಭಿಸಿದರು. ಈ ಘಟನೆಯು ರಾಜ್ಯದ

ರಾಜಕಾರಣದ ಧೃವೀಕರಣಕ್ಕೆ ನಾಂದಿಯಾಯಿತು. ಅಧಿಕಾರದಲ್ಲಿ ಇದ್ದ ರಾಜ್ಯ ಕಾಂಗ್ರೆಸ್ ಸರ್ಕಾರ ಜನಪ್ರತಿನಿಧಿಗಳ ಸಾರ್ವಜನಿಕ ವೆಚ್ಚದಲ್ಲಿ ತಮ್ಮ ಬಂಧುಗಳನ್ನು ಮತ್ತು ಆತ್ಮೀಯರನ್ನು ವಿದ್ಯಾರ್ಥಿ-ಯುವಜನ ನಾಯಕರೆಂದು ಜಪಾನ್ ದೇಶದ ಪ್ರವಾಸಕ್ಕೆ ಕಳುಹಿಸಿದರೆಂಬುದು ಈ ಹಗರಣದ ಮೂಲವಸ್ತುವಾಗಿತ್ತು. ಈ ಹಗರಣದಲ್ಲಿ ವಿದ್ಯಾರ್ಥಿಗಳ ಕೆಂಗಣ್ಣಿಗೆ ಗುರಿಯಾದವರು ಆಗಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಮತ್ತು ಹಣಕಾಸು ಮಂತ್ರಿ ರಾಮಕೃಷ್ಣ ಹೆಗಡೆ. 'ಎಕ್ಸ್‌ಪೋ-೭೦' ಎಂಬ ಹೆಸರಿನಡಿ ಜಪಾನ್‌ನಲ್ಲಿ ಅಂತರ್ ವಿಶ್ವವಿದ್ಯಾಲಯ ಸಮ್ಮೇಳನ ನಡೆಯಿತು. ಈ ಸಮ್ಮೇಳನಕ್ಕೆ ಬಹುಮುಖಿ ಸ್ವರೂಪವಿದ್ದು, ಬರೀ ವಿದ್ಯಾರ್ಥಿಗಳು ಮಾತ್ರವಲ್ಲದೇ, ಯುವಜನ, ರೈತರು ಕೂಡ ಆ ಸಮ್ಮೇಳನದಲ್ಲಿ ಭಾಗವಹಿಸಬಹುದಿತ್ತು. ಹೀಗಾಗಿ ಸರಕಾರದ ವತಿಯಿಂದ ನಿಯೋಗ ಆಯ್ಕೆ ಮಾಡುವುದರಲ್ಲಿ ಸರ್ಕಾರದ ಸ್ವಜನ ಪಕ್ಷಪಾತ ಮಾಡಿದೆ ಎಂಬುದು ವಿದ್ಯಾರ್ಥಿಗಳ ಆರೋಪವಾಗಿತ್ತು.

ರಾಜ್ಯ ಸರ್ಕಾರ ಆಯ್ಕೆ ಮಾಡಿದ ಪಟ್ಟಿಯಲ್ಲಿ ವೈಜ್ಞಾನಿಕವಾದ ಮಾನದಂಡವಿರಲಿಲ್ಲ. ಬೇಕಾಬಿಟ್ಟಿ ಕೂಡಿದ ಪಟ್ಟಿಯಲ್ಲಿ ಡಿ.ಬಿ.ಇನಾಮ್ದಾರ್, ಜೀವರಾಜ ಆಳ್ವ, ಜೆ.ಎಸ್.ದೇಶ್‌ಮುಖ್, ಕೈಲಾಸ ಪಾಟೀಲ್ ಹಾಗೂ ಆಗಿನ ಮುಖ್ಯ ಕಾರ್ಯದರ್ಶಿ ರೆಬೆಲ್ಲೋ ಅವರ ಮಗ ಇದ್ದರು. ಇದು ವಿದ್ಯಾರ್ಥಿಗಳನ್ನು ಕೆಣಕಿ ಚಳವಳಿಗೆ ಮುಂದಾಗುವಂತೆ ಮಾಡಿತು. ಈ ಪ್ರಕರಣದಲ್ಲಿ ತಮ್ಮದೇ ಆದ ರಾಜಕಾರಣ ಮಾಡಿದ ಮೈಸೂರು ಕಾಂಗ್ರೆಸ್‌ನ ಸಂಚಾಲಕ ದೇವರಾಜ ಅರಸು ಸಂಸ್ಥಾ ಕಾಂಗ್ರೆಸ್‌ನ ವಿರುದ್ಧ ಆಡಳಿತ ವಿರೋಧಿ ಅಲೆಯನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದರು. ಈ ಸಂದರ್ಭದಲ್ಲಿ ಅರಸು ಅವರಿಗೆ ಬೆಂಬಲವಾಗಿ ನಿಂತವರು ಕೆ.ಎಚ್.ಪಾಟೀಲ್, ಅಜೀಜ್ ಸೇಟ್, ಎಚ್.ಸಿದ್ದವೀರಪ್ಪ ಮೊದಲಾದವರು. ಪ್ರಗತಿಪರ ಚಿಂತಕರು ಹಾಗೂ ವಿದ್ಯಾರ್ಥಿಗಳು ಇಂಥ ಅವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ ಹೋರಾಟಕ್ಕಿಳಿದರು. ಈ ಹೋರಾಟ ರಾಷ್ಟ್ರ ರಾಜಕಾರಣಕ್ಕೆ ಮೇಲೆ ಮತ್ತಷ್ಟು ಬಲವನ್ನು ನೀಡಿತು. ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ವಿ.ಕೃ.ಗೋಕಾಕ್ ಬಗ್ಗೆ ಅಸಮಾಧಾನವಿದ್ದ ಒಂದು ವರ್ಗ ಕೂಡ ಈ ವಿಶ್ವವಿದ್ಯಾಲಯವನ್ನು ತಾವು ಮಾತ್ರ ಸರಿದಾರಿಗೆ ನಡೆಸಲು ಸಾಧ್ಯ ಎಂಬುದನ್ನು ಋಜುವಾತು ಮಾಡಲು ಹೋರಾಟಕ್ಕೆ ಮುಂದಾಯಿತು. ಆದರೆ ಈ ಎಲ್ಲದರ ಒಟ್ಟು ಉದ್ದೇಶ ಸರ್ಕಾರದ ವಿರುದ್ಧ ತಿರುಗಿ ಬೀಳುವುದಾಗಿತ್ತು. ಇದೇ ಕಾರಣಕ್ಕಾಗಿಯೇ ಎಕ್ಸ್‌ಪೋ-೭೦ ಚಳವಳಿ ಬರೀ ವಿದ್ಯಾರ್ಥಿಗಳ ಚಳವಳಿ ಮಾತ್ರವಾಗಿರಲಿಲ್ಲ, ಬದಲಿಕೆ ಅದಕ್ಕೆ ರಾಜಕಾರಣದ ಸೋಂಕು ಸಹ ಇತ್ತು. ಸಾರ್ವಜನಿಕರು ಕೂಡ ಈ ಹೋರಾಟಕ್ಕೆ ಹೆಚ್ಚಿನ ಬೆಂಬಲ ನೀಡಿದರು. ಇಂಥ ಹೋರಾಟ ನಡೆದಾಗಲೆಲ್ಲ ಕೆ.ಎಂ.ನಾಗಣ್ಣ, ಪಿ.ರಾಮದೇವ್, ಕಡಿದಾಳ ಮಂಜಪ್ಪ ಸಂಧಾನಕಾರರಾಗಿ ಭಾಗವಹಿಸುತ್ತಿದ್ದರು. ಎಕ್ಸ್‌ಪೋದಾರರ ಹಗರಣದಂಥ ವಿಷಯವನ್ನೆತ್ತಿಕೊಂಡ ಅಂದಿನ ರಾಜಕೀಯ ಪ್ರಾಬಲ್ಯದ ವಿರುದ್ಧ ತಿಕ್ಕಾಟ ನಡೆಸಿದ್ದು ಅರಸು ಅವರದು ಸಣ್ಣ ಸಾಧನೆಯಲ್ಲ. ಆ ದಿನಗಳಲ್ಲಿ ದೇವರಾಜ ಅರಸು ಅವರ ರಾಜಕೀಯ ಚಟುವಟಿಕೆಗಳು ಜೋರಾಗಿಯೇ ಇದ್ದವು.

ಈ ಘಟ್ಟದಲ್ಲಿಯೇ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಪಕ್ಕದಲ್ಲಿ ಇದ್ದ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ವಾಸವಾಗಿದ್ದ ವಿದ್ಯಾರ್ಥಿಗಳ ಮೇಲೆ ಪೋಲಿಸರ ನಡೆಸಿದ ಅಮಾನುಷ ಹಲ್ಲೆ, ಚಳವಳಿಗೆ ಒಮ್ಮೆಲೆ ತೀವ್ರ ಸ್ವರೂಪ ತಂದು ಕೊಟ್ಟಿತು. ವಿದ್ಯಾರ್ಥಿಗಳು ಬಸ್ಸಿಗೆ ಕಲ್ಲು ತೂರಿದ್ದೇ ಕಾರಣವಾಗಿ ಪೋಲೀಸರು ಹಾಸ್ಟೆಲ್ಲಿಗೆ ನುಗ್ಗಿ ವಿದ್ಯಾರ್ಥಿಗಳನ್ನು ಮನಬಂದಂತೆ ಥಳಿಸಿದರು. ಇವನ್ನೆಲ್ಲಾ ಪ್ರತಿಭಟಿಸಿ ಹೂಡಿದ ಚಳವಳಿಯಲ್ಲಿ ಎಂ.ರಘುಪತಿ, ಎಚ್.ಡಿ.ಗಂಗರಾಜ್, ಬಿ.ಎನ್.ನಾಣಯ್ಯ, ರೋಷನ್ ಬೇಗ್, ಎಂ.ಸೋಮಶೇಖರ್ ಹಲವಾರು ವಿದ್ಯಾರ್ಥಿ ನಾಯಕರು ಪ್ರಮುಖ ಪಾತ್ರವಹಿಸಿದ್ದರು.[೧] ಇಷ್ಟೆಲ್ಲಾ ಆದರೂ ಎಕ್ಸ್‌ಪೋ ನಿಯೋಗದಲ್ಲಿ ಇದ್ದವರು ಜಪಾನಿಗೆ ಹೋಗುವುದನ್ನು ತಡೆಯಲು ಈ ಚಳವಳಿಗಾರರಿಗೆ ಆಗಲಿಲ್ಲ ಎನ್ನುವುದು ವಿಶಾದಕರ ಸಂಗತಿ.

ಪ್ರದೇಶ ಕಾಂಗ್ರೇಸ್ ಸಂಚಾಲಕರಾಗಿದ್ದ ಅರಸು ಕಾಂಗ್ರೆಸ್ ಕಾರ್ಯಕರ್ತರ ಶಿಬಿರವೊಂದನ್ನು ರಾಜಾಜಿನಗರದ ಕಲಾ ಮಂದಿರವೊಂದರಲ್ಲಿ ಏರ್ಪಡಿಸಿ ಸಭೆಯಲ್ಲಿ ಲಿಂಗಾಯತ ರಾಜಕೀಯ ಸ್ವಾಮ್ಯವನ್ನು ಪ್ರಸ್ತಾಪಿಸಿ ಮಾತನಾಡಿದರು. ಬುದ್ಧ, ಬಸವ, ಅಂಬೇಡ್ಕರ್ ಅವರ ಕ್ರಾಂತಿಕಾರಕ ಸಂದೇಶಗಳನ್ನು ತುಚ್ಚ ವಸ್ತುಗಳನ್ನಾಗಿ ಮಾಡಿದ ಸಮಾಜದ ವಿಕೃತಿಯನ್ನು ವಿಶ್ಲೇಷಣೆಯನ್ನು ಮಾಡಿದರು. ಇದು ಅರಸು ಅವರ ರಾಜಕಾರಣದ ಮುತ್ಸಿದ್ಧಿಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಅನಾಥರು, ಆರ್ಥಿಕವಾಗಿ ಶೋಷಿತರು, ಸಾಮಾಜಿಕವಾಗಿ ದಲಿತರು ಆಗಿರುವ ಸಣ್ಣಪುಟ್ಟ ಸಮುದಾಯಗಳ ರಾಜಕೀಯ ಪಕ್ಷವು ಪ್ರಭಾವಿ ಸಮುದಾಯಗಳ ಏಕಸ್ವಾಮ್ಯವನ್ನು ಮುರಿಯಬಲ್ಲದು ಎಂಬ ಮಾತನ್ನು ತೇಲಿಬಿಟ್ಟರು. ಇದರಿಂದ ಉತ್ತೇಜಿತರಾದ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ವರ್ಗಗಳು ರಾಜಕೀಯವಾಗಿ ಸಂಘಟಿತರಾಗಲು ಮತ್ತಷ್ಟು ಪ್ರೇರಣೆ ಹೊಂದಲು ಸಹಾಯಕವಾಯಿತು. ಹೀಗೆ ಈ 'ಎಕ್ಸ್‌ಪೋ-೭೦' ಚಳವಳಿ ರಾಜ್ಯದಲ್ಲಿ ತುಂಬಾ ಪರಿಣಾಮಕಾರಿಯಾದ ರೀತಿಯಲ್ಲಿ ವಿದ್ಯಾರ್ಥಿಗಳಲ್ಲಿ ರಾಜಕೀಯ ಎಚ್ಚರವನ್ನು ಉಂಟುಮಾಡಿತು. ಹಾಗೇ ವಿದ್ಯಾರ್ಥಿ ಚಳವಳಿಗೆ ಮತ್ತಷ್ಟು ತೀವ್ರ ಸ್ವರೂಪವನ್ನು ನೀಡುವುದರೊಂದಿಗೆ ರಾಜ್ಯದಲ್ಲಿ ಇದೇ ಮುಂದೆ ವಿದ್ಯಾರ್ಥಿ ಚಳವಳಿಗಳು ಹುಟ್ಟಲು ಸಹಕಾರವಾಯಿತು. ಇದರೊಂದಿಗೆ ರಾಜಕಾರಣಿಗಳು ವಿದ್ಯಾರ್ಥಿಗಳನ್ನು ಬೇಕಾಬಿಟ್ಟಿ ಬಳಸಿಕೊಳ್ಳಲು ಸಹ ಕಾರಣವಾಯಿತು. ಆಗಿನ ರಾಜಕೀಯ ಪ್ರಭುತ್ವಗಳಾದ ಸಂಸ್ಥಾ ಕಾಂಗ್ರೆಸ್ಸಿಗರ ವಿರುದ್ಧ ಒಂದು ರಾಜಕೀಯ ಧ್ವನಿಯನ್ನು ದಾಖಲಿಸುವ ಅರಸು ಅವರ ಪ್ರಯತ್ನಕ್ಕೆ ಈ ಚಳವಳಿ ಒಂದು ವೇದಿಕೆಯನ್ನೇ ಒದಗಿಸಿದಂತಾಯಿತು ಎಂದು ಹೇಳಿದರೆ ತಪ್ಪಾಗಲಾರದು.

ಆ. ೧೯೭೧ರ ಲೋಕಸಭೆಯ ಚುನಾವಣೆ

ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ೧೯೬೯ರ ಮುಂಚಿತವಾಗಿ ಒಳಜಗಳಗಳು ಕಾಣಿಸುತ್ತಿದ್ದವು. ಅದು ಇಂದಿರಾ ಗಾಂಧಿಯ ಕಾಲದಲ್ಲಿಯೇ ಮುಂದುವರೆದವು. ಇಂಥ ಹಲವು ಭಿನ್ನಾಭಿಪ್ರಾಯಗಳೇ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಭಜನೆಯನ್ನು ಮತ್ತಷ್ಟು ತೀವ್ರಗೊಳಿಸಿತು. ಹೀಗಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಕಾಂಗ್ರೆಸ್ ಪಕ್ಷ ಒಡೆಯಿತು. ೨೨.೧೧.೧೯೬೯ರಂದು ದೆಹಲಿಯಲ್ಲಿ ಸೇರಿದ್ದ

ವಿಶೇಷ ಅಧಿವೇಶನದಲ್ಲಿ ಇಂದಿರ ಗಾಂಧಿಯವರು ಎಸ್.ನಿಜಲಿಂಗಪ್ಪ ಅವರನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಿದರು. ಇದಕ್ಕೆ ಪ್ರತಿಯಾಗಿ ನಿಜಲಿಂಗಪ್ಪ ಅವರು ೨೦.೧೨.೧೯೬೯ರಂದು ಅಹಮದಾಬಾದ್‌ನಲ್ಲಿ ತಮ್ಮ ಬೆಂಬಲಿಗರನ್ನು ಸೇರಿಸಿ ಕಾಂಗ್ರೆಸ್ ಅಧಿವೇಶನ ನಡೆಸಿದರು. ಇದೇ ಮುಂದೆ "ಸಂಸ್ಥಾ ಕಾಂಗ್ರೆಸ್" ಎಂದು ಹೆಸರಾಯಿತು. ಈ ಸಭೆಯಲ್ಲಿ ಪಕ್ಷವನ್ನು ಉಳಿಸಿ ಬೆಳೆಸಲು ನಿರ್ಧರಿಸಲಾಯಿತು.[೨] ಹೀಗಾಗಿ ಮತ್ತೆ ನಿಜಲಿಂಗಪ್ಪನವರೇ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣಾ ಆಯೋಗ ಈ ಪಕ್ಷವನ್ನು ಐ.ಎನ್.ಸಿ(ಒ) ಎಂದು ಗುರುತಿಸಿತು. ('ಒ' ಎಂದರೆ–ಆರ್ಗನೈಸೇಷನ್ ಅಥವಾ ಸಂಸ್ಥೆ) ಹೀಗೆ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹುಟ್ಟಿಕೊಂಡ ಈ ಪಕ್ಷಕ್ಕೆ "ಸಂಸ್ಥಾ ಕಾಂಗ್ರೆಸ್" ಎಂಬ ಹೆಸರು ರೂಢಿಗೆ ಬಂಧಿತು.

೧೯೭೧ರಲ್ಲಿ ಮೈಸೂರಿನಲ್ಲಿ 'ಆರ್ ಕಾಂಗ್ರೆಸ್'ನ ವಿರೋಧಿ ಬಣವಾದ 'ಸಂಸ್ಥಾ ಕಾಂಗ್ರೆಸ್'ನ ನಿಷ್ಠರಾದ ವೀರೇಂದ್ರ ಪಾಟೀಲ್ ಸರಕಾರ ಅಸ್ತಿತ್ವದಲ್ಲಿತ್ತು. ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರು ೧೯೭೧ರ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್‌ನ್ನು ಎದುರಿಸಲು ವಿರೋಧಿ ಮೈತ್ರಿಕೂಟದ ರಚನೆಗೆ ಪ್ರಾಧಾನ್ಯತೆಯನ್ನು ನೀಡಿದ್ದರು. ಆದರೆ, ಇದು ಯಾವುದೇ ಫಲ ನೀಡಲಿಲ್ಲ. ಮುಖ್ಯಮಂತ್ರಿ ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ಕೆ.ವಿ.ಶಂಕರೇಗೌಡ, ಬಿ.ಆಚಾರ್ಯ, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ನಾಗಪ್ಪ ಅವರಂಥ ನಿಷ್ಠಾವಂತ ನಾಯಕರನ್ನೊಳಗೊಂಡಿದ್ದ ಸಂಸ್ಥಾ ಕಾಂಗ್ರೆಸ್ ೪ರಿಂದ ೭ರವರೆಗೆ ಮಾರ್ಚ್ ೧೯೭೧ರಂದು ನಡೆದ ಲೋಕಸಭಾ ಚುನಾವಣೆಯಲ್ಲಿ ಕೇವಲ ೧೬ ಸ್ಥಾನಗಳನ್ನು ಗೆದ್ದುಕೊಂಡಿತು. ಆದರೆ, ಮೈಸೂರು ರಾಜ್ಯದಲ್ಲಿ ಯಾವುದೇ ಒಂದು ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಸಫಲವಾಗಲಿಲ್ಲ. ಏಕೆಂದರೆ, ಅರಸು ಅವರ ಸಂಘಟನಾ ಸಾಮರ್ಥ್ಯ ಹಾಗೂ ಇಂದಿರಾ ಗಾಂಧಿಯವರ ಪ್ರಭಾವ ರಾಜ್ಯದಲ್ಲಿ ಹೆಚ್ಚಾಗಿ ಕೆಲಸ ಮಾಡಿತ್ತು. ಇಲ್ಲಿ ಮುಖ್ಯವಾಗಿ 'ಸಂಸ್ಥಾ ಕಾಂಗ್ರೆಸ್' ಹಾಗೂ ವಿರೋಧ ಪಕ್ಷಗಳ ಹೊಂದಾಣಿಕೆಗಳು ಜನರನ್ನು ಸೆಳೆಯುವಲ್ಲಿ ವಿಫಲವಾದದ್ದು ಹಿನ್ನಡೆಗೆ ಕಾರಣವಾಯಿತು.

ಇ. ೧೯೭೨ರ ವಿಧಾನಸಭಾ ಚುನಾವಣೆಯ ರಾಜಕಾರಣ

೧೯೭೧ರ ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಯಿತು. ಈ ಸಂದರ್ಭದಲ್ಲಿ ಇಪ್ಪತ್ತೇಳು ಲೋಕಸಭಾ ಸ್ಥಾನಗಳನ್ನು 'ಇಂದಿರಾ ಕಾಂಗ್ರೆಸ್' ಗೆದ್ದುಕೊಂಡಿತು. ಈ ಚುನಾವಣಾ ಫಲಿತಾಂಶ ಅಂದು ಎಲ್ಲರ ನಿರೀಕ್ಷೆಯನ್ನು ತಲೆಕೆಳಕಾಗಿಸಿತ್ತು. ಇದೇ ಅವಧಿಯಲ್ಲಿ ರಾಜ್ಯದೊಳಗೆ ರಾಷ್ಟ್ರಪತಿ ಆಳ್ವಿಕೆಯು ಜಾರಿಯಾಯಿತು. ರಾಜ್ಯಪಾಲರು ರಾಜ್ಯದ ಆಡಳಿತದ ಸೂತ್ರವನ್ನು ವಹಿಸಿಕೊಂಡರು. ಆದರೆ, ಹತ್ತು ತಿಂಗಳ ನಂತರ ಕೇಂದ್ರ ಸರ್ಕಾರ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಸಲು ತೀರ್ಮಾನಿಸಿದಾಗ, ರಾಜ್ಯ ರಾಜಕಾರಣದ ವಲಯದಲ್ಲಿ ಅನೇಕ ಬದಲಾವಣೆಗಳು ಕಾಣಿಸಿದವು. ಹೀಗಾಗಿ ೧೯೭೨ರ ವಿಧಾನಸಭಾ ಚುನಾವಣೆಯು ದೇಶದ ರಾಜಕೀಯ ವಲಯದಲ್ಲೆಲ್ಲ ಕುತೂಹಲಕಾರಿಯಾಗಿ ಎಲ್ಲರ ಕಣ್ಣು ಮೈಸೂರು ರಾಜಕಾರಣದ ಮೇಲೆ ಕೇಂದ್ರಿತವಾಗುವಂತೆ

ಮಾಡಿತು. ಏಕೆಂದರೆ ಪ್ರಬಲ ರಾಷ್ಟ್ರೀಯ ಪಕ್ಷದ ಒಡಕಿನಿಂದ ದೊಡ್ಡ ವಿರೋಧ ಪಕ್ಷವು ಸಹ ವಿಸರ್ಜನೆಯಾಗಿತ್ತು. ಇದು ರಾಜ್ಯ ರಾಜಕಾರಣದ ಚರಿತ್ರೆಯಲ್ಲಿ ತಿರುವಿನ ಪ್ರಮುಖ ಅಂಶವಾಗಿತ್ತು. ಅಂದರೆ 'ಸಂಸ್ಥಾ ಕಾಂಗ್ರೆಸ್' ಬಣದ ನಾಯಕರಾದ ವಿರೇಂದ್ರಪಾಟೀಲ್ ಸ್ವಯಂ ರಾಜಕೀಯ ನಿವೃತ್ತಿ ಘೋಷಿಸಿಕೊಂಡರೆ, ರಾಮಕೃಷ್ಣ ಹೆಗಡೆಯವರು ಹಳಿಯಾಳ್ ಕ್ಷೇತ್ರದಲ್ಲಿ ಸಲ್ಲಿಸಿದ ತಮ್ಮ ಪತ್ರವನ್ನು ವಾಪಸ್ ಪಡೆದುಕೊಂಡು ಅಂದಿನ ರಾಜಕಾರಣದಿಂದ ದೂರಸರಿದರು. ಈ ಸಂದರ್ಭದಲ್ಲಿ ಇಂದಿರಾ ಕಾಂಗ್ರೆಸ್‌ನ ನಾಯಕರಾದ ದೇವರಾಜ ಅರಸು ಅವರು ರಾಜಕೀಯ ಹಕ್ಕಿನ ನೆಲೆಯನ್ನು ನಿರ್ಮಿಸಿಕೊಂಡರು.

ಈ ಚುನಾವಣೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ನಾಯಕತ್ವದ ಲೆಕ್ಕಾಚಾರ ಹಾಕುತ್ತಾ ಬಂದರಲ್ಲಿ ಅರಸು ಮಾತ್ರ ಯಶಸ್ವಿಯಾದರು. ಇಂದಿರಾ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯು ೧೩೩ ಮಂದಿ ಪರಿಶಿಷ್ಟರು, ಸಾಮಾಜಿಕವಾಗಿ ದುರ್ಬಲ ಜನರು ಹಾಗೂ ಅಲ್ಪಸಂಖ್ಯಾತರನ್ನು ಸೇರಿಸಲಾಯಿತು. ಉಳಿದ ೯೦ ಸ್ಥಾನಗಳನ್ನು ಶೂದ್ರವರ್ಗದ ಮೇಲ್ಜಾತಿಗಳಿಗೆ ಹಾಗೂ ಬ್ರಾಹ್ಮಣರಿಗೆ ಸೀಟು ನೀಡಲಾಯಿತು. ಇದಕ್ಕೂ ಮೊದಲು ಕಾಂಗ್ರೆಸ್ ರಾಜಕಾರಣದಲ್ಲಿ ೨೨೩ ಸದಸ್ಯರ ವಿಧಾನಸಭೆ ಚುನಾವಣೆಗೆ ನಿಲ್ಲಿಸಲು ಅಭ್ಯರ್ಥಿಗಳ ಪಟ್ಟಿಯಲ್ಲಿ ಸರಿಸುಮಾರು ೧೫೦ ಸದಸ್ಯರು ವಿಧಾನಸಭೆಯ ಚುನಾವಣೆಗೆ ಎಲ್ಲರೂ ಮೇಲ್ವರ್ಗಕ್ಕೇ ಸೇರಿದವರಾಗಿದ್ದರು. ಉಳಿದ ೭೩ ಸ್ಥಾನಗಳನ್ನು ದುರ್ಬಲ ಹಾಗೂ ಅಲ್ಪಸಂಖ್ಯಾತರಿಗೆ ಮಾತ್ರ ನೀಡುವ ಪ್ರವೃತ್ತಿ ಬೆಳೆದುಕೊಂಡು ಬಂದಿತ್ತು. ಈ ಸಂಪ್ರದಾಯವನ್ನು ಸಂಪೂರ್ಣವಾಗಿ ಬದಲಾಯಿಸಿ ಅರಸು ಅವರು ಹೆಚ್ಚು ವಿಧಾನಸಭಾ ಸ್ಥಾನಗಳನ್ನು ತಳಸಮುದಾಯಗಳಿಗೆ ಹಂಚಿದ್ದು ಈ ಚುನಾವಣೆಯ ವಿಶೇಷ ಎಂದರೆ ತಪ್ಪಾಗಲಾರದು. ಒಟ್ಟು ೨೧೬ ಸ್ಥಾನಗಳಿಗೆ ನಡೆದ ಈ ಚುನಾವಣೆಯಲ್ಲಿ ಕಾಂಗ್ರೆಸ್(ಆರ್), ಹಾಗೂ ಕಾಂಗ್ರೆಸ್(ಓ) ಪ್ರತ್ಯೇಕವಾಗಿ ಸ್ಪರ್ಧಿಸಿದ್ದು ಇನ್ನೊಂದು ವಿಶೇಷ. ಈ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಒಟ್ಟು ೧೬೫ ಸ್ಥಾನಗಳನ್ನು ಗೆದ್ದುಕೊಂಡಿದ್ದಲ್ಲದೆ ಅದರಲ್ಲಿ ೯೨ ಮಂದಿ ದುರ್ಬಲರು ಮತ್ತು ಮತೀಯ ಅಲ್ಪಸಂಖ್ಯಾತರು ಹೆಚ್ಚಾಗಿ ಅರಿಸಿ ಬಂದಿದ್ದು ವಿಶೇಷ . ಇಂದಿರಾ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ೧೭ ಮಹಿಳೆಯರಲ್ಲಿ ೧೧ ಮಂದಿ ಮಹಿಳೆಯರು ಆಯ್ಕೆಯಾದದ್ದು ಈ ಚುನಾವಣೆಯ ಇನ್ನೊಂದು ವಿಶೇಷವಾಗಿತ್ತು.

೧೯೭೨ರ ವಿಧಾನಸಭಾ ಚುನಾವಣೆಯ ಪಕ್ಷಗಳ ಬಲಾಬಲ

ಕ್ರಸಂ.	ಪಕ್ಷಗಳು	ಪಡೆದಸ್ಥಾನ
೧	ಕಾಂಗ್ರೇಸ್(ಆರ್)	೧೬೫
೨	ಕಾಂಗ್ರೇಸ್(ಓ)	೨೪
೩	ಕಮ್ಯುನಿಸ್ಟ್ ಪಕ್ಷ	೦೩

೪	ಸಮಾಜವಾದಿ ಪಕ್ಷ	೦೩
೫	ಇತರ ಪಕ್ಷಗಳು	೦೬
೬	ಪಕ್ಷೇತರರು	೧೫
	ಒಟ್ಟು	೨೧೬

ಈ ಚುನಾವಣೆಯು 'ಕರ್ನಾಟಕ ರಾಜ್ಯ ಲಿಂಗಾಯತರ ಜಹಗೀರು' ಎನ್ನುವ ಭಾವನೆ ಕಳಚಿತು. ಅರಸು ಅವರು ಲಿಂಗಾಯತ ಜಾತಿ ರಾಜಕಾರಣವನ್ನು ಬೆನ್ನುಮೂಳೆ ಮುರಿದರು. ಒಟ್ಟು ಕಾಂಗ್ರೆಸ್ ಪಕ್ಷ ೧೬೫ ಸ್ಥಾನಗಳನ್ನು ಗೆದ್ದದ್ದು ವಿಶೇಷ. ಹಿಂದುಳಿದ ವರ್ಗದ ವಿಶೇಷ ಸ್ಥಾನಮಾನ ನೀಡಲು ಈ ಚುನಾವಣೆ ಕಾರಣವಾಯಿತು.[೩] ಕರ್ನಾಟಕ ರಾಜಕಾರಣದ ವಲಯದಲ್ಲಿ ಹೊಸತನದ ಅಲೆಯನ್ನು ಮೂಡಿಸಿತು. ಅದುವರೆಗೂ ಇದ್ದ ರಾಜಕೀಯದ ಗುತ್ತಿಗೆಯನ್ನು ಕಿತ್ತೊಗೆದು ಅರಸು ೨೦ ಮಾರ್ಚ್ ೧೯೭೨ರಲ್ಲಿ ನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಬಹುಸಂಖ್ಯಾತ ಜನ ಸಮುದಾಯದವರಿಗೆ, ಕೋಮಿನವರಿಗೆ ಮೀಸಲಿದ್ದ ರಾಜಕೀಯ ಪ್ರಾಬಲ್ಯವನ್ನು ಮುರಿದು ಅಲ್ಪಸಂಖ್ಯಾತರು ಕರ್ನಾಟಕದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಬಲ್ಲರು ಎಂಬುದನ್ನು ಅರಸು ಈ ಚುನಾವಣೆಯಲ್ಲಿ ಬಹುಮತ ಪಡೆಯುವುದರೊಂದಿಗೆ ಸಾಬೀತು ಪಡಿಸಿದರು. ಇದರ ಯಶಸ್ಸಿಗೆ ಅರಸು ಅವರ ರಾಜಕಾರಣದ ತಂತ್ರಗಾರಿಕೆಯೇ ಕಾರಣ.

೩.೨. ೧೯೭೩ರ 'ಬೂಸಾ ಚಳವಳಿ'

೧೯೭೨ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಪ್ರಾರಂಭದಲ್ಲಿಯೇ ಈ ಬೂಸಾ ದಂಗೆಯ ಪ್ರಕರಣದಿಂದ ಅರಸು ಅವರ ರಾಜಕಾರಣದ ಸೈದ್ಧಾಂತಿಕತೆ ಕುಂಠಿತವಾಗಲು ಕಾರಣವಾಯಿತು. ಏಕೆಂದರೆ ಒಂದು ಸಣ್ಣ ವಿಚಾರವನ್ನು ಅಂದಿನ ವಿರೋಧ ಪಕ್ಷಗಳು ಹೇಗೆ ರಾಜಕಾರಣದಲ್ಲಿ ಬಳಸಿಕೊಂಡವು ಎಂಬುವುದನ್ನು ನಾವು ಈ ಬೂಸಾ ಪ್ರಕರಣದಲ್ಲಿ ಹಿನ್ನೆಲೆಯಲ್ಲಿ ನೋಡಿದಾಗ ಕಂಡು ಬರುತ್ತದೆ

ಬೂಸಾ ಪ್ರಕರಣದ ಹಿನ್ನೆಲೆ

ಅರಸು ಸರ್ಕಾರ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಿಂತನೆಗಳಲ್ಲಿ ಬಿ.ಬಸವಲಿಂಗಪ್ಪ ನವರ ಪಾತ್ರ ಮುಖ್ಯವಾದದ್ದು. ಬಸವಲಿಂಗಪ್ಪ ಅವರು ದಲಿತ-ಹಿಂದುಳಿದ-ಅಲ್ಪಸಂಖ್ಯಾತರ ಐಕ್ಯತೆಯನ್ನು ಪ್ರತಿಪಾದಿಸಿ, ದಲಿತರ ಶೋಷಣೆ ಹಾಗೂ ಮೌಢ್ಯದ ವಿರುದ್ಧ ನೇರವಾಗಿ ತನ್ನ ಮಾತುಗಳ ಮುಖೇನ ಖಂಡಿಸಿ, ಕಾನೂನಿನ ಮುಖಾಂತರ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಅವುಗಳಲ್ಲಿ ಪ್ರಮುಖವಾಗಿ,

೧. ದಲಿತರು ತಲೆಯ ಮೇಲೆ ಮಲ ಹೋರುವ ಪದ್ಧತಿ ರದ್ಧತಿ ಕಾನೂನು ಮಾಡಿದರು.

೨. ನಿವೇಶನ ಹಂಚಿಕೆಯಲ್ಲಿ ಒಂದೇ ಕಡೆ ಒಂದೇ ಜಾತಿಯ ಜನರಿಗೆ ಕೂಡದೆಂದು ತಂದ ಆಜ್ಞೆ.

೩. ನಿಗದಿತ ಅವಧಿಯಲ್ಲಿ ಬೆಂಗಳೂರು ಮಹಾನಗರಕ್ಕೆ ಕಾವೇರಿ ನೀರು ಪೂರೈಕೆ ಯೋಜನೆ ಆರಂಭಿಸಿದ್ದು.

೪. ಹಿಂದುಗಳು ದಲಿತರನ್ನು ಸಮಾನರಂತೆ ಕಾಣುತ್ತಿಲ್ಲ. ಆದ್ದರಿಂದ ಇವರು ಸೃಷ್ಟಿಸಿದ ದೇವರ ವಿಗ್ರಹಗಳನ್ನು ಮತ್ತು ದೇವರ ಪೋಟೋಗಳನ್ನು ಕಿತ್ತು ಚರಂಡಿಗೆ ಎಸೆಯಿರಿ ಎಂದರು.

೫. ದಲಿತರು ಸ್ವಾವಲಂಬಿ, ಸ್ವಾಭಿಮಾನಿಗಳಾಗಿ ಹಾಗೂ ಶಿಕ್ಷಿತರಾಗಬೇಕು ಜೊತೆಗೆ ತಮ್ಮ ಹಕ್ಕುಗಳನ್ನು ರೂಢಿಸಿಕೊಳ್ಳಲು ಸಂಘನಾತ್ಮಕ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

೬. ಅಸ್ಪೃಶ್ಯತೆ, ಮೂಢನಂಬಿಕೆ, ಕ್ರೌರ್ಯ, ದಬ್ಬಾಳಿಕೆಯನ್ನು ಕಟುವಾಗಿ ನಿಂದಿಸಿದ್ದು.

ಈ ಮೇಲಿನ ಪ್ರಮುಖ ಅಂಶಗಳನ್ನು ತಮ್ಮ ರಾಜ್ಯಸರ್ಕಾರದ ಆಡಳಿತದಲ್ಲಿ ಹಾಗೂ ಬಹಿರಂಗ ಸಭೆಗಳಲ್ಲಿ ಮುಕ್ತವಾಗಿ ವಾದವನ್ನು ಮಂಡಿಸುತ್ತಿದ್ದದ್ದು ಗಮನಾರ್ಹ. ಇದರಿಂದ ರಾಜ್ಯದ ಸಂಪ್ರಾದಾಯವಾದಿಗಳು, ಭೂಮಾಲೀಕರು, ಬ್ರಾಹ್ಮಣಶಾಹಿತ್ವ ದೃಷ್ಟಿಕೋನ ಹೊಂದಿದ್ದವರು ಬಿ.ಬಸವಲಿಂಗಪ್ಪ ಅವರನ್ನು ಪೌರಾಡಳಿತ ಸಚಿವ ಸ್ಥಾನದಿಂದ ಕೆಳಗಿಳಿಸಲು ತಂತ್ರಗಾರಿಕೆ ನಡೆಸುತ್ತಿದ್ದರು. ಇದೇ ಸಮಯದಲ್ಲಿ ನವೆಂಬರ್ ೧೯, ೧೯೭೩ರಂದು ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಎಸ್.ಸಂಜೀವಯ್ಯ ಮತ್ತು ಎಸ್.ವೀರಭದ್ರಯ್ಯ ಅವರು 'ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್' ಎಂಬ ಸಂಸ್ಥೆಯ ಮೂಲಕ 'ಹೊಸ ಅಲೆ' (ನ್ಯೂ ವೇವ್ಸ್) ಎಂಬ ವಿಷಯವನ್ನು ಕುರಿತಂತೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಆಗಿನ ರಾಜ್ಯ ಸರ್ಕಾರದ ಪೌರಾಡಳಿತ ಸಚಿವರಾಗಿ ಮಲ ಹೋರುವ ಪದ್ಧತಿಯನ್ನು ಕಾನೂನಾತ್ಮಕವಾಗಿ ನಿಷೇಧಿಸಿದ್ದ ಬಿ.ಬಸವಲಿಂಗಪ್ಪ ಅವರನ್ನು ಹಾಗೂ ಕೋಲಾರದ ರಾಜಕಾರಣಿ ಆರ್ಮುಗಂ ಅವರನ್ನು ಆಹ್ವಾನಿಸಲಾಗಿತ್ತು. ಇಲ್ಲಿ ಬಿ.ಬಸವಲಿಂಗಪ್ಪ ಅವರು ತಮ್ಮ ಭಾಷಣದ ಸಮಯದಲ್ಲಿ ಮಾತನಾಡುತ್ತಿದ್ದಾಗ 'ಕನ್ನಡ ಬರಹಗಳೇನಿದ್ದರೂ ಬೂಸಾ ಇದ್ದಂತೆ, ಇಂಗ್ಲೀಷ್ ಬರಹಗಳಲ್ಲಿರುವ ಪ್ರೌಢಿಮೆ ಕನ್ನಡ ಸಾಹಿತ್ಯದ ಬ್ರಾಹ್ಮಣರ ಬರಹಗಳಲ್ಲಿರುವುದಿಲ್ಲ' ಎಂಬ ಅರ್ಥದಲ್ಲಿ 'ಕನ್ನಡ ಸಾಹಿತ್ಯ ಬೂಸಾ' ಎಂದು ಹೇಳಿದ್ದರು.

"ಈ ಸವರ್ಣೀಯರು ಬರೆದ ಕಳಪೆ ಕನ್ನಡ ಸಾಹಿತ್ಯವನ್ನೋದಿ ಕೆಟ್ಟು ಹೋಗಬೇಡಿ. ಅದೆಲ್ಲಾ ಸಾಹಿತ್ಯ ಅಲ್ಲ. ಬರೀ ಬೂಸಾ. ಅದನ್ನೆಲ್ಲಾ ಗಟಾರಕ್ಕೆ ಎಸೆಯಿರಿ. ಪುರೋಗಾಮಿ ವಿಚಾರವನ್ನು ಸ್ಪಂದಿಸಬಲ್ಲ ಇಂಗ್ಲೀಷ್ ಸಾಹಿತ್ಯವನ್ನೋದಿ" ಎಂದು ಕರೆ ನೀಡಿದರು. "ಕೇವಲ ಪುಸ್ತಕವನ್ನೋದುವುದರಿಂದ ದೇಶಪ್ರೇಮ, ಸ್ವತಂತ್ರ ವಿಚಾರಶಕ್ತಿ, ಧೈರ್ಯ, ಸೇವಾ ಮನೋಭಾವನೆ

ಬರುವುದಿಲ್ಲ. ಕನ್ನಡ ಅಭಿಮಾನ ಇರಬೇಕು, ಕನ್ನಡದಲ್ಲಿ ಮಾತನಾಡಬೇಕು, ಕನ್ನಡವನ್ನು ಬೆಳೆಸಬೇಕು, ಆದರೆ ಇಂಗ್ಲೀಷ್ ಬರುವುದರಿಂದ ವಿಚಾರಶಕ್ತಿ, ಸ್ವತಂತ್ರ ಮನೋಭಾವ, ದೇಶಪ್ರೇಮ ಎಲ್ಲಾ ಬರುತ್ತದೆ" ಎಂದು ಕನ್ನಡಪರ ಎಂದು ಕೂಗಾಡುತ್ತಿದ್ದವರ ಮೇಲೆ ಬಸವಲಿಂಗಪ್ಪ ಹರಿಹಾಯ್ದರು. ನಂತರ ತಮ್ಮ ಮಾತುಗಳನ್ನು ಎಂದಿನಂತೆ ಹಿಂದೂ ಧರ್ಮದ ಜಾತಿವ್ಯವಸ್ಥೆ, ಕಂದಾಚಾರ, ಶೋಷಣೆಗಳ ವಿರುದ್ಧ ತಿರುಗಿಸಿದರು. ಬಸವಲಿಂಗಪ್ಪ ಅವರ ವಿಚಾರಗಳನ್ನು ಮೆಚ್ಚಿದರೂ, ಸಭೆಯಲ್ಲಿದ್ದ ಸಾಹಿತಿ ಶ್ರೀಕೃಷ್ಣ ಆಲನಹಳ್ಳಿ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾಕ್ಕೆ ಹೋಲಿಸಿದ್ದನ್ನು ಎದ್ದುನಿಂತು ವಿರೋಧಿಸಿದರು. ಮರುದಿನ ಪತ್ರಿಕೆಗಳಲ್ಲಿ ಬಸವಲಿಂಗಪ್ಪನವರ ಹೇಳಿಕೆಗಳು ಮುಖಪುಟದಲ್ಲಿ ಪ್ರಕಟಗೊಂಡವು. ಅಂದಿನಿಂದ ಹೊಸನೀತಿಯ ಭಾಷಣ, ಹೊಸದೊಂದು ದಿಕ್ಕು ಹಿಡಿದು 'ಬೂಸಾ ದಂಗೆ'ಗೆ ಕಾರಣವಾಯಿತು.

ಬೂಸಾ ಪ್ರಕರಣದ ಬೆಳವಣಿಗೆ

ಈ ಮೈಸುರು ವಿ.ವಿ.ಶತಮಾನೋತ್ಸವ ಕಾರ್ಯಕ್ರಮದ ಮರುದಿನವೇ ಸಾಹಿತಿಗಳು ಮತ್ತು ಕನ್ನಡ–ಸಂಘ ಸಂಸ್ಥೆಗಳಿಂದ ಬಸವಲಿಂಗಪ್ಪನವರ ಹೇಳಿಕೆ ಖಂಡನೆ, ಪ್ರತಿಕೃತಿ ದಹನ, ಪ್ರತಿಭಟನೆ ಮತ್ತು ಸಚಿವಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಡಗಳು ಬಂದವು. ಇದರ ಪ್ರತಿಯಾಗಿ ದಲಿತ ವಿದ್ಯಾರ್ಥಿಗಳು ಬಸವಲಿಂಗಪ್ಪ ಅವರ ಬೆಂಬಲಕ್ಕೆ ನಿಂತರು. ಸವರ್ಣೀಯ ವಿದ್ಯಾರ್ಥಿಗಳು ಮುಖ್ಯವಾಗಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಕಾಲೇಜುಗಳು ಬಂದ್ ಮಾಡಿಸಿ ಬೀದಿ–ಬೀದಿಗಳಲ್ಲಿ ಬಸವಲಿಂಗಪ್ಪ ಪರ ಮತ್ತು ವಿರುದ್ಧ ಚಳವಳಿಗಳು ನಡೆದದ್ದು ಒಂದು ಚಾರಿತ್ರಿಕ ಘಟ್ಟ ಎಂದು ಗುರುತಿಲಾಗಿದೆ. ಸವರ್ಣೀಯ ವಿದ್ಯಾರ್ಥಿ ಮುಖಂಡರು ದಲಿತ ವಿದ್ಯಾರ್ಥಿಗಳನ್ನು ಗುರುತಿಸಿ ಕಾಲೇಜು–ಹಾಸ್ಟೆಲ್‌ಗಳಿಗೆ ನುಗ್ಗಿ ಹೊಡೆಯುವುದು ಸಾಮಾನ್ಯವಾಗಿತ್ತು. ಈ ಸಂದರ್ಭದಲ್ಲಿ ಕುವೆಂಪು ಹಾಗೂ ಯು.ಆರ್.ಅನಂತಮೂರ್ತಿ ಬಸವಲಿಂಗಪ್ಪನವರ ಪರ ನಿಂತರು. ಎಡ ಸಮಾಜವಾದಿ ಪಕ್ಷಗಳು ಬಸವಲಿಂಗಪ್ಪ ಪರ ನಿಂತವು.

> "ಕನ್ನಡ ಸಾಹಿತ್ಯದಲ್ಲಿರುವ ಎಲ್ಲಾ ಸಾಹಿತ್ಯವೂ
> ಗಟ್ಟಿತನದಿಂದ ಕೂಡಿಲ್ಲ ಇದರಿಂದ ಸಮಾಜದ ಒಳತಿಗೆ
> ಸಹಕಾರಿಯಾಗುವಂಥದ್ದು ಬಹಳಷ್ಟು ಕಡಿಮೆ ಇದೆ"

ಯು.ಆರ್.ಅನಂತಮೂರ್ತಿ ಕನ್ನಡ ಸಾಹಿತ್ಯದ ಬಗ್ಗೆ ಭೇದಿಸಲು ಬಸವಲಿಂಗಪ್ಪ ಅವರಿಗೆ ಎಲ್ಲಾ ಹಕ್ಕು ಬದ್ಧತೆ ಇವೆ. ಅದಲ್ಲದೆ ಕನ್ನಡ ಸಾಹಿತ್ಯ ಚರಿತ್ರೆ ಬಗ್ಗೆ ಬಸವಲಿಂಗಪ್ಪ ಆಡಿರುವ ಮಾತುಗಳ ವಾಸ್ತವಕ್ಕೆ ಹತ್ತಿರವಾಗಿವೆ, ಎಂದು ಮಡಿಕೇರಿಯ ಒಂದು ಸಭೆಯಲ್ಲಿ ಹೇಳಿದರು." ಆದರೂ, ಕನ್ನಡ ಪರ ಸಂಘಟನೆಗಳು, ವಿದ್ಯಾರ್ಥಿಗಳ ಪ್ರತಿಭಟನೆಗಳು ಮುಂದುವರೆಸಿದರು. ಶಿವಮೊಗ್ಗ, ಧಾರವಾಡ, ಬೆಳಗಾವಿ, ಮಂಡ್ಯ ಮುಂತಾದ ಕಡೆಗಳಲ್ಲಿ ಹೋರಾಟಗಳು ಉಗ್ರಸ್ವರೂಪ ಪಡೆದವು. ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಒಟ್ಟುಗೂಡಿಸಿದ ವಿದ್ಯಾರ್ಥಿಗಳ ತಾತ್ಕಾಲಿಕ ಕ್ರಿಯಾ

ಸಮಿತಿಯು ಮೈಸೂರು ಮಹಾರಾಜ ಕಾಲೇಜಿನ ಕೆ.ಸಿ.ಶಂಕರೇಗೌಡ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಹೋರಾಟ ಮುಂದುವರಿಯುವುತ್ತಿದ್ದಂತೆಯೇ ಕನ್ನಡ ಪರಹೋರಾಟಗಾರರಾದ ವಾಟಾಳ್ ನಾಗರಾಜ್, ಜಿ.ನಾಡಿಗೇರ ಕೃಷ್ಣರಾಯ, ಜಿ.ನಾರಾಯಣಕುಮಾರ್ ಅನೇಕರು ಬಸವಲಿಂಗಪ್ಪನವರನ್ನು ಸಚಿವ ಸಂಪುಟದಿಂದ ವಜಾ ಮಾಡುವವರೆಗೂ ಹೋರಾಟ ಮಾಡುವುದಾಗಿ ಘೋಷಿಸಿ, ಹೋರಾಟವನ್ನು ಮುಂದುವರಿಸಿದರು.[೬] ಈ ಹೋರಾಟದ ಕಾವು ಹೆಚ್ಚಾಗುತ್ತಿದ್ದಂತೆ ಬಸವಲಿಂಗಪ್ಪ ಅವರು

"ಏಕೀಕರಣ ಸಮಿತಿಯ ಕಾರ್ಯದರ್ಶಿಯಾಗಿ ದುಡಿಯುವ ನಾನು ಕನ್ನಡ ವಿರೋಧಿಯಲ್ಲ. ಕನ್ನಡದ ವಿರುದ್ಧ ನಾನು ಎಂದೂ ಮಾತನಾಡಿಲ್ಲ. ಆದರೆ, ಕನ್ನಡದಲ್ಲಿ ಬರೆದ ಕೆಲವು ಪುಸ್ತಕಗಳ ಬಗ್ಗೆ ಮಾತ್ರ ನನ್ನ ಅಭಿಪ್ರಾಯ ವ್ಯಕ್ತಪಡಿಸಿರುವೆ"

ಎಂದು ಸ್ಪಷ್ಟಪಡಿಸಿದರೂ ಚಳವಳಿ ಕಡಿಮೆಯಾಗಲಿಲ್ಲ. ರಾಜ್ಯದಲ್ಲಿ ಎರಡು ವಾರಗಳ ಕಾಲ ಶಾಲಾ ಕಾಲೇಜುಗಳನ್ನು ಮುಚ್ಚಲಾಯಿತು. ಅನೇಕ ಕಡೆಗಳಲ್ಲಿ ಪ್ರತಿಬಂಧಕಾಜ್ಞೆಗಳು ಜಾರಿಗೆ ಬಂದವು. ಮುಖ್ಯಮಂತ್ರಿ ದೇವರಾಜ ಅರಸು ಚಳವಳಿಗಾರರಲ್ಲಿ ಹೋರಾಟವನ್ನು ನಿಲ್ಲಿಸುವಂತೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿಯುವುದನ್ನು ಕಂಡು ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ನೇತೃತ್ವದಲ್ಲಿ ಶಾಂತಿ ಸಮಿತಿಯೊಂದನ್ನು ರಚಿಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಚ್.ನರಸಿಂಹಯ್ಯ ಅವರು ಎಲ್ಲಾ ಕಾಲೇಜುಗಳ ಪ್ರಿನ್ಸಿಪಾಲರುಗಳ ಶಾಂತಿ ಸಭೆ ಕರೆದು ಶಾಂತಿ ಕಾಪಾಡಲು ಸೂಚಿಸಿದರು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಅನೇಕ ಕಡೆ ಬಂದ್, ಹಿಂಸಾಚಾರ, ಬಸ್ಸಿಗೆ ಬೆಂಕಿ, ಲಾಠಿಪ್ರಹಾರ ನಿತ್ಯದ ಬೆಳವಣಿಗೆಯಾಗಿತ್ತು. ಅರಸು ಸಂಪುಟದ ಕೆ.ಎಚ್.ಪಾಟೀಲ್ ಹಾಗೂ ಹುಚ್ಚು ಮಾಸ್ತಿಗೌಡ ಅವರುಗಳು ಬಸವಲಿಂಗಪ್ಪನವರ ವಿರುದ್ಧ ವಿದ್ಯಾರ್ಥಿಗಳನ್ನು ಎತ್ತಿಕಟ್ಟಿರುವ ವಿಚಾರ ಬಹಿರಂಗವಾಗಿತ್ತು. ಅರಸು ಅವರು ರಾಜಿನಾಮೆ ಕೇಳಿರಲಿಲ್ಲ. ಬಸವಲಿಂಗಪ್ಪ ಅವರೂ ಕೂಡ ಸ್ವತಃ ರಾಜೀನಾಮೆ ನೀಡಲು ಮುಂದೆ ಬರಲಿಲ್ಲ.

ಬೂಸಾ ಪ್ರಕರಣದ ಅಂತ್ಯ

ರಾಜ್ಯ ಸರ್ಕಾರ ಈ ಬೂಸಾ ದಂಗೆ (ಚಳವಳಿ)ಯನ್ನು ಹತ್ತಿಕ್ಕಲು ಆಗದ ಕಾರಣ ಸಚಿವ ಬಸವಲಿಂಗಪ್ಪ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕೆಂದು ದೇವರಾಜ ಅರಸು ಅವರಿಗೆ ಒತ್ತಡವನ್ನು ತಂದರು. ಆಗಿನ ಸಮಾಜವಾದಿ ಪಕ್ಷದ ಅಧ್ಯಕ್ಷ ಜೆ.ಎಚ್.ಪಟೇಲ್ ಅವರು 'ಈ ಪ್ರತಿಕ್ರಿಯೆಗಳನ್ನು ನೋಡಿದರೆ ಭಾಷೆಯಾಗಿ ಮೀರಿದ ಅಂಶಗಳು ಈ ಹೋರಾಟದಲ್ಲಿ ಕಾಣುತ್ತಿದ್ದೇವೆ. ಇದರ ಬದಲು ಕನ್ನಡ ರಾಜ್ಯ ಭಾಷೆಯ ಶಿಕ್ಷಣ ಮಾಧ್ಯಮ ಮತ್ತು ನ್ಯಾಯಾಂಗ ಭಾಷೆಯಾಗಲು ಹೋರಾಟ ನಡೆಸುವುದು ಉಚಿತ' ಎಂದರು. ನಂತರ ಬೆಂಗಳೂರಿನಲ್ಲಿ ಸೆಪ್ಟೆಂಬರ್ ೫ರಂದು ಎಂ.ಮಲ್ಲಿಕಾರ್ಜುನಸ್ವಾಮಿ, ಕೆ.ಎಚ್.ರಂಗನಾಥ್ ಸೇರಿದಂತೆ ಹತ್ತು ಮಂದಿ ಸಂಪುಟ ದರ್ಜೆಯ

ಸಚಿವರು ಬಸವಲಿಂಗಪ್ಪನವರಿಗೆ ಬೆಂಬಲವಾಗಿ ಸಾಮೂಹಿಕ ರಾಜೀನಾಮೆ ನೀಡಿದರು. ಅಂತಿಮವಾಗಿ ಬಸವಲಿಂಗಪ್ಪ ಕೂಡ ತಮ್ಮ ರಾಜೀನಾಮೆ ಸಲ್ಲಿಸಿದರು. ಈ ಎಲ್ಲಾ ರಾಜೀನಾಮೆ ಪತ್ರಗಳನ್ನು ತೆಗೆದುಕೊಂಡು ಮುಖ್ಯಮಂತ್ರಿ ಅರಸು ಅವರು ದೆಹಲಿಯಲ್ಲಿ ಇಂದಿರಾ ಗಾಂಧಿಯವರನ್ನು ಭೇಟಿಯಾದರು.

ರಾಜ್ಯ ರಾಜಕಾರಣದ ಪರಿಸ್ಥಿತಿಯನ್ನು ಅರಸು ಅವರು ವಿವರಿಸಿದರು. ಅಂತಿಮವಾಗಿ ಸಚಿವ ಸಂಪುಟದಿಂದ ಬಸವಲಿಂಗಪ್ಪ ಅವರನ್ನು ಕೈಬಿಟ್ಟು ಹೊಸದಾಗಿ ಸಚಿವ ಸಂಪುಟವನ್ನು ರಚಿಸಬೇಕಾಯಿತು. ದಲಿತ ಹಾಗೂ ಹಿಂದುಳಿದ ವರ್ಗಗಳ ನಾಯಕರಾಗಿ ಹೆಸರು ಮಾಡಿದ್ದ ಅರಸು ಅವರು ಒಬ್ಬ ಪ್ರಗತಿಪರ ಚಿಂತಕ, ರಾಜಕಾರಣಿಯಾದ ಬಿ.ಬಸವಲಿಂಗಪ್ಪ ಅವರನ್ನು ಯಾಕೆ ಬೆಂಬಲಿಸಲಿಲ್ಲ? ಪ್ರಬಲವರ್ಗಗಳಿಗೆ ಮಣಿದರೆ ಅಥವಾ ಅವರ ತತ್ವವನ್ನು ಗಾಳಿಗೆ ತೂರಿ ಮುಖ್ಯಮಂತ್ರಿ ಅಧಿಕಾರಕ್ಕೆ ಕಟಿಬದ್ಧರಾದರೆ, ಅಥವಾ ಬಸವಲಿಂಗಪ್ಪ ಅವರು ದಲಿತರು ಎಂಬ ಕಾರಣಕ್ಕೆ ರಾಜೀನಾಮೆ ನೀಡಬೇಕಾಯಿತೇ ಎಂಬ ಹಲವಾರು ಪ್ರಶ್ನೆಗಳು ಬರುತ್ತದೆ. ಭಾರತದಂತಹ ಜಾತಿ-ಧರ್ಮದ ಭೂಮಾಲೀಕತ್ವದ ರಾಜಕಾರಣದಲ್ಲಿ ತಾತ್ವಿಕ ಸಿದ್ಧಾಂತ ಬದ್ಧತೆಯನ್ನು ಇಟ್ಟುಕೊಂಡರೆ ಅದು ಮುಖ್ಯಮಂತ್ರಿಯ ರಾಜೀನಾಮೆ ರಾಜಿಯಾಗುತ್ತದೆ ಎಂಬುದನ್ನು ಅರಸು ಅವರಿಂದ ವ್ಯಕ್ತವಾಗುತ್ತದೆ. ಅರಸು ಅವರ ಸಮುದಾಯ ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿದ್ದು ಈ ರೀತಿಯ ತೀರ್ಮಾನಕ್ಕೆ ಬರುವುದು ಒಂದು ಕಾರಣವಾಗಿರಬಹುದೇನೋ. ಆದರೆ ಪ್ರಬಲ ಸಮುದಾಯದ ಮುಖ್ಯಮಂತ್ರಿ ಅರಸು ಆಗಿದ್ದರೆ ಚಾರಿತ್ರಿಕ ರಾಜಕಾರಣದ ಬದಲಾವಣೆಗಳು ಆಗುತ್ತಿದ್ದವೇನೋ. ಆದರೂ ಅರಸು ಅವರು ಬಿ.ಬಸವಲಿಂಗಪ್ಪ ಅವರನ್ನು ಉಳಿಸಿಕೊಳ್ಳುವಲ್ಲಿ ಒಂದು ಕಡೆ ಬೂಸಾ ಚಳವಳಿಗೆ ಮಣಿದರು ಎಂದು ಹೇಳಿದರೆ ತಪ್ಪಗಲಾರದು. ಬಸವಲಿಂಗಪ್ಪ ಅವರು ರಾಜೀನಾಮೆಯಿಂದ ಕನ್ನಡಪರ ಹಾಗೂ ಇತರ ಬಲಪಂಥೀಯ ವಿದ್ಯಾರ್ಥಿ ಸಂಘಟನೆಗಳು ವಿಜಯೋತ್ಸವ ಆಚರಿಸಿದರೆ, ಎಡ ಹಾಗೂ ದಲಿತ ವಿದ್ಯಾರ್ಥಿಗಳು ದುಃಖಿತರಾದರು. ನಂತರ ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿ ಪ್ರಾರಂಭಿಸಿದ ಬಿ.ಕೃಷ್ಣಪ್ಪ, ದೇವನೂರ ಮಹದೇವ, ಸಿದ್ದಲಿಂಗಯ್ಯ, ದೇವಯ್ಯ ಹರವೆ, ಎಚ್.ಗೋವಿಂದಯ್ಯ, ಚಂದ್ರಪ್ರಸಾದ್ ತ್ಯಾಗಿ ಮುಂತಾದ ನಾಯಕರ ಜೊತೆ ಸೇರಿ ಬಸವಲಿಂಗಪ್ಪ ಅವರು ದಲಿತ, ಶೋಷಿತ ವರ್ಗಗಳ ನಾಯಕರಾಗಬಹುದು ಎಂಬ ಕನಸು ಕಂಡರು. ಈ ಮೇಲಿನ ದಲಿತ ನಾಯಕರ ಕನಸು ನನಸು ಮಾಡಲು ಬಸವಲಿಂಗಪ್ಪ ಅವರಿಗೆ ಸಾಧ್ಯವಾಗದೆ, ಅಧಿಕಾರವನ್ನು ಕಳೆದುಕೊಂಡ ನಂತರವು ಕಾಂಗ್ರೆಸ್ ತೊರೆಯದೆ ರಾಜಕಾರಣದಲ್ಲಿಯೇ ಮುಂದುವರೆದರು. ಒಟ್ಟಾರೆಯಾಗಿ ಈ ಬೂಸಾ ಪ್ರಕರಣವು ಕರ್ನಾಟಕ ರಾಜ್ಯದಲ್ಲಿ ಮುಂದೆ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ 'ಸಮುದಾಯ' ದಲಿತ ಬಂಡಾಯ ಸಂಘಟನೆಗಳು ಹುಟ್ಟಿ, ಚಳವಳಿಗಳಾಗಿ ಒಂದು ಹೊಸ ಚಾರಿತ್ರಿಕ ಆಯಾಮವನ್ನು ನೀಡಿದ್ದು ಹಾಗೂ ಕರ್ನಾಟಕದ ರಾಜಕಾರಣದಲ್ಲೊಂದು ಹೊಸ ಚಳವಳಿಗಳ ಅಧ್ಯಾಯವನ್ನೇ ಆರಂಭಿಸಿದ್ದು ಗಮನಿಸಬೇಕಾದ ಅಂಶ. ರಾಜ್ಯದಲ್ಲಿ ಈ ಚಳುವಳಿ ಆದ ಏಳೆಂಟ್ಹತ್ತು ವರ್ಷಗಳ ಅಂತರದಲ್ಲೇ ಸುಮಾರು

ನಾಲ್ಕೈದಾರು ಬಹಳ ಅದ್ಭುತವಾದಂತಹ ಸಂಘಟನೆಗಳು ಹುಟ್ಟಿದವು. ಸಾಹಿತ್ಯ ಮತ್ತು ಕಲೆಯ ವಲಯದಲ್ಲಿ ಯಾವುದೂ ಒಂದು ವರ್ಗದವರಿಗೆ ಮಾತ್ರ ಹೆಚ್ಚು ಮನ್ನಣೆ ಸಿಗುತ್ತದೆ, ಉಳಿದವಿಗೆ ಸಿಗುತ್ತಿಲ್ಲ, ಆದ್ದರಿಂದ ತಮ್ಮ ಅಭಿವ್ಯಕ್ತಿಯನ್ನು ಸ್ಪಷ್ಟವಾಗಿ ಸಾಧಿಕೊಳ್ಳುವುದಕ್ಕೆ ತಮ್ಮದೇ ಆದ ಗುಂಪನ್ನು ಕಟ್ಟಿಕೊಳ್ಳುವ ಅಗತ್ಯವಿದೆಯಂದು ಬಾವಿಸಿದ ಒಂದು ವರ್ಗ ಮೈಸೂರಿನಲ್ಲಿ ಬಹರಗಾರರು ಮತ್ತು ಕಲಾವಿದರ ಒಕ್ಕೂಟವನ್ನು ಸ್ಥಾಪಿಸಿದರು ಇದನ್ನು ಕುವೆಂಪು ಅವರು ಉದ್ಘಾಟಿಸಿದರು ಈ ಒಕ್ಕೂಟವು ಏಕಕಾಲಕ್ಕೆ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಕ ಒಡನಾಟವನ್ನು ಹೊಂದಿತ್ತು ಈ ಒಕ್ಕೂಟವು ತನ್ನ ಉದೇಶ ಸಾಧನೆಯಲ್ಲಿ ವಿಫಲವಾಗುತ್ತಿದ್ದ ಸಂದರ್ಭದಲ್ಲೇ ಬಂಡಾಯ ಸಾಹಿತ್ಯ ಚಳವಳಿ ಹುಟ್ಟಿತು. ಬರಹಗಾರರು ಮತ್ತು ಕಲಾವಿದರ ಒಕ್ಕುಟದಲ್ಲಿದ್ದ ಸಾಕಷ್ಟು ಜನ ಸಾಹಿತ್ಯ ಸಂಘಟನೆಗೆ ಬಂದರು. ಇದೆ ಸಂದರ್ಭದಲ್ಲಿ 'ಸಮುದಾಯ'ದಂಥ ರಂಭೂಮಿ ಸಂಘಟನೆ ಹುಟ್ಟಿತು. ನಂತರ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಯಿಂದ ಮುಖ್ಯವಾದ ರೈತ ಚಳವಳಿ, ದಲಿತ ಚಳವಳಿಗಳು ಹುಟ್ಟಿದವು. ಗೋಕಾಕ್ ವರದಿಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ಕನ್ನಡ ಚಳವಳಿ ಹುಟ್ಟಿಕೊಂಡಿತು. ಈ ಚಳವಳಿಯಿಂದ ಒಂದು ವರ್ಗದ ಜನರಲ್ಲಿ(ದಲಿತ ಶೂದ್ರ) ಆತ್ಮವಿಶ್ವಾಸವನ್ನು ಬಿತ್ತಿ ಅನೇಕ ಚಳವಳಿಗಳು ಹುಟ್ಟಲು, ಬೆಳೆಯಲು ಕಾರಣವಾದ ಚಳವಳಿ ಎಂದು ಬೂಸ ಸಾಹಿತ್ಯ ಚಳವಳಿಯನ್ನು ಗುರುತಿಸಬಹುದು.

೩.೩. ಎಪ್ಪತ್ತರ ದಶಕದ ಸಾಂಸ್ಕೃತಿಕ ಚಳವಳಿಗಳು

ಎಪ್ಪತ್ತರ ದಶಕದ ಮೊದಲ ಸಾಂಸ್ಕೃತಿಕ ಚಳವಳಿಯನ್ನು ನಾವು ೧೯೭೩ರಲ್ಲಿ ನಡೆದ ಬೂಸಾ ಪ್ರಕರಣವನ್ನು ಗುರುತಿಸುತ್ತೇವೆ. ಏಕೆಂದರೆ ಬೂಸಾ ಪ್ರಕರಣದಲ್ಲಿ ಅದು ಮೇಲ್ನೋಟಕ್ಕೆ ಕನ್ನಡ ಸಾಹಿತ್ಯ ಬೂಸಾದಿಂದ ಕೂಡಿದೆ ಎಂದು ವಿಮರ್ಶೆ ಮಾಡಿರುವಂತಿದೆ. ಅದರೆ ಒಳಾರ್ಥದಲ್ಲಿ ಕನ್ನಡ ಸಾಹಿತ್ಯ ಅಸ್ಪೃಶ್ಯತೆ, ದಬ್ಬಾಳಿಕೆ, ಶೋಷಣೆ, ಮೌಢ್ಯತೆ, ಅಸಮಾನತೆ, ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಗಳ ವಿರುದ್ಧ ಧ್ವನಿಯನ್ನು ಮಾಡುವಂತಹ ಕನ್ನಡ ಸಾಹಿತ್ಯದ ಅಗತ್ಯವಿದೆ ಎಂದು ಬಿ.ಬಸವಲಿಂಗಪ್ಪನವರ ಹೇಳಿಕೆಯ ಅಭಿಮತವಾಗಿತ್ತು. ಸಾಂಸ್ಕೃತಿಕ ಚಳವಳಿಗಳು ಎಪ್ಪತ್ತರ ದಶಕದಲ್ಲಿ ಉತ್ತರ ಪ್ರದೇಶದ ಜಯಪ್ರಕಾಶ್ ನಾರಾಯಣ ಅವರ ಸಂಪೂರ್ಣ ಕ್ರಾಂತಿಯಿಂದ ಪ್ರೇರಣೆಗೆ ಓಗೊಟ್ಟು ನಡೆದು 'ನವನಿರ್ಮಾಣ ಕ್ರಾಂತಿ' ಎಂಬ ಸಂಘಟನೆಯ ನೆರೆಯಿಂದ ಉತ್ತರ ಪ್ರದೇಶ, ಬಿಹಾರ, ಹಾಗೂ ಗುಜರಾತ್‌ಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತವೆ. ಇದರಿಂದ ಪ್ರಭಾವಿತರಾದ ಕರ್ನಾಟಕದ ವಿದ್ಯಾರ್ಥಿಗಳು 'ಸಮುದಾಯ'ದ ಮೇಲೂ ಪ್ರಭಾವ ಬೀರುತ್ತಾರೆ. ಪ್ರಗತಿಪರ ವಿದ್ಯಾರ್ಥಿ ಬಳಗ, ಅ.ನ.ಕೃಷ್ಣರಾಯ ಶಿಷ್ಯ ಬಳಗ, ಕರ್ನಾಟಕದಲ್ಲಿ ಮುಂದುವರಿಸಿ ಬರುತ್ತಿರುವಾಗ ಜೆ.ಪಿ ಚಳವಳಿಯಿಂದ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ 'ಯುವಛಾತ್ರ ಸಂಘರ್ಷ ವಾಹಿನಿ', ಅಂಬೇಡ್ಕರ್ ಸಂಘ ಎಪ್ಪತ್ತರಲ್ಲೇ ಪ್ರಾರಂಭವಾದ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ), ಭಾರತ ರಾಷ್ಟ್ರೀಯ ವಿದ್ಯಾರ್ಥಿ ಯೂನಿಯನ್, ದಲಿತ ಲೇಖಕ ಕಲಾವಿದರ ಯುವಜನ ಸಂಘ ಧಾರವಾಡ, ದಲಿತ ಪ್ಯಾಂಥರ್ ಸಂಘಟನೆ, ದಲಿತ ಕ್ರಿಯಾ

ಸಮಿತಿ, ಚಂಡಾಳರ ಸಂಘ, ಗುಲ್ಬರ್ಗಾದಲ್ಲಿ ಭೀಮಾ ಸೇನಾ, 'ಸಮುದಾಯ' ಸಾಂಸ್ಕೃತಿಕ ಸಂಘಟನೆ, ಮೈಸೂರಿನಲ್ಲಿ ರಾಮಮನೋಹರ ಲೋಹಿಯಾ ಅವರ 'ಸಮಾಜವಾದಿ ಯುವಜನ ಸಭಾ', ದಲಿತ ಸಂಘರ್ಷ ವಾಹಿನಿ ಹೀಗೆ ಅನೇಕ ಕಾರ್ಮಿಕ, ರೈತ, ಮಹಿಳಾ, ಯುವಜನ, ನೌಕರರ ಸಂಘಗಳು ಪ್ರಾರಂಭವಾಗಿದ್ದು ಈ ಎಪ್ಪತ್ತರ ದಶಕದಲ್ಲಿ ಎಂದು ಚಾರಿತ್ರಾರ್ಹವಾಗಿ ಗುರುತಿಸುತ್ತೇವೆ. ಅದರಲ್ಲೂ ವಿದ್ಯಾರ್ಥಿ ಚಳವಳಿಗಳು ಪ್ರಮುಖ ಪಾತ್ರವಹಿಸಿ ಅವುಗಳಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆ, ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ, ಎಪ್ಪತ್ತರ ದಶಕದ ಆರಂಭದಲ್ಲಿ ಪ್ರಾರಂಭವಾದ ಬೆನಕ, ಕಲಾಗಂಗೋತ್ರಿ, ರಂಗಸಂಪದ, ನಟರಂಗ, ಇತರ ರಂಗಭೂಮಿ ಸಂಸ್ಥೆಗಳ ಸ್ಥಾಪನೆಯಿಂದ ಹವ್ಯಾಸಿ ರಂಗಭೂಮಿ ಚಳವಳಿಯಾಗಿ ಮೂಡಿಬಂದಿದ್ದು. ಈ ಎಪ್ಪತ್ತರ ಸಾಂಸ್ಕೃತಿಕ ಚಳವಳಿಯ ಉಗಮದ ದಶಕವೆಂದು ಕರೆಯಲು ಅಡ್ಡಿಯಿಲ್ಲ.

೧೯೭೫ರಿಂದ ೭೭ರವರೆಗೂ ಭಾರತದಲ್ಲಿ ಆಂತರಿಕ ತುರ್ತುಪರಿಸ್ಥಿತಿಯಲ್ಲಿ ಸ್ವತಂತ್ರ ಭಾರತದ ರಾಜ್ಯಪ್ರಭುತ್ವದ ಗುಣಲಕ್ಷಣಗಳು, ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕವಾಗಿ ದಿವಾಳಿಯನ್ನುಂಟು ಮಾಡಲು ತುರ್ತುಪರಿಸ್ಥಿತಿಯೇ ಕಾರಣವಾಯಿತು. ಇದರ ಪರಿಣಾಮದಿಂದ ಸ್ವತಂತ್ರ ಭಾರತದಲ್ಲಿ ಮೊಟ್ಟಮೊದಲ ಭಾರಿಗೆ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಕಳೆದುಕೊಂಡಿತು. ಸರ್ವಾಧಿಕಾರಿ ಇಂದಿರಾ ಗಾಂಧಿ ಸರ್ಕಾರವನ್ನು ಚಳವಳಿಗಳ ಮೂಲಕ ಮಣಿಸಿ ನಂತರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರುಸ್ಥಾಪಿಸುವ ಸಾಮಾಜಿಕ ಒತ್ತಡಗಳು ಸಾಂಸ್ಕೃತಿಕ ಜಾಥಾಗಳಿಂದ ಸಾಧ್ಯವಾಯಿತು. ೧೯೭೮ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ ಡಿ.ಬಿ.ಚಂದ್ರೇಗೌಡರು ತಮ್ಮ ಸಂಸತ್ ಸ್ಥಾನಕ್ಕೆ ರಾಜೀನಾಮೆ ಕೊಡುವುದರ ಮೂಲಕ ಇಂದಿರಾ ಗಾಂಧಿಯವರಿಗೆ ಅವಕಾಶ ಮಾಡಿಕೊಟ್ಟರು. ಚಿಕ್ಕಮಗಳೂರಿನಲ್ಲಿ ಇಂದಿರಾ ಗಾಂಧಿ ಚುನಾವಣೆಯಲ್ಲಿ ನಿಲ್ಲುವುದು ಖಚಿತವಾದ ಮೇಲೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟಿದ್ದ ಎಲ್ಲರನ್ನು ಒಟ್ಟಿಗೆ ಸೇರಿಸಿ ಬೆಂಗಳೂರಿನ ಆರ್.ವಿ.ಹೈಸ್ಕೂಲಿನಲ್ಲಿ ಸಭೆ ಏರ್ಪಡಿಸಲಾಯಿತು. ಈ ಸಭೆಗೆ ಶ್ರೀರಂಗರು, ಲಂಕೇಶ್, ವೆಂಕಟಸುಬ್ಬಯ್ಯ, ಜೆ.ಲೋಕೇಶ್, ಬಿ.ವಿ.ರಾಜಾರಾಂ, ಬಿ.ವಿ.ವೈಕುಂಠರಾಜು ಮುಂತಾದವರೆಲ್ಲರೂ ಸಭೆ ಸೇರಿ ಚಿಕ್ಕಮಗಳೂರಿನ ಚುನಾವಣೆಯಲ್ಲಿ ಎಲ್ಲಾ ಪ್ರಗತಿಪರ ಸಾಹಿತಿಗಳು, ಕಲಾವಿದರು, ವಿಚಾರವಂತರು ಭಾಗವಹಿಸಬೇಕೆಂದು ತೀರ್ಮಾನಿಸಲಾಯಿತು. ಅದರಂತೆ ಕಲಾವಿದರು ಹಾಡು, ಕುಣಿತ, ನಾಟಕದ ಮೂಲಕ ಇಂದಿರಾ ಗಾಂಧಿಯ ವಿರುದ್ಧ ಚುನಾವಣಾ ಪ್ರಚಾರ ಮಾಡುವುದರ ಜೊತೆಗೆ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಮುಂದಾದರು. ಇದೆ ಸಂದರ್ಭದಲ್ಲಿ ಪಿ.ಲಂಕೇಶರ 'ಮುದ್ದುಮಗನ ಮಾರುತಿ ಕಾರು' ನಾಟಕವನ್ನು ಹಾಗೂ ಶ್ರೀರಂಗರು 'ಪ್ರಜಾಪ್ರಭುತ್ವ ಲೊಳ ಲೊಟ್ಟೆ' ನಾಟಕವನ್ನು ಸಿದ್ಧಲಿಂಗಯ್ಯನವರು 'ನೆಲಸಮ' ನಾಟಕವನ್ನು ಬರೆದು ಆಡಿಸಿದರು. ಇಂದಿರಾ ಗಾಂಧಿಯವರ ಸರ್ವಾಧಿಕಾರವನ್ನು ವಿರೋಧಿಸಿ ಅನೇಕ ಸಾಂಸ್ಕೃತಿಕ ತಂಡಗಳು ನಾಟಕಗಳನ್ನು ಮಾಡಿದರು. ಕುಂದಾಪುರ ಹಾಡುಗಳ ತಂಡವು ಪ್ರಚಾರವನ್ನು ಕೈಗೊಂಡವು.

ಪಿ.ಲಂಕೇಶ್, ಅಡಿಗರು, ಶಿವರಾಮಕಾರಂತ, ದೇವನೂರ ಮಹದೇವ, ಮಹಾತ್ಮಾಗಾಂಧಿಯವರ ಮೊಮ್ಮಗ ರಾಮಚಂದ್ರಾಗಾಂಧಿ ಮೊದಲಾದ ಲೇಖಕರು ಹಾಗೂ ಬುದ್ಧಿಜೀವಿಗಳು ಈ ಸಾಂಸ್ಕೃತಿಕ ಉಪಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದರು. ಆವರು ಸರ್ವಾಧಿಕಾರಿ ಧೋರಣೆಯಿಂದ ಕಮರಿದ್ದ ಜನರು ಹೋರಾಟ ಪ್ರಚಾರಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.[೬] 'ಸಮುದಾಯ' ಸಾಂಸ್ಕೃತಿಕ ತಂಡ ಚುನಾವಣಾ ಕ್ಷೇತ್ರದ ವಿವಿಧ ತಾಲ್ಲೂಕುಗಳಲ್ಲಿ ೩೫೦ಕ್ಕೂ ಹೆಚ್ಚಿನ ನಾಟಕ ಪ್ರದರ್ಶನಗಳನ್ನು ನೀಡಿತು. ಸುಮಾರು ಎಳು ಲಕ್ಷಕ್ಕೂ ಹೆಚ್ಚಿನ ಜನ ಈ ನಾಟಕಗಳನ್ನು ವೀಕ್ಷಿಸಿದರು. ಈ ಚುನಾವಣಾ ಸಂದರ್ಭದಲ್ಲಿ 'ಜೀತದ ಪತ್ರೆ ಸಂಗಪ್ಪನ ಕೊಲೆ', 'ಇಂದಿರಾ ಗಾಂಧಿಯವರ ಸುಳ್ಳು ಪ್ರಮಾಣಪತ್ರ 'ಗಣಿಸಮಸ್ಯೆ', 'ಜಾತಿ ಸಮಸ್ಯೆ', 'ವಸತಿ ಸಮಸ್ಯೆ', ನಿರುದ್ಯೋಗ ಸಮಸ್ಯೆಗಳ ಬಗೆಗೆ ವಿಷಯಗಳನ್ನು ತಿಳಿಸಲು ನಾಟಕಗಳ ಮೂಲಕ ಪ್ರಯತ್ನಿಸಲಾಯಿತು. ಈ ಚುನಾವಣೆಯ ಭಾಗವಾಗಿ ೧೯೭೮ರಲ್ಲಿ ಅಕ್ಟೋಬರ್ ೨೨ರಿಂದ ೨೪ರವರಿಗೆ ಭಿತ್ತಿಪತ್ರಗಳನ್ನು ಬರೆಯುವ ಕಾರ್ಯಕ್ರಮವೊಂದನ್ನು ಸಹ ಹಮ್ಮಿಕೊಂಡಿತು.

ಸಮುದಾಯ ಸಂಘಟನೆಯು 'ಬನ್ನಿ ಸರ್ವಾಧಿಕಾರರ ವಿರುದ್ಧ ಪೋಸ್ಟರ್ ಬರೆಯಿರಿ' ಎಂದು ಕರೆಕೊಟ್ಟಾಗ ಬೆಂಗಳೂರಿನ ಸಾವಿರಾರು ಜನ, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು, ಬ್ಯಾಂಕ್ ನೌಕರರು, ಅಧ್ಯಾಪಕರು, ತಮಗಿಷ್ಟಬಂದ ರೀತಿಯಲ್ಲಿ ಇಷ್ಟ ಬಂದಷ್ಟು ಪೋಸ್ಟರ್‌ಗಳನ್ನು ಬರೆದು ಸರ್ವಾಧಿಕಾರಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. ೪೦.೦೦೦ಕ್ಕೂ ಹೆಚ್ಚಿನ ಪೋಸ್ಟರ್‌ಗಳು ಎರಡು ದಿನಗಳಲ್ಲಿ ಸಿದ್ಧವಾದವು. ಚುನಾವಣಾ ಕ್ಷೇತ್ರಕ್ಕೆ ಇವುಗಳನ್ನು ಕಳುಹಿಸಲಾಯಿತು. ದಿಲ್ಲಿಯ ಜವಹಾರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಹ ತಮ್ಮ ಕಳಕಳಿಯನ್ನು ಸೂಚಿಸಲು ತಾವು ತಯಾರಿಸಿದ ಭಿತ್ತಿಪತ್ರಗಳನ್ನು ಕಳುಹಿಸಿಕೊಟ್ಟರು. ಬಹುಶಃ ಕರ್ನಾಟಕ ಚರಿತ್ರೆಯಲ್ಲಿ ಪ್ರಭಾವಿ ಪ್ರಚಾರಕ್ಕೋಸ್ಕರ ಪೋಸ್ಟರ್‌ಗಳನ್ನು ಹೀಗೆ ಭಿನ್ನ ರೀತಿಯಲ್ಲಿ ಬಳಸಿಕೊಳ್ಳಬಹುದು ಹಾಗೂ ಪೋಸ್ಟರ್‌ಗಳ ಮೂಲಕ ಜನಾಭಿಪ್ರಾಯವನ್ನು ಮೂಡಿಸಬಹುದು ಎಂಬುದನ್ನು ಮೊದಲ ಬಾರಿಗೆ 'ಸಮುದಾಯ' ಸಂಘಟನೆಯು ರುಜುವಾತುಮಾಡಿ ತೋರಿಸಿತು. ಈ ಜಾಥಾ ಕರ್ನಾಟಕ ರಾಜಕೀಯದ ದಿಕ್ಕನ್ನೇ ಬದಲಾಯಿಸಿತು. ಹೀಗೆ 'ಸಮುದಾಯ'ವು ರಾಜಕಾರಣದ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಹುಟ್ಟುಹಾಕಿದ ಹೊಸ ಚಿಂತನೆಗಳ ಚಳವಳಿಗಳು ಸಾಮಾಜಿಕ ಪರಿವರ್ತನೆಯ ದಿಕ್ಕಿನಲ್ಲಿ ಇಟ್ಟ ಮಹತ್ವದ ಹೆಜ್ಜೆಗುರುತುಗಳಾದವು ಎಂಬುದನ್ನು ನೋಡುತ್ತೇವೆ.[೮]

ಹೀಗೆ ಪ್ರಾರಂಭಿಸಿದ ಜಾಥಾಗಳು ಸಾಂಸ್ಕೃತಿಕ ರಂಗಚಳವಳಿಯನ್ನು ಗಟ್ಟಿಗೊಳಿಸುವುದರಲ್ಲಿ ಯಶಸ್ವಿಯಾದವು. ೧೯೭೯ರಲ್ಲಿ 'ಸಮುದಾಯ'ದ ಹೊಸ ಮೌಲ್ಯಗಳತ್ತ ಸಮುದಾಯ ಜಾಥಾ, ೧೯೮೧ರಲ್ಲಿ ರೈತರೆಡೆಗೆ 'ಸಮುದಾಯ'ದ ಸಾಂಸ್ಕೃತಿಕ ಜಾಥಾವನ್ನು ಪ್ರಾರಂಭಿಸುವುದಕ್ಕೆ ಮೊದಲು ನಡೆಯಿತು. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇದರಲ್ಲಿ ದಲಿತರ ಗೋಷ್ಠಿಯೊಂದನ್ನು ಅಳವಡಿಸಲು ಅಂದಿನ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹಂಪ ನಾಗರಾಜಯ್ಯ ಅವರನ್ನು ಕೇಳಿದಾಗ ಅವರು ಸಾಹಿತ್ಯ ಸಮ್ಮೇಳನದಲ್ಲಿ 'ದಲಿತ-ಬಲಿತ

ಅಂತೇನೂ ಇಲ್ಲ'ವೆನ್ನುವ ಬೇಜವಾಬ್ದಾರಿಯುತ ಹೇಳಿಕೆ ನೀಡಿದ್ದರು. ಇದನ್ನು ವಿರೋಧಿಸಿ ೧೯೭೯ರಲ್ಲಿ ಮಾರ್ಚ್ ೯-೧೦ ಬೆಂಗಳೂರಿನ ದೇವಾಂಗ ಛತ್ರದಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. ಈ ಸಂಚಾಲನಾ ಸಮಿತಿಯಲ್ಲಿ ಸಿ.ಜಿ.ಕೃಷ್ಣಸ್ವಾಮಿ, ಕಾಳೇಗೌಡ ನಾಗವಾರ, ದೇವನೂರ ಮಹದೇವ, ಬರಗೂರು ರಾಮಚಂದ್ರಪ್ಪ, ಶೂದ್ರ ಶ್ರೀನಿವಾಸ್, ಸಿದ್ಧಲಿಂಗಯ್ಯ, ರಾಮದೇವ ರಾಕೆ, ಚಂಪಾ, ಬಿ.ಕೃಷ್ಣಪ್ಪ, ಜಿ.ರಾಮಕೃಷ್ಣ, ಚನ್ನಣ್ಣ ವಾಲಿಕಾರ, ಡಿ.ಆರ್.ನಾಗರಾಜ, ಅಗ್ರಹಾರ ಕೃಷ್ಣಮೂರ್ತಿ, ರಂಜಾನ್ ದರ್ಗಾ, ಲಿಂಗದೇವರು ಹಳೇಮನೆ, ದೇವಯ್ಯ ಹರವೆ ಮುಂತಾದವರು ಜೊತೆಗೂಡಿ ಹಾಗೂ 'ಸಮುದಾಯ', ದಲಿತ ಸಂಘರ್ಷ ಸಮಿತಿ, ಎಡಪಂಥಿಯರು, ಲೋಹಿಯವಾದಿಗಳು ಸಾಕಷ್ಟು ಚಟುವಟಿಕೆಗಳನ್ನು ನಡೆಸುತ್ತಿದ್ದರು. ಡಿ.ಆರ್.ನಾಗರಾಜ ಘೋಷವಾಕ್ಯವಾದ 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎನ್ನುವ ಬಂಡಾಯವಾದ ಸಾಹಿತ್ಯಕ್ಕೆ ಉಸಿರಾಯಿತು.

ಈ ಎಲ್ಲಾ ವರ್ಗಗಳ ಶೋಷಿತರ, ಬಡವರಪರ ಧ್ವನಿಯನ್ನು ಎತ್ತುವುದೇ ಬಂಡಾಯ ಸಾಹಿತ್ಯದ ಅಶಯವಾಗಿತ್ತು. ಹೀಗೆ ಸಮಾಜವಾದಿಗಳು, ಲೋಹಿಯವಾದಿಗಳು, ಮಾರ್ಕ್ಸ್‌ವಾದಿಗಳು, ಅಂಬೇಡ್ಕರ್‌ವಾದಿಗಳು, ಸ್ತ್ರೀವಾದಿಗಳು, ಗಾಂಧಿವಾದಿಗಳು, ಲೆನಿನ್‌ವಾದಿಗಳು ಮುಂತಾದವರ ಪ್ರಗತಿಪರ ವಾದವನ್ನು ಒಪ್ಪಿಕೊಂಡದ್ದೇ 'ಬಂಡಾಯ ಸಾಹಿತ್ಯ ಸಂಘಟನೆ'ಯಾಗಿತ್ತು. ಹೀಗಾಗಿ ಎಪ್ಪತ್ತರ ದಶಕವನ್ನು ಸಾಂಸ್ಕೃತಿಕ ಚಳವಳಿಗಳು ಹುಟ್ಟಿ ಉಚ್ಛ್ರಾಯಸ್ಥಿತಿಗೆ ಬೆಳೆದ ಕಾಲ ಎಂತಲೂ ಹಾಗೂ ಉತ್ತಮ ನಾಯಕರು ಸಿದ್ಧಾಂತಗಳ ಪ್ರಕರತೆ ಹೊಂದಿದ್ದ ದಶಕ ಎಂದೂ ಕರೆಯಲು ಅಡ್ಡಿಯಿಲ್ಲ.

೩.೪. ೧೯೭೫ರ ಭಾರತದ 'ತುರ್ತುಪರಿಸ್ಥಿತಿ'

ಸ್ವಾತಂತ್ರ್ಯೋತ್ತರ ಭಾರತದಲ್ಲಿ ೧೯೭೫ ಜೂನ್ ೨೬ರಂದು ಅಂತರಿಕ ತುರ್ತುಪರಿಸ್ಥಿತಿಯನ್ನು ಪ್ರಧಾನಿ ಇಂದಿರಾ ಗಾಂಧಿಯವರು ಘೋಷಿಸಿದರು. ಇದಕ್ಕೆ ಮೊದಲೇ ೧೯೭೧ರಲ್ಲಿ ಭಾರತ ಮತ್ತು ಪಾಕಿಸ್ತಾನ ಯುದ್ಧದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗತ್ತು. ಘೋಷಿಸಿ ೫ ವರ್ಷಗಳು ಆಗಿರಲೇ ಇಲ್ಲ, ೧೯೭೫ರಂದು ಮತ್ತೊಂದು ಬಾರಿ ಆಂತರಿಕ ಘೋಷಣೆಯಿಂದಾಗಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಧೋರಣೆಯು ಬಹಿರಂಗವಾಯಿತು. ಇದಕ್ಕೆ ಪ್ರಮುಖ ಕಾರಣ ಉತ್ತರಪ್ರದೇಶದ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪು. ಭಾರತದ ರಾಜಕಾರಣದ ಚರಿತ್ರೆಯಲ್ಲಿ ಇದು ಒಂದು ಹೊಸ ತಿರುವನ್ನೇ ನೀಡಿದ ಘಟನೆಯಾಗಿದೆ. ಏಕೆಂದರೆ ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಅವರ ಶಿಷ್ಯರಾದ ರಾಜನಾರಾಯಣ ಅವರು ಇಂದಿರಾ ಗಾಂಧಿಯವರು ರಾಯ್‌ಬೇರೇಲಿ ಲೋಕಸಭಾ ಚುನಾವಣೆಯಲ್ಲಿ ಕಾನೂನು ಬಾಹಿರವಾಗಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಅಲಹಾಬಾದ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಈ ತೀರ್ಪಿನಲ್ಲಿ ಇಂದಿರಾ ಗಾಂಧಿಯವರು ಲೋಕಸಭೆಗೆ ಆಯ್ಕೆಯಾದದ್ದು ಕ್ರಮಬದ್ಧವಲ್ಲವೆಂದು ಕೋರ್ಟ್ ತೀರ್ಮಾನಿಸಿ ಪ್ರಧಾನಿ ಇಂದಿರಾ

ಗಾಂಧಿಯವರು ಇನ್ನು ಆರು ವರ್ಷ ಚುನಾವಣೆಯಲ್ಲಿ ಭಾಗವಹಿಸಬಾರದು ಎಂದು ತೀರ್ಪು ನೀಡಿತು.

ಈ ತೀರ್ಪಿನಿಂದಾಗಿ ಇಂದಿರಾ ಗಾಂಧಿಯವರ ಮತ್ತೊಂದು ಹಿಟ್ಲರ್ ಪ್ಯಾಸಿಸ್ಟ್ ಸ್ವರೂಪ ತೆರೆದುಕೊಳ್ಳುತ್ತರೆ. ಜೊತೆಗೆ ಈ ತೀರ್ಪು ಬರುವ ಮುಂಚೆಯೇ ಗುಜರಾತ್ ಚುನಾವಣೆಯಲ್ಲಿ ಕಾಂಗ್ರೆಸ್ ತೀವ್ರ ಮುಖಭಂಗ ಅನುಭವಿಸಿರುತ್ತದೆ. ಜೊತೆಗೆ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಜನ ದಂಗೆ ಏಳುತ್ತಾರೆ. ಜೊತೆಗೆ ಭಾರತದ ಸಮಾಜವಾದಿಗಳು, ಕಮ್ಯುನಿಸ್ಟ್ ಚಳವಳಿಗೆ ರೈತ–ಕಾರ್ಮಿಕ ಹಾಗೂ ವಿದ್ಯಾರ್ಥಿ–ಯುವಜನರ ಜೊತೆಯಲ್ಲಿ, ರೈಲ್ವೆ ಕಾರ್ಮಿಕ ಚಳವಳಿಗಳು ಭಾರತದಾದ್ಯಂತ ತೀವ್ರವಾಗಿ ನಡೆಯುತ್ತಿರುತ್ತವೆ. ಅದೇ ಸಮಯದಲ್ಲಿ ಕಾಂಗ್ರೆಸ್ ಇಬ್ಬಾಗವಾಗುತ್ತದೆ. ಅವೇ ಕಾಂಗ್ರೆಸ್(ಆರ್) ಹಾಗೂ ಕಾಂಗ್ರೆಸ್(ಒ) ಆಗಿರುತ್ತದೆ. ಜೊತೆಗೆ ಕರ್ನಾಟಕದ ನಿಜಲಿಂಗಪ್ಪ ಸಂಸ್ಥಾ ಕಾಂಗ್ರೆಸ್ ಸ್ಥಾಪಿಸುತ್ತಾರೆ. ಮೊರಾರ್ಜಿ ದೇಸಾಯಿ ಅವರನ್ನು ರಾಜಕೀಯವಾಗಿ ವಿರೋಧಿಸಿ ಕಾಂಗ್ರೆಸ್ ಪಕ್ಷವನ್ನು ತನ್ನ ತಕ್ಕೆಗೆ ತೆಗೆದುಕೊಂಡು, ಪ್ರಧಾನಿಯಾಗಿ ಆಡಳಿತ ಪಕ್ಷದ ಪ್ರಶ್ನಾತೀತ ನಾಯಕಿಯಾಗುತ್ತಾರೆ. ಇಂಥ ಕಾರಣಗಳಿಂದಾಗಿ ಇಂದಿರಾ ಗಾಂಧಿ ಅವರು ನಿರಂತರವಾಗಿ ಭಾರತದ ಭೂಮಾಲೀಕರು, ಬಂಡವಾಳಶಾಹಿಗಳ ಕೃಪಾ ಪೋಷಣೆಗೆ ಆಡಳಿತವನ್ನು ನಡೆಸುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಎಡಪಕ್ಷಗಳು, ಸಮಾಜವಾದಿಗಳು, ಹಾಗೂ ಜನಸಂಘ ಇತರೆ ಬಲಪಂಥೀಯ ವಿಚಾರಗಳನ್ನು ಹೊಂದಿರುವ ಜಯಪ್ರಕಾಶ್ ನಾರಾಯಣ್ ಅವರು ಸಂಪೂರ್ಣ ಕ್ರಾಂತೀಯ ಆಂದೋಲನದ ಮೂಲಕ ಇಂದಿರಾ ಗಾಂಧಿಯವರನ್ನು ಪ್ರಧಾನಿ ಹುದ್ದೆಯಿಂದ ಕೆಳಗಿಳಿಸುವ ಪ್ರಯತ್ನದಲ್ಲಿ ತೊಡಗಿದ್ದರಿಂದ ಈ ಅಂತರಿಕ ತುರ್ತುಪರಿಸ್ಥಿತಿ ಘೋಷಣೆ ಆಗುತ್ತದೆ.

ದೇಶದಾದ್ಯಂತ ಬಂಧನಗಳು

ತುರ್ತುಪರಿಸ್ಥಿತಿಯನ್ನು ಘೋಷಿಸುತ್ತಿರುವುದು ಪ್ರಜಾಪ್ರಭುತ್ವ ರಕ್ಷಣೆ ಎಂದು ಹೇಳಿದ ಇಂದಿರಾ ಗಾಂಧಿಯವರು ತನ್ನ ವಿರುದ್ಧ ವಿರೋಧಿಗಳನ್ನು ಬಂಧಿಸಲು ಮುಂದಾದರು. ಒಟ್ಟು ೬೭೬ ಪ್ರಮುಖ ನಾಯಕರನ್ನು ಬಂಧಿಸಲಾಯಿತು. ಅನೇಕರನ್ನು ಮಧ್ಯರಾತ್ರಿಯಲ್ಲಿಯೇ ಸೆರೆ ಹಿಡಿಯಲಾಯಿತು. ೧೯೭೫ ಜೂನ್ ೨೬ರಂದು ಮುಂಜಾನೆ ರಾಷ್ಟ್ರದ್ಯಂತ ಒಟ್ಟು ೩೪,೯೮೮ ಜನರನ್ನು 'ಮೀಸಾದ ಕಾಯ್ದೆ'ಯ ಅಡಿಯಲ್ಲಿ ಬಂಧಿಸಲಾಯಿತು.೯ ಮೀಸಾ ಎಂದರೆ MISA : maintance of internal security act. ಅಂದರೆ ಆಂತರಿಕ ಭದ್ರತಾ ಕಾಯ್ದೆಯ ಅಡಿಯಲ್ಲಿ ಬಂಧಿಸುವಂಥದ್ದು. ಎಲ್ಲರನ್ನೂ ಕತ್ತಲೆ ಕೋಣೆಗಳಲ್ಲಿ ಇಡಲಾಯಿತು. ವಿರೋಧಿಗಳನ್ನು ಸದೆಬಡಿಯುವುದಕ್ಕಾಗಿಯೂ ಈ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳಲಾಯಿತು.

ಈ ಬಂಧನದಲ್ಲಿ ಇದ್ದ ಪ್ರಮುಖರಲ್ಲಿ ಜಯಪ್ರಕಾಶ ನಾರಾಯಣ್, ಮೊರಾರ್ಜಿ ದೇಸಾಯಿ, ಸಮಾಜವಾದಿ ಪಕ್ಷದ ಮಧುಲಿಮೆಯ, ಸಮರ ಗುಹಾ, ಭಾರತೀಯ ಲೋಕದಳದ ಚೌಧರಿ

ಚರಣ್ ಸಿಂಗ್, ಶೀಲಾ ಮೋದಿ, ರಾಜನಾರಾಯಣ್, ಬಿಜು ಪಟ್ನಾಯಕ್ ಸಂಸ್ಥಾ ಕಾಂಗ್ರೆಸಿನ ಅಶೋಕ ಮೆಹತಾ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ನಾಯಕರಾದ ಕಾಂ.ಎ.ಕೆ.ಗೋಪಾಲನ್, ಕಾಂ.ಇ.ಎಂ.ಎಸ್. ನಂಬೂದಿರಿ ಪಾಡ್, ಎಂ.ಬಸವ ಪೊನ್ನಯ್ಯ, ಕಾಂ.ಮೋಹನ್ ಪೂನಾಮಿಯಾ, ಲೋಕಸಭಾ ಸದಸ್ಯರಾದ ಕಾಂ.ಜ್ಯೋತಿಬಸು ಹಾಗೂ ಕಾಂ.ನೂರುಲ್ ಹುಡಾ ಜೊತೆಗೆ ಆಳುವ ಕಾಂಗ್ರೆಸ್ ಪಕ್ಷದ ಚಂದ್ರಶೇಖರ್, ರಾಮಧನ್, ಕೃಷ್ಣಕಾಂತ್, ಚರಣ್‌ಸಿಂಗ್ ನಾನಾಜಿ ದೇಶ್‌ಮುಖ್, ಎ.ಆರ್.ಮುಲ್ಹಾನಿ ಮೊದಲಾದವರನ್ನು ಬಂಧಿಸಲಾಯಿತು. ಬೆಂಗಳೂರು ಶಾಸಕರ ಭವನದಲ್ಲಿ ಸಂಸದೀಯ ಸಮಿತಿಯ ಕೆಲಸಕ್ಕಾಗಿ ಬಂದಿದ್ದ ಜನಸಂಘದ ಅಟಲ್ ಬಿಹಾರಿ ವಾಜಪೇಯಿ, ಲಾಲ್‌ಕೃಷ್ಣ ಅಡ್ವಾಣಿ, ಸಮಾಜವಾದಿ ಪಕ್ಷದ ಮಧು ದಂಡವತೆ, ಸಂಸ್ಥಾ ಕಾಂಗ್ರೆಸ್‌ನ ಶ್ಯಾಮನಂದನ್ ಮಿಶ್ರಾ ಹಾಗೇ ಬಂಧಿತರಾದವರಲ್ಲಿ ಗ್ವಾಲಿಯರ್ ಮತ್ತು ಜೈಪುರದ ರಾಜಮನೆತನದವರು ಸಹ ಇದ್ದರು. ಈ ರೀತಿ ಜನಪ್ರತಿನಿಧಿಗಳು, ರಾಜಕಾರಣಿಗಳು, ವಿದ್ಯಾರ್ಥಿ-ಯುವಜನರು-ಮಹಿಳೆಯರು ಸೇರಿದಂತೆ ಅನೇಕರ ಬಂಧನಗಳಾದವು. ಇಡೀ ದೇಶವನ್ನೇ ಒಂದು ಜೈಲಿನ ಸ್ಥಿತಿಗೆ ತಂದದ್ದು ಹಿಟ್ಲರ್‌ನ ಪ್ಯಾಸಿಸ್ಟ್ ಸರ್ವಾಧಿಕಾರತ್ವದ ಧೋರಣೆಯೇ ಆಗಿದೆ.[F] ಜನರು ಹಾಗೂ ಬಂಧಿತರು ನ್ಯಾಯಾಲಯಗಳಿಗೆ ಹೋಗದಂತೆ ಅವರ ನ್ಯಾಯಬದ್ಧ ಹಕ್ಕುಗಳನ್ನೆಲ್ಲಾ ಕಸಿದುಕೊಳ್ಳಲಾಗಿತ್ತು.

ವಿಧಿ ೧೪ = ಸಮಾನತೆಯ ಹಕ್ಕು.

ವಿಧಿ ೧೯ = ವಾಕ್ ಸ್ವಾತಂತ್ರ್ಯ ಒಂದೇ ಕಡೆ ಸಭೆಸೇರುವ ಸ್ವಾತಂತ್ರ್ಯ.

ವಿಧಿ ೨೧ = ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು.

ಇಂತಹ ಅತಿ ಮುಖ್ಯವಾದ ಕಾಲಂಗಳನ್ನೆಲ್ಲಾ ಸ್ಥಗಿತಗೊಳಿಸಲಾಯಿತು. ಸಂವಿಧಾನದ ೩೫೯(೧)ನೇ ಪರಿಚ್ಛೇದದ ಅಡಿಯಲ್ಲಿ ಜೂನ್ ೨೭ರ ರಾತ್ರಿ ರಾಷ್ಟ್ರಪತಿ ಒಂದು ಆಜ್ಞೆಯನ್ನು ಹೊರಡಿಸಿ, ಬಂಧಿತರಾದರು ಯಾವುದೇ ರೀತಿಯ ಪರಿಹಾರಕ್ಕಾಗಿ ಯಾವ ನ್ಯಾಯಾಲಯಕ್ಕೂ ಹೋಗಲಿಕ್ಕಾಗದು ಎಂದು ನಿರ್ಬಂಧಿಸಲಾಯಿತು. ಹಲವಾರು ಸಂಘಟನೆಗಳ ಚಳವಳಿಗೆ ಇಳಿಯದಂತೆ, ಕೆಲವು ಸಂಘಟನೆಗಳನ್ನು ೧೯೭೫ ಜುಲೈ ೪ ರಂದು ಉಗ್ರಗಾಮಿ ಸಂಘಟನೆಗಳೆಂದು ಸಹ ಬಹಿಷ್ಕರಿಸಲಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್.ಎಸ್.ಎಸ್), ಜಮಾಯಿತ್-ಇ-ಇಸ್ಲಾಮಿ, ಆನಂದಮಾರ್ಗ ಮೊದಲಾದವು ತೀರಾ ಎಡಪಂಥದವರಾದ ನಕ್ಸಲರನ್ನು ಇವರುಗಳ ಕಚೇರಿಗಳ ಮೇಲೆ ದಾಳಿಮಾಡಿ ಪ್ರಮುಖ ದಾಖಲೆಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಬೀಗ ಮುದ್ರೆ ಹಾಕಲಾಯಿತು. ಆಗಸ್ಟ್ ೬ ರಂದು, 'ಮಿಜೋ ನ್ಯಾಷನಲ್ ಫ್ರಂಟ್'ಅನ್ನು ಬಹಿಷ್ಕರಿಸಲಾಯಿತು. ಜೊತೆಗೆ ಪ್ರತಿಕೆ ಮೇಲೆ ನಿರ್ಬಂಧ ಜೂನ್ ೨೬ ಮತ್ತು ೨೭ ರಂದು ಭಾರತದ ಪ್ರಮುಖ ಪತ್ರಿಕೆಗಳು ಪ್ರಕಟವಾಗಿರಲಿಲ್ಲ. ಅದೇ ರೀತಿ ದೆಹಲಿಯಲ್ಲಿ ಇಂಗ್ಲೀಷ್ ದಿನಪತ್ರಿಕೆ 'ದಿ ಮದರ್ ಲ್ಯಾಂಡ್', ವಾರಪತ್ರಿಕೆ 'ಆರ್ಗನೈಜರ್', ಹಿಂದಿ ಸಾಪ್ತಾಹಿಕ

'ಪಾಂಚಜನ್ಯ', ಲಖನೌನ ಹಿಂದಿ ದೈನಿಕ 'ತರುಣ ಭಾರತ' ಇತರೆ ಪತ್ರಿಕೆಗಳನ್ನು ನಿರ್ಬಂಧಿಸಲಾಯಿತು. ಹಲವಾರು ಪತ್ರಕರ್ತರನ್ನು ಸಹ ಬಂಧಿಸಿದ್ದರು.

ಇದೇ ರೀತಿಯಲ್ಲಿ ಕೇರಳ ಇಂಜಿನಿಯರಿಂಗ್ ವಿದ್ಯಾರ್ಥಿ ರಾಜನ್ ನಾಪತ್ತೆ ಪ್ರಕರಣವು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಯಿತು. ಸಂಸತ್ತಿನಲ್ಲಿಯೂ ಸಹ ಪ್ರತಿಧ್ವನಿಸಿತು. ಕೇರಳದ ಗೃಹಮಂತ್ರಿ ರಾಜೀನಾಮೆಯನ್ನು ನೀಡುವಂತೆ ಮಾಡಿದ ಪ್ರಕರಣ ಇದು. ಒಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿ ಹಾಸ್ಟೆಲ್‌ನಲ್ಲಿ ವಾರ್ಡನ್ ಹಾಗೂ ಪ್ರಾಂಶುಪಾಲರಿಗೆ ಗೊತ್ತಾಗದಂತೆ ಪೋಲೀಸರು ಅವನನ್ನು ಬಂಧಿಸಿ ನಾಪತ್ತೆ ಮಾಡುವ ಘಟನೆ ಇದಾಗಿತ್ತು. ಈ ನಾಪತ್ತೆ ಕೇಸಿನಲ್ಲಿ ರಾಜನ್ ಅವರ ಅಪ್ಪ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಮೊರೆ ಹೋಗುವ ಪ್ರಕರಣವಾಗುತ್ತದೆ. ಈ ಪ್ರಕರಣವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಲೋಕಸಭೆಯಲ್ಲಿ ಚರ್ಚೆಯಾಗುವಂತೆ ಮಾಡುತ್ತದೆ. ಈ ಕೇಸಿನಲ್ಲಿ ಪೋಲೀಸರೇ ಕೊಲೆ ಮಾಡಿದ್ದಾರೆ ಎಂಬುದಾಗಿ ರುಜುವಾತು ಸಹ ಆಗುತ್ತದೆ. ಹೀಗೆ ತುರ್ತುಪರಿಸ್ಥಿತಿಯು ಸಾಮಾನ್ಯ ಜನರಲ್ಲಿ ಭಯ ಹುಟ್ಟಿಸುವ ರೀತಿಯಲ್ಲೇ ವಾತಾವರಣವನ್ನು ನಿರ್ಮಿಸಿತ್ತು. ಐದಕ್ಕಿಂತ ಹೆಚ್ಚು ಜನ ಸಭೆ ಸೇರುವಂತಿರಲಿಲ್ಲ, ರಾತ್ರಿಯ ವೇಳೆ ಒಬ್ಬರೇ ಓಡಾಡುವಂತಿರಲಿಲ್ಲ, ಪೋಲೀಸರ ದಬ್ಬಾಳಿಕೆ ಮುಗಿಲು ಮುಟ್ಟಿತ್ತು.

ಎ.ಕೆ.ಗೋಪಾಲನ್ ತುರ್ತುಪರಿಸ್ಥಿತಿ ಬಗೆಗಿನ ಅಭಿಪ್ರಾಯ

ಕೇಂದ್ರ ಸರ್ಕಾರದ ವಿರುದ್ಧ ಹಾಗೂ ಪೋಲೀಸರ ದಬ್ಬಾಳಿಕೆ ವಿರುದ್ಧ ಹಾಗೂ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಕಮ್ಯುನಿಸ್ಟ್ ನಾಯಕ ಎ.ಕೆ.ಗೋಪಾಲನ್(ಸಿ.ಪಿ.ಎಂ) ದಿನಾಂಕ ೨೧-೭-೧೯೭೫ರಂದು ಮಾಡಿದ ಕೊನೆಯ ಭಾಷಣದಲ್ಲಿ ಲೋಕಸಭೆಯಲ್ಲಿ ತುರ್ತುಪರಿಸ್ಥಿತಿಯ ಕರಾಳತೆಯನ್ನು ಈ ರೀತಿ ಬಿಚ್ಚಿಡುತ್ತಾರೆ. "ಆಹಾರಮಂತ್ರಿಯಾದ ಜಗಜೀವನ್ ರಾಮ್ ಅವರ ಭಾಷಣವನ್ನು ನಾನು ಕೇಳಿದೆ ಆದರೆ, ಸಚಿವರು ಮಾತನಾಡುತ್ತಿದ್ದಾಗ ಕೆಲವೊಮ್ಮೆ ಪ್ರಧಾನಮಂತ್ರಿಯ ಕಡೆಗೆ ನೋಡುತ್ತಿದ್ದುದರಿಂದ, ಈ ಮಾತುಗಳು ಬಹುಶಃ ಅವರ ಸ್ವಂತದ್ದಲ್ಲವೆಂದು ನನಗೆ ಸಂದೇಹವಾಗುತ್ತಿದೆ. ಅವರು ಯಾಕೆ ಹಾಗೇ ನೋಡುತ್ತಿದ್ದರು ಎಂಬುದರ ಕಾರಣ ನನಗೆ ಗೊತ್ತಿದೆ. ನನಗೆ ಅವರ ಬಗ್ಗೆ ಸಹಾನುಭೂತಿ ಇದೆ. ಒಂದು ವಿಶಿಷ್ಟವಾದ ಮತ್ತು ಯಾತನಾಮಯವಾದ ಪರಿಸ್ಥಿತಿಯಲ್ಲಿ ನಾನು ಮಾತಾನಾಡಲು ಎದ್ದುನಿಂತಿದ್ದೇನೆ. ಪಾರ್ಲಿಮೆಂಟಿನ ೩೪ ಮಂದಿ ಸದಸ್ಯರು ಇರಲಿಲ್ಲ. ಅವರು ತಮ್ಮ ಇಷ್ಟದಂತೆ ಇಲ್ಲಿಗೆ ಬಾರದೆ ಇರುವುದಿಲ್ಲ. ವಿಚಾರಣೆಯಿಲ್ಲದೆ ಅವರನ್ನು ಬಂಧನದಲ್ಲಿಡಲಾಗಿದೆ. ಶ್ರೀಮತಿ ಇಂದಿರಾಗಾಂಧಿ ಮತ್ತು ಆಕೆಯ ಸರ್ಕಾರವು ಪಾರ್ಲಿಮೆಂಟನ್ನೆ ಒಂದು ವಿಡಂಬನೆಯನ್ನಾಗಿಯೂ ತಿರಸ್ಕಾರದ ವಸ್ತುವನ್ನಾಗಿಯೂ ಪರಿವರ್ತಿಸಿವೆ. ನನ್ನನ್ನು ಬಂಧಿಸಿ ಒಂದು ವಾರ ಜೈಲಿನಲ್ಲಿ ಇರಿಸಲಾಗಿತ್ತು. ನಿಮಗೆಲ್ಲರಿಗೂ ಚೆನ್ನಾಗಿ ಗೊತ್ತಿರುವ ಜ್ಯೋತಿಬಸು ಮತ್ತು ನಮ್ಮ ಪಕ್ಷದ ಇನ್ನೊಬ್ಬರು ಸದಸ್ಯರಾದ ನೂರುಲ್ ಹುಡಾ ಜೈಲಿನಲ್ಲಿದ್ದಾರೆ. ಮುದುಕನಾದ ನಾನು(೭೩) ವರ್ಷ ನಾನು ಈಗ ಗಟ್ಟಿಯಾಗಿ ಮಾತನಾಡಲಾರೆ. ನನ್ನನ್ನು ಬಿಡುಗಡೆ ಮಾಡಿ

ಅವರಿಬ್ಬರನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಇವರ ಕಾರಣಗಳು ಸ್ಪಷ್ಟವಾಗಿವೆ. ನಾನು ಜೈಲುಗಳಿಗೆ ಹೆದರುವವನಲ್ಲ. ಕಳೆದ ೪೫ ವರ್ಷಗಳ ಅವಧಿಯಲ್ಲಿ ೧೭ ವರ್ಷಗಳ ಕಾಲ ನಾನು ಜೈಲಿನಲ್ಲಿದ್ದೆ. ಆದರೆ ಎರಡು ದಿನ ಜೈಲಿನೊಳಗೆ ನನ್ನನ್ನು ಅಮಾನುಷವಾಗಿ ನೋಡಿಕೊಂಡ ವಿಷಯದಲ್ಲಿ ನನಗೆ ನಿಜವಾಗಿಯೂ ತುಂಬಾ ವ್ಯಸನವಾಗುತ್ತದೆ. ನಾನು ಉಪವಾಸ ಮುಷ್ಕರ ಮಾಡಿದೆ. ಲೋಕಸಭಾಧ್ಯಕ್ಷರಿಗೆ ತಂತಿ ಸಂದೇಶ ಕಳುಹಿಸಿದೆ. ಆ ಮೇಲೆ ಪರಿಸ್ಥಿತಿ ಸುಧಾರಿಸಿತು. ಸ್ವಾಮಿ ಒಂದು ಕಾಲದಲ್ಲಿ ಕಾಂಗ್ರೆಸ್ಸಿಗನಾಗಿದ್ದು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಬಂಧನಗಳನ್ನು ಅನೇಕ ಕಷ್ಟಗಳನ್ನು ಅನುಭವಿಸಿದವನಾದ ನನ್ನನ್ನು ಈ ರೀತಿಯಲ್ಲಿ ನೋಡಿಕೊಳ್ಳಲಾಯಿತೆಂದು ಹೇಳಲು ನನಗೆ ವ್ಯಸನವಾಗುತ್ತಿದೆ.

ಎರಡು ದಿನಗಳ ಹಿಂದೆಯಷ್ಟೇ ನನ್ನ ಬಿಡುಗಡೆಯಾಯಿತು. ಇದರ ಕಾರಣ ನನಗೆ ಗೊತ್ತು. ಇವತ್ತು ಜೈಲಿನಲ್ಲಿರುವ ನನ್ನ ಎರಡು ಸಾವಿರವೋ, ಮೂರು ಸಾವಿರವೋ ಸಂಗಾತಿಗಳನ್ನು ಏನು ಮಾಡುತ್ತಾರೆ? ನನ್ನನ್ನು ಶ್ರೀ ನಂಬೂದಿಪಾಡರನ್ನು ಮಾತ್ರವೇ ಯಾಕೆ ಬಿಡುಗಡೆ ಮಾಡಿದರು. ಯಾವುದೇ ಮಾರ್ಕ್ಸವಾದಿ ಇಲ್ಲವೆ ಎಡ ವಿರೋಧಿ ಪಕ್ಷಗಳ ಸದಸ್ಯರನ್ನು ಬಂಧಿಸಿಲ್ಲವೆಂದು ಪ್ರತಿಗಾಮಿಗಳನ್ನು ಮಾತ್ರವೇ ಬಂಧಿಸಿದ್ದೆಂದು ಪ್ರಪಂಚಕ್ಕೆ ತೋರಿಸುವುದೇ ಇದರ ಉದ್ದೇಶ. ಇದರ ವಿವರಗಳಿಗೆಲ್ಲ ನಾನು ಹೋಗಬಯಸುವುದಿಲ್ಲ. ಮೊದಲು ಕಾಂಗ್ರೇಸ್ಸಿನಲ್ಲೂ ಆ ಮೇಲೆ ಕಮ್ಯುನಿಸ್ಟ್ ಪಾರ್ಟಿಯಲ್ಲೂ ಒಬ್ಬ ರಾಜಕೀಯ ಮುಖಂಡನಾಗಿರುವ ನನಗೆ ನನ್ನದೇ ಅಭಿಪ್ರಾಯಗಳಿರುವುದರಿಂದ ನಾನೂ ಇದನ್ನು ಹೇಳುತ್ತಿದ್ದೇನೆ. ಆದುದರಿಂದ ನನ್ನನ್ನು ನೋಡಿಕೊಂಡ ವಿಧಾನದ ಕುರಿತು ನಾನು ನನ್ನ ಭಾವನೆಗಳನ್ನು ವ್ಯಕ್ತಪಡಿಸಿದೆ.[೧೦] ನನ್ನನ್ನು ಬಂಧಿಸಿದಾಗ ನನ್ನ ಸಂಗಾತಿಗಳು ತಡೆಯದಿದ್ದರೆ ಪೋಲೀಸರು ನನ್ನ ತಲೆಯನ್ನು ಒಡೆದು ಹಾಕುತ್ತಿದ್ದರು. ನನ್ನ ಸಂಗಾತಿಗಳು ಆಗ ನನಗೆ ರಕ್ಷಣೆ ನೀಡುವುದರಿಂದ ನನಗೆ ಗಾಯಗಳು ಮಾತ್ರ ಆದವು. ನನ್ನ ಸಂಗಾತಿಗಳು ನನಗೆ ರಕ್ಷಣೆ ನೀಡಬಾರದಿತ್ತೆಂದು ನಾನು ಸಾಯಬೇಕಿತ್ತೆಂದು ಬಯಸಿದ್ದೆ. ಕಾರ್ಮಿಕವರ್ಗದ ಹಿತರಕ್ಷಣೆಗಾಗಿಯೂ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗಿಯೂ ಹೋರಾಡುತ್ತಾ ನಾನು ಸತ್ತರೆ ನನಗೆ ಕೀರ್ತಿ ಬರಬಹುದು. ನಾನು ಸಾಯದೆ ಈಗ ಇಲ್ಲಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ನಿಂತಿದ್ದೇನೆ.

ಇದು ಪಾರ್ಲಿಮೆಂಟಿನ ತುರ್ತು ಅಧಿವೇಶನ, ಸರ್ಕಾರದ ಕೆಲಸಗಳನ್ನು ನಿರ್ವಹಿಸುವುದು ಮುಖ್ಯವಾಗಿ, ದೇಶದ ಆಂತರಿಕ ಭದ್ರತೆಯ ನೆಪದಲ್ಲಿ ಜೂನ್ ೨೬ರಂದು ರಾಷ್ಟ್ರಪತಿಯವರು ಘೋಷಿಸಿದ ಹೊಸ ತುರ್ತುಪರಿಸ್ಥಿತಿಯ ಘೋಷಣೆಗೆ ಅಂಗೀಕಾರ ನೀಡುವುದು ಇದರ ಉದ್ದೇಶ. ಆದರೆ ಇಲ್ಲಿ ವಿರೋಧ ಪಕ್ಷಗಳು ತಮ್ಮ ಪಾತ್ರವನ್ನು ನಿರ್ವಹಿಸದಂತೆ ತಡೆಯಲಾಗಿದೆ. ಯಾಕೆ ಹೀಗೆ? ಮಾನ್ಯ ಸಚಿವರಾದ ಶ್ರೀ ಜಗಜೀವನ್ ರಾಮ್ ಅವರು ಇನ್ನೊಂದು ಮುಖವನ್ನು ವಿವರಿಸುತ್ತಾರೆ. ಈ ತುರ್ತುಪರಿಸ್ಥಿತಿಯ ವಿಷಯದಲ್ಲಿ ವಿರೋಧ ಪಕ್ಷವು ಯಾವ ಅಭಿಪ್ರಾಯ ತಳೆದಿದೆ, ಯಾಕೆ ತುರ್ತುಪರಿಸ್ಥಿತಿಯನ್ನು ಜಾರಿಮಾಡಲಾಯಿತು. ದೇಶದಲ್ಲಿ ಏನು ನಡೆಯುತ್ತಿದೆ

ಎಂಬ ವಿಷಯದಲ್ಲಿ ನಾನು ಮಾತನಾಡ ಬಯಸುತ್ತೇನೆ. ಮಾನ್ಯ ಸಭಾಪತಿಗಳೇ, ನನ್ನ ಭಾಷಣವನ್ನು ಮುಗಿಸಲು ನನಗೆ ಸ್ವಲ್ಪ ಸಮಯ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ವಿಷಯಕ್ಕೆ ಬಂದರೆ ಅದು ಎಷ್ಟು ಗಂಟೆಗಳ ಸಮಯ ನಿಗದಿ ಮಾಡಲಾಗಿದೆ ಎಂದು ನೀವು ಹೇಳಿದ್ದೀರಿ.

ನನ್ನ ಪಾರ್ಟಿಯ ಪರವಾಗಿ ನಾನು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಯಸುತ್ತೇನೆ. ತುರ್ತುಪರಿಸ್ಥಿತಿಯ ವಿಷಯದಲ್ಲಿ ನಮಗೇನು ಹೇಳಲಿಕ್ಕಿದೆ ಎಂಬುದನ್ನು ತುರ್ತುಪರಿಸ್ಥಿತಿ ಘೋಷಿಸಲಾದ ನಂತರ ಏನು ನಡೆಯಿತು ಎಂಬುದನ್ನು ಹೇಳಬಯಸುತ್ತೇನೆ. ನಾನು ಈಗಾಗಲೇ ಹೇಳಿದಂತೆ ಈ ಅವಸರದ ಘೋಷಣೆಯು ನಿಜವಾಗಿ ದೇಶದ ಅಂತರಿಕ ಭದ್ರತೆಗೆ ಅಪಾಯವಿದ್ದುದರಿಂದ ಆದುದ್ದಲ್ಲ. ಬಂಡವಾಳಷಾಹಿ ಅಭಿವೃದ್ಧಿ ಪಥದ ದಿವಾಳಿಕೋರತನದ ಪರಿಣಾಮವಾಗಿ ದೇಶದ ಆರ್ಥಿಕತೆಯು ನುಚ್ಚುನೂರಾಗಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಲೂ, ಬಡವರು ಇನ್ನಷ್ಟು ಬಡವರು ಬಡವರಾಗುತ್ತಲೂ ಇರುವ ಪ್ರಸ್ತುತ ಪರಿಸ್ಥಿತಿ ಶ್ರೀಮತಿ ಗಾಂಧಿಯವರ ನೇತೃತ್ವದಲ್ಲಿ ಆಳುವ ಪಕ್ಷದ ಮೇಲೆ ಜನರಿಗೆ ಉಂಟಾಗಿರುವ ಭ್ರಮನಿರಸನ ಮತ್ತು ಅತೃಪ್ತಿ; ಅಲಹಾಬಾದ್ ಹೈಕೋರ್ಟಿನ ತೀರ್ಪು; ಗುಜರಾತ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಸೋಲು ಮತ್ತು ಸುಪ್ರೀಂ ಕೋರ್ಟಿನ ಅಂತಿಮ ತೀರ್ಮಾನ ಬರುವವರೆಗೆ ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಯಲು ಶ್ರೀಮತಿ ಗಾಂಧಿಯ ನಿರಾಕರಣೆ—ಇವುಗಳೇ ಈ ತುರ್ತುಪರಿಸ್ಥಿತಿಯ ಘೋಷಣೆಗೆ ನಿಜವಾದ ಕಾರಣಗಳು. ಈಗಾಗಲೇ ನಾವು ೧೯೭೧ರಲ್ಲಿ ಘೋಷಿಸಿದ ತುರ್ತುಪರಿಸ್ಥಿತಿಯಲ್ಲಿ ಇದ್ದೇವೆ. ಹೀಗಿರಲು ಇನ್ನೊಂದು ತುರ್ತುಪರಿಸ್ಥಿತಿಯ ಘೋಷಣೆ ಯಾಕೆ? ಹಿಂದಿನ ತುರ್ತುಪರಿಸ್ಥಿತಿಗೆ ಅನುಗುಣವಾಗಿಯೇ ಸರಕಾರಕ್ಕೆ ಬೇಕಾದಷ್ಟು ಅಧಿಕಾರಗಳಿವೆ. ಈ ಅಧಿಕಾರಗಳ ಮೂಲಕ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಲು ಸಾಧ್ಯವಿದೆ. ಇಷ್ಟಾಗಿಯೂ ಒಂದು ಹೊಸ ತುರ್ತುಪರಿಸ್ಥಿತಿಯ ಘೋಷಣೆ ಯಾಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಾನು ಇದರ ವಿವರಣೆ ಕೊಡಲು ಹೋಗುವುದಿಲ್ಲ. ಟ್ರೇಡ್ ಯೂನಿಯನ್ ಮತ್ತು ಇತರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ವಿರೋಧ ಪಕ್ಷಗಳನ್ನು ದಮನಿಸಲು, ಸದೆಬಡಿಯಲೂ ಈ ತುರ್ತುಪರಿಸ್ಥಿತಿಯನ್ನು ಉಪಯೋಗಿಸಲಾಗುತ್ತಿದೆ. ವಿರೋಧ ಪಕ್ಷಗಳು ಮತ್ತು ವಿರೋಧ ಶಕ್ತಿಗಳ ಮೇಲೆ ಡಿ.ಐ.ಆರ್ ಮತ್ತು ಮೀಸಾವನ್ನು ಸಲೀಸಾಗಿ ಪ್ರಯೋಗಿಸಲಾಗುತ್ತಿದೆ. ಕಳೆದ ರೈಲ್ವೇ ಮುಷ್ಕರವನ್ನು ಸದೆಬಡಿಯಲು ಡಿ.ಐ.ಆರ್ ಮತ್ತು ಮೀಸಾವನ್ನು ಉಪಯೋಗಿಸಿದ್ದು ತ್ರಿಪುರ ವಿಧಾನಸಭೆಯ ವಿರೋಧಪಕ್ಷದ ನಾಯಕರನ್ನು, ಇತರ ಶಾಸಕರನ್ನು, ಅಲ್ಲಿನ ರಾಜ್ಯ ಸರಕಾರಿ ನೌಕರರ ಮುಂದಾಳುಗಳನ್ನು ಬಂಧನದಲ್ಲಿಟ್ಟಿರುವುದು ಈ ಸರಕಾರದ ನೀತಿಯ ಸ್ಪಷ್ಟ ಉದಾಹರಣೆಗಳಾಗಿವೆ.

ಅಧಿಕಾರಶಾಹಿ ಒಂದು ಪಕ್ಷದ ಸರ್ವಾಧಿಕಾರ ಪ್ರವೃತ್ತಿಗಳು ತಲೆ ಎತ್ತುತ್ತಿರುವ ಕುರಿತು ಕಳೆದ ಮೂರು ವರ್ಷಗಳಿಂದ ನಮ್ಮ ಪಕ್ಷವು ನೀಡುತ್ತಾ ಬಂದ ಎಚ್ಚರಿಕೆಯು ಸರಿಯಾಗಿತ್ತೆಂದು ಇಂದು ಒಮ್ಮಿಂದೊಂದಿಗೆ ಘೋಷಿಸಲಾದ ಹೊಸ ತುರ್ತುಪರಿಸ್ಥಿಯಿಂದ ರುಜುವಾತಾಗಿದೆ. ಇದರ ಮೂಲಕ

ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಬದಲಿಗೆ ಒಂದು ಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಲಾಗಿದೆ. ಒಬ್ಬಳೇ ಮುಂದಾಳು-ಇಂದಿರಾ ಗಾಂಧಿಯ ಕೈಯಲ್ಲಿ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸಲಾಗಿದೆ.[೧೧] ಇದು ಆಳುವ ವರ್ಗಗಳ ತೀವ್ರ ದೌರ್ಬಲ್ಯ ಮತ್ತು ಆಳುವ ಪಕ್ಷದ ಶಕ್ತಿಯ ಪ್ರದರ್ಶನದ ಬದಲಾಗಿ ಆಳುವ ಪಕ್ಷ ಮತ್ತು ಆಳುವ ವರ್ಗಗಳ ತೀವ್ರ ದೌರ್ಬಲ್ಯ ಮತ್ತು ಬಿಕ್ಕಟ್ಟಿನ ಲಕ್ಷಣವಾಗಿದೆ. ಈ ಬಿಕ್ಕಟ್ಟಿನಿಂದ ಹೇಗಾದರೂ ಹೊರಬಂದು ಆಳುವ ವರ್ಗವನ್ನು ಅಧಿಕಾರದಲ್ಲಿ ಉಳಿಸಿಕೊಳ್ಳುವ ಪ್ರಯತ್ನದ ಫಲವಾಗಿ ಹೀಗೆ ಒಮ್ಮಿಂದೊಮ್ಮೆಗೆ ಪ್ರಜಾಪ್ರಭುತ್ವದಿಂದ ಸರ್ವಾಧಿಕಾರಕ್ಕೆ ಪರಿಸ್ಥಿತಿಯನ್ನು ಬದಲಾಯಿಸಲಾಗಿದೆ. ಪಾರ್ಲಿಂಮೆಂಟರಿ ಪ್ರಜಾಪ್ರಭುತ್ವ ಹಕ್ಕುಗಳು ಆಳುವ ವರ್ಗದ ಅಧಿಕಾರಕ್ಕೆ ಸವಾಲಾಗಿವೆ. ಆದುದರಿಂದಲೇ ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಬ್ಬಾಳಿಕೆ ಹೆಚ್ಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅದೇ ಪ್ಯಾಸಿಸ್ಟ್ ದಬ್ಬಾಳಿಕೆ ಮತ್ತು ಚುನಾವಾಣೆಯಲ್ಲಿ ಮೋಸಗಳು ಪಶ್ಚಿಮ ಬಂಗಾಳದಂಥ ರಾಜ್ಯದಲ್ಲಿ ನಡೆದಿರುವುದೂ, ತುರ್ತುಪರಿಸ್ಥಿತಿಯನ್ನು ಜಾರಿಯಲ್ಲಿಡುವುದು, ಮೀಸದಂಥ ವಿಶೇಷ ಅಧಿಕಾರಗಳನ್ನು ಉಪಯೋಗಿಸುವುದೂ, ಆಳುವ ಪಕ್ಷಕ್ಕೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಅಗತ್ಯವಿದ್ದವು.

ಗುತ್ತೇದಾರಿ ಬಂಡವಾಳದ ಬೆಳವಣಿಗೆಯೂ, ಶೋಷಕ ವರ್ಗದಿಂದ ಜನತೆಯ ಪ್ರತಿಭಟನೆಯೂ, ಸರ್ವಾಧಿಕಾರಿ ಶಕ್ತಿಗಳ ಬೆಳವಣಿಗೆಯೊಂದಿಗೆ ನೇರ ಸಂಬಂಧ ಹೊಂದಿವೆ. ಸ್ವಲ್ಪ ಸಮಯದ ಹಿಂದೆ ಕಾಂಗ್ರೆಸ್ಸಿಗರ ಒಂದು ವಿಭಾಗವು ಹೇಳತೊಡಗಿದೆ, 'ಒಂದೇ ಮುಂದಾಳು, ಒಂದೇ ಪಾರ್ಟಿ, ಒಂದೇ ದೇಶ' ಎಂಬ ಘೋಷಣೆಯು ಸರ್ವಾಧಿಕಾರಿ ಪ್ರವೃತ್ತಿಯ ರಾಜಕೀಯ ಪ್ರತಿಬಿಂಬವಲ್ಲದೆ ಬೇರೇನಲ್ಲ. ಅಲಹಾಬಾದ್ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನ ಪ್ರತಿಕೂಲ ತೀರ್ಪುಗಳು ಮತ್ತು ಗುಜರಾತ್ ಚುನಾವಣೆಗಳ ಪ್ರತಿಕೂಲ ಫಲಿತಾಂಶದ ನಂತರ ಇದೇ ಘೋಷಣೆಯನ್ನು ಕಾಂಗ್ರೆಸ್ ಅಧ್ಯಕ್ಷರು ಸ್ವಲ್ಪ ರೂಪಾಂತಾರ ಗೊಳಿಸಿ "ಇಂದಿರಾ ಈಸ್ ಇಂಡಿಯಾ, ಅಂಡ್ ಇಂಡಿಯಾ ಈಸ್ ಇಂದಿರಾ" (ಇಂದಿರಾ ಎಂದರೆ ಇಂಡಿಯಾ, ಇಂಡಿಯಾ ಎಂದರೆ ಇಂದಿರಾ) ಎಂದು ಘೋಷಿಸಿದರು. ಇದರ ಅರ್ಥವೇನೆಂದರೆ, ಇಂದಿರಾ ಗಾಂಧಿ ತನ್ನ ಜೀವನದುದ್ದಕ್ಕೂ ದೇಶದ ಏಕಮಾತ್ರ ಸರ್ವಾಧಿಕಾರಿಯಾಗಿ ಇಂದಿರಾ ಮುಂದುವರಿಯುವರು. ಯಾವುದೇ ರೀತಿಯ ಪ್ರಜಾಪ್ರಭುತ್ವ, ಪಾರ್ಲಿಮೆಂಟು, ವಿರೋಧ ಪಕ್ಷಗಳು ಮತ್ತು ಚುನಾವಣೆಗಳ ಅಗತ್ಯವಿಲ್ಲ. ಈ ಸಂದರ್ಭದಲ್ಲಿ ನನಗೆ ಕೆನ್ಯುಟ್ ರಾಜನ ಕಥೆ ನೆನಪಾಗುತ್ತದೆ. ಸಮುದ್ರದ ಮಧ್ಯದಿಂದ ಕೆನ್ಯಟ್ ಹೇಳಿದ ಮಾತುಗಳು ಇಂದಿನ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಹೊಂದಿರುವ ಆಡಳಿತಕ್ಕೆ ಉದಾಹರಣೆಯಾಗಿದೆ.

ನಾನು ಏನೇನು ನೋಡುತ್ತೇನೋ, ಅದೆಲ್ಲದರ ಅಧಿಪತಿ ನಾನು. ನನ್ನ ಹಕ್ಕನ್ನು ವಿರೋಧಿಸುವವರು ಯಾರು ಇಲ್ಲ. ಈ ತುರ್ತುಪರಿಸ್ಥಿತಿಯ ಘೋಷಣೆಯನ್ನು ಸಂಸತ್ತಿನಲ್ಲಿ ಇದಕ್ಕೆ ಅಂಗೀಕಾರ ಕೊಡುವುದನ್ನು ನಾನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಭಾಗವಾಗಿ ಖಂಡ ತುಂಡವಾಗಿ ವಿರೋಧಿಸುತ್ತೇನೆ. ಇಂದಿನ ಪರಿಸ್ಥಿಯಲ್ಲಿ ಬಂಧನ ಮತ್ತು ಸೆರೆವಾಸದಿಂದ ಯಾರೂ

ಮುಕ್ತರಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಈಗಾಗಲೇ ಹೇಳಿದಂತೆ ನೂರಾರು ಮಂದಿ ಜೈಲಿನಲ್ಲಿದ್ದಾರೆ. ಅವರಲ್ಲಿ ಕಾಂಗ್ರೆಸ್ಸಿಗರೂ ಒಳಗೊಂಡಿದ್ದಾರೆ. (ಹಲವರು ಮಧ್ಯೆ ಬಾಯಿ ಹಾಕುತ್ತಾರೆ.) ಶ್ರೀ ಜಗಜೀವನ್ ರಾಮ್ ಮತ್ತು ಶ್ರೀ ಚೌವ್ಹಾಣ್ ಗೃಹ ಬಂಧನದಲ್ಲಿದ್ದಾರೆಂದು ಸುದ್ದಿಯಿತ್ತು. ನಾನು ಜೈಲಿನಲ್ಲಿದ್ದಾಗ ಇದು ಎಷ್ಟರ ಮಟ್ಟಿಗೆ ಸರಿಯೆಂದು ನನಗೆ ಗೊತ್ತಿಲ್ಲ. ವಿರೋಧ ಪಕ್ಷಗಳ ಹಲವು ಮುಖಂಡರೂ, ಕೆಲವು ಕಾಂಗ್ರೆಸ್ ಮುಂದಾಳುಗಳು ಸೇರಿ ೩೯ ಮಂದಿ ಪಾರ್ಲಿಮೆಂಟ್ ಸದಸ್ಯರು ಜೈಲಿನಲ್ಲಿದ್ದಾರೆ. ಜನತೆಯ ಹಿತಾಸಕ್ತಿಗಳಿಗೆ ನಾವು ದ್ರೋಹ ಬಗೆಯಲಾರೆವು. ಭಾರತದ ಪ್ರಜಾಪ್ರಭುತ್ವದ ಅಂತಃಸತ್ಯಗಳಾದ ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಸಂಘಟನೆ ಸ್ಥಾಪಿಸುವ ಸ್ವಾತಂತ್ರ್ಯ, ನ್ಯಾಯಾಲಯಕ್ಕೆ ಹೋಗುವ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಸರಕಾರವನ್ನು ಟೀಕಿಸುವ ಮತ್ತು ಸರಕಾರ ಬದಲಿಸಿ ಜನತೆಗೆ ಬೇಕಾದ ರೀತಿಯ ಸರಕಾರವನ್ನು ರಚಿಸುವ ಸ್ವಾತಂತ್ರ್ಯ, ಇವುಗಳನ್ನು ಮೊಟಕುಗೊಳಿಸುವ ಯಾವುದೇ ಕ್ರಮಕ್ಕೆ ನಾವು ಒಪ್ಪಿಗೆ ಕೊಡಲಾರೆವು. ಸ್ವಾತಂತ್ರ್ಯದ ವಿಷಯದಲ್ಲಿ ಒಂದು ಮಾತು, ಸ್ವಾತಂತ್ರ್ಯ ಎಂದರೇನು? ಇದರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಸರಕಾರದ ಕಡೆಯಿಂದ ಹೇಳುವಂತೆ, ಸ್ವಾತಂತ್ರ್ಯವೆಂದರೆ ಸರಕಾರವು ಮಾಡುವುದಕ್ಕೆಲ್ಲಾ ನಮ್ಮ ಬೆಂಬಲ ಘೋಷಿಸುವುದು, ನಾವು ಯಾವುದನ್ನು ಟೀಕಿಸದೆ ಇರಬೇಕೆನ್ನುವುದೂ ಆಗಿದೆ. ಆದುದರಿಂದಲೇ ಈ ಭಿನ್ನಾಭಿಪ್ರಾಯ. ನಮ್ಮ ಮಟ್ಟಿಗೆ ಸ್ವಾತಂತ್ರ್ಯವೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ, ವಿರೋಧಿ ಪಕ್ಷಗಳು ದೇಶದ ಜನರೂ ಕಾಂಗ್ರೆಸ್ಸಿಗರನ್ನು ಒಳಗೊಂಡು ಸರಕಾರದ ಧೋರಣೆಗಳನ್ನು ಕುರಿತು ಯಾವ ಭಾವನೆಯನ್ನು ಹೊಂದಿದ್ದಾರೋ ಅವುಗಳನ್ನು ವ್ಯಕ್ತಪಡಿಸಲು ಅವರಿಗೆ ಸ್ವಾತಂತ್ರ್ಯವಿರಬೇಕು. ಅದೇ ನಿಜವಾದ ಸ್ವಾತಂತ್ರ್ಯ. ಆ ಸ್ವಾತಂತ್ರ್ಯವನ್ನೇ ಇಂದು ಮೊಟಕುಗೊಳಿಸಲಾಗಿದೆ.

ಸ್ವಾಮಿ, ಪ್ರಜಾಪ್ರಭುತ್ವದ ಈ ಕೃರಕೊಲೆಯನ್ನು ಅವರು ಹೇಗೆ ಸಮರ್ಥಿಸಿ ಕೊಳ್ಳುತ್ತಿದ್ದಾರೆ? ಶ್ರೀಮತಿ ಇಂದಿರಾಗಾಂಧಿಯವರು ತನ್ನ ರಕ್ಷಣೆಗಾಗಿ ಎಂತಹ ವಾದ ಮಂಡಿಸುತ್ತಿದ್ದಾರೆ? ಬಲಪ್ರತಿಗಾಮಿಗಳನ್ನು ಎಡಅತಿವಾದಿಗಳನ್ನು ಸೋಲಿಸಲು ಈ ಕ್ರಮ ಕೈಗೊಂಡಿದ್ದಾಗಿ ಆಕೆ ಹೇಳಿಕೊಳ್ಳುತ್ತಿದ್ದಾರೆ. ಈ ಎಲ್ಲಾ 'ಎಡ' ಸೋಗುಗಳನ್ನು ದೇಶದೊಳಗಿನ ಮತ್ತು ವಿದೇಶಗಳ ಜನಾಭಿಪ್ರಾಯಗಳನ್ನು ವಂಚಿಸುವ ಉದ್ದೇಶವನ್ನಷ್ಟೇ ಹೊಂದಿದೆ. ಪಿತೂರಿ, ಒಳಸಂಚು ಎಂದೆಲ್ಲಾ ದೊಡ್ಡ ರೀತಿಯಲ್ಲಿ ಕೂಗೆಬ್ಬಿಸಿ ಪ್ರಚಾರ ನಡೆಸುತ್ತಿರುವುದರ ಉದ್ದೇಶ ಇಷ್ಟೇ. ಕಾನೂನುಬಾಹಿರ ಆಜ್ಞೆಗಳನ್ನು ಪಾಲಿಸಬೇಡಿರಿ ಎಂದು ಪೋಲೀಸ್ ಮತ್ತು ಸೈನ್ಯಕ್ಕೆ ನೀಡಿದ ಒಂದು ಕರೆಯನ್ನು (ಜಯಪ್ರಕಾಶ ನಾರಾಯಣರು ನೀಡಿದ ಕರೆ) ಉತ್ಪ್ರೇಕ್ಷಿಸಲಾಯಿತು. ಈ ಉನ್ನತಮಟ್ಟ ಪ್ರಚಾರದ ಮೋಸದ ಮುಂದೆ ವಸ್ತುಸ್ಥಿತಿಯಾದರು ಏನು? ಈಗ ಅವರು ನಿಷೇಧಿಸಿರುವ ಆರ್.ಎಸ್.ಎಸ್ ಮತ್ತು ಆನಂದಮಾರ್ಗದ ಕುರಿತು ಸರಕಾರದ ಧೋರಣೆ ಏನಿತ್ತು ಎಂದು ವಿವೇಚಿಸಿ ನೋಡಲಿ. ಬಹುಶಃ ಈ ಸಂಘಟನೆಗಳ ಸರಕಾರದ ಧೋರಣೆಯು ಆಗಿದ್ದಾಗ ಅದರ ಅನುಕೂಲದಂತೆ ಬದಲಾಗುತ್ತಿರುತ್ತದೆ. ಮೃದು ಹಿಂದುತ್ವದ ಪ್ರತಿಪಾದನೆಯನ್ನು ಹೊಂದಿರುವುದನ್ನು ಕಾಂಗ್ರೆಸ್ ಪಕ್ಷ ಹೊಂದಿದೆ ಎಂದು ಟೀಕಿಸುತ್ತಾರೆ.

೧೯೬೩ರಲ್ಲಿ ಭಾರತ-ಪಾಕಿಸ್ತಾನ ಯುದ್ಧದ ವೇಳೆ ಅಂದಿನ ಪ್ರಧಾನಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದೆಹಲಿ ನಗರವನ್ನು ನಾಗರಿಕ ರಕ್ಷಣೆಯ ಕೆಲಸಕ್ಕಾಗಿ ಆರ್.ಎಸ್.ಎಸ್‌ಗೆ ಒಪ್ಪಿಸಿದರು. ಸ್ವಲ್ಪ ಸಮಯದ ಹಿಂದೆ ಈ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಆರ್.ಎಸ್.ಎಸ್ ಮುಖಂಡ ಗೋಲ್ವಲ್ಕರರನ್ನು ಬಾಯಿ ತುಂಬಾ ಹೊಗಳಿದ್ದರು(ಗಲಾಟೆ) ಇದು ದಾಖಲೆಯಲ್ಲಿದೆ. ನೀವು ವರದಿಗಳನ್ನು ಪರಿಶೀಲಿಸಿದರೆ-(ಗಲಾಟೆ) ಅವರು ನನಗೆ ಪ್ರಶ್ನೆ ಕೇಳಿದರೆ, ದಾಖಲೆಗಳನ್ನು ನೋಡಿರಿ, ಉತ್ತರ ಅಲ್ಲಿದೆ ಎಂದು ಹೇಳಬಯಸುತ್ತೇನೆ"-(ಗಲಾಟೆ).

ಮಾನ್ಯ ಸಭಾಪತಿಗಳು : "ಅವರು ಬಹುಶಃ ಯಾವುದೋ ಶ್ರದ್ಧಾಂಜಲಿ ಮಾತುಗಳ ಕುರಿತು, ಏನೋ ಒಳ್ಳೆಯ ಕೆಲಸಗಳನ್ನು ಮಾಡಿದುದರ ಕುರಿತು ಹೇಳುತ್ತಿದ್ದಾರೆ. ಹಾಗೇ ಹೇಳುವುದು ಒಳ್ಳೆಯದಲ್ಲ. ನೀವು ಅದನ್ನೇ ಹೇಳುತ್ತಿರುವುದೋ? ಬೇರೆ ಏನಾದರೂ ದಾಖಲೆಗಳಿವೆಯೋ? ಇದು ನನಗೆ ಸ್ಪಷ್ಟವಾಗಬೇಕು. ಬೇರೆನಾದರೂ ದಾಖಲೆಗಳಿದ್ದರೆ ಅವರು ತೋರಿಸಲಿ"(ಗಲಾಟೆ).

ಎ.ಕೆ.ಗೋಪಾಲನ್ : ನೀವು ಎಲ್ಲವನ್ನು ತೆಗೆದುಹಾಕಬಲ್ಲಿರಿ. ಹೊರಗೆ ಯಾವುದು ಹೋಗುವುದಿಲ್ಲ. ಯಾವುದು ಅಚ್ಚಾಗುವುದಿಲ್ಲ. ಅದು ದಾಖಲೆ ಮಾತ್ರ ಇದೆ. ಅದು ಶ್ರದ್ಧಾಂಜಲಿಯ ಉಲ್ಲೇಖಗಳಿಲ್ಲದೆ ಆನಂದಮಾರ್ಗಗಳ ವಿಷಯದಲ್ಲಿ ಹೇಳುವುದಿದ್ದರೆ, ಅವರು ಕಾಮ್ರೇಡ್ ಜ್ಯೋತಿಬಸು ಅವರನ್ನು ಪಾಟ್ನಾ ರೈಲ್ವೇ ಸ್ಟೇಷನ್ನಿನಲ್ಲಿ ಕೊಲೆ ಮಾಡಲು ಪ್ರಯತ್ನಿಸಿದಾಗ ಅವರ ಸಮೀಪದಲ್ಲಿ ನಿಂತಿದ್ದ ವ್ಯಕ್ತಿ ಕೊಲ್ಲಲ್ಪಟ್ಟ ಸರಕಾರವು ಆಗ ಆ ಬಗ್ಗೆ ಏನೂ ಮಾಡಲಿಲ್ಲ. ಆನಂದಮಾರ್ಗದ ಮುಖಂಡನೂ ಇತರ ಮೂವರು ಕೊಲೆ ಗಡುಕರೂ ತಮ್ಮ ಜನರನ್ನೇ ಕೊಂದ ಆಪಾದನೆ ಎದುರಿಸುತ್ತಿದ್ದಾರೆ. ಇದೇ ಆನಂದಮಾರ್ಗಕ್ಕೆ ೧೯೭೧ನೇ ಇಸವಿಯಲ್ಲಿ ಬಾಂಗ್ಲಾದೇಶ ನಿರಾಶ್ರಿತರ ಪರಿಹಾರ ಕೆಲಸಕ್ಕಾಗಿ ಸರಕಾರವು ಹನ್ನೆರಡು ಲಕ್ಷರೂಪಾಯಿಗಳನ್ನು ಕೊಟ್ಟಿತ್ತು. ಈ ಪೈಕಿ ೨,೮೦,೦೦೦ ರೂಪಾಯಿಯ ಲೆಕ್ಕವನ್ನೇ ಅವರು ಕೊಡಲಿಲ್ಲ. ಈ ಸಂಘಟನೆಗಳ ವಿಷಯದಲ್ಲಿ ಸರಕಾರದ ಧೋರಣೆ ಏನಿತ್ತು ಎಂಬುದನ್ನಷ್ಟೇ ನಾನು ಹೇಳುತ್ತಿದ್ದೇನೆ. ಅತಿವಾದಿಗಳೆಂದು ಕರೆಯಲ್ಪಡುವವರ ವಿಷಯ ತೆಗೆದುಕೊಳ್ಳಿ. ಒಂದು ಕಾಲದಲ್ಲಿ ಆಳುವ ಪಕ್ಷವು ನಕ್ಸಲೀಯರಿಗೆ ಉತ್ತೇಜನ ಕೊಟ್ಟು ಪಶ್ಚಿಮ ಬಂಗಾಳದಲ್ಲಿ ನಮ್ಮ ಪಾರ್ಟಿಯ ಕಾರ್ಯಕರ್ತರನ್ನು ನಿರ್ನಾಮಮಾಡಲು ಅವರಿಗೆ ಸಹಾಯಮಾಡಿತು.

ಈಗ ಅವರು ಸುಪ್ರಸಿದ್ದರಾಗಿ ಸಂಪೂರ್ಣ ಗಲಿಬಿಲಿಗೊಳಗಾಗಿದ್ದರು. ಸಾಮೂಹಿಕ ತಳಹದಿಯಿಲ್ಲದ ಈ ಸಂಸ್ಥೆಗಳು ಒಮ್ಮಿಂದೊಮ್ಮೆಗೆ ದೇಶದ ಆಂತರಿಕ ಭದ್ರತೆಗೆ ಅಪಾಯಕಾರಿಯಾಗಿವೆಯೆಂದು ಇವುಗಳನ್ನು ತಡೆಯುವುದು ತುರ್ತುಪರಿಸ್ಥಿತಿಯ ಹೇರಿಕೆಯಿಂದ ಮಾತ್ರ ಸಾಧ್ಯವೆಂದು ಜನರನ್ನು ನಂಬಿಸುವುದು ಸುಲಭವೇನಲ್ಲ. ಈ ಪಕ್ಷಗಳ ರಾಜಕೀಯಗಳನ್ನೂ, ಸಿದ್ಧಾಂತಗಳನ್ನೂ, ರಾಜಕೀಯವಾಗಿಯೂ, ಸೈದ್ಧಾಂತಿಕವಾಗಿಯೂ ಎದುರಿಸಿ ಸೋಲಿಸಬೇಕು. ಅವರು ಕ್ರಿಮಿನಲ್ ಚಟುವಟಿಕೆಗಳಲ್ಲಿ ಒಳಗಾಗಿದ್ದಾರೆ. ಸಾಮಾನ್ಯ ಕಾನೂನುಗಳ ಪ್ರಕಾರ ಅವರ ಮೇಲೆ ಕ್ರಮ

ತೆಗೆದುಕೊಳ್ಳಬೇಕು. ಸರಕಾರವು ಕೈಗೊಂಡ ಕ್ರಮಗಳ ಗುರಿ ಮುಖ್ಯವಾಗಿ ಯಾರ ವಿರುದ್ಧ? ತುರ್ತುಪರಿಸ್ಥಿತಿಯ ಘೋಷಣೆಯೊಂದಿಗೆ ತೆಗೆದುಕೊಳ್ಳಲಾದ ಕ್ರಮಗಳು ಜನಸಾಮಾನ್ಯರ ವಿರುದ್ಧ ನಡೆದಿವೆಯೆಂದು ನಿಸ್ಸಂದೇಹವಾಗಿ ಕಾಣುತ್ತದೆ.[೨] ಜನರಿಗೆ ಲಭ್ಯವಿರುವ ಪ್ರಜಾಸತ್ತಾತ್ಮಕ ಹಕ್ಕುಗಳೆಲ್ಲವನ್ನು ನಿರ್ನಾಮ ಮಾಡಲಾಗಿದೆ. ಮೂಲಭೂತ ಹಕ್ಕುಗಳನ್ನು ಒಳಗೊಂಡ ಸಂವಿಧಾನದ ಮೂರನೇ ಪರಿಚ್ಛೇದವು ನಿರ್ಜೀವವಾಗಿದೆ. ೧೪ನೇ ಮತ್ತು ೨೨ನೇ ವಿಧಿಗಳು ಅಮಾನುತುಗೊಂಡಿವೆ. ಇನ್ನು ಕೆಲವು ವಿಧಿಗಳನ್ನು ಅಮಾನತು ಮಾಡುವ ಮಸೂದೆಯೆಂದು ಬರಲಿದೆಯೆಂದು ಇಂದಿನ ಪತ್ರಿಕೆಗಳಲ್ಲಿ ಹೇಳಲಾಗಿದೆ. ಇಡೀ ಸಂವಿಧಾನವನ್ನೇ ಬದಲಿಸಬಹುದಲ್ಲ? ಅಥವಾ ಯಾಕೆ ಸಂವಿಧಾನವನ್ನು ಹೊರಕ್ಕೆಸೆದು ಎಲ್ಲಾ ಅಧಿಕಾರಗಳನ್ನು ಪ್ರಧಾನಮಂತ್ರಿ ಕೈಗೆ ತೆಗೆದುಕೊಳ್ಳಬಾರದು? ಹೀಗೆ ಪ್ರತಿದಿನ ಸಂವಿಧಾನದ ಬದಲಾವಣೆಗಳು ಬರುತ್ತಾ ಇವೆ, ಪ್ರತಿದಿನ, ಪ್ರತಿತಾಸು. ಆದುದರಿಂದ ಇದರ ಅರ್ಥವೇನೆಂದರೆ ಕಾನೂನಿನ ಮುಂದೆ ಸಮಾನತೆಕೂಡ ಇಲ್ಲ. ಕಾರ್ಯಾಂಗವು ತಮ್ಮಿಷ್ಟ ಬಂದಂತೆ ಪಕ್ಷಪಾತದಿಂದ ವರ್ತಿಸಬಹುದು. ಯಾರಾದರೊಬ್ಬ ವ್ಯಕ್ತಿ ಬಂಧಿಸಲ್ಪಟ್ಟರೆ ಅವನನ್ನು ಕೋರ್ಟಿನ ಮುಂದೆ ಹಾಜರುಪಡಿಸಬೇಕಿಲ್ಲ; ಅವನ ಬಂಧನ, ಅವನು ಎಲ್ಲಿದ್ದಾನೆ. ಹೇಗಿದ್ದಾನೆ ಎಂಬ ಸುದ್ದಿಯನ್ನು ಸಂಪೂರ್ಣವಾಗಿ ರಹಸ್ಯವಾಗಿಡಬಹುದು. ಪೋಲೀಸರು ಅವನನ್ನು ದೈಹಿಕವಾಗಿ ನಿರ್ನಾಮ ಮಾಡಬಹುದು. ಯಾರಿಗೂ ಆ ವಿಷಯದಲ್ಲಿ ಏನೇನೂ ಗೊತ್ತಾಗಬೇಕಿಲ್ಲ. ಇದು ಇಂದಿನ ಪರಿಸ್ಥಿತಿ ದೇಶಾದ್ಯಂತ ಸಭೆಗಳನ್ನು ಪ್ರದರ್ಶನಗಳನ್ನು ನಿಷೇಧಿಸಲಾಗಿದೆ.

ಕೇರಳದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಯೊಂದು ಗ್ರಾಮದಲ್ಲೂ ಸೆಕ್ಷೆಷ್ ೧೪೪ ಜಾರಿಯಲ್ಲಿದೆ. ಆದುದರಿಂದ ಐದಕ್ಕಿಂತ ಹೆಚ್ಚು ಜನರು ಒಂದೆಡೆ ಸೇರುವಂತಿಲ್ಲ. ಕೆಲವು ಕಡೆಗಳಲ್ಲಿ ರಾತ್ರಿ ಎಂಟುಗಂಟೆಯ ನಂತರ ಯಾರೂ ರಸ್ತೆಯಲ್ಲಿ ಓಡಾಡಬಾರದು. ಆದುದರಿಂದ ಚಲನಚಿತ್ರಮಂದಿರಗಳಲ್ಲಿ ಎರಡನೇ ಪ್ರದರ್ಶನಗಳನ್ನು ರದ್ದು ಮಾಡಲಾಗಿದೆ. ಇದು ಅಲ್ಲಿನ ಪರಿಸ್ಥಿತಿ. ಸರಕಾರದ ಅಥವಾ ಕಾಂಗ್ರೆಸ್ ಪಕ್ಷದ ಮೇಲೆ ಯಾವುದೇ ಟೀಕೆ–ಎಷ್ಟೇ ಲಘುವಾದ ಟೀಕೆಯಾದರು ಮಾಡಿದರೆ ಅದನ್ನು ಪ್ರಕಟಿಸಲು ಬಿಡುವುದಿಲ್ಲ. ಸ್ಥಾಪಿತ ಹಿತಾಸಕ್ತಿಗಳಿಂದ ಜನರ ಶೋಷಣೆ, ರೈತರ ಮತ್ತು ಕೃಷಿ ಕಾರ್ಮಿಕರ ಶೋಷಣೆ ಮೊದಲಾದ ವಿಷಯಗಳಲ್ಲಿ ಸರಕಾರದ ಮೇಲೆ ಅತ್ಯಂತ ಸೌಮ್ಯವಾದ ಟೀಕೆಯಿದ್ದರೂ ಆ ಸುದ್ದಿಯನ್ನು ಪ್ರಕಟಿಸಲು ಬಿಡುವುದಿಲ್ಲ. ಉತ್ಪಾದನೆಗೆ ಅಡ್ಡಿಯಾಗುತ್ತದೆಂಬ ನೆಪದಲ್ಲಿ ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು ಮೊದಲಾದವರು ಯಾವುದೇ ಚಳವಳಿಯನ್ನು ನಡೆಸುವಂತಿಲ್ಲ. ಇದೇ ನೆಪದಲ್ಲಿ ಮುಷ್ಕರಗಳನ್ನು ನಡೆಯಗೂಡುವುದಿಲ್ಲ. ಆದರೆ, ಕಾರ್ಖಾನೆಗಳಲ್ಲೂ ಸರಕಾರದ ಸಂಸ್ಥೆಗಳಲ್ಲೂ ಕೂಡ ಲಾಕೌಟುಗಳೂ, ಲೇಆಫ್‌ಗಳೂ ನಡೆಯುತ್ತಿವೆಂದು ನಾನು ಹೇಳಬಯಸುತ್ತೇನೆ. ಇವುಗಳನ್ನು ಕೊನೆಗೊಳಿಸಲು ಸರಕಾರವು ಏನಾದರೂ ಕ್ರಮಕೈಗೊಳ್ಳವುದೇ? ಕಳೆದ ಒಂದು ತಿಂಗಳಿನಲ್ಲಿ ಕೆಲವು ಕಾರ್ಖಾನೆಗಳಲ್ಲಿ ಲೇಆಫ್ ಹೇರಲಾಗಿದೆಯೆಂದು ಎರಡು ದಿನಗಳ ಹಿಂದೆಯಷ್ಟೇ ನಾನು ಕಾರ್ಮಿಕ ಸಚಿವರಿಗೆ ತಂತಿ ಕಳುಹಿಸಿದ್ದೇನೆ. ಪಶ್ಚಿಮ ಬಂಗಾಳದ ಹಲವು ಕಾರ್ಖಾನೆಗಳಲ್ಲೂ ಲಾಕೌಟ್ ಮತ್ತು ಲೇಆಫ್ ಇದೆಯೆಂದು ನನಗೆ

ಗೊತ್ತಿದೆ. ಹೀಗೆ ಲಾಕೌಟ್ ಮತ್ತು ಲೇಆಫ್‌ಳು ಈಗಲೂ ಮುಂದುವರಿಯುತ್ತಿವೆ. ಯಾರ ಹಿತಕ್ಕಾಗಿ ಈ ಸರ್ವಾಧಿಕಾರವನ್ನು ಹೇರಿದ್ದಾರೆ? ಯಾರ ಹಿತವನ್ನು ಇದು ರಕ್ಷಿಸಿ ಕಾಪಾಡುತ್ತದೆ? ಖಂಡಿತ ಕಾರ್ಮಿಕ ಹಿತವನ್ನಲ್ಲ, ಮಧ್ಯಮ ವರ್ಗದ ನೌಕರರ ಹಿತವನ್ನಲ್ಲ; ಕೃಷಿ–ಕಾರ್ಮಿಕರ ಹಿತವನ್ನಲ್ಲ. ಪ್ರಧಾನಿಮಂತ್ರಿಯ ಬಳಿಗೆ ಹೋಗಿ ಬೆಂಬಲ ವ್ಯಕ್ತಪಡಿಸಿದ ಚೇಂಬರ್ ಆಫ್ ಕಾಮರ್ಸಿನ ಸದಸ್ಯರ ಹಿತವನ್ನು ಮಾತ್ರ ಇದು ರಕ್ಷಿಸುತ್ತದೆ. ಯಾವ ಕೈಗಾರಿಕೆಯನ್ನೂ "ರಾಷ್ಟ್ರೀಕರಣವೇನಾದರೂ ಆದಿತೆಂಬ ಹೆದರಿಕೆ ಬೇಡ". ಸಿ.ಪಿ.ಐ.(ಎಂ) ಮತ್ತು ಇತರ ಎಡ ಪ್ರಜಾಪ್ರಭುತ್ವವಾದಿ ಪಕ್ಷಗಳ ಸಾವಿರಗಟ್ಟಲೆ ಮುಂದಾಳುಗಳನ್ನು ಕಾರ್ಯಕರ್ತರನ್ನೂ ಬಿಂಬಿಸುವ ಮೂಲಕ ತುರ್ತುಪರಿಸ್ಥಿತಿಯನ್ನು ಕೇವಲ ಬಲಪ್ರತಿಗಾಮಿಗಳ ವಿರುದ್ಧ ಉಪಯೋಗಿಸಲಾಗುತ್ತಿತ್ತೆಂಬ ಪ್ರಚಾರದ ಪೊಳ್ಳುತನವು ಸಾಬೀತಾಗಿದೆ.

ಜನಸಾಮಾನ್ಯರ ಮೇಲೆ ಪೋಲೀಸರನ್ನು ಛೂ ಬಿಡಲಾಯಿತು. ಉದಾಹರಣೆಗೆ ಕೇರಳದಲ್ಲಿ, ಮಾರ್ಕ್ಸ್‌ವಾದಿ, ಕಮ್ಯುನಿಸ್ಟ್ ಪಕ್ಷ, ಕೇರಳ ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿ ಮೊದಲಾದ ವಿರೋಧ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಅಮಾನುಷವಾಗಿ ಹೊಡೆದಿದ್ದಾರೆ. ಒಬ್ಬ ಶಾಸಕನು ಜೈಲಿಗೆ ಹೋದಾಗ ಅವರ ಬಟ್ಟೆಗಳನ್ನೆಲ್ಲಾ ಕಳಚಿ ಲಂಗೋಟಿ ಮಾತ್ರ ಆತನ ದೇಹದ ಮೇಲೆ ಬಿಡಲಾಯಿತು. ಆ ಸ್ಥಿತಿಯಲ್ಲಿ ಆತನನ್ನು ಅಲ್ಲಿ ಇರಿಸಿದ ಕುರಿತು ವಿಚಾರಣೆ ನಡೆಸಬೇಕೆಂದು ನಾನು ಪ್ರಧಾನಮಂತ್ರಿಯವರನ್ನು ಒತ್ತಾಯಿಸುತ್ತೇನೆ. ನನ್ನೊಂದಿಗೆ ಬಂಧಿತರಾದ ಜನರನ್ನು ಸಬ್‌ಇನ್ಸ್‌ಪೆಕ್ಟರ್ ಮಧ್ಯಾಹ್ನ ಒಂದು ಗಂಟೆಗೆ ಪೋಲೀಸ್ ಸ್ಟೇಷನ್ನಿಗೆ ಕೊಂಡುಹೋದನು. ಅಲ್ಲಿ ಅವರೊಡನೆ ಹೇಳಿದನು. "ನೀವು ಊಟ ಮಾಡಲಿಲ್ಲ. ನೀವು ಮೂರು–ನಾಲ್ಕೋ ಜನರ ಗುಂಪುಗಳಾಗಿ ಬನ್ನಿ ನಾನು ನಿಮ್ಮನ್ನು ಕೊಂಡು ಹೋಗುತ್ತೇನೆ". ಅವರನ್ನು ಕೊಂಡುಹೋಗಿ ಬಟ್ಟೆ ಬಿಚ್ಚಿಸಿ, ಚೆನ್ನಾಗಿ ಹೊಡೆದು ರಸ್ತೆಯಲ್ಲಿ ಬಿಡಲಾಯಿತು. ಒಬ್ಬ ಶಾಸಕನನ್ನು ಬಂಧಿಸಿ ನಗ್ನ ಗೊಳಿಸಿದರೆಂದೂ, ಅವನ ಲಂಗೋಟಿ ಕೂಡ ಕಿತ್ತೆಸೆದು, ಹೊಡೆದು ರಸ್ತೆ ಬೀದಿಯಲ್ಲಿ ನಿಲ್ಲಿಸಿದರೆಂದೂ ಆರು ತಿಂಗಳುಗಳ ಹಿಂದೆ ಕೇರಳ ಅಸೆಂಬ್ಲಿಯಲ್ಲಿ ವಿವರಿಸಲಾಗಿತ್ತು. ಹೀಗೇಕೆ ಆಗುತ್ತಿದೆಯೆಂದರೆ ಅಲ್ಲಿನ ಗೃಹಮಂತ್ರಿ ತುಂಬಾ ಕರುಣಾಳು! ಆತ ಜನರನ್ನು ಅವರು ಹುಟ್ಟಿದಾಗ ಇದ್ದಂತೆಯೇ ನೋಡಬಯಸುತ್ತಾರೆ. ಜನರಿಗೆ ಆ ರೀತಿ ಪ್ರದರ್ಶನ ಮಾಡಲು ಅವರನ್ನು ನಗ್ನ ಗೊಳಿಸಿದನು. ಕೇರಳದಲ್ಲೂ ಭಾರತದ ಇತರ ತುರ್ತುಪರಿಸ್ಥಿತಿಯ ಮೂಲಕ ಸಂವಿಧಾನದ ಕೆಲವು ವಿಧಿಗಳನ್ನು ಅಮಾನತಿಯಲ್ಲಿಡಲಾಯಿತು. ಆದರೂ ಕೆಲವು ಮಾನವೀಯ ನಿಯಮಗಳಾದರೂ ಇರಲಾರವೇ? ವಿರೋಧ ಪಕ್ಷಗಳಲ್ಲಿರುವವರು ಮನುಷ್ಯರು. ಬಂಧನಕ್ಕೊಳಗಾದವರಲ್ಲಿ ಬಹಳಮಂದಿಯನ್ನು ಪೋಲೀಸರು ಕ್ರೂರವಾಗಿ ಹೊಡೆದಿದ್ದಾರೆ.

ಕೇರಳ ವಿಧಾನಸಭೆಯ ವಿರೋಧ ಪಕ್ಷ ಮುಖಂಡನಾದ ಇ.ಎಂ.ಎಸ್.ನಂಬೂದಿರಿಪಾಡ್, ಕೆ.ಎಂ.ಜಾರ್ಜ್ ಪಾರ್ಲಿಮೆಂಟಿನ ಸದಸ್ಯ ಬಾಲಕೃಷ್ಣ ಪಿಳ್ಳೆ ಮತ್ತು ಹಲವಾರು ವಿರೋಧಪಕ್ಷ ಮುಂದಾಳುಗಳನ್ನು ಮೀಸಾದನ್ವಯ ಬಂಧಿಸಿ 'ಸಿ'ಕ್ಲಾಸ್ ಕೈದಿಗಳನ್ನಾಗಿಟ್ಟಿದ್ದಲ್ಲದೆ ಬ್ರಿಟೀಷ್ ವಸಾಹತು

ಷಾಹಿ ಆಳ್ವಿಕೆಯ ದಿನಗಳನ್ನು ನೆನಪಿಗೆ ತರುವಂತಹ ಹೇಯ ರೀತಿಯಲ್ಲಿ ನೋಡಿಕೊಳ್ಳಲಾಯಿತು. ಬ್ರಿಟೀಷರು ಯಾಕೆ ಆ ರೀತಿ ವರ್ತಿಸುತ್ತಿದ್ದರೆಂಬುದು ನಮಗೆ ಗೊತ್ತಿದೆ. ಆದರೆ ಇಂದಿನ ಸರಕಾರವು ಯಾಕೆ ಹೀಗೆ ಮಾಡುತ್ತಿದೆಯೆಂದು ನಮಗೆ ಅರ್ಥವಾಗುತ್ತಿಲ್ಲ. ಹಲವು ರಾಜಕೀಯ ಮುಂದಾಳುಗಳನ್ನು, ಕಾರ್ಯಕರ್ತರನ್ನೂ, ಜೈಲಿನ ಒಳಗೂ ಹೊರಗೂ ಹೊಡೆದಿದ್ದಾರೆ. ಕೇರಳವು ಹಿಂದೆಯೂ ಇಷ್ಟು ಕ್ರೂರವಾದ ಪೋಲೀಸ್ ಅತ್ಯಾಚಾರವನ್ನು ಕಂಡಿರಲಿಲ್ಲ. ಇದೇ ರೀತಿಯಲ್ಲಿ ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ, ಉತ್ತರಪ್ರದೇಶ, ಹಿಮಾಚಲ ಪ್ರದೇಶ, ಮೊದಲಾದ ರಾಜ್ಯಗಳಲ್ಲಿ ಸರಕಾರವು ಸಿ.ಪಿ.ಐ(ಎಂ) ಮತ್ತು ಇತರ ಪ್ರತಿ ಪಕ್ಷಗಳ ಕಾರ್ಯಕರ್ತರನ್ನು ಬಂಧಿಸಿದೆ. ನನಗೆ ಬಂದ ಕೆಲವು ವರದಿಗಳ ಕಳವಳಕಾರಿಯಾಗಿವೆ. ಉದಾಹರಣೆಗಾಗಿ, ಕೇರಳದ ಕೆಲವು ಕಡೆಗಳಲ್ಲಿ ನಾನೂ ಮೊದಲೇ ಹೇಳಿದಂತೆ ಪೋಲೀಸರು ರಾಜಕೀಯ ಕೈದಿಗಳನ್ನು ಬೆತ್ತಲೆಗೊಳಿಸಿ ಅವರ ಮೇಲೆ ಹಿಂಸಾಕೃತ್ಯಗಳನ್ನು ಎಸಗಿದ್ದಾರೆ. ಇಂಧೂರಿನಲ್ಲಿ ಸಿ.ಪಿ.ಐ(ಎಂ) ಮತ್ತು ಸಿ.ಐ.ಟಿ.ಯು ಕಛೇರಿಗಳ ಮೇಲೆ ದಾಳಿಮಾಡಿ ಅವುಗಳಿಗೆ ಬೀಗ ಮುದ್ರೆ ಹಾಕಿದ್ದಾರೆ. ಇದೇ ರೀತಿಯಲ್ಲಿ ವರದಿಗಳು ಕಾನ್ಪುರದಿಂದ ಬಂದಿವೆ. ಹಲವು ಕಡೆಗಳಲ್ಲಿ ಜನರು ಭಯ ಪಡುವಂತಹ ವಾತಾವರಣವನ್ನು ನಿರ್ಮಿಸಲಾಗಿದೆ. ಅಲ್ಲಿ ಪೋಲೀಸ್, ಸಿ.ಆರ್.ಪಿ,ಎಫ್ ಮತ್ತು ಇತರ ಬಲ ಪ್ರಯೋಗದ ಸಾಧನೆಗಳಿಗೆ, ಜನರ ಮೇಲೆ ಕ್ರೂರವಾಗಿ ನಡೆಸುವ ಅಧಿಕಾರ ಕೊಡಲಾಗಿದೆ. ಇದರಿಂದಾಗಿ ನಾಗರಿಕ ವರ್ತನೆಯ ನಿಯಮಗಳ ಜಾಗದಲ್ಲಿ ಅದೇ ಫ್ಯಾಸಿಸ್ಟ್ ಮತ್ತು ಸರ್ವಾಧಿಕಾರ ಆಡಳಿತವು ಅಸ್ತಿತ್ವಕ್ಕೆ ಬಂದಿದೆ. ಜನರಲ್ಲಿ ಭಯವನ್ನು ಹುಟ್ಟಿಸುವ ಮತ್ತು ಪೋಲೀಸರನ್ನು ಜನರ ಮೇಲೆ ಛೂ ಬಿಡುವ ಈ ಪ್ರಯತ್ನಗಳನ್ನು ನಾನು ಬಲವಾಗಿ ಖಂಡಿಸುತ್ತೇನೆ.

ಕೈಗಾರಿಕೋದ್ಯಮಿಗಳ ಉತ್ಪಾದನೆ ಹೆಚ್ಚಿಸುವ ನೆಪದಲ್ಲಿ ಕಾರ್ಮಿಕರ ಮೇಲೆ ಹೆಚ್ಚಿನ ಶ್ರಮ ಭಾರವನ್ನು ಹೇರುತ್ತಾರೆ. ಕಾರ್ಮಿಕರನ್ನು ಕೆಲಸದಿಂದ ವಜಾಮಾಡುತ್ತಾರೆ. ಇದರ ವಿರುದ್ದವಾದ ಯಾವುದೇ ಪ್ರತಿಭಟನೆಯನ್ನಾದರೂ ದಮನಿಸಲಾಗುತ್ತದೆ. ವೇತನ ಕಡಿತ ಮತ್ತು ತುಟ್ಟಿ ಭತ್ಯೆ ಕಡಿತಗಳನ್ನು ಮಾಡಲಾಗಿದೆ. ಇದರ ವಿರುದ್ಧದ ಯಾವುದೇ ಪ್ರತಿಭಟನೆಯನ್ನಾದರೂ ಸದೆಬಡಿಯಲಾಗುವುದು. ಕೆಲಸದ ಪರಿಸ್ಥಿತಿಗಳು ಕೆಡುತ್ತವೆ. ಪ್ರತಿಭಟಿಸಿದರೆ ಕೂಡಲೇ ಕಾರ್ಮಿಕರನ್ನು ವಜಾಮಾಡಲಾಗುತ್ತದೆ. ಈ ಶೋಷಣೆಯ ವಿರುದ್ಧ ಯಾವ ಚಳವಳಿಯನ್ನು ನಡೆಸಲು ಬಿಡಬಾರದು. ಗ್ರಾಮಾಂತರ ಪ್ರದೇಶಗಳಲ್ಲೂ, ಕೂಲಿ ಹೆಚ್ಚಳಕ್ಕಾಗಿ ಕೃಷಿಕಾರ್ಮಿಕರ ನಡೆಸುವ ಹೋರಾಟ, ಒಕ್ಕಲೆಬ್ಬಿಸುವುದರ ವಿರುದ್ದ ಒಕ್ಕಲುಗಳು ನಡೆಸುವ ಹೋರಾಟ ಇವೆಲ್ಲವೂ ಇದೇ ರೀತಿಯಲ್ಲಿ ಅನುಭವಿಸಬೇಕಾಗುವುದು. ಆದುದರಿಂದಲೇ ಈ ಕಾರ್ಯಕ್ರಮಗಳು ಎಲ್ಲಾ ವಿಭಾಗಗಳ ಜನರ ವಿರುದ್ದ ಬಂಡವಾಳಷಾಹಿಗಳ ಮತ್ತು ಭೂಮಾಲಿಕರ ಸರ್ವಾಧಿಕಾರವಲ್ಲದೆ ಬೇರೆ ಏನೂ ಅಲ್ಲ. ಸ್ಥಾಪಿತ ಹಿತಾಸಕ್ತಿಗಳು 'ಚೇಂಬರ್ಸ್ ಆಫ್ ಕಾಮರ್ಸ್'ನ ಮತ್ತು ದೊಡ್ಡ ವ್ಯಾಪಾರಿಗಳ ಸಂಘಗಳು ಈ ಕ್ರಮಗಳಿಗೆ ಹೃತ್ಪೂರ್ವಕ ಬೆಂಬಲ ನೀಡಿದುದರಲ್ಲಿ ಆಶ್ಚರ್ಯವೇನಿಲ್ಲ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಬಿರ್ಲಾ ನಂತರ ದೊಡ್ಡ ಕೈಗಾರಿಕೋದ್ಯಮಿಗಳು ಪ್ರದರ್ಶನ ನಡೆಸಿ ಶ್ರೀಮತಿ

ಇಂದಿರಾ ಗಾಂಧಿಗೆ ಬೆಂಬಲ ಸಾರಿದುದರಲ್ಲಿ ಆಶ್ಚರ್ಯವೇನಿಲ್ಲ. ಸರಕಾರವು ಬಲಪ್ರತಿಗಾಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದೆಯೆಂದು ಹೇಳುತ್ತಿರುವಾಗಲೇ ನಮ್ಮ ಪಾರ್ಟಿಯ ೩೦೦೦ಕ್ಕೂ ಹೆಚ್ಚು ಇದು ಈ ತಿಂಗಳ ೧೫ನೇ ತಾರೀಕಿನವರೆಗೆ ಸಂಖ್ಯೆ ಮುಂದಾಳುಗಳನ್ನು, ಕಾರ್ಯಕರ್ತರನ್ನು ಬಂಧಿಸಿ, ಹೊಡೆದು, ಕೊಲ್ಲಲಾಗಿದೆ ಇಲ್ಲವೇ ಜೈಲಿಗೆ ಹಾಕಲಾಗಿದೆ.

ನಮ್ಮ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರ ಕಾಮ್ರೆಡ್ ಎಂ.ಬಸವ ಪೊನ್ನಯ್ಯ, ನಮ್ಮ ಕೇಂದ್ರ ಸಮಿತಿ ಸದಸ್ಯರಾದ ಕಾ.ಮೋಹನ್ ಪೂನಾಮಿಯಾ, ಲೋಕಸಭಾ ಸದಸ್ಯರಾದ ಕಾ.ಜ್ಯೋತಿಬಸು ಮತ್ತು ಕಾಮ್ರೇಡ್ ನೂರುಲ್ ಹುಡಾ ಇವರನ್ನು ಬಂಧಿಸಲಾಗಿದೆ. ಸ್ಥಾಪಿತ ಹಿತಾಸಕ್ತಿಗಳ ವಿರುದ್ಧವಾಗಿಯೂ ಪ್ರಜಾಪ್ರಭುತ್ವದ ರಕ್ಷಣೆಗಾಗಿಯೂ ಹೋರಾಡಲು ಧೈರ್ಯತಳೆದ ಪ್ರತಿಯೊಬ್ಬನ ಮೇಲೂ ಬಂಧನದ ಬೆದರಿಕೆಯಾಗಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳ ನೌಕರರ ಮುಖಂಡನ ಹಾಗೂ ವಿವಿಧ ಕಾರ್ಮಿಕ ಸಂಘಗಳ ಮುಖಂಡರ ಬಂಧನಗಳು ನಡೆಯುತ್ತಲೇ ಇವೆ. ಟ್ರೇಡ್ ಯೂನಿಯನ್ ಉದ್ದೇಶ ಜನಸಾಮಾನ್ಯರನ್ನು ಶೋಷಣೆಮಾಡಿ ಗುತ್ತೇದಾರಿಗಳೂ, ಭೂಮಾಲೀಕರು ಕೊಬ್ಬು ಬೆಳೆಸಲು ಸಹಾಯ ಮಾಡುತ್ತಾ ಬಂದ ಕಳೆದ ೨೭ ವರ್ಷಗಳ ಜನವಿರೋಧಿ ನೀತಿಗಳ ಅನಿವಾರ್ಯ ಫಲಶ್ರುತಿಯೇ ಈ ಪರಿಸ್ಥಿತಿ. ಸಮಾಜವಾದ, ಗರಿ ಬಿ ಹಠಾವೋ ಇತ್ಯಾದಿ ಘೋಷಣೆಗಳ ಈ ಅವಧಿಯಲ್ಲಿ ಬೆಳೆದವರು ಯಾರು? ಗುತ್ತೇದಾರಿ ಸಂಸ್ಥೆಗಳು ಬೆಳೆದು ಕೊಬ್ಬಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಾಲೀಕರು ಶ್ರೀಮಂತರು ಪ್ರಬಲರು ಆಗಿದ್ದಾರೆ. ಲಾಡಚೆನ್‌ಸ್ಕಿ ಮೊದಲಾದವರ ವಿಚಾರಗಳಿಗೂ ಸರ್ಕಾರಿ ವರದಿಗೂ ಒಪ್ಪಿಕೊಂಡಂತೆ ಬೃಹತ್ ಪ್ರಮಾಣದಲ್ಲಿ ಜನರನ್ನು ಒಕ್ಕಲೆಬ್ಬಿಸಲಾಗಿದೆ. ಅನುಕ್ರಮವಾಗಿ ಜನಗಣತಿಯ ಪ್ರಕಾರ ಅಂಕಿಸಂಖ್ಯೆಗಳು ಎತ್ತಿ ತೋರಿಸಿದಂತೆ ಭೂರಹಿತ ಕಾರ್ಮಿಕರ ಸಂಖ್ಯೆ ವಿಪರೀತವಾಗಿ ಬೆಳೆಯುತ್ತದೆ. ಕರಕುಶಲಗಾರರೂ, ಕೈಮಗ್ಗ ಮತ್ತು ಯಾಂತ್ರೀಕೃತ ಮಗ್ಗಗಳ ಕಾರ್ಮಿಕರೂ, ತೆಂಗಿನ ನಾರಿನ ಕೆಲಸಕಾರರೂ, ಸಣ್ಣಮಟ್ಟದ ಕೈಗಾರಿಕೋದ್ಯಮಗಳೂ ಅವನತಿಯ ಹೊಸ್ತಿಲಲ್ಲಿದ್ದಾರೆ. ಬೆಲೆಗಳು ಗಗನಕ್ಕೇರಿವೆ. ಹಳ್ಳಿಯ ಜನರ ಪರಿಸ್ಥಿತಿ ಸುದಾರಿಸಿದೆಯೆಂದು ಪ್ರಧಾನಮಂತ್ರಿಯವರು ಹೇಳಬಹುದು. ಆದರೆ ಆಕೆಯ ಸರಕಾರದ್ದೇ ಅಧಿಕೃತ ಅಂಕಿ-ಸಂಖ್ಯೆಗಳ ಪ್ರಕಾರ ಬಡತನದ ರೇಖೆಯ ಕೆಳಮಟ್ಟದಲ್ಲಿರುವ ಸಂಖ್ಯೆ ಒಟ್ಟು ಜನಸಂಖ್ಯೆ ೫೦ ಶೇಕಡಾದಿಂದ ೭೦ ಶೇಕಡಕ್ಕೆ ಏರಿದೆ. ೧೯೬೬ರಲ್ಲಿ ಶ್ರೀಮತಿ ಗಾಂಧಿ ಅಧಿಕಾರ ವಹಿಸಿಕೊಂಡಾಗ ದೇಶದಲ್ಲಿ ದಾಖಲೆ ಆಗಿದ್ದ ನಿರುದ್ಯೋಗಿಗಳ ಸಂಖ್ಯೆ ೨೬.೩ ಲಕ್ಷ ಒಂದು ದಶಕಕ್ಕಿಂತಲೂ ಕಡಿಮೆಯ ಅವಧಿಯಲ್ಲಿ ಈ ಸಂಖ್ಯೆ ೮೧.೫ ಲಕ್ಷಕ್ಕೇರಿತು. ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಜನತೆಯ ಪರಿಸ್ಥಿತಿಯನ್ನು ಸರಿಪಡಿಸುವ, ಅವರ ಬದುಕು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ನಡೆಸುವ ಹೋರಾಟದಲ್ಲಿ ನಮ್ಮ ಪಾರ್ಟಿಯ ಮುಂಚೂಣಿಯಲ್ಲಿದೆ. ಇದಕ್ಕಾಗಿ ವರ್ಷಗಟ್ಟಲೆಯಿಂದ ನಾವು ನಿರಂತರ ದಬ್ಬಾಳಿಕೆಗೆ ಒಳಗಾಗಿದ್ದೇವೆ. ೧೯೭೧ರ ಈಚೆಗೆ ಪಶ್ಚಿಮ ಬಂಗಾಳದಲ್ಲಿ ಅರೆಫ್ಯಾಸಿಸ್ಟ್ ದಬ್ಬಾಳಿಕೆ ನಡೆಯುತ್ತಿದೆ. ಸಾವಿರಾರು ಜನರು ಜೈಲಿನಲ್ಲಿ ಹಾಕಿದ್ದಾರೆ. ರಾಜಕೀಯ ಕೊಲೆಗಳನ್ನು ವ್ಯವಸ್ಥೆ ಮಾಡುವುದು

ರಾಜಕೀಯ ಪಕ್ಷಗಳ ಮತ್ತು ಕಾರ್ಮಿಕ ಸಂಘಗಳ ಕಚೇರಿಗಳ ಮೇಲೂ, ರಾಜಕೀಯ ಪಕ್ಷಗಳ ಮನೆಗಳ ಮೇಲೂ ಗುಂಡಿನದಾಳಿ ನಡೆಸುವುದು, ಲಾಕಪ್ಪಿನಲ್ಲೂ, ಜೈಲಿನಲ್ಲೂ ಹೊಡೆತ ಮತ್ತು ಕೊಲೆಗಳು, ಎಡ ರಾಜಕೀಯ ಪಕ್ಷಗಳ ಪ್ರಭಾವವಿರುವ ಪ್ರದೇಶಗಳಿಂದ ಸಾವಿರಗಟ್ಟಲೆ ಜನರನ್ನು ಬಲವಂತವಾಗಿ ಮನೆಬಿಡಿಸಿ ಓಡಿಸುವುದು, ಚಿತ್ರಹಿಂಸೆ, ಮಹಿಳೆಯರ ಮೇಲೆ ಅತ್ಯಾಚಾರ, ಈ ಎಲ್ಲಾ ಕ್ರೂರ ಕೃತ್ಯಗಳನ್ನು ರಾಜ್ಯದ ಕಾಂಗ್ರೆಸ್ ಸರಕಾರವು ಸಮ್ಮತಿ ಮತ್ತು ಮಾರ್ಗದರ್ಶನದೊಂದಿಗೆ ನಡೆಸುತ್ತದೆ.

೧೯೭೭ರ ಚುನಾವಣೆಯಲ್ಲಿ ಖಂಡಿತ ಸೋಲಾಗುವುದೆಂದು ತಿಳಿದು ಬಂದಾಗ ಪ್ರಧಾನಮಂತ್ರಿಯ ನೇತೃತ್ವದಲ್ಲಿ ಆಕೆಯ ಪಾರ್ಟಿಯ ಸರ್ಕಾರಿ ಯಂತ್ರವನ್ನು ಭಯೋತ್ಪಾದಕ ವಿಧಾನಗಳನ್ನು ಉಪಯೋಗಿಸಿ ಚುನಾವಣೆಗಳಲ್ಲಿ ಅಕ್ರಮಗಳನ್ನು (rigging) ವ್ಯಾಪಕವಾಗಿ ನಡೆಸಿತು. ಚುನಾಯಿತ ಸರಕಾರವನ್ನು ತೆಗೆದುಹಾಕ ಕೂಡದೆಂದು ಇಲ್ಲಿ ಶ್ರೀ ಜಗಜೀವನರಾಮ್ ಅವರು ಹೇಳಿದರು. ೧೯೫೯ರಲ್ಲಿ ಕೇರಳದಲ್ಲಿ ಚುನಾಯಿತ ಸರಕಾರವಿದ್ದಾಗ ಏನಾಯಿತೆಂದು ನಾನು ಪ್ರಧಾನಮಂತ್ರಿಯವರನ್ನು ಕೇಳಬಯಸುತ್ತೇನೆ. ಕಾಂಗ್ರೆಸ್ ಅಧ್ಯಕ್ಷತೆ ಎಂಬ ನೆಲೆಯಲ್ಲಿ ಸ್ವತಃ ಆಕೆಯೇ ವಿಮೋಚನಾಸಮರವನ್ನು ಸಂಘಟಿಸಿದರು. ಆಕೆಯೇ ಹೋರಾಟದ ನಾಯಕತ್ವ ವಹಿಸಿದರು; ಆಕೆಯೇ 'ವಿಮೋಚನೆ' ಮಾಡಿದರು. ಈಗ ಆಕೆ ಹೇಳುತ್ತಿದ್ದಾರೆ, 'ಕೇರಳ ಸರಕಾರವನ್ನು ಮುಟ್ಟಬಾರದು'. ೧೯೫೯ರಲ್ಲಿ ವಿಮೋಚನ ಸಮರ ನಡೆಯಬಹುದಾಗಿದ್ದರೆ ಈಗ ಯಾಕೆ ವಿಮೋಚನೆ ಇರಬಾರದೆಂದು ನನಗೆ ಅರ್ಥವಾಗುವುದಿಲ್ಲ. ಅರೆಫ್ಯಾಸಿಸ್ಟ್ ದಬ್ಬಾಳಿಕೆ ಮತ್ತು ಚುನಾವಣಾ ಮೋಸಕ್ಕೆ ತುತ್ತಾದವರು ಬಲಪ್ರತಿಗಾಮಿಗಳಲ್ಲ. ಕಾರ್ಮಿಕರು, ರೈತರು, ನೌಕರರು, ಅಧ್ಯಾಪಕರು, ವಿದ್ಯಾರ್ಥಿಗಳು, ನಿರಾಶ್ರಿತರು, ಮಹಿಳೆಯರು ಮತ್ತು ಬಡಜನರನ್ನು ಪ್ರತಿನಿಧಿಸುತ್ತಿರುವ ಎಡಪ್ರಜಾಪ್ರಭುತ್ವವಾದಿಗಳು ಈ ದಾಳಿಗೆ ತುತ್ತಾಗಿವೆ. ಪಶ್ಚಿಮ ಬಂಗಾಳದಲ್ಲಿ ಬಲಪ್ರತಿಗಾಮಿಗಳ ಶಕ್ತಿಯು ಗೌಣವೆಂದು ಅಲ್ಲಿನ ಮುಖ್ಯಮಂತ್ರಿಯವರು ಈಗ ಹೇಳುತ್ತಿದ್ದರು. ಅಲ್ಲಿನ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲಿನ ಅರೆಫ್ಯಾಸಿಸ್ಟ್ ದಬ್ಬಾಳಿಕೆಯು ನಡೆಯುತ್ತಲೇ ಇದೆ. ಆಳುವ ಪಕ್ಷ ಮತ್ತು ಸರಕಾರವು ದೇಶದ ಒಳಗೂ–ಹೊರಗೂ ವ್ಯವಸ್ಥಿತ ಪ್ರಚಾರಮಾಡುವ ಮೂಲಕ ಈ ಕಟುಸತ್ಯವನ್ನು ಮರೆಮಾಚುತ್ತಿವೆ. ಈಗ ಇದನ್ನೇ ಕೇರಳದಲ್ಲೂ ನಡೆಸಲು ಪ್ರಯತ್ನಿಸಲಾಗುತ್ತಿದೆ. ೧೯೫೯ರಲ್ಲಿ ಏನಾಗಿತ್ತೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ದಾಳಿಗಳನ್ನು ಎದುರಿಸಿಯೂ ನಮ್ಮ ಚಳವಳಿಗಳು ಈ ಎರಡು ರಾಜ್ಯಗಳಲ್ಲಿ ಹಬ್ಬಿವೆ. ಆಳುವವರು ಜನರನ್ನು ಹೆಚ್ಚುಕಾಲ ಮೋಸಮಾಡಲು ಸಾಧ್ಯವಾಗಲಾರದು. 'ಬಡತನ ತೊಲಗಿಸಿ' ಮತ್ತು 'ನಿರುದ್ಯೋಗ ತೊಲಗಿಸಿ' ಎಂಬ ಮಾತುಗಳು ಲೋಕದ ಘೋಷಣೆಗಳೆಂದು ತಿಳಿದ ಜನರು ಹೋರಾಟಕ್ಕೆ ಆಣೆಯಾಗಿದ್ದಾರೆ.

ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಚಳುವಳಿಯು ಬೆಳೆದು ಬಂದದ್ದು ಇದೇ ಹಿನ್ನೆಲೆಯಲ್ಲಿ ಶ್ರೀ ನಾರಾಯಣರೊಂದಿಗೆ ನಮಗಿರುವ ಬಿನ್ನಾಭಿಪ್ರಾಯವನ್ನು ನಮ್ಮ ಪಾರ್ಟಿಯ ಸ್ಪಷ್ಟವಾಗಿ ಹೇಳಿದೆ. ಅದೇ ವೇಳೆಗೆ ಅವರು ಮುಂದಿಟ್ಟಿರುವ ಪ್ರಜಾಪ್ರಭುತ್ವದ ಹಕ್ಕುಗಳನ್ನು ಬೇಡಿಕೆಗೆ ನಾವು

ಬೆಂಬಲವನ್ನು ಕೊಟ್ಟಿದ್ದೇವೆ. ಆ ಚಳವಳಿಯೊಂದಿಗಿನ ನಮ್ಮ ಭಿನ್ನಭಿಪ್ರಾಯಗಳು ಏನೇ ಇದ್ದರೂ ಸತ್ಯಾಗ್ರಹ, ಮುಷ್ಕರ ಮತ್ತು ಬಂದ್ ಇತ್ಯಾದಿಗಳನ್ನು ಸಂಘಟಿಸುವ ಹಕ್ಕುಗಳನ್ನು ನಾವು ಬೆಂಬಲಿಸಿದ್ದೇವೆ. ಇನ್ನು ಮುಂದೆಯೂ ಬೆಂಬಲಿಸುತ್ತೇವೆ. ಯಾಕೆಂದರೆ ಈ ಹಕ್ಕುಗಳು ಜನತೆಯ ಕೈಯಲ್ಲಿರುವ ನ್ಯಾಯಸಮ್ಮತವಾದ ಆಯುಧಗಳಾಗಿವೆ. ಚುನಾವಣೆಗಳನ್ನು ಎದುರಿಸುವಂತೆ ಶ್ರೀಮತಿ ಗಾಂಧಿಯವರು ಒಡ್ಡಿದ ಸವಾಲನ್ನು ಜಯಪ್ರಕಾಶ ನಾರಾಯಣರ ನೇತೃತ್ವದ ಚಳವಳಿಯ ಸ್ವೀಕರಿಸಿ ಅದಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿತ್ತು. ಆದರೆ ಗುಜರಾತಿನ ಫಲಿತಾಂಶ ಬಂದನಂತರ ಚಳುವಳಿಗಳಲ್ಲಿ ಆಡಳಿತ ಕಾಂಗ್ರೇಸ್ಸಿನ ಕೆಲವು ವಿಭಾಗಗಳು ಇದ್ದವು. ಎಲ್ಲಾ ರಾಜ್ಯಗಳಲ್ಲೂ ಕುದಿಯುತ್ತಿದ್ದ ಗುಂಪುಗಾರಿಕೆಯ ಹೋರಾಟಗಳು ಕೇಂದ್ರಕ್ಕೆ ವ್ಯಾಪಿಸಿದ್ದವು. ಅಲಹಾಬಾದ್ ಹೈಕೋರ್ಟಿನ ತೀರ್ಪು ಮತ್ತು ಸುಪ್ರೀಂಕೋರ್ಟಿನ ಆಜ್ಞೆಯನಂತರ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲೇ ಶ್ರೀಮತಿ ಇಂದಿರಾ ಗಾಂಧಿಯ ನಾಯಕತ್ವಕ್ಕೆ ಬಲವಾದ ಸವಾಲು ತಲೆದೋರಿದ್ದ ರಹಸ್ಯವೇನಲ್ಲ. ಕಾಂಗ್ರೆಸ್ಸಿನ ಅಧಿಕಾರದ ಗುತ್ತಿಗೆಗೆ ಅಪಾಯವಿದೆಯೆಂದೂ ಪಾರ್ಟಿಯಲ್ಲೂ ಸರಕಾರದಲ್ಲೂ ಶ್ರೀಮತಿ ಗಾಂಧಿಯ ಅಧಿಕಾರ ಸ್ಥಾನಕ್ಕೆ ಅಪಾಯವಿದೆಯೆಂದೂ ಕಂಡುಬಂದದ್ದೇ ಪ್ರಜಾಪ್ರಭುತ್ವದ ಮೇಲಿನ ಈ ಆತ್ಯಾಚಾರಕ್ಕೆ ಕಾರಣ.

ಅವರನ್ನು ನಿರ್ಬಯಾವಾಗಿ ದಮನಿಸುವುದೇ ಇದರ ಅಂತಿಮ ಉದ್ದೇಶ. ಕೇರಳದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂದಕ್ಕೆ ಹಾಕಾಲಾಗಿದೆಯೆಂದು ಇಂದಿನ ಪತ್ರಿಕೆಗಳಲ್ಲಿ ಓದಿದೆ. ಹೀಗೇಕೆ ಮಾಡಲಾಗುತ್ತಿದೆಯೆಂದು ನನಗೆ ತಿಳಿಯುವುದಿಲ್ಲ. ಈಗ ಜನರ ಕಣ್ಣಿಗೆ ಮಣ್ಣೆರಚಲು ಶ್ರೀಮತಿ ಗಾಂಧಿಯವರು ಒಂದು ೨೦ ಅಂಶದ ಕಾರ್ಯಕ್ರಮವನ್ನು ಮುಂದಿಟ್ಟಿದ್ದಾರೆ. ಆದರೆ, ಇದರಲ್ಲಿ ಹೋಸತೇನಿದೆ? ಭೂಮಿತಿಯ ಕಾನೂನುಗಳನ್ನು ಜಾರಿಮಾಡಲು ಇಷ್ಟು ವರ್ಷ ಅಡ್ಡಿ ಮಾಡಿದವರು ಯಾರು? ರಾಜಕೀಯ ಸಂಕಲ್ಪದ ಕೊರತೆ ಮತ್ತು ಭೂಮಾಲೀಕರಿಗೆ ಆಡಳಿತದೊಡನಿರುವ ಅ ಸಂಖ್ಯೆ ಸಂಪರ್ಕಗಳ ಕಾರಣದಿಂದಾಗಿ ಕಾಂಗ್ರೆಸ್ ಸರಕಾರದ ಮತ್ತು ಕಾಂಗ್ರೆಸ್ ಪಕ್ಷವು ಭೂಸುಧಾರಣಾ ಕಾನೂನುಗಳು ಜಾರಿಯಾಗುವಂತೆ ತಡೆಯೊಡ್ಡುವುದರಲ್ಲಿ ಯಶಸ್ವಿಯಾಗಿದೆ ಎಂದು ಯೋಜನಾ ಆಯೋಗದ ಒಂದು ಸಮಿತಿ ಅರ್ಪಿಸಿದ ವರದಿಯು ಸ್ವಷ್ಟ ಪುರಾವೆಗಳನ್ನೊದಗಿಸಿದೆ. ಆಯೋಗವನ್ನು ಸ್ವಷ್ಟಪಡಿಸಿ ಸುಧಾರಿಸಿಕೊಳ್ಳಲು ಹೋರಾಡುತ್ತಿರುವ ಜನಸಾಮಾನ್ಯರೇ ಈ ಕ್ರಮಗಳಿಗೆ ನಿಜವಾಗಿ ಹಾನಿಗೊಳಗಾದರೆಂಬುದನ್ನು ಅವು ತಿಳಿದುಕೊಳ್ಳದಿರುವುದು ದುರದೃಷ್ಟದ ಸಂಗತಿ.

ಸರಕಾರದ ಮೂಲಭೂತ ಧೋರಣೆಗಳಿಂದಾಗಿ ಜನತೆಯ ಮತ್ತು ಸರಕಾರದ ಮಧ್ಯೆ ವೈರುಧ್ಯಗಳು ಹೆಚ್ಚಾಗುತ್ತಿರುವುದನ್ನು ಅವರು ನೋಡುವುದಿಲ್ಲ. ಕಾರ್ಮಿಕ ವರ್ಗದ ಮತ್ತು ದುಡಿಯುವ ಜನತೆಯ ದ್ರೋಹಿಗಳಾದ ಬಲ ಕಮ್ಯುನಿಸ್ಟರು ಮಹಾರಾಣಿಯ ವಿಧೇಯ ಪ್ರತಿಪಕ್ಷವಾಗಿ(Her majesty's loyal opposition) ಮುಂದುವರಿಯುತ್ತಿದ್ದಾರೆ. ಅವರು ಅನುಭವಿಸುತ್ತಿರುವ ಗಂಡಾಂತರದ ವಿರುದ್ಧ ತುರ್ತುಪರಿಸ್ಥಿತಿಯ ರದ್ದತಿಗಾಗಿಯೂ ಅ ಸಂಖ್ಯೆ ಹೋರಾಟಗಳ ಮತ್ತು ತ್ಯಾಗಬಲಿದಾನಗಳ

ಮೂಲಕಗಳಿಸಿದ ಪ್ರಜಾಪ್ರಭುತ್ವದ ಹಕ್ಕುಗಳ ಮರಳಿಕೆಗಾಗಿಯೂ ಪ್ರಧಾನಮಂತ್ರಿ ಪದವಿಯಿಂದ ಶ್ರೀಮತಿ ಇಂದಿರಾಗಾಂಧಿಯ ರಾಜೀನಾಮೆಗಾಗಿಯೂ, ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಗಾಗಿಯೂ ಹೋರಾಟಗಳಿಗೆ ಜನರನ್ನು ಸಂಘಟಿಸುವುದು ಇಂದಿನ ಮುಖ್ಯಕರ್ತವ್ಯವಾಗಿದೆ ಎಂದು ನಮ್ಮ ಪಾರ್ಟಿಯು ಭಾವಿಸುತ್ತದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳೂ, ಸಹೃದಯಿಗಳು ಉತ್ತಮ ಜೀವನಕ್ಕಾಗಿ ಹೋರಾಡುವ ಜನತೆಯ ಹಕ್ಕನ್ನು ಅಂಗೀಕರಿಸುವ ಎಲ್ಲರೂ ಈ ಹೋರಾಟದಲ್ಲಿ ನಮ್ಮೊಂದಿಗೆ ಭಾಗಿಗಳಾಗಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಯಾವ ಬೆಲೆ ತೆರಬೇಕಾಗಿ ಬಂದರೂ ನಮ್ಮ ಪಾರ್ಟಿಯ ಜನರ ಹೋರಾಟಗಳಲ್ಲಿ ಜನರೊಂದಿಗೆ ಇರಬಯಸುತ್ತದೆ. ಯಾಕೆಂದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜನತೆಯ ಹಿತವಲ್ಲದೆ ಬೇಕಾದ ಹಿತವೂ ಇಲ್ಲ. ತುರ್ತುಪರಿಸ್ಥಿತಿ ಮತ್ತು ಅದರ ಮೂಲಕ ತೆಗೆದುಕೊಳ್ಳಲಾದ ವ್ಯಾಪಕ ಕ್ರಮಗಳ ವಿರುದ್ದ ಹೋರಾಟಗಳನ್ನು ಸಂಘಟಿಸಬೇಕು. ಅಂತೆಯೇ ಸಂಘಟಿತ ಶಕ್ತಿಯ ಮೂಲಕ ಶೋಷಕರ ವಿರುದ್ದ ವಿಶಾಲ ತಳಹದಿಯ ಐಕ್ಯ ಹೋರಾಟವನ್ನು ನಡೆಸಬೇಕು. ಇದೇ ಜನತೆಯ ಹಿತರಕ್ಷಣೆಗಾಗಿ ಇಂದು ಮಾಡಬೇಕಾದ ಕರ್ತವ್ಯ. ಆಳುವ ವರ್ಗಗಳಿಗೆ ನಾವು ಎಂದೆಂದೂ ಶರಣಾಗಲಾರೆವು. ದುಡಿಯುವ ಜನರಿಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೂ ನಾವು ಎಂದು ದ್ರೋಹ ಮಾಡಲಾರೆವು. ಚರಿತ್ರೆಯು ನಮ್ಮನ್ನು ಸಮರ್ಥಿಸುವುದು ನಿಮಗೆ ಕೃತಜ್ಞತೆಗಳು.[೧೩] ಎಂದು ಎ.ಕೆ.ಗೋಪಾಲನ್ ಅವರು ಲೋಕಸಭೆ ಕಲಾಪದಲ್ಲಿ ಸುದೀರ್ಘವಾಗಿ ವಿಮರ್ಶೆ ಮಾಡಿದರು. ತುರ್ತುಪರಿಸ್ಥಿತಿಯ ಗುರಿ-ಉದ್ದೇಶ-ಸಂಘ ಸಂಸ್ಥೆಗಳ ಪಾತ್ರ-ರಾಜಕೀಯ ಪಕ್ಷಗಳ ಪಾತ್ರ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುವು ಹಾಗೂ ಬಲಪಂಥೀಯರ ನಿಲುವುಗಳ ಬಗ್ಗೆ ವಿಶ್ಲೇಷಣೆಗೆ ಒಳಪಡಿಸಿ ಇಂದಿರಾಗಾಂಧಿಯ ಸರ್ವಾಧಿಕಾರ ನೀತಿಗಳ ರಹಸ್ಯ ಅಜೆಂಡಾಗಳನ್ನು ನೇರವಾಗಿ ನಿಷ್ಠುರವಾಗಿ ಅಜೆಂಡಾ ಎ.ಕೆ.ಗೋಪಾಲನ್ ಅವರು ಮಂಡಿಸಿದ್ದು ಕಾಣುತ್ತೇವೆ. ಹೀಗೆ ಭಾರತ ತುರ್ತುಪರಿಸ್ಥಿತಿಯು ಭಾರತದಲ್ಲಿ ಚಳವಳಿಗಳು ಇನ್ನಷ್ಟು ಗಟ್ಟಿಗೊಳಿಸಲು ಪ್ರೇರಣೆಯಾಯಿತು. ಏಕೆಂದರೆ ಸಾಮಾನ್ಯ ಜನರ ಶೋಷಣೆ ಹಾಗೂ ಜನಪ್ರತಿನಿಧಿಗಳ ಮೇಲಿನ ದಬ್ಬಾಳಿಕೆ ವಿರುದ್ದ ಮಾರ್ಕ್ಸ್‌ವಾದಿಗಳು, ಸೋಶಿಯಲಿಸ್ಟ್, ಪ್ರಜಾಪ್ರಭುತ್ವವಾದಿಗಳ ಹೋರಾಟಕ್ಕೆ ದುಮುಕಿದ್ದು ಚಾರಿತ್ರಿರ್ಹವಾದದ್ದು.

೩.೫. ಕರ್ನಾಟಕದಲ್ಲಿ ತುರ್ತುಪರಿಸ್ಥಿತಿಯ ಸನ್ನಿವೇಶ

ರಾಜ್ಯ ಸರ್ಕಾರಗಳ ಸಂವಿಧಾನದ ಅನ್ವಯ ಕಾರ್ಯನಿರ್ವಹಿಸಲು ಅಸಮರ್ಥವಾದಾಗ ಕೇಂದ್ರ ಸರ್ಕಾರ ಘೋಷಿಸಲ್ಪಡುವ ತುರ್ತುಪರಿಸ್ಥಿತಿಯು ಸಂವಿಧಾನದ ೨೫೫ನೇ ಪರಿಚ್ಚೇದದ ಪ್ರಕಾರ ಭಾರತದ ಒಕ್ಕೂಟದ ಪ್ರತಿಯೊಂದು ರಾಜ್ಯವನ್ನು ಬಾಹ್ಯದಾಳಿಯಿಂದಾಗಲಿ ಆಂತರಿಕ ಗಲಭೆಯಿಂದಾಗಿ ರಕ್ಷಿಸುವುದು ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ. ಜೊತೆಗೆ ರಾಜ್ಯಸರ್ಕಾರವು ಸಂವಿಧಾನ ಬದ್ದವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಕರ್ತವ್ಯ ಕೇಂದ್ರ ಸರ್ಕಾರದ್ದು. ಈ ಕರ್ತವ್ಯ ನಿರ್ವಹಣೆಗಾಗಿ ಭಾರತದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಸಂವಿಧಾನ ೩೫೬ನೇ ವಿಧಿಯನ್ವಯ ತನ್ನ ಹತೋಟಿಯನ್ನು ಸ್ಥಾಪಿಸಬಹುದಾಗಿದೆ.[೧೪] ಜೊತೆಗೆ ಕೇಂದ್ರ ಸರ್ಕಾರವು

ರಾಜ್ಯಪಾಲರ ವರದಿಯ ಆಧಾರದ ಮೂಲಕ ಹಾಗೂ ಇತರೆ ಕಾರಣಕ್ಕಾಗಿ (otherwise) ರಾಜ್ಯ ಸರ್ಕಾರ ಸಂವಿಧಾನದ ನಿಯಮಗಳ ಮೂಲಕ ಆಡಳಿತ ನಡೆಸದೆ ಇದ್ದಾಗ ೩೫೬ ವಿಧಿಯನ್ವಯ ರಾಷ್ಟ್ರಪತಿ ಅದನ್ನು ವಜಾಮಾಡಿ, ತಮ್ಮ ಆಡಳಿತವನ್ನು ಅಂದರೆ (president's rule) ಅನ್ನು ಘೋಷಿಸಬಹುದು. ಹೀಗೆ ರಾಜ್ಯವನ್ನು ರಾಷ್ಟ್ರಪತಿ ಆಡಳಿತಕ್ಕೆ ಒಳಪಡಿಸಲಾಗುವುದನ್ನು ರಾಜ್ಯ ತುರ್ತುಪರಿಸ್ಥಿತಿ ಅಥವಾ ಸಂವಿಧಾನದ ಕುಸಿತ ಎಂತಲು ಕರೆಯಲಾಗುತ್ತದೆ. ಇದನ್ನು ಕರ್ನಾಟಕದಲ್ಲಿ ಮುಖ್ಯಮಂತ್ರಿ ಅರಸು ಅವರ ಮಾತು ಮತ್ತು ಕೃತಿಗಳಲ್ಲಿ ಅಧಿಕಾರ ಗತ್ತನ್ನು ಪ್ರಚಾರಪಡಿಸಿದರು. ಮೊದಲಬಾರಿಗೆ ಕೆ.ಕೆ.ಮೂರ್ತಿಯವರ ಸ್ಥಾನ ತೆರವುಮಾಡಿ ತಮ್ಮ ಸಹೋದರರಾದ ಕೆಂಪರಾಜ ಅರಸರನ್ನು ಚಲನಚಿತ್ರ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು.

೧೯೭೫ರ ತುರ್ತುಪರಿಸ್ಥಿತಿಯಲ್ಲಿ ಅರಸು ಅವರು ತಮ್ಮ ಆತ್ಮೀಯ ಸ್ನೇಹಿತ ಕೆ.ಕೆ.ಮೂರ್ತಿಯನ್ನು ಜೈಲಿಗೆ ಹಾಕಿದ ನಂತರ ಮೂರ್ತಿಯವರು ಅರಸು ಅವರ ಪರಮಶತ್ರು ಆದರು. ಕೆ.ಕೆ.ಮೂರ್ತಿ ಅವರು ಅರಸು ಅವರ ವಿರೋಧಿಗಳ ಹತ್ತಿರವಾದದ್ದು ಗುಂಡೂರಾವ್. ಅವರ ಜೊತೆಗೆ ಹತ್ತಿರವಾದದ್ದು ಮನಸ್ತಾಪಕ್ಕೆ ಕಾರಣವಾಯಿತು. ಜೊತೆಗೆ ವಿರೋಧ ಪಕ್ಷದ ನಾಯಕರಾದ ಎಚ್.ಡಿ.ದೇವೆಗೌಡರನ್ನು ಜೈಲಿಗೆ ಹಾಕಿದರು. ಬೀದರ್, ಮಂಡ್ಯ ಜಿಲ್ಲೆ ಹಾಗೂ ಇತರೆ ಜಿಲ್ಲೆಗಳಲ್ಲಿಯೂ ಅಧಿಕಾರಿಗಳ ದಬ್ಬಾಳಿಕೆ ನಡೆಸಿದ್ದು ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ತಂದರು. ಜೊತೆಗೆ ನಾಲ್ಕು ಅಧಿಕಾರ ಅವಧಿಗಳಲ್ಲಿ ಅರಸರು ಪತ್ರಕರ್ತರ ಕುರಿತಂತೆ ನಿರ್ಲಕ್ಷ್ಯ ಭಾವನೆ ಹೊಂದಿದ್ದರು. ಅರಸು ಅಳಿಯನಾದ ಎಂ.ಡಿ.ನಟರಾಜ ಅವರ 'ಇಂದಿರಾ ಬ್ರಿಗೇಡ್' ಸ್ವಾತಂತ್ರ್ಯವನ್ನು ಹರಣಮಾಡಿದ ಕಾಂಗ್ರೆಸ್ ಆಡಳಿತಕ್ಕೆ ಪತ್ರಿಕಾ ವರದಿಗಾರರು ವಿರೋಧಿಗಳಾದರು. ಜೊತೆಗೆ ಪ್ರಾಧ್ಯಾಪಕರು, ಸಾಹಿತಿಗಳು, ಚಿಂತಕರು ರಾಜ್ಯದಲ್ಲೂ ಸೇರಲಾರಂಭಿಸಿದರು. ಕೇರಳವು ಕಾಂಗ್ರೆಸ್ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಟದ ಜೊತೆಗೆ 'ಇಂದಿರಾ ಅಂದರೆ ಇಂಡಿಯಾ–ಇಂಡಿಯಾ ಅಂದರೆ ಇಂದಿರಾ' ಎಂಬ ಮನೋಭಾವದಿಂದ ಅಧಿಕಾರ ದುರುಪಯೋಗ ಮಾಡಿಕೊಳ್ಳಲಾಗಿತ್ತು. ಇದರ ವಿರುದ್ಧ ಭಾರತದಾದ್ಯಂತ ಇಪ್ಟಾ ಸಂಘಟನೆ (Indian peoples theatre association) ಇಪ್ಟಾ ಹಾಗೂ ಜನ ನಾಟ್ಯ ಮಂಚ್ (ದೆಹಲಿ) ಮತ್ತು ಪ್ರಜಾ ನಾಟ್ಯ ಮಂಡಳಿ (ಆಂಧ್ರಪ್ರದೇಶ) ಕೇರಳಾ ಆರ್ಟ್ಸ್ ಕ್ಲಬ್, ಹಾಗೆಯೇ ಕರ್ನಾಟಕದಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗಳು ಬೀದಿನಾಟಕಗಳ ಮೂಲಕ ಇಂದಿರಾಗಾಂಧಿಯ ಸರ್ವಾಧಿಕಾರ ಆಡಳಿತ ಹಾಗೂ ತುರ್ತುಪರಿಸ್ಥಿತಿಯ ವಿರುದ್ಧ ವಿರೋಧಿಸಿ ಬೀದಿನಾಟಕಗಳನ್ನು ಕಟ್ಟಲು ಪ್ರಯತ್ನಿಸಿ ಪ್ರಾರಂಭಿಸಿದರು.

ಇದರ ಪ್ರಭಾವದಿಂದ ಕರ್ನಾಟಕದಲ್ಲಿ ೧೯೭೫ರಲ್ಲಿ ತುರ್ತುಪರಿಸ್ಥಿತಿಯ ವಿರೋಧಿಸುತ್ತಿದ್ದ ಕಮ್ಯುನಿಸ್ಟರು, (ಮಾರ್ಕ್ಸ್‌ವಾದಿಗಳು), ಸೋಶಿಯಲಿಸ್ಟರು ಹಾಗೂ ಪ್ರಜಾಪ್ರಭುತ್ವವಾದಿಗಳು ಸೇರಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಪಾರ್ಕಿನ ಮರದ ಕೆಳಗೆ ಮೊದಲ ಭಾರಿಗೆ ಸಭೆ ಸೇರಿ 'ಸಮುದಾಯ' ಒಂದು ಸಾಂಸ್ಕೃತಿಕ ಸಂಘಟನೆ

ಪ್ರಾರಂಭಿಸಿದರು. ಅದರ ಹೆಸರನ್ನು ಸೂಚಿಸಿದವರು ಕರ್ನಾಟಕ ವಿಮರ್ಶಕರಲ್ಲಿ ಪ್ರಮುಖರು ವಿಚಾರವಾದಿ ಕಾಮ್ರೇಡ್ ಕಿ.ರಂ.ನಾಗರಾಜ ಅವರು ಇದರ ಮೊದಲ ಅಧ್ಯಕ್ಷರಾಗಿ ರಂಗಕರ್ಮಿ ಪ್ರಸನ್ನ ಹಾಗೂ ಕಾರ್ಯದರ್ಶಿಯಾಗಿ ರಂಗನಿರ್ದೇಶಕರಾದ ಸಿ.ಜಿ.ಕೃಷ್ಣಸ್ವಾಮಿ ನಂತರ ಸಿ.ವೀರಣ್ಣ, ಡಿ.ಆರ್.ನಾಗರಾಜ, ಸಿದ್ಧಲಿಂಗಯ್ಯ, ಕೆ.ಮರಳಸಿದ್ದಪ್ಪ, ಲಿಂಗದೇವರು ಹಳೇಮನೆ, ಚಂದ್ರಶೇಖರ ಪಾಟೀಲ, ಪಿ.ಎನ್.ನರಸಿಂಹನ್, ಆರ್.ಕೆ.ಹುಡಗಿ ಮಾಸ್ತರು, ಮೋಹನ್ ಕೊಂಡಜ್ಜಿ, ಎಸ್.ಮಾಲತಿ, ಕೆ.ವಿ.ನಾರಾಯಣ, ಟಿ.ಆರ್.ಸೀತಾರಾಮ್, ಆರ್.ನಾಗೇಶ್, ಬರಗೂರು ರಾಮಚಂದ್ರಪ್ಪ, ದೇವನೂರು ಮಹಾದೇವ, ಬಿ.ಕೃಷ್ಣಪ್ಪ, ಶೂದ್ರ ಶ್ರೀನಿವಾಸ್, ಯು.ಆರ್.ಅನಂತಮೂರ್ತಿ ಇವರೆಲ್ಲರ ಬೆಂಬಲದೊಂದಿಗೆ ಆರಂಭವಾದ 'ಸಮುದಾಯ' ಸಂಘಟನೆ ಮೊದಲು ಬೆಂಗಳೂರನ್ನೇ ಕೇಂದ್ರವನ್ನಾಗಿ ಮಾಡಿಕೊಂಡು ಕಾರ್ಯನಿರ್ವಹಿಸಿತು.

೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಂಸ ನಾಟಕಕಾರನ ಸಂಸ್ಕೃತ ನಾಟಕ 'ವಿಗಡ ವಿಕ್ರಮರಾಯ'ನನ್ನು ಕೆ.ವಿ.ನಾರಾಯಣ ಅವರು 'ಸಮುದಾಯ' ಬೆಂಗಳೂರು ತಂಡಕ್ಕೆ 'ಹುತ್ತವ ಬಡಿದರೆ' ಎಂದು ಕನ್ನಡಕ್ಕೆ ಅನುವಾದಿಸಿದರು. ಪ್ರಸನ್ನ ಅವರ ನಿರ್ದೇಶನದಲ್ಲಿ ಈ ನಾಟಕವು ಪ್ರದರ್ಶನವಾಯಿತು. ತುರ್ತುಪರಿಸ್ಥಿತಿಗೆ ಪೂರಕ ಎಂಬಂತೆ ಈ ನಾಟಕವು ಇತ್ತು. ಏಕೆಂದರೆ ರಾಜ–ರಾಜರ ಜಗಳಗಳಲ್ಲಿ ಪ್ರಜೆಗಳು (ಅಂದರೆ) ಸಾಮಾನ್ಯ ಜನರು ಬಲಿಯಾಗುವ ಸನ್ನಿವೇಶ ಇದಾಗಿತ್ತು. ಹಾಗೂ ಪ್ರಧಾನಮಂತ್ರಿಯ ಕುರ್ಚಿಗಾಗಿ ರಾಜಕೀಯ ಪಕ್ಷಗಳ ದೌರ್ಜನ್ಯಗಳನ್ನು ಈ ನಾಟಕವು ಅನಾವರಣ ಗೊಳಿಸಿತ್ತು. ಹಾಗೆಯೇ ಪಾಠ ಒಂದು ಮತ್ತು ಪಾಠ ಎರಡು ಎಂಬ ಎರಡು ಕಿರುನಾಟಕಗಳು ಮೂಡಿಬಂದವು. ನಂತರ ೧೯೭೬ರಲ್ಲಿ ಮಾಕ್ಸಿಂ ಗೋರ್ಕಿಯ 'ಮದರ್' ಕಾದಂಬರಿಯ ಅನುವಾದಿಸಿ ಕನ್ನಡದಲ್ಲಿ 'ತಾಯಿ' ಕಾದಂಬರಿಯನ್ನು ನಾಟಕಕ್ಕೆ ರೂಪಾಂತರಿಸಿ ನಾಟಕ 'ಸಮುದಾಯ' ಸಂಘಟನೆ ಆರಂಭಿಸಿತು. ತಾಯಿಯ ಪಾತ್ರದಲ್ಲಿ ಬಿ.ಜಯಶ್ರೀ ಅವರು ಅರ್ಥಗರ್ಭಿತವಾಗಿ ಅಭಿನಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ ರಷ್ಯಾ ಕ್ರಾಂತಿಯ ಸಂದರ್ಭದ ಒಬ್ಬ ಕ್ರಾಂತಿಕಾರನ ತಾಯಿಯಾಗಿ ಚಳವಳಿಯಲ್ಲಿ ಭಾಗವಹಿಸುವ ಸಾರಾಂಶವನ್ನು ಈ ನಾಟಕ ಹೊಂದಿದ್ದು ಗಮನಾರ್ಹ ಹೋರಾಟಗಾರರಲ್ಲಿ ಹಾಗೂ ಚಳವಳಿಗಾರರಲ್ಲಿ ತುರ್ತುಪರಿಸ್ಥಿತಿಯ ವಿರುದ್ಧವಾಗಿ ಸಿಡಿದೇಳುವ ಅಂಶಗಳು ಈ ನಾಟಕದಿಂದ ಪ್ರೇರಣೆಗೊಂಡವು. ಈ ನಾಟಕವು ತುಮಕೂರು, ಮೈಸೂರು, ಮಂಗಳೂರು, ಶಿವಮೊಗ್ಗ ಹಾಗೂ ಧಾರವಾಡಗಳಲ್ಲಿ ಪ್ರದರ್ಶನಗಳನ್ನು ಕಂಡಿತು. ಇದರಿಂದ ಸಾಮಾನ್ಯ ಜನರಲ್ಲಿ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಟದಲ್ಲಿ ಭಾಗವಹಿಸುವ ಪ್ರೇರಣೆಯನ್ನು ಪಡೆದು – ಎಡ ಪ್ರಜಾಸತ್ತಾತ್ಮಕ ಚಳವಳಿಯಾಗಿ ಸಾಮಾನ್ಯಜನರು ಭಾಗಿಯಾಗಿದ್ದರು. ಐತಿಹಾಸಿಕ ನಾಟಕಗಳಾಗಿ ಪ್ರಚಾರ ಪಡೆದಿದ್ದು ರಂಗಚಳವಳಿಯ ಚರಿತ್ರೆಯಲ್ಲಿ ಬೆಳಕು ಚೆಲ್ಲುತ್ತದೆ. ಜೊತೆಗೆ ತುರ್ತುಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ಸರ್ವಾಧಿಕಾರದ ದಬ್ಬಾಳಿಕೆಯನ್ನು ಕುರಿತು ಹಲವಾರು ಕವಿತೆಗಳು, ಪದ್ಯಗಳು, ನಾಟಕಗಳು ಬಂದಿವೆ.[೧೫] ಅದರಲ್ಲಿ 'ಇಂದಿರಾ ಗಾಂಧಿಯ ಸುಳ್ಳಿನ ಪ್ರಮಾಣ ಪತ್ರ' ನಾಟಕ ಹೆಚ್ಚು ೧೯೭೮ರಲ್ಲಿ ಚಿಕ್ಕಮಗಳೂರು ಲೋಕಸಭಾ

ಉಪಚುನಾವಣೆಯಲ್ಲಿ ಈ ನಾಟಕವನ್ನು ಬಳಸಿಕೊಂಡರು. ಜೊತೆಗೆ ಪದ್ಯಗಳು, ಹಾಡುಗಳು, ಮುಖೇನ ಪ್ರತಿಭಟನೆಗಳು ಪ್ರಾರಂಭವಾದವು. ಅದರಲ್ಲಿಯು ಪ್ರಮುಖವಾಗಿ ಹಾಡು ಈ ಕೆಳಗಿನಂತೆ ಧ್ವನಿಸುತ್ತದೆ.

ತುರ್ತುಪರಿಸ್ಥಿತಿಯ ಕರಾಳ ರಾಣಿಯ ಕತೆಯನ್ನು ಹೇಳ್ತೀವಿ
ಬಡವರ ಸಾವಿರ ಸಂಕಟವನ್ನು ಜೊತೆಯಲಿ ಹೇಳ್ತೀವಿ
ಭಾರತ ದೇಶವ ಜೈಲನು ಮಾಡಿ
ಜನಗಳ ಬಾಯಿಗೆ ಬೀಗವ ಹಾಕಿ
ಮನೆಮನೆಯಲ್ಲೂ ಕೊಲೆಗಳ ಮಾಡಿ
ವಿಷದ ಬೆಳೆಗಳು ಬೆಳೆದೋಳಾ ॥ಪ॥
ತಾನೇ ದೇವರು ದೇಶದ ಎಂದು
ತನ್ನಯ ಮಗನ ಮುಂದಕೆ ತಂದು
ನ್ಯಾಯಕೆ ಮಸಿಯ ಬಳಿದೋಳಾ ॥ಪ॥
ಕಾಲು ಕೈಗಳಿಗೆ ಸರಪಳಿಕಟ್ಟಿ
ನಾಯಿಯ ಬಾಯಿಗೆ ಕೊಟ್ಟೋಳಾ ॥ಪ॥
ಹುಡುಗರು, ಮುದುಕರು, ಮಕ್ಕಳು ಎನಗೆ
ದರದರ ಎಂದು ಎಳೆದು ತಂದು
ನರಗಳ ಕುಯ್ಯಿದ ನಾರೀಮಣಿ ॥ಪ॥
ಬಡವರ ಮೇಲೆ ಭಾಷಣ ಮಾಡಿ
ಇಲ್ಲಸಲ್ಲದ ಸುಳ್ಳುಗಳ ಹೇಳಿ
ಮೋಡಿಯ ಮಾಡಿದ ಕಡುಜಾಣೆ. ॥ಪ॥

ಹೀಗೆ ಚಿಕ್ಕಮಗಳೂರಿನ ಪ್ರತಿ ಹಳ್ಳಿ-ಹಳ್ಳಿಗಳಿಗೆ ತಂಡಗಳನ್ನು ಮಾಡಿಕೊಂಡು, 'ಸಮುದಾಯ'ವು ೪೦-೫೦ ಜನರ ಗುಂಪುಗಳು ಮಾಡಿಕೊಂಡು, ಚುನಾವಣೆಯ ಪ್ರಚಾರವನ್ನು ಭಾಷಣ, ನಾಟಕ, ಹಕ್ಕುಗಳ ಮೂಲಕ ಪ್ರಚಾರವನ್ನು ಕೈಗೊಂಡಿತು. ಹೀಗೆ ತುರ್ತುಪರಿಸ್ಥಿತಿಯಲ್ಲಿ ಸಿಲುಕಿದ ಜನರ ನೋವುಗಳ ಬಗ್ಗೆ ವಿಸ್ತಾರವಾಗಿ ಈ ಮೇಲಿನ ಚಾರಿತ್ರಿಕ ಅಂಶಗಳು ಹಾಗೂ ಘಟನೆಗಳನ್ನು ನೋಡಿದಾಗ ಕರಾಳ ಛಾಯೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

೩.೬. ಎಪ್ಪತ್ತರ ದಶಕದ ಜಾತಿ ನಿರ್ಮೂಲನ ಚಳವಳಿಗಳು

ಎಪ್ಪತ್ತರ ದಶಕದ ಆರಂಭವು ರಾಜಕಾರಣದ ಚರಿತ್ರೆಯಲ್ಲಿ ಹಲವಾರು ಮೈಲಿಗಳನ್ನು ಸ್ಥಾಪಿಸಿದ ದಶಕ ಎಂದರೆ ತಪ್ಪಾಗಲಾರದು. ಏಕೆಂದರೆ ಎಪ್ಪತ್ತರ ದಶಕದ ರಾಜಕಾರಣದಲ್ಲಿ ಹಲವಾರು ಬದಲಾವಣೆಗಳಾದವು. ಏಕೆಂದರೆ ಚಳವಳಿಗಳ ದಶಕ ಅಥವಾ ಹೊಸ, ವಿವಿಧ

ಸಂಘಟನೆಗಳು ಸ್ಥಾಪಿತವಾದ ವರ್ಷ, ಶೂದ್ರರು ಹಾಗೂ ದಲಿತರಲ್ಲಿ ರಾಜಕಾರಣ ಪ್ರಜ್ಞೆ ಹಾಗೂ ಸಂಘಟಿತರಾದ ಚಳವಳಿಗಳನ್ನ ಕಟ್ಟಿದ ದಶಕ ಎಂದು ಗುರುತಿಸುತ್ತೇವೆ. ಮನುಷ್ಯರ ಹುಟ್ಟು ಪ್ರಾಕೃತಿಕವಾಗಿ ನೈಜ ಸ್ವರೂಪವಾಗಿದೆ. ಹುಟ್ಟಿನಿಂದ ಯಾರು ಕೀಳಲ್ಲ. ಮೇಲೂ ಅಲ್ಲ. ಎಲ್ಲರೂ ಸಮಾನರು. ಆದರೆ ಭಾರತದ ಮನುಸ್ಮೃತಿಯ ನೀತಿ–ನಿಯಮಗಳಿಂದ ವರ್ಣಾಶ್ರಮ ಪದ್ಧತಿಯು ಜಾರಿಗೆ ಬಂದು ಬ್ರಾಹ್ಮಣಶಾಹಿತ್ವ ಹಾಗೂ ಇದರ ಆಶ್ರಯದಲ್ಲಿ ರಾಜಭಾರ ಮಾಡುತ್ತಿರುವ ರಾಜವಂಶಗಳು ವರ್ಣಾಶ್ರಮ ಪದ್ಧತಿಯು ದೇವರು ಮಾಡಿದ್ದು, ಅದು ಕರ್ಮದ ಪ್ರತಿಫಲವಾಗಿ ಕೆಲಸಗಾರರ ಮೇಲೆ ಕಠಿಣವಾಗಿ ಜಾರಿಗೆ ತಂದರು. ಅದು ಉಪಜಾತಿಗಳ ಆಧಾರಿತವಾಗಿ ೪.೬೦೦ಕ್ಕೂ ಹೆಚ್ಚು ಜಾತಿ (ಕುಲ)ಗಳ ಜಾತಿವ್ಯವಸ್ಥೆಯನ್ನು ಪ್ರಾಚೀನ ಭಾರತದಿಂದಲೇ ಅಸ್ಪೃಶ್ಯತೆ ಮೂಲಕ ಶೋಷಣೆಯನ್ನು, ಹಿಂದುಳಿದ ಹಾಗೂ ದಲಿತರನ್ನು ನಿರಂತರವಾಗಿ ಶೋಷಿಸುತ್ತಾ ಬಂದ, ದಲಿತರು ಶಿಕ್ಷಣವನ್ನು ಧರ್ಮದ ವಿರುದ್ಧ ಕಲಿತರೆ ಅವರ ನಾಲಿಗೆಯನ್ನು ಕತ್ತರಿಸುವುದರ ವಿರುದ್ಧ ಪ್ರತಿಭಟನೆಗಳು ಆರಂಭವಾದವು.

ಕದ್ದು ಪಾಠ ಕೇಳಿದರೆ ಕಾದ ಸೀಸವನ್ನು ಕಿವಿಯಲ್ಲಿ ಹಾಕುತ್ತಿದ್ದರು ಹಾಗೂ ದೇವಾಲಯ, ಮೇಲ್ವರ್ಗದ ರಸ್ತೆಗಳು ಹಾಗೂ ಊರಹೊರಕ್ಕೆ ಅದು ಭೌಗೋಳಿಕವಾಗಿ ದಕ್ಷಿಣ ಕಡೆಗೆ ಮಾತ್ರ ದಲಿತರು ವಾಸಮಾಡುವ ಪದ್ದತಿ ಇತ್ತು. ಏಕೆಂದರೆ ಉತ್ತರಾಭಿಮುಖವಾಗಿ ಬೀಸುವ ಗಾಳಿಯು ಮೊದಲು ಬ್ರಾಹ್ಮಣ ಹಾಗೂ ಇತರೆ ಕ್ಷತ್ರೀಯ – ವೈಶ್ಯರ ಮನೆಗಳಿಂದ ಬೀಸಿದರೆ ಕೊನೆಗೆ ಶೂದ್ರ – ದಲಿತರಿಗೆ ಗಾಳಿ ಹೋಗಬೇಕು ಎಂಬ ಅತ್ಯಂತ ಅಮಾನವೀಯವಾದ ಅಸ್ಪೃಶ್ಯತೆಯನ್ನು ೨.೫೦೦ ವರ್ಷಗಳ ಕಾಲ ಶೂದ್ರ–ದಲಿತರು ಅನುಭವಿಸುತ್ತಾ ಬಂದಿದ್ದಾರೆ. ದೇವಾಲಯಕ್ಕೆ ಶೂದ್ರ–ದಲಿತರು ನಿಷೇಧ ಹಾಗೂ ಕೆರೆ–ಬಾವಿಗಳಿಗೆ ಕುಡಿಯಲು, ದನಗಳಿಗೆ ನೀರು ನಿಷೇಧವನ್ನು ಜಾತಿ ಪದ್ದತಿಯ ಮೂಲಕ ಕರಾಳತೆಯನ್ನು ಕಾಣುತ್ತೇವೆ.[೬] ಜೊತೆಗೆ ಸತ್ತ ದನಗಳನ್ನು ಊಳುವ ಹಾಗೂ ಸಮಾಜದಲ್ಲಿ ಮಲಹೋರುವ–ಜೀತಮಾಡುವ–ದೇವದಾಸಿ ಇತರ ಶೋಷಣೆಯ ಕಾಯಕಗಳಲ್ಲಿ ಶೂದ್ರರು–ದಲಿತರು ಕೆಲಸ ಮಾಡುತ್ತಿದ್ದರು. ವೈಶ್ಯರು–ವ್ಯಾಪಾರದಲ್ಲಿ, ಕ್ಷತ್ರಿಯರು–ರಾಜ್ಯರಕ್ಷಣೆಯಲ್ಲಿ, ಬ್ರಾಹ್ಮಣರು–ಶಿಕ್ಷಣ–ಗುರುಕುಲ–ಯಜ್ಞಯಾಗಾದಿಗಳು–ಮಂತ್ರ ಜ್ಯೋತಿಷ್ಯದಂಥ ಸರಳ ಕೆಲಸಗಳನ್ನು ಮಾಡುತ್ತಿದ್ದರು. ಜೊತೆಗೆ ರಾಜನಿಗೆ ಉಪದೇಶ ನೀಡುವ ಮಂತ್ರಿ ಮಂಡಳಿಗಳು ಕಾಣಬರುತ್ತವೆ. ಈ 'ಚಾತುರ್‌ವರ್ಣ' ಪದ್ಧತಿಯ ವಿರುದ್ಧ ಮೊದಲಬಾರಿಗೆ ಧ್ವನಿ ಎತ್ತಿದವರು ಸಮಾಜ ಸುಧಾರಕ ಬುದ್ಧ, ಚಾರ್ವಕ, ಲೋಕಯತ, ಬಸವಣ್ಣ ಮುಂದುವರೆದು. ಜ್ಯೋತಿಭಾ ಪುಲೆ ಮತ್ತು ಮೊದಲ ಶಿಕ್ಷಕಿ ಸಾವಿತ್ರಿಭಾ ಪುಲೆ ಎಂದು ಚರಿತ್ರೆಯಲ್ಲಿ ಗುರುತಿಸುತ್ತೇವೆ. ತದನಂತರ ಶಾಹು ಮಹಾರಾಜರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರು, ತಂದೆ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಹಾಗೂ ಬಿ.ಆರ್.ಅಂಬೇಡ್ಕರ್, ಗಾಂಧೀಜಿಯವರು, ಬಾಬು ಜಗಜೀವನ್ ರಾಮ್, ನಾರಾಯಣ ಗುರು, ರಾಮಮನೋಹರ ಲೋಹಿಯಾ, ಪಿ.ಸುಂದರಯ್ಯ ಮುಂತಾದವರು ಜಾತಿ ಪದ್ಧತಿ–ಮೌಢ್ಯತೆ–

ಕಂದಚಾರಗಳು ಹಾಗೂ ಢಾಂಬಿಕತೆಗಳ ವಿರುದ್ಧ ಹೋರಾಟ ಚಳವಳಿಗಳನ್ನು ರಚನಾತ್ಮಕವಾಗಿ ರೂಪಿಸಿ ಕ್ರಿಯೆಯಲ್ಲಿ ತೊಡಗಿದರು. ಇದರಲ್ಲಿ ಲೋಹಿಯಾ ಅವರು ಭಾರತದ ಜಾತಿಪದ್ದತಿಯನ್ನು ಈ ಕೆಳಗಿನಂತೆ ವಿವರಿಸುತ್ತಾರೆ.

> "ಜಾತಿವ್ಯವಸ್ಥೆ ಹಿಂದೆ ಬಹುಜನರಿಗೆ ನೆರಳು ನೀಡಿರಬಹುದು.
> ಅದರಿಂದ ಇಂದು ಕೆಲವರಿಗೆ ಮಂತ್ರಿಸ್ಥಾನ ಗಿಟ್ಟಿರಬಹುದು.
> ಇಂದು ಈ ನೆರಳೇ ಬಹುಪಾಲು ಜನರಿಗೆ ನರಕವಾಗಿ ನಿಂತಿದೆ.
> ಮನುಷ್ಯ ಮನುಷ್ಯರಲ್ಲಿ ವೈಷಮ್ಯ ಭೇದವನ್ನು ಬಿತ್ತಿ ಪರಸ್ಪರದಲ್ಲಿ ಮತ್ಸರ
> ಭಾವನೆಯನ್ನು ಹುಟ್ಟುಹಾಕಿದೆ. ಅದಕ್ಕಾಗಿಯೇ ಈ ವಿಷವೃಕ್ಷವನ್ನು
> ಬುಡಸಹಿತವಾಗಿ ಉರುಳಿಸಿ ಸುಡಬೇಕಾಗಿದೆ".

ಸಮಾನತೆ ಬರಬೇಕಾದರೆ ಜಾತಿ ವ್ಯವಸ್ಥೆ ಹಾಗೂ ಮೇಲು-ಕೀಳೆಂಬ ವರ್ಗವ್ಯವಸ್ಥೆ ಸಂಪೂರ್ಣ ನಾಶವಾದಾಗಲೇ ಅರಳಿ ಬರುವ ಒಂದು ಸಮಾನತೆಯ ವ್ಯವಸ್ಥೆ, ಜಾತಿಪದ್ಧತಿ ಸತ್ತಾಗಲೇ ಸಮಾನತೆ ಸಾಧ್ಯ ಎಂದು ಜಾತಿ ನಿರ್ಮೂಲನಾ ಸಂಘಟನೆಯನ್ನು ೧೯೭೩ರಲ್ಲಿ ಮೈಸೂರಿನ ವಿದ್ಯಾರ್ಥಿಗಳು ಪ್ರಾರಂಭಿಸಿದರು. ಇವರ ಬೆಂಬಲವಾಗಿ ವಿಚಾರವಾದಿಗಳ ವೇದಿಕೆಯು ಇತ್ತು. ಇದರಲ್ಲಿ ಕೆ.ರಾಮದಾಸ್, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ದೇವನೂರು ಮಹಾದೇವ, ಆಲನಹಳ್ಳಿ ಕೃಷ್ಣ, ಸಿದ್ಧಲಿಂಗಯ್ಯ ಮೊದಲಾದವರು ಜಾತಿ ನಿರ್ಮೂಲನಾ ಚಳವಳಿಗಳಲ್ಲಿ ನಿರಂತರವಾಗಿ ತೊಡಗಿದ್ದರು. ಇದರಲ್ಲಿದ್ದವರಲ್ಲಿ ಪ್ರಮುಖವಾಗಿ ಸೋಶೀಯಲಿಸ್ಟರೇ ಹೆಚ್ಚು. ನಂತರ ಬೆಂಬಲವಾಗಿ ಮಾರ್ಕ್ಸ್‌ವಾದಿಗಳು, ದಲಿತ ಸಂಘಟನೆಗಳು ಕೂಡ ಬೆಂಬಲಿಸಿದ್ದವು. ಹಲವಾರು ಹೋರಾಟಗಳನ್ನು ನಡೆಸಲಾಯಿತು.[೧೭] ಜಾತಿ ವಿನಾಶದ ಚಳವಳಿಯಲ್ಲಿ ಅದರಲ್ಲೂ ೧೯೭೪ರ ಆಗಸ್ಟ್ ೨೫-೨೬ರಂದು ಮೈಸೂರಿನಲ್ಲಿ 'ಜಾತಿ ವಿನಾಶ ಸಮ್ಮೇಳನ' ಜರುಗಿತು. ವೈಚಾರಿಕ ಮನಸ್ಸುಗಳಾದ ಪಿ.ಲಂಕೇಶ್, ತೇಜಸ್ವಿ, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಕೆ.ರಾಮದಾಸ್ ಸೇರಿದ್ದರು. ಇದರಲ್ಲಿ ಪ್ರಮುಖವಾಗಿ ಮಲಹೋರುವ ಪದ್ದತಿಯ ವಿರುದ್ಧವಾಗಿ ಈ ಸಮ್ಮೇಳನದಲ್ಲಿ ಹೆಚ್ಚು ಚರ್ಚೆಗಳಾದವು.[೧೮] ಜೊತೆಗೆ ಈ ಕೆಳಗಿನ ಅಂಶಗಳನ್ನು ಈ ಜಾತಿ ವಿನಾಶ ಸಮ್ಮೇಳನದಲ್ಲಿ ಮಂಡಿಸಿದರು.

೧. ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ.

೨. ಯಜ್ಞ-ಯಾಗಾದಿಗಳ ನಡೆಯುವ ಸ್ಥಳಗಳಿಗೆ ವಿರೋಧ ವ್ಯಕ್ತಪಡಿಸುವುದು.

೩. ಮೂಢನಂಬಿಕೆಗಳ ವಿರುದ್ಧ ಜಾಗೃತಿ ಉಂಟುಮಾಡುವುದು.

೪. ಪ್ರೇಮ ವಿವಾಹಕ್ಕೆ ಪ್ರೋತ್ಸಾಹ ನೀಡುವುದು.

೫. ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವುದು.

ಅಲ್ಲದೆ ಜಾತಿ ವಿನಾಶ ಚಳವಳಿಯಲ್ಲಿದ್ದ ಅನೇಕ ಸಾಹಿತಿಗಳ ಹಾಗೂ ಹೋರಾಟಗಾರರು ಅಂತರ್ ಜಾತಿಯ ವಿವಾಹ ಹಾಗೂ ಅಂತರ್‌ಧರ್ಮೀಯ ವಿವಾಹಗಳನ್ನಾದರು. ಜೊತೆಗೆ ಪ್ರೇಮ ವಿವಾಹಗಳು ಹೆಚ್ಚೆಚ್ಚು ಆಗಿದ್ದು ಈ ಎಪ್ಪತ್ತು-ಎಂಬತ್ತರ ದಶಕದಲ್ಲೇ ಎಂದು ಹೇಳಬಹುದು.[೧೯] ಈ ವಿವಾಹಗಳ ತೀವ್ರತೆ ಎಷ್ಟು ಇತ್ತು ಎಂದರೆ ಅಂತರ್ ಜಾತಿಯ ವಿವಾಹವಾದಾಗ ಕವಿ ಅಥವಾ ಹೋರಾಟಗಾರ, ಕವಿ ಅಥವಾ ಹೋರಾಟಗಾರನೇ ಅಲ್ಲವೆಂಬ ತೀರ್ಮಾನಕ್ಕೂ ಬರಲಾಗುವಷ್ಟರಮಟ್ಟಿಗೆ. ಇಂತಹ ಜಾತಿ ವಿನಾಶ ಚಳವಳಿಯು ಎಪ್ಪತ್ತರ ದಶಕದ ಕೊನೆಯ ಭಾಗದಲ್ಲಿ ಸಂಘಟಕರಲ್ಲಿ ಅನೇಕ ಅನುಮಾನಗಳನ್ನು ಹುಟ್ಟಿಸಿತು. ಅದು 'ನಾವು ಸಮಾನತೆಯ ಸಮಾಜ ಕಟ್ಟುತ್ತೇವೆ' ಎಂದು ಹೋದರೆ ಎಲ್ಲರು ಬೆಂಬಲ ನೀಡುತ್ತಾರೆ. ಜಾತಿ ವ್ಯವಸ್ಥೆ ಆಳವಾಗಿ ತುಂಬಿರುವ ಕರ್ಮಸಿದ್ಧಾಂತದ ಪ್ರತಿಪಾದಕರಿಗೆ (ಅಂದರೆ ಬಹುಜನರಿಗೆ) ಜಾತಿ ನಾಶ ಮಾಡುತ್ತೇವಿ ಎಂದರೆ ಹಾಗೂ ನೇರವಾಗಿ ವಿನಾಶ ಕಾರ್ಯಕ್ರಮಗಳಿಗೆ ಭಾಗವಹಿಸುವ ಹಾಗೂ ಮುಕ್ತವಾಗಿ ಪ್ರಚಾರಮಾಡುವಲ್ಲಿ ಎಲ್ಲೋ ಒಂದು ಕಡೆ ಹಿಂದೆ ಸೇರಿದ ರೀತಿಯಿಂದಾಗಿ ಹಾಗೂ ಕೇಂದ್ರಿತವಾಗಿ ರೂಪಿತನಾದ ಕರ್ನಾಟಕ ರಾಜಕಾರಣದಲ್ಲಿ ಈ ಜಾತಿ ವಿನಾಶ ಚಳವಳಿಯು ಕುಂಟಿತವಾಗಲು ಕಾರಣವಾಯಿತು. ಏಕೆಂದರೆ, ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ 'ಸಮುದಾಯ' ವಿಚಾರವಾದಿಗಳ ವೇದಿಕೆ, ಸಮಾಜವಾದಿ ಯುವಜನ ಸಭಾ, ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆ ಈ ಎಲ್ಲಾ ಸಂಘಟನೆಗಳು ಒಂದೇ ವೇದಿಕೆಯಲ್ಲಿ ನಿರಂತರತೆ ಕಾಪಾಡಿಕೊಂಡಿದ್ದರೆ.[೨೦] ಜಾತಿವಿನಾಶ ಚಳವಳಿ ಒಂದು ಗಟ್ಟಿಯಾದ ತೀರ್ಮಾನಕ್ಕೆ ಬರುತ್ತಿತ್ತು. ಆದರೆ ಈ ಸಂಘಟನೆಗಳನ್ನು ಬಲಪಂಥೀಯ ಜಾತಿ ರಾಜಕಾರಣಕ್ಕೆ ಬಿಡಿಯಾಗಿ ಕಾರ್ಯನಿರ್ವಹಿಸಲು ಮುಂದಾದವು. ಅಂದು ಬಹಿರಂಗಗೊಂಡಿದ್ದು ೧೯೮೦ರಲ್ಲಿ ಎಂದು ಹೇಳಬಹುದು. ಏಕೆಂದರೆ, ಎಡ ಪ್ರಜಾಸತ್ತಾತ್ಮಕ ಸೋಶಿಯಲಿಸ್ಟ್, ಅಂಬೇಡ್ಕರ್‌ವಾದಿಗಳ ಸೈದ್ಧಾಂತಿಕತೆಯ ತ್ಯಾಗವನ್ನು ಎಂಬತ್ತರ ದಶಕದ ರಾಜಕಾರಣ ಅಂದರೆ ರಾಮಕೃಷ್ಣ ಹೆಗಡೆಯವರ ಹಾಗೂ ದೇವೆಗೌಡರ ರಾಜಕಾರಣದಿಂದ ಹಲವಾರು ವಿಘಟನೆಯ ಸಿದ್ಧಾಂತಗಳನ್ನು ಕಂಡಿದ್ದನ್ನು ನೋಡುತ್ತೇವೆ. ಆದರೂ 'ಜಾತಿ ವಿನಾಶ' ಚಳವಳಿಯು ಶೂದ್ರ-ದಲಿತರಲ್ಲಿ ಒಂದು ಪ್ರಜ್ಞೆಯನ್ನು ಹಾಗೂ ವೈಚಾರಿಕತೆಯನ್ನು ಮೂಡಿಸಿದಲ್ಲದೆ, ಸಂಘಟಿತರಾಗುವಂತೆ ಜಾಗೃತಿಯನ್ನು ಸಹ ಮೂಡಿಸಿದ್ದು ಚಾರಿತ್ರಾರ್ಹ ಅಂಶಗಳೆಂದು ಎಪ್ಪತ್ತರ ದಶಕ ಜಾತಿ ವಿನಾಶದ ಚಳವಳಿಯ ಚರಿತ್ರೆಯ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಟಿಪ್ಪಣಿಗಳು

೧. ಹಣಮಂತ್ರಾಯ ದೊಡ್ಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ,** ಪುಟ–೪೬.

೨. ಅದೇ., ಪುಟ–೫೨

೩. ಅರವಿಂದ ಮಾಲಗತ್ತಿ, ೨೦೧೪, **ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, (ಸಂಪುಟ–೨. ದಲಿತ ಚಳವಳಿ)** ಪುಟ–೩೫೫

೪. ವೀರಯ್ಯ ಡಿ.ಎಸ್. (ಪ್ರಸಂ), ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೬, **ಧೀಮಂತ(ಕ್ರಾಂತಿಕಾರಿ ಬಿ.ಬಸವಲಿಂಗಪ್ಪ ಸಂಸ್ಮರಣ ಸಂಪುಟ)**

೫. ಹಣಮಂತ್ರಾಯ ದೊಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ,** ಪುಟ–೫೦

೬. ವೀರಯ್ಯ ಡಿ.ಎಸ್. (ಪ್ರಸಂ), ಚಿನ್ನಸ್ವಾಮಿ ಸೋಸಲೆ ಎನ್. (ಸಂ), ೨೦೧೬, **ಧೀಮಂತ ಕ್ರಾಂತಿಕಾರಿ ಬಿ. ಬಸವಲಿಗಪ್ಪ ಸಂಸ್ಮರಣ ಸಂಪುಟ,** ಪುಟ–೨೮೨

೭. ಅದೇ., ಪುಟ–೨೮೩

೮. ಹಣಮಂತ್ರಾಯ ದೊಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ,** ಪುಟ–೫೧

೯. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು,** ಪುಟ–೮೩

೧೦. ಗೋಪಾಲನ್.ಎ.ಕೆ, ೧೯೮೨, **ನನ್ನ ಜೀವನದ ಕಥೆ,** ಪುಟ–೩೮೭

೧೧. ಅದೇ., ಪುಟ–೩೯೦

೧೨. ಅದೇ., ಪುಟ–೩೯೫

೧೩. 'ಸಮುದಾಯ' ಧಾರವಾಡ ಘಟಕ, ೧೯೮೮, **ಸಮುದಾಯ ರಂಗ ಮೇಳ–೮೮, ಸ್ಮರಣ ಸಂಚಿಕೆ,** ಪುಟ–೧

೧೪. ಶ್ರೀಗಿರಿ ಎಸ್.ಎಸ್, ೨೦೧೦, **ಭಾರತದ ತುರ್ತುಪರಿಸ್ಥಿತಿಯಲ್ಲಿ ಪ್ರಧಾನಮಂತ್ರಿ ಯವರ ಪಾತ್ರ,** ಪುಟ–೧೧೭

೧೫. 'ಸಮುದಾಯ' ಸಿಂಧನೂರು ಘಟಕ, ೨೦೦೮, **ಸಮುದಾಯ ನಾಟಕೋತ್ಸವ ೨೦೦೮, ಸ್ಮರಣ ಸಂಚಿಕೆ,** ಪುಟ–೧೫

೧೬. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು**. ಪುಟ-೮೨

೧೭. ಅರವಿಂದ ಮಾಲಗತ್ತಿ, ೨೦೧೪, **ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ-೨ ದಲಿತ ಚಳವಳಿ)**, ಪುಟ-೩೫೩

೧೮. ಹಣಮಂತ್ರಾಯ ದೊಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕ ರಾಜಕಾರಣ**, ಪುಟ-೯೯

೧೯. ಸುಮಾ.ಬಿ.ಯು, ೨೦೧೫, **ಡಾ.ಬಿ.ಆರ್.ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ**, ಪುಟ-೬೯

೨೦. ರಶ್ಮಿ ಎಸ್., ೨೦೧೮, **ಕರ್ನಾಟಕದಲ್ಲಿ ತುರ್ತುಪರಿಸ್ಥಿತಿ ಪ್ರಭಾವ ಮತ್ತು ಪರಿಣಾಮಗಳು**, ಪುಟ-೨೭೯

ಅಧ್ಯಾಯ : ನಾಲ್ಕು

'ಸಮುದಾಯ' ಹಾಗೂ ಎಂಬತ್ತರ ದಶಕದ ಸಾಮಾಜಿಕ ಚಳವಳಿಗಳು

ಅಧ್ಯಾಯ: ನಾಲ್ಕು

'ಸಮುದಾಯ' ಹಾಗೂ ಎಂಬತ್ತರ ದಶಕದ ಸಾಮಾಜಿಕ ಚಳವಳಿಗಳು

೪.೧. ರೈತ ಚಳವಳಿಯ ಹಿನ್ನಲೆಯಲ್ಲಿ 'ಸಮುದಾಯ'

ಕರ್ನಾಟಕದಲ್ಲಿ ಎಂಬತ್ತರ ದಶಕವನ್ನು ರೈತ ಚಳವಳಿಗಳ ಕಾಲ ಎಂದು ಕರೆಯುತ್ತೇವೆ. ಏಕೆಂದರೆ ರೈತರು ಸಂಘಟಿತರಾಗಿ ಚಳವಳಿಗಳಲ್ಲಿ ನಿರಂತರ ಭಾಗಿಯಾಗಿ ರಾಜ್ಯ ಸರ್ಕಾರವನ್ನೇ ಉರುಳಿಸುವ ಅಗಾಧ ಶಕ್ತಿ ರೈತ ಸಂಘಟನೆಗಳಿಗೆ ಇದ್ದದ್ದು ಚಾರಿತ್ರಾರ್ಹ ಸಂಗತಿಯಾಗಿದೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದ ಕರಾವಳಿ ಭಾಗದಲ್ಲಿ ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್) ಎಂಬ ಎಡಪಂಥೀಯ ರೈತ ಸಂಘಟನೆ ಪ್ರಾರಂಭವಾಗಿ ಈ ಸಂಘಟನೆಯು ಗಟ್ಟಿಯಾಗಿ ಬೆಳೆದು ಅದು ಕರ್ನಾಟಕದಲ್ಲಿ ಕರ್ನಾಟಕ ಪ್ರಾಂತ್ಯ ರೈತ ಸಂಘ (ಕೆ.ಪಿ.ಆರ್.ಎಸ್) ಎಂಬುವುದಾಗಿ ಬೆಳವಣಿಗೆ ಹೊಂದಿತು. ಇದು ಎಂಬತ್ತರ ದಶಕದ ಸಾಮಾಜಿಕ ಚಳವಳಿಗಳಿಗೆ ಪೂರಕ ಅಡಿಪಾಯವನ್ನು ಹಾಕಿಕೊಟ್ಟಿತು. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಮೂಲಕ ರೈತರ ಸಂಕಷ್ಟಗಳ ಬಗೆಗೆ ನಾಟಕಗಳು, ಜಾಥಾಗಳು ಕೂಡ ಪ್ರಾರಂಭವಾದವು. ಇವುಗಳು ರೈತರಲ್ಲಿ ಸಂಘಟನೆ ಹಾಗೂ ರೈತರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಲು ಸಹಾಯವಾಯಿತು. ಈ ಹಿನ್ನಲೆಯಲ್ಲಿ 'ಸಮುದಾಯ' ಸಂಘಟನೆ ಬೆಂಬಲವಾಗಿ ಎಂಬತ್ತರ ದಶಕದಲ್ಲಿ ತನ್ನ ಸೈದ್ಧಾಂತಿಕತೆಯನ್ನು ಎತ್ತಿಹಿಡಿಯಿತು.

೧೯೮೦ರಲ್ಲಿ ಮಲಪ್ರಭಾ ನದಿಯ ನೀರಿನ ಹಂಚಿಕೆ ವಿಚಾರವಾಗಿ ನರಗುಂದ-ನವಲಗುಂದ ರೈತರ ಚಳವಳಿ ಪ್ರಾರಂಭವಾಯಿತು. ರೈತರು ತಮಗೆ ಅನ್ಯಾಯವಾದಾಗಲೆಲ್ಲಾ ಹೋರಾಟ, ಪ್ರತಿಭಟನೆಗಳ ಮೂಲಕ ಆಕ್ರೋಶ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಇಂಥ ಹೋರಾಟಗಳನ್ನು ದೊಂಬಿ-ದಂಗೆ ಮುಂತಾದ ಹೆಸರಿನಿಂದ ಕರೆಯುತ್ತಾ ಈ ಹೋರಾಟಗಳಿಗೆ ಚಾರಿತ್ರಿಕ ಮಹತ್ವವನ್ನು ನೀಡದೇ ಹೋದದ್ದು ಒಂದು ರೀತಿಯ ವಿಪರ್ಯಾಸ ಎನ್ನಬಹುದು. ಉದಾಹರಣೆಗೆ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ತೇಭಾಗ ರೈತ ಹೋರಾಟ, ತೆಲಂಗಾಣ ಶಸ್ತ್ರಾಸ್ತ್ರ ರೈತ ಹೋರಾಟ, ಮಾಪಿಳ್ಳೆ ರೈತ ಹೋರಾಟ, ಸಂತಾಲರ ಹೋರಾಟ, ಕಯ್ಯೂರು ರೈತ ಹೋರಾಟ, ಕಾಗೋಡು ಸತ್ಯಾಗ್ರಹ ಹೀಗೆ ಮೊದಲಾದ ಹೋರಾಟಗಳು ಪ್ರಮುಖವಾದವು. ಎಂಬತ್ತರ ದಶಕದಲ್ಲಿ ನಡೆದ ಮಲಪ್ರಭಾ

ರೈತ ಹೋರಾಟದ ಇನ್ನೊಂದು ಹೆಸರೇ 'ನರಗುಂದ-ನವಲಗುಂದ ರೈತ ಬಂಡಾಯ' ಎಂದು ಕರೆಯುತ್ತಾರೆ.

ಮಲಪ್ರಭಾ ಅಣೆಕಟ್ಟು ಪ್ರದೇಶವು ನಾಲ್ಕು ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಬಾಗಲಕೋಟೆ ಹಾಗೂ ಗದಗ ಜಿಲ್ಲೆಗಳ ೬ ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶ ನಿರಂತರ ಬರಗಾಲಕ್ಕೆ ತುತ್ತಾಗಿದ್ದು ಕುಡಿಯುವ ನೀರಿಗೆ ಸಮಸ್ಯೆ ಆಗಿತ್ತು. ಸವದತ್ತಿ, ಮುನವಳ್ಳಿ ಮಧ್ಯೆ ಇರುವ ನವಿಲುತೀರ್ಥ ಹತ್ತಿರ ಮಲಪ್ರಭಾ ನದಿಗೆ ಅಣೆಕಟ್ಟು ನಿರ್ಮಿಸಿ ೫೨೬.ಲಕ್ಷ ಎಕರೆ ಪ್ರದೇಶಕ್ಕೆ ನೀರು ಒದಗಿಸುವ ಯೋಜನೆ ರೂಪಿಸಿ ೫೦ ವರ್ಷಗಳು ಕಳೆದರೂ ಈ ಯೋಜನೆ ಜಾರಿಯಾಗಿಲ್ಲ.

ನರಗುಂದ-ನವಲಗುಂದ ಹೋರಾಟದ ಮೊದಲ ಸಮಾವೇಶ

೧೯೭೮ ರ ಡಿಸೆಂಬರ್ ತಿಂಗಳಲ್ಲಿ ನರಗುಂದದಲ್ಲಿ ಒಂದು ರೈತರ ಸಮಾವೇಶ ಜರುಗಿತು. ನೀರಾವರಿ ತಜ್ಞರು, ಕೃಷಿ ವಿಜ್ಞಾನಿಗಳು, ಸಹಕಾರಿ ಧುರೀಣರು ಹಾಗೂ ರೈತರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಆಗಿನ ಕರ್ನಾಟಕದ ಮಂತ್ರಿಗಳಾದ ಕೆ.ಎಚ್.ರಂಗನಾಥ, ನರಗುಂದದ ಸಂಸದರಾದ ಜಗನ್ನಾಥ ಜೋಶಿ, ಕಾಂಗ್ರೆಸ್ ಮುಖಂಡರಾದ ಅಗ್ನಿಹೋತ್ರಿ, ನವಲಗುಂದ ರೋಣ ಶಾಸಕರು ಈ ಸಮಾವೇಶದಲ್ಲಿ ಭಾಗವಹಿಸಿದರು. ನೀರಾವರಿ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿದರು. ಆದರೆ ರಾಜ್ಯ ಸರ್ಕಾರ ಇದನ್ನು ಕಡೆಗಣಿಸಿತು ೧೯೮೦ರ ಫೆಬ್ರವರಿಯಲ್ಲಿ ಪ್ರಪ್ರಥಮ ರೈತರ ಸಭೆಯು ನವಲಗುಂದ ತಾಲ್ಲೂಕಿನ ಅಳಗಲಾತಿ ಗ್ರಾಮದಲ್ಲಿ ಜರುಗಿತು. ಸಂಘಟನೆ ಹೋರಾಟ ಇವರಿಗೆ ಹೊಸತು. ಆದರೂ ಅಮರಗೋಳ, ಹೆಬ್ಬಾಳ, ಜಾವೂರ ಗ್ರಾಮಗಳ ಮುಖಂಡರು ಚಳವಳಿ ನಡೆಸಲು ಸಂಘಟನೆ ಸ್ಥಾಪನೆಯ ವಿಚಾರವನ್ನು ಸಭೆಯಲ್ಲಿ ಮಂಡಿಸಿದರು. ಫೆಬ್ರವರಿ ಮೂರರಂದು ರೈತರ ಸಮಾವೇಶಕ್ಕೆ ಒಂಬತ್ತಕ್ಕೂ ಹೆಚ್ಚು ಗ್ರಾಮಗಳಿಂದ ರೈತರು ಭಾಗವಹಿಸಿದರು. ಈ ಸಮಾವೇಶದಲ್ಲಿ ೨೮ ಜನರನ್ನೊಳಗೊಂಡ 'ಮಲಪ್ರಭಾ ನೀರಾವರಿ ರೈತ ಸಮನ್ವಯ ಸಮಿತಿ ನವಲಗುಂದ ತಾಲ್ಲೂಕಿನಲ್ಲಿ ರಚನೆಯಾಯಿತು. ಎಂ.ಕೆ.ಭಟ್, ಪಿ.ರಾಮಚಂದ್ರರಾವ್, ವಿ.ಎನ್.ಹಳಕಟ್ಟಿ, ಎಸ್.ಎಚ್.ಕಪ್ಪಣ್ಣವರು ಈ ರೈತ ಸಮಿತಿಯ ಮುಖಂಡರಾಗಿದ್ದರು. ಈ ರೈತ ಸಮಿತಿಯಿಂದ ತಮ್ಮ ಬೇಡಿಕೆ ಪಟ್ಟಿ ತಯಾರಿಸಿ ನರಗುಂದದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂತ್ರಿ ಗುಂಡೂರಾವ್ ಅವರಿಗೆ ಮನವಿಪತ್ರವನ್ನು ನೀಡಿದರು. ಆ ಬೇಡಿಕೆಗಳು ಹೀಗಿವೆ;

೧. ಅಭಿವೃದ್ಧಿ ಕರ ರದ್ದತಿ

೨. ಕಡಿಮೆ ಬಡ್ಡಿದರದಲ್ಲಿ ರೈತರಿಗೆ ಸಾಲ

೩. ಕಾಲುವೆಗಳ ಸಮರ್ಪಕ ರಚನೆ

ಹೀಗೆ ೨೩ ಬೇಡಿಕೆಗಳ ಪಟ್ಟಿ ನೀಡಿದರು.

ನವಲಗುಂದ ತಹಶೀಲ್ದಾರ ಮತ್ತು ಕಂದಾಯ ಅಧಿಕಾರಿಗಳು ಅಭಿವೃದ್ಧಿ ಕರ ಮತ್ತು ನೀರಿನ ಕರ(ತೆರಿಗೆ) ವಸೂಲಿಗೆ ಮುಂದಾದರು. ನವಲಗುಂದ ತಾಲ್ಲೂಕು ಸಮನ್ವಯ ಸಮಿತಿಯು ಜಿಲ್ಲಾಧಿಕಾರಿಗಳಿಗೆ ಬೇಡಿಕೆಗಳ ಪಟ್ಟಿ ಸಲ್ಲಿಸಲು ನಿರ್ಧರಿಸಿತು. ರೈತರು ಮನವಿ ಪತ್ರ ನೀಡಲು ಬಂದಾಗ ಅಧಿಕಾರಶಾಹಿ ವರ್ಗವು ಕನಿಷ್ಟ ಕುಳಿತುಕೊಳ್ಳಿ ಎನ್ನಲಿಲ್ಲ.[೧] ಆಡಳಿತ ಅಧಿಕಾರಿ 'ನೀವು ರೈತರೇನು? ರೈತರು ಹೀಗಿರುತ್ತಾರೆಯೇ? ಹೋಗಿ ಮೊದಲು ತೆರಿಗೆ ಕೊಡಲು ಕಲಿಯಿರಿ' ಎಂದು ದರ್ಪವನ್ನು ತೋರುತ್ತಾರೆ. ಪ್ರಶ್ನಿಸಲು ಮುಂದಾದ ರೈತ ಮುಖಂಡರೊಬ್ಬರನ್ನು ಹಿಂದೆ ಸರಿಯಲು ಹೇಳಿದರು.

ರೈತರು ಕರ ತುಂಬಲಿಲ್ಲ ಎಂಬ ಕಾರಣಕ್ಕೆ ಅವರಿಗೆ ಪಹಣಿ ನೀಡುವುದನ್ನು ನಿರಾಕರಿಸಿದರು. ಬ್ಯಾಂಕುಗಳಲ್ಲಿ ಕೃಷಿ ಸಾಲ ಪಡೆಯಲು ಮತ್ತು ರೈತರ ಮಕ್ಕಳ ಶಾಲಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಪಹಣಿ ಅಗತ್ಯವಿತ್ತು. ೧೯೮೦ರ ಜೂನ್ ೨ರಂದು ಕರ್ನಾಟಕ ರಾಜ್ಯ 'ಸಮುದಾಯ' ಸಂಘಟನೆಯ ಸಮನ್ವಯ ಸಮಿತಿ ಸುಮಾರು ಒಂದು ಸಾವಿರ ರೈತರೊಂದಿಗೆ ತಹಶೀಲ್ದಾರ ಕಛೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿತು. ಈ ಗಂಭೀರ ಪರಿಸ್ಥಿತಿಯನ್ನು ಅರಿತ ನವಲಗುಂದ ತಹಶೀಲ್ದಾರರು ಪಹಣಿ ಕೊಡಲು ಆದೇಶಿಸಿದರು. ಈ ಹೋರಾಟ ರೈತರಿಗೆ ಚಳವಳಿಗೆ ಇನ್ನಷ್ಟು ವಿಶ್ವಾಸ ಮೂಡಿಸಿತು. ಹೀಗೆ ನವಲಗುಂದದಿಂದ ರೈತರ ಮಲಪ್ರಭಾ ನೀರಾವರಿ ಸಮನ್ವಯ ಸಮಿತಿ ಸಂಘಟನೆ ರೋಣ, ನವಲಗುಂದ, ಸವದತ್ತಿ ಮುಂತಾದ ಪ್ರದೇಶಗಳಿಗೆ ವಿಸ್ತರಿಸಿತು. ನೀರಾವರಿ ಬೇಡಿಕೆಗಳ ಮೂಲಕ ತೀವ್ರಸ್ವರೂಪದಲ್ಲಿ ಸತ್ಯಾಗ್ರಹ, ಹೋರಾಟಗಳ ಪ್ರಾರಂಭಿಸಿತು.

ಸರ್ಕಾರದ ಆಡಳಿತ ಯಂತ್ರ ನಿಲುಗಡೆ

ರೈತರ ಮಲಪ್ರಭಾ ನೀರಾವರಿ ಸಮನ್ವಯ ಸಮಿತಿ ಸಂಘಟನೆ ೧೯೮೦ರ ಜುಲೈ ೨೧ ರಂದು ಬಂದ್‌ಗೆ ಕರೆ ನೀಡಿತು. ನರಗುಂದ, ನವಲಗುಂದ, ಸವದತ್ತಿ ಬಂದ್ ಯಶಸ್ವಿಯಾಗಿ ಅಂಗಡಿ ಮುಗಟ್ಟುಗಳು ಬಂದ್ ಆಗಿದ್ದವು. ಇದಕ್ಕೆ ತಹಶೀಲ್ದಾರ್ ಕಛೇರಿಯ ಕೆಲಸ ಸ್ಥಗಿತಗೊಳಿಸಿ ತಮಗೆ ಸಹಕರಿಸಬೇಕು ಎಂದು ರೈತರು ಮನವಿಮಾಡಿಕೊಂಡರು. ಅಧಿಕಾರಿಶಾಹಿ ರೈತರ ಮನವಿಗೆ ಕಿಮ್ಮತು ನೀಡಲಿಲ್ಲ. ರೈತರು ಮಾನವ ಸರಪಳಿ ನಿರ್ಮಿಸಿ ಕಛೇರಿಯ ಬಾಗಿಲಿಗೆ ಅಡ್ಡಲಾಗಿ ಮಲಗಿ ತಹಶೀಲ್ದಾರರು ಒಳಗೆ ಹೋಗದಂತೆ ತಡೆಯಲು ಪ್ರಯತ್ನಿಸಿದರು. ಹೀಗೆ ಯಾವುದೇ ರೀತಿಯಲ್ಲಿ ತಹಶೀಲ್ದಾರರನ್ನು ಕಛೇರಿ ಒಳಗೆ ಹೋಗದಂತೆ ತಡೆಯಲಾಗಲಿಲ್ಲ. ರೈತರು ಅಸಮಾಧಾನಗೊಂಡು ಕಛೇರಿಯ ಒಳಗೆ ನುಗ್ಗಲು ಮುಂದಾದರು.[೨] ರೈತರ ಆಕ್ರೋಶವನ್ನು ಶಮನ ಮಾಡಲು ಯಾವುದೇ ಅಧಿಕಾರಿ ಸಾಂತ್ವನದ ಮಾತುಗಳು ಆಡಲಿಲ್ಲ. ಬದಲಿಗೆ ತಹಶೀಲ್ದಾರರು ಪೊಲೀಸರಿಗೆ ಗುಂಡು ಹೊಡೆಯಲು ಆದೇಶಿಸಿದರು. ಸ್ಥಳೀಯ ಪಿ.ಎಸ್.ಐ ಸಿಡಿಸಿದ ಗುಂಡು ಚಿಕ್ಕ ನರಗುಂದ ಯುವ ರೈತ ಈರಪ್ಪ ಕಡ್ಲಿ ಕೊಪ್ಪನನ್ನು ಬಲಿತೆಗೆದುಕೊಂಡಿತು. ಈ ಯುವ

ರೈತನ ಸಾವಿನಿಂದ ರೈತ ಚಳವಳಿಗಾರರು ಇನ್ನಷ್ಟು ಕಾನೂನು ಬಾಹಿರ ಹೋರಾಟಕ್ಕೆ ಮುಂದಾದರು. ಪೊಲೀಸರ ಟಿಯರ್ ಗ್ಯಾಸ್, ಗಾಳಿಯಲ್ಲಿ ಗುಂಡು ಹಾರಿಸಿ ರೈತರನ್ನು ಚದುರಿಸುವ ಪ್ರಯತ್ನಗಳು ನಿಷ್ಕ್ರಿಯಗೊಂಡವು. ರೈತರ ಉಗ್ರಸ್ವರೂಪದ ಹೋರಾಟಕ್ಕೆ ಮೂರು ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಸಾವಿಗೀಡಾದರು. ಮೂರು ಪೊಲೀಸ್ ವಾಹನಗಳು ಬೆಂಕಿಗೆ ಆಹುತಿಯಾದವು, ತಹಶೀಲ್ದಾರರು ಡಿ.ವೈ.ಎಸ್.ಪಿಗಳನ್ನು ಒಳಗೊಂಡಿದಂತೆ ಮುವತ್ತೈದರಿಂದ ನಲವತ್ತು ಪೊಲೀಸರು ಸೇರಿದಂತೆ ಅನೇಕರು ಗಾಯಗೊಂಡರು.

ನರಗುಂದದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚಿನ ರೈತರು ಪಾಲ್ಗೊಂಡಿದ್ದರು. ಈ ರೈತರ ಪ್ರತಿಭಟನೆ ನಡೆಯುತ್ತಿರುವ ಸಂದರ್ಭದಲ್ಲಿ ನರಗುಂದ ಪಟ್ಟಣದ ಕೆಲವು ಹಮಾಲಿ ಕಾರ್ಮಿಕರು ತಪ್ಪು ತಿಳುವಳಿಕೆಗಳಿಂದ ರೈತರ ಟ್ರಾಕ್ಟರ್‌ಗಳನ್ನು ಜಖಂ ಮಾಡಿದರು. ಈ ಸುದ್ದಿ ರೈತರಿಗೆ ತಿಳಿದು, ತಕ್ಷಣ ಪಟ್ಟಣದ ಒಳಗೆ ನುಗ್ಗಿ ಬಂದರು. ನರಗುಂದ ಘಟನೆ ಮರುಕಳಿಸಿತೆಂಬ ವಿಚಾರದಿಂದ ಮತ್ತೆ ಪೊಲೀಸರು ಲಾಟಿ ಪ್ರಹಾರ ಮತ್ತು ಗಾಳಿಯಲ್ಲಿ ಗುಂಡು ಹಾಸಿಸುವ ಮೂಲಕ ಪ್ರತಿಭಟನಕಾರರನ್ನು ಚದುರಿಸಲು ಯತ್ನಿಸಿದರು. ಈ ಸಂದರ್ಭದಲ್ಲಿ ಅಳಗವಾತಿಯ ಯುವಕ ಬಸಪ್ಪ ಲಕ್ಕುಂಡಿ ಪೊಲೀಸರ ಗುಂಡೆಟಿಗೆ ಬಲಿಯಾದನು. ಈ ಸಮಯದಲ್ಲಿ ಉಂಟಾದ ಗಲಭೆಯಲ್ಲಿ ಆರು ಜನ ರೈತರು ಸಾವಿಗೀಡಾದರು ಇದರಿಂದ ಬೆಚ್ಚಿದ ರೈತರು ತಮ್ಮ ಟ್ರಾಕ್ಟರ್‌ಗಳೊಂದಿಗೆ ಗ್ರಾಮಗಳಿಗೆ ಮರಳಿದರು. ನಂತರ ಮರುದಿನ ಸವದತ್ತಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ಮೂರು ದಿವಸ ನವಲಗುಂದಲ್ಲಿ 'ಕಂಡಲ್ಲಿ ಗುಂಡು' ಕಾನೂನು ಜಾರಿಯಲ್ಲಿತ್ತು. ನರಗುಂದ ತಾಲ್ಲೂಕಿಗೆ ಮುಖ್ಯಮಂತ್ರಿ ಗುಂಡೂರಾವ್ ಭೇಟಿ ನೀಡಿ ಗಲಭೆಯಲ್ಲಿ ತೊಡಗಿದ ಅಪರಾಧಿಗಳನ್ನು ಬಿಡುವುದಿಲ್ಲ. ಎಂದು ಘೋಷಿಸಿದ ಬೆನ್ನಲೇ ಪೊಲೀಸರು ಮಲಪ್ರಭಾ ರೈತ ಹೋರಾಟ ಸಮನ್ವಯ ಸಮಿತಿಯ ೮೯ ರೈತ ಮೇಲೆ ಪ್ರಕರಣದಾಖಲು ಮಾಡಿ ಬಂಧಿಸಿ ಜೈಲಿಗೆ ತಳ್ಳಿದರು. ಈ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲಾಗಿತ್ತು ರೈತ ಸಂಘಟನೆಯ ಪ್ರಮುಖರು ನರಗುಂದ, ನವಲಗುಂದ, ಅಳಗವಾಡಿ ಚಿಕ್ಕನರಗುಂದ ಗ್ರಾಮಗಳಿಗೆ ಭೇಟಿ ನೀಡಿ ರೈತ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ರೈತರೆಡೆಗೆ 'ಸಮುದಾಯದ' ಸಾಂಸ್ಕೃತಿಕ ಜಾಥಾ – ೧೯೮೧

ಈ ನರಗುಂದದಿಂದ ಬೆಂಗಳೂರಿನವರಿಗೆ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಈ ರೈತ ಬಂಡಾಯ ದುಬಾರಿ ರಾಜಕೀಯದ ಮೇಲೂ ಗಾಢ ಪರಿಣಾಮ ಬೀರಿತು. ಕಾಂಗ್ರೇಸೇತರ ರಾಜಕೀಯ ಪಕ್ಷಗಳು ಮತ್ತು ರೈತರನ್ನು ಕ್ರೋಢೀಕರಿಸಿ ಚಳವಳಿಯನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುವ ಉದ್ದೇಶ ಇಟ್ಟುಕೊಂಡು ರಾಜಕೀಯ ಪಕ್ಷಗಳು ಹಾಗೂ ಅದರ ಸಾಮೂಹಿಕ ಸಂಘಟನೆಗಳು ಸೇರಿ ಈ ಕಾಲ್ನಡಿಗೆ ಜಾಥಾ ಹಮ್ಮಿಕೊಂಡರು. ಅವುಗಳು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಸಿ.ಪಿ.ಐ.(ಎಂ), ಭಾರತ ಕಮ್ಯೂನಿಷ್ಠ ಪಕ್ಷ(ಸಿ.ಪಿ.ಐ), ಕಾಂಗ್ರೆಸ್(ಯು),

ಲೋಕದಳ, ಪಕ್ಷಗಳು ಸೇರಿ "ಪ್ರಗತಿಪರ ಜನತಂತ್ರ ರಂಗ" ರಚಿಸಿಕೊಡವು. (೧೯೮೧–ಜನವರಿ೨) ಜೋತೆಗೆ ಕರ್ನಾಟಕ ಪ್ರಾಂತ್ಯ ರೈತ ಸಂಘ (ಕೆ.ಪಿ.ಆರ್.ಎಸ್) ಹಾಗೂ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಸೇರಿಕೊಂಡು 'ಸಮುದಾಯ' ಹಲವಾರು ರಚನಾತ್ಮಕ ಕಾರ್ಯಕ್ರಮಗಳ ಮೂಲಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಶ್ನೆಗಳೊಂದಿಗೆ ರಾಜ್ಯವ್ಯಾಪಿ ಜಾಥಾಗಳನ್ನು ಹಮ್ಮಿಕೊಂಡು. ಅದರಲ್ಲಿ ಸಾಕಷ್ಟು ಯಶಸ್ವಿಯೂ ಆಗಿತ್ತು.

ಜನಸಾಮಾನ್ಯರ, ರೈತಾಪಿ ವರ್ಗದವರ ಸಮಸ್ಯೆಗಳನ್ನು ಬಗೆಹರಿಸುವಲ್ಲಿಕ್ಕೆ ಸರ್ಕಾರ ನಿಷ್ಕ್ರಿಯವಾಗಿತ್ತು. ಆಡಳಿತಶಾಹಿಗಳು ರೈತ ಹಾಗೂ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸದಿರುವುದು ರೈತರ ಅಸಮಾಧಾನಕ್ಕೆ ಕಾರಣವಾಗಿತ್ತು. ಮಲಪ್ರಭಾ ನೀರು, ನರಗುಂದ, ನವಲಗುಂದ ಭಾಗದ ಕೃಷಿಕರಿಗೆ ಹರಿಯದೇ ಇದ್ದರೂ ಸಹ ಈ ಹಳ್ಳಿಗಳ ರೈತರು 'ನೀರಾವರಿ ಕರವನ್ನು' ಕಟ್ಟಬೇಕೆಂಬ ಹಿನ್ನೆಲೆಯಲ್ಲಿ ಪ್ರಾರಂಭವಾದ 'ಕರ ನಿರಾಕರಣೆ ಚಳವಳಿ' ಎಲ್ಲರ ನಿರೀಕ್ಷೆಗೂ ಮೀರಿ ಇಡಿ ರಾಜ್ಯವ್ಯಾಪಿ ಚಳವಳಿಯಾಗಿ ಮಾರ್ಪಟ್ಟಿತ್ತು. ಇದೇ ಸಮಯದಲ್ಲೇ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಕಾರ್ಮಿಕರು, ಕಾರ್ಮಿಕ ಸಂಘಟನೆಗಳ ಬೆಂಬಲದೊಂದಿಗೆ ಸತತವಾಗಿ ವೇತನ ಹೆಚ್ಚಳಕ್ಕಾಗಿ ಹಲವು ದಿನಗಳವರೆಗೆ 'ಬಂದ್' ನಡೆಸಿದವು. ತುರ್ತುಪರಿಸ್ಥಿತಿಯ ಗುಂಗಿನಲ್ಲೇ ಇದ್ದ ಗುಂಡುರಾವ್ ಸರ್ಕಾರ ರೈತ–ಕಾರ್ಮಿಕರನ್ನು ಸದೆಬಡಿಯಲು ಗೋಲಿಬಾರ್ ಮಾಡಿಸಿ ಅನೇಕ ಜೀವಗಳನ್ನು ಬಲಿ ತೆಗೆದುಕೊಂಡು, ಅವರ ಕುಟುಂಬಗಳನ್ನು ಅನಾಥರನ್ನಾಗಿ ಮಾಡಿದ್ದರು. ಇದರ ಪರಿಣಾಮವಾಗಿ 'ಸಮುದಾಯ' ಸಂಘಟನೆಯು 'ರೈತನೆಡೆಗೆ 'ಸಮುದಾಯ' ಜಾಥಾ'ವನ್ನು ರಾಜ್ಯ ಮಟ್ಟದಲ್ಲಿ ಆಯೋಜಿಸಿತು.[೩] ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಸ್ಥಳೀಯ 'ಸಮುದಾಯ'ದ ಘಟಕಗಳ ಮುಖಾಂತರ ಏಕಕಾಲದಲ್ಲಿ ೧೯೮೧ರ ಜನವರಿ ೧೫ರಿಂದ ೩೦ರ ವರೆಗೆ ಸಾಂಸ್ಕೃತಿಕ ಜಾಥಾವನ್ನು ಅತ್ಯಂತ ಯಶಸ್ವಿಯಾಗಿ 'ಸಮುದಾಯ' ಸಂಘಟನೆ ಪೂರ್ಣಗೊಳಿಸಿತು. ಕಮ್ಯುನಿಸ್ಟ್ ಪಕ್ಷಗಳು ಹಾಗೂ ಪ್ರಗತಿಪರ ಪಕ್ಷ ಹಾಗೂ ಸಂಘಟನೆಗಳನ್ನು ಒಟ್ಟುಗೂಡಿಸಿ 'ರೈತನೆಡೆಗೆ' ಎಂಬ ಘೋಷವಾಕ್ಯದೊಂದಿಗೆ ನಡೆದ ಈ ಜಾಥಾವು 'ಸಮುದಾಯ'ಕ್ಕೆ ಇನ್ನಷ್ಟು ಪರಿಣಾಮಕಾರಿಯಾಗಿ ಸಂಘಟನೆಯನ್ನು ಘಟ್ಟಿಗೊಳಿಸಲು ಸಹಕಾರಿಯಾಯಿತು. ಈ ಜಾಥಾ ಸಂದರ್ಭದಲ್ಲಿ ಪುಸ್ತಕ 'ಸಮುದಾಯ'ದಿಂದ ಅನೇಕ ಕಿರು ಹೊತ್ತಿಗೆಗಳು ಭಾರತದ ರೈತರ ಬವಣೆಯ ಕುರಿತು ಜಾಥಾದ ಉದ್ದಕ್ಕೂ ವಿವರಿಸಲಾಯಿತು. 'ಸಮುದಾಯ' ಪ್ರಕಾಶನದೊಂದಿಗೆ ವೈಚಾರಿಕ ಸಾಹಿತ್ಯ, ಚಳವಳಿಗಳ ಚರಿತ್ರೆ ಪ್ರಸಾರ ಮಾಡಲಾಯಿತು.

೧೯೮೦ರ ಫೆಬ್ರುವರಿ ೫ರಂದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಜಾಥಾ ಸಮಾವೇಶವಾಗಿ ಮಾರ್ಪಟ್ಟಾಗ ಜನಸಾಗರವೇ ಅಲ್ಲಿ ನೆರೆದಿತ್ತು. ಇದೊಂದು 'ರಾಜಕೀಯ ಜಾಥಾ'ವಾಗಿತ್ತು ಎಂದು ಅಂದಿನ ಮುಖ್ಯಮಂತ್ರಿಗಳು ಮೂದಲಿಸಿದರು. ಇವರೆಲ್ಲಾ ಬಾಡಿಗೆ ರೈತರೆಂದು ಜರಿದ ಬಗ್ಗೆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದಾಗ ರೈತರು ಆಕ್ರೋಶಗೊಂಡರು. ಮರು ದಿವಸ ವಿಧಾನಸೌಧದ ಬಾಗಿಲಿಗೆ

ಹುತಾತ್ಮ ಜ್ಯೋತಿ ಕೊಂಡೊಯ್ಯುವುದರ ಜೊತೆಗೆ ದುರಹಂಕಾರದ ಮಾತುಗಳನ್ನು ಮುಖ್ಯಮಂತ್ರಿ ಹಿಂಪಡೆಯಬೇಕೆಂದು ಒತ್ತಾಯಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ರೈತರು ಮುಂದಾದರು. ಸರಕಾರ ೬೦೦ ಜನ ಚಳವಳಿಗಾರರನ್ನು ಬಂಧಿಸಿ. ಸರಕಾರ ೭೦ ನರಗುಂದ ರೈತರನ್ನು ಬಿಡುಗಡೆ ಮಾಡಿತು. ೧೯ ರೈತರನ್ನು ಬಿಡುವುದಿಲ್ಲ ಎಂದು ಹಠ ಸಾಧಿಸಿದ ಗುಂಡುರಾವ್ ಸರ್ಕಾರ ನಂತರ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ನಂತರ ಬಂದ ರಾಮಕೃಷ್ಣ ಹೆಗಡೆ ಸರ್ಕಾರ ೧೯ ರೈತರ ಮೇಲಿನ ಪ್ರಕರಣ ಹಿಂಪಡೆಯಿತು. ಇದರ ಪರಿಣಾಮವಾಗಿ ರೈತರಿಗೆ ಸುಲಭ ಸಾಲ ನೀಡಲು ಮುಂದಾಯಿತು.

ದೇಶದಲ್ಲಿ ರೈತರನ್ನು ಕಡೆಗಣಿಸಿದರೆ ಏನೆಲ್ಲಾ ಪರಿಣಾಮ ಆಗುತ್ತದೆ ಎಂಬುದನ್ನು ಈ ಘಟನೆ ಸರ್ಕಾರಗಳಿಗೆ ಒಂದು ಪಾಠ ಕಲಿಸಿದೆ. ಶಿವಳ್ಳಿಯ ಕಬ್ಬು ಬೆಳಗಾರರ ಸಂಘ ರೈತ ಪರ ವಾತಾವರಣವನ್ನು ಉಪಯೋಗಿಸಿಕೊಂಡು ರಾಜ್ಯ ರೈತ ಸಂಘ ಕಟ್ಟಲು ಮುಂದಾಯಿತು. ಅದರ ಪರಿಣಾಮ ಕರ್ನಾಟಕ ರಾಜ್ಯ ರೈತ ಸಂಘ ೧೯೮೩ರಲ್ಲಿ ಅಸ್ಥಿತ್ವಕ್ಕೆ ಬಂದಿತು. ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾಂಗ್ರೆಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ದಕ್ಷಿಣದ ಜಿಲ್ಲೆಗಳಲ್ಲಿ ಪ್ರಚಲಿತವಾಗಿದ್ದ ಕರ್ನಾಟಕ ಪ್ರಾಂತ್ಯ ರೈತ ಸಂಘ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಪ್ರಚಲಿತವಾಗಲು ಕಾರಣವಾಯಿತು. ೧೯೮೩, ಗೋಕಾಕ್ ಚಳವಳಿ, ರೈತ ಚಳವಳಿಯ ಜೊತೆಗೆ 'ಸಮುದಾಯ'ದ ಜಾಥಾಗಳು ಉಂಟುಮಾಡಿದ್ದ ಸಾಮಾಜಿಕ ಹಾಗೂ ರಾಜಕೀಯ ಅರಿವು ಈ ಸಂದರ್ಭದಲ್ಲಿ ಗಮನಾರ್ಹ ಬದಲಾವಣೆಗೆ ಕಾರಣವಾಗಿದ್ದು 'ಸಮುದಾಯದ'ದ ಚಾರಿತ್ರಿಕ ಸನ್ನಿವೇಶದ ಫಲಶೃತಿ ಎಂದರೆ ತಪ್ಪಾಗಲಾರದು.

ಭೀಕರ ಬರಗಾಲದೆದುರು ೧೯೮೫ರ 'ಸಮುದಾಯ' ದಶಕದ ಜಾಥಾ

೧೯೮೫ರಲ್ಲಿ ಕರ್ನಾಟಕದಲ್ಲಿ ಭೀಕರ ಬರಗಾಲವನ್ನು ಕಂಡಿತು. ಇದು ಸರ್ಕಾರದ ಅಭಿವೃದ್ಧಿ ಪಥದಲ್ಲಿ ಅನೇಕ ಪ್ರಶ್ನೆಗಳ ಹುಟ್ಟುಕೊಂಡವು. ಇದೇ ಸಂದರ್ಭದಲ್ಲಿ ರಾಜ್ಯಕ್ಕೆ ಆಗಮಿಸಿದ ಬಹುರಾಷ್ಟ್ರೀಯ ಕಂಪನಿಗಳು ನೀಲಗಿರಿ ಸಸಿಗಳನ್ನು ಕೊಟ್ಟು ರೈತರ ಹೊಲಗಳಲ್ಲಿ ಬೆಳೆಸಲು ಪ್ರಾರಂಭಿಸಿದರು. ಇದರಿಂದ 'ಸಮುದಾಯ'ದ ಎಲ್ಲಾ ಕ್ರಿಯಾಶೀಲ ಘಟಕಗಳು ಎಚ್ಚೆತ್ತವು. 'ನೀಲಗಿರಿ' ಎನ್ನುವುದು ರೈತನ ಶತ್ರು, ಅದು ಭೂಮಿಯಲ್ಲಿನ ನೀರಿನ ಅಂಶವನ್ನು ಹೀರಿ ಭೂಮಿಯನ್ನು ಬಂಜರು ಮಾಡುತ್ತದೆ. ಈ ಸತ್ಯವನ್ನು ಅರಿತ 'ಸಮುದಾಯ' ಸಂಘಟನೆ ಜಾಥಾಗಳ ಮೂಲಕ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಕೋಲಾರದ ಕೆಲವು ತಾಲ್ಲೂಕುಗಳು ಬಿಟ್ಟರೆ ಇನ್ನೂ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ನೀಲಗಿರಿ ನಿಷೇಧಿಸಿರುವುದು 'ಸಮುದಾಯ'ಕ್ಕೆ ಸಂದ ಜಯ. ಈ ವೇಳೆಗಾಗಲೇ 'ಸಮುದಾಯ'ಕ್ಕೆ ೧೦ ವರ್ಷಗಳ ತುಂಬಿದ್ದವು. ಇದೇ ಸಂದರ್ಭದಲ್ಲಿ ರಾಜ್ಯಾದ್ಯಂತ ತಲೆ ಎತ್ತಿದ ಭೀಕರ ಬರಗಾಲದೆದುರು 'ಸಮುದಾಯ' ಹಲವು ವಿನೂತನ ಕಾರ್ಯಕ್ರಮಗಳನ್ನು ರೂಪಿಸಿತು.

ಬರಗಾಲಕ್ಕೆ ಪರಿಸರ ಕಾರಣಗಳ ಜೊತೆಗೆ, ಸಾಮಾಜಿಕ ಹಾಗೂ ಕೃತಕ ರಾಜಕೀಯ ಕಾರಣಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿತು. ಕೃತಕ ರಾಜಕೀಯ ಕಾರಣ ಎಂದರೆ ನೀರಾವರಿ ಯೋಜನೆಗಳನ್ನು ವಿಫಲಗೊಳಿಸುವುದು. ಉದಾಹರಣೆಗೆ ಚೆಕ್‌ಡ್ಯಾಮ್ ಹೆಸರಿನಲ್ಲಿ ದುಂದು ವೆಚ್ಚದ ರೂಪಕವಾಗಿ ಕಾಣುತ್ತೇವೆ.ಳ ಆಹಾರದ ದಾಸ್ತಾನುಗಳನ್ನು ಖಾಸಗಿ ಗೋದಾಮುಗಳಲ್ಲಿ ಶೇಖರಿಸಿಕೊಂಡು ಬರದ ನೆಪದಲ್ಲಿ ಬೆಲೆ ಏರಿಕೆಯನ್ನು ಮಾಡುವುದು. ಹೀಗೆ ಅನೇಕ ಕೃತಕ ರಾಜಕಾರಣದ ಬರಗಾಲವನ್ನು ಸೃಷ್ಟಿಸುವುದರ ವಿರುದ್ಧ ಜಾಥಾಗಳ ಆಯೋಜನೆ, ಬೀದಿ ನಾಟಕಗಳ ಪ್ರದರ್ಶನ, ಹಾಡು ಮತ್ತು ಸಾಹಿತ್ಯ ಪ್ರಕಟಿಸುವ ಮೂಲಕ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಅವರನ್ನು ಜಾಗೃತಿ ಗೊಳಿಸುತ್ತಿದ್ದರು. ಭೀಕರ ಬರಗಾಲದೆದುರು 'ಸಮುದಾಯ'ದ ದಶಕದ ಜಾಥಾ ಒಂದು ತಿಂಗಳುಗಳ ಕಾಲ ಕುಂದಾಪುರ ಹಾಗೂ ಬೀದರ್‌ನಿಂದ ಜಾಥಾಗಳು ಬೆಂಗಳೂರಿನವರೆಗೆ ಯಶಸ್ವಿಯಾಗಿ ಸಮಾಪ್ತಿಗೊಂಡವು.

೪.೨. ಕಾರ್ಮಿಕರ ಜಾಗೃತಿ ಮತ್ತು 'ಸಮುದಾಯ'

ಕೈಗಾರಿಕ ಕ್ಷೇತ್ರದಲ್ಲಿರುವ ಕೆಲಸಗಾರರನ್ನು ಕಾರ್ಮಿಕರು ಎಂದು ಕರೆಯುತ್ತಾರೆ. ಒಂದು ದೇಶದ ಅಭಿವೃದ್ಧಿಗೆ ಕಾರ್ಮಿಕ ವರ್ಗದ ಪಾತ್ರ ಮಹತ್ವವಾಗಿರುತ್ತದೆ. ಕಾರ್ಮಿಕರನ್ನ ಶೋಷಣೆ ಮಾಡಿದ ಸರ್ಕಾರ ಉಳಿಯಲು ಸಾಧ್ಯವಿಲ್ಲವೆಂಬುದನ್ನು ಫ್ರಾನ್ಸ್ ಹಾಗೂ ರಷ್ಯಾ ಕಾಂತ್ರಿಗಳ ಚರಿತ್ರೆಯಲ್ಲಿ ನೋಡುತ್ತೇವೆ. ಕಾರ್ಮಿಕರಲ್ಲಿ ಎರಡು ರೀತಿಯ ಗುಂಪುಗಳು ಇರುತ್ತವೆ. ಸಂಘಟಿತ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರು. ನಗರೀಕರಣ ಬೆಳೆದಂತೆ ಕಾರ್ಮಿಕ ಸಂಖ್ಯೆಯು ಹೆಚ್ಚಾಗುತ್ತದೆ. ಕಾರ್ಮಿಕರು ತಮ್ಮ ಹಕ್ಕುಗಳಿಗೋಸ್ಕರ ನಿರಂತರ ಹಾಗೂ ಈಗಲೂ ಹೋರಾಟ, ಚಳವಳಿಗಳು ನಡೆಸುತಿದ್ದಾರೆ. ಭಾರತದಲ್ಲಿಯು ಕೂಡ ಸ್ವಾತಂತ್ರ್ಯ ಚಳವಳಿ–ಏಕೀಕರಣ ಚಳವಳಿಯಲ್ಲಿ ಹಾಗೂ ಎಂಬತ್ತರ ದಶಕದಲ್ಲಿ ಕಾರ್ಮಿಕರ ಜಾಗೃತಿ ನಿರಂತರವಾಗಿ ಬೆಳೆಯುತ್ತಿರುವುದರಿಂದಾಗಿ ಕಾರ್ಮಿಕರು ಸವಲತ್ತುಗಳಿಗಾಗಿ ಮಾಲೀಕರ ವಿರುದ್ಧ ಅಥವಾ ಸರ್ಕಾರಗಳ ವಿರುದ್ಧ ಬೀದಿಗಳಿದು ಹೋರಾಟ ಮಾಡುತ್ತಾರೆ.

ಕರ್ನಾಟಕದಲ್ಲಿ ಕೋಲಾರದ ಕೆ.ಜಿ.ಎಫ್. ಗಣಿ ಕಾರ್ಮಿಕರ ಹೋರಾಟ ಬೆಂಗಳೂರಿನ ಬಿನ್ನಿಮಿಲ್ ಕಾರ್ಮಿಕರ ಹೋರಾಟ, ೧೯೭೦ರಲ್ಲಿ ಬೆಂಗಳೂರಿನ ತಾತಾಗುಣಿ ಎಸ್ಟೇಟ್ ಹೋರಾಟ, ಮೈಕೋ ಕಾರ್ಮಿಕರ ಮುಷ್ಕರ ಹಾಗೂ ೧೯೮೧ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಉಳಿವಿನ ಮುಷ್ಕರ, ಬಿ.ಪಿ.ಎಲ್ ಕಾರ್ಖಾನೆ ಕಾರ್ಮಿಕರ ಹೋರಾಟ ಕಮ್ಯುನಿಸ್ಟ್ ಪಕ್ಷದ ಎಸ್.ಸೂರ್ಯನಾರಾಯಣರಾವ್ ಕಾರ್ಮಿಕ ಚಳವಳಿಯನ್ನು ಬೆಂಗಳೂರು ಇತರ ಭಾಗದಲ್ಲಿ ಕಟ್ಟಲು ಮುಂದಾಗಿದ್ದರು. ಎನ್.ಕೆ. ಉಪಾಧ್ಯಾಯರೊಂದಿಗೆ ೧೯೮೧ ರಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಆಯ್ಕೆಯಾದ ವಿ.ಜೆ.ಕೆ.ನಾಯರ್ ೧೯೮೧ ರಲ್ಲಿ ಮೈಸೂರು ಮಿಲ್ ಮತ್ತು ಮಿನರ್ವ ಮಿಲ್‌ಗಳ ಜವಳಿ ಕಾರ್ಮಿಕರ ಸಂಘಟನೆ ಸ್ಥಾಪಿಸಿದರು. ಮೆಟಲ್ ಲ್ಯಾಂಪ್ ಕ್ಯಾಪ್

ಕಾರ್ಮಿಕರನ್ನು ಸಂಘಟಿಸಿದರು. ಜೊತೆಗೆ ಪ್ರಮುಖವಾಗಿ ವಿಜೆಕೆ ನಾಯರ್ ಅವರು ಬೆಂಗಳೂರು ಜಿಲ್ಲಾ ಹೋಟಲು ಕಾರ್ಮಿಕರ ಸಂಘಟನೆ, ೧೯೭೪ರಲ್ಲಿ ಬಲಿಷ್ಠ ಹೋರಾಟವೊಂದನ್ನು ನಡೆಸಿದರು.[೫] ನಂತರ ಹರಿಹರ ಕೇಂದ್ರವಾಗಿಟ್ಟುಕೊಂಡು ಉತ್ತರ ಕರ್ನಾಟಕದಲ್ಲಿ ಕಾರ್ಮಿಕ ಸಂಘಟನೆಗಳನ್ನು ಕಟ್ಟಲು ನಿರ್ದೇಶಿಸಿದ ಮೇರೆಗೆ, ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್, ಹರಿಹರ ತಾಲಿಫೈಬರ್ಸ್, ಹುಬ್ಬಳ್ಳಿಯಲ್ಲಿ ಸುಂದತ್ತಾ, ಫುಡ್ಸ್ ಅಂಡ್ ಪೈಬರ್ಸ್, ದಾಂಡೇಲಿ ಫೆರೋ ಅಲ್ಲೋಯ್ಸ್, ದಾಂಡೇಲಿಯ ವೇಸ್ಟ್ ಕೋಸ್ಟ್ ಪೇಪರ್ ಮಿಲ್ಸ್, ಹಂಗಾದ ಕಟ್ಟಾ ಮತ್ತು ನೆಟ್ಟಣಗಳ ಇಂಡಿಯನ್ ಪ್ಲೈವುಡ್ ಮ್ಯಾನುಫಾಕ್ಚರಿಂಗ್ ಘಟಕಗಳು, ಬೆಳಗಾವಿಯ ಇಂಡಾಲ್ ಕಾರ್ಮಿಕರ ಸಂಘಟನೆಗಳನ್ನು ಮಾಡಿದರು. ಹೀಗೆ (ಸಿ.ಐ.ಟಿ.ಯು)ಸೆಂಟರ್ ಆಫ್ ಇಂಡಿಯನ್ ಟ್ರೇಂಡ್ ಯೂನಿಯನ್ ಸೂರ್ಯನಾರಾಯಣರಾವ್ ಹಾಗೂ ವಿಜೆಕೆ ನಾಯರ್ ಅವರು ಎರಡು ಕಣ್ಣುಗಳಾಗಿ ಎಂಬತ್ತರ ದಶಕದಲ್ಲಿ ಕಾರ್ಮಿಕ ಚಳವಳಿಯನ್ನು ಕಟ್ಟಿದ್ದರು. 'ಸಮುದಾಯ' ಸಂಘಟನೆಯು ಕಾರ್ಮಿಕರಲ್ಲಿ ಜಾಗೃತಿ ಉಂಟಾಗಲು ಪ್ರಮುಖ ನಾಟಕ ಮಾಕ್ಸಿಂಗಾರ್ಕಿ ಕಾದಂಬರಿಯಾದ ಮದರ್ ಆಧಾರಿತ ನಾಟಕ 'ತಾಯಿ' ೧೯೭೭ರಿಂದ ಬೆಂಗಳೂರು–ಮೈಸೂರು, ಮಂಗಳೂರು, ತುಮಕೂರು, ಧಾರವಾಡ ಮುಂತಾದ ಕಡೆ 'ಸಮುದಾಯ' ಸಂಘಟನೆಯಿಂದ ಪ್ರದರ್ಶನ ಮಾಡುತ್ತಿದ್ದರು. ಇದಕ್ಕೆ ಸಿ.ಐ.ಟಿ.ಯು ಮತ್ತು ಕಮ್ಯುನಿಸ್ಟ್ ಪಕ್ಷಗಳ ಹಾಗೂ ಸಾಮೂಹಿಕ ಸಂಘಟನೆಯವರೇ ಪ್ರಮುಖರು ಪ್ರೇಕ್ಷಕರಾಗಿದ್ದರು. ಆದಕಾರಣ 'ತಾಯಿ', 'ಗೆಲಿಲಿಯೋ' ಮುಂತಾದ ನಾಟಕಗಳಿಂದ ಕಾರ್ಮಿಕ ವರ್ಗವು ಒಂದಾಗಿ ಹೋರಾಟ ಅತ್ಯಗತ್ಯ ಎಂಬ ಜಾಗೃತಿಯನ್ನು ಮೂಡಿಸಿದ್ದು, ಈ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಹೆಗ್ಗಳಿಕೆ.

೮೮ ದಿನಗಳ ಮೈಕೋ ಮುಷ್ಕರ

ಮೈಕೋ ಕಾರ್ಮಿಕರ ಚಳವಳಿ ಕರ್ನಾಟಕದ ತುರ್ತುಪರಿಸ್ಥಿತಿ ನಂತರದ ಕಾರ್ಮಿಕರ ಜಾಗೃತಿ ಹೋರಾಟ ಮತ್ತು ಪ್ರಜಾಸತ್ತಾತ್ಮಕ ಚಳವಳಿಯ ಅಲೆಯಲ್ಲಿ ಕಂಪನಿಯಾದ ಬೋಶ್ ಒಂದು ಘಟಕ ಕಂಪೆನಿಯಾಗಿ ೧೯೫೧ರಲ್ಲಿ ಬೆಂಗಳೂರಿನಲ್ಲಿ ಆರಂಭವಾಯಿತು. ೧೯೫೭ರಷ್ಟು ಹಿಂದೆಯೇ ಅಲ್ಲಿನ ಕಾರ್ಮಿಕರು ಸಂಘಟಿತರಾಗಿದ್ದರೂ, ಅಲ್ಲಿನ ಕಾರ್ಮಿಕರ ಸ್ಥಿತಿಯು ಚಿಂತಾಜನಕವಾಗಿತ್ತು. ೧೯೫೭ ರಿಂದ ೧೯೭೮ರ ಅವಧಿಯನ್ನು ಮೈಕೋ ಕಾರ್ಮಿಕರ ದಬ್ಬಾಳಿಕೆಯ ಅವಧಿ ಎಂದೇ ಕರೆದಿದ್ದು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅದು ತಾರಕಕ್ಕೇರಿತ್ತು. ಸತತವಾಗಿ ಹೆಚ್ಚುತ್ತಿದ್ದ ಕೆಲಸದ ಒತ್ತಡ, ಅತ್ಯಂತ ಶೋಷಕ ಅಧಿಕಾರಶಾಹಿ ಆಡಳಿತಮಂಡಳಿಯ ವಿರುದ್ಧ ಕಾರ್ಮಿಕರು ಸೂರ್ಯನಾರಾಯಣರಾವ್ (ಸೂರಿ) ಅವರ ಸಮರ್ಥ ಮತ್ತು ಸಮರಶೀಲ ನಾಯಕತ್ವದಲ್ಲಿ ಬಂಡೆದ್ದರು.

ಸಂಬಳ, ಬೋನಸ್ ಮುಂತಾದ ಆರ್ಥಿಕ ಬೇಡಿಕೆಗಳಿಗೆ ಬದಲಾಗಿ, ಉತ್ಪಾದನಾ ಸಂಬಂಧ ವಿಷಯಗಳ ಬಗ್ಗೆ ಕಾರ್ಮಿಕರು ಮುಷ್ಕರ ಹೂಡಿದ್ದು ಬಹುಶಃ ಕರ್ನಾಟಕದ ಕಾರ್ಮಿಕ ಚಳವಳಿಯ

ಚರಿತ್ರೆಯಲ್ಲೇ ಮೊದಲು. ಕಡಿಮೆ ಸಮಯದಲ್ಲಿ ಹೆಚ್ಚು ಉತ್ಪಾದನೆ ಮಾಡುವಂತೆ ಒತ್ತಾಯಿಸುವುದು, ಒಂದು ಯಂತ್ರದ ಬದಲಿಗೆ ಎರಡು ಯಂತ್ರಗಳ ನಿರ್ವಹಣೆಗೆ ಒತ್ತಾಯಿಸುವುದು ಆ ಮೂಲಕ ನಿರ್ದಿಷ್ಟ ಕೆಲಸಕ್ಕೆ ಇನ್ಸೆಂಟೀವ್ (ಪ್ರೋತ್ಸಾಹ ಧನ) ಕಡಿಮೆ ಮಾಡುತ್ತಾ ಹೋಗುವುದು– ಇವೆಲ್ಲವನ್ನು ಏಕಪಕ್ಷೀಯವಾಗಿ ಮಾಡುವುದನ್ನು ಕಾರ್ಮಿಕರು ಪ್ರತಿಭಟಿಸಿದರು. ಮೈಕೋ ಕಾರ್ಖಾನೆಯಲ್ಲಿ ಕಾರ್ಮಿಕರು ಮುಷ್ಕರ ಕೈಗೊಂಡು ಎರಡು ವಾರಗಳ ಲಾಕೌಟ್, ಎರಡು ತಿಂಗಳ 'ವರ್ಕ್ ಟು ರೂಲ್' ೮೮ದಿನಗಳ ದೀರ್ಘ ಮುಷ್ಕರ, ೧೯೭೭ ಇಡೀ ವರ್ಷ ಮೈಕೋ ಕಾರ್ಮಿಕರು ಮತ್ತು ಮ್ಯಾನೇಜ್‌ಮೆಂಟ್ ನಡುವೆ ಗೆರಿಲ್ಲಾ ಯುದ್ಧದಂತಹ ಪರಿಸ್ಥಿತಿ ಇತ್ತು. ಮುಷ್ಕರದ ಮೇಲೆ ಸರ್ಕಾರದ ನಿಷೇಧ, ಕಾಂಗ್ರೆಸ್ ಸರ್ಕಾರ–ಮ್ಯಾನೇಜ್‌ಮೆಂಟ್ ಗೂಂಡಾಗಳ ದಾಳಿ, ಯೂನಿಯನ್ ಒಡೆಯುವ ತಂತ್ರಗಳನ್ನು ಎದುರಿಸಿ ಹಿಮ್ಮೆಟ್ಟಿಸಲಾಯಿತು.

ಮೈಕೋ ಹೋರಾಟಕ್ಕೆ ಇಡೀ ಬೆಂಗಳೂರಿನ ಕಾರ್ಮಿಕ ವರ್ಗದ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಸೌಹಾರ್ದ ಬೆಂಬಲ, ಬೆಂಗಳೂರು ಬಂದ್‌ಗೆ ಎಡಪಕ್ಷಗಳ ರಾಜಕೀಯ ಬೆಂಬಲ ದೊರೆಯಿತು. ಈ ಹೋರಾಟದ ಅವಧಿ ಮೈಕೋ ಕಾರ್ಮಿಕರಿಗೆ ವರ್ಗ ಜಾಗೃತಿ, ವರ್ಗ ರಾಜಕೀಯ, ವರ್ಗ ಸೌಹಾರ್ದತೆ ಮತ್ತು ರೈತ ಕಾರ್ಮಿಕರ ಐಕ್ಯತೆಯ ಬಗ್ಗೆಯೂ ಅರಿವನ್ನು ಮೂಡಿಸಿದ್ದು ವಿಶೇಷವಾಗಿತ್ತು.[೬] ೧೯೮೧ರಲ್ಲಿ ನರಗುಂದ–ನವಲಗುಂದದಿಂದ ಬೆಂಗಳೂರಿನ ವರೆಗೆ ಬಂದ ರೈತ ಹೋರಾಟಗಾರರಿಗೆ ಆಹಾರ ಒದಗಿಸಿದ್ದು, ಸೂರಿಯವರ ನಾಯಕತ್ವದಲ್ಲಿ ನಡೆದ ಐಟಿಸಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ, ೧೯೮೩ರ ಚುನಾವಣೆಯಲ್ಲಿ ಜನತಾ ಎಡಪಕ್ಷಗಳ ಮೈತ್ರಿಕೂಟದ ಅಭ್ಯರ್ಥಿಗಳಿಗೆ ಬೆಂಬಲ ಇದಕ್ಕೆ ಉದಾಹರಣೆಗಳು. ಇದರಿಂದಾಗಿ ಇಂದಿರಾ ಕಾಂಗ್ರೆಸ್ ಬೆಂಗಳೂರಿನಲ್ಲಿ ಒಂದು ಸೀಟನ್ನೂ ಗೆಲ್ಲಲಿಲ್ಲ. ೧೯೮೪ರಿಂದ ೧೯೯೬ರ ಅವಧಿ ಮೈಕೋ ಕಾರ್ಮಿಕರ ಪಾಲಿಗೆ ಸುವರ್ಣ ಅವಧಿಯೇ ಆಗಿತ್ತು.[೭] ಈ ಅವಧಿಯಲ್ಲಿ ಸಂಬಳ ಏರಿಕೆ ಮತ್ತು ಇತರ ಹಲವು ಸವಲತ್ತುಗಳನ್ನು ಈ ಕಾರ್ಮಿಕರ ಜಾಗೃತಿಯ ಚಳವಳಿಯಿಂದ ಪಡೆದುಕೊಂಡರು. ಹೀಗೆ ಸಮುದಾಯ ನಾಟಕಗಳಿಂದ ಜಾಗೃತಿಯಾದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಸಂಘಟಿತ ಹೋರಾಟದಿಂದ ಪಡೆದುಕೊಳ್ಳುವುದನ್ನು ಕಲಿತರು.

ಕಾರ್ಮಿಕರ ಜಾಗೃತಿಯಿಂದ ಸಾರ್ವಜನಿಕ ಕ್ಷೇತ್ರದ ೭೭ ದಿನಗಳ ಮುಷ್ಕರ.

೧೯೮೦–೮೧ ರಲ್ಲಿ ನಡೆದ ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಕಾರ್ಮಿಕರ ೭೭ ದಿನಗಳ ಕಾರ್ಮಿಕರ ಮುಷ್ಕರ ಐತಿಹಾಸಿಕವಾದದ್ದು. ತುರ್ತುಪರಿಸ್ಥಿತಿಯಿಂದಾಗಿ ತಡೆ ಹಿಡಿಯಲಾಗಿದ್ದ ವೇತನ ಪರಿಷ್ಕರಣೆ ತಡೆಗೆ ಸರ್ಕಾರದ ಆದೇಶ ಆದ ಮೇಲೆ ಬಿ.ಎಚ್.ಇ.ಎಲ್ ನಲ್ಲಿ ಆದ ಒಪ್ಪಂದದ ಹಿನ್ನೆಲೆಯಲ್ಲಿ ನಡೆದಂಥ ಮುಷ್ಕರದಲ್ಲಿ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಐದು ಜನ ಕಾರ್ಮಿಕರು ತೋರಿಸಿದ ಅಪ್ರತಿಮ ಐಕ್ಯತೆ, ಸ್ಥೈರ್ಯ ಇಡೀ ಬೆಂಗಳೂರು ನಗರದಲ್ಲಿ ಜೆ.ಎ.ಎಫ್(Joint action french)ವರಿಗೂ ಸಮಿತಿಗಳು ಕೆಲಸ ಮಾಡಿದ

ರೀತಿ ಕಾರ್ಮಿಕ ಜಾಗೃತಿ ಚಾರಿತ್ರಿಕವಾದದ್ದು. ಈ ಹೋರಾಟದಲ್ಲಿ ಮೂವರ ಬಲಿದಾನಕ್ಕೆ ಸೌಹಾರ್ದ ಬೆಂಬಲವಾಗಿ ಬೆಂಗಳೂರು ಬಂದ್ ಮತ್ತು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ, ನರಗುಂದ-ನವಲಗುಂದ ರೈತ ಜಾಥಾಕ್ಕೆ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸ್ವಾಗತ, ಬೆಂಬಲ ರಾಜ್ಯದ ದುಡಿಯುವ ಜನತೆ ಹೋರಾಟದಲ್ಲಿ ಪಾಲ್ಗೊಂಡು ಬೆಂಗಳೂರು ಕಾರ್ಮಿಕರ ಬಂದ್ ಯಶಸ್ವಿ ಮಾಡಿದರು.[೭] ಹೀಗೆ ಕಾರ್ಮಿಕ ಮುಖಂಡರಾದ ಸಿಂಪ್ಸನ್ ಸೋನ್ಸ್, ಶಾಂತರಾಂ ಪೈ, ಬಿ.ಮಾಧವ, ಕೆ.ಆರ್.ಶ್ರೀಯಾನ್, ವಿ.ಜೆ.ಕೆ, ನಾಯರ್, ಸೂರ್ಯನಾರಾಯಣರಾವ್, ವಿ.ಎಂ.ಗೋವಿಂದನ್, ಸಿ.ನಂಜುಂಡಪ್ಪ, ಶವರಿದಾಸ್, ಎಂ.ಕೆ.ಭಟ್. ಪಿ.ರಾಮಚಂದ್ರರಾವ್ ಮುಂತಾದ ಕಮ್ಯುನಿಸ್ಟ್ ಧುರೀಣರೇ ಕಾರ್ಮಿಕರ ಸಂಘಟನೆಯ ಮುಂಖಡತ್ವ ವಹಿಸುತ್ತಿದ್ದರು. ಇವರಿಗೆ ಬೆಂಬಲವಾಗಿ ಕ್ರಾಂತಿಗೀತೆ, ಬೀದಿನಾಟಕ, ರಂಗನಾಟಕ, ಸಾಂಸ್ಕೃತಿಕ ವಿಚಾರ ಸಂಕಿರಣಗಳಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲವನ್ನು ನೀಡಿ ಚಳವಳಿಗೆ ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ-ಮಹಿಳೆಯರನ್ನು ಸಂಘಟಿಸಲು 'ಸಮುದಾಯ' ಒಂದು ಸಾಂಸ್ಕೃತಿಕ ವೇದಿಕೆಯಾಗಿ ಕಾರ್ಯವನ್ನು ರೂಪಿಸುತಿತ್ತು.

೪.೩. ದಲಿತ ಪ್ರಜ್ಞೆ ಹಾಗೂ 'ಸಮುದಾಯ'

ಎಪ್ಪತ್ತು ಹಾಗೂ ಎಂಬತ್ತರ ದಶಕವನ್ನು ಚಳವಳಿಗಳ ಕಾಲವೆಂದು ಚಾರಿತ್ರಿಕವಾಗಿ ಗುರುತಿಸಲಾಗುತ್ತದೆ. ಏಕೆಂದರೆ ಎಪ್ಪತ್ತರ ದಶಕ 'ಸಮುದಾಯ' ಮತ್ತು ದಲಿತ ಸಂಘರ್ಷ ಸಮಿತಿ ಒಂದಕ್ಕೊಂದು ಮೇಳೈಸಿಕೊಂಡು ಹುಟ್ಟಿಕೊಂಡ ಸಂಘಟನೆಗಳು ಎಂದು ಗುರುತಿಸುತ್ತೇವೆ. 'ಸಮುದಾಯ' ಸಂಘಟನೆ ಅಧಿಕೃತವಾಗಿ ೧೯೭೫ರಲ್ಲಿ ಪ್ರಾರಂಭವಾದರೆ, ದಲಿತ ಸಂಘರ್ಷ ಸಮಿತಿಯು ಅಧಿಕೃತವಾಗಿ ೧೯೭೭ರಲ್ಲಿ ಭದ್ರಾವತಿಯಲ್ಲಿ ಸಮ್ಮೇಳನವಾಗಿ ರಾಜ್ಯಸಮಿತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ದಲಿತ ಸಂಘರ್ಷ ಸಮಿತಿ ಹುಟ್ಟಲು ಚಾರಿತ್ರಿಕವಾಗಿ ಸ್ವಾತಂತ್ರ್ಯ ನಂತರವೇ ವಿದ್ಯಾವಂತ ದಲಿತ ಸಮುದಾಯದವರು. ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶ, ಕೇರಳ, ತಮಿಳುನಾಡು ದಲಿತ ಚಳವಳಿಯ ಜಾಗೃತಿಯಿಂದ ಕರ್ನಾಟಕದಲ್ಲಿ ಕೂಡ ದಲಿತ ಚಳವಳಿ ಕಟ್ಟಲು ಒಂದು ಶೋಷಿತರ ಸಮಿತಿ ಅತ್ಯಗತ್ಯ ಎಂದು ಶಿಕ್ಷಣ ಪಡೆದ ಯುವಕರಲ್ಲಿ ಪ್ರಜ್ಞೆ ಮೂಡುತ್ತದೆ. ಇದು ಪ್ರಮುಖವಾಗಿ ಬಿ.ಆರ್.ಅಂಬೇಡ್ಕರ್, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಜ್ಯೋತಿ ಬಾ ಪುಲೆ, ಶಾಹು ಮಹಾರಾಜ್, ನಾರಾಯಣ ಗುರು, ಕಂದುಕೂರಿನ ವೀರೇಶಲಿಂಗಂ ಪಂತಲು ಎಪ್ಪತ್ತರ ದಶಕದಲ್ಲಿ ಶಿಕ್ಷಣ ಪಡೆದ ದಲಿತ-ವಿದ್ಯಾರ್ಥಿ-ಯುವಜನರಲ್ಲಿ ಅಸ್ಪೃಶ್ಯತೆ, ಶೋಷಣೆ ಹಾಗೂ ದಲಿತರ ಹಕ್ಕುಗಳ ಬಗ್ಗೆ ಪ್ರಜ್ಞೆಯನ್ನು ಮೂಡಿಸಿಕೊಂಡಿದ್ದ ಪರಿಣಾಮವಾಗಿ ದಲಿತ ಸಂಘಟನೆಗಳು ಅರವತ್ತರ ದಶಕದಲ್ಲಿ ಪ್ರಾರಂಭಿಸಿದರು. ಮುಂಬೈ ಕರ್ನಾಟಕದ ಪ್ರಭಾವದಿಂದ ಧಾರವಾಡದಲ್ಲಿ ಅರವತ್ತರ ದಶಕದ ಕೊನೆಯ ಭಾಗದಲ್ಲಿ 'ದಲಿತ ಪ್ಯಾಂಥರ್ಸ್' ಸಂಘಟನೆ ಬಸವರಾಜು ಮಾಲಗತ್ತಿ ಅವರು ಕಟ್ಟಲು ಚಿಂತನೆ ನಡೆಸಿದರು[೮]. ೧೯೭೪ರಲ್ಲಿ ಒಂದು ಸಮಿತಿ ಮಾಡಿ ಅದರ ಅಧ್ಯಕ್ಷರು ಕೂಡ

ಆದರು. ಜೊತೆಗೆ ಹೈದ್ರಾಬಾದ್ ಕರ್ನಾಟಕದ ದಲಿತ ಸಂಘಟನೆ ಪ್ರಾರಂಭವಾಗಲು ಆಂಧ್ರ ಪ್ರದೇಶದ ಗದ್ದರ್ ಸಾಂಸ್ಕೃತಿಕ ಚಳವಳಿಯ ಪ್ರಭಾವವು ಇತ್ತು. ಉತ್ತರ ಕರ್ನಾಟಕದಲ್ಲಿ ೧೯೬೮ರಲ್ಲಿ ಸಮಯದಲ್ಲಿಯೇ ಬಿ.ಶ್ಯಾಮಸುಂದರ ಎಂಬುವವರ ನಾಯಕತ್ವದಲ್ಲಿ 'ಭೀಮಸೇನೆ' ಎಂಬ ಸಂಘಟನೆ ಸ್ಥಾಪಿತಗೊಂಡಿತ್ತು. ಇದು ಕರ್ನಾಟಕ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲೂ ಕೂಡ ತನ್ನ ಶಾಖೆಗಳನ್ನು ತೆರೆದು ಭೀಮಸೇನೆಯ ಕಾರ್ಯಕರ್ತರಿಗೆ ಸಮವಸ್ತ್ರವನ್ನು ರೂಪಿಸಲಾಗಿತ್ತು.

ಧಾರವಾಡ ಭಾಗದಲ್ಲಿ ರಾಯಣ್ಣ ನವರು 'ಬಾಂಸೆಪ್', 'ಐ ಎಸ್-೪' ಸಂಘಟನೆಯನ್ನು ಹುಟ್ಟುಹಾಕಿದ ಈ ಸಂಘಟನೆಯು ದಲಿತ ಪ್ಯಾಂಥರ್ ಸಂಘಟನೆಗೆ ಬೆಂಬಲಿಸಿತು. ಇದಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ವಾಘಮಾರೆ, ಮಾದರ, ರಾಯಣ್ಣನವರು ಹಾಗೂ ರಾಜಶೇಖರ್ ಮೂರ್ತಿಯವರ ಬೌದ್ಧಿಕ ಮತ್ತು ಭೌತಿಕ ಬೆಂಬಲ ಕೂಡ ಈ ಸಂಘಟನೆಗೆ ಇತ್ತು. ಜೊತೆಗೆ ಶಿವಮೊಗ್ಗದ ಭದ್ರಾವತಿಯಲ್ಲಿ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಬಿ.ಕೃಷ್ಣಪ್ಪ ಅವರ ನೇತೃತ್ವದಲ್ಲಿ 'ದಲಿತ ಸಂಘರ್ಷ ಸಮಿತಿ' ಎಂಬುದು ಸ್ಥಳೀಯವಾಗಿ ಜಾರಿಗೆ ಬಂದಿತ್ತು. ಇದರಲ್ಲಿ ಚಂದ್ರಪ್ರಸಾದ್ ತ್ಯಾಗಿ, ಈರಯ್ಯ, ರಾಜಣ್ಣ, ಬೋರಯ್ಯ, ಎಸ್.ಗಿರಿಯಪ್ಪರವರ ಸದಸ್ಯತ್ವ ಇತ್ತು. ಈ ಸಂಘಟನೆ ೧೯೭೪ರಲ್ಲಿ ಸ್ಥಾಪನೆಯಾಗಿದ್ದು ಸ್ಥಳೀಯವಾಗಿ ಪ್ರತಿಭಟನೆಯನ್ನು ಮಾಡುತ್ತಿತ್ತು. ೧೯೭೩ರಲ್ಲಿ 'ಬೂಸಾ ಪ್ರಕರಣ' ಬೂಸಾ ಸಾಹಿತ್ಯ ಎಂದರೆ ಟೊಳ್ಳು ಸಾಹಿತ್ಯ ಎಂದು ಬಸವಲಿಂಗಪ್ಪ ೧೯೭೩ ನವೆಂಬರ್ ೧೯ರಂದು ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆದ 'ಹೊಸ ಅಲೆ' ಎಂಬ ಕಾರ್ಯಕ್ರಮದಲ್ಲಿ ದಲಿತ ರಾಜಕಾರಣಿ ಮತ್ತು ಪೌರಾಡಳಿತ ಸಚಿವರಾಗಿದ್ದರು ಬಿ.ಬಸವಲಿಂಗಯ್ಯ ನವರು 'ಕನ್ನಡ ಸಾಹಿತ್ಯ ಬೂಸಾ' ಎಂಬ ಹೇಳಿಕೆಯ ಪ್ರಕರಣವಾಯಿತು. ಈ ಕಾರ್ಯಕ್ರಮದಲ್ಲಿ ಮೈಸೂರಿನ ಸಮಾಜವಾದಿ ರಾಮಮನೋಹರ ಲೋಹಿಯಾರವರ ಚಿಂತನೆಯ 'ಸಮಾಜವಾದಿ ಯುವಜನ ಸಭಾ' ಪ್ರಗತಿಪರ ಚಿಂತಕರಾಗಿದ್ದ ಕೆ.ರಾಮದಾಸ್, ಪೂರ್ಣಚಂದ್ರ ತೇಜಸ್ವಿ, ಪಿ.ಮಲ್ಲೇಶ್, ಬಿ.ಕೃಷ್ಣಪ್ಪ, ದೇವನೂರು ಮಹಾದೇವ ಸಹಭಾಗಿತ್ವದಲ್ಲಿ ಈ ಸಂಘಟನೆಯು ಬ್ರಾಹ್ಮಣಶಾಹಿ ವ್ಯವಸ್ಥೆಯನ್ನು ವಿರೋಧಿಸಿ ಬಿ.ಬಸವಲಿಂಗಪ್ಪ ಈ ಕಾರ್ಯಕ್ರಮದ ಉದ್ಘಾಟನಾ ಭಾಷಣಕಾರರಾಗಿ ಕರೆದಿದ್ದರ್ರು. 'ಸಮುದಾಯ', ಸಂಘಟನೆ ಹಾಗೂ ಸಮಾಜವಾದಿ ಯುವಜನಾ ಸಭಾ ಪ್ರಗತಿಪರರೆಲ್ಲರೂ ಬೆಂಬಲವಾಗಿ ಜಿಲ್ಲಾವಾರು ಇದ್ದ ದಲಿತ ಸಂಘಟನೆಗಳನ್ನು ಒಂದು ರಾಜ್ಯಮಟ್ಟದ ಸಂಘಟನೆಯಾಗಲು ಪ್ರೇರಣೆ ನೀಡಿದರು. ಇದರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಡಿ.ಎಂ.ತಿಮ್ಮರಾಯಪ್ಪ, ಓ.ಶ್ರೀಧರನ್ ನೇತೃತ್ವದಲ್ಲಿ 'ದಲಿತ ಕ್ರಿಯಾ ಸಮಿತಿ' ರಚಿಸಿದರು. ಕೋಲಾರದಲ್ಲಿ ಕೆ.ರಾಮಯ್ಯ. ಎನ್.ವೆಂಕಟೇಶರ ಮುಂದಾಳತ್ವದ 'ಚಂಡಾಳರ ಸಂಘ', ಮೈಸೂರಿನಲ್ಲಿ 'ಅಂಬೇಡ್ಕರ್ ಸಂಘ' ೧೯೭೫ರಲ್ಲಿ ಮೈಸೂರು ಜಿಲ್ಲೆಯ ಅಶೋಕಪುರಂ ನಲ್ಲಿರುವ ಸಿದ್ಧಾರ್ಥ ಹಾಸ್ಟೆಲ್‌ನಲ್ಲಿ 'ಅಖಿಲ ಕರ್ನಾಟಕ ದಲಿತ ಸಂಸ್ಥೆ'ಗಳನ್ನು ಒಂದು ಏಕೀಕೃತ ಸಂಘಟನೆಯಲ್ಲಿ ವಿಲೀನಗೊಳಿಸಲು ಸಭೆ ಕರೆದರು. ಈ ಸಭೆಯಲ್ಲಿ ಬಿ.ಕೃಷ್ಣಪ್ಪ, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಡಿ.ಎಂ.ತಿಮ್ಮರಾಯಪ್ಪ, ದೇವಯ್ಯ ಹರವೆ,

ಹೆಚ್.ಗೋವಿಂದಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಇಂದೂಧರ ಹೊನ್ನಾಪುರ, ಎನ್.ವೆಂಕಟೇಶ್, ರಾಮದೇವರಾಕೆ, ಸಿ.ಮುನಿಯಪ್ಪ, ಶಿವಾನೆ ಗಣೇಶನ್, ಕೆ.ಬಿ.ಸಿದ್ಧಯ್ಯ ಮುಂತಾದವರು ಹಾಜರಾಗಿದ್ದರು.

ಈ ಸಮಯದಲ್ಲಿ ಬಿ.ಬಸವಲಿಂಗಪ್ಪನವರು ಬೂಸಾ ಪ್ರಕರಣದಿಂದ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರಿಂದಾಗಿ ಜೊತೆಗೆ ವಿವಿಧ ಜಿಲ್ಲೆಗಳಲ್ಲಿ ಸ್ಥಳೀಯವಾಗಿದ್ದ ದಲಿತ ಸಂಘಟನೆಗಳನ್ನು ಒಂದು ವೇದಿಕೆಗೆ ತಂದು ಒಂದೇ ಹೆಸರಿನ ಸಂಘಟನೆಯನ್ನು ಚಾಲನೆಗೆ ತರಲು ಪ್ರಯತ್ನಿಸುತ್ತಾರೆ. ಇದರಿಂದ 'ಕರ್ನಾಟಕ ದಲಿತ ಲೇಖಕ ಕಲಾವಿಧರ ಬಳಗ' (ದ.ಲೇ.ಕ.ಬ) ಮೂರು 'ದಲಿತ ಸಾಹಿತ್ಯ ಸಮ್ಮೇಳನ'ಗಳ ಮೂಲಕ ನೆರವೇರುತ್ತದೆ.[೮] ೧೯೭೬ ಡಿಸೆಂಬರ್ ೧೦ರಿಂದ ೧೧ವರೆಗೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮುಂದಾಳತ್ವ ಬಿ.ಕೃಷ್ಣಪ್ಪ ಎರಡನೆಯದು ೧೯೭೭ರ ಕೋಲಾರದಲ್ಲಿ 'ದಲಿತ ಸಾಹಿತ್ಯ ಸಮ್ಮೇಳನ' ಮುಂದಾಳತ್ವ ಕೆ.ರಾಮಯ್ಯ, ಎನ್.ವೆಂಕಟೇಶ್ ಅವರು ರಾಜ್ಯಸಮಿತಿ ಆಗಲಿಲ್ಲ ಕೊನೆಯಾಗಿ ೧೯೭೭. ಜೂನ್‌ನಲ್ಲಿ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಎಂ.ಡಿ.ಗಂಗಯ್ಯನವರ ನೇತೃತ್ವದಲ್ಲಿ ನಡೆದ ಮೂರನೇ 'ದಲಿತ ಸಾಹಿತ್ಯ ಸಮ್ಮೇಳನದಲ್ಲಿ ದಲಿತರ ಏಕೀಕೃತ ದಲಿತ ರಾಜ್ಯ ಸಂಘಟನೆ ಸ್ಥಾಪನೆಯ ಕನಸು ನನಸಾಯಿತು. ಈ ಸಮ್ಮೇಳನದಲ್ಲಿ ಎಲ್ಲಾ ದಲಿತ ಚಿಂತಕರು ಮತ್ತು ಹೋರಾಟಗಾರರು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದ ಸ್ಥಳೀಯ(ಘಟಕ) ದಲಿತ ಸಂಘಟನೆಗಳನ್ನು ಪರೀಶೀಲಿಸಿ ಭದ್ರಾವತಿಯ ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ಎನ್.ಗಿರಿಯಪ್ಪ ಅವರ ಸಂಚಾಲಕತ್ವದಲ್ಲಿ ಸ್ಥಾಪನೆಯಾಗಿದ್ದ 'ದಲಿತ ಸಂಘಟನೆ ಸಮಿತಿ'ಯನ್ನು ರಾಜ್ಯ ಮಟ್ಟದ ದಲಿತ ಸಂಘಟನೆಯಾನ್ನಾಗಿಸಿ ಕೊಳ್ಳಬೇಕೆಂದು ಎಲ್ಲರೂ ಸೇರಿ ಬಹುಮತದಿಂದ ತೀರ್ಮಾನಿಸಿದರು. ನಂತರ ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮಗಳಲ್ಲಿ ತಮ್ಮದೇ ಆದ ದಲಿತ ಸಮಿತಿಗಳ ಶಾಖೆಗಳನ್ನು ಸ್ಥಾಪಿಸಿದರು. ಇದು ಮುಂದೆ ಬಲಿಷ್ಟವಾಗಿ ಬೆಳೆಯಿತು. ಇದು ದಲಿತ ಫ್ಯಾಂಥರ್‌ನಿಂದ ಪಡೆದಿದ್ದ ಸಂವಿಧಾನದ ಆಶೋತ್ತರಗಳಂತೆ ನಡೆಯಿತು.

ದಲಿತ ಸಂಘರ್ಷ ಸಮಿತಿಯ ಉದ್ದೇಶಗಳು

ದಲಿತ ಸಂಘರ್ಷ ಸಮಿತಿಯು ಮೊದಲಿಗೆ ದಲಿತರಲ್ಲಿ ಸ್ವಾಭಿಮಾನ ಮೂಡಿಸುವ ಗುರಿ ಹೊಂದಿತು. ಏಕೆಂದರೆ ಶತಶತಮಾನಗಳಿಂದ ಬ್ರಾಹ್ಮಣಶಾಹಿ ವ್ಯವಸ್ಥೆಯಿಂದ ಶೋಷಣೆ-ದಬ್ಬಾಳಿಕೆಗಳಿಗೆ ಗುರಿಯಾದ ದಲಿತರ ರಕ್ಷಣೆ ಹಾಗೂ ಬಿ.ಆರ್.ಅಂಬೇಡ್ಕರ್ ನೀಡಿದ ಸಂವಿಧಾನಾತ್ಮಕ ಹಕ್ಕುಗಳ ಪಡೆಯಲು ಹೋರಾಟ ಅತ್ಯಗತ್ಯವಾಗಿತ್ತು.[೯] ಈ ದಲಿತ ಸಂಘರ್ಷ ಸಮಿತಿಯ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ.

೧. ಅಸ್ಪೃಶ್ಯತೆ ನಿರ್ಮೂಲನೆ.

೨. ದಲಿತರು ತಲೆಯ ಮೇಲೆ ಮಲ ಹೋರುವ ಪದ್ಧತಿ ನಿಷೇಧ.

೩. ಭೂಮಿವಾದ ಹಾಗೂ ಭೂಮಿಯನ್ನು ಪಡೆಯುವ ಉದ್ದೇಶ.

೪. ಹೆಚ್ಚಿನ ನ್ಯಾಯಬದ್ಧ ಕೂಲಿಗೆ ಆಗ್ರಹ.

೫. ಜೀತ ಪದ್ಧತಿಯನ್ನು ತೊಡೆದು ಹಾಕುವುದು.

೬. ಹೆಂಡವನ್ನು ನಿಲ್ಲಿಸಿ ದಲಿತ ಮಕ್ಕಳಿಗೆ ಹೋಬಳಿಗೊಂದು ವಸತಿ ಶಾಲೆ ಮಂಜೂರು ಮಾಡಬೇಕು.

೭. ಅಂತರಜಾತೀಯ ವಿವಾಹ ಪ್ರೋತ್ಸಾಹ.

೮. ದಲಿತ ಯುವತಿ-ಮಹಿಳೆಯರ ಮೇಲೆ ಮೇಲ್ವರ್ಗಗಳ ಅತ್ಯಾಚಾರವನ್ನು ತಡೆಗಟ್ಟುವಿಕೆ.

೯. ದೇವದಾಸಿ ಪದ್ಧತಿ, ಬೆತ್ತಲೆ ಸೇವೆಗಳ ನಿರ್ಮೂಲನೆ ಹಾಗೂ ದೇವದಾಸಿ ಮಕ್ಕಳಿಗೆ ವಿಶೇಷ ವಸತಿ ಶಾಲೆಗಳ ಸ್ಥಾಪನೆ.

೧೦. ದಲಿತರ ಕೊಲೆ, ಸಾಮಾಜಿಕ ಬಹಿಷ್ಕಾರ-ದೌರ್ಜನ್ಯಗಳನ್ನು ತಡೆಯಲು ವಿಶೇಷ ನ್ಯಾಯಾಲಯಗಳ ಸ್ಥಾಪನೆ.

೧೧. ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರುಗಳ ತತ್ವಸಿದ್ಧಾಂತಗಳನ್ನು ಪ್ರಚಾರ ಮಾಡುವುದು.

'ಸಮುದಾಯ'-ದಲಿತ ಸಂಘಟನೆಯನ್ನು ಗಟ್ಟಿಗೊಳಿಸಿದ ನಾಟಕಗಳು

'ಸಮುದಾಯ' ಸಂಘಟನೆಯ ಮೊದಲ ನಾಟಕವಾದ 'ಹುತ್ತವ ಬಡೆದರೆ' ನಾಟಕವು ಕೆ.ವಿ.ನಾರಾಯಣ ಅವರು ಸಂಸ ಅವರ ಸಂಸ್ಕೃತ ನಾಟಕವಾದ 'ವಿಗಡ ವಿಕ್ರಮರಾಯ' ಎಂಬ ನಾಟಕದ ಅನುವಾದವಾಗಿದೆ. ನಾಟಕದ ಸಾರಾಂಶ ರಾಜ-ರಾಜರುಗಳ ಜಗಳಗಳಲ್ಲಿ ಸೈನಿಕರ ಬಲಿಯಾದಂತೆ ರಾಜಕಾರಣದಲ್ಲಿ ಸಾಮಾನ್ಯ ಜನರ ಬಲಿ ಎಂಬ ಸಾರಾಂಶವನ್ನು ನೀಡಿತ್ತದೆ. ಚನ್ನ ಮತ್ತು ರಂಗನ ಪಾತ್ರಗಳು ದಲಿತರಾಗಿ ಹಾಗೂ ರಾಜರು ಮಂತ್ರಿಗಳಾಗಿ ಕಾಣುವ ದೃಶ್ಯ ಬಹು ಆಕರ್ಷಕವಾಗಿ ಅರ್ಥಗರ್ಭಿತವಾಗಿ ಕಟ್ಟಿಕೊಟ್ಟಿದ್ದಾರೆ.[೧೦] ೧೯೭೫ ರಲ್ಲಿ ಈ ನಾಟಕವನ್ನು 'ಸಮುದಾಯ' ಬಲಿಷ್ಠವಾಗಲು ಹಾಗೂ ದಲಿತ ಸಂಘರ್ಷ ಸಮಿತಿಯ ನಾಯಕರ ಮೇಲೆ ಹೆಚ್ಚು ಪ್ರಭಾವ ಬೀರಿತು. ಅದು ಬಿ.ಕೃಷ್ಣಪ್ಪ, ದೇವನೂರು ಮಹಾದೇವ ಹಾಗೂ ಸಿದ್ಧಲಿಂಗಯ್ಯ ಇವರ ಮೇಲೆ ಹೆಚ್ಚು ಜಾಗೃತಿಯ ಪ್ರಜ್ಞೆಮೂಡಲು ಕಾರಣವಾದ ನಾಟಕ. ಇದೇ ರೀತಿಯ 'ಸಮುದಾಯ' ಬಹುಮುಖ್ಯ ನಾಟಕ ಸಿ.ಜಿ.ಕೃಷ್ಣಸ್ವಾಮಿ ನಿರ್ದೇಶನದ ಬೆಲ್ಚಿ ನಾಟಕ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಬಿಹಾರ ರಾಜ್ಯದ ಬೆಲ್ಚಿ ಎಂಬ ಊರಲ್ಲಿ ಭೂ ವಿವಾದದಿಂದ ಏಳು ದಲಿತರನ್ನು ಜೀವಂತ ಸುಟ್ಟ ಘಟನೆಯನ್ನು ಇಟ್ಟಿಕೊಂಡು ಸಿ.ಜಿ.ಕೆ ನಾಟಕ ಬರೆದು ನಿರ್ದೇಶನ ಮಾಡುತ್ತಾರೆ.

ಈ ನಾಟಕ ಕರ್ನಾಟಕವು ಸೇರಿದಂತೆ ಭಾರತದಾದ್ಯಾಂತ ೧೫೦೦ಕ್ಕೂ ಹೆಚ್ಚು ಪ್ರದರ್ಶನ ಕಂಡ 'ಸಮುದಾಯ'ದ ಮುಖ್ಯ ನಾಟಕವೆಂದು ಹೇಳುತ್ತಾರೆ. ಏಕೆಂದರೆ ಈ ನಾಟಕದಿಂದ 'ಸಮುದಾಯ' ದಲಿತರ ಮೇಲಿನ ದೌರ್ಜನ್ಯ-ದಬ್ಬಾಳಿಕೆ-ಶೋಷಣೆಯ ತಂತ್ರಗಳನ್ನು ಕಾರಣವಾದ

ಅಂಶಗಳನ್ನು ಎಳೆ-ಎಳೆಯಾಗಿ ಬಿಡಿಸಿ ತೋರಿಸಿತು. ಈ ನಾಟಕಕ್ಕೆ ಸಿದ್ಧಲಿಂಗಯ್ಯನವರ ಸಾಹಿತ್ಯ ಹಾಗೂ ಮೊದಲ ಬಾರಿಗೆ ಯಾವುದೇ ನಾಟಕದ ಅನುಭವ ಇಲ್ಲದ ಶ್ರೀರಾಮಪುರ ಹಾಗೂ ಮಾವಳ್ಳಿಯ (ಲಾಲ್‌ಬಾಗ್ ಹತ್ತಿರ) ಹಾಗೂ ಇತರ ಸ್ಲಂಗಳ ಹೊಸ ಯುವಕರನ್ನ ಈ ನಾಟಕದಲ್ಲಿ ಪಾತ್ರಗಳನ್ನು ನೀಡಿ ನಾಟಕ ನಿರ್ದೇಶಿಸಿದ ಕೀರ್ತಿ ಅದು ಸಿ.ಜಿ.ಕೃಷ್ಣಸ್ವಾಮಿಗೆ ಅವರಿಗೆ ಸಲ್ಲುತ್ತದೆ. ಈ ನಾಟಕದಿಂದ 'ಸಮುದಾಯ' ಸಂಘಟನೆಯು ಭಾರತದಲ್ಲೇ ಪ್ರಚಾರವಾಗಿ 'ಸಮುದಾಯ'-ದಲಿತ ಸಂಘರ್ಷ ಸಮಿತಿ ಜಂಟಿಯಾಗಿ ಕಾರ್ಯಕ್ರಮ ಹಾಗೂ ಹೋರಾಟಗಳನ್ನು ರೂಪಿಸಿದವು. ಉದಾಹರಣೆಗೆ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಹುಣಸಿಕೋಟೆಯ ಅನಸೂಯಮ್ಮ ಅತ್ಯಾಚಾರದ ಪ್ರಕರಣ ಹಾಗೂ ದಲಿತ ಸಂಘರ್ಷ ಸಮಿತಿ-ಸಮುದಾಯ ಎಡಪಕ್ಷಗಳ ಸಂಯೋಜನೆಯ ಕಾಲ್ನಡಿಗೆಯ ಜಾಥಾವನ್ನು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ. ಸಿದ್ಧಲಿಂಗಯ್ಯನವರ ಪಂಚಮ ನಾಟಕವು ಬೆಲ್ಚಿಯಂತೆ ದಲಿತರಲ್ಲಿ ಜಾಗೃತಿ ಪ್ರಜ್ಞೆ ಮೂಡಿಸುವುದು ಕೂಡ ಗಮನಾರ್ಹವಾದದ್ದು. ಹೀಗೆ ದಲಿತ ಸಂಘರ್ಷ ಸಮಿತಿಗೆ ತುರ್ತುಪರಿಸ್ಥಿತಿ ಮತ್ತು ನಂತರದ ಪ್ರಜಾಸತ್ತಾತ್ಮಕ ಚಳವಳಿಯ ಬೆಳವಣಿಗೆಯ ಸನ್ನಿವೇಶದಲ್ಲಿ ಈ ದಲಿತ ಸಂಘಟನೆಗೆ ಎಡಪಂಥೀಯರ ಪ್ರಗತಿಪರ ಬುದ್ಧಿಜೀವಿಗಳ ಪ್ರಜ್ಞಾವಂತರ ಬೆಂಬಲ ದೊರಕಿತು. ದಲಿತರ ಮೇಲಿನ ದೌರ್ಜನ್ಯಕ್ಕೆ ಪ್ರತಿಭಟನೆ ಪ್ರತಿರೋಧ ತೋರಿದ್ದಲ್ಲದೆ ಸಾಹಿತ್ಯ-ಸಾಂಸ್ಕೃತಿಕ ಪ್ರತಿಭಟನೆ-ಪ್ರತಿರೋಧವನ್ನು ಒಡ್ಡಿತು.

ದಲಿತ ಸಂಘರ್ಷ ಸಮಿತಿ ಆರ್ಥಿಕ ಶೋಷಣೆಯ ವಿರುದ್ಧ ಸಹ ಹೋರಾಟ ಮಾಡಿತು. ವಿದ್ಯಾರ್ಥಿ-ಲೇಖಕ-ಕಲಾವಿದ ಕಾರ್ಮಿಕ ಮುಂತಾದ ಹಲವು ವಿಭಾಗಗಳ ಚಳವಳಿಯಲ್ಲೂ ದಲಿತ ಚಳವಳಿ ಸಕ್ರಿಯವಾಗಿತ್ತು. ಏಕೆಂದರೆ, ಕರ್ನಾಟಕದ ಯಾವುದೇ ಹಳ್ಳಿಯಲ್ಲೇ ದಲಿತರ ಮೇಲೆ ದೌರ್ಜನ್ಯ ನಡೆದರೂ ರಾಜ್ಯದಾದ್ಯಂತ ಪ್ರತಿಕ್ರಿಯೆ ವ್ಯಕ್ತವಾಗುತ್ತಿತ್ತು. ಬಿ.ಕೃಷ್ಣಪ್ಪನವರ ಸ್ವಾಭಿಮಾನಿ ಮಾನವತವಾದಿ ತತ್ವ, ದೇವನೂರು ಮಹಾದೇವ ಅವರ ಸಮಾಜವಾದಿ ತತ್ವ ಹಾಗೂ ಸಿದ್ಧಲಿಂಗಯ್ಯ ಅವರ ಮಾರ್ಕ್ಸ್‌ವಾದಿ ತತ್ವಗಳು, ಕತೆ, ಕಾವ್ಯ, ಕವಿತೆ, ನಾಟಕಗಳ ಮುಖೇನ ದಲಿತ ಸಾಹಿತ್ಯ ಎಂಬ ಹೊಸ ಪ್ರಕಾರವನ್ನು ಸೃಷ್ಟಿಸಿ ಸಮಾಜವನ್ನು ಪ್ರಭಾವಿಸಿದವು. ಸಿದ್ಧಲಿಪುರ, ಬಿದಿರೆ, ಚಂಡಗೂಡು, ಮೆದಕಿನಾಳ, ನಾಗಸಂದ್ರ ಹಾಗೂ ದೇವಲಾಪುರಗಳಲ್ಲಿ ಭೂ ಹೋರಾಟ ನಡೆಸಿ ದಲಿತರಿಂದ ಕಸಿದು ಅಥವಾ ಉಳುಮೆ ಮಾಡುತ್ತಿದ್ದ ಜಮೀನನ್ನು ಮೇಲ್ವರ್ಗದಿಂದ ಪಡೆಯಲು ಸಾಧ್ಯವಾಯಿತು.[೧೧] ಚಂದ್ರಗುತ್ತಿಯ ಬೆತ್ತಲೆಯಂತಹ ಅವಮಾನಕಾರಿ ಮೌಢ್ಯಭರಿತ ಆಚಾರಗಳ ವಿರುದ್ಧ ಬೌದ್ಧಿಕ ವಲಯ ಧ್ವನಿಯೆತ್ತಿತು. ಚಾರಿತ್ರಿಕ ಹೋರಾಟದ ಗುರುತುಗಳು ಇವೆಲ್ಲದರ ಒಟ್ಟು ಪರಿಣಾಮಕಾರಿ ಶಿಕ್ಷಣ-ಉದ್ಯೋಗಗಳಲ್ಲಿ ಮೀಸಲಾತಿ ಮುಂತಾದ ಸವಲತ್ತುಗಳು ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟುವ ಮುಂತಾದ ಕಾನೂನುಗಳ ಜಾರಿಯಲ್ಲಿ ಪ್ರಗತಿ ಕಂಡಿತು.

ದಲಿತ ಚಳವಳಿ ೧೯೬೮ ರಿಂದ ೧೯೮೦ರ ದಶಕದ ದುಡಿಯುವ ಜನರ ಪ್ರಜಾಸತ್ತಾತ್ಮಕ ಚಳವಳಿಯ ಬೆಳವಣಿಗೆಯ ಪ್ರಮುಖ ಭಾಗ. ೧೯೮೦ರ ದಶಕದ ಕೊನೆಯ ಹೊತ್ತಿಗೆ ರಾಜಕೀಯ ಭಾಗವಹಿಸುವಿಕೆಯಲ್ಲಿ ರಾಮಕೃಷ್ಣ ಹೆಗಡೆ ರಾಜಕಾರಣದ ತಂತ್ರಗಾರಿಕೆಗೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹಾಗೂ ಸಂಘಟನಾ ಸಮಸ್ಯೆಗಳು–ಅನೈತಿಕತೆ ಮುಂತಾದವುಗಳಿಂದಾಗಿ ಸಂಘಟನೆ ಒಡೆದು ಹಿಂದಿನ ಪ್ರಖರತೆ ಮತ್ತು ಪ್ರಭಾವ ಕಳೆದುಕೊಂಡರೂ ಈಗಲೂ ಪ್ರಜಾಸತ್ತಾತ್ಮಕ ಚಳವಳಿಯ ಪ್ರಮುಖ ಭಾಗವಾಗಿದೆ. ಇಂದಿನ ಐಕ್ಯತೆ ಕಡೆ ಒಂದಾಗುತ್ತಿರುವುದು ಬಹು–ತುರ್ತು–ಅತ್ಯಗತ್ಯವಾಗಿದೆ.

೪.೪. ಬಂಡಾಯ ಚಳವಳಿಯ ನೆರಳಲ್ಲಿ 'ಸಮುದಾಯ'

ಬಂಡಾಯ ಎಂದರೆ 'ಕ್ರಾಂತಿ' ಅಥವಾ ದಂಗೆ ಮುಂತಾದ ಪದಗಳ ಅರ್ಥವಾಗಿ ಬಳಸಬಹುದಾಗಿದೆ. 'ಸಮುದಾಯ'–ದಲಿತ–ಬಂಡಾಯ ಚಳವಳಿಗಳು ಎಪ್ಪತ್ತರ ದಶಕದಲ್ಲಿ ಹುಟ್ಟಿದರೂ ಅದರ ಪ್ರಭಾವ ಉಂಟಾಗಿದ್ದು ಎಂಬತ್ತರ ದಶಕದ ಆರಂಭದ ವರ್ಷಗಳಲ್ಲಿ ಎಂದು ಹೇಳುತ್ತೇವೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ನಡೆಸುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಗಳಲ್ಲಿ ದಲಿತರ ಬಗ್ಗೆ ಒಂದು ಗೋಷ್ಠಿ ಮಾಡಿ ಎಂದು ಚನ್ನಣ್ಣ ವಾಲಿಕರ್ ಅವರು ಪರಿಷತ್ತಿನ ಅಧ್ಯಕ್ಷರಾದ ಹಂ.ಪ.ನಾಗರಾಜಯ್ಯ ಅವರನ್ನು ಕೇಳಿದರು. ಹಂ.ಪ.ನಾಗರಾಜಯ್ಯ ಅವರ ಪ್ರತಿಕ್ರಿಯೆಯು ದಲಿತ–ಗಿಲಿತ ಅಂತೆಲ್ಲಾ ಮಾಡೋಕೆ ಆಗಲ್ಲ ಅಂತ ಒಂದು ಹೇಳಿಕೆ ಕೊಟ್ಟರು. ಈ ಹೇಳಿಕೆಗೆ ಸಿಟ್ಟಾದ ದಲಿತ–ಬಂಡಾಯ ಸಂಘಟಕರು ೧೯೭೯ರಲ್ಲಿ ಬೆಂಗಳೂರಿನ ದೇವಾಂಗ ಛತ್ರದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಮುಖೇನ ಕನ್ನಡ ಸಾಹಿತ್ಯ ಪರಿಷತ್ತಿನ ಪರ್ಯಾಯವಾಗಿ 'ಬಂಡಾಯ ಸಾಹಿತ್ಯ' ಮೊದಲ ಸಮ್ಮೇಳನ ಆಯೋಜಿಸಿದರು. ಈ ಬಂಡಾಯ ಸಾಹಿತ್ಯದಲ್ಲಿ ಪ್ರಮುಖವಾಗಿ ಸೆಂಟ್ರಲ್ ಕಾಲೇಜಿನ ಮುಂಭಾಗ ಹುಲ್ಲುಹಾಸಿನ ಮೇಲೆ ಚರ್ಚೆ–ಸಮಿತಿ ಸಭೆಗಳನ್ನು ಮಾಡುತ್ತಿದ್ದವರು, ಬರಗೂರು ರಾಮಚಂದ್ರಪ್ಪ, ಡಿ.ಆರ್.ನಾಗರಾಜ, ಕಿ.ರಂ.ನಾಗರಾಜ, ಶೂದ್ರ ಶ್ರೀನಿವಾಸ್, ಸಿದ್ಧಲಿಂಗಯ್ಯ, ಓ.ಶ್ರೀಧರನ್, ಇಂದೂಧರ ಹೊನ್ನಾಪುರ, ರಾಜಣ್ಣ, ಕಾಳೇಗೌಡ ನಾಗವಾರ ಮುಂತಾದವರು ಸೇರಿ ಬಂಡಾಯ ಸಾಹಿತ್ಯ ಸಮ್ಮೇಳನದ ರೂಪುರೇಶೆಗಳನ್ನು ರೂಪಿಸಿದರು. ಈ ಬಂಡಾಯ ಸಾಹಿತ್ಯ ಸಮ್ಮೇಳನಕ್ಕೆ ಆಂಧ್ರಪ್ರದೇಶದ ಪ್ರಮುಖ ಸಾಹಿತಿಗಳಾದ ಶ್ರೀ ಶ್ರೀ ಅವರು ಉದ್ಘಾಟನಾ ಕಾರ್ಯಕ್ರಮ ಬೆಂಗಳೂರಿಗೆ ಬಂದಿದ್ದರು. ಡಿ.ಆರ್.ನಾಗರಾಜ ಘೋಷಣೆ 'ಖಡ್ಗವಾಗಲಿ ಕಾವ್ಯ. ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ವು ಬಂಡಾಯ ಸಂಘಟನೆಯ ಉಸಿರಾಗಿತ್ತು. ಈ ಸಮ್ಮೇಳನದಲ್ಲಿ ಬಂಡಾಯ ಸಂಘಟನೆ ಒಂದು ಪ್ರಣಾಳಿಕೆ ಸಿದ್ಧಪಡಿಸಿತ್ತು. ಬಂಡಾಯ ಸಂಘಟನೆಯ ಪ್ರಣಾಳಿಕೆ ಮತ್ತು ಸಂವಿಧಾನದಲ್ಲಿ ಹೀಗೆ ಹೇಳಲಾಗಿದೆ. ನಮ್ಮ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ವರ್ಷಗಳಿಂದ ಕಂಡು ಬರುತ್ತಿರುವ ಪ್ರಗತಿಪರ ಧೋರಣೆಗಳು ತೆಗೆದು ಕೊಳ್ಳುತ್ತಿರುವ ಪ್ರಗತಿಪರ ಧೋರಣೆಗಳ ತೆಗೆದುಕೊಂಡ ತಿರುವುಗಳನ್ನು ಎದುರಿಸಿದೆ. ಸಮಸ್ಯೆಗಳು ಮತ್ತು ಕಾರಣಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ

ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯತೆ ಗೊತ್ತಾಗುತ್ತದೆ. ಒಕ್ಕೂಟ ಪ್ರಗತಿ ಪಂಥಗಳು ಸಾಪಲ್ಯ-ವೈಪಲ್ಯಗಳ ದಾಖಲೆ ನಮಗೊಂದು ಎಚ್ಚರದ ಸಂಗತಿಯೂ ಆಗಿದೆ.[೨] ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಜನವಿರೋಧಿ ನಿಲುವುಗಳ ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಗೆಯು ಎಲ್ಲರಿಗೂ ಒಂದು ಸವಾಲು ಈ ಸವಾಲಿಗೆ ನಮ್ಮ ಉತ್ತರ ವಾಮಪಂಥೀಯರ ಸಂಘಟನೆ. ಸ್ಪಷ್ಟಪಡಿಸುವುದಾದರೆ ಸಮಕಾಲೀನ ಚರಿತ್ರೆಯ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲಾ ವಾಮಪಂಥೀಯರ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳ್ಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳ ಪರಸ್ಪರ ಸಂಬಂಧವುಳ್ಳವು ಎಂಬ ನಿಲುವಿನಿಂದ ಹೊರಟಿದ್ದು.[೩] ಸಾಹಿತಿ-ಸಾಮಾಜಿಕ-ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿನದು. ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ಲಿಂಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಎಲ್ಲ ಜನಪರ ನಿಲುವುಗಳಿಗೆ ನಮ್ಮ ಬೆಂಬಲ ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ಹೋರಾಟದ ಮುಖ್ಯ ದಾಖಲೆ ಹೀಗೆ ಬರಗೂರು ಅವರು ೧೯೮೧ ರಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಹೇಳಿರುತ್ತಾರೆ.

ಬಂಡಾಯ ಸಂಘಟನೆಯ ನಾಟಕಗಳು ಮತ್ತು 'ಸಮುದಾಯ'

ಬಂಡಾಯ ಸಂಘಟನೆಯಲ್ಲಿ ಇರುವವರು 'ಸಮುದಾಯ' ಸಂಘಟನೆ ಹಾಗೂ ದಲಿತ ಸಂಘರ್ಷ ಸಮಿತಿಯಲ್ಲಿ ಸಂಬಂಧ ಹೊಂದಿದವರಾಗಿದ್ದರು. ಜೊತೆಗೆ ಎಡ ಪಕ್ಷಗಳ ಹಾಗೂ ಇತರೆ ಸಾಮೂಹಿಕ ಸಂಘಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಬಂಡಾಯ-'ಸಮುದಾಯ' ಒಂದಕ್ಕೊಂದು ಕೂಡಿಕೊಂಡು ರಂಗ ಚಳವಳಿಯನ್ನು ಕರ್ನಾಟಕದಲ್ಲಿ ಗಟ್ಟಿಯಾಗಿ ಬೆಳೆಸಿದ್ದುದು ಚಾರಿತ್ರಿಕ ನೆಲೆಗಟ್ಟಿನ ಪರಂಪರೆಯಾಗಿದ್ದನ್ನು ಕಾಣುತ್ತೇವೆ. ಬಂಡಾಯ ನಾಟಕಗಳಲ್ಲಿ ರಾಜಕೀಯ ನಾಟಕಗಳಿಗೆ ವಿಶೇಷವಾದ ಸ್ಥಾನವಿದೆ. 'ಕುರಿ', 'ಮುಖ್ಯಮಂತ್ರಿ', 'ತಾಮ್ರಪತ್ರ', 'ಪೋಸ್ಟ್ ಬಾಕ್ಸ್ ನಂ-೯' ಮುಂತಾದ ಇತರ ಭಾಷೆಯ ರಾಜಕೀಯ ನಾಟಕಗಳು ಕನ್ನಡ ರಂಗ ಚಳವಳಿಯ ಮೇಲೆ ಬೀರಿದ ಪರಿಣಾಮವಾಗಿ ನಿಧಾನವಾಗಿ ಕನ್ನಡದಲ್ಲಿ ಸ್ವತಂತ್ರ ರಾಜಕೀಯ ನಾಟಕಗಳು ಕಾಣಿಸಿಕೊಂಡವು. ಈ ನಿಟ್ಟಿನಲ್ಲಿ ಬಿ.ವಿ ವೈಂಕುಂಠ ರಾಜು ಅವರ 'ಸಂದರ್ಭ' ಮತ್ತು ಟಿ.ಎನ್.ಸೀತಾರಾಂ ಅವರ 'ಆಸ್ಫೋಟ' ನಾಟಕಗಳು ಮುಖ್ಯವಾಗಿ ರಾಜಕಾರಣದ ಸಮಕಾಲೀನ ರಾಜಕೀಯ ಸ್ಥಿತಿಗತಿಗಳನ್ನು, ಜೊತೆಗೆ ಮಾನವನ ನಿಧಾನಗತಿಯಲ್ಲಿ ಭ್ರಷ್ಟಗೊಳ್ಳುತ್ತಿರುವುದನ್ನು ಈ ನಾಟಕಗಳು ಬಹಳ ಅರ್ಥಗರ್ಭಿತವಾಗಿ ಹೇಳುತ್ತವೆ. ಪ್ರಸನ್ನರ 'ಒಂದು ಲೋಕ ಕಥೆ', 'ದಂಗೆಯ

ಮುಂಚಿನ ದಿನಗಳು' ಕೆ.ವಿ.ನಾರಾಯಣರ 'ಹುತ್ತವ ಬಡಿದರೆ' ಇತರೆ ಪ್ರಮುಖ ನಾಟಕಗಳು ವಿಶೇಷವಾಗಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಪೂರಕ ಮಾರ್ಗವಾಗಿ ಸಮುದಾಯ ರಂಗ ಚಳವಳಿಗೆ ಬಳಸಿಕೊಂಡಿದ್ದು ನೋಡುತ್ತೇವೆ.

ಸಿ.ಜಿ.ಕೃಷ್ಣಸ್ವಾಮಿಯವರು 'ಬೆಲ್ಚಿ' ಮತ್ತು 'ಅಲ್ಲೆ ಇದ್ದರು' ಎಂಬ ಬೀದಿನಾಟಕಗಳಲ್ಲಿ ಸಾಮಾಜಿಕ ದೌರ್ಜನ್ಯ, ವಿಷಮತೆ ಹಾಗೂ ಅನ್ಯಾಯಗಳ ನೈಜ ಚಿತ್ರಣವನ್ನು ನೀಡಿದರು. ಚಿ.ಶ್ರೀನಿವಾಸರಾಜು ಅವರ 'ನಾಳೆ ಯಾರಿಗೂ ಇಲ್ಲ' ನಾಟಕದಲ್ಲಿ ಹಸಿವು ಉಂಟುಮಾಡುವ ಹಿಂಸೆಯ ಬಗೆಗೆ ಬೆಳಕು ಚೆಲ್ಲಿದರು. ಚೆನ್ನಣ್ಣ ವಾಲೀಕಾರರ 'ತಲೆಗಾಕುವವರು' ಸಮಕಾಲೀನ ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ದಲಿತರನ್ನು ಹೇಗೆ ಶೋಷಿಸುತ್ತಾರೆ. ಎಂಬುವುದರ ಬಗ್ಗೆ ವಿವರಿಸುತ್ತಾರೆ. ಎಂ.ಸಿ.ರಾಮು ಅವರ ನಾಟಕವಾದ 'ದಲಿತನ ಮತಾಂತರ ಪ್ರಸಂಗ' ವಿದ್ಯಾವಂತ ದಲಿತನ ಮಾನಸಿಕ ತುಮುಲಗಳನ್ನು ಹೃದಯಕ್ಕೆ ಮುಟ್ಟುವ ಹಾಗೆ ಚಿತ್ರಿಸಿದ್ದಾರೆ. ದಲಿತರನ್ನು ತುಳಿಯುವ ಸಾಂಪ್ರದಾಯಿಕ ಮನೋಧರ್ಮಗಳನ್ನು ಖಂಡಿಸುವ ಧೋರಣೆಯುಳ್ಳ ಏಕಲವ್ಯ ಎಂಬ ನಾಟಕವನ್ನು ಜೊತೆಗೆ ಪಂಚಮ, ಕತ್ತೆ ಮತ್ತು ಧರ್ಮ, ಅಲ್ಲೆ ಕುಂತವರೆ ಹಾಗೂ ಕೊಲೆಯ ಹಿಂದಿನ ರಾತ್ರಿ ಇತ್ಯಾದಿ ನಾಟಕ ಮತ್ತು ಕವನಗಳು 'ಸಮುದಾಯ' ಬೀದಿನಾಟಕಗಳು ಅರಿವನ್ನು ಹೆಚ್ಚಿಸಿದವು. ಸತ್ಯನಾರಾಯಣರಾವ್ ಅಣತಿಯವರ ಚಾರ್ವಾಕ, ಪ್ರಸನ್ನರ ಮಹಿಮಾಪುರ, ಕೆ.ಎಚ್.ಪ್ರಭು ಅವರ ಹೊಲೆಯ ಬಂದ ಹೊಲೆಯ, ಮೈಸೂರು ನಾಗೇಶ್ ಅವರ ಹರಕೆ, ಶಂಕರ್ ಹಲ್ಗೇರೆಯವರ ಡೊಂಕು ಬಾಲದ ನಾಯಕರು, ಸತ್ಯನಂದ ಪಾತ್ರೋಟದ ನಮಗೆ ಯಾರೂ ಇಲ್ಲೋ ಎಪ್ಪಾ ಸಾಕ್ಷಿ, ಹ.ನ.ವಿಜಯ ಕುಮಾರ್ ಅವರ ಕಪ್ಪು-ಕೆಂಪು, ನಿರಂಜನ ರವರ ನಾವು ಮನುಷ್ಯರು ಹೀಗೆ ೧೯೮೫ರ ನಾಟಕಗಳು ತಮ್ಮ ಪ್ರಗತಿಪರ ಧೋರಣೆಗಳಿಂದ ಜನಪ್ರಿಯವಾಗಿದ್ದು ಚಾರಿತ್ರಿಕ ನೆಲೆಗಳಾಗಿವೆ.

'ಸಮುದಾಯ' ಸಂಘಟನೆಯ ನರಗುಂದ ರೈತ ಬಂಡಾಯ, ಬೆಳೆದವರು, ಕತ್ರ ವೈರಾಗ್ಯ, ಪತ್ರೆ ಸಂಗಪ್ಪನ ಕೊಲೆ, ಬಂದರೋ ಬಂದರು ಹಾಗೂ ಕೇಳಪ್ಪೋ ಕೇಳ್ರಿ, ಓನನ್ನ ಜನರೇ, ಮುಖವಿಲ್ಲದವರು, ಭಸ್ನಾಲಾ, ಮಾರಿಕೊಂಡವರು, ಕಟ್ಟು, ನೆಲಸಮ, ಕುದುರೆ ಮೋತಿ, ಬೇನೆ, ಎಣ್ಣೆ ಚಿಮಣಿ ಎಣ್ಣೆ, ಇವುಗಳು 'ಸಮುದಾಯ'-ಗೆಳೆಯರ ಗುಂಪು, ಚಿತ್ರ ತಂಡಗಳಿಂದ ಬೀದಿನಾಟಕಗಳನ್ನು ರಂಗ ಚಳವಳಿಯ ಮೂಲಕ ಗಟ್ಟಿಗೊಳಿಸಿದ ಕೀರ್ತಿ ಬಂಡಾಯ ಸಂಘಟನೆಗೆ ಸಲ್ಲಿಸುತ್ತದೆ. ಈ ನಾಟಕಗಳು ನೂರಕ್ಕೂ ಹೆಚ್ಚು ಪ್ರದರ್ಶನ ಕಂಡ ನಾಟಕಗಳಾಗಿರುತ್ತವೆ. ದೇವನೂರು ಮಹಾದೇವ ಅವರ 'ಒಡಲಾಳ'ವನ್ನು ಸಿ.ಜಿ.ಕೃಷ್ಣಸ್ವಾಮಿಯವರು ರಂಗಕ್ಕೆ ತಂದು ಪ್ರೋಸೀನಿಯಂ ರಂಗಭೂಮಿಗೆ ಹೊಸ ಅಲೆಯ ಚಾಲನೆ ನೀಡಿ ರಂಗಭೂಮಿ ಚಳವಳಿಗೆ ಒಂದು ಆಧಾರ ಮೂಲವಾಗಿದೆ.[೧೪] ಬಂಡಾಯ ಚಳವಳಿಯಲ್ಲಿ ಇಲ್ಲದಿದ್ದರೂ ಎಚ್.ಎಸ್.ಶಿವಪ್ರಕಾಶ ಮತ್ತು ಚಂದ್ರಶೇಖರ ಕಂಬಾರರು ಈ ಚಳವಳಿಯಿಂದ ಪ್ರೇರಣೆಗೊಂಡು ಮಹತ್ವದ ನಾಟಕಗಳನ್ನು

ಬರೆದಿದ್ದಾರೆ. ಚರಿತ್ರೆ ಬೆಳೆಸಿದ ಶ್ರಮಜೀವಿ ವರ್ಗದ ಬಗ್ಗೆ ಅಪಾರ ವಿಶ್ವಾಸ ವ್ಯಕ್ತಪಡಿಸುವ ಶಿವಪ್ರಕಾಶರು ಎಡಪಂಥೀಯ ಸಮಾಜವಾದಿ ಪ್ರಗತಿಪರ ಧೋರಣೆಯಿಂದಲೇ ಚರಿತ್ರೆಯನ್ನು ವರ್ತಮಾನಕ್ಕೆ ಒಗ್ಗಿಸುವ ಅವರ 'ಮಹಾಚೈತ್ರ' ಮತ್ತು 'ಸುಲ್ತಾನ್-ಟಿಪ್ಪು' ಎರಡೂ ನಾಟಕಗಳು 'ಸಮುದಾಯ' ಸಂಘಟನೆಯ ವಿವಾದಕ್ಕೆ ಒಳಗಾದ ನಾಟಕಗಳು. 'ಮಹಾಚೈತ್ರ' ನಾಟಕವನ್ನು ಕಾಲೇಜುಗಳಲ್ಲಿ ನಾಟಕ ಪ್ರದರ್ಶನವನ್ನು ನಿಷೇಧ ಮಾಡಿದ್ದು ಬಸವಣ್ಣನವರ ಕ್ರಾಂತೀಯ ವಿಚಾರಗಳ ಸಾಂಪ್ರದಾಯಿಕ ವೀರಶೈವ ಹಾಗೂ ಲಿಂಗಾಯತ ಹಾಗೂ ಬ್ರಾಹ್ಮಣಶಾಹಿಗಳಿಗೆ ಈ ನಾಟಕ ವಿರೋಧ ಬಾಸವಾಗಿ ಕಂಡಿದ್ದು ಚಾರಿತ್ರಿಕ ಕಾಲ ಘಟಕವಾಗಿದೆ. 'ಸಾಂಬಶಿವ ಪ್ರಹಸನ' ನಾಟಕ ಬರೆದ ಚಂದ್ರಶೇಖರ ಕಂಬಾರರು ಕಾಮದ ಸಾಮಾಜಿಕ ಪ್ರಸ್ತುತತೆಯನ್ನು ದಿಟ್ಟವಾಗಿ ವಿಶ್ಲೇಷಿಸುತ್ತಾರೆ. ಹೀಗೆ ಬಂಡಾಯ ಸಂಘಟನೆಯು ಎಪ್ಪತ್ತು-ಎಂಬತ್ತರ ದಶಕದ ರಂಗ ಚಳವಳಿಯ 'ಸಮುದಾಯ'ದ ನೆರಳಲ್ಲಿ ತನ್ನ ಚಾರಿತ್ರಿಕ ಸ್ಥಳವನ್ನು ಹೊಂದಿದ್ದನ್ನು ಕಾಣುತ್ತೇವೆ.

೪.೫. ಭಾಷಿಕ ನೆಲೆಗಳಲ್ಲಿ 'ಸಮುದಾಯ'

'ಸಮುದಾಯ' ಸಾಂಸ್ಕೃತಿಕ ಸಂಘಟನೆ ಎಂಬತ್ತರ ದಶಕದಲ್ಲಿ ಹೆಚ್ಚು ವಿಸ್ತರಣೆಯಾಗಲು ಭಾಷಿಕ ನೆಲೆಗಳು ಬಹುಮುಖ್ಯ ಎನಿಸುತ್ತದೆ. ಏಕೆಂದರೆ, ಯಾವುದೇ ಒಂದು ಸಂಘಟನೆ ತನ್ನ ಅಸ್ತಿತ್ವ-ಪ್ರಚಾರ-ಪ್ರಭಾವ ಪ್ರಸರಿಸಲು ಭಾಷೆ ಅತ್ಯಂತ ಮುಖ್ಯವಾಗುತ್ತದೆ. ಒಬ್ಬ ವ್ಯಕ್ತಿಯ ಭಾಷೆಯ ಮುಖೇನ ಆ ವ್ಯಕ್ತಿಯ ವ್ಯಕ್ತಿತ್ವ, ಸಂಸ್ಕೃತಿ, ಪ್ರದೇಶ, ಮಾನಸಿಕ ಸ್ಥಿತಿಗಳನ್ನು ಗಮನಿಸಬಹುದಾಗಿದೆ. ಹಾಗೆಯೇ ಸಾಂಸ್ಕೃತಿಕ ಸಂಘಟನೆಯಾದ 'ಸಮುದಾಯ'ದ ಬೀದಿನಾಟಕ-ರಂಗನಾಟಕ-ಜಾಥಾಗಳು, ವಿಚಾರ ಸಂಕಿರಣಗಳು, ಪ್ರತಿಭಟನೆಗಳು ರಂಗಚಳವಳಿಗಳಲ್ಲಿ 'ಸಮುದಾಯ' ಬಳಸುತ್ತಿದ್ದ ಭಾಷೆ ಬಹುಮುಖ್ಯವಾಗಿತ್ತು. 'ಸಮುದಾಯ'ದ ಮೊದಲ ನಾಟಕ 'ಹುತ್ತವ ಬಡಿದರೆ' ಮೂಲತಃ ನಾಟಕಕಾರನಾದ ಸಂಸ ಅವರ 'ವಿಗಡ ವಿಕ್ರಮರಾಯ' ನಾಟಕದ ರೂಪಾಂತರವಾಗಿದೆ. ಕೆ.ವಿ.ನಾರಾಯಣ ಅವರು ತಂದ ಕಾರಣವಾಗಿ ಬಹುಸಂಖ್ಯಾತರಾದ ಕನ್ನಡ ಮಾತನಾಡಬಲ್ಲ-ಅನಕ್ಷರಸ್ಥ ಸಾಮಾನ್ಯ ಜನರಿಗೂ 'ಹುತ್ತವ ಬಡಿದರೆ' ನಾಟಕದ ತಿರುಳು ಅರ್ಥವಾಗಿ ರಾಜಪ್ರಭುತ್ವವು ಎಲ್ಲಾ ಕಾಲ ಪ್ರದೇಶಗಳಲ್ಲೂ ಒಂದೇ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಅದು ರಾಜ-ಮಂತ್ರಿ-ಶ್ರೀಮಂತರ ಅಧಿಕಾರದಾಹದ ಜಗಳಗಳಲ್ಲಿ ಸಾಮಾನ್ಯ ಜನ, ದಲಿತರು ಬಲಿಯಾಗಿದ್ದರು. ಏಕೆ ಎಂಬ ತಾತ್ವಿಕ ಅಂಶಗಳನ್ನು ಕೂಡ ಭಾಷೆಯ ಮುಖೇನ ತಿಳಿಸುವ ಪ್ರಯತ್ನ 'ಸಮುದಾಯ'ದ ಆಶಯವಿದ್ದ ಕಾರಣ. ಸಂಸ್ಕೃತ, ಹಿಂದಿ, ಇಂಗ್ಲೀಷ್, ಬೆಂಗಾಲಿ, ಮಲಯಾಳಿ, ತೆಲುಗು ಮುಂತಾದ ಪ್ರಮುಖ ನಾಟಕಕಾರರ ನಾಟಕಗಳನ್ನು ಅನುವಾದ, ರೂಪಾಂತರ ಮೂಲಕ ಕರ್ನಾಟಕ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಬಹುಮುಖ್ಯ ರಾಜ್ಯ-ರಾಷ್ಟ್ರವ್ಯಾಪ್ತಿ ವಿಸ್ತರಣೆಯಾಗಲು ಸಹಾಯವಾಯಿತು. ಹೀಗೆ ಭಾಷೆಯ ಒಂದು ಸಾಂಸ್ಕೃತಿಕ ಕ್ರಾಂತಿ ಹಾಗೂ ಸಮಾಜದ ಸ್ಥಿತ್ಯಂತರಗಳಿಗೂ ಕಾರಣವಾಗುತ್ತದೆ ಎಂದರೆ ತಪ್ಪಾಗಲಾರದು.

ಮೀಸಲಾತಿಯ ಪ್ರಶ್ನೆಗಳನ್ನು ಪ್ರತಿಭಟಿಸುವ ಮೂಲಕ ಹಕ್ಕುಗಳನ್ನು ಪಡೆಯುತ್ತೇವೆ. ಮಹಿಷಿ ವರದಿ ಜಾರಿಗೂ ಒತ್ತಾಯಿಸುತ್ತಿದೇವೆ. ಜೊತೆಗೆ ಸರ್ಕಾರದ ಸವಲತ್ತು ಒಂದೇ ಭಾಗಕ್ಕೆ ಅಂದರೆ ಮೈಸೂರು-ಬೆಂಗಳೂರು ಹೊಂದುತ್ತಿರುವುದರ ಭಾಗವಾಗಿ ಹೈದ್ರಾಬಾದ್-ಕರ್ನಾಟಕದ ಪ್ರತ್ಯೇಕ ಕೂಗಿಗೆ ಪ್ರಾದೇಶಿಕ ಭಾಷಿಕ ಕಾರಣ ಮುಂದೆ ತರುತ್ತಾರೆ.

ಅಂದರೆ ಮೈಸೂರು-ಬೆಂಗಳೂರು ಭಾಗ ಹಲವು ಯೋಜನೆಗಳ ಮೂಲಕ ಅಭಿವೃದ್ಧಿ ಹೊಂದುತ್ತಿರುವುದರ ಭಾಗವಾಗಿ ಹೈದಾರಾಬಾದ್ ಕರ್ನಾಟಕದ ಪ್ರತ್ಯೇಕ ಕೂಗಿಗೆ ಪ್ರಾದೇಶಿಕ ಭಾಷಿಕ ಕಾರಣ ಮುನ್ನೆಲೆಗೆ ತರುತ್ತಿದ್ದಾರೆ. ಅದೇ ರೀತಿಯಲ್ಲಿ ಕೊಡಗು ಪ್ರತ್ಯೇಕ ಕೂಗಿನ ಪ್ರಶ್ನೆ ಈ ಎಲ್ಲಾ ಹಿನ್ನೆಲೆಯ ಇದರ ಹಿಂದಿನ ರಾಜಕಾರಣ ಮತ್ತು ಭೂಮಿಯ ಪ್ರಶ್ನೆಗಳನ್ನು ಸಂವಿಧಾನ ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳು ಎಲ್ಲರಿಗೂ ಸಮಾನಾಗಿ ಸಿಗುವಂತಹ ಕೆಲಸವು ಸ್ವಾತಂತ್ರ್ಯ ಪಡೆದ ನಂತರ ಅಥವಾ ಕರ್ನಾಟಕದ ಏಕೀಕರಣ ನಂತರ ಆರ್ಥಿಕ ವಿಚಾರದಲ್ಲಿ ಅಂದರೆ ಭೂ ಸುಧಾರಣೆ ಅಂಶಗಳನ್ನು ಸರ್ಕಾರ ಜಾರಿಗೆ ತರಲು ಈ ಭಾಗದಲ್ಲಿ ಪ್ರಯತ್ನಿಸದೇ ಇರುವುದು ಕಾರಣವಾಗಿದೆ.

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬಹುಸಂಖ್ಯಾತರು ಶೋಷಣೆಗೆ ಒಳಗಾಗುತ್ತಿದ್ದಾರೆ. ಆದ ಕಾರಣ ಮೌಢ್ಯ, ಅಸ್ಪೃಶ್ಯತೆ, ಬಾಲ್ಯವಿವಾಹ, ಜೀತಪದ್ಧತಿ ಹಾಗೂ ದೇವದಾಸಿ ಪದ್ಧತಿ, ಬಾಲಕಾರ್ಮಿಕ ವ್ಯವಸ್ಥೆ, ಅನಕ್ಷರತೆ, ನಿರುದ್ಯೋಗ ಈ ಭಾಗದ ಮುಖ್ಯ ಪ್ರಶ್ನೆಗಳಾಗುತ್ತಾ. ಮುಂದುವರೆದಿದೆ. ಪ್ರಾದೇಶಿಕ ಪ್ರತ್ಯೇಕತೆಯ ಕೂಗು ಆಂಧ್ರ ಪ್ರದೇಶ, ಛತ್ತಿಸ್‌ಘಡ, ಪಶ್ಚಿಮ ಬಂಗಾಳ ಮುಂತಾದವುಗಳ ಪ್ರತ್ಯೇಕ ರಾಜ್ಯವಾಗಿ ಬೇರೆ ಬೇರೆಯಾದರೂ ಸಹ ಜನರ ಜೀವನಮಟ್ಟ ಸುಧಾರಿಸಿಲ್ಲ. ಉದಾಹರಣೆಗೆ ಆಂಧ್ರ ಪ್ರದೇಶದಿಂದ ತೆಲಂಗಾಣ ರಾಜ್ಯವಾಗಿ ಬದಲಾದರೂ ಅಲ್ಲಿ ಬಹುಸಂಖ್ಯಾತರು ಭೂ ಹೀನರು ಭೂಮಾಲೀಕರ ಹಿಡಿತದಲ್ಲಿ ಈಗಲೂ ಶೋಷಣೆಗೆ ಒಳಗಾಗುತ್ತಿರುವುದನ್ನು ನೋಡುತ್ತೇವೆ. ಅದರ ಒಂದು ಭಾಗವೇ ಹೈದರಾಬಾದ್ ಕರ್ನಾಟಕದ ಪ್ರದೇಶವಾಗಿರುವುದರಿಂದ ಈ ಭಾಗದ ಅಭಿವೃದ್ಧಿಯಾಗಬೇಕಾದರೆ ಪ್ರಾದೇಶಿಕ ಅಂಧಾಭಿಮಾನ ಬಿಟ್ಟು ಬಹುತೇಕ ಭೂಮಿಯು ಈ ಭಾಗದ ಪಟೇಲ್ ಸಮುದಾಯದ ಮನೆತನಗಳು ಹಾಗೂ ದೇಸಾಯಿ ಮನೆತನಗಳು ಹಾಗೂ ಕುಲಕರ್ಣಿಗಳಿಂದ ಅಗತ್ಯಗಿಂತ ಹೆಚ್ಚಿರುವ ಇರುವ ಭೂಮಿಯನ್ನು ಸಂವಿಧಾನಾತ್ಮಕವಾಗಿ ಹಂಚಿಕೆ ಮಾಡುವಂತಹ ಸರ್ಕಾರಗಳು ಕರ್ನಾಟಕದಲ್ಲಿ ಬರಬೇಕು ಅಥವಾ ದೇಶದ ರಾಜಕಾರಣವೂ ಹಾಗೆಯೇ ಬದಲಾಗಬೇಕು. ಇದನ್ನು ತೆಲಂಗಾಣ ಶಸ್ತ್ರಾಸ್ತ್ರ ಬಂಡಾಯದಲ್ಲಿ ಗುರುತಿಸಬಹುದು.

ಮಹಿಳೆಯರು ಮತ್ತು ಮಕ್ಕಳು ಕೂಡ ಶಸ್ತ್ರಾಸ್ತ್ರಗಳನ್ನು ಹಿಡಿದು ಕಮ್ಯುನಿಸ್ಟ್ ಚಳವಳಿಯಲ್ಲಿ ಭಾಗವಹಿಸಿದ್ದು ಚಾರಿತ್ರಿಕವಾದುದು. ಹೀಗೆ ಕರ್ನಾಟಕದಲ್ಲಿ ಹೈದಾರಾಬಾದ್ ಕರ್ನಾಟಕದ ಭಾಗವು ನಿಜಾಮ ಆಳ್ವಿಕೆ ಹಾಗೂ ರಾಜಕಾರಣ ದಬ್ಬಾಳಿಕೆಯಿಂದ ನಲುಗಿದ ಕಾರಣ ಇಲ್ಲಿನ ಭೂಮಿಯ

ಪ್ರಶ್ನೆಗಳು ಹಾಗೂ ನೀರಾವರಿಯ ಪ್ರಶ್ನೆಗಳು ಹಾಗೂ ಜಾತಿ ತಾರತಮ್ಯದ ಪ್ರಶ್ನೆಗಳು ಹಾಗೆಯೇ ಉಳಿದಿದ್ದು ಭಾಷಿಕ ನೆಲೆಗಳಲ್ಲಿ ಅದು 'ಸಮುದಾಯ'ದ ನಾಟಕಗಳ ಮುಖಾಂತರ 'ಸಮುದಾಯ' ಸಂಘಟನೆ ಗುರುತಿಸಿದೆ. ಉದಾಹರಣೆಗೆ ಸಿಂಧನೂರು 'ಸಮುದಾಯ' ಘಟಕದಲ್ಲಿ 'ಪೋಸ್ಟರ್' ನಾಟಕ ಎಂಬತ್ತರ ದಶಕದಲ್ಲಿ ಕೂಲಿಕಾರರಲ್ಲಿ ಹೆಚ್ಚು ಪ್ರಭಾವ ಬೀರಿತು. ನಾಟಕದ ಸಾರಾಂಶ ಕೂಲಿಕಾರರನ್ನು ಸಂಘಟನೆಯ ಪೋಸ್ಟರ್ ಆ ಊರಿನ ಭೂ ಮಾಲೀಕನ ಊರಿನಲ್ಲಿ ಹಾಕಲಾಗುತ್ತದೆ. ಆದರೆ ಆ ರೈತ ಕೂಲಿಕಾರ್ಮಿಕ ಪೋಸ್ಟರ್ ಹಾಕಿದ್ದನ್ನು ಪ್ರಶ್ನಿಸಿ ಭೂಮಾಲಿಕ ಕೂಲಿಕಾರನನ್ನು ತನ್ನ ಜೀತದ ಕೆಲಸದಿಂದ ಹೊರಹಾಕುತ್ತಾನೆ. ಈ ನಿಜ ಘಟನೆಯನ್ನು ಇಟ್ಟುಕೊಂಡು ಸುರೇಶ ಅನಗಳ್ಳಿ ಅವರ ನಿರ್ದೇಶನದಲ್ಲಿ ಪೋಸ್ಟರ್ ಎಂಬ ಬೀದಿನಾಟಕ ರೂಪಕವು ಸಂಘಟನೆಯ ಮೂಲಕ ರೈತ-ಕೂಲಿಕಾರರಲ್ಲಿ ಹೋರಾಟದಲ್ಲಿ ಪ್ರಜ್ಞೆಯನ್ನು ಬೆಳೆಸಿದ್ದು, ಚಾರಿತ್ರಿಕ ಅಂಶವೆಂದು ಹೇಳಬಹುದಾಗಿದೆ. ಹೀಗೆ 'ಸಮುದಾಯ' ಭಾಷಿಕ ನೆಲೆಗಳಲ್ಲಿ ತನ್ನ ಸಾಂಸ್ಕೃತಿಕ ಅನನ್ಯತೆಯಿಂದ ಗುರುತಿಸಿಕೊಂಡಿದೆ. ಜೊತೆಗೆ ಕರ್ನಾಟಕ ಭಾಷೆ ಅಸ್ಮಿತೆಗೆ ಯಾವುದೇ ತೊಂದರೆಯಾಗದಂತೆ ದೇಶೀಯ ಪರಿಕಲ್ಪನೆಯ ಜನಪದ ನಾಟಕಗಳು ಕೂಡ 'ಸಮುದಾಯ' ನಾಟಕಗಳನ್ನು ರಚಿಸಿದೆ. ಅದು ಮಹಾಚೈತ್ರ, ತುಘಲಕ್, ಬೆಲ್ಚಿ, ಪಂಚಮ, ಮಾರಿಕೊಂಡವರು, ದಂಗೆಯ ಮುಂದಿನ ದಿನಗಳು, ಮಹಿಮಾಪುರ, ಟಿಪ್ಪು ಕಂಡ ಕನಸು, ಮಂಟೆಸ್ವಾಮಿ ಕಥಾ ಪ್ರಸಂಗ, ದಂಡೆ ಮುಂತಾದ ನಾಟಕಗಳ ಭಾಷಾ ವೈವಿಧ್ಯತೆ ನಾಟಕಗಳು ಗುರುತಿಸಬಹುದಾಗಿದೆ.

ಈ 'ಸಮುದಾಯ' ಸಂಘಟನೆಯಲ್ಲಿ ಹೆಚ್ಚು ತೊಡಗಿಸಿಕೊಂಡಿರುವ ಕನ್ನಡ ಭಾಷಾ ಸಾಹಿತ್ಯ ಚರಿತ್ರೆಯ ಹಾಗೂ ಕರ್ನಾಟಕ ಏಕೀಕರಣ-ಸ್ವತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಹೋರಾಟಗಾರರ ಪ್ರಭಾವಕ್ಕೆ ಒಳಗಾದ ಎರಡನೇ ತಲೆಮಾರಿನ ಸಾಹಿತ್ಯ-ಚಳವಳಿಗಾರರ ಚಿಂತಕರಿಂದ ರೂಪುಗೊಂಡಿತು ಎಂದು ಚಾರಿತ್ರಿಕವಾಗಿ ಗುರುತಿಸಬಹುದಾಗಿ ಅಂತಹ ಘಟನೆಗಳು ಈ ಕೆಳಗಿನಂತೆ ಇವೆ. ಸ್ವಾತಂತ್ರ್ಯ ರಂಗ ಚಳವಳಿಯ ಇಪ್ಟಾ ಸಂಘಟನೆಯಲ್ಲಿ ತೊಡಗಿಸಿಕೊಂಡಂತಹ ಎಡ ಚಿಂತನೆಯ ಸಾಹಿತಿ-ಚರಿತ್ರೆಕಾರರು ಹಾಗೂ ವಿಜ್ಞಾನಿಗಳು-ಹೋರಾಟಗಾರರು, ರವೀಂದ್ರನಾಥ ಠ್ಯಾಗೂರ್, ಬಿಪಿನ್ ಚಂದ್ರಪಾಲ್, ಹೋಮಿ ಜಹಾಂಗೀರ್ ಬಾಬಾ, ಕಮಲಾದೇವಿ ಚಟ್ಟೋಪಾಧ್ಯಾಯ ಹಾಗೆಯೇ ಕರ್ನಾಟಕದ ಏಕೀಕರಣ ಚಳವಳಿಯ ಸಕ್ರಿಯವಾಗಿ ಭಾಗವಹಿಸಿದ ೧೯೫೨ರಲ್ಲಿ ಅಕರಾನಿ ಪರಿಷತ್ತು (ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್) ಸ್ಥಾಪಕ ಕಮ್ಯುನಿಸ್ಟ್ ಮುಖಂಡರುಗಳಾದ ಎ.ಜೆ.ಮುಧೋಳ, ಎನ್.ಕೆ.ಉಪಾಧ್ಯಾಯ ಅಣ್ಣ, ತಮ್ಮ ಎಲ್.ಎನ್.ಉಪಧ್ಯಾಯ ಹಾಗೂ ಹೊಸಮನಿ ಸಿದ್ಧಪ್ಪ, ಪ್ರಮುಖವಾಗಿ ೧೯೫೩ರ ಹುಬ್ಬಳ್ಳಿ ಗಲಭೆಯ ಚಳವಳಿಯಲ್ಲಿ[೬] ಉಪನ್ಯಾಸ ಮಾಡದಿದ್ದಂತಹ ಇವರ ಸಿ.ಜಿ.ಪಾಟೀಲ, ತಡಸದ ಮಠ, ಶಂಕರಗೌಡ, ಬಿ.ವಿ.ಕಕ್ಕಿಲ್ಲಾಯ, ಕೆ.ಆರ್.ಕಾರಂತರು, ವಿ.ಎನ್.ಪಾಟೀಲ, ಎಲ್ಲಾ ಸಂಗಾತಿಗಳು ಅಕಾರಾನಿ ಪರಿಷತ್ತು ಹಾಗೂ ಹೈದರಾಬಾದ್-ಕರ್ನಾಟಕ

ಕ್ರಿಯಾ ಸಮಿತಿ ಕನ್ನಡಿಗನ ಸಾಂಸ್ಕೃತಿಕ ರಾಜಧಾನಿಯಾದ ಹಂಪಿಯಲ್ಲಿ ಸಮ್ಮೇಳನವೊಂದನ್ನು ನಡೆಸಿದರು. ಈ ಮೇಲಿನ ಕಮ್ಯುನಿಸ್ಟ್ ನಾಯಕರು ಅಕರಾನಿ ಪರಿಷತ್ತಿನಲ್ಲಿದ್ದ ಒಂದು ಸಕ್ರಿಯ ಸಂಘಟನೆಯಾಗಿದ್ದು ರೈಲ್ವೇ ಬಂದ್, ಸತ್ಯಾಗ್ರಹ, ಸಭೆ, ಮೆರವಣಿಗೆ, ಚಳವಳಿಗಳನ್ನು ನಡೆಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸಿನ ಬಿ.ಎನ್.ದಾತಾರ್ ಅವರು ಹುಬ್ಬಳ್ಳಿ ಘಟನೆಯಲ್ಲಿ ಸಾವಿರಾರು ಕಮ್ಯುನಿಸ್ಟ್ ಮುಖಂಡರನ್ನು ಸೆರೆಮನೆಗೆ ಅಟ್ಟಿದ್ದರು. ಜೊತೆಗೆ ದಾತಾರ್ ಕಮ್ಯುನಿಸ್ಟ್‌ರನ್ನು ದರೋಡೆಕೋರರು ಎಂದಿದ್ದರು. ಇದನ್ನು ಮರೆಯದ ಕಮ್ಯುನಿಸ್ಟರು ಅರವತ್ತರ ದಶಕದಲ್ಲಿ ದಾತರ್ ಹಂಪಿಗೆ ದಾತಾರ್ ಅವರು ಬಂದಾಗ ಪ್ರಶ್ನಿಸಿ ಕಪ್ಪು ಪಟ್ಟಿ ಬಾವುಟಗಳನ್ನು ಪ್ರದರ್ಶಿಸಿ ಅಸಮಾದಾನ ವ್ಯಕ್ತಪಡಿಸಿದರು. ಇವರ ಜೊತೆಗಾರರಾದ ಸಮಾಜವಾದಿ ಶಾಂತವೇರಿ ಗೋಪಾಲಗೌಡರು ವಿಧಾನಸಭೆಯ ಕಲಾಪಗಳಲ್ಲಿ ಹಾಗೂ ಹೋರಾಟದಲ್ಲಿ ಜೊತೆಗೂಡಿ ಭಾಗವಹಿಸುತ್ತಿದ್ದರು.[೧೭] ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ಕಾಂಗ್ರೆಸ್ ಪಕ್ಷದ ಶಾಸಕರು ಹಾಗೂ ಸಂಸದರು ಬಳ್ಳಾರಿ ಜಿಲ್ಲೆ ಯಾವುದಕ್ಕೆ ಸೇರಬೇಕು ಎಂಬ ವಿಚಾರದಲ್ಲಿ ದ್ವಂದ್ವಾತ್ಮಕ ಹೇಳಿಕೆಗಳನ್ನು ನೀಡುತ್ತಿದ್ದರು. ಆಂಧ್ರದ ಕಾಂಗ್ರೇಸ್ ರಾಜಕಾರಣಿಗಳು ಬಳ್ಳಾರಿ ಆಂಧ್ರಪ್ರದೇಶಕ್ಕೆ ಸೇರಬೇಕು ಎಂದು ವಾದಿಸುತ್ತಿದ್ದರು.

ಕರ್ನಾಟಕದ ಕಾಂಗ್ರೆಸ್ ಪಕ್ಷದ ರಾಜಕಾರಣಿಗಳು ಬಳ್ಳಾರಿ ಕರ್ನಾಟಕದಲ್ಲೇ ಉಳಿಯಬೇಕು ಎಂದು ಒಂದೇ ಪಕ್ಷದಲ್ಲಿ ಎರಡು ರೀತಿಯ ಹೇಳಿಕೆಗಳು ಉಂಟಾದ ಸಂದರ್ಭದಲ್ಲಿ ಅಕರಾನಿ ಪರಿಷತ್ತಿನ ಕಮ್ಯುನಿಸ್ಟ್ ಮುಖಂಡರು ಬಳ್ಳಾರಿಯು ಕರ್ನಾಟಕದ ಅವಿಭಾಜ್ಯ ಅಂಗ, ಅಲ್ಲಿ ಹೆಚ್ಚಿನವರು ಕನ್ನಡಿಗರಾಗಿರುವುದರಿಂದ ಕರ್ನಾಟಕ ಭಾಷೆ ಸಾಂಸ್ಕೃತಿಕ ಹಿನ್ನೆಲೆಯ ರಾಜ್ಯವಾಗಿರುವುದರಿಂದ, ಆಂಧ್ರ ಕಮ್ಯುನಿಸ್ಟ್ ನಾಯಕರು ಹಾಗೂ ಕರ್ನಾಟಕದ ಕಮ್ಯುನಿಸ್ಟ್ ನಾಯಕರು ಬಳ್ಳಾರಿ ಕರ್ನಾಟಕಕ್ಕೆ ಸೇರಬೇಕು ಎಂಬ ಒಂದೇ ತಿರ್ಮಾನಕ್ಕೆ ಬಂದು ಹಲವಾರು ಹೋರಾಟಗಳನ್ನು ನಡೆಸಿದರು. ಇದರ ಫಲವಾಗಿ ಕನ್ನಡಿಗರ ಆಶಯ ಈಡೇರಿದಂತಾಯಿತು. ಹೀಗೆ ಇಂತಹ ಕಮ್ಯೂನಿಸ್ಟ್ ನಾಯಕರ ಅಧೀನದಲ್ಲಿ ಎಡ ಕಮ್ಯುನಿಸ್ಟ್ ಹಾಗೂ ಸಮಾಜವಾದಿಗಳ ಪೀಳಿಗೆಯಲ್ಲಿ ಗುರುತಿಸಿಕೊಂಡಂತಹ ಪ್ರಸನ್ನ, ಸಿ.ಜಿ.ಕೆ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ, ನಿಸಾರ್ ಅಹಮ್ಮದ್, ಕೆ.ವಿ.ನಾರಾಯಣ, ಗಂಗಾಧರಸ್ವಾಮಿ, ಚಂದ್ರಶೇಖರ ಪಾಟೀಲ, ಆರ್.ಕೆ.ಹುಡಗಿ, ಲಿಂಗದೇವರು ಹಳೆಮನೆ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಶೂದ್ರ ಶ್ರೀನಿವಾಸ್, ಬಿ.ಜಿ.ಗಂಗಾಧರ, ಜಿ.ರಾಜಶೇಖರ ಕೆ.ರಾಮಯ್ಯ, ಕರೀಗೌಡ ಬೀಚನಹಳ್ಳಿ ಮುಂತಾದವರು 'ಸಮುದಾಯ' ಸಂಘಟನೆಯನ್ನು ೧೯೭೦ರ ತುರ್ತುಪರಿಸ್ಥಿತಿಯ ಸಂದರ್ಭವನ್ನು ಬಳಸಿಕೊಂಡು ಹುಟ್ಟುಹಾಕಿದರು. ಈ ಚಾರಿತ್ರಿಕ ಸನ್ನಿವೇಶದ ನೆಲಗಟ್ಟು ಆಧಾರದಲ್ಲಿ ಬೆಳವಣಿಗೆಯನ್ನು ಗುರುತಿಸುತ್ತೇವೆ. ಹೀಗೆ ಭಾಷಿಕ ನೆಲೆಗಳಲ್ಲಿ 'ಸಮುದಾಯದ' ನಾಟಕಗಳು ಹಾಗೂ ಜಾಥಾಗಳು ಕನ್ನಡ ಸಾಹಿತ್ಯದ ಬೆಳವಣಿಗೆ 'ಸಮುದಾಯ'ವು ನೀಡಿದ ಆದ್ಯತೆ ಬಹುಮುಖ್ಯ ಎನಿಸುತ್ತದೆ. ಇದು ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಭಾಷಾ ಕೌಶಲ್ಯವನ್ನು ಬೆಳಸಿದದ್ದನ್ನು ಕಾಣುತ್ತೇವೆ.

೪.೬. 'ಸಮುದಾಯ' ಹಾಗೂ ಮಹಿಳಾ ಜಾಗೃತಿಯ ನೆಲೆಗಳು

'ಸಮುದಾಯ' ಹಾಗೂ ಮಹಿಳಾ ಜಾಗೃತಿಯ ಹಿನ್ನೆಲೆಯಲ್ಲಿ ಸಾಮಾಜಿಕ ಚಳವಳಿ ಎಂಬತ್ತರ ದಶಕದಲ್ಲಿ ಭಿನ್ನರೀತಿಯಲ್ಲಿ ಮೂಡಿಬಂದವು. ಇವು ಸಂಘಟನಾತ್ಮಕವಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎ.ಡಿ.ಡಿ.ಡಬ್ಲ್ಯೂ.ಒ)ಯಾಗಿ ರೂಪುಗೊಂಡಿತು. ಈ ಸಂಘಟನೆಯು ಕರ್ನಾಟಕ ಮಹಿಳಾ ಜಾಗೃತಿಯ ಸಾಮಾಜಿಕ ಚಳವಳಿಯ ಹಿನ್ನೆಲೆಯಾಗಿ ರೂಪುಗೊಂಡ ಜನವಾದಿ ಮಹಿಳಾ ಸಂಘಟನೆ (ಜೆ.ಎಂ.ಎಸ್) ಮಹಿಳಾ ಪರವಾಗಿ ಧ್ವನಿ ಎತ್ತುವ ಪ್ರಗತಿಪರ ಸಂಘಟನೆಯಾಗಿ ಚಾರಿತ್ರಿಕವಾಗಿ ಗುರುತಿಸಿಕೊಂಡಿದುದ್ದನ್ನು ನೋಡುತ್ತೇವೆ. ಈ ಮಹಿಳಾ ಸಂಘಟನೆಯನ್ನು ಪ್ರಾರಂಭದಲ್ಲಿ ಕಟ್ಟಲು ಪಾತ್ರವಹಿಸಿದವರು. ಈ ಹಿನ್ನೆಲೆಯಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯಲ್ಲಿ ನಾಟಕಕಾರರು, ನಿರ್ದೇಶಕರು, ನೃತ್ಯ, ಸಂಗೀತಗಾರರು(ಕ್ರಾಂತಿ ಗೀತೆಗಳು), ಹೋರಾಟದ ಹಾಡುಗಳು ಹಾಗೂ ಹೋರಾಟಗಾರ್ತಿಯರು ಕರ್ನಾಟಕದಲ್ಲಿ ಜಾಗೃತಿ ಪಡೆದುದನ್ನು ನೋಡುತ್ತೇವೆ.

ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮೊದಲು ೧೯೦೮ರಲ್ಲಿ ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ದುಡಿಯುವ ಕಾರ್ಖಾನೆಯ ಮಹಿಳೆಯರು ಇವರ ದುಡಿಮೆಯ ಹಕ್ಕುಗಳಿಗಾಗಿ ದುಡಿಯುವ ಸಂಘಟನೆಯನ್ನು ಕಟ್ಟಲಿಕ್ಕಾಗಿ, ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ, ಒಂದು ವಾರದಲ್ಲಿ ಒಂದು ದಿನ ವಿಶ್ರಾಂತಿಗಾಗಿ, ಚಳವಳಿಯನ್ನು ಮಾಡಿದ ಮಹಿಳಾ ಹಕ್ಕುಗಳನ್ನು ಗೆದ್ದಂಥ ದಿನ. ಮಾರ್ಚ್ ೮ ಅಂತರರಾಷ್ಟ್ರೀಯ ಮಹಿಳಾ ದಿನವೆಂದು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ. ಈ ಹೋರಾಟದಿಂದ ಭಾನುವಾರ ವಿಶ್ರಾಂತಿ ದಿನ ಎಂದು ಜಾರಿಗೆ ಬಂದಿದ್ದು ಮಹತ್ವದ ಸಂಗತಿ. (Relief day)ಗಾಗಿ ಜಗತ್ತಿನಾದ್ಯಂತ ಹೋರಾಟಗಳಾದ ಪರಿಣಾಮ ನಾವಿಂದು ಎಂಟು ಗಂಟೆ ಕೆಲಸ ಮಾಡಲು ಸಾಧ್ಯವಾಗಿರುವುದು.[೧೮] ಕೆಲಸಕ್ಕೆ ತಕ್ಕ ಕೂಲಿ ಪಡೆಯಲು ಸಾಧ್ಯವಾಗಿರುವುದು. ಹೀಗೆ ಮಹಿಳಾ ಜಾಗೃತಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪುರುಷ ಹೋರಾಟಗಾರರನ್ನು ಮಾತ್ರ ಚರಿತ್ರೆಯಲ್ಲಿ ದಾಖಲಿಸಿ ಮಹಿಳಾ ಹೋರಾಟಗಾರ್ತಿಯನ್ನು ಮರೆಮಾಚುವ ಸ್ಥಿತಿಯು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ.

ಎಡ-ಪ್ರಜಾಸತ್ತಾತ್ಮಕ ಚಳವಳಿಗಳ ಎಪ್ಪತ್ತು ಹಾಗೂ ಎಂಬತ್ತರ ದಶಕದ ಚಳವಳಿಗಳು ಹೆಚ್ಚಾದಂತೆಲ್ಲಾ ಸಬಾಲ್ಟರ್ನ್ ಚಿಂತನೆಗಳಿಂದ ಹಾಗೂ ಮಾರ್ಕ್ಸ್‌ವಾದಿ ಚಿಂತನೆಗಳಿಂದ ಪ್ರಭಾವಿತರಾದ ಸುಭಾಷ್‌ಚಂದ್ರ ಬೋಸ್ ಅವರು ಸ್ವತಂತ್ರವಾಗಿ ಬ್ರಿಟಿಷರ ವಿರುದ್ಧ ಐ.ಎನ್.ಐ(ಇಂಡಿಯನ್ ನ್ಯಾಷನಲ್ ಆರ್ಮಿ) ಸೈನ್ಯವನ್ನು ಕಟ್ಟಿದರು. ಅದರಲ್ಲಿ ಮಹಿಳೆಯರಿಗೆ (Train up) ಮಾಡಿದರು. ಶಸ್ತ್ರಾಸ್ತ್ರ ತರಬೇತಿ ನೀಡಿ ಹೋರಾಟದ ತುಕಡಿಯ ಕ್ಯಾಪ್ಟನ್ ಆಗಿದ್ದ ಕಾಮ್ರೇಡ್ ಲಕ್ಷ್ಮೀ ಸೆಹೆಗಲ್ ಅವರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯನ್ನು ಭಾರತದಲ್ಲಿ ಕಟ್ಟಿ ಬೆಳೆಸಿದರು.

ಭಾರತದ ಮನು ಸಂಸ್ಕೃತಿ ವರ್ಣಾಶ್ರಮ ಪದ್ಧತಿಯಿಂದ ಮಹಿಳೆಯರು ಎರಡು ರೀತಿಯಲ್ಲಿ ಅಸ್ಪೃಶ್ಯತೆಯ ಶೋಷಣೆಗಳಿಗೆ ಒಳಗಾಗುವುದು ಒಂದಾದರೆ, ಎರಡನೆಯದು ಮಹಿಳೆಯು ಎರಡನೇ ದರ್ಜೆಯವರು ಎಂಬ ಸಾಮಾನ್ಯ ಜ್ಞಾನವನ್ನು ಸಮಾಜದಲ್ಲಿ ಗಟ್ಟಿಗೊಳಿಸುತ್ತಾ ಹೋಗುವುದು, ಜೊತೆಗೆ ಮಹಿಳೆಯು ಮಟ್ಟು ಹಾಗೂ ಮೌಢ್ಯತೆಯ ಹೆಸರಿನಲ್ಲಿ ಮನೆಯಲ್ಲೇ ಅಸ್ಪೃಶ್ಯತೆ ಶೋಷಣೆಯನ್ನು ಮಾಡುವುದಾಗಿದೆ. ಜೊತೆಗೆ ೩೩ ಶೇಕಡ ರಾಜಕೀಯ ಮೀಸಲಾತಿ ಹಾಗೂ ಹೆಣ್ಣು ಭ್ರೂಣಹತ್ಯೆ, ದೇವದಾಸಿ ಪದ್ಧತಿ, ಬೆತ್ತಲೆಸೇವೆ, ಬಾಲ್ಯವಿವಾಹ, ವರದಕ್ಷಿಣೆಯ ಕಿರುಕುಳ, ಲೈಂಗಿಕ ಶೋಷಣೆ, ಮುಂತಾದ ಶೋಷಣೆಗಳಿಗೆ ಶಿಕ್ಷೆ ಇದ್ದರು ಈಗಲು ನಿರಂತರವಾಗಿ ಮಹಿಳೆಯರ ಮೇಲೆ ಶೋಷಣೆಗಳು ನಡೆಯುತ್ತಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ರಾಜಸ್ಥಾನ-ಪಂಜಾಬ್ ಮುಂತಾದ ರಾಜ್ಯಗಳಲ್ಲಿ ೧೦೦೦ ಪುರುಷರಿಗೆ ೭೦೦-೮೦೦ ಹೆಣ್ಣು ಮಕ್ಕಳ ಕೊರತೆಯನ್ನು ಕಾಣುತ್ತೇವೆ. ಹೆಣ್ಣು ಭ್ರೂಣ ಹತ್ಯೆ ಹೆಚ್ಚುತಿದೆ. ಕರ್ನಾಟಕದಲ್ಲಿ ಈ ಹೆಣ್ಣು ಭ್ರೂಣ ಹತ್ಯೆಯು ನಡೆಯುತ್ತಿರುವುದನ್ನು ಪತ್ರಿಕೆಗಳಲ್ಲಿ ನೋಡುತ್ತೇವೆ. ಇದರ ಜೊತೆಗೆ ಹೆಣ್ಣಿಗೆ ಅಪೌಷ್ಟಿಕತೆಯು ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಜೊತೆಗೆ ಅತ್ಯಾಚಾರದಂತಹ ಘಟನೆಗಳು ದಿನ ನಿತ್ಯವೂ ಸಾಮಾನ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಜನವಾದಿ ಮಹಿಳಾ ಸಂಘಟನೆಯು ಗುರುತಿಸಿ ಮಹಿಳೆಯರಿಗೆ ಒಂದು ಪ್ರತ್ಯೇಕ ಸಂಘಟನೆ ಅತ್ಯಗತ್ಯವೆಂದು ಕರ್ನಾಟಕದಲ್ಲಿ ೧೯೮೮ರಲ್ಲಿ ಒಂದು ರಾಜ್ಯಮಟ್ಟ ಜನವಾದಿ ಮಹಿಳಾ ಸಂಘಟನೆಯನ್ನು ಕಟ್ಟಿಕೊಂಡು ಚಳವಳಿಗಳನ್ನು ಮುಂದುವರಿಸಿದರು.[೧೯] ಈ ಸಂಘಟನೆ ಬಹುತೇಕ ಮಹಿಳೆಯರು ಎಪ್ಪತ್ತು ಹಾಗೂ ಎಂಬತ್ತರ ದಶಕದಲ್ಲಿ 'ಸಮುದಾಯ' ವಿದ್ಯಾರ್ಥಿ-ದಲಿತ- ಬಂಡಾಯ ಚಳವಳಿಗಳಲ್ಲಿ ಗುರುತಿಸಿಕೊಂಡಂತಹ ಮಹಿಳಾ ಹೋರಾಟಗಾರ್ತಿಯರು ಎಂದು ಚಾರಿತ್ರಿಕವಾಗಿ ತಿಳಿಸಬಹುದಾಗಿದೆ. ಸಂಕುಚಿತ ಸ್ತ್ರೀವಾದಿ ನೆಲೆಯಿಂದಾಚೆ ಮಹಿಳಾ ವಿಮೋಚನೆಯ ಸ್ಪಷ್ಟ ಕಣ್ಣೋಟವನ್ನು ಹೊಂದಿರುವ ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ವರ್ಗಸಂಘರ್ಷದ ನೆಲೆಯಲ್ಲಿಯೇ ಮಹಿಳಾ ಪ್ರಶ್ನೆಯನ್ನು ನೋಡುವ ಮಹಿಳೆಯರ ಸಮಸ್ಯೆಗಳು ಬಹುಮಟ್ಟಿಗೆ ಸಮಾಜದ ಸಮಸ್ಯೆ ಇದರ ಭಾಗವಾಗಿಯೆ ಮಹಿಳೆಯ ಸಮಸ್ಯೆಗಳಲ್ಲಿ ಪರಿಹಾರ ಕಾಣಲು ಸಾಧ್ಯವಾಗುತ್ತದೆ. ಎಂದು ಪ್ರತಿಪಾದಿಸಿದರ ಕಾರ್ಲ್ಲಾ ಜೆ.ಟ್ಕಿನ್, ರೋಸಾ ಲಕ್ಸಂ ಬರ್ಗ್‌ರಂತಹವರನ್ನು ಪರಿಚಯಿಸುವ ಇದರ ಮಹಿಳಾ ಜಾಗೃತಿ ಹಿನ್ನೆಲೆಯಲ್ಲಿ ಮಹಿಳಾ ಚಳವಳಿಯನ್ನು ಕಟ್ಟಿದಪರಿಯನ್ನು ಗುರುತಿಸಿ. ಕರ್ನಾಟಕದಲ್ಲಿ ಎನ್.ಗಾಯಿತ್ರಿ, ಕೆ.ನೀಲಾ, ಕೆ.ಎಸ್.ವಿಮಲ, ಮಾಧವಿ ಭಂಡಾರಿ ಎಚ್.ಎಸ್.ಅನುಪಮ ಸಬಿಹಾ ಭೂಮಿಗೌಡ, ಕೆ.ಷರೀಫಾ, ದು.ಸರಸ್ವತಿ, ಎಚ್.ಎಲ್.ಪುಷ್ಪ, ಮೀನಾಕ್ಷಿ ಬಾಳಿ, ಗೀತಾ, ಗೌರಮ್ಮ, ಕೆ.ಎಸ್.ಲಕ್ಷಿ ಮುಂತಾದವರನ್ನು ಗುರುತಿಸಬಹುದಾಗಿದೆ. ಇವರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮಹಿಳಾ ಚಳವಳಿಗಳಲ್ಲಿ ಭಾಗವಹಿಸುವಂತಹ ಚಿಂತನೆ ಹಾಗೂ ಹೋರಾಟವನ್ನು ರೂಪಿಸಿದ್ದಾರೆ.

ಮಹಿಳಾ ಜಾಗೃತಿಯ ಹಿನ್ನೆಲೆಯಲ್ಲಿ 'ಸಮುದಾಯ' ರೂಪಿಸಿದ ಮಹಿಳಾ ಚಳವಳಿಗೆ ಹೋರಾಟಗಾರ್ತಿಯರು, ನಾಟಕಕಾರರು, ಸಿನಿಮಾ ನಟರರು ಹಾಗೂ ಹಾಡುಗಾರ್ತಿಯರು

ನಾಟಕ ನಿರ್ದೇಶಿಕಿಯರು, ನೃತ್ಯಗಾರ್ತಿಯರು ಮುಂತಾದವರು 'ಸಮುದಾಯ' ಸಂಘಟನೆಯ ಅವರ ಸೃಜನಶೀಲತೆಯನ್ನು ಮತ್ತಷ್ಟು ಹಿಗ್ಗಿಸಲು ಕಾರಣವಾಯಿತು. ಉದಾಹರಣೆಗೆ ಲೋಹಿತಾಶ್ವ, ಸಿನಿಮಾನಟರು, ಸಿ.ಜಿ.ಕೃಷ್ಣಸ್ವಾಮಿ, ವೈಜಯಂತಿ, ಲಕ್ಷ್ಮಿ ಚಂದ್ರಶೇಖರ್, ಎಸ್.ಮಾಲತಿ, ಶಾಂತ, ಕೆ.ನೀಲ, ಮೀನಾಕ್ಷಿ ಬಾಳಿ ಮುಂತಾದವರನ್ನು 'ಸಮುದಾಯ'ದಿಂದ ತನ್ನದೆ ಆದ ನೈಪುಣ್ಯತೆಯನ್ನು ಕಲಾ ಪಾತ್ರಗಳಾಗಿ ತೊಡಗಿಕೊಂಡರು.

೪.೭. ವಿದ್ಯಾರ್ಥಿ-ಯುವಜನಾಂಗದ ಎಚ್ಚರದ ಹಿನ್ನೆಲೆಯಲ್ಲಿ 'ಸಮುದಾಯ'

೧೯೩೬ರಲಿ ಇಡಿ ಭಾರತದ ವಿದ್ಯಾರ್ಥಿ ಸಮುದಾಯಕ್ಕೆ ಒಂದು ವೈಜ್ಞಾನಿಕ ಕಾರ್ಯಸೂಚಿಯನ್ನು ಕೊಟ್ಟು, ಆದರ ಆಧಾರದಲ್ಲಿ ಇಡಿ ವಿದ್ಯಾರ್ಥಿ ಸಮುದಾಯವನ್ನು ಸಂಘಟಸಿದರು ಮತ್ತು ಅದಕ್ಕೆ ಒಂದು ಕ್ರಾಂತಿಕಾರಿ ಸ್ವರೂಪವನ್ನು ಕೊಟ್ಟರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ಎಷ್ಟು ಪ್ರಮುಖ ಪಾತ್ರ ವಹಿಸಿದರು ಎಂದು ಇದರಿಂದ ಗೊತ್ತಾಗುತ್ತದೆ. ಇಷ್ಟೆಲ್ಲಾ ಇದ್ದರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಒಂದು ಸಮಗ್ರ ದಾಖಲೆಯ ಬರವಣಿಗೆ ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಸ್ವಾತಂತ್ರ್ಯ ಹೋರಾಟವು ಕರ್ನಾಟಕದಲ್ಲಿ ಹಲವಾರು ಕಾರಣಗಳಿಂದಾಗಿ ಇಲ್ಲಿ ನಡೆಯಲಿಲ್ಲವೆಂಬುದು ಅಷ್ಟೇ ವಾಸ್ತವ ಸಂಗತಿಯಾಗಿದೆ. ಅಂದಿನ ಕರ್ನಾಟಕವು ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದರ ಪರಿಣಾಮವಾಗಿ ಅಂದಿನ ಬಾಂಬೆ ಪ್ರೇಸಿಡೆಸ್ಸಿಯ ಭಾಗವಾಗಿದ್ದ ಇಂದಿನ ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮತ್ತು ಬಿಜಾಮರ ಜಿಲ್ಲೆಗಳ ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ತೀವ್ರ ಸ್ವರೂಪದ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ನಡೆದಿತ್ತು-ಆದರೆ ಅಂದಿನ ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿ ಪ್ರಾಂತ್ಯಗಳಲ್ಲಿ ಸ್ವಾತಂತ್ರ್ಯ ಹೋರಾಟದ ಛಾಯೆಗಳು ಅಷ್ಟಾಗಿ ಕಾಣುವುದಿಲ್ಲ. ಅಂದಿನ ಮೈಸೂರು ಮಹಾರಾಜರ ಆಡಳಿತಕ್ಕೆ ಒಳಪಟ್ಟಿದ್ದ ಈಗಿನ ಹಳೆಯ ಮೈಸೂರಿನ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟವು ಸ್ವಲ್ಪಮಟ್ಟಿನ ತೀವ್ರತೆಯನ್ನು ಪಡೆದಿದ್ದು ಸಹ ತಡವಾಗಿಯೇ. ೧೯೩೬ರಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಕರೆಯಲ್ಪಡುವ ಇಂದಿನ ಚಿಕ್ಕಬಳ್ಳಾಮರ ಜಿಲ್ಲೆಯ ವಿಧುರಾಶ್ವತ್ಥದಲ್ಲಿ ನಡೆದ ಏಳು ಜನರ ಹತ್ಯಾಕಾಂಡದ ನಂತರವೇ ತೀವ್ರಸ್ವರೂಪವನ್ನು ಪಡೆಯಿತು ಎಂಬುದು ಗಮನಾರ್ಹವಾಗಿದೆ. ಹಾಗಾಗಿ ಕರ್ನಾಟಕದಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡಿದ್ದು ಸಹ ೧೯೪೦ರ ದಶಕದ ಆರಂಭದಿಂದಲೇ, ಅದು ಸಹ ಅಂದಿನ ಪ್ರಮುಖ ವಿದ್ಯಾಕೇಂದ್ರಗಳಾಗಿದ್ದ ಮೈಸೂರು ಮತ್ತು ಬೆಂಗಳೂರುಗಳಲ್ಲಿ, ಉಳಿದ ಭಾಗಗಳಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ; ಹಾಗಾಗಿ ಅದಕ್ಕೆ ಒಂದು ಏಕತೆ ಬಂದಿರಲಿಲ್ಲವೆಂಬುದು ಸಹ ಸತ್ಯದ ಸಂಗತಿಯಾಗಿದೆ. ಪ್ರಮುಖವಾಗಿ ಮಹಾತ್ಮ ಗಾಂಧಿ ಅವರು "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂದು ಕರೆ ನೀಡಿದ "ಕ್ವಿಟ್ ಇಂಡಿಯಾ" ಚಳವಳಿಯ ನಂತರವೇ ಕರ್ನಾಟಕದಲ್ಲಿ ವಿದ್ಯಾರ್ಥಿಗಳು ಹೆಚ್ಚು ಚುರುಕಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸಲು ಪ್ರಾರಂಭಿಸಿದರು. ೧೯೪೨ರ ಈ

ಚಳುವಳಿಯಲ್ಲಿ ಬೆಮಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸೇರಿದಂತೆ ನಾಲ್ಕು ಜನ ವಿದ್ಯಾರ್ಥಿ-ಯುವಜನರು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬ್ರಿಟಿಶರ ಗುಂಡಿಗೆ ಬಲಿಯಾದದ್ದು ಗಮನಾರ್ಹ ಸಂಗತಿಯಾಗಿದೆ. ಈಗಲೂ ಕೂಡ ಈ ಹುತಾತ್ಮರ ನೆನಪಿಗಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಹುತಾತ್ಮ ಸ್ತಂಭವನ್ನು ನಿಲ್ಲಿಸಲಾಗಿದೆ.

ಎಪ್ಪತ್ತು-ಎಂಬತ್ತರ ದಶಕದ ರಾಜಕಾರಣದ ಸ್ಥಿತ್ಯಂತರಗಳನ್ನು ಕಂಡ ಕಾಲವಾಗಿದ್ದು ಈ ಹಿನ್ನೆಲೆಯಲ್ಲಿ ರೂಪುಗೊಂಡ ವಿದ್ಯಾರ್ಥಿ ಯುವಜನ ಚಳವಳಿಗಳನ್ನು ಗುರುತಿಸುತ್ತೇವೆ. ಈ ಚಳವಳಿಯಿಂದ ವಿದ್ಯಾರ್ಥಿ ನಾಯಕರು ೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸನ್ನಿವೇಶದಲ್ಲಿ 'ಸಮುದಾಯ' ಎಂಬಂತಹ ಸಾಂಸ್ಕೃತಿಕ ಸಂಘಟನೆ ಹುಟ್ಟಿಗೂ ಕಾರಣವಾದರು. ಹೀಗೆ ವಿದ್ಯಾರ್ಥಿ ಯುವಜನರ ಎಚ್ಚರದ ಹಿನ್ನೆಲೆಯಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಸಂಬಂಧ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆ (ಎನ್.ಎಸ್.ಯು.ಐ) ವಿದ್ಯಾರ್ಥಿ ಸಂಘಟನೆಗಳ ಸೈದ್ಧಾಂತಿಕ ವಿಚಾರಗಳ ಪಲ್ಲಟಗಳ ಸಂಘರ್ಷ ಜೊತೆಗೆ ಅಖಿಲ-ಭಾರತ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ) ಸಂಘಟನೆಯ ಸಿದ್ಧಾಂತಗಳ ಎಡ ಮತ್ತು ಬಲಪಂಥಿಯ ಚಿಂತನೆಯುಳ್ಳ ವಿದ್ಯಾರ್ಥಿ ಚಳವಳಿಗಳು ಗಟ್ಟಿಗೊಂಡ ಸಂದರ್ಭದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಎಡ ಚಿಂತನೆಯುಳ್ಳ ಸಂಘಟನೆಗೆ ದಲಿತ-ಹಿಂದುಳಿದ-ಶೂದ್ರ ಸಮುದಾಯ, ಜೊತೆಗೆ ಮನುಸ್ಮೃತಿ ಹಾಗೂ ಬ್ರಾಹ್ಮಣಶಾಹಿಯನ್ನು ಸಮಾಜ ವಿರೋಧಿಸುವ ವಿದ್ಯಾರ್ಥಿಗಳ ಎಸ್.ಎಫ್.ಐ ಅಂತಹ ವಿದ್ಯಾರ್ಥಿ ಸಂಘಟನೆಗಳನ್ನು ಬಲಿಷ್ಟಗೊಳಿಸಿದ್ದು ಹಾಗೂ ಚಾರಿತ್ರಿಕ ಚಳವಳಿಗಳನ್ನು ರೂಪಿಸಿದ್ದು ನೋಡುತ್ತೇವೆ. ಹೀಗೆ ಎಂಬತ್ತರ ದಶಕದಲ್ಲಿ ಚಳವಳಿಯು ವಿದ್ಯಾರ್ಥಿ-ಯುವಜನ ಪಾತ್ರ, ಸಿದ್ಧಾಂತಗಳ ಪ್ರಭಾವ, ಪ್ರಾಮಾಣಿಕತೆಯ ಹಿನ್ನೆಲೆಯಲ್ಲಿ ಸಮಾಜವಾದಿ ಚಿಂತನೆಗಳನ್ನು ವಿದ್ಯಾರ್ಥಿ ಯುವಜನರ ಮೇಲೆ ಪ್ರಭಾವಿಸಿ ತಮ್ಮ ಸಂಘಟನೆಗಳನ್ನು ಬೆಳೆಸಿ ಹಾಗೂ ವೈಯಕ್ತಿಕವಾಗಿ ಬೆಳೆದು ರಾಜಕಾರಣದ ಮೇಲೆ ಪ್ರಭಾವ ಬೀರಿದರು ಎಂಬುವುದು ಕಾಣುತ್ತೇವೆ.೨೧ ಅದರಲ್ಲಿ ೧೯೭೩ರಲ್ಲಿ ನಡೆದ ಬೂಸಾ ಚಳವಳಿ ಹಾಗೂ ಚಿಂತಾಮಣಿ ಹೋರಾಟದಲ್ಲಿ ಪೋಲೀಸರ ಗುಂಡಿಗೆ ಬಲಿಯಾದ ಎಸ್.ಎಫ್.ಐನ ವಿದ್ಯಾರ್ಥಿ ಘಟನೆಯು ಮುಂದೆ ಬೆಂಗಳೂರಿನ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾದ ವಿದ್ಯಾರ್ಥಿ ಸಂಘಟನೆ ಈ ಸಂಘಟನೆಗಳಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಂತಹ ವಿದ್ಯಾರ್ಥಿ ನಾಯಕರುಗಳಾದ ಸೂರ್ಯ ನಾರಾಯಣರಾವ್(ಸೂರಿ), ಸಿ.ಜಿ.ಕೃಷ್ಣಸ್ವಾಮಿ, ಡಿ.ಆರ್.ನಾಗರಾಜ, ಜಿ.ವಿ.ಶ್ರೀರಾಮರೆಡ್ಡಿ, ಬಯ್ಯಾರೆಡ್ಡಿ, ಪ್ರಸನ್ನಕುಮಾರ್, ಆರ್.ಕೆ.ಹುಡಗಿ, ಎಸ್.ಚಂದ್ರಶೇಖರ್, ಜಿ.ರಾಜಶೇಖರ್ ಮುಂತಾದವರನ್ನು ಗುರುತಿಸಬಹುದಾಗಿದೆ.

ಈ ಸಂಘಟನೆಯಿಂದ ವಿದ್ಯಾರ್ಥಿನಿಯರು ಸಹ ವಿದ್ಯಾರ್ಥಿ ಚಳವಳಿಯಲ್ಲಿ ಭಾಗವಹಿಸಿದುದು ಚಾರಿತ್ರಾರ್ಹ ಸಂಗತಿ. ಇವರಲ್ಲಿ ತೇಜಸ್ವಿನಿಗೌಡ, ಎಸ್.ಆರ್.ಆರಾಧ್ಯ, ನೀಲಾಸಂಪಿಗೆ ಮುಂತಾದವರು

ವಿದ್ಯಾರ್ಥಿ ಚಳವಳಿಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಬೆಳವಣಿಗೆ ಹೊಂದಿದ್ದು ಕೂಡ ಚಾರಿತ್ರಿಕ ಸಂಗತಿ. ಹೀಗೆ ವಿದ್ಯಾರ್ಥಿ ಯುವಜನ ಚಳವಳಿಯು ಎಪ್ಪತ್ತು-ಎಂಬತ್ತರ ದಶಕದಲ್ಲಿ ಹಾಸ್ಟೆಲ್ ಶುಲ್ಕದ ಹೆಚ್ಚಳ ಹಾಗೂ ವಿದ್ಯಾರ್ಥಿಗಳ ಭೋಧನಾ ಶುಲ್ಕ ಹೆಚ್ಚಳದ ವಿರುದ್ಧ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚು ಅನುದಾನ ನೀಡಬೇಕು ಎನ್ನುವ ಶೈಕ್ಷಣಿಕ ಸಮಸ್ಯೆಗಳಿಗೆ ಪ್ರತಿಭಟನೆಗಳ ಮೂಲಕ ಎಡಪಕ್ಷಗಳಿಗೆ ಆಸರೆಯಾಗಿ ಬೆಳವಣಿಗೆ ಹೊಂದಿದ್ದ ಸಂಘಟನೆಯೆಂದರೆ ಅದು ಎಸ್.ಎಫ್.ಐ ವಿದ್ಯಾರ್ಥಿ ಸಂಘಟನೆಯಾಗಿದೆ. ೧೯೮೦ರಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಸಂಘಟನೆ(ಡಿ.ವೈ.ಎಫ್.ಐ) ಪ್ರಾರಂಭವಾಗಿ ಯುವಜನ-ನಿರುದ್ಯೋಗ ಪ್ರಶ್ನೆಗಳನ್ನು ಎತ್ತಿಕೊಂಡು ನಿರಂತರವಾಗಿ ಸಂಘಟನೆಯನ್ನು ಗಟ್ಟಿಗೊಳಿಸುತ್ತಾ ಯುವ ಸಮುದಾಯ ಒಂದು ಸೈದ್ಧಾಂತಿಕವಾಗಿ ಬೆಳವಣಿಗೆ ಹೊಂದಲು ಕಾರಣವಾಗಿದ್ದನ್ನು ಗುರುತಿಸಬಹುದಾಗಿದೆ. ೧೯೭೦ರಲ್ಲಿ ಅಸ್ಸಾಂನಲ್ಲಿ ಎಸ್.ಎಫ್.ಐ ವಿದ್ಯಾರ್ಥಿ ನಾಯಕನಾದ ನಿರಂಜನ್ ತಾಲುಕ್‌ದ್ದಾರ್ ಅಸ್ಸಾಂ ಪ್ರತ್ಯೇಕವಾದಿಗಳು ಹಾಗೂ ಕೋಮುವಾದಿ ವಿದ್ಯಾರ್ಥಿ ಸಂಘಟನೆಗಳು ಸೇರಿಕೊಂಡು ಈ ವಿದ್ಯಾರ್ಥಿ ಮುಖಂಡನನ್ನು ತುಂಡಾಗಿ ಕತ್ತರಿಸಿದ ಘಟನೆ, ಚಿಂತಾಮಣಿಯ ವಿದ್ಯಾರ್ಥಿಯ ಬಲಿಯ ಘಟನೆ, ಕೇರಳ ವಿದ್ಯಾರ್ಥಿ ಹಕ್ಕುಗಳ ರಕ್ಷಣೆಯ ಘಟನೆ ಮತ್ತು ಕರ್ನಾಟಕದ ಮಂಗಳೂರಿನಲ್ಲಿ ವಿದ್ಯಾರ್ಥಿ-ಯುವಜನ ನಾಯಕ ಹತ್ಯೆಯ ಘಟನೆಗಳನ್ನು ಮುಂದುವರಿಸುತ್ತಾ ಒಂದೊಂದಾಗಿ ಚರ್ಚಗೆ ಒಳಪಡಿಸಲಾಗುವುದು.

ಹೀಗೆ ವಿದ್ಯಾರ್ಥಿ ಸಂಘಟನೆಯು ಡೊನೇಷನ್ ವಿರುದ್ಧ, ಹಾಸ್ಟಲ್ ಸಮಸ್ಯೆಗಳ ವಿರುದ್ಧ ಹೋರಾಟ ಮಾತೃಭಾಷಾ ಶಿಕ್ಷಣ ಹಾಗೂ ಸಿ.ಇ.ಟಿ ಸಮಸ್ಯೆಗಳ ವಿರುದ್ಧ ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ ಮತ್ತು ಶಿಕ್ಷಣದ ವ್ಯಾಪಾರೀಕರಣ ಹಾಗೂ ಕೋಮುವಾದೀಕರಣ ಹಾಗೂ ಭಯೋತ್ಪಾದನೆಯ ವಿರುದ್ಧ ಚಳವಳಿಯನ್ನು ರೂಪಿಸಿದ ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ಸಂಘಟನೆಯು ಎಚ್ಚರಗೊಂಡು ವಿದ್ಯಾರ್ಥಿಗಳು ಹಾಗೂ ಯುವಜನರು 'ಸಮುದಾಯ'ದೊಂದಿಗೆ ಗುರುತಿಸಿಕೊಂಡು ಸಾಂಸ್ಕೃತಿಕ ರಂಗ ಚಳವಳಿಯಲ್ಲಿ ಗುರುತಿಸಿಕೊಂಡಿದ್ದು ಚಾರಿತ್ರಿಕ ಅಂಶವಾಗಿದೆ.

೪.೮. ಜಾಗತೀಕರಣಕ್ಕೆ 'ಸಮುದಾಯ'ದ ಪ್ರತಿಕ್ರಿಯೆ

೧೯೯೨ ಕೇಂದ್ರ ಕಾಂಗ್ರೆಸ್ ಸರ್ಕಾರದ ಪ್ರಧಾನಮಂತ್ರಿಯಾಗಿದ್ದ ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರದ ಆರ್ಥಿಕ ಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು ಜಾಗತೀಕರಣಕ್ಕೆ ಭಾರತದಲ್ಲಿ ಜಾರಿಯಾಗಲು ಮುಕ್ತ ಅವಕಾಶ ನೀಡಿದರು. ಇದರ ಭಾಗವಾಗಿ ಭಾರತದಲ್ಲಿ ಇಂದು ಎರಡು ಲಕ್ಷಕ್ಕೂ ಅಧಿಕ ರೈತರ ಆತ್ಮಹತ್ಯೆಗಳು ಆಗಿರುವುದನ್ನು ಕಾಣುತ್ತೇವೆ. ರೈತರ ಆತ್ಮಹತ್ಯೆಗಳು ಮುಂದುವರಿಯುತ್ತಿದೆ. ಈ ಜಾಗತೀಕರಣದ ಅಂಗವಾಗಿ ಬಂದ ಅಮೇರಿಕಾದ ೧೯೪೫ ಜನವರಿ ೧ರಂದು ಗ್ಯಾಟ್ ಸ್ಥಾಪನೆಯಾಯಿತು. ಈ ಗ್ಯಾಟ್ ಒಪ್ಪಂದದ ಕರಡು ನೀತಿಯನ್ನು ಸಿದ್ಧಪಡಿಸಲು ಅಂದು ಗ್ಯಾಟ್ ನಿರ್ದೇಶಕರಾಗಿದ್ದ ಅರ್ಥರ್ ಡಂಕೆಲ್ ಅವರಿಗೆ ಒಪ್ಪಿಸಲಾಯಿತು. ಅವರು

ಸಿದ್ಧಪಡಿಸಿದ ಕರಡು ಒಪ್ಪಂದವೇ ಈ ಡಂಕೆಲ್ ಪ್ರಸ್ತಾವನೆ. ಈ ಡಂಕೆಲ್ ಪ್ರಸ್ತಾವದಿಂದ ಸಾರ್ವಜನಿಕರಲ್ಲಿ ಆತಂಕ ಉಂಟಾಯಿತು. ರೈತರು ತಾವು ಬೆಳೆದ ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಹಕ್ಕನ್ನು ಕಳೆದುಕೊಂಡಿದ್ದಾರೆ. ಎಲ್ಲೆಡೆ ಪೇಟೆಂಟ್ ಹಾವಳಿ ಹೆಚ್ಚಾಗಿದೆ. ಗಿಡಮೂಲಿಕೆಗಳು ಪಾಶ್ಚಾತ್ಯರ ಪೇಟೆಂಟ್‌ಗೆ ಒಳಗಾಗಿರುತ್ತವೆ. ಅರಿಶಿಣ, ಬಾಸುಮತಿಅಕ್ಕಿ, ಮಾವು, ಬೇವುಗಳೆಲ್ಲವು ಪೇಟೆಂಟ್ ಬಂದು ನಮ್ಮ ನಾಡಿನಲ್ಲಿ ನಾವೇ ಪರದೇಶಿಗಳಾಗುತ್ತಿದ್ದೇವೆ. ಇದಕ್ಕೆ ಪರಿಹಾರವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಆಲೋಚಿಸಬೇಕಾಗಿದೆ. ಜನರು ಕೂಡ ಬೀದಿಗಿಳಿದು ಹೋರಾಟಗಳನ್ನು ಮಾಡಬೇಕಾಗುತ್ತದೆ.

೧೯೯೨ರಲ್ಲಿ ಈ ಎಲ್.ಪಿ.ಜಿ ನೀತಿಗಳ ಜಾರಿಯನ್ನು ವಿರೋಧಿಸಿ ಬೀದಿಗಿಳಿದ ಕಮ್ಯುನಿಸ್ಟರು ಹಾಗೂ ಸಮಾಜವಾದಿಗಳು ಇವರ ಚಳವಳಿಯನ್ನು ಕೈಗೊಂಡರು. ಬಲಪಂಥೀಯ ಕಮ್ಯುನಿಸ್ಟರು ಹಾಗೂ ಸಮಾಜವಾದಿಗಳ ಅಭಿವೃದ್ಧಿ ವಿರೋಧಿಗಳ ಜಾಗತೀಕರಣದಿಂದ ಭಾರತಕ್ಕೆ ಲಾಭ ಇದೆ. ಉದಾರೀಕರಣದಿಂದ ಉದಯವಾಗಿ ಎಲ್ಲ ವಸ್ತುಗಳು ಎಲ್ಲರಿಗೂ ಸಿಗುತ್ತದೆ. ಜೊತೆಗೆ ಖಾಸಗೀಕರಣದಿಂದ ಭ್ರಷ್ಟಚಾರ ಕಡಿಮೆಯಾಗುತ್ತದೆ ಎಂದು ತಮ್ಮ ವಾದವನ್ನು ಮಂಡಿಸಿ ಎಲ್.ಪಿ.ಜಿಗೆ ಅವಕಾಶ ನೀಡಿದ್ದು ಕಾಣುತ್ತೇವೆ. ಈ ಜಾಗತೀಕರಣಕ್ಕೆ ಸಾಂಸ್ಕೃತಿಕ ರಂಗವೂ ಕೂಡ ಹೇಗೆ ಒಳಗಾಗಿದೆ ಎಂಬುದು ಈ ಕೆಳಗಿನಂತೆ ತಿಳಿಯೋಣ. ಭಾರತದ ಸಂಸ್ಕೃತಿ ಮತ್ತು ಸಾಂಸ್ಕೃತಿಕರಂಗ ಇವೆರಡೂ ಇಂದು ಕವಲು ಹಾದಿಯಲ್ಲಿವೆ ಮುಖ್ಯವಾಗಿ ಸಾಂಸ್ಕೃತಿಕ ರಂಗವು ಹಿಂದೆಂದಿಗಿಂತಲೂ ಹೆಚ್ಚು ಬಿಕ್ಕಟ್ಟಿಗೆ ಸಿಲುಕ್ಕಿದೆ.[೨೦] ತನ್ನ ತನವನ್ನು ಉಳಿಸಿಕೊಳ್ಳಲಾರದೆ ಇನ್ನೊಂದನ್ನು ಅರಗಿಸಿಕೊಳ್ಳಲಾರದೆ ಸಾಂಸ್ಕೃತಿಕವಾಗಿ ದಿವಾಳಿಯಾಗುತ್ತಿದೆ. ಇಂದು ನಮ್ಮ ದೇಶದ ಸಾಂಸ್ಕೃತಿಕರಂಗವು ಎರಡು ರೀತಿಯಾದ ಅಪಾಯಗಳನ್ನು ಎದುರಿಸುತ್ತಿದೆ.

೧. ಮತಾಂಧ ಮೂಲಭೂತವಾದಿಗಳ ದಾಳಿ

೨. ಜಾಗತೀಕರಣದಿಂದ ಅಧಃಪತನಗೊಳ್ಳುತ್ತಿರುವ ಪಾಶ್ಚಿಮಾತ್ಯ ದೇಶಗಳ ಸಾಂಸ್ಕೃತಿಕ ದಾಳಿ.

'ಕಲೆ ಕಲೆಗಾಗಿ ಅಲ್ಲ', 'ಕಲೆ ಜನರ ಬದುಕಿಗಾಗಿ ಕಲೆ' ಎಂಬುದು 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಜಾಗತೀಕರಣದಿಂದ ಸಾಂಸ್ಕೃತಿಕರಂಗದ ಉಳಿವಿಗಾಗಿ ರಂಗ ಚಳವಳಿಯ ಮೂಲಕ ತನ್ನ ಪ್ರತಿಕ್ರಿಯೆ ನೀಡುತ್ತಾ ಬಂದಿದೆ. ಇಂದಿನ ಕಾಲದಲ್ಲಿ 'ಕಲೆ ವ್ಯಾಪಾರಕ್ಕಾಗಿ' ಆಗಿದೆ. ಜಾಗತೀಕರಣವೆಂದರೆ ಬರೀ ವ್ಯಾಪಾರ ವಹಿವಾಟನೆ ಸಂಬಂಧಪಟ್ಟ ವಿಷಯವೆಂದು ಅನೇಕ ಜನರು ಅದರಲ್ಲೂ ಮುಖ್ಯವಾಗಿ ಸಾಂಸ್ಕೃತಿಕರಂಗದಲ್ಲಿರುವ ಕೆಲವು ಪರಿಣಿತರು ಈಗಲೂ ವಾದಿಸುತ್ತಾರೆ. ಜಾಗತೀಕರಣವೆಂದರೆ ಕೇವಲ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಜಾಗತೀಕರಣ ಮಾತ್ರವಲ್ಲ. ಅದರೊಂದಿಗೆ ಅಧಃಪತನಗೊಂಡಿರುವ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವ್ಯಾಪಾರಿ ಮನೋಭಾವದ ಮೌಲ್ಯಗಳನ್ನು ಪ್ರಸಾರ ಮಾಧ್ಯಮಗಳ ಮೂಲಕ ಜನತೆಯ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳು ಹೇರುವುದರ ಮೂಲಕ ಸಾಂಸ್ಕೃತಿಕ, ಜಾಗತೀಕರಣ ದಾಳಿಯನ್ನು ನಡೆಸುತ್ತಿದೆ. ಜಗತ್ತಿನ ೨೦-

೩೦ ಬಹುರಾಷ್ಟ್ರೀಯ ಸಂಸ್ಥೆಗಳು ಇಡಿ ಜಗತ್ತಿನ ಪ್ರಸಾರ ಮಾಧ್ಯಮಗಳ ಮೇಲೆ ಹಿಡಿತವನ್ನು ಸಾಧಿಸಿ ಬಂಡವಾಳಶಾಹಿ ದೇಶಗಳ ಕೊಳೆತು ನಾರುತ್ತಿರುವ ಮೌಲ್ಯಗಳನ್ನು ಜಗತ್ತಿನ ಎಲ್ಲ ದೇಶಗಳ ಮೇಲೆ ಹರಡುತ್ತಿವೆ.

ಜಾಗತೀಕರಣವೆಂದರೆ, ಅಂತರಾಷ್ಟ್ರೀಯ ಹಣಕಾಸು ಬಂಡವಾಳಗಾರರ ಲಾಭದ ಗಳಿಕೆಗಾಗಿ ವಿವಿಧ ದೇಶಗಳ ಭೌಗೋಳಿಕ, ಸಾಂಸ್ಕೃತಿಕ, ಸಾರ್ವಭೌಮತ್ವದ ಗಡಿಗಳನ್ನು ಕೆಡವಿ ಸಂವಿಧಾನ ಮತ್ತು ಕಾನೂನುಗಳನ್ನು ಮೀರಿ 'ಮುಕ್ತ ಮಾರುಕಟ್ಟೆ'ಯನ್ನು ವಿಸ್ತರಿಸುವುದಾಗಿದೆ. ಇದಕ್ಕಾಗಿ ಗ್ಯಾಟ್ ಒಪ್ಪಂದವನ್ನು ೧೯೯೫ರಲ್ಲಿ ವಿಶ್ವವ್ಯಾಪಾರ ಸಂಸ್ಥೆಯು ಅಸಿತ್ವಕ್ಕೆ ಬಂದಿತು. ಇದರ ಜೊತೆಯಲ್ಲಿ ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕಿನ ಸಹಯೋಗದಿಂದ ಈ ಸಂಸ್ಥೆಯು ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಸಂರಚನೆಯನ್ನು ಅಭಿವೃದ್ಧಿ ಹೊಂದಿದ ಬಲಿಷ್ಟ ರಾಷ್ಟ್ರಗಳ ಅಧೀನವಾಗಿಸುತ್ತದೆ. ವಿದೇಶಿ ಬಂಡಾವಾಳವು ವಿಜ್ಞಾನ, ತಂತ್ರಜ್ಞಾನಗಳ ಕೃಷಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಹಕಾರ ಸೌಹಾರ್ದತೆಯಿಂದ ಮತ್ತು ವಿವಿಧ ರಾಷ್ಟ್ರಗಳ ಪರಸ್ಪರ ಸಾರ್ವಭೌಮತ್ವ, ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯನ್ನು ಅಳಿಸಲು ಮುಂದಾಗಿರುವುದನ್ನು ಕಾಣಬಹುದಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ವಿದೇಶಿ ಬಂಡವಾಳ ವಿವಿಧ ದೇಶಗಳ ಷೇರುಗಳ ಹಾಗೂ ವಿದೇಶಿ ವಿನಿಮಯಗಳ ಮಾರುಕಟ್ಟೆಗಳಲ್ಲಿ 'ಸೆಟ್ಟಾ ವ್ಯಾಪಾರ'ದಲ್ಲಿ ಲಾಭಗಳಿಸಲು ಉದ್ದೇಶ ಹೊಂದಿದ್ದರಿಂದ ನಾವು ಈಗಲಾದರೂ ಜಾಗತೀಕರಣವನ್ನು ವಿರೋಧಿಸಬೇಕಾಗುತ್ತದೆ. ಅಂದು ಸಾಂಸ್ಕೃತಿಕ ರಂಗ ಚಳವಳಿಯನ್ನು ಹೆಚ್ಚು ಗಟ್ಟಿಯಾಗಿ ಕಟ್ಟದಿರುವುದರಿಂದ ಹಾಗೂ ಬೀದಿನಾಟಕಗಳ ಮೂಲಕ 'ಸಮುದಾಯ' ಸಂಘಟನೆ ಸೇರಿದಂತೆ ಇತರೆ ರಂಗಸಂಸ್ಥೆಗಳು ಹಾಗೂ ಸಂಘಟಕಗಳ ತೀವ್ರ ರೀತಿಯ ಹಾಗೂ ಪರಿಣಾಮಕಾರಿಯಾದ ಪ್ರತಿಕ್ರಿಯೆ ಇಲ್ಲದಿರುವುದರಿಂದ ಎಲ್.ಪಿ.ಜಿ ನೀತಿಯು ಶ್ರೀಮಂತ ಬಂಡವಾಳಶಾಹಿ ರಾಷ್ಟ್ರಗಳಿಗೆ ಇನ್ನಷ್ಟು ಬಂಡಾವಾಳವನ್ನು ಶೇಕರಿಸಿಕೊಳ್ಳಲು ಸಹಾಯವಾಯಿತು.

ಟಿಪ್ಪಣಿಗಳು

೧. ಚಲಪತಿ.ಆರ್., ವಿಠ್ಠಲ್ ಭಂಡಾರಿ., ೨೦೧೭, **ರೈತ-ಕಾರ್ಮಿಕ ಓದು,(ಸಂಪುಟ-೪ ಕರ್ನಾಟಕ ಸಬಾಲ್ಟ್ರನ್ ಓದು ಮಾಲಿಕೆ),** ಪುಟ-೧೩೬.

೨. ಅದೇ. ಪುಟ-೧೪೧.

೩. ರವಿಕುಮಾರ ಬಾಗಿ, ೨೦೧೧, **ಜನಪರ ಚಳವಳಿಗಳು ಮತು ಸಾಂಸ್ಕೃತಿಕ ಜಾಥಾಗಳು,** ಪುಟ-೧೫.

೪. ಅದೇ. ಪುಟ-೧೬.

೫. ಎಕ್ಸಿಬಿಶನ್ ಉಪಸಮಿತಿ, ಸ್ವಾಗತ ಸಮಿತಿ, ೨೦೧೫ ಸಿಪಿಐ(ಎಂ) **೨೧ನೇ ರಾಜ್ಯ ಸಮ್ಮೇಳನ, ೨೦೧೫, ದುಡಿಯುವ ಜನರ ಹೋರಾಟದ ಕತೆ ಎಲ್ಲರಿಗೂ ಸಮಪಾಲು, ಎಲ್ಲರಿಗೂ ಸಮಬಾಳು,** ಪುಟ–೧೮.

೬. ಅದೇ. ಪುಟ–೨೭.

೭. ಅರವಿಂದ ಮಾಲಗತ್ತಿ, ವೆಂಕಟೇಶ್ ಮೂರ್ತಿ.ಎಚ್.ಟಿ, ೨೦೧೪, **ದಲಿತ ಚಳವಳಿ(ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–೨),** ಪುಟ–೩೫೪.

೮. ಅದೇ. ಪುಟ–೪೦೬.

೯. ಅದೇ. ಪುಟ–೫೨೦.

೧೦. ಪುರುಷೋತ್ತಮ ಬಿಳಿಮಲೆ, ೧೯೯೦, **ಬಂಡಾಯ–ದಲಿತ ಚಳವಳಿ ಮತ್ತು ಸಾಹಿತ್ಯ** ಪುಟ–೭೪.

೧೧. ಗಂಗಧಾರ ಮೂರ್ತಿ.ಬಿ, ೧೯೮೯, **ನಾಗಸಂದ್ರ ಭೂ ಆಕ್ರಮಣ ಚಳವಳಿ,** ಪುಟ–೧೨೩.

೧೨. ಹೀರೆಮಠ.ಎಸ್.ಎಸ್, ೨೦೦೧, **ದಲಿತ ಸಂಸ್ಕೃತಿ,** ಪುಟ–೧೨.

೧೩. ಅನುಪಮಾ.ಎಚ್.ಎಸ್(ಸಂ), ೨೦೧೩, **ಡಾ.ಆನಂದ್ ತೇಲ್ತುಂಬ್ಡೆ ದಲಿತರು ಭೂತ–ಭವಿಷ್ಯ ಲೇಖನಗಳು,** ಪುಟ–೬೨.

೧೪. ಬರಗೂರು ರಾಮಚಂದ್ರಪ್ಪ. ೨೦೧೩, **ಕನ್ನಡ ಪ್ರಜ್ಞೆ,** ಪುಟ–೧೭೧.

೧೫. ಗೋವಿಂದರಾಜು ಸಿ.ಆರ್. ೨೦೧೭, **ಭಾಷಾ ಚಳವಳಿಗಳು (ಮಾಲೆ–೮),** ಪುಟ–೬೨.

೧೬. ಅದೇ ಪುಟ–೮೮.

೧೭. ಸಬಿಹಾ ಭೂಮಿಗೌಡ(ಸಂ), ೨೦೦೮, **ಮಹಿಳೆ ಸಂಘಟನೆ ಹೋರಾಟ,** ಪುಟ–೧೨.

೧೮. ಗಾಯತ್ರಿ .ಎನ್, ೨೦೧೨, **ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ,** ಪುಟ–೯೦.

೧೯. ಮಾಧವಿ ಭಂಡಾರಿ ಕೆರೆಕೋಣ(ಮಾಲಿಕೆ.ಸಂ),೨೦೧೭, **ಕಾಯಕ ಜೀವಿಗಳ ಕಣ್ಮಣಿ ಕಾಮ್ರೇಡ್ ಸೂರಿ(ಮಾಲಕೆ–೯),** ಪುಟ–೧೩.

೨೦. ಮಹೇಶ್ ಮ., ೨೦೦೨, **ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ,** ಪುಟ–೨೧

ಅಧ್ಯಾಯ : ಐದು

ಕರ್ನಾಟಕದ ಸಾಂಸ್ಕೃತಿಕ ರಂಗ ಚಳವಳಿಗೆ 'ಸಮುದಾಯ'ದ ಕೊಡುಗೆ

೫.೧ 'ಸಮುದಾಯ'ದ ಚಾರಿತ್ರಾರ್ಹ ಸಾಂಸ್ಕೃತಿಕ ಜಾಥಾಗಳು

೫.೨ ಜನರೆಡೆಗೆ ಬೀದಿನಾಟಕಗಳು ಹಾಗೂ ತೃತೀಯ ರಂಗಭೂಮಿಯ ಅಗತ್ಯತೆ

೫.೩ 'ಸಮುದಾಯ'ದ ಬೀದಿನಾಟಕಗಳು ಹಾಗೂ ರಂಗನಾಟಕಗಳು

೫.೪ 'ಸಮುದಾಯ' ರೂಪಿಸಿದ ಕ್ರಿಯಾತ್ಮಕ ರಂಗಭೂಮಿ

೫.೫ 'ಸಮುದಾಯ'ದ ನಟ-ನಟಿಯರು ಹಾಗೂ ರಂಗ ನೇಪಥ್ಯ ತಂತ್ರಜ್ಞರು

೫.೬ ರಂಗ ನಿರ್ದೇಶಕರು, ಹೊಸ ಕ್ರಾಂತಿಗೀತೆಗಳ ರಚನೆ ಹಾಗೂ ಗಾಯಕರುಗಳ ಮೇಲೆ 'ಸಮುದಾಯ'ದ ಪ್ರಭಾವ

೫.೭ ಸಿನಿಮಾರಂಗ ಹಾಗೂ 'ಸಮುದಾಯ'

೫.೮ ಮಾಧ್ಯಮರಂಗ-ವ್ಯಂಗ್ಯಚಿತ್ರ ರಚನೆ ಹಾಗೂ ವಿಜ್ಞಾನಕ್ಕೆ 'ಸಮುದಾಯ'ದ ಕೊಡುಗೆ

೫.೯ 'ಸಮುದಾಯ' : ಚಿತ್ರಕಲೆ ಹಾಗೂ ೧೯೮೬ರ ಬಣ್ಣದ ನಡೆ

೫.೧೦ ಕನ್ನಡ ಸಾಹಿತ್ಯ ಹಾಗೂ 'ಸಮುದಾಯ'

ಅಧ್ಯಾಯ: ಐದು

ಕರ್ನಾಟಕದ ಸಾಂಸ್ಕೃತಿಕ ರಂಗ ಚಳವಳಿಗೆ 'ಸಮುದಾಯ'ದ ಕೊಡುಗೆ

೫.೧. 'ಸಮುದಾಯ'ದ ಚಾರಿತ್ರಾರ್ಹ ಸಾಂಸ್ಕೃತಿಕ ಜಾಥಾಗಳು

ಎಪ್ಪತ್ತರ ದಶಕದ ರಂಗ ಚಳವಳಿಗೆ 'ಸಮುದಾಯ'ದಂತಹ ರಂಗಭೂಮಿ ಸಂಘಟನೆಯ ಸಾಂಸ್ಕೃತಿಕ ಕೊಡುಗೆ ಅನನ್ಯವಾದುದ್ದು. ಏಕೆಂದರೆ 'ಸಮುದಾಯ' ಬೀರಿದ ಸಾಂಸ್ಕೃತಿಕ ರಂಗ ಚಳವಳಿಯಿಂದ ಕರ್ನಾಟಕದ ರಾಜಕಾರಣದ ಸ್ಥಿತ್ಯಂತರಗಳ ಚಾರಿತ್ರಿಕ ಘಟನೆಗಳು ನಡೆದಿದ್ದು ಐತಿಹಾಸಿಕ ಸಂಗತಿ. ಅಲ್ಲದೇ 'ಸಮುದಾಯ'ವು ರೂಪಿಸಿದ ಬೀದಿ-ರಂಗ ಚಟುವಟಿಕೆ ಹಾಗೂ 'ಸಮುದಾಯ' ಸಂಘಟನೆಗಳಲ್ಲಿ ಇದ್ದಂತಹ ಸಾಹಿತ್ಯವರ್ಗ ಹಾಗೂ ಚಳವಳಿಗಾರನ್ನು ಒಳಗೊಂಡು ಸಮಾಜದಲ್ಲಿ ನಡೆಯುವ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮುಖಾಮುಖಿಗೊಳ್ಳುವ ಸಂಘಟನೆಯಾಗಿದೆ. ಅದು ಪ್ರಮುಖವಾಗಿ ೧೯೭೮ರ 'ಸಮುದಾಯ' ಸಂಘಟನೆಯು ಚಿಕ್ಕಮಗಳೂರಿನಲ್ಲಿ ನಡೆದ ಲೋಕಸಭಾ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿ ಅವರ ಕಾಂಗ್ರೆಸ್ ಸರ್ಕಾರವು ತುರ್ತುಪರಿಸ್ಥಿತಿ ಕಾಲದ ಸರ್ವಾಧಿಕಾರಿ ಧೋರಣೆಯಿಂದ ಬೆಸತ್ತ ಕರ್ನಾಟಕ ಸಾಂಸ್ಕೃತಿಕ ರಂಗವೂ, 'ಸಮುದಾಯ' ಸಾಂಸ್ಕೃತಿಕ ಸಂಘಟನೆಯೊಂದಿಗೆ ಸೇರಿ ಜಿಲ್ಲಾ ಮಟ್ಟದ ಅಂದರೆ ಲೋಕಸಭಾ ಕ್ಷೇತ್ರವಾದ ಚಿಕ್ಕಮಗಳೂರು ಚುನಾವಣೆಯಲ್ಲಿ ಬೀದಿನಾಟಕಗಳನ್ನು ಪ್ರಚಾರ ಹಾಗೂ ಸಾಂಸ್ಕೃತಿಕ ಜಾಥಾವನ್ನು ಮೊದಲಬಾರಿಗೆ ಹಮ್ಮಿಕೊಂಡಿತು.

'ಸಮುದಾಯ' ಸಂಘಟನೆಯು ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಂಡಿದ್ದು ಕಾಣಬಹುದು. ಏಕೆಂದರೆ 'ಸಮುದಾಯ' ಸಂಘಟನೆಗೆ ಚಿಕ್ಕಮಗಳೂರು ಜಿಲ್ಲೆಯ ಲೋಕಸಭಾ ಚುನಾವಣೆಯಲ್ಲಿ ನಡೆಸಿದ ಜಾಥಾಗಳಿಂದ, ಹಳ್ಳಿ-ಹಳ್ಳಿಗಳ ಪ್ರವೇಶದಿಂದ ಜನಸಾಮಾನ್ಯರನ್ನು ಮುಖಾಮುಖಿಯಾಗಬೇಕು, ಈ ಮೂಲಕ ವ್ಯವಸ್ಥೆಯಲ್ಲಿನ ಅನ್ಯಾಯಗಳ ಬಗ್ಗೆ ಪ್ರತಿಗಾಮಿ ಧೋರಣೆಗಳ ಬಗ್ಗೆ ಜನರಿಗೆ ತಿಳಿಸುವ ಉದ್ದೇಶದಿಂದಿತ್ತು. 'ಸಮುದಾಯ'ವು ೧೯೭೯ರಲ್ಲಿ ಜಾಥಾಗಳನ್ನು ಕರ್ನಾಟಕದಾದ್ಯಂತ 'ಸಮುದಾಯ' ಜನರ ಸಮಸ್ಯೆಗಳನ್ನು ಬೀದಿನಾಟಕಗಳ ಮೂಲಕ ಸಾಮಾನ್ಯ ಹಳ್ಳಿ ಜನರ ಮುಂದೆ ತೆರೆದಿಡುವ ಚಾರಿತ್ರಾರ್ಹ ಕಾರ್ಯಕ್ರಮಕ್ಕೆ ಮುಂದಾಯಿತು. ಈ 'ಸಮುದಾಯ' ಸಂಘಟನೆಗಳ ಜಾಥಾಗಳಿಂದ ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಹೊಸ ಸಂಚಲನ ಉಂಟಾಯಿತು.

ಪಟ್ಟಭದ್ರಹಿತಾಸಕ್ತಿಗಳು, ಭ್ರಷ್ಟರಾಜಕಾರಣಿಗಳು ಹಾಗೂ ಬಂಡವಾಳಶಾಹಿಗಳಿಗೆ, ಹಳ್ಳಿಗಳಲ್ಲಿನ ಶೋಷಕ ಭೂಮಾಲೀಕರಿಗೆ ನಡುಕ ಹುಟ್ಟತೊಡಗಿದ್ದನ್ನು ಚಾರಿತ್ರಿಕವಾಗಿ ಗುರುತಿಸಬಹುವಾಗಿದೆ.

ಕರ್ನಾಟಕದಲ್ಲಿ ಕಲೆಯು ಒಂದು ಕಾಲದಲ್ಲಿ ಕೇವಲ ನಗರ ಹಾಗೂ ಶ್ರೀಮಂತ ವರ್ಗದ ಆಸ್ತಿಯಾಗಿತ್ತು. 'ಸಮುದಾಯ'ದಂತಹ ರಂಗ ತಂಡಗಳು ಹುಟ್ಟಿಕೊಂಡ ನಂತರ ಬೀದಿ ಹಾಗೂ ರಂಗನಾಟಕಗಳ ಮೂಲಕ ಹಳ್ಳಿ, ಕೊಳಗೇರಿ, ಸ್ಲಂಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಎಚ್ಚರ ಮೂಡಿಸುವಂತಂಹ ನಾಟಕಗಳನ್ನು ತಮ್ಮ ಜಾಥಾದ ಮೂಲಕ ಪ್ರರ್ದಶಿದವು. ಹೀಗೆ 'ಸಮುದಾಯ' ಸಂಘಟನೆಯು ಕರ್ನಾಟಕದಲ್ಲಿ ಸಾಂಸ್ಕೃತಿಕ ರಂಗ ಚಳವಳಿಯನ್ನು ಹುಟ್ಟಿಹಾಕಿದ ಚಾರಿತ್ರಾರ್ಹ ಸಾಂಸ್ಕೃತಿಕ ಜಾಥಾಗಳನ್ನು ಈ ಕೆಳಕಂಡಂತೆ ನೋಡಲಾಗಿದೆ.

ಸರ್ವಾಧಿಕಾರಿ ವಿರೋಧಿ ಸಾಂಸ್ಕೃತಿಕ ಜಾಥಾ : ೧೯೭೮

ಭಾರತದಲ್ಲಿ ೧೯೭೫ ರಿಂದ ೧೯೭೭ರ ವರೆಗೂ ನಡೆದ ತುರ್ತುಪರಿಸ್ಥಿತಿಯ ಸನ್ನಿವೇಶವೇ 'ಸಮುದಾಯ'ದ ಸಂಘಟನೆಯ ಹುಟ್ಟಿಗೆ ಕಾರಣವಾಯಿತು. ೧೯೭೫ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದು ೨೮ ವರ್ಷಗಳು ಕಳೆದರು, ತುರ್ತುಪರಿಸ್ಥಿತಿಯ ಸನ್ನಿವೇಶದಲ್ಲಿ ಮತ್ತೆ ರಾಜಪ್ರಭುತ್ವದ ಕುರುಹುಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ ಮುನ್ನೆಲೆಗೆ ಬಂದವು. ಹೀಗೆ ಕಾಂಗ್ರೆಸ್ ಆಡಳಿತದ ಸರ್ವಾಧಿಕಾರಿ ನೀತಿಗಳನ್ನು ಪದಚ್ಯುತಿಗೊಳಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರುಸ್ಥಾಪಿಸುವ ರಾಜಕಾರಣದ ಒತ್ತಡವು 'ಸಮುದಾಯ' ಹಾಗೂ ಇತರೆ ಸಂಘಟನೆಗಳು ರೂಪುಗೊಂಡಿದ್ದ ಜಾಥಾಗಳ ಮುಖ್ಯ ಉದ್ದೇಶವಾಗಿತ್ತು.

ಅಂದಿನ ಸಂದರ್ಭದಲ್ಲಿ ಪ್ರಧಾನಿ ಇಂದಿರಾ ಗಾಂಧಿಯು ಲೋಕಸಭೆಯಲ್ಲಿ ಗೆದ್ದು ಅಧಿಕಾರ ನಡೆಸುತ್ತಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿತ್ತು. ಏಕೆಂದರೆ ಅಲಹಾಬಾದ್ ಹೈಕೋರ್ಟ್‌ನ ತೀರ್ಪಿನಿಂದ ಇಂದಿರಾ ಗಾಂಧಿಯು ತನ್ನ ಪ್ರಧಾನಿ ಹುದ್ದೆಗೆ ರಾಜಿನಾಮೆ ಕೊಡುವ ಸ್ಥಿತಿ ಬಂದಿತ್ತು. ಕಾರಣ ಅಂದು ನಡೆದಿದ್ದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸರ್ಕಾರಿ ಆಡಳಿತವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬ ತೀರ್ಪಿನ ಹಿನ್ನೆಲೆಯಲ್ಲಿ ಕಂಗಾಲಾದ ಇಂದಿರಾ ಗಾಂಧಿಯು ತುರ್ತುಪರಿಸ್ಥಿತಿಯನ್ನು ಹೇರಿದರು. ನಂತರ ೧೯೭೮ರಲ್ಲಿ ಕರ್ನಾಟಕದ ಚಿಕ್ಕಮಗಳೂರಿನ ಲೋಕಸಭಾ ಸದಸ್ಯ ಡಿ.ಬಿ.ಚಂದ್ರೇಗೌಡರನ್ನು ತಮ್ಮ ಸಂಸತ್ ಸ್ಥಾನಕ್ಕೆ ರಾಜೀನಾಮೆ ಕೊಡಿಸುವ ಮೂಲಕ ಇಂದಿರಾ ಗಾಂಧಿ ಅವರಿಗೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟರು.

ಇಂದಿರಾ ಗಾಂಧಿಯು ಚಿಕ್ಕಮಗಳೂರಿನ ಉಪಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತವಾದ ಮೇಲೆ ಈ ಲೋಕಸಭಾ ಚುನಾಟಣೆಯಲ್ಲಿ ಇಂದಿರಾ ಗಾಂಧಿಯನ್ನು ಸೋಲಿಸಲು ಬೆಂಗಳೂರಿನ ಆರ್.ವಿ.ಹೈಸ್ಕೂಲಿನಲ್ಲಿ ಸಭೆ ಏರ್ಪಡಿಸಲಾಯಿತು. ಶ್ರೀರಂಗರು, ಲಂಕೇಶ್, ಬಿ.ವಿ.ವೈಕುಂಠರಾಜು, ಜಿ.ಲೋಕೇಶ್, ಪ್ರಸನ್ನ ಹಾಗೂ ಸಿ.ಜಿ.ಕೃಷ್ಣಸ್ವಾಮಿ ಇನ್ನೂ ಅನೇಕ ಪ್ರಗತಿಪರ ಸಾಹಿತಿಗಳು, ರಂಗಕರ್ಮಿಗಳು ಹಾಗೂ ಚಳವಳಿಗಾರರು ಈ ಸಭೆಯಲ್ಲಿ ಭಾಗವಹಿಸಿದರು. ಅಲ್ಲದೇ ಈ

ಲೋಕಸಭೆಯ ಉಪ ಚುನಾವಣೆಯಲ್ಲಿ ಸರ್ವಾಧಿಕಾರಿಯಾದ ಇಂದಿರಾ ಗಾಂಧಿಯನ್ನು ಸೋಲಿಸಲು ಅನೇಕ ಕಲಾವಿದರು ಹಾಡು, ಕುಣಿತ, ನಾಟಕಗಳ ಮೂಲಕ ಇಂದಿರಾ ಗಾಂಧಿಯ ವಿರುದ್ಧ ಪ್ರಚಾರ ಕೈಗೊಂಡರು. ಲಂಕೇಶರ 'ಮುದ್ದು ಮಗನ ಮಾರುತಿ ಕಾರು', ಶ್ರೀರಂಗರ 'ಪ್ರಜಾಪ್ರಭುತ್ವ ಲೋಳ ಲೋಟ್ಟೆ', ಸಿದ್ಧಲಿಂಗಯ್ಯನವರ 'ನೆಲಸಮ' ನಾಟಕದ ಜೊತೆಗೆ 'ಸಮುದಾಯ'ದ ಪ್ರಮುಖ ನಾಟಕವಾದ 'ಇಂದಿರಾ ಗಾಂಧಿಯ ಸುಳ್ಳಿನ ಪ್ರಮಾಣ ಪತ್ರ' ಎಂಬ ಬೀದಿ ನಾಟಕವು ಪ್ರದರ್ಶನಗೊಂಡಿತು.

ಚಿಕ್ಕಮಗಳೂರಿನ 'ಸಮುದಾಯ' ಸಂಘಟನೆಯ ಮುಖಂಡತ್ವದಲ್ಲಿ ನಡೆಸಿದ ಸರ್ವಾಧಿಕಾರಿ ವಿರೋಧಿ ಜಾಥಾಕ್ಕೆ ಹಳ್ಳಿ-ಹಳ್ಳಿಯ ಜನರು ಸ್ಪಂದಿಸಿದ್ದು ಮಹತ್ವದ ಸಂಗತಿಯಾಗಿದೆ.[೧] ಈ ಜಾಥಾಗಳ ಚುನವಣಾ ಪ್ರಚಾರ ಆಂದೋಲನದಲ್ಲಿ ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಶಿವರಾಮಕಾರಂತ, ದೇವನೂರು ಮಹಾದೇವ, ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಆರ್.ಕೆ.ಹುಡುಗಿ, ನಿಸಾರ್ ಅಹಮದ್, ಕಿ.ರಂ.ನಾಗರಾಜ, ಕೆ.ಮರುಳುಸಿದ್ದಪ್ಪ, ಸಿದ್ಧಲಿಂಗಯ್ಯ ವಿಶೇಷವಾಗಿ ಮಹತ್ಮಾ ಗಾಂಧೀಜಿ ಅವರ ಮೊಮ್ಮಗ ರಾಮಚಂದ್ರ ಗಾಂಧಿ ಹಾಗೂ ಮುಂತಾದ ಪ್ರಗತಿಪರ ಲೇಖಕರು ಹಾಗೂ ಬುದ್ಧಿಜೀವಿಗಳು ಹಾಗೂ ಕಲಾವಿದರು ಭಾಗವಹಿಸಿ ಪ್ರಚಾರ ಆಂದೋಲನವನ್ನು ಕೈಗೊಂಡರು. ಈ ಹಿಂದೆಯೇ ೧೯೭೫ರಲ್ಲಿ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಕಾಂಗ್ರೆಸ್‌ನ ಸರ್ವಾಧಿಕಾರಿ ಧೋರಣೆಯಿಂದ ನಲುಗಿದ್ದ ಜನಸಾಮಾನ್ಯರು ಸಿಟ್ಟಿಗೆದ್ದರು.

'ಸಮುದಾಯ' ಸಂಘಟನೆಯು ೫೦ ಜನ ಸದಸ್ಯರನ್ನು ಒಳಗೊಂಡ(ಮುಖಂಡರು) ೪೦ ಗುಂಪುಗಳನ್ನು ಚುನಾವಣಾ ಕ್ಷೇತ್ರದ ವಿವಿಧ ತಾಲ್ಲೂಕಿಗೆ ವಿಂಗಡಿಸಿ 'ಸಮುದಾಯ'ದ ನಾಟಕವಾದ 'ಇಂದಿರಾ ಗಾಂಧಿಯ ಸುಳ್ಳಿನ ಪ್ರಮಾಣ ಪತ್ರ' ಎಂಬ ಬೀದಿ ನಾಟಕವನ್ನು ೩೫೦ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ನೀಡಿದರು. ೭ ಲಕ್ಷಕ್ಕೂ ಹೆಚ್ಚಿನ ಜನರು ಈ ನಾಟಕವನ್ನು ನೋಡಿದರು. ಇದರ ಜೊತೆಗೆ ಸಿದ್ಧಲಿಂಗಯ್ಯ, ಕೆ.ರಾಮಯ್ಯ, ಬರಗೂರು ರಾಮಚಂದ್ರಪ್ಪ ಅವರ ಕ್ರಾಂತಿ ಗೀತೆಗಳು ಪ್ರಮುಖ ಪಾತ್ರ ವಹಿಸಿದವು. ಜೊತೆಗೆ ಜೀತದ ವಸ್ತುವುಳ್ಳ 'ಪತ್ರೆ ಸಂಗಪ್ಪನ ಕೊಲೆ' ಸಿದ್ಧಲಿಂಗಯ್ಯ ಅವರ 'ಟರ್ಕ್ ಮನ್ ಗೇಟ್' ಆಧರಿಸಿ ಬರೆದ ಕಿರುನಾಟಕ ಪ್ರದರ್ಶನ ಗೊಂಡಿದ್ದವು. ಅಲ್ಲದೇ ಚುನಾವಣೆ ಪ್ರಚಾರ ಕಾಲದಲ್ಲಿ ನಡೆದ ಹಲ್ಲೆ ಪ್ರಕರಣಗಳನ್ನು ಆಧರಿಸಿದ ರೂಪಕಗಳು, ತುರ್ತುಪರಿಸ್ಥಿತಿಯ ದೌರ್ಜನ್ಯಗಳ ಬಗ್ಗೆ 'ಛಸ್ನಾಲ ಗಣಿ ದುರಂತ'ದ ಪ್ರಕರಣ ಹಾಗೆ ಅಸ್ಪೃಶ್ಯತೆಯ ಸಮಸ್ಯೆ, ವಸತಿ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಗೇಣಿಯ ಸಮಸ್ಯೆ ವಿಷಯಗಳುಳ್ಳ ಮುಂತಾದ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು.

ಅಭಿವ್ಯಕ್ತಿಗೆ ಯಾವ ರೀತಿಯ ಮಾಧ್ಯಮಗಳು ಲಭ್ಯವಿದ್ದವೋ, ಅವುಗಳನ್ನು ಸಮರ್ಥವಾಗಿ ಬಳಸಿಕೊಂಡರು. ಇದರ ಭಾಗವಾಗಿ ಬೆಂಗಳೂರು 'ಸಮುದಾಯ' ಸಂಘಟನೆಯಿಂದ ವಿಶೇಷವಾಗಿ 'ಭಿತ್ತಿಪತ್ರಗಳನ್ನು ಬರೆಯುವ' ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದು ೧೯೭೮

ಅಕ್ಟೋಬರ್ ೨೨ ರಿಂದ ೨೪ರ ವರೆಗೂ 'ಬನ್ನಿ ಸರ್ವಾಧಿಕಾರದ ವಿರುದ್ಧ ಪೋಸ್ಟರ್ ಬರೆಯಿರಿ' ಎಂಬ ಶೀರ್ಷಿಕೆಯಲ್ಲಿ ಬೆಂಗಳೂರಿನ ಕೆ.ಆರ್.ವೃತ್ತದಲ್ಲಿ ನಡೆಯಿತು. ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ಸಾವಿರಾರು ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಬ್ಯಾಂಕ್ ನೌಕರರು, ಅಧ್ಯಾಪಕರು, ಸ್ಥಳೀಯ ಕೆಲಸಗಾರರು ತಮಗಿಷ್ಟ ಬಂದ ರೀತಿಯಲ್ಲಿ ಇಷ್ಟ ಬಂದಷ್ಟು ಪೋಸ್ಟರ್‌ಗಳನ್ನು ಬರೆದಿದ್ದು ಚಾರಿತ್ರಿಕ ಅಂಶವೆಂದರೆ ತಪ್ಪಾಗಲಾರದು. ಏಕೆಂದರೆ ಇದರಲ್ಲಿ ಭಾಗವಹಿಸಿ ಬರೆಯಲು ಕಲಾಕಾರರೇ ಇರಬೇಕು ಎಂದು ನಿರ್ದರಿಸಿರಲಿಲ್ಲ, ಕಾರಣ ಕೆಲವರು ಬೆಳಗ್ಗೆಯಿಂದ ರಾತ್ರಿವರೆಗೂ ಪೋಸ್ಟರ್‌ಗಳನ್ನು ಬರೆದರು. ಈ ಕಾರ್ಯಕ್ರಮ ೨೪ರಂದು ರಾತ್ರಿ ೯ ಗಂಟೆಯವರೆಗೂ ಮುಂದುವರೆಯಿತು.[೨] ಪೋಸ್ಟರ್‌ಗಳ ಸಂಖ್ಯೆ ಸುಮಾರು ೪೦,೦೦೦ ಸಾವಿರ ಮೀರಿತ್ತು. ಈ ಪೋಸ್ಟರ್‌ಗಳನ್ನು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಕಳುಹಿಸಲಾಯಿತು. ಇದರ ಜೊತೆಗೆ ಜವಹಾರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ(ಜೆ.ಎನ್.ಯು) ವಿದ್ಯಾರ್ಥಿಗಳು ತಮ್ಮ ಕಳಕಳಿಯನ್ನು ತಿಳಿಸುವ ಭಿತ್ತಿಪತ್ರಗಳನ್ನು ಕಳುಹಿಸಿಕೊಟ್ಟಿದ್ದರು.

ಹಿಂದೆ ನಡೆದ ಕರ್ನಾಟಕ ಲೋಕಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರದಲ್ಲೂ ಕೂಡ ಈ ರೀತಿಯ ಪೋಸ್ಟರ್‌ಗಳ ಭಿತ್ತಿಪತ್ರಗಳನ್ನು ರೂಪಿಸಿರಲಿಲ್ಲ. ಇದೇ ಮೊದಲಬಾರಿಗೆ ರೂಪಿಸಿದ 'ಪೋಸ್ಟರ್ ಚಳವಳಿ' ಮಾಡಿದ್ದು 'ಸಮುದಾಯ' ಸಂಘಟನೆಗೆ ಸಲ್ಲುತ್ತದೆ. 'ಸಮುದಾಯ' ಹೊಸ ರಾಜಕೀಯ ಮತ್ತು ಸಾಂಸ್ಕೃತಿಕ ನೀತಿಗಳನ್ನು ರಂಗ ಚಳವಳಿಯ ಮೂಲಕ ಹುಟ್ಟು ಹಾಕಿ ಹೊಸ ಚಿಂತನೆಗಳಿಗೆ ಹಾಗೂ ಸಾಮಾಜಿಕ ಬರವಣಿಗೆಗೆ ಹೊಸ ರೂಪವನ್ನು ನೀಡಿತ್ತು ಎಂದು ಗುರುತಿಸಬಹುದು. ಹೀಗೆ ಈ ಚಿಕ್ಕಮಗಳೂರು ಲೋಕಸಭಾ ಚುನಾವಣೆಯು ೧೯೭೮ರಲ್ಲಿ ಇಂದಿರಾ ಗಾಂಧಿಯು ಲೋಕಸಭೆ ಚುನಾವಣೆಯಲ್ಲಿ ಗೆದ್ದು ರಾಜಕೀಯವಾಗಿ ಮರುಹುಟ್ಟು ಪಡೆದರು ಕೂಡ 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿಯ ಚಾರಿತ್ರಿಕತೆ ಐತಿಹಾಸಿಕ ಜಾಥಾಗಳು ಕರ್ನಾಟಕದ್ಯಾದಂತ ಹೆಚ್ಚಾಗಲು ಈ ಸರ್ವಾಧಿಕಾರಿ ವಿರೋಧಿ ಜಾಥಾವು ಪ್ರಮುಖ ಬುನಾದಿ ಹಾಕಿ ಕೊಟ್ಟಿದ್ದು ಮುಖ್ಯ ಸಂಗತಿ. ಈ ಚುನಾವಣೆಯಲ್ಲಿ 'ಸಮುದಾಯ'–ಸಂಘಟನೆಯ ಕಮ್ಯುನಿಸ್ಟ್ ಸಿದ್ಧಾಂತದ ಅಭ್ಯರ್ಥಿಯು ನೇರವಾಗಿ ಚಿಕ್ಕಮಗಳೂರು ಲೋಕಸಭಾ ಚುನಾವಣಿಯಲ್ಲಿ ನಿಲ್ಲದಿದ್ದರೆ? ಯಾಕೆ ನಿಲ್ಲಿಸಲು ಆಗಲಿಲ್ಲ? ಎಂಬುವುದು ತಾತ್ವಿಕ ಪ್ರಶ್ನೆಯಾಗಿದೆ ಕಮ್ಯುನಿಸ್ಟ್ ಪಕ್ಷವು ಜಾತ್ಯಾತೀತ ಪಕ್ಷಗಳ ಜೊತೆಗೆ ಈ ಚುನಾವಣೆಯ ಹಾಗೂ ಬೆಂಬಲದಿಂದ ಅಭೂತ ಬೆಂಬಲ ಸಿಕ್ಕಿದ್ದರೂ ಸಹ ಕಾಂಗ್ರೆಸ್ ಸರ್ಕಾರದ ಬೂರ್ಜ್ವ ಹಾಗೂ ಜಮಿನ್ದಾರಾರು–ಊಳಿಗಮಾನ್ಯ ಸ್ಥಳೀಯ ಕಾರಣದ ಶಕ್ತಿಗಳು ಇಂದಿರಾ ಗಾಂಧಿಯ ಜೊತೆಯಲ್ಲಿರುವ ಕಾರಣದಿಂದ ಈ ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಡಿ.ಬಿ.ಚಂದ್ರೆಗೌಡರು ತಮ್ಮ ಸಂಸತ್ ಸ್ಥಾನಕ್ಕೆ ರಾಜಿನಾಮೆ ಕೊಡುವುದರ ಮೂಲಕ ಇಂದಿರಾ ಗಾಂಧಿ ಅವರನ್ನು ಗೆಲ್ಲುವಂತೆ ಮಾಡಿದರು. ಇಂದಿರಾ ಗಾಂಧಿ ವಿರುದ್ಧ ಈ ಚಿಕ್ಕಮಗಳೂರು ಲೋಕಸಭಾ ಪ್ರತಿಸ್ಪರ್ಧಿಯಾಗಿದ್ದ ವೀರೇಂದ್ರ

ಪಾಟೀಲರನ್ನು ೭೭ ಸಾವಿರ ಮತಗಳ ಅಂತರದಿಂದ ಸೋಲಿಸಿದರು. ಆದರೆ ಇಂದಿರಾ ಗಾಂಧಿ ಅವರ ವಂಶಾವಳಿ ರಾಜಕಾರಣದ ವಿರುದ್ಧವಾಗಿದ್ದ ಅಂದಿನ ಎಲ್ಲಾ ಪ್ರಗತಿಪರ ಪಕ್ಷ ಹಾಗೂ ಸಂಘಟನೆಗಳು ಒಗ್ಗಟ್ಟಾಗಿ ಇಂದಿರಾ ಗಾಂಧಿಯ ವಿರುದ್ಧ ಸಾಂಸ್ಕೃತಿಕ ಪ್ರಚಾರ ಆಂದೋಲನಕ್ಕೆ ಮುಂದಾದರು. ಇಂದಿರಾ ಗಾಂಧಿಯನ್ನು ಸೋಲಿಸುವುದರಿಂದ ಪ್ರಜಾಪ್ರಭುತ್ವ, ಪ್ರಜೆಗಳ ವೈಯಕ್ತಿಕ ಘಟನೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಮುಕ್ತವಾಗಿ ಸಂಘವನ್ನು ಸೇರಲು ಸಹಾಯಕವಾಗುತಿತ್ತು. ಸಂವಿಧಾನಾತ್ಮಕ ಹಕ್ಕುಗಳನ್ನು ಮೊಟಕು ಮಾಡಿದ ಕಾರಣದಿಂದ ಇಂದಿರಾ ಗಾಂಧಿಯ ವಿರುದ್ಧ 'ಸಮುದಾಯ' ಸಂಘಟನೆಯು 'ಸರ್ವಾಧಿಕಾರ ವಿರೋಧಿ ಸಾಂಸ್ಕೃತಿಕ ಜಾಥಾ'ದಲ್ಲಿ ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯಲ್ಲಿ, ಹಾಡು, ನಾಟಕಗಳು, ವಿಚಾರ ಸಂಕಿರಣಗಳು(ಬೀದಿಯ ಭಾಷಣಗಳು) ರಾಜ್ಯದಾದ್ಯಂತ ವೈಚಾರಿಕ ಅಲೆಯನ್ನು ಉಂಟುಮಾಡಿತು.[೩] ಈ ಸಂದರ್ಭಕ್ಕಾಗಿ 'ಸಮುದಾಯ'ದ ಸರ್ವಾಧಿಕಾರ ವಿರೋಧಿ ಜಾಥಾಕ್ಕಾಗಿ 'ಸಮುದಾಯ'ದ ಸಿದ್ಧಲಿಂಗಯ್ಯನವರು ಕ್ರಾಂತಿಕಾರಿ ಹಾಡೊಂದನ್ನು ಬರೆದಿದ್ದು ಚಾರಿತ್ರಿಕ ಅಂಶವಾಗಿದೆ ಅದು ಈ ಕೆಳಗಿನಂತಿದೆ.

ತುರ್ತುಪರಿಸ್ಥಿತಿಯ ಕರಾಳ ರಾಣಿಯ ಕತೆಯನ್ನು ಹೇಳ್ತೀವಿ
ಬಡವರ ಸಾವಿರ ಸಂಕಟವನ್ನು ಜೊತೆಯಲಿ ಹೇಳ್ತೀವಿ
ಭಾರತ ದೇಶವ ಜೈಲನು ಮಾಡಿ
ಜನಗಳ ಬಾಯಿಗೆ ಬೀಗವ ಹಾಕಿ
ಮನೆಮನೆಯಲ್ಲೂ ಕೊಲೆಗಳ ಮಾಡಿ
ವಿಷದ ಬೆಳೆಗಳು ಬೆಳೆದೋಳಾ ॥ಪ॥
ತಾನೇ ದೇವರು ದೇಶದ ಎಂದು
ತನ್ನಯ ಮಗನ ಮುಂದಕೆ ತಂದು
ನ್ಯಾಯಕೆ ಮಸಿಯ ಬಳಿದೋಳಾ ॥ಪ॥
ಕಾಲು ಕೈಗಳಿಗೆ ಸರಪಳಿಕಟ್ಟಿ
ನಾಯಿಯ ಬಾಯಿಗೆ ಕೊಟ್ಟೋಳಾ ॥ಪ॥
ಹುಡುಗರು, ಮುದುಕರು, ಮಕ್ಕಳು ಎನ್ನದೆ
ದರದರ ಎಂದು ಎಳೆದು ತಂದು
ನರಗಳ ಕುಯ್ಯಿದ ನಾರೀಮಣಿ ॥ಪ॥
ಬಡವರ ಮೇಲೆ ಭಾಷಣ ಮಾಡಿ
ಇಲ್ಲಸಲ್ಲದ ಸುಳ್ಳುಗಳ ಹೇಳಿ
ಮೋಡಿಯ ಮಾಡಿದ ಕಡುಜಾಣೆ ॥ಪ॥

ಈ ಹಾಡಿಗೆ ಉದಾಹರಣೆಯಾಗಿ ಭಾರತ ತುರ್ತುಪರಿಸ್ಥಿತಿಯ ಕರಾಳತೆ ಹೇಗಿತ್ತು ಎಂದರೆ 'ರಾಜನ್ ಪ್ರಕರಣ' ಎಂದೇ ಸುದ್ದಿಯಾಗಿ ಕೇರಳದ ಗೃಹ ಸಚಿವ ರಾಜೀನಾಮೆ ಕೊಡುವ ಸ್ಥಿತಿಗೂ ಬಂದಿತ್ತು. ಜೊತೆ ರಾಜನ್ ತಂದೆ ತನ್ನ ಮಗನು ತುರ್ತುಪರಿಸ್ಥಿತಿಯ ಭೀಕರ ಸರ್ವಾಧಿಕಾರಿ ಆಡಳಿತದ ಪೋಲೀಸ್ ದುರಾಡಳಿತ ವ್ಯವಸ್ಥೆಯ ಪ್ರತಿ ಬಿಂಬವಾಗಿ ರಾಜನ್ ತನ್ನ ಕಾಲೇಜು ಹಾಸ್ಟೆಲ್‌ನಿಂದ ಕಾಣೆಯಾದ ಪ್ರಕರಣವು, ಪೋಲೀಸರು ರಾಜನ್ ಕೊಲೆ ಮಾಡಿರುವ ಆರೋಪದಿಂದ ಈ ಪ್ರಕರಣ ದೇಶದ್ಯಾಂತ ವಿವಾದಗಳನ್ನು ಸೃಷ್ಟಿ ಮಾಡಿತು. ಕೊನೆಗೆ ರಾಜನ್ ತಂದೆ ಕೇರಳದ ಎಡಪಕ್ಷಗಳ ಬೆಂಬಲದಿಂದ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿ ನಂತರ ಪಾರ್ಲಿಮೆಂಟಿನಲ್ಲಿ ಇಂದಿರಾ ಗಾಂಧಿಯನ್ನು ತರಾಟೆ ತೆಗೆದುಕೊಳ್ಳುವ ಪರಿಸ್ಥಿತಿಯು ಉಂಟಾಗಿದ್ದು ಈ ಪ್ರಕರಣವು ಮೇಲು ನೋಟಕ್ಕೆ ಇಂದಿರಾ ಗಾಂಧಿಯು ಜೆ.ಪಿ.ನಾರಾಯಣ್ ಹಾಗೂ ಜಾರ್ಜ್ ಫರ್ನಾಂಡೀಸ್ ಹಾಗೂ ಜನಸಂಘ ಹಾಗೂ ಸಮಾಜವಾದಿಗಳ ಗುರಿಮಾಡಿಕೊಂಡು ಇಂದಿರಾ ಗಾಂಧಿಗೆ ಸೈದ್ಧಾಂತಿಕತೆ ಪ್ರತಿರೋಧವನ್ನು ರೈತ–ಕಾರ್ಮಿಕರ–ವಿದ್ಯಾರ್ಥಿ–ಯುವಜನರ–ಮಹಿಳಾ ಚಳವಳಿಯನ್ನು ಹಾಗೂ ಸಾಂಸ್ಕೃತಿಕ ರಂಗವನ್ನು ವಿಶೇಷವಾಗಿ ಪ್ರತಿಕಾ ಮಾಧ್ಯಮವನ್ನು ತನ್ನ ಹಿಡಿತದಲ್ಲಿಡಲು ಹಾಗೂ ಇದಕ್ಕೆ ಬೆಂಬಲವಾಗಿ ಇಂತಹ ಕಮ್ಯುನಿಸ್ಟ್ ಪಕ್ಷಗಳನ್ನು ನೇರವಾಗಿ ಧಮನ ಮಾಡುವ ಬದಲು ಬಲಪಂಥೀಯರನ್ನು ಮಟ್ಟ ಹಾಕುವ ಹೆಸರಿನಲ್ಲಿ ಎಡಪಂಥೀಯ ಪಕ್ಷಗಳು, ಬುದ್ದಿಜೀವಿ ವರ್ಗ, ಪತ್ರಿಕಾವರ್ಗ, ವಿಶೇಷವಾಗಿ ವಿದ್ಯಾರ್ಥಿ ಚಳವಳಿಯನ್ನು ಮೊಟಕುಮಾಡುವ ಹುನ್ನಾರ ಇದರ ಹಿಂದೆ ಅಡಗಿತ್ತು.

ಎಪ್ಪತ್ತರ ದಶಕದ ವಿದ್ಯಾರ್ಥಿ ಚಳವಳಿಯು ಅದರಲ್ಲೂ ಎಡಪಂಥೀಯ ವಿದ್ಯಾರ್ಥಿ ಚಳವಳಿಯು ಕಾಂಗ್ರೆಸ್ ಸೈದ್ಧಾಂತಿಕ ಉತ್ತರವನ್ನು ನೀಡುವ ಹಾಗೂ ಕ್ರಾಂತಿಯ ಬೀಜಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವ ಪ್ರಯೋಗಶಾಲೆಗಳಾಗಿ ಭಾರತದ್ಯಾದಂತ ವಿಶ್ವವಿದ್ಯಾಲಯಗಳಲ್ಲಿ ಕಾರ್ಯಪ್ರವೃತ್ತವಾಗಿತ್ತು. ಇದು ಎಪ್ಪತ್ತರ ದಶಕದ ಚಾರಿತ್ರಿಕ ಚಳವಳಿಗಳ ಚಿತ್ರಣವಾಗಿದೆ. ಈ ಮೇಲಿನಂತೆ ಎಲ್ಲ ರೀತಿಯ ತುರ್ತುಪರಿಸ್ಥಿತಿಯ ಘಟನೆಗಳ ನಂತರ ಚಿಕ್ಕಮಗಳೂರು ಲೋಕಸಭೆ ಚುನಾವಣೆಯನ್ನ ೧೯೭೭ರ ಗಮನಿಸಿದರೆ ಇಂದಿರಾ ಗಾಂಧಿಯ ವಿರುದ್ಧ ವೀರೇಂದ್ರ ಪಾಟೀಲ್ ಸೂಕ್ತವಾದ ಎದುರಾಳಿಯಲ್ಲವೆಂದೆನಿಸುತ್ತದೆ. ಏಕೆಂದರೆ ಸಮತಾವಾದಿ ಚಿಂತನೆಗಳಿಂದ ಪ್ರಭಾವಿತರಾದ ಜಾರ್ಜ್ ಫರ್ನಾಂಡೀಸ್‌ರವರು ಚಿಕ್ಕಮಗಳೂರು ಲೋಕಸಭೆಯ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿಯನ್ನು ಸೋಲಿಸಲು ಸಮಾಜವಾದಿಗಳ ಸಭೆಯಲ್ಲಿ ಕನ್ನಡದ ಮೇರು ನಟರಾದ ರಾಜ್‌ಕುಮಾರ್ ಅವರ ಹೆಸರು ಪ್ರಸ್ತಾಪಿಸಿದರು.

ನಟ ರಾಜಕುಮಾರ್ ಅವರು ೧೯೭೭ರಲ್ಲಿ ಇಂದಿರಾ ಗಾಂಧಿಯ ವಿರುದ್ಧ ಸ್ಪರ್ಧಿಸಲು ಸೂಕ್ತ ವ್ಯಕ್ತಿಯಾಗಿದ್ದರು ಎಂದು ಭಾವಿಸಿದ ಸಮಾಜವಾದಿಗಳು ರಾಜಕುಮಾರ್ ಅವರನ್ನು ಒಪ್ಪಿಸಲು ಪ್ರಯತ್ನಿಸಿದರು. ಆದರೆ ರಾಜಕುಮಾರ್ ಚುನಾವಣೆಯಲ್ಲಿ ಗೆದ್ದರೂ ಸೋತರೂ ಕನ್ನಡ ನಾಡಿನ

ಕೆಲವು ಜನರಿಗಾದರು ಶತ್ರುವಿನ ಪಟ್ಟದಲ್ಲಿ ಕೊನೆಯವರೆಗೂ ಹೆಸರು ಉಳಿಯುತ್ತದೆ ಎಂಬ ಯೋಚನೆಯಿಂದ ಜಾರ್ಜ್ ಫರ್ನಾಂಡೀಸ್ ರಾಜಕುಮಾರ್ ಭೇಟಿಗೆ ಸಿಗದೆ[೪] ಮೈಸೂರಿನಿಂದ ಬೆಂಗಳೂರು, ಬೆಂಗಳೂರಿನಿಂದ ಮದ್ರಾಸ್, ಮದ್ರಸ್‌ನಿಂದ ಬರುತ್ತಾರೆ ಎಂಬ ಕಾರಣದಿಂದ, ಆಂಧ್ರಪ್ರದೇಶದಲ್ಲಿ ಯಾರಿಗೂ ಸಿಗದೇ ಚುನಾವಣೆಯ ನಾಮಪತ್ರವನ್ನು ಸಲ್ಲಿಸಿದ್ದಾರೆ. ನಂತರ ಅವರು ವಿರೇಂದ್ರ ಪಾಟೀಲ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ ಎಂಬ ಮಾಹಿತಿಯ ನಂತರ ಕರ್ನಾಟಕಕ್ಕೆ ಮರಳಿದರು.

ಜಾರ್ಜ್ ಫರ್ನಾಂಡಿಸ್ ಸ್ಥಳೀಯ ಕನ್ನಡ ಪ್ರಭಾವಿ ವ್ಯಕ್ತಿಯನ್ನು ನಿಲ್ಲಿಸುವ ಚಿಂತನೆಯ ಫಲ ನೀಡಲು ಸಾಧ್ಯವಾಗಿರುವುದು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ. ನಂತರ ಎಡ ಪ್ರಜಾಪ್ರಭುತ್ವ ಹಾಗೂ ಜನಸಂಘ(ಈಗಿನ ಬಿ.ಜೆ.ಪಿ) ಬೆಂಬಲಿತ ಅಭ್ಯರ್ಥಿಯಾಗಿ ವಿರೇಂದ್ರ ಪಾಟೀಲ್ ಅವರನ್ನು ಚಿಕ್ಕಮಗಳೂರು ಲೋಕಸಭೆಯ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿ ವಿರುದ್ಧ ನಿಲ್ಲಿಸಿದರು. ಈ ಚುನಾವಣೆಯ ನಂತರ ಎಂಬತ್ತರ ದಶಕದಲ್ಲಿ 'ಸಮುದಾಯ' ದಲಿತ ಸಂಘಟನೆಗಳು ಹೆಚ್ಚು ಪ್ರವರ್ಧಮಾನಕ್ಕೆ ಬಂದ ಸಂಘಟನೆಗಳಾಗಿದ್ದವು. ಅದರಲ್ಲಿ 'ಸಮುದಾಯ' ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಾಂಸ್ಕೃತಿಕ ಸಂಘಟನೆಯಾಗಿ ಗುರುತಿಸಿಕೊಂಡಿದ್ದನ್ನು ಕಾಣುತ್ತೇವೆ. ಜೊತೆಗೆ ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ-ಮಹಿಳಾ ಚಳವಳಿಗಳಲ್ಲಿ ಅದರಲ್ಲಿ ಎಡಪಂಥೀಯ ಕಮ್ಯುನಿಸ್ಟ್ ನಾಯಕರು ಅನೇಕರಿದ್ದರು. ಕರ್ನಾಟಕದ ಸಮಾಜವಾದಿಗಳು, ಲೋಹಿಯ ಚಿಂತನೆಯ ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು ಹಾಗೂ ಪೆರಿಯಾರ್‌ವಾದಿಗಳು, ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಗೆ ಕಮ್ಯುನಿಸ್ಟ್ ಪಕ್ಷಗಳ ಅಭ್ಯರ್ಥಿಯನ್ನು ಏಕೆ ಈ ಚುನಾವಣೆ ಅಭ್ಯರ್ಥಿಯಾಗಿ ನಿಲ್ಲಿಸಲಿಲ್ಲ ಎಂಬುದು ವಿಮರ್ಶೆಗೆ ಕಾರಣವಾಗುತ್ತದೆ.[೫] ವೀರೇಂದ್ರ ಪಾಟೀಲ್ ಅಂದಿನ ಮೇಲುವರ್ಗದ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂಬ ಕಾರಣದಿಂದ ಹಾಗೂ ವೈಯಕ್ತಿಕವಾಗಿ ವೀರೇಂದ್ರ ಪಾಟೀಲ್ ಈ ಚುನಾವಣೆಗೆ ಸ್ಪರ್ಧಿಸಲು ಇಷ್ಟವಿಲ್ಲದಿದ್ದರೂ ಚುನಾವಣೆಗೆ ನಿಲ್ಲಿಸಿದರು. ೧೯೭೦ಳರಲ್ಲಿ ದೇವರಾಜ ಅರಸು ಅವರ ಉಳುವವನೇ ಭೂ ಒಡೆಯ ನೀತಿಯು ಹೆಚ್ಚು ಜಾರಿಗೆ ಬಂದಿದ್ದು ಕರಾವಳಿ ಭಾಗದ ಚಿಕ್ಕಮಗಳೂರು, ಶಿವಮೊಗ್ಗ ಭಾಗದಲ್ಲಿ. ಜೊತೆಗೆ ದೇವರಾಜು ಅರಸು ಹಿಂದುಳಿದ ವರ್ಗಗಳನ್ನು ಹಾಗೂ ದಲಿತ-ಅಲ್ಪಸಂಖ್ಯಾತರನ್ನು ತನ್ನ ಅಧಿಕಾರವಧಿಯಲ್ಲಿ ಶಾಸಕರ ಹಾಗೂ ಸಚಿವರನ್ನಾಗಿ ಮಾಡಿದ್ದು, ಇಂದಿರಾ ಗಾಂಧಿಯ ೨೦ ಅಂಶಗಳ ಕಾರ್ಯಕ್ರಮ ಹಾಗೂ ಗರಿಭೀ ಹಠಾವೋ ಇತರ ಜನಪರ ಸುಧಾರಣೆಗಳಿಂದಾಗಿ, ಇಂದಿರಾ ಗಾಂಧಿಯು ೧೯೮೦ರ ನಂತರ ಲೋಕಸಭೆಯ ಚುನಾವಣೆಯಲ್ಲಿ ವಿಜಯಶಾಲಿಯಾಗಿ ಮತ್ತೆ ಪ್ರಧಾನಿಯಾಗಿದುದ್ದನ್ನು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ. ನಂತರ ಕರ್ನಾಟಕದಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಗುಂಡುರಾವ್ ಅವರ ಕಾಂಗ್ರೆಸ್ ಸರ್ಕಾರ ಪತನವಾಗಲು ಪ್ರಮುಖ ಪಾತ್ರ ವಹಿಸಿದ್ದು ಚಾರಿತ್ರಾರ್ಹ ಸಂಗತಿಯಾಗಿದೆ.

ಹೊಸ ಮೌಲ್ಯಗಳತ್ತ 'ಸಮುದಾಯ'ದ ಸಾಂಸ್ಕೃತಿಕ ಜಾಥಾ : ೧೯೭೯

ಎಪ್ಪತ್ತರ ದಶಕದ ಕೊನೆಯ ವರ್ಷದಲ್ಲಿ ಸಾಂಸ್ಕೃತಿಕ ಕ್ಷೇತ್ರವು ನಗರದ ಜನರಿಗೆ ಮಾತ್ರ ಲಭ್ಯವಿರುವಂತಹ ರಂಗಭೂಮಿ ಕ್ಷೇತ್ರವಾಗಿತ್ತು. ೧೯೭೯ರಲ್ಲೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಮೊದಲ ಬಾರಿಗೆ ಯಾವುದೇ ಸರ್ಕಾರ ಸಹಕಾರವಿಲ್ಲದೇ ಇಡೀ ಕರ್ನಾಟಕದ ಹಳ್ಳಿ-ಹಳ್ಳಿಗಳಿಗೆ ಜಾಥಾ ಮೂಲಕ ಹೊಸ ಮೌಲ್ಯಗಳನ್ನು ಹೊತ್ತು ೧೯೭೯ ಅಕ್ಟೋಬರ್ ೧೫ ರಿಂದ ನವೆಂಬರ್ ೧೫ರ ವರೆಗೆ ಒಂದು ತಿಂಗಳ ಯಶಸ್ವಿ ಜಾಥಾ ನಡೆಸಿತು. ಬೆಂಗಳೂರು, ಮೈಸೂರು, ತುಮಕೂರು, ಮಂಗಳೂರು ಹಾಗೂ ಧಾರವಾಡ, ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ತನ್ನ ನಾಲ್ಕು ವರ್ಷಗಳ ರಂಗ ಚಟುವಟಿಕೆಗಳ ಮೂಲಕ ಅದರಲ್ಲೂ ಮುಖ್ಯವಾಗಿ ೧೯೭೮ರಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ 'ಸಮುದಾಯ' ಸಂಘಟನೆಯು ಇಡೀ ಕ್ಷೇತ್ರವಾರು ಸರ್ವಾಧಿಕಾರಿ ವಿರೋಧಿ ಜಾಥಾ ಮಾಡಿ ಯಶಸ್ವಿಯಾಯಿತು. ಮಂಗಳೂರಿನದ್ಯಾಂತ ಈ ಜಾಥಾದ ಅನುಭವವನ್ನು ಇಟ್ಟುಕೊಂಡಂಥ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಎಸ್.ಮಾಲತಿ, ಗಂಗಾಧರ್‌ಸ್ವಾಮಿ, ಗುಂಡಣ್ಣ.ಸಿ.ಕೆ, ಮುಂತಾದ 'ಸಮುದಾಯ' ಸಂಘಟಕರು ಸೇರಿಕೊಂಡು ಕರ್ನಾಟಕದಲ್ಲಿ ಎರಡು ಜಾಥಾ ತಂಡಗಳನ್ನು ವಿಭಾಗಿಸಿಕೊಂಡು, ಒಂದು ಕರ್ನಾಟಕದ ಮೇಲ್ತುದಿಯ ಬೀದರ್‌ನಿಂದ ಇನ್ನೊಂದು ತಂಡ ಜಾಥಾವು, ಕರ್ನಾಟಕದ ದಕ್ಷಿಣ ತುದಿಯ ಕೆ.ಜಿ.ಎಫ್ ನಿಂದ ಅಕ್ಟೋಬರ್‌ನಲ್ಲಿ ಜಾಥಾ ಉದ್ಘಾಟನೆಗೊಂಡು 'ಸಮುದಾಯ'ವು ರೂಪಿಸಿದ ರೂಟ್ ಮ್ಯಾಪ್ ಮೂಲಕ ಎರಡು ತಂಡಗಳು ದಿನಾಂಕ ೧೯೭೦ ನವೆಂಬರ್ ೧೫ ರಂದು ಧಾರವಾಡಕ್ಕೆ ಎರಡು ಜಾಥಾಗಳು ಸಂಗಮಗೊಂಡು ಸಮಾರೋಪ ಕಾರ್ಯಕ್ರಮ ಕೈಗೊಳ್ಳುವ ನಿರ್ಧಾರವನ್ನು ಕೈಗೊಂಡಿದ್ದರು.

ಇದರ ಪ್ರಕಾರ ಹೊಸ ಮೌಲ್ಯಗಳತ್ತ 'ಸಮುದಾಯ' ಸಾಂಸ್ಕೃತಿಕ ಜಾಥಾದ ನಾಟಕಗಳ ಆಯ್ಕೆ ಹಾಗೂ ಜಾಥಾವನ್ನು ನಡೆಸಲು ಆರ್ಥಿಕ ಬಜೆಟ್‌ನ್ನು ಜನರಿಂದಲೇ ಸಂಗ್ರಹ ಮಾಡಿ ಮತ್ತೆ ಜನರಿಗೆ ಸಣ್ಣ ಸಣ್ಣ ಕಿರುಹೊತ್ತಿಗೆ ಹಾಗೂ ಗ್ರೀಟಿಂಗ್ ಕಾರ್ಡ್‌ಗಳ ಮೂಲಕ ಕರಪತ್ರಗಳ ಮೂಲಕ ಜನರಿಗೆ ಮಹತ್ವದ ಯೋಜನಾ ಬದ್ಧ ಜಾಥಾವನ್ನು ರೂಪಿಸಿದ್ದರು. ಇದಕ್ಕೆ ಒಂದು ಸಮಿತಿಯನ್ನು ರಚಿಸಿದ್ದರು. ಅದರಲ್ಲಿ ಕರ್ನಾಟಕದ ಪ್ರಮುಖ ಸಾಹಿತಿಗಳನ್ನು ಕಾಣಬಹುದಾಗಿದೆ. ಅವರುಗಳೆಂದರೆ ಚಂದ್ರಶೇಖರ ಪಾಟೀಲ್(ಧಾರವಾಡ) ಭಾಗವಾಗಿ ಕೆ.ವಿ.ಸುಬ್ಬಣ್ಣ ಹಾಗೂ ಕಾಗೋಡು ತಿಮ್ಮಪ್ಪ(ಸಾಗರ) ಭಾಗವಾಗಿ, ಕು.ಶ್ರೀ.ಹರಿದಾಸ್ ಭಟ್, ವಾರಿಯರ್(ಉಡುಪಿ) ಭಾಗವಾಗಿ ಕಲ್ನಾಡಿಗೆಯ ಜಾಥಾದಲ್ಲಿ ಭಾಗವಹಿಸಿದ್ದರು. 'ಸಮುದಾಯ'ದಿಂದ ಒಂದು ತಿಂಗಳು ನಡೆಯುವ 'ಸಮುದಾಯ'ದ ಜಾಥಾಗೆ ಆರ್ಥಿಕ ವೆಚ್ಚ ಅಂದಾಜು ೧೮೦೦೦ ಸಾವಿರ ಆಗುತ್ತದೆ ಎಂದು ಪ್ರಸ್ತಾಪಿಸಿದರು.[೬] ಇವರು ಜನರಿಂದಲೇ ಹಣ ಸಂಗ್ರಹಿಸಿಕೊಳ್ಳಬೇಕು ಎಂದಿದ್ದರು. ಇದರಲ್ಲಿ ಕಿರುಹೊತ್ತಿಗೆ, ಗ್ರೀಟಿಂಗ್ ಕಾರ್ಡ್ ಮೂಲಕ ಹೆಚ್ಚು ಜನಸಾಮಾನ್ಯರನ್ನು ತಲುಪುವುದು ಮುಖ್ಯ ಉದ್ದೇಶವಾಗಿತ್ತು. ಹೀಗೆ ತನ್ನ 'ಸಮುದಾಯ'ದ ಮಿತ್ರ ಸಂಘಟಕರಿಂದ ಆಯೋಜಿಸಿದ್ದ ಈ ಜಾಥಾದ ಮುಖ್ಯ ಉದ್ದೇಶಗಳ ಈ ಕೆಳಕಂಡ್ಡಂತಿವೆ.

ಜಾಥಾದ ಉದ್ದೇಶಗಳು

೧. ಸಾಹಿತ್ಯ, ಸಾಂಸ್ಕೃತಿಕ ಅಸ್ತ್ರಗಳನ್ನು ಬಳಸಿ ಅಸಮಾನತೆಯ ವಿರುದ್ಧ ಧ್ವನಿ ಎತ್ತವುದು.

೨. ಮೂಢನಂಬಿಕೆಯನ್ನು ತೊಡೆದು ಹಾಕಿ ವೈಚಾರಿಕ ಪ್ರಜ್ಞೆಯನ್ನು ಜನರಲ್ಲಿ ಮೂಡಿಸುವುದು.

೩. ರೈತ–ಕಾರ್ಮಿಕ–ಕೂಲಿಕಾರರ–ದಲಿತರ ಬಗ್ಗೆ ಇರುವ ಸಮುದಾಯದ ಕಿರು ಸಾಹಿತ್ಯ ಹೊತ್ತಿಗೆಗಳ ವಿಸ್ತರಣೆ.

೪. ಅನಕ್ಷರಸ್ಥ ಜನರಲ್ಲಿ ಪ್ರಶ್ನೆ ಮಾಡುವ ಪ್ರಜ್ಞೆಯನ್ನು ಹುಟ್ಟು ಹಾಕುವುದು.

೫. ಹೆಣ್ಣಿನ ಶೋಷಣೆಗಳ ವಿರುದ್ಧ ಧ್ವನಿ ಎತ್ತುವುದು.

೬. ಅಸ್ಪೃಶ್ಯತೆಯಿಂದ ದಲಿತರ ದಮನಕಾರಿ ವಿರುದ್ದ ಹೋರಾಟಕ್ಕೆ ಜನರನ್ನು ಪ್ರೇರೇಪಿಸುವುದು.

೭. ಭೂಮಾಲಿಕರು ಹಾಗೂ ಬಂಡವಾಳಶಾಹಿಗಳ ಶೋಷಣೆಯ ವಿರುದ್ಧವಾಗಿ ಸಮಾನತೆಯ ಕ್ರಾಂತಿಕಾರಿ ವಿಚಾರಗಳ ವಿನಿಮಯ.

ಈ ಮೇಲಿನ ಉದ್ದೇಶಗಳನ್ನು ಹೊಂದಿದ 'ಸಮುದಾಯ' ಸಂಘಟನೆಯ ೧೯೭೮ರ ಜಾಥಾವು ಹೊಸ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾವಾಗಿ ಐತಿಹಾಸಿಕ ಜಾಥಾ ಎಂದು ಆಧುನಿಕ ರಂಗ ಚಳವಳಿಯ ಚರಿತ್ರೆಯಲ್ಲಿ ಗುರುತಿಸಬಹುದು. ಏಕೆಂದರೆ ಸುಮಾರು ೧೬೦೦ಕ್ಕೂ ಹೆಚ್ಚು ಕಿ.ಲೋ ಮೀಟರ್‌ನಷ್ಟು ಸಾಗಿದ ಒಂದು ತಿಂಗಳ ಜಾಥಾವನ್ನು ಐತಿಹಾಸಿಕ ಜಾಥಾವಾಗಿ ಗುರುತಿಸುತ್ತೇವೆ. ಇದನ್ನು ಕರ್ನಾಟಕದ 'ರೆಡ್ ಆರ್ಮಿ' ಎಂತಲು ಕರೆಯುವುದುಂಟು. ಜೊತೆಗೆ 'ಕ್ರಿಯಾಟೀವ್ ಆಫ್ ಸರ್ಚ್ ಇನ್ ಕರ್ನಾಟಕ ಆಗಬೇಕೆಂದು ಡಿ.ಆರ್. ನಾಗರಾಜ್ ಹೇಳತೊಡಗಿದ್ದರು. ಈ ಜಾಥಾದ ಪ್ರಮುಖ ನಾಟಕಗಳೆಂದರೆ ಬೆಲ್ಚಿ, ಪತ್ರೆ ಸಂಗಪ್ಪನ ಕೊಲೆ, ಕತ್ತಲೆ ದಾರಿ ದೂರ, ಭಾರತ ದರ್ಶನ, ಬೆಳೆದವರು, ಛಸ್ನಾಲಾ, ಪಂಚಮ, ಹೈದಾರಬಾದ್ ಗೋಲಿಬಾರ್, ಬುರುಡೆ ಬಾಬನ ಕಥೆ ಇವು ಪ್ರಮುಖ ನಾಟಕಗಳು, ಈ ನಾಟಕಗಳ ಜೊತೆಗೆ ಭಿತ್ತಿ ಪತ್ರಗಳ ಮೂಲಕ ಪ್ರಚಾರ ಮಾಡುವ ಮೊದಲ ಜಾಥಾ ಇದ್ದಾಗಿತು.[೭] ಈ ಜಾಥಾಕ್ಕೆ ಸಮುದಾಯ ಪ್ರಕಾಶನದಿಂದ ಹಾಗೂ ಕ್ರಿಯಾ ಮತ್ತು ನವಕರ್ನಾಟಕದ ಪ್ರಕಾಶನಗಳಿಂದ ಸಣ್ಣ ಸಣ್ಣ ಕಿರುಹೊತ್ತಿಗೆಗಳು ಭಾರತದ ಸ್ವಾತಂತ್ರ್ಯ ಚಳವಳಿ, ರೈತ–ಕಾರ್ಮಿಕ ಹಾಗೂ ದಲಿತರ ಮೇಲಿನ ಶೋಷಣೆಗಳ ಬಗ್ಗೆ ಹಾಗೂ ಬಂಡವಾಳ ಶಾಹಿ ಬೆಳವಣಿಗೆಯ ಬಗ್ಗೆ ಭೂಮಾಲಿಕರ ಅಟ್ಟಹಾಸದ ಬಗ್ಗೆ ಕಿರು ಹೊತ್ತಿಗೆಗಳು ಕರ್ನಾಟಕದ ಹಳ್ಳಿ–ಹಳ್ಳಿಗೆ ಈ ಜಾಥಾದ ಮೂಲಕ ತಲುಪಿದ್ದು ಚಾರಿತ್ರಿಕ ಅಂಶವಾಗಿದೆ. ಅವುಗಳು ಈ ಕೆಳಗಿನಂತಿವೆ.

ಈ ಜಾಥಾಗಳಲ್ಲಿ 'ಸಮುದಾಯ'ದ ಕಿರು ಹೊತ್ತಿಗೆಗಳು

೧. ಚಿರಸ್ಮರಣೀಯ ಕಯ್ಯೂರು – ನಿರಂಜನ

೨. ತೆಲಂಗಾಣ ರೈತ ಹೋರಾಟ – ಜಿ.ರಾಜಶೇಖರ

೩. ಶಿವಮೊಗ್ಗ ರೈತ ಚಳವಳಿ – ಜಿ.ಪಿ.ಬಸವರಾಜು

೪. ದಲಿತರ ಮೇಲಿನ ದೌರ್ಜನ್ಯಗಳು – ಶಿವಾಜಿ ಗಣೇಶನ್

೫. ನಮ್ಮ ಶಿಕ್ಷಣ ಪದ್ಧತಿ – ಇಕ್ಬಾಲ್ ಹುಸೇನ್

೬. ಬಹುರಾಷ್ಟ್ರೀಯ ಸಂಸ್ಥೆಗಳು – ನರಸಿಂಹನ್

೭. ರೈತ-ಕಾರ್ಮಿಕ ಸಂಘಟನೆ ಮತ್ತು ಸಾಮಾಜಿಕ ಬದಲಾವಣೆ – ಎಂ.ಕೆ.ಭಟ್

೮. ದಲಿತರಿಗೆ ಬೇಕಾದುದು ಹೆಸರಿನ ಬದಲಾವಣೆ ಅಲ್ಲ – ಸಿದ್ಧಲಿಂಗಯ್ಯ

೯. 'ಹೊಲೆ ಮಾದಿಗರ ಹಾಡು', 'ಸಾವಿರಾರು ನದಿಗಳು' – ಸಿದ್ಧಲಿಂಗಯ್ಯ

೧೦. ಆರ್.ಎಸ್.ಎಸ್. ಒಂದು ವಿಷ ವೃಕ್ಷ – ಆಚಾರ್ಯ

೧೧. ಸಮುದಾಯದ ಆಶಯ – ಪ್ರಸನ್ನ

ಈ ಮೇಲ್ಕಂಡ ಕಿರು ಹೊತ್ತಿಗೆಗಳನ್ನು ಜಾಥಾದ ಈ ನಾಟಕ ನೋಡಲು ಬಂದಂತಹ ಜನರಿಗೆ ಕೇವಲ ೧ ರೂಪಾಯಿಗೆ ನೀಡುತ್ತಿದ್ದರು. ಜೊತೆಗೆ ಈ ಐತಿಹಾಸಿಕ ಜಾಥಾಮಾಡಲು 'ಸಮುದಾಯ'-ಸಂಘಟನೆಯಲ್ಲಿ ಕಮ್ಯುನಿಸ್ಟರು, ಜಾತ್ಯಾತೀತ, ಪ್ರಗತಿಪರ ಚಿಂತಕರು ಹಾಗೂ ಇಡೀ ಕರ್ನಾಟಕ ಸಾಹಿತ್ಯ ವರ್ಗದವರು ಚಳವಳಿಗಾರರು ಒಂದುಗೂಡಿದ್ದು ಕಾಣುತ್ತೇವೆ.[೮] ಆದ್ದರಿಂದ ಬಹುತೇಕ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ತಾಲ್ಲೂಕು ಮತ್ತು ಹೋಬಳಿ-ಹಳ್ಳಿಗಳಿಗೆ ತಲುಪಿದ ಒಂದು ತಿಂಗಳ ಜಾಥಾ ಇದಾಗಿತ್ತು. ೧೯೭೮ರಲ್ಲಿ ರಾಜ್ಯ ಬರಗಾಲದ ದವಡೆಯಿಂದ ಇನ್ನೂ ಬಿಡುಗಡೆ ಹೊಂದಿದರಲಿಲ್ಲ, ಕರ್ನಾಟಕದ್ಯಾಂತ ಬಡತನ, ಅಜ್ಞಾನ, ಅನಕ್ಷರತೆ, ಅಸ್ಪೃಶ್ಯತೆಗಳ ಹೆಸರಿನಲ್ಲಿ ದಲಿತ ಮೇಲೆ ಶೋಷಣೆಗಳು ಹೆಚ್ಚಾಗುತ್ತಿದ್ದವು. ದೇಶದ ಅನೇಕ ಭಾಗಗಳಲ್ಲಿ ದಲಿತರು-ರೈತರು-ಕಾರ್ಮಿಕರು ಹಾಗೂ ವಿದ್ಯಾರ್ಥಿ-ಮಹಿಳೆಯರ ಮೇಲೆ ಹಲ್ಲೆಗಳ ನಡೆಯುತ್ತಿದ್ದವು. ಇದೇ ಸಂದರ್ಭದಲ್ಲಿ ಕೇಂದ್ರದಲ್ಲಿದ್ದ ಜನತಾ ಪಕ್ಷದ ಮೋರಾರ್ಜಿ ದೇಸಾಯಿ ನೇತೃತ್ವದಲ್ಲಿ ಅಧಿಕಾರ ಹಿಡಿದಿತ್ತು.

ಬಿಹಾರದ ಬೆಲ್ಚಿ ಗ್ರಾಮದಲ್ಲಿ ೮ ಜನರ ದಲಿತರನ್ನು ಅಲ್ಲಿನ ಜಮೀನ್ದಾರರು ಜೀವಂತವಾಗಿ ಸುಟ್ಟ ಘಟನೆ ಕಾಳ್ಗಿಚ್ಚಿನಂತೆ ಭಾರತದ್ಯಾಂತ ಹರಡಿತು. ಈ ದಲಿತರನ್ನು ಸುಡಲು ಕಾರಣ ಜಮೀನ್ದಾರನಲ್ಲಿಗೆ ಬರುತ್ತಿದ್ದ ಕೂಲಿಕಾರರಿಗೆ ದಿನವೊಂದಕ್ಕೆ ೩ ಸೇರು ಜೋಳ, (ಭತ್ತ ಕೊಡುವುದಾಗಿ) ತೀರ್ಮಾನವಾಗಿತ್ತು ಅದರಂತೆ ಕೂಲಿಗೆ ಹೋಗಿದ್ದರು. ಆದರೆ ಕೆಲಸ ಮುಗಿದ ಮೇಲೆ ಜಮೀನ್ದಾರ ಒಂದು ಸೇರು ಜೋಳ ಕೊಡಲು ಮುಂದಾದರು. ಇದನ್ನು ಪ್ರಶ್ನಿಸಿದ್ದಕ್ಕೆ ಮಾತಿಗೆ ಮಾತು ಬೆಳೆದು ಜಗಳವಾಯಿತು. ನಂತರ ದಲಿತರ ಮನೆಗೆ ಹೊದ ಜಮೀನುದ್ದಾರರು ಆ ಎಂಟು ಜನ ದಲಿತ ಕೂಲಿಕಾರರನ್ನು ಹೊಡದು ಸುಟ್ಟು ಹಾಕಿದರು. ಈ ಘಟನೆಯ ಬಗ್ಗೆ ಅವರ ಸಂಬಂಧಿಕರು

ಹಾಗೂ ಗ್ರಾಮಸ್ಥರು ಪೋಲೀಸ್ ಠಾಣೆಗೆ ಹೋಗಿ ದೂರು ಕೊಡಲು ಮುಂದಾದರು. ಪೋಲೀಸರು ೫೦೦ ರೂಗಳ ಲಂಚ ಕೊಡಬೇಕೆಂದು ಬೆಲ್ಚಿ ದಲಿತ ಗ್ರಾಮಸ್ಥರಲ್ಲಿ ಕೇಳಿದ ಕಾರಣ ಈ ದಲಿತ ಗ್ರಾಮಸ್ಥರು ತಿನ್ನಲು ಕೂಳಿಲ್ಲದ ಪರಿಸ್ಥಿಯಲ್ಲಿ ೫೦೦ರೂ ಹಣವಿಲ್ಲದ ಕಾರಣಕ್ಕಾಗಿ ದೂರು ಕೊಡದೆ ಊರಿಗೆ ವಾಪಸ್ಸು ಹೋದರು. ಕೊನೆಗೆ ಸಂಜೆ ಹೊತ್ತಿಗೆ ಪೋಲೀಸರು ಬೆಲ್ಚಿ ಗ್ರಾಮಕ್ಕೆ ಬಂದರು.

ಆಗ ಅವರಿಗೆ ಸಿಕ್ಕಿದ್ದು ಸತ್ತ ಹೆಣಗಳ ಮೂಳೆ, ಸೀದು ಕರಕಲಾದ ತಲೆಬುರುಡೆ ಹಾಗೂ ಹೆಪ್ಪುಗಟ್ಟಿದ ರಕ್ತ. 'ಇನ್ನೊಂದು ಸಂಗತಿ ಎಂದರೆ ದಲಿತರನ್ನು ಜೋಳದ ಹುಲ್ಲಿನ ಜೊತೆ ಸುಡುತ್ತಿರುವಾಗ ಜಮೀನ್ದಾರನ ಹೆಂಡತಿ-ಮಕ್ಕಳು ಸಂತೋಷದಿಂದ ಸೌದೆ ಹುಲ್ಲನ್ನು ಬೆಂಕಿಗೆ ಎಸೆದು ದೂರ ನಿಂತು ನೋಡುತ್ತಿದ್ದರು. ಈ ವಿಷಯ ಬಿಹಾರದ ಅಸೆಂಬ್ಲಿಯಲ್ಲಿ ಚರ್ಚಿಸಲ್ಪಟ್ಟಿತು. ಈ ಮಾರಣ ಹೋಮವನ್ನು ಕುರಿತು ಕಾಂಗ್ರೆಸ್ ಮತ್ತು ಜನತಾ ಪಕ್ಷಗಳು ಒಬ್ಬರಿಗೊಬ್ಬರು ಆರೋಪ ಪ್ರತ್ಯಾರೋಪಗಳನ್ನು ಮಾಡಿಕೊಂಡರು. ಈ ಘಟನೆ ನಡೆದ ಬೆಲ್ಚಿ ಊರಿಗೆ ಪೋಲೀಸರನ್ನು ನಿಯೋಜಿಸಲಾಗಿ, ಪೋಲೀಸರು ಸರಿಯಾದ ರಸ್ತೆಗಳು ಇಲ್ಲದೆ ವಾಪಾಸಾಗಿದ್ದರು. ಇಂತಹ ಕೆಟ್ಟ ರಸ್ತೆಗಳನ್ನು ನಿರ್ಮಿಸಿದ್ದವರು ಈ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರವೇ. ಆದ್ದರಿಂದ ದಲಿತರ ಸಾವಿನ ಹೊರೆಯನ್ನು ಕಾಂಗ್ರೆಸ್ಸಿಗರೇ ಹೋರಬೇಕೆಂದು ಜನತಾ ಪಕ್ಷದ ಆರೋಪಿಸಿತು.' ಇದಕ್ಕೆ ಪ್ರತಿ ಉತ್ತರವಾಗಿ ಇಂದಿರಾ ಗಾಂಧಿಯವರು ಬೆಲ್ಚಿಗೆ ಆನೆಯ ಮೇಲೆ ಪ್ರವೇಶಿಸಿ 'ನಾನು ಹೇಗೆ ಈ ಗ್ರಾಮಕ್ಕೆ ಬರಲು ಸಾಧ್ಯವಾಯಿತು ಎಂದು ಪ್ರಶ್ನೆಯನ್ನು ಪಾರ್ಲಿಮೆಂಟ್ ಚರ್ಚೆಯಲ್ಲಿ ಕೇಳಿದರು.

ಇದಕ್ಕೆ ಪ್ರಧಾನಿಯಾಗಿದ್ದ ಮೊರಾರ್ಜಿ ದೇಸಾಯಿ ಅವರು 'ತಾವು ಕೂಡ ಆ ಸ್ಥಳ ಸೇರಲು ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾಗ ವಿಮಾನ ಬಲವಂತವಾಗಿ ಕೆಳಗೆ ಬಿದ್ದು ನಾವು ವಿಮಾನದಿಂದ ಕೆಳಗೆ ದುಮುಕಿ ಓಡಬೇಕಾಯಿತೆಂದು, ಈ ಬರ್ಬರ ಹತ್ಯೆಗೆ ಕಾಂಗ್ರೆಸ್ ಪಕ್ಷ ಕಾರಣವೆಂದು ಆಪಾದಿಸಿದರು. ಈ ರೀತಿಯ ರಾಜಕೀಯ ಪಕ್ಷಗಳ ಪರಸ್ಪರ ಆರೋಪ ಪ್ರತ್ಯರೋಪಗಳನ್ನು 'ಸಮುದಾಯ' ಸಂಘಟನೆ ೧೯೭೭ರ ಜಾಥಾಕ್ಕೆ ಬೆಲ್ಚಿಯ ಈ ದುರಂತವೇ ಸೂಕ್ತವಾದ ವಿಷಯವೆಂದು ತಿಳಿದು ಸಿ.ಜಿ.ಕೃಷ್ಣಸ್ವಾಮಿ ನಾಟಕ ರಚನೆ ಮತ್ತು ನಿರ್ದೇಶನ ಎರಡನ್ನು ಯಶಸ್ವಿಯಾಗಿ ನಿಭಾಯಿಸಿದರು. ೧೯೭೭ ರಂದು ಅಕ್ಟೋಬರ್ ೧೫ ರಂದು ಬೀದರ್ ಮತ್ತು ಕೆ.ಜಿ.ಎಫ್‌ನಲ್ಲಿ ಒಂದೇ ಬಾರಿಗೆ ಉದ್ಘಾಟನೆಗೊಳ್ಳಬೇಕು, ನಂತರ ಈ ಜಾಥಾವು ಜಾಥಾದ ರಸ್ತೆ ನಕ್ಷೆಯ ಮೂಲಕ ಇಡೀ ಕರ್ನಾಟಕದ ಹಳ್ಳಿ ಹಳ್ಳಿಯನ್ನು ಸುತ್ತಬೇಕು. ಇದರಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡವರು ಉದ್ಯೋಗಿಗಳಾಗಿದ್ದರು. ಒಂದು ತಿಂಗಳು ಜಾಥಾಗೋಸ್ಕರ ರಜೆಯನ್ನು ಹಾಕಲು ಪ್ಲಾನ್ ಮಾಡಿಕೊಂಡರು. ಎರಡು ವಾಹನಗಳನ್ನು 'ಸಮುದಾಯ'ದ ನರಸಿಂಹನ್ ಹೊಂದಿಸಿದರು. ಕೆ.ಜಿ.ಎಫ್ ಹೊಸ ಮೌಲ್ಯಗಳತ್ತ 'ಸಮುದಾಯ'ದ ಸಾಂಸ್ಕೃತಿಕ ಜಾಥಾವನ್ನು

ಉದ್ಘಾಟನೆಗೆ ಹೊರಟವರು ಶಾದ್ರಿ ಶಾಮಣ್ಣ, ಕಾಳೇಗೌಡ ನಾಗವಾರ, ಸಿದ್ಧಲಿಂಗಯ್ಯ ಹಾಗೂ ಕೋಟಿಗಾನಹಳ್ಳಿ ರಾಮಯ್ಯ ಮುಂತಾದವರಿದ್ದವರಿದ್ದರು. ಈ ತಂಡದಲ್ಲಿ ಇದ್ದ ಇನ್ನಿತರ ಕಲಾವಿದರೂ ಪ್ರಸನ್ನ, ಎಸ್ ಮಾಲತಿ, ಗುಂಡಣ್ಣ.ಸಿ.ಕೆ, ಶಶಿಧರ್ ಅಡಪ, ಲಿಂಗದೇವರ ಹಳೇಮನೆ, ಜನಾರ್ದನ, ರಟ್ಟಿಹಳ್ಳಿ ಮುದ್ದಣ್ಣ, ಎಂ.ಜಿ.ವೆಂಕಟೇಶ್, ಗಾಯಿತ್ರಿ ದೇವಿ, ರಾಮದೇವ ರಾಕೆ, ಟಿ.ಸುರೇಂದ್ರ ರಾವ್, ಸಂಸ್ಕೃತಿ ಶಂಕರ್, ರಾಮಕೃಷ್ಣ, ಟಿ.ಎನ್.ನರಸಿಂಹನ್, ಸುರೇಶ್ ಆನಗಳ್ಳಿ, ಚಂದ್ರಹಾಸ ಉಲ್ಲಾಳ, ಅಚ್ಚುತ್, ಚೊಕ್ಕಲಿಂಗಂ, ರಾಧಾಕೃಷ್ಣ, ಅರ್ಜುನ್, ಕೃಷ್ಣಮೂರ್ತಿ(ಕಿಟ್ಟಿ) ಹಾಗೂ ಸೆಲ್ವ ಪಿಳ್ಳೆ(ಶೆಲ್ಲಿ), ಪಿಚ್ಚಳ್ಳಿ ಶ್ರೀನಿವಾಸ ಮುಂತಾದವರು. ನಂತರ ಇದರ ಇನ್ನೊಂದು ಜಾಥಾದ ಉದ್ಘಾಟನೆ ಬೀದರ್‌ನಲ್ಲಿ ನಡೆಯಿತು.

ಈ ಜಾಥಾದ ಉದ್ಘಾಟನೆಗೆ ಬಂದವರು ಎಂ.ಎಸ್.ಸತ್ಯು, ಮಾನಪ್ಪ, ಇಂದೂಧರ ಹೊನ್ನಪುರ. ಈ ತಂಡದಲ್ಲಿದ್ದವರು ಸಿ.ಜಿ.ಕೆ, ಗಂಗಾಧರ ಸ್ವಾಮಿ, ಬಸವಲಿಂಗಯ್ಯ, ಆರ್.ಕೆ.ಹುಡುಗಿ, ಕೆ.ಷರೀಪಾ, ಜಿ.ಪಿ.ಬಸವರಾಜು, ಗಾಯಿತ್ರಿ, ಸನತ್ ಕುಮಾರ್, ಕುಮಾರ್(ಅನಕ್ಷರಸ್ಥ ತುಮಕೂರು), ಶರಣಮಾಲಿ ಪಾಟೀಲ್, ಆರ್.ಎಸ್.ಪಾಟೀಲ್, ಶ್ರೀಕಾಂತ್ ಕಕ್ಕೇರಿ, ತಿವಾರಿ, ಓಕಳಿ ಪಾಟೀಲ್, ಸಿ.ಎ.ಪಾಟೀಲ್, ಕಮಲಾಕರ, ಕವಿ ಶಾಂತರಸ ಮಗ, ಬಸವ ಪ್ರಭು, ದಮನ್ ಪಾಟೀಲ, ಸಿ.ಎಸ್.ಬಾಳೆ, ಎಸ್.ಎಸ್,ಹಿರೇಮಠ, ಲಿಂಗಣ್ಣ ಸತ್ಯಂಪೇಟೆ ಮುಂತಾದವರು ಆದರೆ ನವೆಂಬರ್ ೧೫ರಂದು ಸಮಾರೋಪದ ತಯಾರಿಗಾಗಿ ಕರವಾಳಿಯ ಮಂಗಳೂರು ಸಮುದಾಯ ಹಾಗೂ ಧಾರವಾಡ 'ಸಮುದಾಯ'ದ ಪ್ರಮುಖ ಸಂಘಟಕರು ಸೇರಿಕೊಂಡು ಸಮಾರೋಪದ ತಯಾರಿ ನಡೆಸಿದ್ದರು. ಜೊತೆಗೆ ಬೀದರ್ ಜಾಥಾದಲ್ಲಿ ಅಹಮದಾಬಾದ್‌ನಿಂದ ಬಂದ ಟೆಲಿವಿಷನ್ ಈ ಜಾಥಾದ ಕಾರ್ಯಕ್ರಮವನ್ನು ಪ್ರಸಾರ ಮಾಡಿ ಇವರ ಜೊತೆಯಲ್ಲಿದ್ದರು. ಈ ಬೀದರ್ ಜಾಥಾ ಬೀದರ್‌ನಲ್ಲಿ ಉದ್ಘಾಟನೆಗೊಂಡು ಸುರಪುರ ಮೂಲಕ ಬರವ ಜಾಥಾವು ರಾಯಚೂರು ಜಿಲ್ಲೆಗೆ ಬರುವ ಹೊತ್ತಿಗೆ 'ಸಮುದಾಯ' ತಂಡ ಈ ಜಾಥಾದ ನಡುವೆ ಎರಡು ನಾಟಕಗಳ ತಯಾರಿ ನಡೆಸಿದ್ದು ವಿಶೇಷ. ಸಿ.ಜಿ.ಕೆಯ ಸೃಜನಶೀಲತೆಯ ಪ್ರಕರತೆ ಎಂದು ಹೇಳಬಹುದು. ಅವುಗಳೆಂದರೆ ಬೆಳದವರು(ಸಾಯಿಬಾಬಾನ ಮೌಢ್ಯತೆ ಬಗ್ಗೆ) 'ಭಾರತ ದರ್ಶನ'(ಜಸ್ಟಿಸ್ ತಾರ್ಕುಂಡೆವರದಿ) ಆಧಾರಿತ ನಾಟಕಗಳನ್ನು ರಚಿಸಿ ನಿರ್ದೇಶಿಸಿ ಈ ಜಾಥಾದಲ್ಲಿ ಪ್ರದರ್ಶಿಸಿದವರು. ಹೀಗೆ ಜಾಥಾವು ನಿರಂತರವಾಗಿ ಬೆಳಗ್ಗೆ ೯:೦೦ ಕ್ಕೆ ಪ್ರಾರಂಭವಾಯಿತು.[೧೦] ಮದ್ಯಾಹ್ನ ಊಟದ ವಿರಾಮ ಬಿಟ್ಟರೆ ಮತ್ತೆ ಮುಗಿಯುವುದು. ರಾತ್ರಿ ೧೨ ರಿಂದ ೧:೦೦ ಗಂಟೆ ಆಗುತಿತ್ತು. ಎಂದು ಸಿ.ಜಿ.ಕೆ ತನ್ನ ಜೀವನ ಚರಿತ್ರೆಯಾದ ಕತ್ತಲೆ ಬೆಳದಿಂಗಳೊಳಗ ಎಂಬ ಜೀವನ ಕಥೆಯ ಕೃತಿಯಲ್ಲಿ ನೆನಪಿಸಿಕೊಳ್ಳುತ್ತಾರೆ.

ಬೀದರ್ ಮತ್ತು ಕೆ.ಜಿ.ಎಫ್ ಜಾಥಾಗಳ ನೀಲಿ ನಕಾಶೆ

ಬೀದರ್‌ನಿಂದ ಹೊರಡುವ ತಂಡದ ಕಾರ್ಯಕ್ರಮ

ದಿನಾಂಕ	ವಾರ	ಹೊರಡುವ ಸ್ಥಳ	ತಲುಪುವ ಸ್ಥಳ
೧೫-೧೦-೧೯೭೯	ಸೋಮವಾರ	ಬೀದರ್	ದೊಡ್ಡಹಳ್ಳಿ ಖೇಡ್
೧೬-೧೦-೧೯೭೯	ಮಂಗಳವಾರ	ದೊಡ್ಡಹಳ್ಳಿ ಖೇಡ್	ಸಣ್ಣಹಳ್ಳಿ ಖೇಡ್
೧೭-೧೦-೧೯೭೯	ಬುಧವಾರ	ಸಣ್ಣಹಳ್ಳಿ	ಖೇಡ್ ಓಕಳಿ
೧೮-೧೦-೧೯೭೯	ಗುರುವಾರ	ಓಕಳಿ	ಕಲಬರ್ಗಿ
೧೯-೧೦-೧೯೭೯	ಶುಕ್ರವಾರ	ಕಲಬುರ್ಗಿ	ಪನತ್ ಬಾಡ್
೨೦-೧೦-೧೯೭೯	ಶನಿವಾರ	ಪನತ್ ಬಾಡ್	ಜೇವರ್ಗಿ
೨೧-೧೦-೧೯೭೯	ಭಾನುವಾರ	ಜೇವರ್ಗಿ	ಶಹಾಪುರ
೨೨-೧೦-೧೯೭೯	ಸೋಮವಾರ	ಶಹಾಪುರ	ವಿಶ್ರಾಂತಿ ದಿನ
೨೩-೧೦-೧೯೭೯	ಮಂಗಳವಾರ	ಶಹಾಪುರ	ರಂಗಂಪೇಟೆ
೨೪-೧೦-೧೯೭೯	ಬುಧವಾರ	ರಂಗಂಪೇಟೆ	ಮೊಸರ್‌ಕಲ್
೨೫-೧೦-೧೯೭೯	ಗುರುವಾರ	ಮೊಸರ್ ಕಲ್	ರಾಯಚೂರು
೨೬-೧೦-೧೯೭೯	ಶುಕ್ರವಾರ	ರಾಯಚೂರು	ರಾಂಪುರ ಮತ್ತು ಯರನೂರು
೨೭-೧೦-೧೯೭೯	ಶನಿವಾರ	ಯಮನೂರು	ಕಲ್ಲೂರು
೨೮-೧೦-೧೯೭೯	ಭಾನುವಾರ	ಕಲ್ಲೂರುನೀರಮಾನ್ವಿ	
೨೯-೧೦-೧೯೭೯	ಸೋಮವಾರ	ನೀರಮಾನ್ವಿ	ಮಾನ್ವಿ
೩೦-೧೦-೧೯೭೯	ಮಂಗಳವಾರ	ಮಾನ್ವಿ	ಪೋತನಾಳ
೩೧-೧೦-೧೯೭೯	ಬುಧವಾರ	ಪೋತನಾಳ	ಜಾವಲ್ಗರ
೧-೧೧-೧೯೭೯	ಗುರುವಾರ	ಜಾವಲ್ಗರ	ಸಿಂಧನೂರು
೨-೧೧-೧೯೭೯	ಶುಕ್ರವಾರ	ಸಿಂಧನೂರು	ಕರಟಗಿ

೩-೧೧-೧೯೭೯	ಶನಿವಾರ	ಕಾರಟಗಿ	ಗಂಗಾವತಿ
೪-೧೧-೧೯೭೯	ಭಾನುವಾರ	ಗಂಗಾವತಿ	ಹೊಸಪೇಟೆ
೫-೧೧-೧೯೭೯	ಸೋಮವಾರ	ಹೊಸಪೇಟೆ	ಸಂಡೂರು ಮತ್ತು ಹಗರಿಬೊಮ್ಮನಹಳ್ಳಿ
೬-೧೧-೧೯೭೯	ಮಂಗಳವಾರ	ಹಗರಿಬೊಮ್ಮನಹಳ್ಳಿ	ಹರಪನಹಳ್ಳಿ
೭-೧೧-೧೯೭೯	ಬುಧವಾರ	ಹರಿಹರ	ದಾವಣಗೆರೆ
೮-೧೧-೧೯೭೯	ಗುರುವಾರ	ದಾವಣಗೆರೆ	ರಾಣೆಬೆನ್ನೂರು
೯-೧೧-೧೯೭೯	ಶುಕ್ರವಾರ	ರಾಣೆಬೆನ್ನೂರು	ಶಿಗ್ಗಾಂವಿ
೧೦-೧೧-೧೯೭೯	ಶನಿವಾರ	ಶಿಗ್ಗಾಂವಿ	ಹುಬ್ಬಳ್ಳಿ
೧೧-೧೧-೧೯೭೯	ಭಾನುವಾರ	ಹುಬ್ಬಳ್ಳಿ	ಧಾರವಾಡ
೧೨,೧೩.೧೧.೧೯೭೯	ಸೋಮವಾರದಿಂದ	ಧಾರವಾಡದ ಸುತ್ತ ಮುತ್ತ	
		ಬುಧವಾರದವರೆಗೆ	ಕಾರ್ಯಕ್ರಮಗಳು
೧೫-೧೧-೧೯೭೯	ಗುರುವಾರ	ಧಾರವಾಡ ಸಮಾರೋಪ ಸಮಾರಂಭ	

ಕೋಲಾರದಿಂದ ಹೊರಡುವ ತಂಡದ ಕಾರ್ಯಕ್ರಮ

ದಿನಾಂಕ	ಸ್ಥಳ	ಕಾರ್ಯಕ್ರಮ
೧೫-೧೦-೧೯೭೯	ಸೋಮವಾರ	ಕೋಲಾರ ಚಿನ್ನದಗಣಿ, ಬಂಗಾರಪೇಟೆ ಸಂಜೆ ೫ ರಿಂದ ೭-ಉದ್ಘಾಟನೆ ಮತ್ತು ನಾಟಕಗಳು ರಾತ್ರಿ ೯ ರಿಂದ ೧೦- ನಾಟಕಗಳು ಮತ್ತು ತಂಗುವುದು
೧೬-೧೦-೧೯೭೯	ಮಂಗಳವಾರ	ಕೋಲಾರ ಕೋಲಾರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾರ್ಯಕ್ರಮ ತಂಗುವುದು.
೧೭-೧೦-೧೯೭೯	ಬುಧವಾರ	ಮುಳಬಾಗಿಲು, ಶ್ರೀನಿವಾಸಪುರ ಚಿಂತಾಮಣಿ ಸೈಕಲ್ ಸವಾರರು ಶ್ರೀನಿವಾಸಪುರಕ್ಕೆ, ವ್ಯಾನ್ ಮುಳಬಾಗಿಲಿಗೆ ಬರುವುದು. ಸಂಜೆ ಕಾರ್ಯಕ್ರಮ. ನಂತರ ಅಲ್ಲೇ ತಂಗುವುದು.

೧೮-೧೦-೧೯೭೯	ಗುರುವಾರ	ಚಿಂತಾಮಣಿ ಇಡೀ ದಿನ ಸುತ್ತಮುತ್ತಲ ಪ್ರದೇಶದಲ್ಲಿ ಕಾರ್ಯಕ್ರಮ. ತಂಗುವುದು.
೧೯-೧೦-೧೯೭೯	ಶುಕ್ರವಾರ	ಶಿಡ್ಲಘಟ್ಟ ಬೆಳಗ್ಗೆ ೬ ಗಂಟೆಯಿಂದ ಚಿಂತಾಮಣಿಯಿಂದ ಶಿಡ್ಲಘಟ್ಟ ರಾತ್ರಿವರೆಗೂ ಊರಿನಲ್ಲಿ ಮತ್ತು ಸುತ್ತಮುತ್ತಲು ಕಾರ್ಯಕ್ರಮ ತಂಗುವುದು.
೨೦-೧೦-೧೯೭೯	ಶನಿವಾರ	ಚಿಕ್ಕಬಳ್ಳಾಪುರ ಬೆಳಿಗ್ಗೆಯಿಂದ ರಾತ್ರಿವರೆಗೂ ಕಾರ್ಯಕ್ರಮ ರಾತ್ರಿ ದೊಡ್ಡಬಳ್ಳಾಪುರದಲ್ಲಿ ತಂಗುವುದು.
೨೧-೧೦-೧೯೭೯	ಭಾನುವಾರ	ದೊಡ್ಡಬಳ್ಳಾಪುರ ಊರಿನಲ್ಲಿ ಮತ್ತು ಸುತ್ತಮುತ್ತಲೂ ಸಂಜೆವರೆಗೂ ಕಾರ್ಯಕ್ರಮ ತಂಗುವುದು.
೨೨-೧೦-೧೯೭೯	ಸೋಮವಾರ	ಹೆಬ್ಬಾಳ ದೊಡ್ಡಜಾಲ ಕೊಡಿಗೇನಹಳ್ಳಿ ಗಂಗೇನಹಳ್ಳಿ ನಾಟಕ, ಚಲನಚಿತ್ರ ಪ್ರದರ್ಶನ ಹೆಬ್ಬಾಳದಲ್ಲಿ ತಂಗುವುದು.
೨೩-೧೦-೧೯೭೯	ಮಂಗಳವಾರ	ಯಶವಂತಪುರ ಪೀಣ್ಯ ಬೆಂಗಳೂರು ನಗರ ಬೆಳಿಗ್ಗೆಯಿಂದ ಸಂಜೆವರೆಗೆ ಕಾರ್ಯಕ್ರಮ. ಮಲ್ಲೇಶ್ವರಂನ 'ಭಾಷ್ಯಂ; ಪಾರ್ಕ್ ಹಿಂದೆ ನಾಟಕ. ತಂಗುವುದು.
೨೪-೧೦-೧೯೭೯	ಬುಧವಾರ	ಕೆಂಗೇರಿ ಹೆಮ್ಮಿಗೆಪುರ ಕಗ್ಗಲಿಪುರ ತಲಘಟ್ಟಪುರ ವಿವಿಧ ಕಾರ್ಯಕ್ರಮಗಳು ತಂಗುವುದು.
೨೫-೧೦-೧೯೭೯	ಗುರುವಾರ	ಸಮೇತನಹಳ್ಳಿ ಕೃಷ್ಣರಾಜಪುರ ಹೆಚ್.ಎ.ಎಲ್., ವೈಟ್‌ಫೀಲ್ಡ್ ಮಾರತ್ಹಳ್ಳಿ ವಿವಿಧ ಕಾರ್ಯಕ್ರಮಗಳು. ತಂಗುವುದು.
೨೬-೧೦-೧೯೭೯	ಶುಕ್ರವಾರ	ಮೈಸೂರು ವಿರಾಜಪೇಟೆ ಆರ್ಮರಿ ಬೆಳಿಗ್ಗೆ ೬ ಗಂಟೆಗೆ ಮೈಸೂರಿಗೆ ಹೊರಡುವುದು. ಮೈಸೂರಿನಲ್ಲಿ ಕಾರ್ಯಕ್ರಮ. ಮಧ್ಯಾಹ್ನ ವಿರಾಜಪೇಟೆಗೆ ಸಂಜೆ ೬ಕ್ಕೆ ಆರ್ಮರಿ ಗ್ರಾಮದಲ್ಲಿ ಕಾರ್ಯಕ್ರಮ.

ಸೂಚನೆ : ಪಟ್ಟಿ ಅಪೂರ್ಣವಾಗಿದೆ.

ಈ ಅಭೂತ ಪೂರ್ವ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಒಂದು ತಿಂಗಳು ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳು ಒಳಗೊಂಡ ಈ 'ಸಮುದಾಯ'ದ 'ಹೊಸಮೌಲ್ಯಗಳತ್ತ 'ಸಮುದಾಯ' ಸಾಂಸ್ಕೃತಿಕ ಜಾಥಾವು ೧೬೦೦ ಕಿ.ಲೋ.ಮೀಟರ್‌ಗಿಂತ ಹೆಚ್ಚು ಕ್ರಮಿಸಿದ ಜಾಥಾವಾಗಿದ್ದು, ಈ ಐತಿಹಾಸಿಕ ಜಾಥಾದ ಸಂದರ್ಭದಲ್ಲಿ ಕಾವ್ಯ, ಹಾಡು, ನಾಟಕ, ವಿಚಾರ ಸಂಕಿರಣಗಳ ಜೊತೆಗೆ ನಾಡಿನ ಪ್ರಖ್ಯಾತ ಬರಹಗಾರರಿಂದ ರೈತ-ಕಾರ್ಮಿಕರ ಬಗ್ಗೆ, ದಲಿತರ ಬಗ್ಗೆ, ಮಹಿಳೆಯರ ಬಗ್ಗೆ ಹಾಗೂ ಬರೆಸಿದ ಪುಸ್ತಕಗಳು ಹಳ್ಳಿಯ ಜನರಿಗೆ ತಲಪುವಂತೆ ಮಾಡಿದರು.[೧೧] 'ಸಮುದಾಯ'ದ ಸಂಘಟನೆಯ ಎಲ್ಲಾ ಒಂದು ಕುಟುಂಬದ ಸದಸ್ಯರಂತೆ ಇದ್ದರು. ಪ್ರತಿಯೊಬ್ಬರು ಈ ಐತಿಹಾಸಿಕ ಜಾಥಾದಲ್ಲಿ ತೊಡಗಿಕೊಂಡು ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ಬೀದಿನಾಟಕದ ಮೂಲಕ ಜನರ ಸಮಸ್ಯೆಗಳು ಪ್ರಭುತ್ವದ ಅನ್ಯಾಯಗಳನ್ನು ಬಯಲಿಗೆಳೆಯಿತು. ಅಲ್ಲದೇ, ಜನರ ಬಳಿಗೆ ತೆಗೆದುಕೊಂಡು ಹೋಗಿ ಅನಕ್ಷರಸ್ಥ ಸಾಮಾನ್ಯ ಹಳ್ಳಿಯ ಜನರಿಗೆ ಉಪಯೋಗ ಮಾಡಿಕೊಡುವುದರ ಮೂಲಕ ಈ ಜನರಲ್ಲಿ ಹೋರಾಟದ ಕಿಚ್ಚನ್ನು ತುಂಬಿದ ಜಾಥಾ ಇದಾಗಿದೆ. ಉದಾಹರಣೆಗೆ ಈ ಜಾಥಾದ ನಾಟಕಗಳಾದ ಅರಕೇರಿಯಲ್ಲಿ (ಶಿವಮೊಗ್ಗ) ಜೀತದ ಸಂಗಪ್ಪನ ಕೊಲೆ ಪ್ರಕರಣದ ನಿಜ ಘಟನೆಯನ್ನು ಇಟ್ಟುಕೊಂಡು 'ಪತ್ರೆ ಸಂಗಪ್ಪನ ಕೊಲೆ' ನಾಟಕವಾಡುವಾಗ ನಾಡಿನ್ಯಾದ್ಯಾಂತ ಬೀದಿನಾಟಕ ನೋಡುಗರ ಪ್ರತಿಕ್ರಿಯೆ ಮನೋಜ್ಞಾವಾಗಿದ್ದು, ೧೯೭೯ರ ಜಾಥಾದಲ್ಲಿ ಕೆ.ಜಿ.ಎಫ್‌ನ 'ಸಮುದಾಯ'ದ ತಂಡದ ಜಾಥಾದಲ್ಲಿ ಕೋಲಾರದ ಮುಳಬಾಗಿಲಿನಲ್ಲಿ ನಾಟಕ ನಡೆಯುತಿತ್ತು. ಪತ್ರೆ ಸಂಗಪ್ಪನ ನಾಟಕ ನೋಡುತ್ತಿದ್ದ ಮುದುಕಿಯೊಬ್ಬಳು ನಾಟಕದ ಪ್ರತಿ ಸಂಭಾಷಣೆಗೂ ತನ್ನದೇ ಆದ ಪ್ರತಿಕ್ರಿಯೆ ತೋರಿಸುತ್ತ ಉದ್ಗಾರಗಳನ್ನು ತೆಗೆಯುತ್ತ ಕೂತಿದ್ದಳು. ನಾಟಕದಲ್ಲಿ ಜಮಿನ್ದಾರರನ್ನು ನೋಡುತ್ತಲೇ 'ಹಿಡಿದು ಎಕ್ಕ ಬೇಕು ಬೇಕು ಹುಂ ಅವನ ಪೊಗರು ನೋಡು ಎಂದು ಗೋಗುತ್ತಿದ್ದಳು. ಜೀತದ ಸಂಗಪ್ಪನ ಗೋಳು ಕಂಡು ಮರಗುತ್ತಿದ್ದ ಆಕೆ ತನ್ನ ಸೆರಗಿನ ಗಂಟಿನಿಂದ ಚಾಕಲೇಟೊಂದನ್ನು ತೆಗೆದು ತನಗೆ ನಿಲುಕುವಂತಿದ್ದ ನಟನೊಬ್ಬನ ಕೈಲಿ ಕೊಟ್ಟು ಆ ಸಂಗಪ್ಪಂಗೆ ಕೊಡು ಅಂದಳು. ನಾಟಕದ ನಡುವೆ ತೊಂದರೆಯಾಗುವುದೆಂದು ಆತ ಕೈಯಲ್ಲಿ ಹಿಡಿದು ಕೊಂಡಿದ್ದರೆ, ಆಕೆ ಆತನನ್ನು ಜಗ್ಗಿ ಏ ನಿನಗಲ್ಲಾ ಅದು? ಸಂಗಪ್ಪನಿಗೆ ಕೊಟ್ಟಿದ್ದು ಎಂದಳು. ಚಾಕಲೇಟು ಸಂಗಪ್ಪನಿಗೆ ತಲುಪಿದಾಗಲೇ ಆಕೆಗೆ ಸಮಾಧಾನವಾದದ್ದು.

ಇಂತಹ ಪ್ರಸಂಗವು ಮುಳಬಾಗಲುನಲ್ಲಿ ನಡೆದರೆ ಆಗುಂಬೆಯಲ್ಲಿ ಸ್ಕೂಲೊಂದರ ಆವರಣದಲ್ಲಿ ಬೆಲ್ಚಿ ನಾಟಕ ಆಡಿದಾಗ ನಾಟಕ ನೋಡಿದ ಹಳ್ಳಿಯ ಹೆಂಗಸೊಬ್ಬಳು ಬಂದು ಆ ಇಂದಿರಾ ಗಾಂಧಿ ಅಂದರೆ ಯಾರು? ಎಂದು ಪ್ರಶ್ನಿಸಿದಳು. ಹಾಗೆಯೇ ದಾಂಡೇಲಿಯಲ್ಲಿ ಇದೇ ನಾಟಕಕ್ಕೆ ಸುಮಾರು ಮೂರು ಸಾವಿರ ಜನ ಸೇರಿತ್ತು. ಹೆಚ್ಚಿನವರೆಲ್ಲರು ಕಾರ್ಮಿಕರು. ನಾಟಕ ಮುಗಿದ ನಂತರ ಒಂದು ಹೆಂಗಸರ ಗುಂಪು 'ಸಮುದಾಯ' ತಂಡದ ಹತ್ತಿರ ಬಂದು 'ನೀವು ಯಾವ ಪಾರ್ಟಿ'? ಅಂದರು ನಾವು ಬಡವರ ಪಕ್ಷ ಎಂದಾ 'ಸಮುದಾಯ' ತಂಡದವರಿಗೆ ಈ ಹೆಂಗಸರು

ಹೇಳಿದ್ದು ಹೀಗೆ ಇಂದಿರಾ ಗಾಂಧಿನ ಚಲೋ ತೋರ್‍ಸಿದ್ವಿ... ಈ ಸಲವೂ ನಮ್ಮೂರಿಗೆ ಬರ್‍ತಾಳೇನೂ ಆಕೆ, ಬಂದ್ರು ಛಸ್ಮಾ ಒಂದ್ಕಡಿ... ಆಕಿ ಒಂದ್ಕಡಿ ಮಾಡ್ತೀವಿ ಎಲ್ಲಾ ತಯಾರ ಮಾಡಿ ಇಡ್ಗೊಂಡೀವಿ ಅಂದರು ಎಂದು ಎಸ್.ಮಾಲತಿಯವರು ಸಮುದಾಯ ವಾರ್ತಾಪತ್ರದ ಲೇಖನದಲ್ಲಿ ವಿವರಿಸುತ್ತಾ ಈ ಮಹಿಳೆಯರು 'ಮಹಿಳಾ ವಿಮೋಚನೆ' ಕಿರುಹೊತ್ತಿಗೆ ಅವರಿಗೆ ಮಾಲತಿ ನೀಡುವಾಗ ನಾವು ಓದಿಲ್ಲ ಆದರೂ ಓದುವರ ಹತ್ರ ಓದುಸುತ್ತೇವೆ ತಿಳುಕೊಳ್ಳುತ್ತೇವಿ ಅಂತ ನಾಲ್ಕಾಗೆ ಕೊಟ್ಟ ಪುಸ್ತಕ ಕೊಂಡುಹೋದರು. ಹೀಗೆ ಮೈಸೂರಿನಲ್ಲಿ 'ಪತ್ರೆ ಸಂಗಪ್ಪನ ಕೊಲೆ' ನಾಟಕ ನಡೆಯುತ್ತಿರುವಾಗ ಈ ಬೀದಿನಾಟಕದಲ್ಲಿ ಜೀತ ಸಂಗಪ್ಪನು ನಾನು ಜಮೀನ್ದಾರನ ಮನೆಗೆ ಹೋಗಲು ಹೋದರೆ ಕೊಲೆ ಮಾಡುತ್ತಾನೆ ಎಂಬ ಪ್ರಸಂಗದಲ್ಲಿ ಪ್ರೇಕ್ಷಕ ಇದಕ್ಕೆ ಪ್ರತಿಕ್ರಿಯಿಸಿ ನೀನು ನೆಡೆ ಹೇಗೆ ಕೊಲೆ ಮಾಡುತ್ತಾನೆ. ನೋಡಾಣ ನಿಮ್ಮ ಜೊತೆ ನಾವು ಬರುತ್ತೇವೆ ಎನ್ನುವ ಪ್ರಭಾವಕ್ಕೆ ಒಳಗಾಗಿದ್ದ ಪ್ರಸಂಗ 'ಸಮುದಾಯ' ಸೃಜನಶೀಲ ನಾಟಕಗಳಿಗೆ ಮಾತ್ರ ಸಲ್ಲುತ್ತದೆ. ಅದೇ ರೀತಿಯಲ್ಲಿ ರಂಗ ನಾಟಕದಲ್ಲಿಯೂ ಪ್ರೇಕ್ಷಕರ ಪ್ರಸಂಗವೂ ಕಾಣುತ್ತದೆ. 'ಸಮುದಾಯ' ನಟಿ ಲಕ್ಷ್ಮಿ ಚಂದ್ರಶೇಖರ್ ೧೯೭೬ರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಂಗ ಕಲಾವಿದ ಸ್ನೇಹಲತಾ ರೆಡ್ಡಿ ಜೈಲಿನಲ್ಲಿ ಅಸ್ತಮಾ ಖಾಯಲೆಯಿಂದ ಅಸುನಿಗಿದ ಘಟನೆಯ ಪಾತ್ರದಲ್ಲಿ ಲಕ್ಷ್ಮಿ ಚಂದ್ರಶೇಖರ್ ಕಣ್ಣಿನ ಮುಖದ ನಟನೆಗೆ ಪಕ್ಷೇಕರಲ್ಲಿ ಇದ್ದ ಒಬ್ಬ ಡಾಕ್ಟರ್ ನಾಟಕದ ನಂತರ ಸ್ನೇಹಲತಾ ರಡ್ಡಿ ಪಾತ್ರ ನಿರ್ವಹಿಸಿದ ಲಕ್ಷ್ಮಿ ಚಂದ್ರಶೇಖರ್ ಅವರನ್ನು ಹತ್ತಿರ ಬಂದು ಕಣ್ಣಿನ ಪರೀಕ್ಷಿಸಿದ್ದು ಉಂಟು.

ಹೀಗೆ ನೈಜ ನಟರು 'ಸಮುದಾಯ'ದ ನಾಟಕಗಳಲ್ಲಿ ತರಬೇತಿ ಪಡದ ನಂತರ ಈ ನಾಟಕಗಳು ನಡೆಯುತ್ತಿದ್ದು ಸಮಾಜದ ನೈಜ 'ಜನ ಸಮುದಾಯ'ದ ಘಟನೆಗಳ ನಾಟಕ ಮಾಡುತ್ತಿರುವುದರಿಂದ ನೇರವಾಗಿ ಹಳ್ಳಿಯ ಜನರು ಹಾಗೂ ನಗರದ ಜನರು 'ಸಮುದಾಯ'ದ ಬೀದಿ-ರಂಗ ನಾಟಕಗಳಿಗೆ ಮರುಳಾಗಿ ಹೋಗಿದ್ದು ಚಾರಿತ್ರಿಕ ಘಟನೆಗಳು ಎಂದು ಗುರುತಿಸಬಹುದು. ೧೯೭೯ರ ಈ ಐತಿಹಾಸಿಕ 'ಸಮುದಾಯ' ಸಾಂಸ್ಕೃತಿಕ ಜಾಥಾವು ತಂದನಂತರ ನಡೆದು, ರೈತ-ಕಾರ್ಮಿಕ-ವಿದ್ಯಾರ್ಥಿ-ದಲಿತರ-ಬಂಡಾಯ ಸಾಹಿತ್ಯ ಚಳವಳಿಗೆ ಹಾಗೂ ೧೯೮೧ರಲ್ಲಿ ರೈತ-ಕಾರ್ಮಿಕ ವಿರೋಧಿ ಕರ್ನಾಟಕ ಮುಖ್ಯಮಂತ್ರಿಯಾದ ಗುಂಡುರಾವ್ ಸರ್ಕಾರವನ್ನು ಕೆಳಗಿಳಿಸಲು ಎಡ-ಪ್ರಜಾಪ್ರಭುತ್ವವಾದಿ ಪಕ್ಷಸಂಘಟನೆಗಳ ಐಕ್ಯ ಐತಿಹಾಸಿಕ ಚಳವಳಿಗೆ ಈ 'ಸಮುದಾಯ'ದ ೧೯೭೯ರ ಜಾಥಾವು ಮುನ್ನುಡಿ ಬರೆದದ್ದೇ ಈ ಜಾಥಾದ ಹೆಗ್ಗಳಿಕೆ ಎಂದರೆ ತಪ್ಪಾಗಲಾರದು. ಇದರ ಜೊತೆಗೆ ಕುವೆಂಪು, ಬೇಂದ್ರೆ, ಸಿದ್ಧಲಿಂಗಯ್ಯ, ಕೋಟಗಾನಹಳ್ಳಿ ರಾಮಯ್ಯ, ಎಸ್.ಎಸ್.ಹೀರೆಮಠ ಹಾಗೂ ಆರ್.ಕೆ.ಹುಡುಗಿ ಇನ್ನೂ ಮುಂತಾದವರು ಕವನಗಳು ಮತ್ತು ನಾಟಕಗಳಾದ 'ಬೆಲ್ಚಿ', 'ಪತ್ರೆ ಸಂಗಪ್ಪನ ಕೊಲೆ ಪ್ರಕರಣ', 'ಛಸ್ನಾಲ ಗಣಿ ದುರಂತ', 'ಹೈದಾರಬಾದ್ ಗೋಲಿ', 'ಬುರುಡೆ ಬಾಬನ ಕಥೆ' ಮುಂತಾದ ಪ್ರಗತಿಪರ ಬೀದಿ ನಾಟಕಗಳು ಹಾಡುಗಳ ಮುಖಾಂತರ ನಾಡಿನ ಲಕ್ಷಾಂತರ ಜನರಲ್ಲಿ ವೈಚಾರಿಕ ಚಿಂತನೆಯನ್ನು ಮೂಡಿಸಿದ್ದು ಕಾಣುತ್ತೇವೆ. ಬೀದಿನಾಟಕಗಳ ಆಯಾಮ ಹಾಗೂ ಉದ್ದೇಶಗಳನ್ನು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದ್ಧತೆಗಳ ಚೌಕಟ್ಟನಲ್ಲಿ

ಕರಾರುವಕ್ಕಾಗಿ ಸ್ಪಷ್ಟಪಡಿಸಿದ ಕೀರ್ತಿ ಕೇವಲ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆ ಮಾತ್ರ ಸಲ್ಲಬೇಕು.[೨] ಆದ್ದರಿಂದ ೧೯೭೯ರ ಹೊಸ ಮೌಲ್ಯಗಳತ್ತ 'ಸಮುದಾಯ' ಸಾಂಸ್ಕೃತಿಕ ಜಾಥಾವು ಕರ್ನಾಟಕ ರಂಗಭೂಮಿಯ ಸಾಂಸ್ಕೃತಿಕ ಚಳವಳಿಯ ಬೆಳವಣಿಗೆಗೆ ಬುನಾದಿ ಹಾಕಿದ 'ಸಮುದಾಯ'ದ ಜಾಥಾವಾಗಿದ್ದು, ಇದರ ಮಹತ್ವವನ್ನು ಪ್ರಸುತ್ತ ಸಂದರ್ಭಕ್ಕೆ ಮುಖಾಮುಖಿಗೊಳಿಸುವುದು 'ಸಮುದಾಯ'ದಂಥ ಇಂದಿನ ರಂಗ ಚಳವಳಿಗೆ ತುಂಬಾ ಅತ್ಯಗತ್ಯ.

ರೈತರೆಡೆಗೆ 'ಸಮುದಾಯ'ದ ಸಾಂಸ್ಕೃತಿಕ ಜಾಥಾ–೧೯೮೧

ಕರ್ನಾಟಕ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ೧೯೭೯ ಜಾಥಾದ ಯಶಸ್ಸು ಮತ್ತೊಮ್ಮೆ ಜನರ ನಡುವೆ ಸಂಸ್ಕೃತಿಯನ್ನು ಕೊಂಡೊಯ್ಯುವಂತೆ ಈ ಜನತಾ ಆಂದೋಲನದಲ್ಲಿ ತೊಡಗಿಕೊಂಡಿದ್ದವರನ್ನು ಪ್ರೇರೇಪಿಸಿತು. ೧೯೮೧ರಲ್ಲಿ ರಾಜ್ಯವ್ಯಾಪಿ 'ಜಿಲ್ಲಾವಾರು ಜಾಥಾ'ವನ್ನು 'ಸಮುದಾಯ' ಕೇಂದ್ರ ಸಮಿತಿ ಯೋಜಿಸಿತು. ಆಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಗುಂಡುರಾವ್ ಸರ್ಕಾರ ಉತ್ತರ ಕರ್ನಾಟಕ ಭಾಗ ಮಲಪ್ರಭಾ ನೀರು ನರಗುಂದ–ನವಲುಗುಂದ ಭಾಗದ ಕೃಷಿಕರಿಗೆ ಹರಿಯದೆ ಹೋದರೂ ಆ ಪ್ರದೇಶದ ರೈತರು 'ನೀರಾವರಿ ಕರ'ವನ್ನು ನೀಡಬೇಕೆಂಬ ಸರ್ಕಾರದ ವಿರುದ್ಧ ಭುಗಿಲೆದ್ದ 'ಕರ ನಿರಾಕರಣೆ' ಚಳವಳಿ ಎಲ್ಲರ ನಿರೀಕ್ಷೆ ಮೀರಿ ರಾಜ್ಯವ್ಯಾಪಿ ಚಳವಳಿಯಾಗಿ ಮಾರ್ಪಟ್ಟಿತ್ತು. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿನ ನೌಕರರು(ಕಾರ್ಮಿಕರು) ವೇತನ ಪರಿಷ್ಕರಣೆಯ ಸಲುವಾಗಿ ಹೋರಾಟವನ್ನು ಪ್ರಾರಂಭಿಸಿದ್ದರು. ಈ ಎಲ್ಲಾ ಸಾರ್ವಜನಿಕ ಉದ್ದಿಮೆಗಳು ಕಾರ್ಮಿಕರ ನಿರಂತರ ಮುಷ್ಕರದಿಂದಾಗಿ ಸತತ ಎಂದೂ ಕಂಡಿರದ ರೀತಿಯಲ್ಲಿ ಅಂದರೆ ೨೧ ದಿನಗಳವರೆಗೆ ಸಾರ್ವಜನಿಕ ಕಾರ್ಖಾನೆಗಳು 'ಬಂದ್' ಆಗಿದ್ದವು.

ತುರ್ತುಪರಿಸ್ಥಿತಿಯ ಮತ್ತಿನಲೇ ಇದ್ದ ಗುಂಡುರಾವ್ ಸರ್ಕಾರ ರೈತ–ಕಾರ್ಮಿಕರನ್ನು ಸದೆ ಬಡಿಯಲು 'ಕರ ನಿರಾಕರಣೆ' ಚಳವಳಿಯಲ್ಲಿ ತೊಡಗಿದ್ದ ಕರ್ನಾಟಕ ಪ್ರಾಂತ್ಯ ರೈತ ಸಂಘಟನೆಯ ರೈತರ ಮೇಲೆ, ೧೯೮೧ರಲ್ಲಿ ನರಗುಂದದಲ್ಲಿ ರೈತರ ಮೇಲೆ ಕಾನೂನು ಬಾಹಿರವಾಗಿ ಪೋಲೀಸರ ಮೂಲಕ ಗೋಲಿಬಾರ್ ಮಾಡಿಸಿ ಅನೇಕ ರೈತರನ್ನು ಕೊಂದರು. ಈ ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಯನ್ನು ಗಮನಿಸಿದ 'ಸಮುದಾಯ' ಎರಡನೇ ಜಾಥಾವನ್ನು ರೈತ–ಕಾರ್ಮಿಕರನ್ನು ಕುರಿತು ಆಯೋಜಿಸಿತು. ರೈತ–ಕಾರ್ಮಿಕರ ಹೋರಾಟಗಳನ್ನು ಕುರಿತು ಅನೇಕ ಕಿರಹೊತ್ತಿಗೆಗಳನ್ನು ಹೊರತಂದಿತು. ಇಡೀ ಜಾಥಾವನ್ನು ರೈತ–ಕಾರ್ಮಿಕರ ಹೋರಾಟದಲ್ಲಿ ಮಡಿದ ಜೀವಿಗಳಿಗೆ ಸಮರ್ಪಿಸಿ, ಜಾಥಾದ ಶೀರ್ಷಿಕೆಯನ್ನು "ಎಡ ಮತ್ತು ಪ್ರಜಾಪ್ರಭುತ್ವದ ಶಕ್ತಿಗಳು ಒಂದಾಗಿ ರೈತ–ಕಾರ್ಮಿಕರತ್ತ 'ಸಮುದಾಯ' ಸಾಂಸ್ಕೃತಿಕ ಜಾಥಾ" ಎಂದು ಹೆಸರಿಸಲಾಯಿತು. ಜನವರಿ ೧೫ ರಿಂದ ೩೧ ರವರೆಗೆ ೧೯೮೧ರಲ್ಲಿ 'ಸಮುದಾಯ', ಬಂಡಾಯ ಸಾಹಿತ್ಯ ಸಂಘಟನೆ, ದಲಿತ ಸಂಘರ್ಷ ಸಮತಿ, ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆ, ವಿದ್ಯಾರ್ಥಿ–ಯುವಜನ ಹಾಗೂ

ಮಹಿಳಾ ಸಂಘಟನೆಗಳ ಜೊತೆಯಲ್ಲಿ ಕಾಲೇಜು ಅಧ್ಯಾಪಕರು ಸರ್ಕಾರಿ ನೌಕರರು, ಕೂಲಿ ಕಾರ್ಮಿಕ, ಬ್ಯಾಂಕ್ ನೌಕರರು ಮುಂತಾದ ದುಡಿಯುವ ವರ್ಗದ ಎಲ್ಲ ಜನರು ಸೇರಿಕೊಂಡು ಈ ಜಾಥಾವನ್ನು ಮುನ್ನೆಡಿಸಿದರು ಎಂದರೆ ತಪ್ಪಾಗಲಾರದು. ೧೯೮೧ ವೇಳೆಗೆ 'ಸಮುದಾಯ' ಸಂಘಟನೆ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ಕೆ.ಜಿ.ಎಫ್, ಧಾರವಾಡ, ಮಂಗಳೂರು, ಮೈಸೂರು, ಬೆಂಗಳೂರು, ತುಮಕೂರು ಹೀಗೆ ೧೦ ಜಿಲ್ಲೆಗಳಲ್ಲಿ ಪ್ರಮುಖ ಘಟಕಗಳಾಗಿ ವಿಸ್ತರಣೆ ಕಂಡಿವು. ರಾಜ್ಯ 'ಸಮುದಾಯ' ಸಮನ್ವಯ ಸಮಿತಿಯು ತನ್ನ ಈ ಎಲ್ಲಾ ಘಟಕಗಳಂತೆ ೧೯೮೧ ಜನವರಿ ೧೫ ರಿಂದ ಜನವರಿ ೩೦ ರವರೆಗೆ ಎರಡು ವಾರಗಳ ಕಾಲ ರಾಜ್ಯ ಮಟ್ಟದ ಕಾರ್ಯಕ್ರಮವಾಗಿತ್ತು.[೧೩] ಜಿಲ್ಲಾವಾರು ಜಾಥಾವು ೪೦೦೦ ಕಿಲೋಮೀಟರ್‌ಗಳ ಈ ಜಾಥಾವು ವಿಶೇಷವಾಗಿ ಪ್ರತ್ಯೇಕ ಜಿಲ್ಲಾವಾರು ಕರ್ನಾಟಕದ್ಯಾಂತ ನೀಲಿ ನಕಾಶೆಯ ಸಹಾಯದಿಂದ 'ಸೈಕಲ್ ಜಾಥಾ'ಗಳ ಮೂಲಕ ಕಾವ್ಯ, ಹಾಡು, ನಾಟಕ, ವಿಚಾರ ಸಂಕಿರಣಗಳನ್ನು ರೈತ-ಕಾರ್ಮಿಕ ಜಾಥಾದಲ್ಲಿ ಕಾಣುತ್ತೇವೆ.

ಈ ಜಾಥಾದ ಪರಿಣಾಮವಾಗಿ ನರಗುಂದದಿಂದ ಬೆಂಗಳೂರಿನವರೆಗೂ ಕಾಲ್ನಡಿಗೆಯ ಮೂಲಕ ಜಾಥಾವನ್ನು ಕೈಗೊಂಡು ಸಾವಿರಾರು ರೈತರ ಜೊತೆಯಲ್ಲಿ ಬೆಂಗಳೂರಿನ ಕಾರ್ಮಿಕರು ಸ್ವಾಗತಿಸಿದರು. ಈ ಜಾಥಾಕ್ಕೆ ಆಹಾರ ಹಾಗೂ ಇತರೆ ಸೌಲಭ್ಯಗಳನ್ನು ನೀಡಿ ಈ ಜಾಥಾದ ಪರಿಣಾಮ ವಿಧಾನಸೌಧ ಚಲೋ ಕಾರ್ಯಕ್ರಮದ ಮೂಲಕ ರೈತ-ಕಾರ್ಮಿಕರು ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರ ವಿರುದ್ಧ ದಂಗೆಯೆದ್ದರು. ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ-ಮಹಿಳೆಯರ ಐಕ್ಯತೆಯ ವಿಧಾನಸೌಧ ಚಲೋ ಚಳವಳಿಯಲ್ಲಿ ಲಾಠಿ ಚಾರ್ಜ್ ಮೂಲಕ ಸೆರೆ ಮನೆವಾಸ ಹಾಗೂ ಕೇಸುಗಳನ್ನು ಹಾಕಿಕೊಳ್ಳಲಾಯಿತು. ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗುಂಡುರಾವ್ ಸರ್ಕಾರವನ್ನು ಮೂಲೆಗುಂಪು ಮಾಡಿದರು. ೧೯೮೩ರಲ್ಲಿ ಜನತಾ ಪಕ್ಷದ ರಾಮಕೃಷ್ಣ ಹೆಗಡೆ ಸರ್ಕಾರವನ್ನು ತರುವ ಜಾಥಾ ಮತ್ತು ರೈತ-ಕಾರ್ಮಿಕ ಚಳವಳಿಯನ್ನು ಹಾಗೂ ವಿಶೇಷವಾಗಿ 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿಯು ರೂಪಿಸಿತು. ಬೀದಿರಂಗಭೂಮಿ ಚಳವಳಿಯ ನಿರಂತರ ಕಾರ್ಯಕ್ರಮಗಳು ಪ್ರಮುಖ ಪಾತ್ರವಹಿಸಿ ಇದರ ಬೆನ್ನಲುಬಾಗಿ ನಿಂತ ಕಮ್ಯುನಿಸ್ಟ್ ಪಕ್ಷಗಳು ಹಾಗೂ ಸಮಾಜವಾದಿ ಪಕ್ಷಗಳ ಜೊತೆ ಜನತಾದಳ(ಜಾತ್ಯಾತೀತ) ಪಕ್ಷದ ಪಾತ್ರವೂ ಪ್ರಮುಖವಾಗಿ ಕಂಡು ಬರುತ್ತದೆ. ಐಕ್ಯಗೊಂಡ ಈ ಚಳವಳಿಯನ್ನು ಚಾರಿತ್ರಿಕವಾಗಿ ಕರ್ನಾಟಕದ ರಾಜಕಾರಣದಲ್ಲಿ ಗುರುತಿಸಬಹುದಾಗಿದೆ. ಹೀಗೆ ೧೯೮೧ರ ರೈತರೆಡೆಗೆ ಸಮುದಾಯ ಸಾಂಸ್ಕೃತಿಕ ಜಾಥಾವು ಕರ್ನಾಟಕದಲ್ಲಿ 'ಸಮುದಾಯ'ದ ಹತ್ತು ಘಟಕಗಳಿದ್ದ ಸಂಘಟನೆಯು ಇನ್ನೂ ವಿಸ್ತರಣೆಯಾಗಲು ಹಾಗೂ ರೈತ-ಕಾರ್ಮಿಕರ ಕ್ಷೇತ್ರದಲ್ಲಿ ವ್ಯಾಪಕವಾಗಿ ವಿಸ್ತರಣೆಯಾಗಲು ಸಹಾಯಕವಾಯಿತು. ಈ ಹಿನ್ನೆಲೆಯಲ್ಲಿ 'ಸಮುದಾಯ' ಸಂಘಟನೆಯು ಇನ್ನಷ್ಟು ತಾಲ್ಲೂಕುಗಳಿಗೆ ವಿಸ್ತರಣೆಯಾಗಲು ಸಹಾಕಾರಿಯಾಯಿತು. ಜೊತೆಗೆ ಹಳ್ಳಿಯಲ್ಲಿದ್ದ ಸೃಜನಶೀಲ ರಂಗ ನಟರು, ಕ್ರಾಂತಿ ಗೀತೆಗಳ ಹಾಡುಗಾರರು, ಗಾಯಕರು, ರಂಗ ನೇಪತ್ಯದಲ್ಲಿ ಕಾರ್ಯನಿರ್ವಹಿಸುವ ರಂಗ

ಸಂಘಟಕರು ಹಾಗೂ ಕಾವ್ಯ ಸಾಹಿತ್ಯದಲ್ಲಿ ಹೊಸ ಪ್ರತಿಭೆಗಳನ್ನು 'ಸಮುದಾಯ'ವು ತನ್ನ ತೆಕ್ಕೆಗೆ ತೆಗೆದುಕೊಂಡು ದಲಿತ ಸಂಘಟನೆಯನ್ನು ಗುರುತಿಸುವಲ್ಲಿ ಯಶಸ್ವಿಯಾಯಿತು. 'ಸಮುದಾಯ'ವು ತನ್ನ ತೆಕ್ಕೆಯಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ಬಂಡಾಯ ಸಾಹಿತ್ಯ ಸಂಘಟನೆಯ ಅಂತರ್ಗತ ಸಂಬಂಧದ ರೀತಿಯಲ್ಲಿ ಉಳಿದ ಜನಪರ ರಂಗ ಸಾಂಸ್ಕೃತಿಕ ವೇದಿಕೆ ಸಂಘಟನೆಗಳನ್ನು 'ಸಮುದಾಯ'ಯಕ್ಕೆ ಆಕರ್ಷಿಸಲು ಮುಂದಾಯಿತು. ಉದಾಹರಣೆಗೆ ಮೈಕೋ ಸಾಂಸ್ಕೃತಿಕ ಸಂಘಟನೆ ಹಾಗೂ ಈಗಾಗಲೇ ಕೆ.ಜಿ.ಎಫ್‌ನಲ್ಲಿ ಬಿ.ಇ, ಎಂ.ಎಲ್‌ನ ಸಾಂಸ್ಕೃತಿಕ ಸಂಘಟನೆಯು 'ಸಮುದಾಯ' ಸಂಘಟನೆಯಾಗಿ ಪರಿವರ್ತನೆಗೊಂಡಿದ್ದನ್ನು ಕಾಣುತ್ತೇವೆ.[೧೪] ಹೀಗೆ 'ಸಮುದಾಯ' ೧೯೮೧ರ ರೈತರತ್ತ ಸಾಂಸ್ಕೃತಿಕ ಜಾಥಾದಲ್ಲಿ ಕಾಗೋಡು ಸತ್ಯಾಗ್ರಹ, ತೆಲಂಗಾಣ ರೈತ ಹೋರಾಟ, ಶಿವಮೊಗ್ಗ ರೈತ ಚಳವಳಿ ಹಾಗೂ ಇನ್ನಿತರ ರೈತರ-ಕಾರ್ಮಿಕ-ವಿದ್ಯಾರ್ಥಿ-ಮಹಿಳಾಪರವಾದ ಕೃತಿಗಳನ್ನು 'ಸಮುದಾಯ' ಪ್ರಕಾಶನದ ಮೂಲಕ ಕಿರುಹೊತ್ತಿಗೆಗಳನ್ನು ನಾಡಿನಲ್ಲಿ ಪ್ರಚರಿಸಲು ಪ್ರಮುಖ ಪಾತ್ರ ವಹಿಸಿದ್ದು ಮುಖ್ಯಸಂಗತಿ. ಈ ಜಿಲ್ಲಾವಾರು ಸೈಕಲ್ ಜಾಥಾಗಳು 'ಸಮುದಾಯ'ದ ಮೂಲಕ ನಡೆದದ್ದು ಚಾರಿತ್ರಿಕ ಸಂಗತಿಯಾಗಿದೆ.

ಭೀಕರ ಬರಗಾಲದೆದುರು 'ಸಮುದಾಯ'ದ ದಶಕದ ಜಾಥಾ-೧೯೮೭

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರ ಪ್ರಾಕೃತಿಕ ವಿಕೋಪಗಳಲ್ಲಿ ಪ್ರಮುಖವಾದದ್ದು 'ಬರ'. ಕರ್ನಾಟಕವು ನಿತ್ಯಹರಿದ್ವರ್ಣ ಕಾಡನ್ನು ಹೊಂದಿದ್ದ ಪಶ್ಚಿಮ ಕರ್ನಾಟಕದ ಅರ್ಧ ಭಾಗವಾದರೆ ಉಳಿದ ಕರ್ನಾಟಕದ ಅರ್ಧಭಾಗ ದಖನ್ ಪ್ರಸ್ಥಭೂಮಿಗೆ ಸೇರಿದ ಬಯಲು ಪ್ರದೇಶವಾಗಿ ಭೌಗೋಳಿಕವಾಗಿ ಗುರುತಿಸಬಹುದಾಗಿದೆ. ಇಲ್ಲಿ ಭೂಮಿಯ ಪ್ರಶ್ನೆ, ಕೂಲಿಯ ಪ್ರಶ್ನೆ, ಹಸಿವಿನ ಪ್ರಶ್ನೆ, ಆರೋಗ್ಯ ಹಾಗೂ ಉದ್ಯೋಗ ಮತ್ತು ಮೌಢ್ಯತೆಯ ಪ್ರಶ್ನೆಗಳೊಂದಿಗೆ, ಮಹಿಳಾ ಅಸಮಾನತೆ ಹಾಗೂ ಜಾತಿ-ಧರ್ಮದ ಕ್ರೌರ್ಯದ ಪ್ರಶ್ನೆಗಳು ಎದ್ದು ಕಾಣುತ್ತವೆ. ಈ ಸಾಮಾಜಿಕ-ಆರ್ಥಿಕ-ರಾಜಕೀಯ ಸಮಸ್ಯೆಗಳಲ್ಲಿ ಪ್ರಮುಖವಾಗಿ ಪ್ರಾಕೃತಿಕ ಬರದ ಪ್ರಶ್ನೆಗಳು ಸೇರಿದ್ದವು. ಇವುಗಳನ್ನು ಪ್ರಾಕೃತಿಕ ಬರ ಹಾಗೂ ಮಾನವ ನಿರ್ಮಿತ ಬರ(ರಾಜಕಾರಣ) ಎಂದು ಎರಡು ರೀತಿಯಲ್ಲಿ ಕರೆಯುವುದುಂಟು.

'ಭೀಕರ ಬರದೆದುರು 'ಸಮುದಾಯ' ದಶಕದ ಜಾಥಾ'

ಕಾರ್ಯಕ್ರಮದ ಪಟ್ಟಿ

ಉತ್ತರ ಕರ್ನಾಟಕ ವಿಭಾಗ

ದಿನಾಂಕ	ವೇಳೆ	ಕಾರ್ಯಕ್ರಮ	ಕಾರ್ಯಕ್ರಮದ ನಂತರ
೧೮-೪-೧೯೮೬	ಸಂಜೆ	ಉದ್ಘಾಟನೆ:ಬೀದರ್	ಊಟ ಮತ್ತು ತಂಗುವುದು
೧೯-೪-೧೯೮೬	ಬೆಳಗ್ಗೆ ೯	ಹುಮನಾಬಾದ್	ಉಪಹಾರ
	ಬೆಳಗ್ಗೆ ೧೧	ತಾಡಮುಗಳಿ	ಮಧ್ಯಾಹ್ನದ ಊಟ
	ಸಂಜೆ ೪	ಸಲಗರ	ಊಟ, ತಂಗುವುದು
	ರಾತ್ರಿ ೮	ಆಳಂದ	
೨೦-೪-೧೯೮೬	ಬೆಳಗ್ಗೆ ೮	ಕಮಲನಗರ	ಉಪಾಹಾರ
	ಬೆಳಗ್ಗೆ ೧೧	ಸ್ಟೇಶನ್ ಗಾಣಗಾಪುರ	
	ರಾತ್ರಿ ೮	ದೇವಲ ಗಾಣಗಾಪುರ	ಊಟ, ತಂಗುವುದು
		ಗುಲಬರ್ಗ	
೨೧-೪-೧೯೮೬	ಬೆಳಗ್ಗೆ ೮	ಷಹಬಾದ್	ಉಪಹಾರ
	ಬೆಳಗ್ಗೆ ೧೧	ಕಿರಣಗಿ	
	ಮಧ್ಯಾಹ್ನ ೧೨	ತಿಳಗುಳ	
	ಮಧ್ಯಾಹ್ನ ೨	ಘುರಕಬಾದ್	
	ಸಂಜೆ ೪	ಜೀವರ್ಗಿ	ಊಟ
	ಸಂಜೆ ೭	ಶಹಾಪುರ	
	ರಾತ್ರಿ ೯	ಭೀಮರಾಯನ ಗುಡಿ	ಊಟ,ತಂಗುವುದು
೨೨-೪-೧೯೮೬	ಬೆಳಗ್ಗೆ ೮	ಗೋಗಿ	ಉಪಹಾರ
	ಬೆಳಗ್ಗೆ ೧೦	ವನದುರ್ಗ	
	ಬೆಳಗ್ಗೆ ೧೧	ಸಗರ	ಊಟ
	ಸಂಜೆ ೬	ರಂಗಂಪೇಟೆ	
	ರಾತ್ರಿ ೮	ಸುರಪುರ	ಊಟ,ತಂಗುವುದು

೨೩-೪-೧೯೮೬ರಿಂದ ೨೫-೪-೧೯೮೬ನಂತರ	ಗಂಗಾವತಿ	ಊಟ,ತಂಗುವುದು	
೨೬-೪-೧೯೮೬	ಬೆಳಗ್ಗೆ ೯	ಕಂಪ್ಲಿ	ಉಪಹಾರ
	ಬೆಳಗ್ಗೆ ೧೧	ಕುಡುತಿನಿ	
	ಸಂಜೆ ೪	ಸಿರಗುಪ್ಪ	ಊಟ
	ರಾತ್ರಿ ೭	ಬಳ್ಳಾರಿ	ಊಟ,ತಂಗುವುದು
೨೭-೪-೧೯೮೬	ಬೆಳಗ್ಗೆ ೯	ತೋರಣಗಲ್ಲು	ಉಪಹಾರ
	ಬೆಳಗ್ಗೆ ೧೧	ದೋಣಿಮಲೈ	
	ಸಂಜೆ ೪	ಸೊಂಡೂರು	
	ರಾತ್ರಿ ೭	ಹೊಸಪೇಟೆ	ಊಟ,ತಂಗುವುದು
೨೮-೪-೧೯೮೬	ಬೆಳಗ್ಗೆ ೯	ಮರಿಯಮ್ಮನಹಳ್ಳಿ	ಉಪಹಾರ
	ಬೆಳಗ್ಗೆ ೧೧	ಹಗರಿಬೊಮ್ಮನಹಳ್ಳಿ	ಊಟ
	ಸಂಜೆ ೪	ಇಟಗಿ	
	ಸಂಜೆ ೬	ಹಡಗಲಿ	
	ರಾತ್ರಿ ೮	ಹರಪನಹಳ್ಳಿ	ಊಟ(ಶಿಗ್ಗಾವಿ ಗೆ ಪ್ರಯಾಣ)
೨೯-೪-೧೯೮೬	ಬೆಳಗ್ಗೆ ೯	ಶಿಗ್ಗಾವಿ	ಉಪಹಾರ
	ಬೆಳಗ್ಗೆ ೧೧	ಹಾವೇರಿ	
	ಮಧ್ಯಾಹ್ನ೧	ರಾಣಿಬೆನ್ನೂರು	
	ಮಧ್ಯಾಹ್ನ೩	ಹಿರೆಕೆರೂರು	ಊಟ
	ಸಂಜೆ ೫	ರಟ್ಟಿಹಳ್ಳಿ	
	ರಾತ್ರಿ ೮	ಹರಿಹರ	
	ರಾತ್ರಿ ೧೦	ಹರಿಹರ ಬಡವಾಣೆ	ಊಟ,ತಂಗುವುದು

೩೦-೪-೧೯೮೬	ಬೆಳಗ್ಗೆ ೯	ದಾವಣೆಗೆರೆ	ಉಪಹಾರ
	ಬೆಳಗ್ಗೆ ೧೦	(ಹೊಂಡದ ವೃತ್ತ)	
	ಮಧ್ಯಾಹ್ನ ೩	ಸಿಟ್ಟವಳ್ಳಿ	
	ಸಂಜೆ ೫	ಅವರಗೊಳ	ಊಟ
	ಸಂಜೆ ೬	ದಾವಣಗೆರೆ	
	ರಾತ್ರಿ ೯	ವಿದ್ಯಾನಗರ	ಊಟ,ತಂಗುವುದು
೧-೫-೧೯೮೬	ಬೆಳಗ್ಗೆ ೯	ಬೆಂಗಳೂರು	ಉಪಹಾರ
	ಬೆಳಗ್ಗೆ ೧೧	ನಾಯಕನಹಟ್ಟಿ	
	ಸಂಜೆ ೩ರಿಂದ೫	ಚಳ್ಳಕೆರೆ	ಊಟ
	ಸಂಜೆ ೭	ಹಿರಿಯೂರು	ಊಟ,ತಂಗುವುದು
೨-೫-೧೯೮೬	ಬೆಳಗ್ಗೆ ೯	ಸಿರಾ	ಉಪಹಾರ
	ಬೆಳಗ್ಗೆ ೧೧	ಮಧುಗಿರಿ	
	ಮಧ್ಯಾಹ್ನ ೩	ಕೊರಟಗೆರೆ	
	ಸಂಜೆ ೫	ಊರುಕೆರೆ	ಊಟ
	ರಾತ್ರಿ ೭-೩೦	ತುಮಕೂರು	ಊಟ,ತಂಗುವುದು
೩-೫-೧೯೮೬	ಬೆಳಗ್ಗೆ ೯	ಹೆಚ್.ಎಮ್.ಟಿ.ಕಾಲೋನಿ	ಉಪಹಾರ
	ಬೆಳಗ್ಗೆ ೧೧	ಹಿರೇಹಳ್ಳಿ ಕೈಗಾರಿಕಾ ಪ್ರದೇಶ	
	ಸಂಜೆ ೩-೫	ಪೀಣ್ಯ, ಕೈಗಾರಿಕಾ ಪ್ರದೇಶ	
	ರಾತ್ರಿ ೭-೩೦	ಬೆಂಗಳೂರಿನಲ್ಲಿ ಸಮಾರೋಪ ಸಮಾರಂಭ	

೧೯೮೫ರಲ್ಲಿ ಬರಗಾಲವು ಕರ್ನಾಟಕ ಹಾಗೂ ದೇಶಾದ್ಯಾಂತ ಕಾಡುತ್ತಿರುವ ಸಮಯದಲ್ಲಿ 'ಸಮುದಾಯ' ಸಂಘಟನೆ ಹುಟ್ಟಿ ೧೦ ವರ್ಷದ ಸಂಭ್ರಮವನ್ನು ಆಚರಣೆ ಮಾಡುವ ಸಲುವಾಗಿ 'ಸಮುದಾಯ' ಉತ್ಸವವನ್ನು ಮಾಡದೆ ಭೀಕರ ಬರಗಾಲದೆದುರು 'ಸಮುದಾಯ'ದ ದಶಕದ ಜಾಥಾವನ್ನು ಬೀದರ್ ಮತ್ತು ಕುಂದಾಪುರದಿಂದ ಆರಂಭವಾದ ಜಾಥಾವು ಕೊನೆಗೆ ಬೆಂಗಳೂರಿನಲ್ಲಿ ಮುಕ್ತಾಯವಾಯಿತು. ಈ ಜಾಥಾದಲ್ಲಿ ಪ್ರಮುಖವಾಗಿ ಬರ ಏಕೆ ಬರುತ್ತದೆ? ಬರದಿಂದ ಯಾರಿಗೆ

ಲಾಭ-ನಷ್ಟಗಳ ಬಗೆಗೆ ವಿವಿಧ ಬೀದಿ ನಾಟಕಗಳು ಹಾಗೂ ವಿಚಾರ ಸಂಕಿರಣ, ಕಿರುಹೊತ್ತಿಗೆಗಳನ್ನು ಪ್ರಸಾರ ಮಾಡುವ ಅಂಶಗಳಾಗಿದ್ದವು. ಬರ ಪರಿಹಾರ ಎನ್ನುವುದು ೧೯೮೫ರ ಮುಂಚಿತಾವಾಗಿಯೇ ಹಲವಾರು ಬಾರಿ ಬರಗಳು ಬಂದಿದ್ದವು. ಇದರ ಲಾಭವನ್ನು ಹೇಗೆ ಬಲಿಷ್ಟ ರಾಜಕಾರಣಿಗಳು ಪಡೆದುಕೊಳ್ಳುತ್ತಾರೆ.? ಇವರು ಬರ ಪರಿಹಾರವನ್ನು ಕೃತಕವಾಗಿ ಹೇಗೆ ಮಾಡುತ್ತಾರೆ. ಇದರ ಜೊತೆಗೆ ಬರ ಪರಿಹಾರ ನಿಧಿಯನ್ನು ಪಡೆಯಲು 'ಉದ್ಯಮ'ವಾಗಿ ಭ್ರಷ್ಟಗೊಳಿಸುವ ಅಂಶಗಳ ಬಗ್ಗೆ ಬೆಳಕು ಚೆಲ್ಲಲಾಯಿತು.

ಈ ಜಾಥಾದಲ್ಲಿ ಬರ 'ಪರಿಹಾರ'ದ ಬಹುಭಾಗ ಹೋಗುವುದು ಖಾಸಗಿಯವರ ಕೈಯಲ್ಲಿರುವ ಗುತ್ತಿಗೆದಾರರಿಗೆ. ಬಾವಿ ತೋಡಲು, ನೀರಿನ ಟ್ಯಾಂಕರ್‌ಗಳನ್ನು ಕಳಿಸುವುದು, ಕೆರೆ ಹೂಳೆತ್ತುವುದು, ಟ್ಯಾಂಕುಗಳ ರೀಪೆರಿಗಳು, ಪಶುಸಂಗೋಪನೆಯ ವಿಚಾರವಾಗಿ ಈ ಹಗರಣಗಳು ಕಾನೂನು ಬದ್ದವಾಗಿ ಹೇಗೆ ಸೃಷ್ಟಿಸುತ್ತಾರೆ? ಎಂಬ ವಿಚಾರವಾಗಿ ೧೯೮೫ರಿಂದ ಇಂದಿನವರೆಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಜಾಗೃತಿ ಮೂಡಿಸುತ್ತಿದೆ.[೧೫] ಈ ಬರಕ್ಕೆ ಬಂಡವಾಳಶಾಹಿಯ ಕಂಪನಿಗಳು ಮುಂದಾಗಿದ್ದವು. ೧೯೮೦ರಲ್ಲಿ 'ಸಮನ್ವಿತಾ' ಎಂದು ಹೆಸರಿಟ್ಟರು. ಇದರಲ್ಲಿ ೫ ಏಜೆನ್ಸಿಗಳು ಇದ್ದವು ಅವುಗಳು ಹೀಗಿವೆ.

೧. ಭಾರತೀಯ ಕೃಷಿ ಕೈಗಾರಿಕಾ ನಿಗಮ(ಬೈಫ್) (ಬಂಡವಾಳ ಶಾಹಿ ಕಂಪನಿ) ಅಂದರೆ ಮಫ್‌ತಲಾಲ್ ಅವರ ಸಂಸ್ಥೆ

೨. ಸದ್ಗುರು ಸೇವಾ ಟ್ರಸ್ಟ್(ಎನ್.ಜಿ.ಒ)(ಮಫ್‌ತಾಲಾಲ್ ಅವರ ಎನ್.ಜಿ.ಒ)

೩. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

೪. ಪಶುಸಂಗೋಪನೆ ಇಲಾಖೆ ಹಾಗೂ ಕಂದಾಯ ಇಲಾಖೆ

೫. ರಾಜಕಾರಣಿಗಳ ಖಾಸಗಿ ಗುತ್ತಿಗೆಗಾರರು

ಈ ಮೇಲಿನ ಖಾಸಗಿ ಹಾಗೂ ಸರ್ಕಾರಿ ಆಡಳಿತ ಸಂಸ್ಥೆಗಳ ಸಹಕಾರದೊಂದಿಗೆ 'ಬರ ಪರಿಹಾರ'ದ ಕೋಟ್ಯಾಂತರ ಹಣವನ್ನು ನುಂಗಲು ಮುಂದಾಗಿದ್ದನ್ನು ನಾಟಕಗಳ ಮೂಲಕ ಬಯಲುಮಾಡುವ ಹಾಗೂ ಜಾಥಾಗಳ ಮೂಲಕ ಕೃತಕ ಬರದ ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಅಂಶಗಳನ್ನು ಪ್ರಚಾರ ಮಾಡುವ ಕೆಲಸವನ್ನು ಇಂದಿಗೂ ಕಾಣುತ್ತೇವೆ. ಎಂಬತ್ತರ ದಶಕದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ನೀಲಗಿರಿ ಸಸಿಗಳನ್ನು ಕೊಟ್ಟು ರೈತರ ಹೊಲಗಳಲ್ಲಿ ಬೆಳೆಸಲು ಮುಂದಾದರು. 'ಸಮುದಾಯ' ರೈತ ಸಂಘಟನೆಗಳ ಒಗ್ಗಟ್ಟನ್ನು ಈ ಜಾಥಾದಲ್ಲಿ ವಿರೋಧಿಸಿ ಕಾರ್ಯಕ್ರಮವನ್ನು ರೂಪಿಸಿದರು. ಜೊತೆಗೆ ನೀಲಿಗಿರಿ ಮರಗಳ ಕೃತಕ ಅರಣ್ಯಗಳನ್ನು ಕ್ರೂಢೀಕರಿಸಿ ಕೃತಕ ಬಂಜರು ಭೂಮಿಯನ್ನು ಮಾಡುವುದರ ವಿರುದ್ಧ ಹೋರಾಟವನ್ನು ಮಾಡಿದರು. ಕೋಲಾರದಲ್ಲಿ ಹೆಚ್ಚು ಜಾಥಾದ ಪ್ರಭಾವದಿಂದ ಕೆಲವರು ನೀಲಿಗಿರಿಯನ್ನು ವಿರೋಧಿಸಿದರು. ಇನ್ನೂ ಕೆಲವರು

ಬರವನ್ನು ನೀಗಿಸಲು ತಮ್ಮ ತಮ್ಮ ಹೊಲಗಳಲ್ಲಿ ನೀಲಿಗಿರಿ ಗಿಡಗಳನ್ನು ಹಾಕಿದ ಪರಿಣಾಮ ೧೮೦೦ ಅಡಿಗಳ ಬೋರ್‌ವೆಲ್ ಹಾಕಿದರೂ, ಕೋಲಾರ ಜಿಲ್ಲೆಯಲ್ಲಿ ನೀರು ಸಿಗದಿರುವುದನ್ನು ಕಾಣುತ್ತೇವೆ. ಆದರೆ ಬಹುತೇಕ ಉಳಿದ ಜಿಲ್ಲೆಗಳಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಹೇಗೆ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ರಾಜಕಾರಣಿಗಳು ಬರಗಾಲವನ್ನು ಹೇಗೆ ಲಾಭವನ್ನಾಗಿ ಮಾಡಿಕೊಳ್ಳುತ್ತಾರೆ ಎಂಬುದನ್ನು ಈ ಜಾಥಾಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ಇದರಲ್ಲಿ ಅನೇಕ ಉಪನ್ಯಾಸಗಳ ಮೂಲಕ, ನಾಟಕಗಳ ಮೂಲಕ ಬರಗಾಲದ ಬಗ್ಗೆ ಹೊಸ ಜಾಗೃತಿ ಉಂಟು ಮಾಡಿದ್ದು 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಸಲ್ಲುತ್ತದೆ. ೧೯೮೦ರಲ್ಲಿ ಮಧ್ಯಪ್ರದೇಶದ ಭೂಪಾಲ್ ರಾಜಧಾನಿಯಲ್ಲಿ 'ಭೂಪಾಲ್ ಅನಿಲ ದುರಂತ'ದ ವಿರುದ್ಧ ರಾಷ್ಟ್ರೀಯ ಮಟ್ಟ ಜಾಥಾವನ್ನು ಪ್ರಗತಿಪರ ಬೀದಿ ರಂಗ ಸಂಘಟನೆಗಳು ಕೇರಳದಲ್ಲಿ ಮಾರ್ಚ್ ೧೯೮೫ರಲ್ಲಿ 'ಕೇರಳ ರಾಜ್ಯ ವಿಜ್ಞಾನ ಸಾಹಿತ್ಯ ಪರಿಷತ್ತು' ಹಮ್ಮಿಕೊಂಡಿತು. 'ಜನವಿಜ್ಞಾನ ಜಾಥಾ' ಕರ್ನಾಟಕದ ಕೆಲವು ಭಾಗಗಳಲ್ಲಿ ಹಾದು ಹೋಗುವ ಸಂದರ್ಭದಲ್ಲಿ 'ಸಮುದಾಯ'ದ ಕಾರ್ಯಕರ್ತರು ಈ ಜಾಥಾದಲ್ಲಿ ಭಾಗವಹಿಸಿ ಜಾಥಾ ಯಶಸ್ವಿಯಾಗಲು ಕಾರಣಕರ್ತರಾದರು. ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ಬಸವಲಿಂಗಯ್ಯ ಹಾಗೂ ಅಧ್ಯಕ್ಷರಾದ ಜನಾರ್ಧನ(ಜನ್ನಿ) ದೇಶದ ಎಲ್ಲಾ ಜಾಥಾ ತಂಡಗಳೊಡನೆ ತಿರುವಂತನಪುರದಲ್ಲಿ ಕೇಂದ್ರಿಕೃತ ರಂಗ ತರಬೇತಿ ಶಿಬಿರವನ್ನು ಆಯೋಜಿಸಿದರು. ದೇಶದ ಎಲ್ಲಾ ಕಡೆಗಳಿಂದ ಪ್ರಾರಂಭವಾದ ಜಾಥಾ ತಂಡಗಳು ದಾರಿಯುದ್ದಕ್ಕೂ ಬೀದಿನಾಟಕಗಳನ್ನು ಪ್ರದರ್ಶಿಸುತ್ತ ಭೂಪಾಲ್‌ನಲ್ಲಿ ಸಮಾವೇಶಗೊಂಡವು. ೧೯೮೦ರ ಭೂಪಾಲ್ ಅನಿಲ ದುರಂತ ಕರಾಳತೆಯನ್ನು ಪ್ರಶ್ನಿಸಿ ಒಂದು ಆಂದೋಲವನ್ನು ಉಂಟು ಮಾಡಿ, ಕಿಚ್ಚು ಹಚ್ಚಿದ್ದು 'ಸಮುದಾಯ' ಸಂಘಟನೆಗೆ ಸಲ್ಲುತ್ತದೆ.[೧೬] ಇದರ ಜೊತೆಗೆ ಸಫ್ದರ್ ಹಶ್ಮಿಯ ಸಂಗಾತಿಯಾದ ಮಲಯಶ್ರೀ ಅವರು ದೆಹಲಿಯ 'ಜನ ನಾಟ್ಯ ಮಂಚ್' ಅವರ ರಂಗ ತಂಡ ಪ್ರಮುಖ ಪಾತ್ರ ವಹಿಸಿತು.

ಹೀಗೆ ೧೯೮೫ ರಲ್ಲಿ ರಾಷ್ಟ್ರೀಯ ವಿಚಾರಗಳಾದ 'ಬರಗಾಲ' ಹಾಗೂ 'ಭೂಪಾಲ್ ಅನಿಲ ದುರಂತ' ವಿಷಯಗಳನ್ನು ಇಟ್ಟುಕೊಂಡು ಹಲವಾರು ವಿಚಾರ ಸಂಕಿರಣಗಳು, ಹೋರಾಟಗಳು, ಕ್ರಾಂತಿಗಳು ಪ್ರತಿಭಟನಾ ಸಾಹಿತ್ಯ ಮತ್ತು ಬೀದಿನಾಟಕಗಳ ಮೂಲಕ ಪ್ರಚಾರಾಂದೋಲವನ್ನು ಮಾಡಿದ್ದು 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಮಹತ್ವದಸ ಕಾರ್ಯವೆಂದರೆ ತಪ್ಪಾಗಾಲಾರದು. ಹೀಗೆ 'ಸಮುದಾಯ' ಸಂಘಟನೆಯ ವೈಚಾರಿಕ ವಿಚಾರಗಳ ಹಾಗೂ ವೈಜ್ಞಾನಿಕ ಮನೋಭಾವವನ್ನು ಕರ್ನಾಟಕದ ಬಹುತೇಕ ಜನತೆಗೆ ತುಂಬಲು ಮುಂದಾಗಿದ್ದು ಕಾಣುತ್ತೇವೆ. ಇದರಿಂದ 'ಸಮುದಾಯ' ಸಂಘಟನೆಯಲ್ಲಿ ವಿಜ್ಞಾನಿಗಳು ಸಹ ಸಕ್ರೀಯವಾಗಿ ಭಾಗವಹಿಸಲು ಮುಂದಾಗಿದ್ದನ್ನು ಕಾಣುತ್ತೇವೆ.

ವಿಶ್ವ ಶಾಂತಿಗಾಗಿ 'ಸಮುದಾಯ'ದ ಬಣ್ಣದ ನಡೆ ಜಾಥಾ-೧೯೮೬

ಪ್ರಸುತ್ತ ಬಹುತೇಕ ರಾಷ್ಟ್ರಗಳು ಅಣು ಬಾಂಬುಗಳನ್ನು ಹೊಂದಿರುವ ರಾಷ್ಟ್ರಗಳಾಗಿವೆ. ಈ ಅಣ್ವಸ್ತ್ರಗಳನ್ನು ಯಾವುದೇ ದೇಶವು ಪ್ರಯೋಗಿಸಿದರೂ ಮಾನವ ಸಂಕುಲ ನಾಶವೆಂದು ಸಾರುವ ಅಂಶಗಳನ್ನು ಇಟ್ಟುಕೊಂಡು, ಜೊತೆಗೆ ಪ್ರಪಂಚದ ಎರಡು ಮಹಾಯುದ್ಧಗಳನ್ನು ಕಂಡಿದ್ದೇವೆ. ಎರಡನೇ ಮಹಾಯುದ್ಧದಲ್ಲಿ ಹಿರೋಶಿಮಾ ಹಾಗೂ ನಾಗಸಾಕಿಯ ನಗರಗಳ ಮೇಲೆ ಅಮೇರಿಕಾ ಹಾಕಿದ ಅಣು ಬಾಂಬಿನಿಂದಾಗಿ ಮಾನವ ಸಂಕುಲ ಹೇಗೆ ನಾಶವಾಯಿತು ಎನ್ನುವ ಅಂಶಗಳನ್ನು ಗಮನಿಸುಬಹುದಾಗಿದೆ. ೧೯೮೬ನೇ ವರ್ಷವನ್ನು ವಿಶ್ವಸಂಸ್ಥೆಯು 'ವಿಶ್ವ ಶಾಂತಿ' ವರ್ಷವೆಂದು ಆಚರಿಸಲು ಮುಂದಾಗಿದ್ದನ್ನು ಸ್ವಾಗತಿಸಿದ ಸಮುದಾಯ ಸಂಘಟನೆಯು ಯುದ್ಧ ವಿರೋಧಿ ಗೀತೆಗಳನ್ನು ಹಾಡಲು ಮುಂದಾಯಿತು.

ದಾವಣಗೆರೆಯ 'ಸಮುದಾಯ' ಸಂಘಟನೆ ಕಲಾವಿದರು, ರಾಜ್ಯಪ್ರಶಸ್ತಿಯ ವಿಜೇತರೂ ಆದ ಕರಿರಾಜು ಮತ್ತು ಪ್ರಸ್ತುತ ಬಯಲು ದೊಡ್ಡಾಟ ಮಾಂತ್ರಿಕ ಸೊಲಬಕ್ಕನವರ ಸಂಗಾತಿಗಳು ೧೨೦x೪ ಅಡಿಗಳ ಉದ್ದದ ಬೃಹತ್ ತೈಲವರ್ಣ ಚಿತ್ರ ತಯಾರಿಸುವ ಮೂಲಕ ಕರ್ನಾಟಕದ್ಯಾದಂತ ೬೦ ದಿನಗಳ ಕಾಲ ೭-೯-೧೯೮೬ ರಿಂದ ೫-೧೧-೧೯೮೬ರವರೆಗೆ ಈ ಬೃಹತ್ ತೈಲವರ್ಣ ಚಿತ್ರದಲ್ಲಿ 'ಮಾನವರ ಉಗಮದಿಂದ ಅಂದರೆ ವಿಕಾಸವಾದ ಮತ್ತು ಅವನ ಸಾಮಾಜಿಕ ಬೆಳವಣಿಗೆಯ ವಿವಿಧ ಕಾಲಘಟ್ಟಗಳು ಹಾಗೂ ಯುದ್ಧ ಭಯಾನಕ ಪರಿಣಾಮಗಳು ವಿಶ್ವಶಾಂತಿಗಾಗಿ ನಡೆದ ಚಳವಳಿಗಳು ಚಿತ್ರಿಸಲಾಯಿತು.' ಈ ಜಾಥಾವು ಬೆಂಗಳೂರು, ತುಮಕೂರು, ಕೋಲಾರ, ಶಿವಮೊಗ್ಗ, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬಿಜಾಪುರ, ದಕ್ಷಿಣ ಕನ್ನಡ, ಮಡಿಕೇರಿ, ಮೈಸೂರು, ಚಿತ್ರದುರ್ಗ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸೇರಿದಂತೆ ನೂರಾರು ಕಡೆಗಳಲ್ಲಿ ಈ ಬಣ್ಣದ ಜಾಥಾ ಪ್ರದರ್ಶಿಸಲಾಯಿತು. ಸಭೆ ಮೆರವಣಿಗೆಗಳು ಹಾಡಿನ ಕಾರ್ಯಕ್ರಮಗಳು ಬೀದಿನಾಟಕಗಳು ಜೊತೆಗೆ ವಿಚಾರ ಸಂಕಿರಣಗಳು ನಡೆದವು. 'ನೂರು ಅಡಿ ಬಣ್ಣದ ನಡೆ, ಅಣು ಸಮರಕ್ಕೆ ತಡೆ' ಎಂಬ ಘೋಷಣೆಯೊಂದಿಗೆ ಕರ್ನಾಟಕದಲ್ಲಿ ಪ್ರತಿ ಧ್ವನಿಸಿತು. ಕೊನೆಯಲ್ಲಿ ೧೫-೧೧-೧೯೮೯ರಂದು ಬೆಂಗಳೂರಿನಲ್ಲಿ ಸಮಾರೋಪವಾಯಿತು. ಈ ಸಮಾರೋಪದಲ್ಲಿ ಈಗಾಗಲೇ ಎರಡು ಮಹಾಯುದ್ಧಗಳಲ್ಲಿ ಸಂಭವಿಸಿದ ಅಮಾನುಷ ಪ್ರಾಣಹಾನಿ ಕುರಿತು ಆಫ್ರಿಕಾ, ಏಷ್ಯಾ, ಲ್ಯಾಟೀನ್ ಅಮೇರಿಕಾ ದೇಶಗಳಲ್ಲಿನ ವಿಮೋಚನಾ ಹೋರಾಟಗಳ ಕುರಿತು ಹಾಗೂ ಹಿರೋಷಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬ್ ಸ್ಫೋಟಿಸಿದ ದುಷ್ಪರಿಣಾಮಗಳ ಕುರಿತು ವಿಶ್ಲೇಷಣೆಗೆಗೆ ಒಳಪಡಿಸಲಾಯಿತು.[೧೭] ಈ ಕಾರ್ಯಕ್ರಮದಲ್ಲಿ ಚಿತ್ರಕಲೆ, ಬಿತ್ತಿಚಿತ್ರಗಳು ಮೊದಲಾದ ಕಲಾ ಪ್ರಕಾರಗಳನ್ನು ಪ್ರದರ್ಶಿಸಲಾಯಿತು.

ಈ ಜಾಥಾದ ವಿಶೇಷವೆಂದರೆ ಕರ್ನಾಟಕದ ಹೋರಾಟಗಳು ಹಾಗೂ ಚಿತ್ರಕಲಾ ಪ್ರದರ್ಶನ ಕಾರ್ಯಕ್ರಮಗಳು ನಡೆದವು. ಅವು ಕಲ್ಕತ್ತಾ, ಚೆನ್ನೈ, ದೆಹಲಿ, ಹರಿಯಾಣ, ಭೂಪಾಲ್

ಹಾಗೂ ವಿಜಯವಾಡ ಮುಂತಾದ ಕಡೆಗಳಲ್ಲಿ ಮುಖ್ಯವಾಗಿ ತಿರುವಂತನಪುರದಲ್ಲಿ ಜನಜಾಗೃತಿ ಉಂಟುಮಾಡಿದ್ದು ರಾಷ್ಟ್ರೀಯ ಮಟ್ಟದಲ್ಲಿ ಈ ಜಾಥಾವನ್ನು ಕೊಂಡೊಯ್ದದ್ದು ಚಾರಿತ್ರಿಕವಾದ ಸಂಗತಿಯಾಗಿದೆ. ಇದರಿಂದ 'ಸಮುದಾಯ' ಸಂಘಟನೆಯ ರಾಷ್ಟ್ರೀಯ ಮಟ್ಟದಲ್ಲಿ ರಂಗ ಚಳವಳಿಯನ್ನು ಹುಟ್ಟಿಹಾಕಲು ಮುಂದಾಗಿದ್ದನ್ನು ಕಾಣುತ್ತೇವೆ. ಏಕೆಂದರೆ 'ಸಮುದಾಯ' ಜಾಥಾಗಳು ಬೀರಿದ ಪ್ರಭಾವ ಅಂತಹದ್ದು, ಜಾಥಾಗಳು ಚಳವಳಿಯ ಭಾಗವಾಗಿರುವಂಥದ್ದು ಚಾರಿತ್ರಿಕ ಅಂಶಗಳಲ್ಲಿ ಒಂದಾಗಿದೆ.

ದೇವದಾಸಿ ಪದ್ಧತಿ ಹಾಗೂ ಮೂಢನಂಬಿಕೆ ವಿರುದ್ಧ ಬಿಜಾಪುರ ಜಿಲ್ಲೆಯ 'ಸಮುದಾಯ' ಜಾಥಾ–೧೯೮೭

'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ೧೯೮೫ರ ಭೀಕರ ಬರಗಾಲದ ಎದುರು 'ಸಮುದಾಯ' ಸಾಂಸ್ಕೃತಿಕ ಜಾಥಾವನ್ನು ಕರ್ನಾಟಕದ ಬಹುತೇಕ ಎಲ್ಲಾ 'ಸಮುದಾಯ' ಘಟಕಗಳಲ್ಲಿ ಯಶಸ್ವಿಯಾಗಿ ನಡೆದಿತ್ತು. ಇದರ ನಂತರ ೧೯೮೬ರಲ್ಲಿ ವಿಶ್ವ ಶಾಂತಿಗಾಗಿ ಪ್ರಪಂಚದ ಬೇರೆ–ಬೇರೆ ದೇಶಗಳಲ್ಲಿ ನಡೆದ ಯುದ್ಧ ವಿರೋಧಿ ರ‍್ಯಾಲಿಗಳು ಹಾಗೂ ಶಾಂತಿಸಭೆಗಳು ಹಾಗೂ ಜಾಥಾಗಳ ಭಾಗವಾಗಿ ಕರ್ನಾಟಕದಲ್ಲಿ ಕೂಡ 'ಸಮುದಾಯ' ಸಂಘಟನೆಯು ವಿಶಿಷ್ಟ ರೀತಿಯಲ್ಲಿ ಮಾನವನ ಉಗಮದಿಂದ ಪ್ರಾರಂಭವಾಗಿ ಸಮಾಜದಲ್ಲಿ ಬೆಳವಣಿಗೆಯಾದ ನಿರಂತರವಾಗಿ ಪ್ರಕೃತಿಯ ಮಡಿಲಿನಲ್ಲಿ ಹೇಗೆ ತನ್ನ ಸಂಘರ್ಷದಿಂದ ಮಂಗನಿಂದ ಆಧುನಿಕ ಮಾನವನರೆಗೆ ಬೆಳವಣಿಗೆ ಹೊಂದಿದ ಎಂಬ ಮಹತ್ವದ ಜಾಥಾವಾದ 'ನೂರು ಅಡಿಗಳ ಬಣ್ಣದ ನಡೆ ಜನರ ಅಣುಸಮರದ ತಡೆ' ಎಂಬ ಘೋಷಣೆಯೊಂದಿಗೆ ನೂರು ಅಡಿಗಳ ಬಣ್ಣದ 'ತೈಲವರ್ಣ ಚಿತ್ರಕಲೆ'ಯ ಪ್ರಕರಣದ ಜಾಥಾ ನಂತರದ ಜಾಥಾವೇ 'ಸಮುದಾಯ' ರೂಪಿಸಿದ ಮೌಢ್ಯ ವಿರೋಧಿ ಹಾಗೂ ಇದಕ್ಕೆ ಬಲಿಯಾಗುವ ದೇವದಾಸಿ ಪದ್ಧತಿಯ ಅನಿಷ್ಟ ಪದ್ಧತಿ ವಿರುದ್ಧ ದೇವದಾಸಿ ಪದ್ಧತಿ ವಿರೋಧಿ ಜಾಥಾವನ್ನು ಬಿಜಾಪುರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಯಿತು.

ಬಿಜಾಪುರದಲ್ಲಿ ಈಗಿನ (ವಿಜಯಪುರ)ದಲ್ಲಿ 'ಸಮುದಾಯ' ಪ್ರಮುಖ ನಾಟಕವಾದ 'ಜೋಗತಿ ಕಲ್ಲು' ಈ ನಾಟಕ 'ಸಮುದಾಯ' ಸಂಘಟನೆಯ ಎಸ್.ಎಸ್.ಹಿರೇಮಠ ಅವರು ಜನಪರ ಸಾಹಿತ್ಯ ಚರಿತ್ರೆಯನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಸಂಶೋಧನೆಯನ್ನು ಕೈಗೊಂಡರು. ಇವರು ಉತ್ತರ ಕನ್ನಡ ಜಿಲ್ಲೆಯ ಬೈಲಹೊಂಗಲದವರು. ಹೊಸಪೇಟೆ, ಹೂವಿನಹಡಗಲಿ ಮತ್ತು ಕೊಟ್ಟೂರಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. .ಇವರು ಹಲವಾರು ಕಾವ್ಯ, ನಾಟಕ ಹಾಗೂ ಇತರೆ ಕೃತಿಗಳನ್ನು ಜಾನಪದ ಸಾಹಿತ್ಯ ಚರಿತ್ರೆಗಳನ್ನು ಮಾರ್ಕ್ಸ್‌ವಾದ ಹಾಗೂ ದಲಿತ ಪರ ಹಿನ್ನೆಲೆಯಲ್ಲಿ ಬರೆದಿದ್ದಾರೆ.[೧೮] ಇವರ ಜೋಗತಿಕಲ್ಲು ನಾಟಕ ಉತ್ತರ ಕರ್ನಾಟಕ ಬಹುತೇಕ ತಾಲ್ಲೂಕುಗಳಲ್ಲಿರುವ 'ಸಮುದಾಯ' ಸಂಘಟನೆಯ ಮೂಲಕ ನಾಟಕಗಳ ಪ್ರದರ್ಶನ ಕಂಡಿದೆ. ದೇವದಾಸಿ ಪದ್ಧತಿ ಬಹುತೇಕ ಹೆಚ್ಚು ಇರುವ ಬಿಜಾಪುರ ಜಿಲ್ಲೆಯಲ್ಲಿ 'ಸಮುದಾಯ' ನಾಟಕವಾದ

ಜೋಗತಿಕಲ್ಲು ನಾಟಕವನ್ನು ಮೂಲಕ ದೇವದಾಸಿಯ ಅರಿವನ್ನು ಮೂಡಿಸಲು 'ಸಮುದಾಯ' ಬಿಜಾಪುರ ಘಟಕ ಹಾಗೂ ಧಾರವಾಡ ಘಟಕ ಸಹಯೋಗದೊಂದಿಗೆ ಮುಂದಾಗಿದ್ದರು. ಎಂದು ಹೇಳಬಹುದು. ಈ ನಾಟಕದ ಮೂಲ ತಿರುಳು ಜೋಗತಿಕಲ್ಲು ಅಂದರೆ, ಸಾಮಾನ್ಯ ಕಲ್ಲನ್ನೇ ದೇವರೆಂದು ನಂಬಿ ಮುಗ್ಧ ಹುಡುಗಿಯೊಬ್ಬಳನ್ನು ಜೋಗತಿಯಾಗಿಸುವ ಊರಿನವರ(ಸಮಾಜದಲ್ಲಿ) ಕರಾಳ ಕೃತ್ಯವನ್ನು ನಾಟಕ ಬೀದಿಗೆಳೆಯುತ್ತದೆ. ಕಪಟ ಜನರ ಬೂಟಾಟಿಕೆಯನ್ನು ಬಯಲು ಮಾಡುತ್ತಾ ಮುಗ್ಧ ಜನರನ್ನು ವಂಚಿಸುವವರನ್ನು ಅಳೆಯುತ್ತ, ಜೋಗತಿಕಲ್ಲಿಗೆ ಮೊರೆಹೋಗಿ ಅವರಿಗೆ ಪೂಜೆ–ಭಜನೆ ಮಾಡುವರಿಗೆ ಈ ನಾಟಕವು ಸರಿಯಾದ ದಾರಿ ತೋರಿಸುತ್ತದೆ.

ವೈಜ್ಞಾನಿಕ ದೃಷ್ಟಿಕೋನ ಬೆಳಸಿಕೊಳ್ಳುವುದರತ್ತ ಹಿತೋಪದೇಶ ಕೊಡುವುದೇ ಈ ನಾಟಕದ ತಿರುಳಾಗಿದೆ. ಈ ನಾಟಕದಲ್ಲಿ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಜೋಗತಿಯರಾಗಿರುವ ಹಗರಿಬೊಮ್ಮನಹಳ್ಳಿಯ ಕಾಳಮ್ಮನವರು ಹಾಡುಗಳನ್ನು ಹಾಡುತ್ತಿದ್ದರು. ಹನುಮಮ್ಮ ಹಾಗೂ ಪರಸಪ್ಪನವರು ಚೌಡಿಕೆಯನ್ನು ನುಡಿಸುತ್ತಿದ್ದರು. ಈ ನಾಟಕದ ವಿವಿಧ ಪಾತ್ರಗಳಿಗೆ ಸಮುದಾಯದ ನಟ–ನಟಿಯರ ಮೂಲಕವೇ ನಾಟಕಗಳ ಪಾತ್ರ ಮಾಡಿಸಿದ್ದು ಕರ್ನಾಟಕ ರಂಗಭೂಮಿ ಚರಿತ್ರೆಯಲ್ಲಿಯೇ ಮೊದಲನೆಯದು ಎಂದರೆ ತಪ್ಪಗಲಾರದು. ಏಕೆಂದರೆ ಎಸ್.ಎಸ್.ಹಿರೇಮಠ ಅವರು ಉತ್ತರ ಕರ್ನಾಟಕದಲ್ಲಿ ಗೊಡ್ಡು ಸಂಪ್ರದಾಯದ ಹೆಸರುಗಳಲ್ಲಿ ಜೋಗತಿಯಾಗಿಸುವ ಅಥವಾ ನರಬಲಿ, ಬಾಲ್ಯವಿವಾಹ ಹಾಗೂ ದೇವರು–ದೆವ್ವದ ಹೆಸರಿನಲ್ಲಿ ಶೋಷಣೆ ಹಾಗೂ ದಲಿತರ ಜನರ ಅಸ್ಪೃಶ್ಯಾಚರಣೆಯನ್ನು ತೀವ್ರವಾಗಿ ಖಂಡಿಸಿ 'ಸಮುದಾಯ' ರಂಗ ಚಳವಳಿಯಲ್ಲಿ ಸಕ್ರಿಯವಾಗಿ ದುಡಿದವರು. ಈ ನಾಟಕದಲ್ಲಿ ಬಿಜಾಪುರ ಹಾಗೂ ಧಾರವಾಡ 'ಸಮುದಾಯ'ದ ನಟರು ಸಕ್ರಿಯವಾಗಿ ಭಾಗವಹಿಸಿದ್ದು ಕಾಣುತ್ತೇವೆ.

ಎಂಬತ್ತರ ದಶಕದಲ್ಲಿ ಮೌಢ್ಯತೆಯು ಹೆಚ್ಚು ಕಂಡುಬಂದಿತು. ಏಕೆಂದರೆ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳು ಕಳೆದಿದ್ದರೂ ಎಲ್ಲರಿಗೂ ಶಿಕ್ಷಣ ಇಲ್ಲದ ಕಾರಣ ಹಾಗೂ ಸಮಾಜದಲ್ಲಿ ಜಾತಿ ದಬ್ಬಾಳಿಕೆ ಹೆಚ್ಚಾದ ಕಾರಣವಾಗಿತ್ತು. ಅದರ ಅಂಗವಾಗಿರುವ ದೇವದಾಸಿ ಪದ್ಧತಿ ಹಾಗೂ ಮೂಡನಂಬಿಕೆಯನ್ನು ಹೋಗಲಾಡಿಸಲು 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಜಿಲ್ಲಾಮಟ್ಟದ ಜಾಥಾವನ್ನು ಕೈಗೊಂಡಿತು.[೧೯] 'ಸಮುದಾಯ' ನಾಟಕಗಳಾದ ಜೋಗತಿ ಹಾಗೂ ಜೊಗತಿಕಲ್ಲು ಮುಂತಾದ ನಾಟಕಗಳಾಡಿಸಿತು. ಸವದತ್ತಿಯಿಂದ ಬಿಜಾಪದ ಬಹುತೇಕ ಹಳ್ಳಿಗಳು ಹಾಗೂ ತಾಲ್ಲೂಕುಗಳಿಗೆ ಈ ನಾಟಕದ ತಾತ್ವಿಕತೆಯನ್ನು ತಲುಪಿಸಿತು.

ಕಲಾಕೃತಿಗಳ ಜಾಥಾ : ಕಾಸರಗೋಡಿನಿಂದ ಕುಂದಾಪುರದವರೆಗೆ –೧೯೮೮

'ಸಮುದಾಯ'ದ ಘಟಕ ಕುಂದಾಪುರ ಹಾಗೂ ಮಂಗಳೂರು ಘಟಕಗಳು ಇತರ ತಾಲ್ಲೂಕು 'ಸಮುದಾಯ' ಘಟಕಗಳ ಒಳಗೊಂಡಂತೆ ೧೯೮೮ ನವೆಂಬರ್ ೨೨ ರಿಂದ ३೦ ರವರೆಗೆ ಕೇರಳದ ಕಾಸರಗೊಂಡಿನಿಂದ ಕುಂದಾಪುರದವರೆಗೆ ಚಿತ್ತಾರ ಕಲಾವಿದರು ಮಂಗಳೂರು ಇವರ

ಸಹಯೋಗದಲ್ಲಿ ನಡೆಯಿತು. ಹೊಸ ಸೃಜನಶೀಲ ಕಲಾವಿದರನ್ನು ಇದರಲ್ಲಿ ಪರಿಚಯಿಸುವುದು ಪ್ರಮುಖವಾಗಿತ್ತು. ಜೊತೆಗೆ 'ಸಮುದಾಯ' ತೈಲವರ್ಣಚಿತ್ರ ನೂರು ಅಡಿಗಳ ಬಣ್ಣದ ನಡೆ ಅಣುಸಮರಕ್ಕೆ ಎಂಬ ಜಾಥಾವು ಈಗಾಗಲೇ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯಿಂದ ಐತಿಹಾಸಿಕ ಜಾಥಾವಾಗಿದ್ದು ಕಾಣುತ್ತೇವೆ. ಇದರ ಪ್ರೇರಣೆಯಿಂದಲೇ ಕರ್ನಾಟಕದ ಕರಾವಳಿ ಭಾಗದ ಕಲಾವಿದರ ಕಲಾಜಾಥಾವಾಗಿ ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು. 'ಸಮುದಾಯ' ಮಂಗಳೂರು ಹಾಗೂ ಕುಂದಾಪುರ ಜಾಥಾ ನೆರವೇರಿಸಿದ್ದು ಈ ಜಾಥಾದ ಸಂದರ್ಭದಲ್ಲಿ 'ಸಮುದಾಯದ' ಕಿರುಹೊತ್ತಿಗೆಗಳನ್ನು ಮಾರಿದರು. ಕೆಲವು ಸಮಾಜದ ಮೌಢ್ಯತೆ ಹಾಗೂ ಸಾಮಾಜಿಕ ಅಸಮಾನತೆ ನೈಜ ಘಟನೆಗಳ ಆಧಾರಿತ ಚಿತ್ರ ಕಲಾಪ್ರದರ್ಶನವನ್ನು ಕುಂದಾಪುರ ಹಾಗೂ ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮಗಳ ಮೂಲಕ ನೆರವೇರಿಸಿದರು.

ಈ ಜಾಥಾದ ಉದ್ದಕ್ಕೂ ವಾಸುದೇವ್ ಉಚ್ಚಿಲ್, ಐ.ಕೆ.ಬೋಳುವಾರ್, ಬಿ.ವಿ.ಕಾರಂತ, ಸುರೇಶ್ ಆನಗಳ್ಳಿ, ಗಿರೀಶ, ಸುಕುಮಾರ್.ಕೆ, ಎ.ಎಸ್.ಆಚಾರ್ಯ, ಪ್ರಕಾಶ್ ರೈ, ಶಾಮ್ ಸುಂದರ್, ಟಿ.ಅಂಗಾರ, ಬಿ.ಮಾದವ, ಸಿ.ಆರ್.ಭಟ್, ಮುಂತಾದವರು ಎಡ-ಪ್ರಜಾಸತ್ತಾತ್ಮಕ ಸಂಘಟನೆಗಳು ಮುಂಖಂಡರು ಭಾಗವಹಿಸಿದ್ದರು. ಕಲಾ ಜಾಥಾದ ಜೊತೆಯಲ್ಲಿ ಬೀದಿ ನಾಟಕಗಳಾದ 'ಚಿಂದಿ' ನಾಟಕ ಪ್ರಮುಖವಾಗಿತ್ತು. ಈ ನಾಟಕ ಜೊತೆಯಲ್ಲಿ ಚಿತ್ರ ಕಲಾಪ್ರದರ್ಶನದ ಪ್ರಾಮುಖ್ಯತೆ ಕುರಿತು ವಿಚಾರ ಸಂಕಿರಣ ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸಿತ್ತು. 'ಸಮುದಾಯ'ದ ವಿಶೇಷತೆಯಿಂದ ಸಾಂಸ್ಕೃತಿಕ ಕ್ಷೇತ್ರದ ಎಲ್ಲಾ ಕಲಾ ಪ್ರಕಾರಗಳನ್ನು ದುಡಿಯುವ ಸಮುದಾಯದ ಅಂಶಗಳು, ಅವರ ಸಮಸ್ಯೆ ಹಾಗೂ ಸವಾಲುಗಳನ್ನು ಸಾಮಾನ್ಯ ಜನರಿಗೆ ಕಣ್ಣಿಗೆ ಕಟ್ಟುವ ಹಾಗೆ ತೊರುತ್ತಿದ್ದಿದು ಕಾಣುತ್ತೇವೆ. ಹೀಗೆ ಕೊನೆಗೆ ಕುಂದಾಪುರ ಕಲಾಮಂದಿರದಲ್ಲಿ ಕಲಾಪ್ರದರ್ಶನ ಕಂಡಿದ್ದ ಕಾಸರಗೋಡಿನಿಂದ ಕುಂದಾಪುರದವರೆಗೆ ನಡೆದ ಜಾಥಾವು ಯಶಸ್ವಿಯಾಗಿದ್ದುನ್ನು ಕಾಣಬಹುದು. ಇದರ ಸಂಪೂರ್ಣ ಜವಾಬ್ದಾರಿಯನ್ನು 'ಸಮುದಾಯ' ಕಲಾ ವಿದ್ವಾಂಸರಾದ ಟಿ.ಸೊಲಬಕ್ಕನವರು, ಬಿ.ಆರ್.ಕೊರ್ತಿ ಹಾಗೂ ಇತರ ಕಲಾವಿದರು ಈ ಚಿತ್ರಕಲಾ ಜಾಥಾ ಹಾಗೂ ಕಲಾ ಪ್ರದರ್ಶನ ಜಾಥಾವನ್ನು 'ಸಮುದಾಯ' ಸಂಘಟನೆಯ ಮೂಲಕ ಯಶಸ್ವಿಗೊಳಿಸಿದರು.

ಸಪ್ಧರ್ ಹಶ್ಮಿ ಸ್ಮರಣಾರ್ಥ ಚಿತ್ರಕಲಾ ಜಾಥಾ-೧೯೮೯

ಬೀದಿನಾಟಕಗಳ ಪ್ರಖ್ಯಾತ ನಾಟಕಕಾರರ ರಂಗಕರ್ಮಿಯಾಗಿ ದೆಹಲಿಯ 'ಜನ ನಾಟ್ಯ ಮಂಚ್' ನಾಟಕ ಸಂಸ್ಥೆ ಸ್ಥಾಪಕರಾದ ಸಪ್ಧರ್ ಹಶ್ಮಿ ಅವರನ್ನು ಜನವರಿ ೧ ೧೯೮೯ರಲ್ಲಿ 'ಹಲ್ಲಾ ಬೋಲ್' ನಾಟಕ ಪ್ರದರ್ಶನವು ದೆಹಲಿ ಸಮೀಪದ ಕಾರ್ಖಾನೆ ಮುಂಭಾಗ ನಡೆಯುತ್ತಿರುವಾಗ ದೃಷ್ಕರ್ಮಿಗಳಿಂದ ಸಪ್ಧರ್ ಹಶ್ಮಿ ಹಾಗೂ ನಾಟಕದ ಇತರರ ಮೇಲೆ ಹಲ್ಲೆ ನಡೆದು ನಂತರ ಹಶ್ಮಿ ನಿಧನನಾದರು. ಈ ಕೊಲೆ ಪ್ರಕರಣ ಪ್ರಯುಕ್ತ ಇಡಿ ಭಾರತದ ರಂಗಕರ್ಮಿಗಳು ಈ ಕೊಲೆಯನ್ನು ಖಂಡಿಸಿ ಪ್ರತಿಭಟನೆಯನ್ನು ಕೈಗೊಂಡರು. ಜನತೆ ಬೇರೆ-ಬೇರೆ ರೂಪಕವಾಗಿ ಪ್ರತಿಕ್ರಿಯೆ ನೀಡಿದರು.

ಕರ್ನಾಟಕ 'ಸಮುದಾಯ' ಸಫ್ದರ್ ಹಶ್ಮಿ ಹೆಸರಿನಲ್ಲಿ ೧೯೮೯ ೧೨ ರಿಂದ ೧೬ ರವರೆಗೆ 'ಹಶ್ಮಿ ಸ್ಮಾರಕ ಸಮಗ್ರತಾ ಉತ್ಸವ'ವನ್ನು ನಡೆಸಿಕೊಟ್ಟಿತು. ಕರ್ನಾಟಕದ 'ಸಮುದಾಯ'ದ ವಿವಿಧ ಘಟಕಗಳಿಂದ ಹಶ್ಮಿ ಅವರ ನಾಟಕಗಳ ಕುರಿತು ನಾಲ್ಕು ದಿನಗಳ ಪ್ರದರ್ಶನ ವಿಚಾರ ಸಂಕಿರಣ ಹಾಗೂ ಕುವೆಂಪು ಖಂಡನಾ ಕಾರ್ಯಕ್ರಮಗಳು ನಡೆದವು.[೨೦] ಇದರ ಸ್ಮರಣಾರ್ಥವಾಗಿ ಕರಾವಳಿಯ 'ಸಮುದಾಯ' ಘಟಕಗಳು ಸೇರಿಕೊಂಡು ಕರಾವಳಿಯ ಉದ್ದಕ್ಕೂ ೧೯೮೯ ಡಿಸೆಂಬರ್ ೨೯ ರಿಂದ ಜನವರಿ ೫ ೧೯೯೦ ರವರೆಗೆ ಸಫ್ದರ್ ಹಶ್ಮಿ ಸ್ಮರಣಾರ್ಥಾ 'ಸಹಮತ ಚಿತ್ರಕಲಾ ಜಾಥಾ' ಯಶಸ್ವಿಯಾಗಲು ಟಿ.ಬಿ.ಸೊಲಬಕ್ಕನವರು ಹಾಗೂ ಬಿ.ಆರ್ ಕೊರ್ತಿ ಅವರು ಹಾಗೂ 'ಸಮುದಾಯ' ಮುಖಂಡರುಗಳ ಸೇರಿಕೊಂಡು ನಾಟಕ-ಚಿತ್ರಕಲಾ ಮುಖೇನ ವಿಚಾರ ಸಂಕಿರಣ ಮುಂತಾದವುಗಳನ್ನು ಯಶಸ್ವಿಯಾಗಿ ನೇರವೇರಿಸಿದರು.

'ವಿವೇಕ' ಕೋಮು ಸೌಹಾರ್ದತಾ ಜಾಥಾ-೧೯೯೦

'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಸಂಸ್ಕೃತಿಯ ಹೆಸರಿನಲ್ಲಿ ಕೋಮು ದ್ವೇಷ ಹರಡುವವರನ್ನು ನೇರವಾಗಿ ಪ್ರಶ್ನಿಸುವಂತ ಬೀದಿನಾಟಕಗಳನ್ನು ಕಾಣುತ್ತೇವೆ. ಅದರಲ್ಲಿ 'ಕೇಸರಿ ಬಿಳಿ ಹಸಿರು' ನಾಟಕ ಇದು ಬೋಳುವಾರ್ ಮಹಮದ್ ಕುಂಞ ಅವರದಾಗಿದ್ದು, ಭಾರತೀಯ ನಿಜ ಧರ್ಮದ ಬಗೆಗೆ ಜನರಿಗೆ ಮನವರಿಗೆ ಮಾಡಿಕೊಡುತ್ತಾರೆ. ಇದರ ಜೊತೆ ಸ್ವಾತಂತ್ರ್ಯ ಓಟ, ಟ್ರೈನ್ ಟು ಪಾಕಿಸ್ತಾನ, ಮುಂತಾದ ನಾಟಕಗಳಲ್ಲಿ ಧರ್ಮಧಾರಿತ ಮತಾಂಧವು ಹೇಗೆ ಧರ್ಮದ ಅಫೀಮಿನ ಮೂಲಭೂತವಾದಕ್ಕೆ ಹೇಗೆ ಬಲಿಯಾಗುತ್ತದೆ ಎಂಬುದು ತಿಳಿಯುತ್ತದೆ. ಅದು ಮುಸ್ಲಿಂ ಮೂಲಭೂತವಾದವಾಗಿರಬಹುದು ಅಥವಾ ಹಿಂದೂ ಮೂಲಭೂತವಾದವಾಗಿರಬಹುದು ಅಥವಾ ಕ್ರಿಶ್ಚಿಯನ್ ಮೂಲಭೂತವಾದವಾಗಿರಬಹುದು ಇದು ಮನುಷ್ಯ-ಮನುಷ್ಯರ ನಡುವೆ ಮಾನವೀಯತೆಯನ್ನು ನೋಡದೆ 'ಧಾರ್ಮಿಕ ಮೂಲಭೂತವಾದ'ದಿಂದ ನೋಡಿ ದ್ವೇಷದ ವಿಷಬೀಜಗಳನ್ನು ಜನರಲ್ಲಿ ಹೇಗೆ ಬಿತ್ತುತ್ತದೆ ಎನ್ನುವ ಸಂದೇಶವನ್ನು ಹೊತ್ತ ಈ ಜಾಥಾವು, ವಿವೇಕಾನಂದರು ಭಾರತೀಯ ಬಡಜನರ ಮೇಲೆ ಇದ್ದ ಅಂಶಗಳನ್ನು ಚಿತ್ರಿಸುವ ಕಲಾ ಜಾಥಾವಾಗಿತ್ತು. ಇದರಲ್ಲಿ ಪ್ರಮುಖವಾಗಿ ಹಿಂದೂ-ಮುಸ್ಲಿಂ ಐಕ್ಯತೆ ಹಾಗೂ ಸೌಹಾರ್ದ ರೀತಿಯಿಂದ ಬಾಳುವ ಅಂಶಗಳನ್ನು ಇಟ್ಟುಕೊಂಡು ಈ ಜಾಥಾ ನಡೆಯಿತು.

ಕರ್ನಾಟಕವು ಸರ್ವಜನಾಂಗದ ಶಾಂತಿಯ ತೋಟ ಎಲ್ಲಾ ಮತ ಧರ್ಮರವರು ಜಾತಿ ಸಮುದಾಯದವರು ಒಟ್ಟಾಗಿ ಬಾಳುವುದು ವಿವೇಕಾನಂದರ ಕನಸಾಗಿತ್ತು. ವಿವೇಕಾನಂದರ ಕನಸಿನ ಭಾರತವೆಂಬುದು 'ಪ್ರಭುತ್ವ ಭಾರತ'ವಲ್ಲ, ಅದು 'ಪ್ರಬುದ್ಧ ಭಾರತ' ಆಗಬೇಕಾದರೆ ಭಾರತ 'ವಿಜ್ಞಾನ ಭಾರತ'ವಾಗಬೇಕು. ಹಸಿದವನಿಗೆ ಅನ್ನ ಕೊಟ್ಟು ವಿದವೆಯರಿಗೆ ಕಣ್ಣೀರು ಹೊರಸಬೇಕು. ಎಲ್ಲಾರಿಗೂ ಆರೋಗ್ಯ ಸಿಗಬೇಕು.[೨೧] ಜೊತೆಗೆ ಸಮಾನತೆಯ ಬಾಳು ಸಮಾಜದಲ್ಲಿ ಸೃಷ್ಟಿಯಾಗಬೇಕು ಎಂಬ ಕ್ರಾಂತಿಕಾರಿ ವಿಚಾರಗಳ ಮೂಲಕ ೨೦ನೇ ಶತಮಾನದ ಆರಂಭದಲ್ಲೇ ಕನಸುಗಳನ್ನು

ಕಟ್ಟಿದ್ದನ್ನು ನಾವು ನೋಡಬಹುದು. ಈ ಬಗೆಯ ವಿಚಾರಗಳನ್ನು 'ಸಮುದಾಯ' ಈ ಜಾಥಾದ ಮುಖೇನ ಸಾಮಾನ್ಯ ಜನರಿಗೆ ಹೇಳುಲು ಮುಂದಾಗಿದ್ದು ಕಾಣುತ್ತೇವೆ. ಅದೇ ರೀತಿಯಲ್ಲಿ 'ಕೋಮುವಾದವು ಭಾರತವು ಮಹತ್ವದ ಪ್ರಶ್ನೆಗಳನ್ನು ಎತ್ತಿ ಹಿಡಿಯುವ ಬಹುತ್ವದ ರಾಷ್ಟ್ರವಾಗಿದ್ದು ಎಲ್ಲಾ ಧರ್ಮಗಳಿಗೆ ಸಮಾನ ರೀತಿಯ ಅವಕಾಶ ನೀಡಿದ ದೇಶವಾಗಿ ಕಾಣುತ್ತೇವೆ. ದೇಶ ಐಕ್ಯತೆ ಹಾಗೂ ಸಮಗ್ರತೆಯಿಂದ ಮುಂದುವರಿಯುತ್ತಿರುವುದು. ಭಾರತಕ್ಕೆ ಯಾವುದೇ ಧರ್ಮದ 'ಕೋಮುವಾದ' ಅಪಾಯಕಾರಿ ಎಂಬ ಅಂಶಗಳನ್ನು ಇಟ್ಟುಕೊಂಡು ಕೋಮುವಾದದ ವಿರುದ್ಧ ಕೋಮು ಸೌಹಾರ್ದಾ ಜಾಥಾವು ಮಹತ್ವವನ್ನು ಪಡೆದುಕೊಂಡಿತು.

ಭ್ರಷ್ಟಾಚಾರ ಮತ್ತು ಬೆಲೆಏರಿಕೆ ವಿರುದ್ಧ ವ್ಯಂಗ್ಯಚಿತ್ರ(ಕಾರ್ಟೂನ್)ಜಾಥಾ-೧೯೯೦ (ಬಿ.ಆರ್.ಅಂಬೇಡ್ಕರ್ ಅವರ ಶತಮಾನೋತ್ಸವದ ಅಂಗವಾಗಿ)

'ಸಮುದಾಯ' ಸಂಘಟನೆಯು ಸಮಾಜದಲ್ಲಿ ಯಾವುದೇ ಅಲಕ್ಷಿತ ಕಲೆಯನ್ನು ಮುನ್ನೆಲೆಗೆ ತರುವಂತಹ ಶಕ್ತಿ ಒಂದು ಸಾಂಸ್ಕೃತಿಕ ಸಂಘಟನೆಗೆ ಇದೆ ಎಂದು ಗುರುತಿಸಬಹುದು. ಏಕೆಂದರೆ ೧೯೯೦ರಲ್ಲಿ ವಿಶ್ವದಲ್ಲಿ ಹಾಗೂ ಭಾರತದಲ್ಲಿ ಎಲ್.ಪಿ.ಜಿ (ಜಾಗತೀಕರಣ ಉದಾರೀಕರಣ ಹಾಗೂ ಖಾಸಗೀಕರಣ) ಕರಿಛಾಯೆ ಚರ್ಚೆಗೆ ಒಳಗಾಗುತ್ತಿತ್ತು. ಪ್ರಧಾನಿ ಪಿ.ವಿ.ನರಸಿಂಹರಾವ್ ಹಾಗೂ ಆರ್ಥಿಕ ಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು ಆರ್ಥಿಕ ತಜ್ಞ ಎಂದು ಗುರುತಿಸಿಕೊಂಡಿದ್ದರು. ಇದರ ಪರವಾಗಿ ಕ್ರಾಂಗೆಸ್ ಇತರೆ ಬಲಪಂಥೀಯ ಪಕ್ಷಗಳು ಎಲ್.ಪಿ.ಜಿ ಪರ ಇದ್ದವು. ಇದನ್ನು ಗಮನಿಸಿದ ಎಡ ಪಕ್ಷಗಳು ಇದರ ವಿರುದ್ಧ ಚಳವಳಿಗೆ ಇಳಿದವು. ಇದರ ಭಾಗವಾಗಿ ಕರ್ನಾಟಕದಲ್ಲಿ 'ಸಮುದಾಯ' ಸಂಘಟನೆ ಬಿ.ಆರ್.ಅಂಬೇಡ್ಕರ್ ಅವರು ಹುಟ್ಟಿ ೧೦೦ ವರ್ಷ ಆದ ಕಾರಣವನ್ನು ಇಟ್ಟುಕೊಂಡು ಶತಮಾನೋತ್ಸವದ ಅಂಗವಾಗಿ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ ಕಾರ್ಟೂನ್ ಜಾಥಾ(ವ್ಯಂಗ್ಯ ಚಿತ್ರ)ಜಾಥಾವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಯಿತು.

ವ್ಯಂಗ್ಯಚಿತ್ರಗಳು ಸಮಾಜದ ಅಂಕುಡೊಂಕುಗಳನ್ನು ಅನಕ್ಷರಸ್ಥರಿಗೂ ಅರ್ಥವಾಗುವಂತೆ ಚಿತ್ರಿಸುವ ಚಿತ್ರಕಲೆಯಾಗಿದ್ದು, ಜಿಲ್ಲಾ ಮಟ್ಟದಲ್ಲಿ ಕೂಡ ಇದರ ಭಾಗವಾಗಿ ವಿಚಾರಸಂಕಿರಣಗಳು ವ್ಯಂಗ್ಯಚಿತ್ರ ಕಾರ್ಯಗಾರಗಳು ನಡೆದಿದ್ದು ಕಾಣುತ್ತೇವೆ.[೨೨] 'ಸಮುದಾಯ' ಜೊತೆಗೆ ಇದ್ದ ವ್ಯಂಗ್ಯಚಿತ್ರಗಾರರು ಪಿ.ಮಹಮದ್ ಹಾಗೂ ಸತೀಶ್ ಆಚಾರ್ಯ (ಮಿಡ್ ಡೇ ಪತ್ರಿಕೆ ಮುಂಬೈ), ಕೇಶವ ಸಹಿತ್ಲು ಕುಂದಾಪುರ, ಪ್ರಕಾಶ್ ಶೆಟ್ಟಿ ವಿಜಯ ಕರ್ನಾಟಕ, ದ ಹಿಂದೂ ಪ್ರತಿಕೆಯ ಪ್ರಖ್ಯಾತ ವ್ಯಂಗ್ಯ ಚಿತ್ರಗಾರ ಕಿಶೋರ್ ಮುಂತಾದವರ ವ್ಯಂಗ್ಯಚಿತ್ರ ಕಾರ್ಟೂನ್‌ನಗಳನ್ನು ಭ್ರಷ್ಟಾಚಾರ ಹಾಗೂ ಬೆಲೆ ಏರಿಕೆ ವಿರುದ್ಧ 'ಸಮುದಾಯ' ಸಂಘಟನೆಯು ಬೆಂಗಳೂರಿನಲ್ಲಿ ಜಾಥಾದ ಮೂಲಕ ಆರಂಭಿಸಿ ಇತರೆ 'ಸಮುದಾಯ' ಘಟಕಗಳಲ್ಲಿ ಕಾರ್ಟೂನ್‌ಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ರೂಪಿಸಿದ್ದ ಹಿರಿಮೆ 'ಸಮುದಾಯ' ಸಂಘಟನೆಗೆ ಸಲ್ಲುತ್ತದೆ.

'ಶಾಂತಿ ಸೌಹಾರ್ದ ನೆಮ್ಮದಿಗೆ 'ಸಮುದಾಯ'ದ ಬೆಳ್ಳಿ ಹಬ್ಬದ ಜಾಥಾ(ವಿಭಾಗವಾರು)–೨೦೦೨

೨೦೦೦ ಇಸವಿಯ ಪ್ರಾರಂಭಕ್ಕೆ 'ಸಮುದಾಯ' ಸಾಂಸ್ಕೃತಿಕ ಸಮನ್ವಯ ಸಮಿತಿಯಾಗಿ(ಕರ್ನಾಟಕ) ೨೫ ವರ್ಷದ 'ಬೆಳ್ಳಿ ಹಬ್ಬ'ದ ಆಚರಣೆಯಲ್ಲಿ ತೊಡಗಿತು. ಭಾರತದಲ್ಲಿ ತೊಂಬತ್ತರ ದಶಕದಲ್ಲಿ ಅಂದರೆ ೧೯೯೨ರಲ್ಲಿ ಡಿಸೆಂಬರ್ ೬ ರಂದು ಆರ್.ಎಸ್.ಎಸ್ ಕರಸೇವಕರಿಂದ 'ಬಾಬರಿ ಮಸೀದಿ ಧ್ವಂಸ'ದ ಅಂಗವಾಗಿ ಇಡೀ ಭಾರತದ ತುಂಬ ಹಿಂದೂ–ಮುಸ್ಲಿಂ ಕೋಮುಗಲಭೆಯಲ್ಲಿ ಭಾರತವು ನರಳಿತಲ್ಲದೇ ಅಲ್ಲದೇ ಸಾವಿರಾರು ಪ್ರಾಣಹಾನಿ ಕಂಡಿದ್ದ ಭಾರತವನ್ನು ಕೋಮುದಳ್ಳುರಿಯಿಂದ ರಕ್ಷಿಸಲು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಕ್ರಿಯಿಸಲು 'ಸಮುದಾಯ' ಸಂಘಟನೆ ಸಜ್ಜುಗೊಂಡಿತು. ಇದರ ಭಾಗವಾಗಿ 'ಸಮುದಾಯ' ೨೬ ಘಟಕಗಳಲ್ಲಿಯೂ 'ಸಮುದಾಯ' ಬೆಳ್ಳಿ ಹಬ್ಬದ ಅಂಗವಾಗಿ 'ಶಾಂತಿ ಸೌಹಾರ್ದ ನೆಮ್ಮದಿಗೆ ಕಾರ್ಯಕ್ರಮಗಳ ವಿಚಾರ ಸಂಕಿರಣಗಳನ್ನು ರೂಪಿಸಿದ್ದು ಚಾರಿತ್ರಿಕ ಘಟ್ಟ ಎಂದು ಗುರುತಿಸಲಾಗಿದೆ. ಏಕೆಂದರೆ ಇದರ ಜೊತೆಯಲೇ ೨೦೦೨ಕ್ಕೆ ಚಿಕ್ಕಮಂಗಳೂರಿನ ಬಾಬಬುಡನ್‌ಗಿರಿಯಲ್ಲಿ 'ದತ್ತ ಪೀಠದ ವಿವಾದ'ವನ್ನು ಹಿಂದೂ–ಮುಸ್ಲಿಂ ಗಲಭೆಗೆ ಕರ್ನಾಟಕದಲ್ಲಿ ನಾಂದಿಯಾಗಿತ್ತು. ಹಾಗೂ ಉತ್ತರ ಕರ್ನಾಟಕದ ಹುಬ್ಬಳ್ಳಿಯ ಈದ್ಗ ಮೈದಾನದಲ್ಲಿ ಕರಸೇವಕರು ಬಾವುಟ ಆರಿಸುವ ವಿವಾದವು ಕರ್ನಾಟಕದಲ್ಲಿ ಕೂಡ ಕೋಮುಗಲಭೆಗಳಿಗೆ ಮುಂದಾದಾಗ 'ಸಮುದಾಯ' ಹಾಗೂ ಇತರ ಎಡ–ಪ್ರಜಾಸತ್ತಾತ್ಮಕ ಸಂಘಟನೆಗಳು ಒಗ್ಗಾಟ್ಟಾಗಿ ಇದರ ವಿರುದ್ಧ ಕಾರ್ಯಕ್ರಮಗಳನ್ನು ರೂಪಿಸಿದರು.

ಚಿಕ್ಕಮಂಗಳೂರಿನಲ್ಲಿ ನಡೆದ ಸೌಹಾರ್ದ ಬಹಿರಂಗ ಸಭೆಗೆ ಆಂಧ್ರಪ್ರದೇಶದ ಕ್ರಾಂತಿಕಾರಿ 'ಗದ್ದಾರ್' ಅವರು ಭಾಗವಹಿಸಿ ಕ್ರಾಂತಿಗೀತೆಗಳ ಮೂಲಕ ಹಾಗೂ ಭಾಷಣದ ಮೂಲಕ ಕೋಮುಸೌಹಾರ್ದ ಕಾರ್ಯಕ್ರಮದಲ್ಲಿ ಈ ಕರ್ನಾಟಕದ ಪ್ರಗತಿಪರ ಸಾಹಿತಿಗಳು, ವಿಚಾರವಾದಿಗಳೂ, ರಂಗಭೂಮಿಯಲ್ಲಿ ದುಡಿದ ರಂಗಕರ್ಮಿಗಳು ಒಗ್ಗಟ್ಟಾಗಿ ಈ ಕಾರ್ಯಕ್ರಮ ನಡೆಸಿದರು. ಇದರ ಭಾಗವಾಗಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಕರ್ನಾಟಕದಲ್ಲಿ 'ಶಾಂತಿ ಸೌಹಾರ್ದ' ನೆಮ್ಮದಿಗೆ ಎಂಬ ಘೋಷಣೆಗಳೊಂದಿಗೆ ಬೆಂಗಳೂರು ಸೇರಿದಂತೆ[೨೨] ಮಂಗಳೂರು, ಮೈಸೂರು, ಧಾರವಾಡ ಹಾಗೂ ಗುಲ್ಬರ್ಗಾ, ಕೆ.ಜಿ.ಎಫ್(ಕೋಲಾರ), ಹರಪನಹಳ್ಳಿ(ದಾವಣೆಗೆರೆ), ಕುಂದಾಪುರ ಮುಂತಾದ ಸಮುದಾಯ ಘಟಕಗಳಲ್ಲಿ 'ಶಾಂತಿ ಸೌಹಾರ್ದ ನೆಮ್ಮದಿಗೆ' ಎಂಬ ವಿಷಯವಾರು ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದ್ದು ನೋಡಬಹುದು. ಈ ನಾಟಕ, ವಿಚಾರಗೋಷ್ಠಿಗಳು, ಚಿತ್ರ ಸಮುದಾಯ, ಜಾಥಾಗಳು, ಕಾರ್ಯಗಾರಗಳು ಹಾಗು ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿ ಕರ್ನಾಟಕದಲ್ಲಿ ಕೋಮುದ್ವೇಷವನ್ನು ದಮನ ಮಾಡುವಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯೂ ಪ್ರಮುಖ ಪಾತ್ರ ವಹಿಸಿದೆ.

ಹೆಣ್ಣು ಭ್ರೂಣ ಹತ್ಯೆಗಳ ವಿರುದ್ಧ ಪ್ರಚಾರ ಆಂದೋಲನ ಜಾಥಾ-೨೦೦೫

ಭಾರತವು ಪುರುಷ ಪ್ರಧಾನವುಳ್ಳ ದೇಶವಾಗಿ ಪರಿವರ್ತನೆಗೊಳ್ಳಲು ಮನುಸ್ಮೃತಿಯ ಚಾತುವರ್ಣ ಪದ್ಧತಿಯೇ ಕಾರಣ ಎಂಬುದು ಚರಿತ್ರೆಯಿಂದ ತಿಳಿಯುತ್ತದೆ. ಕ್ರಿ.ಪೂ.೨೫೦೦ ವರ್ಷಗಳ ಹಿಂದೆಯೇ ಹರಪ್ಪ ಸಂಸ್ಕೃತಿಯ ನಾಗರೀಕತೆಯಲ್ಲಿ ಸಮಾಜವು 'ಸಮಸಮಾಜ'ದ ಪರಿಕಲ್ಪನೆವುಳ್ಳದ್ದು ಎಂದು ಇತಿಹಾಸಕಾರರಾದ ಆರ್.ಎಸ್.ಶರ್ಮ ಅವರ ಸಂಶೋಧನ ಕೃತಿಯಾದ ಪ್ರಾಚೀನ ಭಾರತ ಚರಿತ್ರೆ ಅಧ್ಯಯನದಲ್ಲಿ ತಿಳಿಸಲಾಗಿದೆ. ಏಕೆಂದರೆ ಆರಂಭದಲ್ಲಿ ಹರಪ್ಪ ನಾಗರೀಕತೆಯಲ್ಲಿ ಮಾತೃಪ್ರಧಾನವುಳ್ಳ ನಾಗರೀಕತೆಯನ್ನು ಹೊಂದಿತ್ತು. ನಂತರ ಕ್ರಿ.ಪೂ.೧೩೦೦ ರವರೆಗೆ ಆರ್ಯರ ಆಕ್ರಮಣದಿಂದ ಹರಪ್ಪ ಸಂಸ್ಕೃತಿಯು ನಾಶವಾಯಿತು. ನಂತರ ಗಣಗಳಾಗಿ, ಗಣಗಳು ಒಟ್ಟಾಗಿ, ರಾಜ್ಯ-ಸಾಮ್ರಾಜ್ಯವನ್ನು ಮೌರ್ಯರು ಕಟ್ಟಿದರು. ಈ ಸಾಮ್ರಾಜ್ಯಗಳ ಕಟ್ಟುವ ಚರಿತ್ರೆಯ ಸಂಘರ್ಷದಲ್ಲಿಯೇ ಭಾರತವು ಚಾತುವರ್ಣ ಪದ್ಧತಿ ಕಟ್ಟುಪಾಡುಗಳಲ್ಲಿ ಗಟ್ಟಿಯಾಗಿ ದಲಿತ-ಶೂದ್ರ ಮಹಿಳೆಯನ್ನು ಹೀನಾಯವಾಗಿ ಶೋಷಣೆಗೆ ಒಳಪಡಿಸಲಾಯಿತು.[೨೪] ಕ್ರಿ.ಪೂ.೨೩೦೦ ವರ್ಷಗಳ ಕಾಲ ಪರೋಕ್ಷವಾಗಿ ಆಳ್ವಿಕೆ ಮಾಡಿದ ಬ್ರಾಹ್ಮಣಶಾಹಿತ್ವ ಎಂದರೆ ತಪ್ಪಾಗಲಾರದು. ಏಕೆಂದರೆ ಸಮಾಜದಲ್ಲಿ, ಮನೆಯಲ್ಲಿ ಹೆಣ್ಣು ಎರಡನೇ ಅಥವಾ ಕೊನೆಯ ದರ್ಜೆಯವಳು ಎಂದು ಗುರುತಿಸಿ ಮಹಿಳೆಯ ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷನು ಹೇಳುವ ಆಗೆ ಹೆಣ್ಣು ಜೀವನ ಕಟ್ಟಿಕೊಳ್ಳಬೇಕು.

ಕೊನೆಪಕ್ಷ ಹೆಣ್ಣು ಮಗುವನ್ನು ಹೇರಲು, ಯಾವ ಮಗು ಎಂದು ತಾಯಿಯ ಹೊಟ್ಟೆಯಲ್ಲಿ ಇರುವಾಗಲೇ ಗುರುತಿಸಿ(ಕಾನೂನು ಬಾಹಿರವಾಗಿ)ಹೆಣ್ಣು ಮಗು ಎಂದು ತಿಳಿದ ತಕ್ಷಣವೇ 'ಹೆಣ್ಣು ಭ್ರೂಣ ಹತ್ಯೆ'ಗಳ ಭಾರತದ್ಯಾದಂತ ವಿಚಿತ್ರವಾಗಿ ನಡೆಯುತ್ತಿತ್ತು. ಇದರ ವಿರುದ್ಧ ಅಖಿಲ ಭಾರತ ಮಹಿಳಾ ಸಂಘಟನೆ(AIDWF) ಸಂಘಟನೆ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಜನವಾದಿ ಮಹಿಳಾ ಸಂಘಟನೆ(JMS) ಸಹಯೋಗದಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಹೆಣ್ಣು ಭ್ರೂಣ ಹತ್ಯೆಗಳ ವಿರುದ್ಧ ಪ್ರಚಾರ ಆಂದೋಲನ ಜಾಥಾ ಬೆಂಗಳೂರಿನಲ್ಲಿ ಪ್ರಾರಂಭಿಸಿ ಕರ್ನಾಟಕದ ವಿವಿಧ 'ಸಮುದಾಯ' ಘಟಕಗಳಲ್ಲಿ ಈ ಕಾರ್ಯಕ್ರಮಗಳು ರೂಪಿಸಲು ಮುಂದಾಗಿದ್ದು ನೋಡುತ್ತೇವೆ. ಹೆಣ್ಣು ಭ್ರೂಣ ಹತ್ಯೆಗೆ ಪುರುಷರು ಹೇಗೆ ಕಾರಣಕರ್ತರೋ ಅದೇ ರೀತಿಯಲ್ಲಿ ಮಹಿಳೆಯಲ್ಲಿ ಇರುವ ಪುರುಷ ಪ್ರಾದಾನ್ಯತೆ ವಿರುದ್ಧವೂ ಮಹಿಳೆಯರು ಸಂಘಟಿತ ಹೋರಾಟವನ್ನು ರೂಪಿಸಿ ಬೆಂಗಳೂರಿನಲ್ಲಿ ಇದ್ದ ಅಕ್ರಮ ಹೆಣ್ಣು ಭ್ರೂಣ ಹತ್ಯೆಗಳ ಸ್ಕ್ಯಾನಿಂಗ್ ಕೇಂದ್ರಗಳು ಹಾಗೂ ಆಸ್ಪತ್ರೆಗಳ ವಿರುದ್ಧ ಪಟ್ಟಿಯನ್ನು ತಯಾರಿಸಿ ಪ್ರಚಾರ ಆಂದೋಲನದಲ್ಲಿ ಕೆ.ಎಸ್.ವಿಮಲಾ, ಲಕ್ಷ್ಮೀ, ಗೌರಮ್ಮ, ಗೀತಾ, ನೀಲಾ.ಕೆ, ಮಿನಾಕ್ಷಿ ಬಾಳಿ 'ಸಮುದಾಯ'ದ ಇತರ ಮಹಿಳಾ ಸದಸ್ಯರು ಹಾಗೂ 'ಸಮುದಾಯ' ಎಲ್ಲಾ ಸಂಘಟಕರು ಈ ಹೆಣ್ಣು ಭ್ರೂಣ ಹತ್ಯೆ ವಿರುದ್ಧ ರಾಜ್ಯ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದು ಒಂದು ಚಾರಿತ್ರಿಕ ಆಂದೋಲನವೆಂದು ಗುರುತಿಸಬಹುದಾಗಿದೆ.

ಹಸಿವು ಮುಕ್ತ ಕರ್ನಾಟಕಕ್ಕಾಗಿ 'ಸಮುದಾಯ'ದ ಜಾಥಾ-೨೦೦೬

ಭಾರತವು ಹಸಿವಿನಿಂದ ಸಾವುಗಳನ್ನು ಕಂಡ ದೇಶ, ಈಗಲೂ ಕೂಡ ಹಸಿವು ಭಾರತ ಹಾಗೂ ಕರ್ನಾಟಕದಿಂದ ಪೂರ್ತಿಯಾಗಿ ನಾಶವಾಗಿಲ್ಲ ಕಾರಣ ಆಳುವ ವರ್ಗಗಳ ಬಡ ವಿರೋಧಿ ನೀತಿಗಳು ಎಂದರೆ ತಪ್ಪಗಲಾರದು. ಹಸಿವಿಗೆ ನಾನಾ ಕಾರಣಗಳನ್ನು ನೋಡಬಹುದು ಅವುಗಳು ಈ ಕೆಳಗಿನಂತಿವೆ.

೧. ಬಡತನ

೨. ಭೂಮಿ ಇಲ್ಲದೆ ಇರುವುದು

೩. ಆರೋಗ್ಯದ ಸೌಲಭ್ಯಗಳು ಇಲ್ಲದಿರುವುದು

೪. ಸರ್ಕಾರಿ ಸೌಲಭ್ಯಗಳು ಬಡವರಿಗೆ ತಲಪದೇ ಇರುವುದು

೫. ಜಮೀನ್ದಾರರ ಶೋಷಣೆ

೬. ಸರ್ಕಾರವು ನೀಡುವ ಪೌಷ್ಟಿಕಾಂಶ ಆಹಾರದ ಹಂಚಿಕೆಯಲ್ಲಿನ ವ್ಯತ್ಯಾಸಗಳು

ಸ್ವಾತಂತ್ರ್ಯ ಬಂದು ೨೦೦೫ ಕ್ಕೆ ೯೨ ವರ್ಷಗಳು ಆದರೂ ಕೂಡ ಭಾರತ ಹಾಗೂ ಕರ್ನಾಟಕದಲ್ಲಿ ಹಸಿವಿನಿಂದ ನೀಗಿಕೊಂಡ ಪ್ರಕರಣಗಳು ಕಾಣುತ್ತಿದ್ದು ಈಗಲೂ ಕೂಡ ರಾಯಚೂರಿನ ದೇವದುರ್ಗದಲ್ಲಿ ಆಹಾರದ ಅಪೌಷ್ಟಿಕತೆ ಉಂಟಾಗಿ ಹಲವಾರು ಮಕ್ಕಳು ಸೇರಿದಂತೆ ರಕ್ತಹೀನತೆಯ ತಾಯಂದಿರ ಸಾವುಗಳು ಹೆಚ್ಚಾಗಿರುವುದು ಕಾಣುತ್ತೇವೆ. ಕೆಲಸವಿಲ್ಲದೆ ಸಾವಿರಾರು ಜನರು ವಿವಿಧ ಪಟ್ಟಣಗಳಿಗೆ ಕಟುಂಬ ಸಮೇತರಾಗಿ ವಲಸೆ ಹೋಗುವುದು ಸಾಮಾನ್ಯವಾಗಿದೆ. ಇದೆಲ್ಲವು ಹಸಿವು ಮುಕ್ತ ಕರ್ನಾಟಕ್ಕಾಗಿ 'ಸಮುದಾಯ' ಜಾಥಾವು ಬೀದರ್ ನಿಂದ ಧಾರವಾಡದವರೆಗೂ ಹಾಗೂ ಚಿಕ್ಕಬಳ್ಳಾಪುರದಿಂದ ಧಾರವಾಡದವರೆಗೂ ಎರಡು ಜಾಥಾಗಳನ್ನು ಪ್ರಾರಂಭಿಸಿ ಎಲ್ಲರಿಗೂ ಒಂದೇ ರೀತಿಯ 'ರೇಷನ್ ಕಾರ್ಡ್ ವ್ಯವಸ್ಥೆ' ನೀಡಬೇಕು ಎಂದು ಆಂದೋಲನ ರೂಪಿಸಿದ್ದು 'ಸಮುದಾಯ' ಸಂಘಟನೆಯ ರಂಗ ಚಳವಳಿಗೆ ಸಲ್ಲುತ್ತದೆ.[೨೫] ಏಕೆಂದರೆ ವಿಶ್ವಸಂಸ್ಥೆ ಮುಂದೆ ಭಾರತವು ಹಸಿವಿನಿಂದ ಯಾರು ಸಾಯುವುದಿಲ್ಲ ಎಂಬ ಅಂಕಿ ಅಂಶಗಳನ್ನು ನೀಡಲು ತೊಂದರೆಯಾಗಿದ್ದು, ಸಾರ್ವಜನಿಕ ರೇಷನ್ ವಿತರಣೆ ವ್ಯವಸ್ಥೆಯನ್ನು ಕಡಿತಗೊಳಿಸುವ ಹುನ್ನಾರ ಭಾರತದ ಹಾಗೂ ಇವರಿಗೆ ಪೂರಕವಾಗಿ ಕಾನೂನು ರೂಪಿಸುವ ಜಾಗತಿಕ ಬಂಡವಾಳಶಾಹಿ ದೇಶಗಳ ಶೋಷಣೆ ಹಾಗೂ ಭಾರತದ ಬಂಡವಾಳ ಶಾಹಿಗಳು ರೂಪಿಸಿದ ದೊಡ್ಡ ದೊಡ್ಡ 'ಬಿಗ್ ಬಜಾರ್' ಮಾಲ್‌ಗಳಲ್ಲಿ ಆಹಾರ ಪದಾರ್ಥಗಳು ಹಣ ನೀಡಿ ಕೊಂಡುಕೊಳ್ಳಬೇಕೆಂಬ ಚಿಂತನೆ ಸರ್ಕಾರಗಳದ್ದು. ಜೊತೆಗೆ ಸರ್ಕಾರವೇ ಕಡಿಮೆ ಅಥವಾ ಉಚಿತವಾಗಿ ಆಹಾರ ವಸ್ತುಗಳನ್ನು ನೀಡುವುದು ಬಡಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಾರೆ ಎಂಬ ಆರೋಪದೊಂದಿಗೆ ಯಾವತ್ತು ಹಸಿವುವಿನ ನೋವನ್ನು ಉಣ್ಣದ ಜನರು ಹಾಗೂ ಸರ್ಕಾರಗಳ ಹೇಳುವುದು ಕಾಣುತ್ತೇವೆ. ಇದರ ವಿರುದ್ಧ ಸಮುದಾಯ

ಸಾಂಸ್ಕೃತಿಕ ಸಂಘಟನೆಯ ಎರಡು ವ್ಯಾನ್‌ಗಳ ಮೂಲಕ ಜಾಥಾವನ್ನು ಕೈಗೊಂಡಿದ್ದು ಜನರಲ್ಲಿ ಜಾಗೃತಿ ಮೂಡಿಸಿದ್ದು ಕಾಣುತ್ತೇವೆ.[೨೬] ಇದರ ಭಾಗವಾಗಿ ರೇಷನ್ ವ್ಯವಸ್ಥೆಯಲ್ಲಿ ಅಗತ್ಯ ೧೪ ಆಹಾರ ಪದಾರ್ಥಗಳನ್ನು ನೀಡಬೇಕು ಎಂದು ಕಾನೂನು ಇದ್ದರೂ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ತ್ರಿಪುರ ರಾಜ್ಯಗಳು ಮಾತ್ರ ಹೊಂದಿವೆ. ಕರ್ನಾಟಕದಲ್ಲಿ ೪-೫ ಪದಾರ್ಥಗಳು ಮಾತ್ರ ಸಾರ್ವಜನಿಕ ರೇಷನ್ ವ್ಯವಸ್ಥೆ ನೀಡುತ್ತಾರೆ.

'ಸಮುದಾಯ'ದ ಈ ಜಾಥಾದಲ್ಲಿ ಇದನ್ನು ೧೪ ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ನೀಡಬೇಕೆಂದು ಒತ್ತಾಯಿಸಿದ ಭಾಗವಾಗಿಯೇ ಉಚಿತ ಅಕ್ಕಿ, ಇಂದಿರಾ ಕ್ಯಾಂಟೀನ್ ಮುಂತಾದ ಯೋಜನೆಗಳನ್ನು ತಂದರು ಕೂಡ, ಕರ್ನಾಟಕದಲ್ಲಿ ಹಸಿವಿನಿಂದ ಈಗಲೂ ಸಾವುಗಳಾಗುತ್ತಿರುವುದು ಕಾಣುತ್ತೇವೆ. ಇದಕ್ಕೆ ಪರ್ಯಾಯ ಕನಿಷ್ಟ ಕೂಲಿ ಬೆಲೆಯನ್ನು ಏರಿಕೆಗೆ ತಕ್ಕಂತೆ ಹೆಚ್ಚಿಸುವುದು ಹಾಗೂ ಕೇರಳದ ರೀತಿಯಲ್ಲಿ ೧೪ ವಸ್ತುಗಳು ಹಾಗೂ ಹಬ್ಬಗಳಲ್ಲಿ ವಿಶೇಷ ಆಹಾರ ಪದಾರ್ಥಗಳನ್ನು ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದು ಈ ಎರಡು ಆಂದೋಲನಗಳ ಅಗತ್ಯವಿದೆ. 'ಸಮುದಾಯ' ಈ ಮೇಲಿನ ಎಲ್ಲಾ ಜಾಥಾಗಳು ಕೂಡ ಸಮಾಜದಲ್ಲಿ ದುಡಿಯುವ ವರ್ಗದ ಪರವಾದ ನಡೆದ ಜಾಥಗಳಾಗಿದ್ದು. ಈ ಜಾಥಾಗೂ ಚಳವಳಿಗೆ ಬೆಂಬಲ ಮತ್ತು ಸ್ಫೂರ್ತಿ ನೀಡಿದೆ. ಸಾಮಾನ್ಯ ಜನರಲ್ಲಿ ಜಾಗೃತಿ ಮತ್ತು ಪ್ರಶ್ನೆ ಮಾಡುವ ಪದ್ಧತಿ ಮತ್ತು ಜೀವನ ನಡೆಸುವ ಅನುಭವಗಳನ್ನು ಪಡೆದಿದ್ದಾರೆ. ಹೀಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯಿಂದ ನೂರಾರು ಜಾಥಾಗಳು ರಾಜ್ಯ-ಜಿಲ್ಲಾ-ತಾಲ್ಲೂಕು ಮಟ್ಟದಲ್ಲಿ ಹುಟ್ಟಿಕೊಂಡು ಕನ್ನಡ ಸಾಹಿತ್ಯ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ನೀಡಿದೆ ಎಂದರೆ ತಪ್ಪಗಲಾರದು. ಅಲ್ಲದೇ ಅನೇಕ 'ಸಮುದಾಯ'ದ ಜಾಥಾಗಳ ವಿಶ್ಲೇಷಣೆಯನ್ನು ನೀಡಲಾಗಿದೆ. ಇದನ್ನು ಕೆಲವು ಪ್ರಮುಖ ಜಾಥಾಗಳ ಪಟ್ಟಿಯನ್ನು ಈ ಕೆಳಗಿನಂತೆ ನೀಡಲಾಗಿದೆ.

೧. ಭಾರತ ಜನ ವಿಜ್ಞಾನ ಜಾಥಾ-೧೯೮೫

೨. ಭಾರತ ಜ್ಞಾನ ಮತ್ತು ವಿಜ್ಞಾನ ಜಾಥಾ-೧೯೯೦

೩. ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ-೧೯೯೧

೪. ಸಾಕ್ಷರತಾ ಆಂದೋಲನ ಜಾಥಾ-೧೯೯೨

೫. ಸಮಗ್ರತೆಗಾಗಿ 'ಸಮುದಾಯ' ಸಾಂಸ್ಕೃತಿಕ ಜಾಥಾ-೧೯೯೩

೬. ಕೃಷಿ ಕೂಲಿಕಾರರ ಹೋರಾಟಕ್ಕೆ ಬೆಂಬಲವಾಗಿ ಹಾನಗಲ್ ಕಲಾ ಜಾಥಾ-೧೯೯೭

೭. ಜನಾಧಿಕಾರ ಜನಾಂದೋಲನ ಕಲಾ ಜಾಥಾ-೨೦೦೩

೮. ಜಲ ನಿರ್ಮಲ ಜನಾಂದೋಲನ ಜನ ಸಂಸ್ಕೃತಿ ಜಾಥಾ-೨೦೦೪

೯. ರೈತರ ಪರ 'ಸಮುದಾಯ' ಜಾಥಾ-೨೦೦೯

೧೦. ನಾಡಿನ ನೆಲ ಜಲ ಉಳಿಸಲು ಲೇಖಕರು ಮತ್ತು ಕಲಾವಿದರ ಜಾಥಾ-೨೦೧೧

೧೧. ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ 'ಸಮುದಾಯ' ಜಾಥಾ-೨೦೧೧

ಹೀಗೆ ಮುಂತಾದ ಜಾಥಾಗಳು ಕರ್ನಾಟಕದ ಹಳ್ಳಿ ಹಳ್ಳಿಗಳಿಗೂ ಜನ ಸಮುದಾಯವನ್ನು ಮುಟ್ಟುವ ಕಾರ್ಯವನ್ನು ಮಾಡಿದ್ದು 'ಸಮುದಾಯ'ದ ರಂಗ ಚಳವಳಿಯ ಚಾರಿತ್ರಿಕ ಅಂಶವಾಗಿದೆ.

೫.೨. ಜನರೆಡೆಗೆ ಬೀದಿನಾಟಕಗಳು ಹಾಗೂ ತೃತೀಯ ರಂಗಭೂಮಿಯ ಅಗತ್ಯತೆ

'ಸಮುದಾಯ' ಹುಟ್ಟಿದ್ದೇ ಜನರೆಡೆಗೆ ಬೀದಿನಾಟಕಗಳನ್ನು ಕೊಂಡೊಯ್ಯುವ ಉದ್ದೇಶದಿಂದ. ಏಕೆಂದರೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಪ್ರತಿಭಟನೆ ಮಾಡುವ ಹಕ್ಕನ್ನು ಮೊಟಕುಗೊಳಿಸುವ ಸರ್ಕಾರಗಳ ವಿರುದ್ಧ ಸಾಂಸ್ಕೃತಿಕವಾಗಿ ಪ್ರತಿಕ್ರಿಯಿಸಲು ಬೀದಿ ನಾಟಕವು ಎಪ್ಪತ್ತರ ದಶಕದಲ್ಲಿ ಹೆಚ್ಚು ಪ್ರಬುದ್ಧಮಾನಕ್ಕೆ ಬಂದಿತು. ಈ ದಶಕವನ್ನು ಚಳವಳಿಗಳ ದಶಕ ಹಾಗೂ ಬಹುತೇಕ ಪ್ರಗತಿಪರ ಎಲ್ಲಾ ಸಂಘಟನೆಗಳು ಹೆಚ್ಚು ಆರಂಭವಾದ ದಶಕ ಎಂತಲೂ ಕರೆಯುತ್ತೇವೆ. ಎಪ್ಪತ್ತರ ದಶಕದ ಆರಂಭದ ಭಾಗದಲ್ಲಿ ಚಿತ್ರ ತಂಡವು 'ಕಟ್ಟು' ಎಂಬ ಬೀದಿನಾಟಕದ ಮೂಲಕ ಬೀದಿ ರಂಗಭೂಮಿ ಪ್ರಾರಂಭವಾಯಿತು. ಬೀದಿ ನಾಟಕಕ್ಕೆ ಹೊಸ ರಾಜಕಾರಣ ಸೈದ್ಧಾಂತಿಕ ಬದ್ಧತೆ ನೀಡಿದ್ದ 'ಸಮುದಾಯ'ದ ಬೆಲ್ಚಿ ನಾಟಕದಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಕರ್ನಾಟಕದಲ್ಲಿ ಗುರುತಿಸುವುದು ಈ ಮೂಲಕ ಬೀದಿನಾಟಕಗಳ ಹವ್ಯಾಸಿ ರಂಗ ತಂಡಗಳು ಹೆಚ್ಚಾದವು.

ಕರ್ನಾಟಕದಲ್ಲಿ ಇಪ್ಟಾ (ಇಂಡಿಯನ್ ಪೀಪಲ್ಸ್ ಥೀಯೆಟರ್ ಅಶೋಷಿಯನ್ಸ್) ತಂಡವು ಕುಂಟಿತಗೊಂಡ ಸಮಯದಲ್ಲಿ ಎಡ-ಪ್ರಜಾಪ್ರಭುತ್ವ, ಸಮಾಜವಾದಿಗಳೆಲ್ಲರು ಒಟ್ಟು ಗೂಡಿ 'ಸಮುದಾಯ' ಸಂಘಟನೆಯನ್ನು ಕಟ್ಟಿದ್ದು ಚಾರಿತ್ರಿಕ ಅಂಶವೆಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಲಾಗಿದೆ. ಹೀಗೆ 'ಸಮುದಾಯ'ದ ಬಹುತೇಕ ನಾಟಕಗಳು ಜನರು ರಂಗ ಮಂದಿರಕ್ಕೆ ಬರುವ ಬದಲು 'ಸಮುದಾಯ' ಸಂಘಟನೆ ಜನರೆಡೆಗೆ ಹೋಗಿ ಬೀದಿನಾಟಕ ಪ್ರದರ್ಶಿಸಿ ಜನ ಜಾಗೃತಿ, ಹೋರಾಟದ ಮನೋಭಾವ, ಪ್ರಶ್ನಿಸುವ ಮನೋಭಾವ ಹಾಗೂ ಪ್ರದರ್ಶನ ನೋಡಿದ ಜನರು 'ಸಮುದಾಯ' ಜೊತೆಯಾಗಿ ಕಾರ್ಯಪ್ರವೃತ್ತರಾದವರು ಸಾವಿರಾರು ಜನ ಕಲಾವಿದರು ಎಂದರೆ ತಪ್ಪಗಲಾರದು. ಏಕೆಂದರೆ 'ಸಮುದಾಯ' ಸಾಂಸ್ಕೃತಿಕವಾಗಿ ಎಲ್ಲಾ ವಿಭಾಗಗಳ ಮೂಲಕ ಜನರೆಡೆಗೆ ಪ್ರವೇಶಿಸಿದ್ದು ಬಹುಮುಖ್ಯವಾದ ಚಾರಿತ್ರಿಕ ಸನ್ನಿವೇಶವಾಗಿದೆ.[೨೭] ಅದು ಬೀದಿನಾಟಕಗಳ ಮೂಲಕ, ರಂಗ ನಾಟಕಗಳ ಮೂಲಕ, ವಿಚಾರ ಸಂಕಿರಣಗಳ ಮೂಲಕ, ಚಿತ್ರಕಲೆಯ ಮೂಲಕ, ಕಾವ್ಯದ ಮೂಲಕ, ಕ್ರಾಂತಿಗೀತೆಗಳ ಹಾಡುಗಳ ಮೂಲಕ, ವ್ಯಂಗ್ಯ ಚಿತ್ರಗಳ ಮೂಲಕ, ವಿಜ್ಞಾನದ ಮೂಲಕ, ನಾಟಕೋತ್ಸವಗಳ ಮೂಲಕ, ಕಾರ್ಯಗಾರಗಳ ಮೂಲಕ, ಚಿತ್ರ ಸಮುದಾಯದ ಮೂಲಕ, ಕಥೆ ವಾಚನದ ಮೂಲಕ, ಸಂಗೀತೋತ್ಸವದ ಮೂಲಕ, 'ಸಮುದಾಯ' ಕಿರುಹೊತ್ತಿಗೆಗಳ

ಮೂಲಕ, ಕರಪತ್ರಗಳ ಮೂಲಕ, ಪೋಸ್ಟರ್‌ಗಳ ಮೂಲಕ, ರಂಗ ತರಬೇತಿ ಶಿಬಿರಗಳ ಮೂಲಕ, 'ಸಮುದಾಯ'ದ ಸಮ್ಮೇಳನಗಳ ಮೂಲಕ, 'ಸಮುದಾಯ'ದ ಸಮಾವೇಶಗಳ ಮೂಲಕ, 'ಸಮುದಾಯ' ಸಾಹಿತ್ಯ ಚರಿತ್ರೆಯ ಮೂಲಕ, ಹೀಗೆ 'ಸಮುದಾಯ' ಸಾಂಸ್ಕೃತಿಕ ಸಮನ್ವಯ ಸಂಘಟನೆ(ಕರ್ನಾಟಕ ರಾಜ್ಯ ಸಮಿತಿ) ರಾಜ್ಯ-ದೇಶ- ವಿಶ್ವದ ಕೆಲವು ಪ್ರಮುಖ ದೇಶಗಳಿಗೂ ಪ್ರವೇಶ ಪಡೆದಿದ್ದ ಏಕೈಕ ಸಂಘಟನೆ ಎಂದರೆ ಅದು 'ಸಮುದಾಯ' ಸಂಘಟನೆ ಎಂದರೆ ತಪ್ಪಾಗಲಾರದು.

'ಸಮುದಾಯ' ಸಂಘಟನೆ ಕರ್ನಾಟಕ ಹಾಗೂ ದೇಶಾದ್ಯಾಂತ ಗುರುತಿಸಿಗೊಂಡಿದ್ದು ಬೀದಿ ರಂಗಭೂಮಿಯ ಐತಿಹಾಸಿಕ ಜಾಥಾಗಳ ಮೂಲಕ, ಬೀದಿನಾಟಕವನ್ನು ಪಾರಂಪರಿಕ ರಂಗಭೂಮಿಯ ಜೊತೆ ಸಮೀಕರಿಸುವುದನ್ನು ಸಪ್ಧರ್ ಹಶ್ಮಿ ಒಪ್ಪುವುದಿಲ್ಲ. ಏಕೆಂದರೆ ಹಶ್ಮಿ ಸ್ಪಷ್ಟವಾಗಿ ತಿಳಿಸುವಂತೆ: "ಬೀದಿ ರಂಗಭೂಮಿಯು ಪ್ರತಿಭಟನಾತ್ಮಕ ರಾಜಕೀಯ ರಂಗಭೂಮಿ ಇದರ ಉದ್ದೇಶ ಜನರನ್ನು ಸಂಘಟಿಸಿ ಅವರನ್ನು ಹೋರಾಡುವ ಸಂಘಟನೆಗಳ ಜೊತೆ ಒಗ್ಗೂಡಿಸುವುದು. ಈ ಅರ್ಥದಲ್ಲಿ ಇದರ ಸೈದ್ಧಾಂತಿಕ ಪರಂಪರೆ ನೂರೈವತ್ತು ವರ್ಷಗಳಷ್ಟು ಹಳೆಯದು. ಇದರ ಜಾಥಾ ಚರಿತ್ರೆ ಪರಂಪರೆ ಎಪ್ಪತ್ತು ಎಂಬತ್ತು ವರ್ಷಗಳಿಗಿಂತಲೂ ಹಿಂದಕ್ಕೆ ಹೋಗಲಾರದು. ಹಾಗಾಗಿ ಪಾರಂಪರಿಕ ಬೀದಿ ರಂಗಭೂಮಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.[೨೮] ಬೀದಿ ರಂಗಭೂಮಿ ಚಾರಿತ್ರಿಕ ಅನಿವಾರ್ಯತೆಯ ಫಲವಾಗಿ ಹುಟ್ಟಿಕೊಂಡ ಶ್ರಮಿಕ-ಶೋಷಿತ ವರ್ಗಗಳಿಗೆ ಧ್ವನಿಯಾಯಿತು. ಬೀದಿನಾಟಕವು ಪಸ್ಕೇಟರ್ ಮತ್ತು ಬ್ರೆಕ್ಟ್‌ರ ರಂಗಪರಂಪರೆಯಿಂದ ಪ್ರಭಾವಿತವಾದಷ್ಟು ಭಾರತದ ಪಾರಂಪರಿಕ ರಂಗಭೂಮಿಯಿಂದ ಪ್ರಭಾವಿತವಾಗಿಲಿಲ್ಲ ಎಂದು ಸಪ್ಧರ್ ಹಶ್ಮಿ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ಭಾರತದ ಪ್ರಮುಖ ಬೀದಿ ರಂಗಭೂಮಿಯ ಸಂಘಟನೆಗಳು'

೧. ಜನ ನಾಟ್ಯ ಮಂಚ್-ನವದೆಹಲಿ

೨. 'ಸಮುದಾಯ'-ಕರ್ನಾಟಕ

೩. ಜನ ಕಲಾ ಮಂಚ್-ಗುಜರಾತ್

೪. ಇಪ್ಟಾ-ಮುಂಬೈ, ಲಕ್ನೋ,ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ

೫. ಪ್ರಜಾ ನಾಟ್ಯ ಮಂಡಳಿ-ಆಂಧ್ರ ಪ್ರದೇಶ

೬. ಕಲುಕುಜು-ತಮಿಳುನಾಡು

೭. ರಿತ್ವಿಕ್-ಪಶ್ಚಿಮ ಬಂಗಾಳ

೮. ಕೇರಳ ಪುರೋಗಮನ ಕಲಾ ಸಾಹಿತ್ಯ ಸಂಗಮ-ಕೇರಳ

೯. ದುಗ್ಗರ್ ಮಂಚ್-ಜಮ್ಮು ಮತ್ತು ಕಾಶ್ಮೀರ

ಈ ಮೇಲಿನಂತೆ ಹೀಗೆ ಭಾರತ ಬೀದಿ ರಂಗಭೂಮಿಯ ಪ್ರತಿಭಟನೆಯ ಸಂಕೇತವಾಗಿದ್ದು ಪ್ರಪಂಚದಲ್ಲಿ ಬೀದಿರಂಗಭೂಮಿಗೆ ನೂರೈವತ್ತು ವರ್ಷಕ್ಕಿಂತಲೂ ಹೆಚ್ಚಿನ ಚರಿತ್ರೆ ಇಲ್ಲದ ಕಾರಣ, ಖಚಿತವಾಗಿ ಬೀದಿನಾಟಕಗಳು ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದ ಕಾಲಕ್ಕೆ ಪ್ರತಿಭಟನಾ ರಂಗಭೂಮಿಯ ಪ್ರಾರಂಭಿಕ ಹೆಜ್ಜೆಗಳನ್ನು ಗುರುತಿಸಬಹುದಾಗಿದೆ.[೨೯] ಅದಕ್ಕೊಂದು ಸ್ಪಷ್ಟ ಸೈದ್ಧಾಂತಿಕ ರೂಪ ಕಾಣತೊಡಗಿದ್ದು, ೧೯೧೭ರ ಅಕ್ಟೋಬರ್‌ನ ರಷ್ಯಾದ ಕ್ರಾಂತಿ ನಂತರ. ಮೇಯರ್ ಹಾಲಕ್ಕಿ ಮತ್ತು ಎಲ್ವನ್ ಪಿಸ್ಕೇಟರ್ ಮತ್ತು ಅವನ ಸಹಾಯಕಾನಾಗಿ ದುಡಿದು ನಾಟಕಾಕಾರ ಏನಿಸಿಕೊಂಡ ಬ್ರೆಕ್ಟ್ ನ ನಾಟಕಗಳಲ್ಲಿ ಬೀದಿ ರಂಗಭೂಮಿಯ ಈ ಪ್ರಯೋಗಾತ್ಮಕ ಪರಂಪರೆಯ ಪ್ರಭಾವವೇ ಕ್ರಮೇಣ ಭಾರತದಲ್ಲೂ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬೀದಿ ರಂಗಭೂಮಿಯ ವಿಕಾಸಕ್ಕೆ ಮೂಲಕಾರಣವಾಯಿತು.

ಸಫ್ದರ್ ಹಶ್ಮಿ ಪ್ರಕಾರ ಬೀದಿ ರಂಗಭೂಮಿ ಚಳವಳಿ ಪರಿಕಲ್ಪನೆಗಳು

೧. ಬೀದಿ ರಂಗಭೂಮಿಯು ಯಾವುದೇ ಪಾರಂಪರಿಕ ಕಲಾ ಪ್ರಕಾರಗಳ ತನ್ನ ಮೂಲವನ್ನು ಗುರುತಿಸಿಕೊಳ್ಳುವುದಿಲ್ಲ

೨. ಇಪ್ಪತ್ತನೆ ಶತಮಾನದಲ್ಲಿ ಹುಟ್ಟಿಕೊಂಡಂಥ ರೈತ–ಕಾರ್ಮಿಕರ ಐಕ್ಯತೆಯ ಸಂಘಟನೆಯ ಹೋರಾಟಗಳ ಚಾರಿತ್ರಿಕ ಅನಿವಾರ್ಯತೆ

೩. ಬೀದಿ ರಂಗಭೂಮಿಯ ಮೂಲ ೧೯೧೭ರ ರಷ್ಯಾ ಕ್ರಾಂತಿಗಿಂತಲೂ ಹಿಂದಕ್ಕೆ ಹೋಗುವುದಿಲ್ಲ.

೪. ಬೀದಿ ರಂಗಭೂಮಿಯು ಶೋಷಕ ರಾಜ್ಯ–ಕೇಂದ್ರ ಸರ್ಕಾರವನ್ನು ಸ್ಪಷ್ಟವಾಗಿ ವಿರೋದಿಸುತ್ತಾರೆ.

೫. ಬೀದಿ ರಂಗಭೂಮಿಯು ಬಡ ಕೂಲಿ–ಕಾರ್ಮಿಕರ, ರೈತ–ಕೂಲಿಗಳ, ಶೋಷಿತ ಕಾರ್ಮಿಕರ ಪರವಾಗಿ ನಿಲ್ಲುತ್ತದೆ.

೬. ಬೀದಿ ರಂಗಭೂಮಿಯು ಭೂರ್ಜ್ವಾ–ಊಳಿಗಮಾನ್ಯ, ಜಮೀನ್ದಾರಿ ಪದ್ಧತಿ ಹಾಗೂ ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿಯನ್ನು ಪ್ರಬಲವಾಗಿ ವಿರೋಧಿಸುತ್ತಾರೆ.

೭. ಬೀದಿ ರಂಗಭೂಮಿಯ ಉದ್ದೇಶ ಜನರನ್ನು ಒಗ್ಗೂಡಿಸಿ ಅವರನ್ನು 'ಪ್ರತಿಭಟಿಸುವ ಸಂಸ್ಕೃತಿ'ಯೆಡೆಗೆ ಕೊಂಡೆಯ್ಯುವುದು

೮. ಬೀದಿ ರಂಗಭೂಮಿಗೆ ತನ್ನದೇ ಆದ ಸೈದ್ಧಾಂತಿಕ ನೆಲೆಗಟ್ಟಗಳೇ ಅದರ ವೈಶಿಷ್ಟ್ಯ.

೯. 'ಕಲೆ ಕಲೆಗಾಗಿ ಎನ್ನದೇ' ಕಲೆ ಜನರ ಬದುಕಿಗಾಗಿ ಹಾಗೂ ಸಮುದಾಯದ ಒಳಿತಿಗಾಗಿ ಎಂಬುದರ ಧೋರಣೆಯನ್ನು ಹೊಂದಿದೆ.

೧೦. ಬೀದಿ ರಂಗಭೂಮಿಯು ಪ್ರೊಸೀನಿಯಂಗೆ ವಿರೋಧವಾಗಿ ಹುಟ್ಟಿಕೊಂಡ ರಂಗ ಪ್ರಕ್ರಿಯೆಯಲ್ಲಿ ಬದಲಾಗಿ ಅವೆರಡರಲ್ಲೂ ಬೇರೆ ಬೇರೆ ವಿಧಾನ ಮತ್ತು ಉದ್ದೇಶಗಳಿವೆ.

೧೧. ಬೀದಿನಾಟಕಗಳು ವೈಚಾರಿಕ ಪ್ರಜ್ಞೆ ಹಾಗೂ ಮೌಢ್ಯತೆಯನ್ನು ಕಿತ್ತೆಯಿಸಲು ಪ್ರತಿಭಟನಾ ಅಸ್ತ್ರವಾಗಿದೆ.[೫೦]

ಸ್ವಾತಂತ್ರ್ಯ ಚಳವಳಿಯ ಕಾಲಘಟ್ಟದಲ್ಲಿ ಭಾರತದಲ್ಲಿ ೧೯೩೦ರಂದು 'ಪ್ರಗತಿಪರ ಚಿಂತನೆ ಹೆಚ್ಚಾದವು ಕಾರಣ ಇದೇ ಅವಧಿಯಲ್ಲಿ ಇಂಗ್ಲೆಂಡಿನಿಂದ ಹೊರಬಿದ್ದ 'ಪ್ರಗತಿಶೀಲ ಬರಹಗಾರರ ಸಂಘ'(Progressive writer's association)ದ ಪ್ರಣಾಳಿಕೆಯ ಪ್ರಭಾವದಿಂದ ೧೯೩೫ರ ವೇಳೆಗೆ ಭಾರತ ಬುದ್ದಿಜೀವಿ ವರ್ಗ ಯುವಜನ ವರ್ಗವಾದ ವ್ಯಕ್ತಿ ಪ್ರಭಾವಕ್ಕೆ ಮುಲ್ಕ ರಾಜ್ ಆನಂದ್, ಸ್ರಜ್ಜಾದ್ ಜಹೀರ್, ಹಿರೇಂದ್ರ ನಾಥ್ ಮುಖರ್ಜಿ, ಭವಾನಿ ಭಟ್ಟಾ ಚಾರ್ಯ, ಇಕ್ಬಾಲ್ ಸಿಂಗ್, ರಾಜಾರಾಲ್, ಮೊಹಮ್ಮದ್ ಆಶ್ರಪ್ ಮುಂತಾದವರು ಮಾರ್ಕ್ಸಿಸ್ಟ್ ಆದರ್ಶಗಳ ಜೊತೆಯಲ್ಲಿ ಗುರುತಿಸಿಕೊಳ್ಳವ ಮೂಲಕ ಪ್ರಗತಿಶೀಲ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಚುರುಕುಗೊಂಡವು.

ತೃತೀಯ ರಂಗಭೂಮಿಯ ಅಗತ್ಯತೆ

ಬ್ರೆಕ್ಟ್ ಎಫಿಕ್ ರಂಗಭೂಮಿ ಹಾಗೂ ಬಾದಲ್ ಸರ್ಕಾರದ 'ಮುಕ್ತ ರಂಗಭೂಮಿ' ಮತ್ತು ತೃತೀಯ ರಂಗಭೂಮಿ, ಬಡ ರಂಗಭೂಮಿ ಹೀಗೆ ಬೇರೆ ಬೇರೆ ಹೆಸರುಗಳಿಂದ ಬೀದಿ ರಂಗಭೂಮಿಯನ್ನು ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಗೆ ಪರ್ಯಾಯ ಪದವಾಗಿ ತೃತೀಯ ರಂಗಭೂಮಿ ಎಂದು ಕರೆಯುತ್ತಾರೆ. ಏಕೆಂದರೆ ತೃತೀಯ ರಂಗಭೂಮಿ ಬೀದಿನಾಟಕಗಳ ರಂಗಭೂಮಿಯಾಗಿದ್ದು. ಈ ಬೀದಿನಾಟಕಗಳಿಗೆ ತನ್ನದೇ ಆದ ಸೈದ್ಧಾಂತಿಕತೆ, ನಾಟಕದ ಪರಿಕರಗಳನ್ನಾಗಿ ಮಾಡಿಕೊಂಡು ನೋಡುವ ಸಾಮಾನ್ಯ ಜನರ ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ಪ್ರದರ್ಶನ ಮಾಡುವುದೇ ಮುಖ್ಯ ಉದ್ದೇಶವಾಗಿದೆ. ಜೊತೆಗೆ ನಟನೆ ಸಹಜತೆಯಿಂದ ಕೂಡಿದ್ದು ಸಮಾಜದಲ್ಲಿ ನಡೆಯುವ ನೈಜ ಘಟಕಗಳಿಗೆ ಹೆಚ್ಚು ಒತ್ತು ಕೊಟ್ಟು ಅದಕ್ಕೆ ಪರಿಹಾರವನ್ನು ಕೂಡ ಸೂಚಿಸುವ ಧೋರಣೆ ಬೀದಿ ರಂಗಭೂಮಿಯಾದ ತೃತೀಯ ರಂಗಭೂಮಿಯಲ್ಲಿರುವುದನ್ನು ಕಾಣುತ್ತೇವೆ.

೧೯೧೭ರ ರಷ್ಯಾದ ಬೊಲ್ಷೆವಿಕ್(Bolshevik) ಕ್ರಾಂತಿಯಿಂದ ಪ್ರಭಾವಿತರಾದ ಭಾರತದ ಬುದ್ದಿಜೀವಿ ವರ್ಗದ ಚಿಂತಕರು ಹಾಗೂ ೧೯೩೫ ಜೂನ್ ೨೧ರಂದು ನಟರು, ಬರಹಗಾರರು ಮತ್ತು ಬುದ್ದಿಜೀವಿಗಳ ಮೊದಲ 'ಅಂತರರಾಷ್ಟ್ರೀಯ ಫ್ಯಾಸಿಸ್ಟ್ ವಿರೋಧಿ ಸಮ್ಮೇಳನ'(International Anti-Fascist conference) ನಡೆಸಿದರು. ಈ ಸಮ್ಮೇಳನವು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಎಡಪಂಥೀಯ ಸಾಂಸ್ಕೃತಿಕ ಚಳವಳಿಗಳ(Leftist cultural moments) ಮೇಲೆ ಪ್ರಭಾವವನ್ನು ಬೀರಿದ ಕಾರಣದಿಂದಾಗಿ ಭಾರತ ಸಾಹಿತಿಯಾದ ಕವಿ ಮುನ್ಷಿ ಪ್ರೇಮಚಂದರ ಅಧ್ಯಕ್ಷತೆಯಲ್ಲಿ ೧೯೩೬ ರ ಏಪ್ರಿಲ್ ೧೦ರಂದು 'ಅಖಿಲ ಭಾರತ ಪ್ರಗತಿ ಶೀಲ ಬರಹಗಾರ ಸಂಘ(All india progressive writer's association) ಕಟ್ಟಲು ಪ್ರೇರಣೆಯಾಯಿತು. ಭಾರತೀಯ ಕಮ್ಯೂನಿಸ್ಟ್ ಪಕ್ಷ(CPI) ಮತ್ತು ಇತರೆ ಎಡಪಂಥೀಯ ಚಿಂತಕರು 'ಪ್ರಗತಿ ಶೀಲ ಬರಹಗಾರ ಸಂಘ'(PWA)ವನ್ನು ಕಟ್ಟುವಲ್ಲಿ ತುಂಬ

ಶ್ರಮ ಹಾಕಿದರು. ಈ ಪ್ರಗತಿಶೀಲ ಬರಹಗಾರ ಸಂಘಟನೆಯ ಮೂಲಕ ಭಾರತದ ಅನೇಕ ವಿದ್ಯಾರ್ಥಿ–ಯುವಜನರು ಕ್ರಾಂತಿಯ ಮೂಲಕ ಸ್ವಾತಂತ್ರ್ಯವನ್ನು ಪಡೆಯುವ ಕನಸನ್ನು ಕಂಡಿದ್ದರು.[೨೧]

ಮಾರ್ಕ್ಸಿಸ್ಟರು ಹಾಗೂ ಸಮಾಜವಾದಿಗಳು ಸೇರಿಕೊಂಡಿದ್ದು ಈ ವೇದಿಕೆಯಲ್ಲಿ ಪಶ್ಚಿಮದಲ್ಲಿ ಬೆಳೆದಿದ್ದ ಹಿಟ್ಲರ್‌ನ ಪ್ಯಾಸಿಸ್ಟ್ ಮತ್ತು ಸಾಮ್ರಾಜ್ಯಶಾಹಿ ಬ್ರಿಟಿಶ್ ವಿರೋಧಿ ನಿಲುವುಗಳಿಂದ ಕೂಡಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಯನ್ನು ಬೆಂಬಲಿಸದೆ ಪ್ಯಾಸಿಸ್ಟ್ ವಿರೋಧಿ ನಿಲುವನ್ನು ತಾಳಿತು. ಇದೆ ಸಮಯದಲ್ಲಿ ಸುಭಾಷ್‌ಚಂದ್ರ ಬೋಸ್‌ರಂಥ ಫಾರ್ವಾರ್ಡ್ ಬ್ಲಾಕ್ ಪಕ್ಷದ ಎಡಪಂಥೀಯ ರಾಷ್ಟ್ರೀಯವಾದಿಗಳು ಕಾಂಗ್ರೆಸ್ ಪಕ್ಷದ ಸಂಘಟನೆಯಿಂದ ಹೊರ ಹಾಕಿದ್ದಲ್ಲದೆ ಸಮಾಜವಾದಿಗಳು, ಕಮ್ಯುನಿಸ್ಟರಿಂದ ದೂರವಿರುವಲ್ಲಿಯೂ ಫ್ಯಾಸಿಸ್ಟ್‌ವಾದಿಗಳು ಯಶಿಸ್ವಿಯಾದರು. ಇದರ ಲಾಭವನ್ನು ಬ್ರಿಟಿಶರು ಬಳಸಿಕೊಂಡು 'ಭದ್ರತಾ ಕಾಯ್ದೆ' ಮತ್ತು 'ಭಾರತೀಯ ರಕ್ಷಣಾ ಕಾಯ್ದೆಗಳ' ಮೂಲಕ ಕಮ್ಯುನಿಸ್ಟರನ್ನು ಜೈಲುಗಳಿಗೆ ತಳ್ಳಲಾಯಿತು. ಸೆರೆ ಮನೆಯಿಂದ ಹೊರಗೆ ಉಳಿದ ಕಮ್ಯುನಿಸ್ಟರು ಭೂಗತರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಕೊಂಡರು.

ಬ್ರಿಟಿಶರನ್ನು ಭಾರತದಿಂದ ತೊಲಗಿಸಲು ಸುಭಾಷ್‌ಚಂದ್ರ ಬೋಸರು ಬ್ರಿಟಿಶ್ ವಿರೋಧಿಯಾಗಿದ್ದ ಜರ್ಮನಿಯ ಹಿಟ್ಲರ್‌ನೊಡನೆ ಸಂಖ್ಯಾ ಬೆಳೆಸಲು ತೊಡಗಿದ್ದು ಮತ್ತು ಫ್ಯಾಸಿಸ್ಟ್ ಜರ್ಮನಿ ಮತ್ತು ರಷ್ಯಾ ದೇಶಗಳ ಮಧ್ಯ ಏರ್ಪಟ್ಟ ಒಪ್ಪಂದಗಳು ಇನ್ನುಷ್ಟು ಗೊಂದಲಕ್ಕೆ ಹೀಡುಮಾಡಿದವು. ಭಿತ್ತಿ ನಾಟಕಗಳು(Poster Dramas) ಹಾಗೂ ಇತರೆ ಕಲಾಪ್ರಕಾರಗಳ ಮೂಲಕ ರೈತ–ಕಾರ್ಮಿಕರು ಮತ್ತು ವಿದ್ಯಾರ್ಥಿ–ಯುವಜನರು ಸ್ವಾತಂತ್ರ್ಯ ಚಳವಳಿಯನ್ನು ಮುಂದುವರಿಸಿದರು. ಈ ಚಳವಳಿಯು ಬಂಗಾಳ, ಪಂಜಾಬ್, ಆಂಧ್ರಪ್ರದೇಶ, ಬೆಂಗಳೂರು, ಮುಂಬಾಯಿ, ತಮಿಳುನಾಡು ಹೀಗೆ ಎಲ್ಲ ರಾಜ್ಯಗಳಲ್ಲಿ ಪ್ರಾರಂಭವಾಯಿತು. ಇದರ ಫಲಿತಾಂಶವಾಗಿ ೧೯೪೦ರಲ್ಲಿ ಕಲ್ಕತ್ತಾದಲ್ಲಿ ಹುಟ್ಟಿಕೊಂಡ 'ಯುವ ಸಾಂಸ್ಕೃತಿಕ ಸಂಸ್ಥೆ'(Youth cultural Institute) ಹಾಗೂ ಅದೇ ವರ್ಷ ಮುಂಬಯಿಯಲ್ಲಿ ಸ್ಥಾಪನೆಯಾದ ಇಪ್ಟಾ (IPTA)ಇದೇ ಹೊತ್ತಿನಲ್ಲಿ ಇದರಲ್ಲಿ ಇದ್ದ ಕಮ್ಯುನಿಸ್ಟರನ್ನು ದೇಶದ್ರೋಹಿಗಳೆಂದು ಕರೆದರು. ಬ್ರಿಟಿಶರು ಎದುರಿಸಲು ೧೯೪೨ರಲ್ಲಿ ಫ್ಯಾಸಿಸ್ಟ್ ವಿರೋಧಿ ಲೇಖಕಿ ಮತ್ತು ಕೂಲಿಕಾರರ ಒಕ್ಕೂಟ ಎಂದು ಬಂಗಾಳದ ಪ್ರಾರಂಭವಾಗಿ ನಂತರ ಇಪ್ಟಾ ಜೊತೆಯಲ್ಲಿ ೧೯೪೩ರಲ್ಲಿ (IPTA) ಸೇರಿದಂತೆ ಎಡಪಂಥೀಯ ಸಾಂಸ್ಕೃತಿಕ ಸಂಘಟನೆಗಳಲ್ಲಿ ಸೇರಿ ಅಖಿಲ ಭಾರತ ಮಟ್ಟದಲ್ಲಿ 'ಇಪ್ಟಾ ಸಾಂಸ್ಕೃತಿಕ ಸಂಘಟನೆ'ಯಾಗಿ ಸ್ವಾತಂತ್ರ್ಯ ಚಳವಳಿ ಬೀದಿ ನಾಟಕಗಳು ಹಾಡುಗಳ ಮೂಲಕ ಚಳವಳಿಯನ್ನು ಮುಂದುವರೆಸಿದ್ದು ಚಾರಿತ್ರಿಕ ಸಂಗತಿಯಾಗಿದೆ. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ತೃತೀಯ ರಂಗಭೂಮಿಯ ಅಗತ್ಯತೆ ಇತ್ತು. ನಂತರ ಇಪ್ಟಾದ ಮೂಲಕ ಮುಂದುವರಿದು ಭಾರತ ವಿವಿಧ ಏಕೀಕರಣ ಚಳವಳಿಯಲ್ಲಿ ಕೂಡ ಎಡಪಂಥೀಯ ಸಾಂಸ್ಕೃತಿಕ ಸಂಘಟನೆ ಪಾತ್ರ ಇವು ನಡೆಸಿದ ಬೀದಿನಾಟಕಗಳು ಬಹುಮುಖ್ಯ ಎನುಸುತ್ತವೆ. ಅದು ಇಪ್ಟಾದ ಮೂಲಕವಾಗಬಹುದು

ಅಥವಾ ಪ್ರಜಾ ನಾಟ್ಯ ಮಂಡಳಿಯಿಂದ ಆಗಬಹುದು ನಂತರ ೧೯೭೫ರಿಂದ ೧೯೭೭ರವರೆಗಿನ ತುರ್ತುಪರಿಸ್ಥಿತಿಯ ಸಂದರ್ಭವಾಗಿರಬಹುದು.[೨] ತೃತೀಯ ರಂಗಭೂಮಿ ತನ್ನದೇ ಆದ ಸೈದ್ಧಾಂತಿಕ ದೃಷ್ಟಿಕೋನದಿಂದ ಶೋಷಣೆಗೆ ಒಳಗಾದ ದಲಿತ-ಹಿಂದೂಗಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಮೇಲೆ ನಡೆಯುವ ಶೋಷಣೆ, ದಬ್ಬಾಳಿಕೆಯ ವಿರುದ್ಧ ಸಿಡಿದು ನಿಂತು ಪ್ರತಿಭಟನಾ ಅಸ್ತ್ರವಾದ ಬೀದಿನಾಟಕಗಳ ಮೂಲಕ ರಂಗ ಚಳಿವಳಿಯನ್ನು ಬೆಳೆಸಿದ ಹಿರಿಮೆ ತೃತೀಯ ರಂಗಭೂಮಿಗೆ ಮಾತ್ರ ಸಲ್ಲುತ್ತದೆ. ಜನತೆಯನ್ನು ಭ್ರಮೆಯಿಂದ ಹೊರತಂದು ವಾಸ್ತವದ ಪ್ರಜ್ಞೆ ಮೂಡಿಸಲು ಸಾಧನವಾಗಿ ಪರಿಗಣಿಸಬೇಕಾಗಿದ್ದ ರಂಗಭೂಮಿ 'ವೃತ್ತಿ ಮತ್ತು ಹವ್ಯಾಸಿ' ಆಳದಲ್ಲಿ ಸಿಕ್ಕಿಬಿದ್ದಾಗ ಅವುಗಳಿಗೆ ಪರ್ಯಾಯವಾಗಿ ಹುಟ್ಟಿ ಬಂದದ್ದೇ 'ತೃತೀಯ ರಂಗಭೂಮಿ'.

ದಿನ ಬೆಳಗಾದರೆ ಟಿ.ವಿ ಸಿನಿಮಾಗಳು, ದಿನಭವಿಷ್ಯ ಕಾರ್ಯಕ್ರಮಗಳು ಹಾಗೂ ಧಾರವಾಹಿ, ಕಾಮಿಡಿ ಶೋಗಳ ಮುಂದೆ ಕುಳಿತಿರುವ ಪ್ರೇಕ್ಷಕರನ್ನು ಬೀದಿ ನಾಟಕಗಳನ್ನು ನೋಡಲು ತರುವುದು ಇಂದಿನ ಸಂದರ್ಭದಲ್ಲಿ ಕಷ್ಟದ ಸಂಗತಿ. ಆದರೆ ೭೦ ರ ದಶಕದಲ್ಲಿ ಈ ಮೇಲಿನ ಶೋಗಳು ಕಡಿಮೆ ಇದ್ದಿದ್ದರಿಂದ ಹಳ್ಳಿಯ ಮನರಂಜನೆ ಎಂದರೆ ಬಯಲಾಟ, ಯಕ್ಷಗಾನವು, ದೊಡ್ಡಾಟ, ಹರಿಕಥೆ ಹಾಗೂ ಬೀದಿನಾಟಕಗಳೇ ಆಗಿದ್ದವು. ಏಕೆಂದರೆ ಹೆಚ್ಚು ಜನಾರ್ಕಷಣೆ ಹಾಗೂ ಜನರಿಗೆ ಬೇಗ ಹತ್ತಿರವಾಗುತ್ತಿದ್ದದ್ದು ಬೀದಿನಾಟಕ.(ತೃತೀಯ ರಂಗಭೂಮಿ) ಏಕೆಂದರೆ ಜನರ ಸಮಸ್ಯೆಗಳನ್ನು ನೇರವಾಗಿ ಜನರಿಗೆ ತುಂಬ ಹತ್ತಿರದಲ್ಲಿ ನೋಡುವ ಪ್ರೇಕ್ಷಕ ತನ್ನದೇ ಜೀವನದ ಸಮಸ್ಯೆಗಳನ್ನು ಅಭಿವ್ಯಕ್ತಿಸಿ ತೋರಿಸುವಾಗ ಜನರು ಬೀದಿನಾಟಕಗಳಿಂದ ಹೆಚ್ಚು ಪ್ರಭಾವಿತರಾಗುತ್ತಿದ್ದರು.

ಪಶ್ಚಿಮ ಬಂಗಾಳದ ರಂಗಕರ್ಮಿ ಬಾದಲ್ ಸರ್ಕಾರ್, ಉತ್ಪಲ್‌ದತ್, ಅಬೀಬ್ ತನ್ವೀರ್, ಸಫ್ದರ್‌ಹಶ್ಮಿ, ಶೇಖ್ ನಾಜರ್ ಮುಂತಾದವರು ಭಾರತದಲ್ಲಿ ವಿವಿಧ ರಾಜ್ಯಗಳಲ್ಲಿ ಬೀದಿನಾಟಕಗಳ ಮುಖೇನ ಜನರಿಗೆ ರಾಜಕೀಯ ಜಾಗೃತಿ ನೀಡುವುದರಲ್ಲಿ ಯಶಸ್ವಿಯಾದರು. ಇವರು ರಂಗಭೂಮಿಯ ನಿಯಮಗಳು ಗೊತ್ತಿಲ್ಲದ ಪೂರ್ತಿಯಾಗಿ ಅನಕ್ಷರಸ್ಥರು ಕೂಡ ಬೀದಿ ರಂಗಭೂಮಿಯಲ್ಲಿ ಭಾಗವಹಿಸಿ ನಾಟಕಮಾಡಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಅದರಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಕಾರ್ಮಿಕರು, ಕೃಷಿಕೂಲಿಕಾರರು, ಸರ್ಕಾರಿ ಸೇವೆಯಲ್ಲಿ ಕಾರ್ಯ ನಿರ್ವಹಿಸುವ ಜನರನ್ನು ಕಾಣುತ್ತೇವೆ.

ದೆಹಲಿಯಲ್ಲಿ ಸಫ್ದರ್ ಹಶ್ಮಿಯ, 'ಜನ ನಾಟ್ಯ ಮಂಚ್'(ಜನಮ್), ಮುಖೇನ ತೃತೀಯ ರಂಗಭೂಮಿ ಬೆಳೆಸಿದರೆ ಪಶ್ಚಿಮ ಬಂಗಾಳದಲ್ಲಿ ಬಾದಲ್ ಸರ್ಕಾರ್, 'ಜಾತ್ರಾ' ಹಾಗೂ 'ಇಪ್ಟಾ' ಮುಖಾಂತರ ಬೀದಿನಾಟಕಗಳಿಗೆ ಆದ್ಯತೆ ನೀಡಿದರು. ಅದೇ ರೀತಿಯಲ್ಲಿ ಆಂಧ್ರಪ್ರದೇಶದ 'ಪ್ರಜಾನಾಟ್ಯ' ಮಂಡಳಿ ಕೂಡ ಆಂಧ್ರದಲ್ಲಿ ಬುರ್ರಕಥಾ ಹಾಗೂ ಬೀದಿನಾಟಕಗಳ ಮೂಲಕ ಜನರಿಗೆ ಹೋರಾಟದಲ್ಲಿ ಭಾಗವಹಿಸುವ ಪ್ರಜ್ಞೆಯನ್ನು ಮೂಡಿಸಿತು. ಜೊತೆಗೆ ಕೇರಳದ 'ಮನಸಾಯ ಸಂಘಮಮಂ', ತಮಿಳುನಾಡಿನ 'ಸಂಘರ್ಷ ನಾಟಕ ಗ್ರೂಪ್'(ನೂಕೋಡ್ ನಾಟಕ್) ಎಂಬುವಂಥ ಬೀದಿ

ರಂಗಸಂಸ್ಥೆಗಳು ಜನರ ವಾಸ್ತವ ಸಮಸ್ಯೆಗಳನ್ನು ಬೀದಿ ನಾಟಕಗಳ ಮೂಲಕ ಪರಿಹಾರ ಹುಡುಕುವ ಪ್ರಯತ್ನದಲ್ಲಿ ಮುಂದಾಗುತ್ತಿವೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ೭೦ರ ದಶಕದಲ್ಲಿ ಪ್ರಾರಂಭವಾದ ಸಿ.ಜಿ.ಕೆ, ಕಿ.ರಂ.ನಾಗರಾಜ ಹಾಗೂ ಪ್ರಸನ್ನ ಇನ್ನೂ ಇತರ ಮಾರ್ಗದರ್ಶನದಲ್ಲಿ ತುರ್ತುಪರಿಸ್ಥಿತಿಯ ಕರಾಳ ನಿರಂಕುಶ ಸರ್ವಾಧಿಕಾರಿಯಾದ ಇಂದಿರಾ ಗಾಂಧಿಯ ಸರ್ಕಾರದ ವಿರುದ್ಧ ಬೀದಿನಾಟಕಗಳ ಮೂಲಕ ಚಳವಳಿಯನ್ನು ಮಾಡಿರುವುದು ಚರಿತ್ರಾರ್ಹವಾಗಿದೆ.

ಕರ್ನಾಟಕದಲ್ಲಿ 'ಸಮುದಾಯ'ದ ಬೀದಿನಾಟಕಗಳು ಜನರಲ್ಲಿ ಪರಿಣಾಮ ಬೀರಿದವು ಬೀದಿನಾಟಕಗಳಾದ ಬೆಲ್ಚಿ, ನರಗುಂದ ರೈತರ ಬಂಡಾಯ, ಪತ್ರೆ ಸಂಗಪ್ಪನ ಕೊಲೆ, ಬರದ ಬಯಲಾಟ, ಪೋಸ್ಟರ್, ಛಸ್ನಾನಾಲ ಗಣಿದುರಂತ, ಧನ್ವಂತರಿ ಚಿಕಿತ್ಸೆ, ಅಲ್ಲೆ ಇದ್ದವರು, ಒಂದು ಬೀದಿಯ ಕಥೆ, ಮುಖವಿಲ್ಲದವರು, ದಫನ್, ಮಾನವರಾಗೋಣ, ಪಂಚಮ ಇನ್ನು ಅನೇಕ ಬೀದಿನಾಟಕಗಳ ಮುಖಾಂತರ 'ಸಮುದಾಯ'ವು ಕರ್ನಾಟಕದ ತೃತೀಯ ರಂಗಭೂಮಿಯಲ್ಲಿ ತನ್ನದೇ ಆದ ರಂಗ ಚಳವಳಿಯ ವರ್ಚಸ್ಸನ್ನು ಜನರಲ್ಲಿ ಮೂಡಿಸಿದೆ.

ಬೀದಿನಾಟಕದ ಮುಖ್ಯ ಗುರಿ

ನಗರವಾಗಲಿ ಹಳ್ಳಿಯಾಗಲಿ ಮುಖ್ಯ ಬೀದಿಯಲ್ಲಿ ಅಂದರೆ ಬಹುಜನರು ಸೇರುವ ಸ್ಥಳ ಉದಾಹರಣೆಗೆ: ಪಂಚಾಯ್ತಿ ಕಟ್ಟೆ , ಸರ್ಕಲ್‌ಗಳು, ಬಸ್ಸುನಿಲ್ದಾಣ, ಮಾರುಕಟ್ಟೆ, ಹೀಗೆ ಮುಖ್ಯ ಸ್ಥಳಗಳಲ್ಲಿ ಬೀದಿನಾಟಕಗಳನ್ನು ಪ್ರದರ್ಶಿಸುತ್ತಾರೆ. ಬೀದಿನಾಟ ಕಗಳಿಗೆ ಮತ್ತೊಂದು ಹೆಸರು 'ತೃತೀಯ ರಂಗಭೂಮಿ'. ಬಾದಲ್ ಸರ್ಕಾರ್ ಹೇಳುವ ಹಾಗೇ ರಂಗಭೂಮಿಯ ಬಹುಮುಖ್ಯ ಗುರಿ ಜನರಿಗೆ ರಾಜಕೀಯ ವ್ಯಂಗ್ಯವನ್ನು ಅಭಿವ್ಯಕ್ತಿಗೊಳಿಸುವುದು.

ಬೀದಿನಾಟಕಗಳ ವೀಕ್ಷಣೆಯಿಂದ ಜನರು ಪ್ರತಿಭಾಟನಾ ಮಾನೋಭಾವ ಬೆಳೆಸಿಕೊಳ್ಳುತ್ತಾರೆ. ಅದನ್ನು ಕೆಲವೊಮ್ಮೆ ಪ್ರತಿಕ್ರಿಯಿಸುವುದನ್ನು ಕಾಣುತ್ತೇವೆ. ಆದ್ದರಿಂದ ಬೀದಿನಾಟಕ ಎಂದರೆ ಪ್ರತಿಭಟನೆಯ ಇನ್ನೊಂದು ಸ್ವರೂಪ ಎಂದು ಹೇಳುತ್ತೇವೆ. ಸರ್ವೇಶ್ವರ ದಯಾಳ್ ಶರ್ಮ ಅವರು ತಮ್ಮ 'ಕುರಿ' ನಾಟಕವನ್ನು ರಾಜಕೀಯ ಪಕ್ಷಗಳ ಬೆಂಬಲವಿದ್ದರೆ ಮಾತ್ರ ಬೀದಿ ನಾಟಕ ತಂಡಗಳ ಉಳಿವು ಸಾಧ್ಯ. ಬೀದಿನಾಟಕ ಮತ್ತು ಅನೌಪಚಾರಿಕ ಶಿಕ್ಷಣ ಉಳಿದ ಸ್ವರೂಪಗಳ ಬಗ್ಗೆ ಆಸಕ್ತಿ ವಹಿಸುವ ಕಮ್ಯುನಿಸ್ಟ್ ಪಕ್ಷಗಳ ಬಗ್ಗೆ ಅವರು ತಿಳಿಸುತ್ತಾರೆ. ಬೀದಿನಾಟಕಗಳಿಗೆ ರಾಜಕೀಯ ಉದ್ದೇಶವಿರುವುದರಿಂದ ಇಂತಹ ಕಾರ್ಯಕ್ರಮಗಳಿಗೆ ಎಡಪಂಥೀಯ ಪಕ್ಷಗಳಿಂದ ಬೆಂಬಲ ಸಿಗುತ್ತದೆ. ಇಲ್ಲಿ ಮೂಡುವ ಪ್ರಶ್ನೆ ಎಂದರೆ ಬೀದಿನಾಟಕ ತಂಡಗಳಿಗೆ ತಮ್ಮ ಚಟವಟಕೆಗಳನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶವಿದೆಯೇ? ಮತ್ತು ಭಾಗವಹಿಸಿದ ಎಷ್ಟು ತಂಡಗಳಿಗೆ ನಿಜವಾಗಿಯೂ ರಾಜಕೀಯ ಉದ್ದೇಶವಿದೆ ಎನ್ನುವುದು ಮುಖ್ಯವೆನಿಸುತ್ತದೆ. ಬೀದಿನಾಟಕಗಳು ಸಮಾಜದಲ್ಲಿ ಶೋಷಣೆಗೆಳಿಗೆ ಒಳಗಾದ ಜನರನ್ನು ಬಡಿದೆಬ್ಬಿಸುವ ಶಕ್ತಿ ಇದೆಯೆಂಬುದು. ಕರ್ನಾಟಕದ ಬಹುತೇಕ ರಂಗತಜ್ಞರ ಅಭಿಪ್ರಾಯವಾಗಿದೆ.

ಬಾದಲ್ ಸರ್ಕಾರ್ ಅವರು ಭಾರತೀಯ ಸಂದರ್ಭದಲ್ಲಿ ರಂಗಭೂಮಿ ಹೇಗಿರಬೇಕು ಎಂದು ಹೇಳುತ್ತಾ, ಮೂರನೇ ರಂಗಭೂಮಿಯಾದ ಬೀದಿನಾಟಕಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಸತ್ಯದ ದರ್ಶನವನ್ನು ಉಂಟು ಮಾಡುವ ಅನಗತ್ಯ ರಂಗಪರಿಕರ ಒದಗಿಸುವ, ನಕಲಿ ವರ್ತನೆಗಳನ್ನು ಪ್ರದರ್ಶಿಸುವ ನಗರ ಜಾಣ ಪ್ರೊಸೇನಿಯಂ ರಂಗಭೂಮಿಯಾಗಿರಬೇಕೆ? ಅಥವಾ ವಸ್ತು ಮತ್ತು ರೂಪಗಳೆರೆಡರಲ್ಲೂ ಭಾರತೀಯ ಸಂಪ್ರದಾಯದ ಮೂಲತತ್ವವುಳ್ಳ ಜನಪದ ರಂಗಭೂಮಿಯಾಗಿರಬೇಕೇ? ಇಲ್ಲವೆ ಇವೆರಡೂ ರಂಗಭೂಮಿಗಳನ್ನ ತ್ಯಜಿಸಿ, ಸಣ್ಣ ಸಂಖ್ಯೆಯಲ್ಲಿರುವ ನಗರದ ಮಧ್ಯಮ ವರ್ಗಕಷ್ಟೇ ಸೀಮಿತವಾಗಿರುವ ಪ್ರೊಸೇನಿಯಂ ರಂಗಭೂಮಿಗಿಂತ ಹೊಸತಾದ ಮತ್ತು ಹಳೆಯ ಮೌಲ್ಯಗಳನ್ನು ಅರಿತುಕೊಂಡು ಅದನ್ನೇ ಹೆಚ್ಚಾಗಿ ಅಭಿವ್ಯಕ್ತಿಸುತ್ತಿರುವ ಗ್ರಾಮೀಣ ರಂಗಭೂಮಿಗಿಂತ ಭಿನ್ನವಾದ ಮೂರನೇಯ ಸ್ವಾತಂತ್ರ್ಯ ರಂಗಭೂಮಿ ಅವಶ್ಯಕತೆಯಿದೆಯೇ? ಎಂದು ತಮ್ಮ ಭಾಷಣದಲ್ಲಿ ಎಚ್ಚರಿಸುತ್ತಾರೆ.

ಬ್ರಿಟಿಶರಿಂದ ಎರವಲು ಪಡೆದುಕೊಂಡ ಪಾಶ್ಚಿಮಾತ್ಯ ಸಂಸ್ಕೃತಿ ಹಾಗೂ ಮೌಲ್ಯಗಳಲ್ಲಿ ಬೇರುಳ್ಳ ನಗರದ ಸುಶಿಕ್ಷಿತ ವರ್ಗದ ರಂಗಭೂಮಿಯಾದರೆ, ಇನ್ನೊಂದು ಮಣ್ಣಿನ ಗುಣಗಳನ್ನು ಪಡೆದುಕೊಂಡು ಜನಪ್ರಿಯವಾಗಿದ್ದರೂ ಗ್ರಾಮೀಣ ಜನತೆಯನ್ನು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬಂಧನಗಳಿಂದ ಮುಕ್ತ ಗೊಳಿಸುವ ನಿಟ್ಟಿನಲ್ಲಿ ಸಂಬಂಧ ಕಲ್ಪಿಸಿಕೊಳ್ಳಲು ಬಂದ ಗ್ರಾಮೀಣ ರಂಗಭೂಮಿ ಆಗಿದೆ. ಎಷ್ಟೋ ಬಾರಿ ಇಂತಹ ಗ್ರಾಮೀಣ ರಂಗಭೂಮಿಗಳು ಹಳೆಯ ಬರಡು ಮೌಲ್ಯಗಳನ್ನ ಎತ್ತಿ ಹಿಡಿಯುತ್ತಾ ಪ್ರತಿಗಾಮಿ ಶಕ್ತಿಗಳನ್ನ ಬಲಪಡಿಸುತ್ತಾ ಬಂದವು. ಈ ಬೆಳವಣಿಗೆಗೆ ಚಾರಿತ್ರಿಕ ಕಾರಣಗಳಿವೆ. ಮುಖ್ಯವಾಗಿ ಈ ದೇಶಕ್ಕೆ ಪ್ರಗತಿಪರ ಪಾಶ್ಚಾತ್ಯ ವಿಚಾರಗಳು ಹರಿದು ಬಂದಾಗಿನಿಂದ ಅದನ್ನು ಸ್ವೀಕರಿಸುತ್ತಾ ಬಂದ ನಮ್ಮ ದೇಶದ ಪಾಳೇಯಗಾರಿಕೆ, ಜಮೀನ್ದಾರಿ ಹಾಗೂ ವಸಹಾತುಶಾಹಿ ಉತ್ಪನ್ನಗಳಾದ ನಗರ ಬುದ್ದಿಜೀವಿಗಳು ಈ ಹಿನ್ನೆಲೆಯಿಂದಾಗಿ ಕೆಲವೊಂದು ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆಗಳನ್ನು ತರುವಂತಾಯಿತು ಎನ್ನುವುದು ಬಾದಲ್ ಸರ್ಕಾರ್ ಅವರ ಗಟ್ಟಿ ಮಾತುಗಳಾಗಿವೆ.

೧೯೪೦ರ ತೆಲಂಗಾಣ ಚಳವಳಿಯ ಕಾಲದಿಂದಲೂ ಕಮ್ಯುನಿಸ್ಟರು ಪ್ರಜಾ ನಾಟ್ಯ ಮಂಡಳಿಯ ಆಶ್ರಯದಲ್ಲಿ 'ವೀದಿನಾಟಕಂ' ತಂತ್ರವನ್ನು ಹಳ್ಳಿಗಾಡಿನ ಸಮಸ್ಯೆಗಳನ್ನು ಚಿತ್ರಿಸಲು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ೧೯೭೭ ರಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಬೆಲ್ಚಿ ನಾಟಕದ ಪ್ರದರ್ಶನದ ಮುಖೇನ ಶೋಷಿತ ಅಸ್ಪೃಶ್ಯ ಜನರ ನೋವನ್ನು ತೆರೆದಿಟ್ಟು ಚಳವಳಿಯಾಗಿ ಕಟ್ಟಲು ಹಾಗೂ ನವಲಗುಂದ, ನರಗುಂದ ರೈತ ಬಂಡಾಯವು ಕಾಂಗ್ರೆಸ್ಸೇತ್ತರ ಪರ್ಯಾಯ ಎಡಪಂಥೀಯ ಕಮ್ಯುನಿಸ್ಟ್ ಚಳವಳಿಯನ್ನು ಕರ್ನಾಟಕದಲ್ಲಿ ಕಟ್ಟಲು ಸಹಕಾರಿಯಾಗಿತ್ತು. ಇದು ಬೀದಿನಾಟಕಕ್ಕೆ ಇರುವ ಶಕ್ತಿ ಎಂದು ಹೇಳುತ್ತೇವೆ. ಏಕೆಂದರೆ ೧೯೮೩ ರ ಕರ್ನಾಟಕದ ಗುಂಡುರಾವ್ ಸರ್ಕಾರದ ದರ್ಪದ ಆಡಳಿತವನ್ನು ಕೆಳಗುರುಳಿಸಲು 'ಸಮುದಾಯ', ದಲಿತ ಸಂಘರ್ಷ ಸಮಿತಿ, ಬಂಡಾಯ ಸಂಘಟನೆ, ಕಮ್ಯುನಿಸ್ಟ್ ಪಕ್ಷಗಳ ಇತರೆ ಪ್ರಗತಿಪರ

ಸಂಘಟನೆಗಳಿಂದ ಮಾಡಿದ ಚಾರಿತ್ರಿಕ ಚಳವಳಿಯನ್ನು ನೆನಪಿಸಿಕೊಳ್ಳುವುದು ಬೀದಿನಾಟಕಗಳ ಚಾರಿತ್ರಾರ್ಹ ಅಂಶವೆಂದು ಹೇಳಬಹುದು. ಈ ಹಿನ್ನೆಲೆಯಿಂದ ಎಂಬತ್ತರ ದಶಕದ ರಾಜಕಾರಣ ಶುದ್ಧರಾಜಕಾರಣವಾಗಿ ಪರಿವರ್ತನೆಗೊಳ್ಳಲು ಸಹಕಾರಿಯಾಯಿತು.

ಕರ್ನಾಟಕದಲ್ಲಿ 'ಸಮುದಾಯ'ವನ್ನು ಗುರುತಿಸುವುದು ಬೀದಿನಾಟಕಗಳ ಮುಖೇನ. ಏಕೆಂದರೆ 'ಸಮುದಾಯ' ಸಂಘಟನೆಯಾಗಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದ) ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕದಲ್ಲಿ ಗುರುತಿಸಿಕೊಂಡಿದೆ. ಜೊತೆಗೆ 'ಸಮುದಾಯ' ಬೀದಿನಾಟಕಗಳೆಲ್ಲವು ರಾಜಕೀಯ ವ್ಯಂಗ್ಯ ಹಾಗೂ ರಾಜಕೀಯ ಚಿಂತನೆಗಳಿಂದ ಕುರಿತುದ್ದಾಗಿವೆ. ಅಂಥ ನಾಟಕಗಳು ದಲಿತರ ಮೇಲಿನ ದೌರ್ಜನ್ಯ, ಸ್ತ್ರೀಶೋಷಣೆ, ಕಾರ್ಮಿಕರ ಸಮಸ್ಯೆಗಳ ಬಗೆಗೆ ಗಮನ ಸೆಳೆದಿವೆ. ಆ ನಾಟಕಗಳಲ್ಲಿ ಹೆಗ್ಗಡದೇವನ ಕೋಟೆ, ಸ್ತ್ರೀ, ಹಲ್ಲಾಬೋಲ್, ಶೇಷಗಿರಿಯಪ್ಪನ ಕೊಲೆ, ರಾಜ್ಯ ಮಟ್ಟದ ಸಾಂಸ್ಕೃತಿಕ ಸಮುದಾಯ ಜಾಥಾಗಳಲ್ಲಿ ಹಳ್ಳಿ ಹಳ್ಳಿಗೆ ಹೋಗಿ ಪ್ರದರ್ಶನ ನೀಡಿ ಜನರನ್ನು ಎಚ್ಚರಗೊಳಿಸಿದವು. ಈ ಬೀದಿನಾಟಗಳಲ್ಲಿ ಹಾಡುಗಳು ಪ್ರಮುಖವಾಗಿರುತ್ತವೆ. ಸಿದ್ದಲಿಂಗಯ್ಯನವರು ರಚಿಸಿದ ದಮನಕ್ಕೆ ಒಳಗಾದ ಜನರ ನೋವುಗಳ ಕ್ರಾಂತಿ ಹಾಡುಗಳಿಗೆ ಧ್ವನಿ ಗೂಡಿಸಿದವರು ಜನ್ನಿಯವರು. ಸಾಂಸ್ಕೃತಿಕವಾಗಿ ಎಲ್ಲಾ ಪ್ರಕಾರಗಳನ್ನು ಬಳಸಿ ಬೀದಿನಾಟಕಗಳು ಯಾವುದೇ ಪರಿಕರಗಳನ್ನು ಬಳಸದೆ ಮನುಷ್ಯರನ್ನು ಹೆಚ್ಚು ಪರಿಕರಗಳನ್ನಾಗಿ ಬಳಸಿ ನಾಟಕಗಳನ್ನು ಪ್ರದರ್ಶಿಸಿವೆ. ಉದಾಹರಣೆಗೆ: 'ಬೆಲ್ಚಿ' ನಾಟಕ ಕರ್ನಾಟಕ ಹಾಗೂ ಭಾರತಾದ್ಯಂತ ೧೫೦೦ ಕ್ಕೂ ಹೆಚ್ಚು ಪ್ರದರ್ಶಗಳು ಕಂಡಿರುವುದು ಸಮುದಾಯ ಸಂಘಟನೆಯ ಸಿ.ಜಿ.ಕೆ ಗೆ ಹೆಚ್ಚು ಮಹತ್ವ ತಂದು ಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ನಾಟಕದ ಮುಖೇನ ಭಾರತದಲ್ಲಿನ ಜಮೀನ್ದಾರಿ ವ್ಯವಸ್ಥೆಲ್ಲಿ ಜೀತಾದಾಳುಗಳನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂಬುದನ್ನು ತಿಳಿಸುತ್ತದೆ. ದಲಿತರ ಸಾವುಗಳು ಜಮೀನ್ದಾರರಿಗೆ ಲೆಕ್ಕವೇ ಇಲ್ಲವೆಂಬ ಘಟನೆಗೆ ಪ್ರತಿಭಟನೆಯ ರೂಪದಲ್ಲಿ ಬೀದಿನಾಟಕಗಳಲ್ಲಿ ಪ್ರದರ್ಶಿಸಲ್ಪಡುತ್ತವೆ. ಈ 'ಸಮುದಾಯ'ದ ಬೀದಿನಾಟಕಗಳು ಚರಿತ್ರಾರ್ಹ ನಾಟಕಗಳೆಂದು ಹೇಳಬಹುದು.

ತೃತೀಯ ರಂಗಭೂಮಿಯ ತಾತ್ವಿಕ ಚಿಂತನೆ ಮತ್ತು ಅಗತ್ಯತೆ

ತೃತೀಯ ರಂಗಭೂಮಿಯ ತಾತ್ವಿಕ ಚಿಂತನೆಗಳನ್ನು ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಕೆಲವೇ ಕೆಲವು ಸಾಂಸ್ಕೃತಿಕ ಸಂಘಟನೆಗಳಲ್ಲಿ ಗುರುತಿಸಬಹುದು. ಪ್ರಮುಖವಾಗಿ ರಾಷ್ಟ್ರಮಟ್ಟದಲ್ಲಿ ೧೯೪೦ ರಲ್ಲಿ ಪ್ರಾರಂಭವಾದ 'ಇಂಡಿಯನ್ ಪೀಪಲ್ಸ್ ಥೀಯೆಟರ್ ಅಸೋಷಿಯೆಶನ್ಸ್' (IPTA), ಪಶ್ವಿಮ ಬಂಗಾಳದ 'ಜಾತ್ರಾ', ದೆಹಲಿಯ 'ಜನನಾಟ್ಯ ಮಂಚ್' (ಜನಮ್), ಕರ್ನಾಟಕದಲ್ಲಿ 'ಸಮುದಾಯ ಸಾಂಸ್ಕೃತಿಕ ಸಂಘಟನೆ' ಇವುಗಳು ಬೀದಿನಾಟಕಗಳ ಮೂಲಕ ಸೈದ್ಧಾಂತಿಕ ಸಿದ್ಧಾಂತದ ಮೂಲಕ ರಾಜಕೀಯ ವಿಚಾರಗಳನ್ನು ಬೀದಿನಾಟಕಗಳ ಮೂಲಕ ರಂಗಚಳವಳಿಗಳನ್ನು ಕಟ್ಟಲಾಯಿತು. ತೃತೀಯ ರಂಗಭೂಮಿಯಾದ ಬೀದಿನಾಟಕಗಳು ವೈಜ್ಞಾನಿಕ ವಿಚಾರಗಳ ಜೊತೆಗೆ

ದುಡಿಯುವ ವರ್ಗದ ರಾಜಕೀಯ ಸಿದ್ಧಾಂತಗಳ ನೇತೃತ್ವದಲ್ಲಿ ಕೆಲಸ ಮಾಡಬೇಕು ಕಾರ್ಮಿಕ ವರ್ಗ ಪಕ್ಷದ ನೇತೃತ್ವವನ್ನು ಇವುಗಳು ಒಪ್ಪುತ್ತವೆ.

ತೃತೀಯ ರಂಗಭೂಮಿಯ ಜನಪರ ಹಾಗೂ ವೃತ್ತಿರಂಗಭೂಮಿಯಂತೆ ವೃತ್ತಿಗಾಗಿ ಅಥವಾ ಜನಪರ ಏಳಿಗೆಗಾಗಿ ಕಾರ್ಯಯೋಜನೆಗಳನ್ನು ರೂಪಿಸಿದೆ. ರಾಜಕೀಯ ತಿಳುವಳಿಕೆಯ ಸ್ಪಷ್ಟ ಅರಿವು ತೃತೀಯ ರಂಗಭೂಮಿಗೆ ಇರುತ್ತದೆ. ಉದಾಹರಣೆ : 'ಇಪ್ಟಾ ಸಾಂಸ್ಕೃತಿಕ ಸಂಘಟನೆ' ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಶರ ವಿರುದ್ಧ ಭಾರತ ಕಮ್ಯುನಿಸ್ಟ್ ಪಕ್ಷ (CPI) ಒಂದು ಸಾಂಸ್ಕೃತಿಕ ರಂಗ ಚಳವಳಿಯ ಭಾಗವಾಗಿ ಬೀದಿನಾಟಕಗಳನ್ನು ಆಡಿಸುತ್ತಿತ್ತು. ಇದರಿಂದ ಹಳ್ಳಿಗಳ ಎಷ್ಟೋ ಜನರು ಬ್ರಿಟಿಷರ ದಬ್ಬಾಳಿಕೆ ಹಾಗೂ ಭಾರತೀಯ ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದಿರುವ ಉದಾಹರಣೆಗಳನ್ನು ಕಾಣುತ್ತೇವೆ. ಉದಾಹರಣೆಗೆ: ತೇಭಾಗ ದಂಗೆ, ಪೊನ್ನಪ್ಪ ವಯ್ಯಾಲಾರ, ಕಯ್ಯೂರು ಹೋರಾಟ, ತೆಲಂಗಾಣ ಹೋರಾಟ ಇತ್ಯಾದಿಗಳನ್ನು ನೋಡಬಹುದು. ಅದೇ ರೀತಿಯಲ್ಲಿ ಜನಮ್ ಕೂಡ ದೆಹಲಿಯಲ್ಲಿ ಸಫ್ದರ್ ಹಶ್ಮಿ ಅವರ ನೇತೃತ್ವದಲ್ಲಿ ಸಾಂಸ್ಕೃತಿಕ ಸಂಘಟನೆಯು ಪ್ರಾರಂಭವಾಯಿತು. ಭಾರತದಲ್ಲಿ ಕಾರ್ಮಿಕ ಚಳವಳಿಯನ್ನು ಕಟ್ಟಲು ಬೀದಿನಾಟಕಗಳ ಮೂಲಕ ತನ್ನ ಹೋರಾಟದ ಕಿಚ್ಚನ್ನು ಕಾರ್ಮಿಕರಲ್ಲಿ ಬೀದಿನಾಟಕಗಳ ಪ್ರದರ್ಶನಗಳ ಮೂಲಕ ಜನಮ್ ಮೂಡಿಸುತಿತ್ತು. ಈ ಸಾಂಸ್ಕೃತಿಕ ಸಂಘಟನೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದ) CPI(M)ದ ಒಂದು ಅಂಗಸಂಸ್ಥೆಯಾಗಿತ್ತು. ಹಾಗೆಯೇ ಪಶ್ಚಿಮ ಬಂಗಾಳದ 'ಜಾತ್ರಾ' ಕೂಡ ಕಮ್ಯುನಿಸ್ಟ್ ಪಕ್ಷಗಳ ಬೆಳವಣಿಗೆಗೆ ಕಾರಣವಾಯಿತು.

ಹಾಗೆಯೇ ಆಂಧ್ರ ಪ್ರದೇಶದ 'ಪ್ರಜಾ ನಾಟ್ಯ ಮಂಡಳಿ' ಹಾಗೂ ಕರ್ನಾಟಕದಲ್ಲಿ ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ ಪ್ರಾರಂಭವಾದ 'ಸಮುದಾಯ ಸಂಘಟನೆ'ಯೂ ಸಹ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) CPI(M)ದ ಒಂದು ಸೈದ್ಧಾಂತಿಕ ತಾತ್ವಿಕ ಚಿಂತನೆಗಳಿಗೆ ಒಳಗಾಗಿ ಅಂಥ ಚಿಂತನೆಗಳನ್ನು ಜನವಾದಿ ಪ್ರಜಾಪ್ರಭುತ್ವವಾದಿ ಆಂದೋಲನದೊಂದಿಗೆ ಸೇರಿಕೊಂಡು ಬೀದಿನಾಟಕ, ರಂಗನಾಟಕ, ಚರ್ಚಾಗೊಷ್ಠಿ, ರೈತ ಚಳವಳಿ, ಕಾರ್ಮಿಕ ಚಳವಳಿ, ಮಹಿಳಾ ಚಳವಳಿ, ದಲಿತ ಚಳವಳಿ, ಬಂಡಾಯ ಚಳವಳಿ, ವಿದ್ಯಾರ್ಥಿ-ಯುವಜನ ಚಳವಳಿಗಳ ಮೇಲೆ ಸಿದ್ಧಾಂತಗಳ ಪ್ರಭಾವ ಬೀರದೇ ಇರಲಿಲ್ಲ. ಪರೋಕ್ಷವಾಗಿ ಬೌದ್ಧಿಕ, ಸಾಂಸ್ಕೃತಿಕ ವಲಯವಾದ ಈ ಮೇಲಿನ 'ಸಮುದಾಯ' ಸೇರಿದಂತೆ ಎಲ್ಲವೂ ತಾತ್ವಿಕವಾಗಿ ಮಾರ್ಕ್ಸ್‌ವಾದದ ವೈಜ್ಞಾನಿಕ ಸಮಾಜವಾದದ ಸಿದ್ಧಾಂತಗಳಿಂದ ಪ್ರಭಾವ ಬೀರಿರುವುದನ್ನು ಅಧ್ಯಯನದ ವಿಶ್ಲೇಷಣೆಯಿಂದ ಕಾಣುತ್ತೇವೆ. ಆದ್ದರಿಂದ ಪ್ರಸ್ತುತ ಜ್ವಲಂತ ಸಮಸ್ಯೆಗಳಿಗೆ ಎಪ್ಪತ್ತರ ದಶಕದ ರೀತಿಯಲ್ಲಿ ಅಘೋಷಿತ ತುರ್ತುಪರಿಸ್ಥಿತಿಯ ಪ್ರಸ್ತುತ ಸರ್ಕಾರಗಳು ಜನಸಾಮಾನ್ಯರನ್ನು ಶೋಷಣೆಗೆ ಒಳಗು ಮಾಡುತ್ತಿರುವ ಸಂದರ್ಭದಲ್ಲಿ 'ಸಮುದಾಯ'ದಂಥ ಸಾಂಸ್ಕೃತಿಕ ಸಂಘಟನೆಯ ಪುನರ್ ಅವಲೋಕನ ಅಗತ್ಯ. ಜನರ ಸಮಸ್ಯೆಗಳಿಗೆ ಬೀದಿ ರಂಗಭೂಮಿಯ ಮೂಲಕ ಎರಡನೇ ಸ್ವಾತಂತ್ರ್ಯ ಚಳವಳಿಯನ್ನು ಸಂಘಟಿಸುವುದು ಇಂದು ಅತ್ಯಂತ ತುರ್ತಾಗಿದೆ.

೫.೩. 'ಸಮುದಾಯ'ದ ಬೀದಿನಾಟಕಗಳು ಹಾಗೂ ರಂಗನಾಟಕಗಳು

'ಸಮುದಾಯ' ಸಾಂಸ್ಕೃತಿಕ ಸಮನ್ವಯ ಸಮಿತಿ (ಕರ್ನಾಟಕ ರಾಜ್ಯ ಸಮಿತಿ)ಯು ಕರ್ನಾಟಕದ ಹವ್ಯಾಸಿ ರಂಗಭೂಮಿ ಚಳವಳಿಯ ಅತ್ಯಂತ ಮುಖ್ಯವಾದ ಸಾಂಸ್ಕೃತಿಕ ಸಂಘಟನೆಯಾಗಿದ್ದು, ಆಧುನಿಕ ಕರ್ನಾಟಕದ ಸಾಹಿತ್ಯ ಚರಿತ್ರೆಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ. ಅದು ಸಾಹಿತ್ಯ ಪ್ರಕಾರಗಳ ಕಾವ್ಯ, ನಾಟಕ, ಕಥೆ, ಕಾದಂಬರಿ, ಪ್ರಬಂಧ, ಚರಿತ್ರೆ ಮುಂತಾದ ವಿಭಾಗಗಳಿಗೆ ತನ್ನದೇ ಪಾತ್ರ ನೀಡಿದೆ ಎಂದರೆ ತಪ್ಪಾಗಲಾರದು. 'ಸಮುದಾಯ' ಸಂಘಟನೆಯು ೧೯೭೫ರಲ್ಲಿ ಬೆಂಗಳೂರು ನಗರದಲ್ಲಿ ಪ್ರಾರಂಭವಾದರೂ ತನ್ನ ವಿಸ್ತರಣೆಯನ್ನು ಇಡಿ ಕರ್ನಾಟಕದ ತುಂಬೆಲ್ಲ ೩೫ ಘಟಕಗಳಾಗಿ ಕಾರ್ಯನಿರ್ವಹಿಸಿದ್ದು ಇತರೆ ರಂಗ ತಂಡಕ್ಕೆ ಇಂಥ ಚಾರಿತ್ರಿಕ ಹಾಗೂ ಸೈದ್ಧಾಂತಿಕ ಬದ್ಧತೆ ಇಲ್ಲದೆ ಇರುವುದು ಕಾಣುತ್ತೇವೆ. ಏಕೆಂದರೆ 'ಸಮುದಾಯ' ಸಂಘಟನೆ ಇತರೆ ಸಂಘಟನೆಗಳಿಗೆ ವೇದಿಕೆಯಾಗದೇ, ಸದಸ್ಯ, ಘಟಕ, ರಾಜ್ಯ ಸಮಿತಿಗಳ ಒಂದು ಮುಖ್ಯ ಘಟಕವಾಗಿ ಕಾರ್ಯನಿರ್ವಹಿಸುತ್ತದೆ. ಈ ಮೂಲಕ ಇದರ ಜೊತೆ ಆ ಘಟಕದಲ್ಲಿ ಆ ಪ್ರದೇಶ ಎಡ-ಪ್ರಜಾಸತಾತ್ಮಕ ಸಮಾಜವಾದಿಗಳ ಸಂಘಟನೆ ಸಹಕಾರದ ಜೊತೆ 'ಸಮುದಾಯ'ವು ಹುಟ್ಟುಹಾಕಿದಂಥ ಎರಡು ಪ್ರಮುಖ ಸಂಘಟನೆಗಳಾದ 'ದಲಿತ ಸಂಘರ್ಷ ಸಮಿತಿ' ಹಾಗೂ 'ಬಂಡಾಯ ಸಾಹಿತ್ಯ ಸಂಘಟನೆ'. ಈ ಮೂರು ಸಂಘಟನೆಗಳ ತಾತ್ವಿಕ ವಿಚಾರಗಳ ಆರಂಭದಲ್ಲಿ ಕ್ರೋಡಿಕರಣಗೊಂಡು ಒಂದು ಐಕ್ಯ ಚಳವಳಿಯನ್ನು ಕಟಿದ್ದವು.

ನಂತರ ಈ ಸಂಘಟನೆಗಳು ಕೆಲವು ರಾಜಕಾರಣಿಗಳ ಲಾಭಕ್ಕಾಗಿ ರಾಜಕೀಯ ಮುಖಂಡರು ಆಮಿಷಗಳಿಗೆ ಒಳಗಾದ ಕಾರಣ ಈ ಸಂಘಟನೆಗಳು ಕರ್ನಾಟಕದಲ್ಲಿ ಪ್ರಸ್ತುತ ಚಳವಳಿಗಳನ್ನು ಕಟ್ಟುವಲ್ಲಿ ಕುಂಟಿತವಾಗುತ್ತಿದೆ. ಚಳವಳಿಯ ಕುರಿತು ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುವ ಪ್ರಾಧ್ಯಾಪಕರು ಇದ್ದಿದ್ದು ಕಾಣುತ್ತೇವೆ. ಉದಾಹಾರಣೆಗೆ: ಕುವೆಂಪು ಪ್ರಾದ್ಯಾಪಕರಾಗಿ ಕಾರ್ಯನಿರ್ವಹಿಸುವಾಗ ಅವರ ಶಿಷ್ಯ ಬಳಗವೇ ಚಳವಳಿಗಳಲ್ಲಿ ಹೊಸ ಅಲೆಯ ಸ್ಥಿತ್ಯಂತರಗಳನ್ನು ಕಂಡಿದ್ದು. ಹಾಗೇ ಕಿ.ರಂ ನಾಗರಾಜ ಅವರ ಶಿಷ್ಯ ಬಳಗ, ಪೂರ್ಣಚಂದ್ರ ತೇಜಸ್ವಿಯ ಶಿಷ್ಯ ಬಳಗ, ಮುಂತಾದವರನ್ನು ಸಂಘಟನೆಗಳಲ್ಲಿ ಆದರ್ಶವಾಗಿ ತೆಗೆದುಕೊಂಡು ನಿರಂತರವಾಗಿ ಪ್ರಗತಿಪರ ಅಂದರೆ 'ಸಮುದಾಯ', ದಲಿತ-ಬಂಡಾಯ, ಜಾತಿ ನಿರ್ಮೂಲನ ವೇದಿಕೆ, ವಿದ್ಯಾರ್ಥಿ ಸಂಘಟನೆ, ಯುವಜನ ಸಂಘಟನೆ, ಮಹಿಳಾ, ರೈತ-ಕಾರ್ಮಿಕ-ಸರ್ಕಾರಿ ನೌಕಾರರ ಹಾಗೂ ಇತರೆ ದುಡಿಯುವ ಜನರ ಸಂಘಟಿತ ಶಿಷ್ಯ ಬಳಗದಿಂದ ಮುಖಂಡ ತೋರಿದ ದಾರಿಯಲ್ಲಿ ನಿಷ್ಠೆಯಿಂದ ಸಂಘಟಿತರಾಗಿ ಚಳವಳಿಗಳನ್ನು ಕಟ್ಟುತ್ತಿದ್ದುದನ್ನು ಕಾಣುತ್ತೇವೆ. ಎಪ್ಪತ್ತರ ಹಾಗೂ ಎಂಬತ್ತರ ದಶಕದ 'ರಾಜಕಾರಣದ ಚರಿತ್ರೆ'ಯನ್ನು ಅಧ್ಯಯನ ಮಾಡಿದಾಗ ತಿಳಿಯಬಹುದಾಗಿದೆ. ಜೊತೆಗೆ ಈ ಎಲ್ಲಾ ಚಳವಳಿಗಳ ಭಾಗವಾಗಿ 'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯು ಸುಮಾರು ೫೦೦ಕ್ಕೂ ಹೆಚ್ಚು ಬೀದಿ-ರಂಗ ನಾಟಕಗಳನ್ನು ಇಡೀ ಕರ್ನಾಟಕ ಹಾಗೂ ಭಾರತದ ವಿವಿಧ ವರ್ಗಗಳಲ್ಲಿಯೂ ಪ್ರದರ್ಶನ

ನಡೆಸಿದ ಐತಿಹಾಸಿಕ ರಂಗ ಚಳವಳಿಗೆ ಪೂರಕವಾದ ನಾಟಕಗಳ ಪಟ್ಟಿಯನ್ನು ಈ ಕೆಳಗಿನಂತೆ ಕಾಣಬಹುದು.

೫.೪. 'ಸಮುದಾಯ' ರೂಪಿಸಿದ ಕ್ರಿಯಾತ್ಮಕ ರಂಗಭೂಮಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದರಲ್ಲೂ ನಾಟಕ ಸಾಹಿತ್ಯದಲ್ಲಿ 'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯು ರೂಪಿಸಿದ ಹೊಸ ವಿಧಾನದ ಕ್ರಿಯಾತ್ಮಕ ಹಾಗೂ ಸೃಜನಶೀಲ ನಾಟಕಗಳು ಬಹಳಷ್ಟು ಬಂದವು. ಏಕೆಂದರೆ ಹವ್ಯಾಸಿ ರಂಗಭೂಮಿ ೧೯೩೦ರ ದಶಕದಿಂದಲೇ ಪ್ರಾರಂಭವಾದರೂ, ಅದು ಪೂರ್ತಿಯಾಗಿ ವೃತ್ತಿರಂಗಭೂಮಿಯ ಮೂಲ ಆಶಯಗಳನ್ನು ಬಿಟ್ಟು ಬರದ ಕಾರಣ 'ಸಮುದಾಯ' ತೃತೀಯ ರಂಗಭೂಮಿಯಾದ ರಷ್ಯಾ, ಜರ್ಮನಿಯ 'ಮಾರ್ಕ್ಸಿಂಗಾರ್ಕಿ' ನಾಟಕ ಸಾಹಿತ್ಯದ ರೂಪ ಹಾಗೂ ಬ್ರೆಕ್ಟ್‌ನ ನಾಟಕ ರೂಪಾಂತರಗೊಂಡವು. ವಿಶ್ವದಾದ್ಯಂತ ತೃತೀಯ ರಂಗಭೂಮಿ ಹೊಸ ಸೃಜನಶೀಲತೆಯ ನಾಟಕಗಳನ್ನು ನೀಡಲು ಮುಂದಾಯಿತು. 'ಶೂನ್ಯ ಬಂಡವಾಳ'ವನ್ನು ಬಳಸಿ ಕೇವಲ ಮಾನವ ಶ್ರಮವನ್ನು ಮಾತ್ರ ಬಳಸಿಕೊಂಡು 'ಎಫ್‌ಕ್ಟೀವ್'ಆಗಿ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ನಾಟಕ ಪ್ರದರ್ಶನ ನೀಡುವುದು ಹೇಗೆ ಎಂಬ ಅಂಶವನ್ನು ನಿರಂತರವಾಗಿ ಚರ್ಚೆ, ಸಂವಾದಗಳ ಮೂಲಕ ಕೈಗೊಳ್ಳಲಾಯಿತು. ನಾಟಕ ಎಂದರೆ 'ಕಲೆಗಾಗಿ ಕಲೆ ಅಲ್ಲ', 'ಕಲೆ ಬದುಕಿಗಾಗಿ ಕಲೆ' 'ಜನ ಸಾಮುದಾಯಕ್ಕಾಗಿ ಕಲೆ' ಎಂಬ ಚಿಂತನೆಯ ಮೂಲಕ ೧೯೭೫ರಲ್ಲಿ ಹೊಸ ಕ್ರಿಯಾತ್ಮಕ ನಾಟಕಗಳು ಅದರಲ್ಲೂ ಬೀದಿ ನಾಟಕಗಳನ್ನು ಆರಂಭಿಸಿದರು.

ಸರ್ಕಾರಗಳು ಮಾಡುವ ಶೋಷಣೆಯ ವಿರುದ್ಧ ನಾಟಕ ಮಾಡಿ ಹಣವನ್ನು ಅವರೇ ಸಂಗ್ರಹಿಸಬೇಕು. ಬೀದಿನಾಟಕಗಳ ಮೂಲಕ ಅವರಿಗೆ ಖರ್ಚು ಮಾಡಬೇಕು ಎಂಬ ಆಶಯದೊಂದಿಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ೧೯೭೮ರಲ್ಲಿ ಬೆಂಗಳೂರಿನ ಕೆಂಗೇರಿಯ ಬಳಿ ಇರುವ ಕುಂಬಳಗೋಡಿನಲ್ಲಿ ಭಾರತದ ಪ್ರಖ್ಯಾತ ರಂಗಕರ್ಮಿಗಳಾದ ಕಲ್ಕತ್ತಾದ ಬಾದಲ್ ಸರ್ಕಾರ್ ಅವರನ್ನು ಕರೆಸಿ 'ಸಮುದಾಯ' ಸಂಘಟನೆಗೆ ರಂಗ ತರಬೇತಿ ಶಿಬಿರವನ್ನು ಮಾಡಿಸಿದ ನಂತರ ಕರ್ನಾಟಕ ರಂಗಚಳವಳಿಯ ದಿಕ್ಕೇ ಬದಲಾಯಿತು. ಬೆಲ್ಚಿಯಂಥ ನಾಟಕಕ್ಕೆ ಬೆಂಗಳೂರಿನ ಶ್ರೀರಾಂಪುರದ ಸ್ಲಂ ಯುವಕರನ್ನು ಸಿದ್ಧಲಿಂಗಯ್ಯ, ಸಿ.ಬಸವಲಿಂಗಯ್ಯ, ಜನಾರ್ಧನ ಸೇರಿದಂತೆ ಮಾವಳ್ಳಿಯ ಸ್ಲಂ ಹುಡುಗರು ಶ್ರೀರಾಂಪುರದ ಸ್ಲಂ ಹುಡುಗರು, ಹಾಗೂ ಕೋಣನಕುಂಟೆ ಸ್ಲಂ ಹುಡುಗರು ವಿಶೇಷ ರಾತ್ರಿ ಶಾಲೆಗಳ ಮೂಲಕ ರಂಗ ಚಟುವಟಿಕೆಗಳಲ್ಲಿ ಭಾಗವಹಿಸಿದರು.[೩೩] ಸಮುದಾಯ, ದಲಿತ ಸಂಘಟನೆ, ಬಂಡಾಯ ಸಂಘಟನೆಗಳಲ್ಲಿ ಸಕ್ರಿಯಗೊಳಿಸಿ ನಂತರ 'ಸಮುದಾಯ'ದ ಮೂಲಕ ರಂಗಭೂಮಿಯಲ್ಲಿ ಸಕ್ರಿಯವಾಗಿರುವ ಯುವಕ-ಯುವತಿಯರನ್ನು ಪ್ರಸನ್ನ, ಎಂ.ಎಸ್.ಸತ್ಯು ಅವರ ಸಹಕಾರದೊಂದಿಗೆ ದೆಹಲಿಯ ಎನ್.ಎಸ್.ಡಿ ಗೆ ಆಯ್ಕೆ ಮಾಡಲಾಯಿತು. ರಂಗ ತರಬೇತಿ ಪಡೆದ ನಂತರ ಇಡೀ ಕರ್ನಾಟಕದ 'ಸಮುದಾಯ' ರಂಗ

ಸಂಘಟನೆಗಳಲ್ಲಿ ಸಂಘಟನೆ, ನಿರ್ದೇಶನ, ನಾಟಕ ರಚನೆ, ರಂಗ ನೆಪಥ್ಯ ವಿಶೇಷವಾಗಿ ಬೀದಿನಾಟಕಗಳ ವಿಭಿನ್ನ ಆಯಾಮಗಳು ಹಾಗೂ ಬೀದಿ ರಂಗಭೂಮಿಗಿರುವ ಸೈದ್ಧಾಂತಿಕ ಬದ್ಧತೆಯನ್ನು ಕಲಿತು ಮೂವತ್ತಕ್ಕೂ ಹೆಚ್ಚು ಕಲಾವಿದರು ಎನ್.ಎಸ್.ಡಿ ಯಿಂದ ತರಬೇತಿ ಪಡೆದು 'ಸಮುದಾಯ' ಸಂಗಾತಿಗಳಾದರು. ನಂತರ ಇಡೀ ಕರ್ನಾಟಕ ರಂಗ ಚಳವಳಿಯನ್ನು ಕಟ್ಟುವಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿದ್ದು ಚಾರಿತ್ರಿಕವಾದ ಸಂಗತಿಯಾಗಿದೆ.

'ಸಮುದಾಯ' ಸಂಘಟನೆಯು ನೂರಾರು ಬೀದಿ-ರಂಗ ನಿರ್ದೇಶಕರನ್ನು, ನಾಟಕ ರಚನಾಕಾರರು, ಸಂಗೀತಗಾರರು, ಇನ್ನೂರಕ್ಕೂ ಹೆಚ್ಚು ಚಿತ್ರಕಲಾವಿದರು, ಹಾಡುಗಾರರು, ಗಾಯಕರು, ಸಾವಿರಾರು ನಟರು, ಕವಿಗಳು, ಸಾಹಿತಿಗಳು, ರಾಜಕಾರಣಿಗಳು, ವಿಜ್ಞಾನಿಗಳು, ಜೊತೆಗೆ ಬಹುತೇಕ ಪ್ರಾಧ್ಯಾಪಕರನ್ನೊಳಗೊಂಡಂತೆ 'ರಂಗ ಸಮುದಾಯ' ಸಂಘಟಕರನ್ನು ಹುಟ್ಟುಹಾಕಿದೆ. ಹೀಗೆ 'ಸಮುದಾಯ' ನಾಟಕ ಹೊಸ ಕ್ರಿಯಾತ್ಮಕ-ಸೃಜನಶೀಲ ನಾಟಕದ ಆಶಯ, ವಸ್ತು, ಅರ್ಥವಿನ್ಯಾಸ, ಸಂರಚನೆ, ಪರಿಕಲ್ಪನೆಯಲ್ಲೂ ಮಾನವ ನಿರ್ಮಿತವಾಗಿರುವುದು ಎದ್ದುಕಾಣುತ್ತದೆ. 'ಸಮುದಾಯ' ನಾಟಕಗಳಿಗೆ ನೇರವಾಗಿ ಸ್ಪಂದಿಸಬೇಕು. ಜೊತೆಗೆ ಆ ನಾಟಕದಿಂದ ಪ್ರೇಕ್ಷಕ ಬದಲಾವಣೆ ಹೊಂದಬೇಕು ಅಥವಾ ಶೋಷಣೆಯ ವಿರುದ್ಧ ಸಂಘಟಿತನಾಗಿ ಹೋರಾಟಕ್ಕೆ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ರೂಪಿಸಿದ್ದು 'ಸಮುದಾಯ' ಕ್ರಿಯಾತ್ಮಕ ರಂಗ ಚಳವಳಿಗೆ ಸಾಧ್ಯವಾಗುತ್ತದೆ. ಉದಾಹರಣೆ: ೧೯೭೫ರಲ್ಲಿ ಹುಟ್ಟಿಕೊಂಡ ಸಮುದಾಯದ ಜಾಥಾಗಳಿಂದ ಹಾಗೂ ನಾಟಕಗಳಿಂದ ೧೯೮೧ರಲ್ಲಿ ಗುಂಡುರಾವ್ ಸರ್ಕಾರವನ್ನು ಉರುಳಿಸಲಾಯಿತು. 'ನರಗುಂದ ರೈತ ಬಂಡಾಯ' ನಾಟಕದ ಮೂಲಕ, ಕ್ರಾಂತಿಗೀತೆಗಳು ಹಾಗೂ ದಲಿತ-ಬಂಡಾಯ ಸಾಹಿತ್ಯ ಸೃಷ್ಟಿಯಿಂದ ರೈತ-ಕಾರ್ಮಿಕ-ವಿದ್ಯಾರ್ಥಿ-ಯುವಜನ-ಮಹಿಳೆಯರ ಐಕ್ಯತೆಗೆ ಸಾಂಸ್ಕೃತಿಕ ರಂಗ ಸಂಘಟನೆಗಳು ರೂಪುಗೊಂಡವು. ಇದರ ಸಹಭಾಗಿತ್ವದಲ್ಲಿ ಲಕ್ಷಾಂತರ ಸಾಮಾನ್ಯ ಜನರನ್ನು ಒಟ್ಟುಗೂಡಿಸಿ ರಾಜ್ಯ ವಿಧಾನಸೌಧ ಚಲೋ ಚಳವಳಿಯನ್ನು 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಪ್ರಮುಖ ಪಾತ್ರವಹಿಸಿದ್ದು ಚಾರಿತ್ರಿಕ ಘಟ್ಟ ಎಂದು ಗುರುತಿಸಬಹುದು. ಹೀಗೆ 'ಸಮುದಾಯ'ವು ಸಂಘಟನೆಯ ಇಂದಿನ ಸಮಸ್ಯೆ ಹಾಗೂ ಶೋಷಣೆಯ ವಿರುದ್ಧ ನಿರಂತರವಾಗಿ ಚಳವಳಿಯನ್ನು ಕಟ್ಟುತ್ತಿರುವ ಕರ್ನಾಟಕ ಸಾಂಸ್ಕೃತಿಕ ಸಂಘಟನೆಗಳಲ್ಲಿ ಪ್ರಮುಖವಾದದ್ದು.

೫.೫. 'ಸಮುದಾಯ'ದ ನಟ-ನಟಿಯರು ಹಾಗೂ ರಂಗ ನೇಪಥ್ಯ ತಂತ್ರಜ್ಞರು

'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯಲ್ಲಿ ಸಾವಿರಾರು ನಟ-ನಟಿಯರು ಹಾಗೂ ರಂಗ ನೇಪತ್ಯದ ತಂತ್ರಜ್ಞರು, ನೂರಾರು ಕಲಾವಿದರು ಕರ್ನಾಟಕದ್ಯಾಂತ ರಂಗಭೂಮಿ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದು, ೧೯೭೫ರಲ್ಲಿ 'ಸಮುದಾಯ' ಸಂಘಟನೆ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಪಾರ್ಕಿನಲ್ಲಿ ಚಿಕ್ಕ ಸಭೆ ಸೇರಿ ನಂತರ ತುಮಕೂರು, ಮೈಸೂರು, ಮಂಗಳೂರು, ಧಾರವಾಡ, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಕೆ.ಜಿ.ಎಫ್, ಕುಂದಾಪುರ, ಸಿಂಧನೂರು, ಹರಪನಹಳ್ಳಿ,

ಶಿವಮೊಗ್ಗ, ಗೌರಿಬಿದನೂರು ಮುಂತಾದ ತಾಲ್ಲೂಕುಗಳಲ್ಲಿ ಕೈಗೊಂಡಿತ್ತು. ಹತ್ತು ವರ್ಷಗಳ ನಂತರ ೩೬ಕ್ಕೂ ಹೆಚ್ಚು ಘಟಕಗಳಾಗಿದ್ದು ಕಾಣುತ್ತೇವೆ. ಈ ಎಲ್ಲಾ ೩೬ 'ಸಮುದಾಯ' ಸಾಂಸ್ಕೃತಿಕ ಘಟಕಗಳಲ್ಲಿ ನೂರಾರು ನಟ-ನಟಿಯರು, ರಂಗ ನಿರ್ದೇಶಕರು, ರಂಗ ನೇಪತ್ಯ ತಂತ್ರಜ್ಞರು ಹಾಗೂ ಕವಿಗಳು, ಸಾಹಿತಿಗಳು, ಗಾಯಕರು, ಚಿತ್ರ ಕೂಲಿಕಾರರು, ವಿಜ್ಞಾನಿಗಳು, ಕಾರ್ಟೂನಿಸ್ಟರು, ರಾಜಕಾರಣಿಗಳು ಮುಂತಾದವರು ನಾಡಿನಾದ್ಯಂತ ಪ್ರಮುಖ ಸ್ಥಾನಗಳಲ್ಲಿರುವುದು ಗುರುತಿಸಬಹುದಾಗಿದೆ. 'ಸಮುದಾಯ' ರೂಪಿಸಿದ ಸೈದ್ಧಾಂತಿಕ ಬದ್ಧತೆಗೆ ಕೆಲವು 'ಸಮುದಾಯ'ಗಳು ಜನ 'ಸಮುದಾಯ'ದ ಒಳಿತಿಗಾಗಿ ದುಡಿದರು. ಇನ್ನೂ ಕೆಲವು 'ಸಮುದಾಯ' ಸಂಘಟನೆಗಳು ವೈಯಕ್ತಿಕವಾಗಿ ಬೆಳೆದು ಸಮುದಾಯದಿಂದ ದೂರ ಉಳಿದವು. ಆದರೆ 'ಸಮುದಾಯ'ದ ಸಾಂಸ್ಕೃತಿಕ ಸಂಘಟನೆಯಲ್ಲಿ ಕೆಲವು ಒಳ್ಳೆಯ ಅಂಶಗಳು ಕಲಿತಿದ್ದೇವೆ ಎಂಬ ನಂಬಿಕೆ, ವಿಶ್ವಾಸ, 'ಸಮುದಾಯ'ದಿಂದ ಹೊರಗುಳಿದ ಸಂಗಾತಿಗಳ ಅಭಿಪ್ರಾಯವಾಗಿದೆ.

'ಸಮುದಾಯ' ಸಂಘಟನೆಯಲ್ಲಿ ಪೂರ್ಣಾವಧಿ ಸಂಗಾತಿಗಳಾಗಿ ದುಡಿದ ಕೆಲವು ಪ್ರಮುಖರು ಇದ್ದಾರೆ. ಇನ್ನೂ ಕೆಲವು ಸಂಗಾತಿಗಳು ಅಲ್ಪಕಾಲ 'ಸಮುದಾಯ'ದಲ್ಲಿ ಅನುಭವ ಪಡೆದು ಪ್ರತ್ಯೇಕ ರಂಗ ಸಂಘಟನೆಗಳನ್ನು ಕಟ್ಟಿಕೊಂಡಿದ್ದಾರೆ. ಜೊತೆಗೆ 'ಸಮುದಾಯ'ದ ಆರಂಭದಿಂದ ಇಲ್ಲಿಯವರಿಗೂ ನಾಲ್ಕುವರೇ ದಶಕಗಳ ಕಾಲ 'ಸಮುದಾಯ' ಸಂಘಟನೆಗೋಸ್ಕರ ತನ್ನ ಕುಟುಂಬ ಸಮೇತ ದುಡಿದ ಸಿ.ಕೆ.ಗುಂಡಣ್ಣ ಅಂಥವರು ಇದ್ದಾರೆ. ಹವ್ಯಾಸಿ ನಟರಾಗಿ ತಮ್ಮ ಸ್ವಂತ ಕೆಲಸ ನಿರ್ವಹಿಸುತ್ತಾ 'ಸಮುದಾಯ' ಚಟುವಟಿಕೆಯಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುವರು ಇದ್ದಾರೆ.[೩೪] ಇಂಥವರನ್ನು ಅವರ ನಟನೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು. ಇವರು ಸಮುದಾಯ ಪ್ರಮುಖ ಹಿರಿಯ ನಟರಾಗಿದ್ದು ಉಳಿದ ನಟರನ್ನು, ನಟಿಯರನ್ನು ಇತರ 'ಸಮುದಾಯ' ಸಂಘಟಕರನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

'ಸಮುದಾಯ'ದ ಪ್ರಮುಖ ನಟ-ನಟಿಯರು(ಬೆಂಗಳೂರು ಸಮುದಾಯ)

ಜಿ.ಕೆ.ಗೋವಿಂದ ರಾವ್	ಮೋಹನ್ ಕುಮಾರ್	ಶಿವರಾಂ
ಲಕ್ಮೀ ಚಂದ್ರಶೇಖರ್	ನಿಜಗುಣ	ಗೋಪಾಲಕೃಷ್ಣ ನಾಯರಿ
ಲೋಕನಾಥ್.	ಸಾ.ಚಿ.ನಾಗರಾಜ	ಕೆ.ಮರಳಸಿದ್ದಪ್ಪ
ಜಯಶ್ರೀ.ಬಿ	ಕಡ್ಡಿ ಮೋಹಾನ್	ಸಿ.ವೀರಣ್ಣ
ಸ್ವರ್ಣಮ್ಮ	ಸನತ್ ಕುಮಾರ್ ಬೆಳಗಲಿ	ವಿಮಾಲ.ಕೆ.ಎಸ್
ಮಾಲತಮ್ಮ	ರಟ್ಟಿ ಹಳ್ಳಿ ಮುದ್ದಣ್ಣ	ಎಂ.ಜಿ.ವೇಕಟೇಶ್
ರಾಮೇಶ್ವರಿ ವರ್ಮ	ರಮೇಶ್ ಪಂಡಿತ್	ಶಶಿಧರ್ ಅಡಪ

ಸಿ.ಆರ್.ಸಿಂಹ	ತಾಜುಯಾ	ಶಶಿಧರ್ ಬಾರಿಘಾಟ್
ಎಸ್.ಮಾಲತಿ	ಎನ್.ಕೆ.ವಸಂತರಾಜು	ಗುಂಡಣ್ಣ.ಸಿ.ಕೆ
ಲೋಹಿತಾಶ್ವ .ಟಿ.ಎಸ್	ಶಂಕರ.ಎಂ.ಕೆ	ಎಸ್.ಕೆ.ರುದ್ರಮೂರ್ತಿ
ಕೆ.ಶರೀಫಾ	ಆರ್.ಟಿ.ರಮಾ	ರೇಣುಕಾಪ್ರಸಾದ್
ಮುಖ್ಯಮಂತ್ರಿ ಚಂದ್ರು	ಕಾರ್ಲೋಸ್	ಎಂ.ಎಸ್.ವಿದ್ಯಾ
ದತ್ತಣ್ಣ.ಎಚ್.ಜಿ	ನವರಸನ್	ಕೆ.ಆರ್.ಶ್ರೀನಿವಾಸ್
ಆನಂದ.ಎಂ.ಸಿ	ಸದಾಶಿವಂ	ಸಿದ್ದುರಾಜು.ಜಿ
ಸುರೇಂದ್ರರಾವ್ .ಟಿ	ರವೀಂದ್ರ ಸಿರಿವರ	ಎಲ್.ಕೃಷ್ಣಪ್ಪ
ಮಾದವ್ ರಾವ್.ಟಿ	ಉದಯ್ ಕುಮಾರ್	ಕೇಶವ(ಕೇಶವಲು)
ಮೋಹಾನ್ ಚಂದ್ರ	ನರೇಂದ್ರ ಪಾಣಿ	ಬಿ.ಎಸ್.ಪರೇಶ್ ಕುಮಾರ್
ಶ್ರೀನಿವಾಸ ಗಟೇಕರ್	ಗೋಪಿ	ಎಸ್.ಬಸವರಾಜು
ಸುಂದರ್ ರಾಜ್	ರಾಜಣ್ಣ	ಮೀತಾ ಮಿಶ್ರ
ಕೃಷ್ಣ ಮೂರ್ತಿ	ಎಚ್.ವಿ.ವೇಣುಗೋಪಾಲ	ಜಿ.ಬಿ.ರೇವಣಾ ಆರಾಧ್ಯ
ಗೌರಿ ದತ್ತು	ಎನ್.ಮಂಗಳಾ	ಶೇಖನಗೌಡ
ಎಂ.ಚಂದ್ರಶೇಖರ್ ರಾವ್	ಲಲಿತಾ	ಮಾಲತೇಶ
ಎಚ್.ಎ ಪ್ರಕಾಶ್	ಸುಶೀಲಾ	ಸುಷ್ಮ
ಮಾದವ್ ರಾವ್	ಗಾಯಿತ್ರಿ	ಸಂಚಾರಿ ವಿಜಯ್
ಬರಗೂರು ರಾಮಚಂದ್ರಪ್ಪ	ಪ್ರೇಮಾಕಾರಂತ	ಹರ್ಷ

ಈ ಮೇಲಿನವರು ಬೆಂಗಳೂರಿನ ಸಮುದಾಯಕ್ಕೆ ಬೆನ್ನೆಲುಬಾಗಿದ್ದು ಎಂ.ಎಸ್.ಸತ್ಯು ನರಸಿಂಹ.ಟಿ.ಎಸ್, ಬಿ.ವಿ.ಕಾರಂತ, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ್ ಪಾಟೀಲ, ಆರ್.ಕೆ.ಹುಡಗಿ, ಕೆ.ವಿ.ಸುಬ್ಬಣ್ಣ, ಕೆ.ವಿ.ನಾರಾಯಣ, ಎಲ್.ಹನುಮಂತಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಅಗ್ರಹಾರ ಕೃಷ್ಣ ಮೂರ್ತಿ, ಸಿ.ವೀರಣ್ಣ, ಡಿ.ಆರ್.ನಾಗರಾಜ, ಕಿ.ರಂ.ನಾಗರಾಜ, ಪ್ರಸನ್ನ, ಸಿಜಿ.ಕೃಷ್ಣಸ್ವಾಮಿ, ಪಿ.ಗಂಗಾಧರ ಸ್ವಾಮಿ, ಎಸ್.ಮಾಲತಿ, ಜನಾರ್ಧನ್(ಜನ್ನಿ), ಸಿದ್ಧಲಿಂಗಯ್ಯ, ಸಿ.ಬಸವಲಿಂಗಯ್ಯ, ಎನ್.ಕೆ.ವಸಂತರಾಜು ಮುಂತಾದವರ ಮೂಲಕ ಬೆಂಗಳೂರು ನಗರ 'ಸಮುದಾಯ'ದ ಘಟಕದಲ್ಲಿ ನಿರಂತರವಾಗಿ ನಟ-ನಟಿಯಾರಾಗಿದ್ದ ರಂಗನೇಪತ್ಯ, ಸಂಘಟಕರು ಕೂಡ ಇರುವುದನ್ನು ನೋಡಬಹುದಾಗಿದೆ. ಇವರ ಜೊತೆಯಾಗಿ

ಆರಂಭದ ದಶಕದ 'ಸಮುದಾಯ' ಇತರೆ ಜಿಲ್ಲೆಯ ನಟ–ನಟಿ ಹಾಗೂ ಪ್ರಮುಖ ಸಂಘಟಕರು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಉತ್ತರ ಕರ್ನಾಟಕದ 'ಸಮುದಾಯ' ಸಂಘಟನೆಯ ಜಿಲ್ಲಾವಾರು ಸಂಘಟಕರು

೧. ಗುಲಬರ್ಗ ಸಮುದಾಯ : ಆರ್.ಕೆ.ಹುಡುಗಿ, ಶಂಕರಯ್ಯ, ಆರ್.ಘಂಟಿ, ಶರಣಪ್ಪ ಸೈದಾಪುರ, ಅಶೋಕ ಶೆಟ್ಟಿ, ಕಮಲಕರ, ಓಕಳಿ ಪಾಟೀಲ್, ಸಿ.ಎ.ಪಾಟೀಲ್, ಗಂಗಾಧರ ನಮೋಶ, ಕೆ.ನೀಲಾ ಮತ್ತು ಮೀನಾಕ್ಷಿ ಬಾಳಿ ಇತರ ಗುಲ್ಬರ್ಗಾ ಭಾಗದವರು.

೨. ಹುಬ್ಬಳ್ಳಿ–ಧಾರವಾಡದ ಸಮುದಾಯ : ಟಿ.ಗಂಗಾಧರ ಸ್ವಾಮಿ, ಶೀಲಾ ಸ್ವಾಮಿ, ಬಿ.ಐ.ಈಳಗೇರ, ಜೀವನ ಮಾವಿನಕರ, ಸೋಮಶೇಖರ ಜಾಡರ, ದಿಲ್‌ವರ ರಾಮದುರ್ಗ, ಸಂಪಿಗೆ ತೊಂಟದಾರ್ಯ, ರಮೇಶ್ ಮೋಟೆ ಬೆನ್ನೂರ, ಧನುಂಜಯ ಕುಲಕರ್ಣಿ, ಬಸವರಾಜ ಕೊಡಗೆ, ವಿಲಾಸ್ ಶೇರಖಾನ್, ಗಣೇಶ್ ಜೋಷಿ, ಜಿ.ಎಚ್.ರಾಘವೇಂದ್ರ, ಕೆ.ವಿ.ರಾಯಚೂರು, ಗಂಗಾಧರ ಗಾಡದ, ಕಟ್ಟಿ ಸಹೋದರರು, ವಿ.ಎನ್.ದೇಶಪಾಂಡೆ, ಟಿ.ಬಿ.ಸೊಲಬಕ್ಕನವರ, ಎಚ್.ಎ.ಪಾರ್ಶ್ವನಾಥ, ಚಿತ್ತರಂಜನ್ ಚಟರ್ಜಿ, ಮಾಲತೇಶ್ ಬಡಿಗೇರ ಇವರುಗಳು ಹುಬ್ಬಳ್ಳಿ ಧಾರವಾಡ ಸಮುದಾಯದ ಭಾಗವಾಗಿದ್ದರು.

೩. ಬಳ್ಳಾರಿ ಸಮುದಾಯ: ಎಸ್.ಎಸ್.ಹೀರೆಮಠ, ಶಾಂತಕುಮಾರಿ, ಪ್ರಭಾಕರ, ಬೀಮ್‌ಸೇನ್ ಆಚಾರ್, ವೆಂಕೋಬಿ ನಾಯಕ, ಎಲ್.ಎಚ್.ಶೇಷಗಿರಿರಾವ್, ಶಾಮ್ ಸುಂದರ್, ಗುಡಹಳ್ಳಿ ನಾಗರಾಜ, ರತನ್ ಸಿಂಗ್, ವೆಂಕೋಬಿ, ರಾಮಚಂದ್ರ ನಾವಡ, ಬಸವರಾಜ, ರಾಮಾಂಜಿನೇಯ, ಹುಲಗಪ್ಪ, ಶಿವರಾಮ, ವೆಂಕಣ್ಣ, ನಟರಾಜ, ಗೌಡ ನೀಲಕಂಠ, ಗಿರಿಧರ್ ರಾವ್, ರಾಮನಾಥ ಆಂಜನಪ್ಪ, ಮರಿಯಪ್ಪ, ಖಾಸಿಂ, ಕ್ಯಾದಿಗಿನಹಳ್ಳಿ ಅಂಬವ್ವ, ಇಸ್ಮಾಯಿಲ್ ಯಲಗಾರ, ಮೇಟ್ರಿ ಕೊಟ್ರಪ್ಪ, ಗಿರಿಧರ್ ಹವ್ಲಾದಾರ್, ರಂಗನಾಥ್ ಹವ್ಲಾದಾರ್, ಹುರುಗಡಲಿ ಶಿವಕುಮಾರ, ಸುರೇಂದ್ರ, ಶೇಖ್ರಪ್ಪ(ತಮಟೆ), ಬಸವಂತ, ಹುಲಕಟ್ಟಿ ಚನ್ನಬಸಪ್ಪ, ಮಾಳಮ್ಮ, ಬಸವರಾಜ ಕಂಬಾರ.

೪. ರಾಯಚೂರು ಸಮುದಾಯ: ಶಾಂತರಸ, ವಿ.ಎನ್.ಅಕ್ಕಿ, ಶ್ರೀಕಾಂತ್ ಕಕ್ಕೇರಿ, ಎಂ.ಬಿ.ಪಾಟೀಲ್, ಬಸವಪ್ರಭು, ರಾಜಶೇಖರ ನೀರ ಮಾನ್ವಿ, ತಾಯಣ್ಣ ಯರಗೇರ, ಪುರುಷೋತ್ತಮ ಕಲಾಲ್ ಬಂಡಿ, ಚಂದ್ರಶೇಖರ್ ಬಾಳೆ, ಶರಣ ಮಾಲೀಪಾಟೀಲ, ಲಿಂಗಣ್ಣ, ಬಿ.ಬಿ.ಕುಲಕರ್ಣಿ, ಶ್ರೀನಿವಾಸ್ ನಾಗರದಿಣ್ಣಿ, ಸಿ.ಎ.ಪಾಟೀಲ, ಆರ್.ಬಸವರಾಜ್, ಸೋಮಾನಾಥ, ಎಸ್.ಜಿ.ಸ್ವಾಮಿ. ಪುಲ್ಹಾದರಾವ್, ಕೆ.ಬಸವರಾಜು, ಶಾಮಲಾ ಪುರುಷೋತ್ತಮ, ಶಿವಕುಮಾರಿ, ಗೋಪಾಲ ಕೃಷ್ಣ ದೇವೆಂದ್ರ ಗೌಡ, ಮಂಜುಳ ಗಂಗಾಧರ ಕುಷ್ಟಗಿ, ಶಾಂತವಿಶ್ವನಾಥ, ಮುಕ್ತಾಯಕ್ಕ, ವೀಣಾ ಮುಂತಾದವರು.

೫. ಬೀದರ್ ಸಮುದಾಯ: ಶಂಬುಲಿಂಗ ವಾಲದೊಡ್ಡಿ, ಬಸವರಾಜ ಕೊಡುಗೆ, ಜೋಶಿ ಚಂದ್ರಗುಪ್ತ, ಚಾಂದಕ ವಠೆ, ಧಮನ್ ಪಾಟೀಲ್, ಆಗಸ್ಟೀನ್, ಕಾಶಿ ಅಂಬಲಿಗೆ ಮುಂತಾದವರು.

೬. ಮಂಗಳೂರು ಸಮುದಾಯ: ವಾಸುದೇವ್ ಉಚ್ಚಿಲ್, ಐ.ಕೆ.ಬೋಳುವಾರು ಮಹಮದ್ ಕುಂಞ, ಹರಿಶ್ಚಂದ್ರ ಭಟ್, ಸುರೇಶ್ ಶೆಟ್ಟಿ, ಪ್ರಕಾಶ್ ಶೆಟ್ಟಿ, ಟಿ.ಅಂಗಾರ, ಸುಧಾಕರ್ ರಾವ್, ಎ.ಎಸ್.ಆಚಾರ್ಯ, ವಾದಿರಾಜ ಬುದ್ಯ, ಶಶಿಧರ್ ಹೆಗಡೆ, ರಾಮಕೃಷ್ಣ, ಎಸ್.ಎಸ್.ಭಟ್, ಎಂ.ಬಾಲಕೃಷ್ಣ, ಕೆ.ಪ್ರಭಾಕರನ್, ಗೋಪಾಲ ಚಂದನ್, ಚಂದ್ರಹಾಸ್ ಉಲ್ಲಾಳ್ ಮುಂತಾದವರು.

೭. ಉತ್ತರ ಕನ್ನಡ ಸಮುದಾಯ: ಜಿ.ವಿ.ಕಾರಂತ, ವಾಲ್ಟರ್.ಜಿ.ಜೋಗ, ಸುರೇಶ್ ಅನಗಳ್ಳಿ, ಭಾಸ್ಕರ ಮಯ್ಯ, ಸಿ.ಆರ್.ಭಟ್, ಸುಕುಮಾರ.ಕೆ, ಉದಯ್ ಗಾವಂಕರ್, ಉದಯ್ ಕುಮಾರ್, ವಿ.ಗಣೇಶ್ ಕಾರಂತ, ಶ್ರೀಪಾದ್ ಭಟ್, ಮಾಧವಿ ಭಂಡಾರಿ, ವಿಠಲ್ ಭಂಡಾರಿ, ಯಮುನಾ ಗಾವಂಕರ್, ಜಯರಾಮ ನಾವಡ, ಆನಂದ ಬಿಲ್ಲಾ, ಗಿರಿಶ್.ಎ, ಕೃಷ್ಣ.ಜಿ.ಮಂಡಲ್, ಬಸವ ಎಂ, ಪದ್ಮನಾಭ.ಎಂ ಶೇಷಪ್ಪ ನವರು, ಶಿವರಾಜ್, ಸುರೇಶ್.ಜಿ.ವಿ, ನರಸಿಂಹ.ಎಚ್, ಸುರೇಶ್ ಆಚಾರ್ಯ, ಬಾಲಕೃಷ್ಣ.ಕೆ, ರಾಜು, ಶೇಷಗಿರಿಕೊಣೆ, ಗಣೇಶ್ ಹೆಬ್ಬಾರ್, ಶಿವರಾಂ ಆಚಾರ್, ಶ್ರೀನಿವಾಸ್ ಮುಂತಾದವರು.

೮. ದಾವಣಗೆರೆ ಸಮುದಾಯ: ಡಿ.ವಿ.ಬಳಿಗೇರ, ಎಸ್.ಸಿ.ಚಿಕ್ಕಮಠ, ಮೋಹನ್ ಕೊಂಡಜ್ಜಿ, ನಾಗಭೂಷಣಯ್ಯ, ಇಕ್ಬಾಲ್ ಹುಸೇನ್, ಶಿಕಾರಿ ಬಾಲಪ್ಪ ಮುಂತಾದವರು.

೯. ಶಿವಮೊಗ್ಗ ಸಮುದಾಯ: ಕೆ.ಲಕ್ಷ್ಮಣ ರಾವ್, ಕೆ.ಪ್ರಭಾಕರನ್, ಆರ್.ಎಸ್.ಗಿರಿ, ತೇಜಸ್, ಶಿವಪುತ್ರ, ಬಿ.ವಿಕ್ರಮ್, ಸಿನೋಜಿರಾವ್, ಎಂ.ಎ.ಪಾಷ,

೧೦. ಕೊಪ್ಪಳ ಸಮುದಾಯ: ರಾಘವೇಂದ್ರ ಕುಷ್ಟಗಿ, ಎನ್.ಎಚ್.ಪೂಜಾರ, ನರಗನ, ಮಹೇಶ್ ಹಿರೇಮಠ

೧೧. ಚಿತ್ರದುರ್ಗ ಸಮುದಾಯ: ಶಂಕರಪ್ಪ ಎಂ.ಟಿ.,

ದಕ್ಷಿಣ ಕರ್ನಾಟಕದ 'ಸಮುದಾಯ'ದ ನಟ – ನಟಿಯರು ಹಾಗೂ ಸಂಘಟಕರು

೧. ಮೈಸೂರು ಸಮುದಾಯ: ಲಿಂಗದೇವರು ಹಳೆಮನೆ, ರಮೇಶ್ ಎಸ್.ಆರ್, ಮುದ್ದು ಕೃಷ್ಣ, ರಾಮೇಶ್ವರಿ ವರ್ಮ, ಬಾಲಗೋಪಾಲ ವರ್ಮ, ಒಡನಾಡಿ ನಾರಾಯಣ, ಮಿರ್ಲೆ, ಶಂಕರ್, ರವೀಶ, ಎಸ್.ರಾಮು, ಮಂಜುನಾಥ ಬೆಳಕರೆ, ವಸುದಾ ಬಾರಿಘಾಟ್, ಜನಾರ್ಧನ(ಜನ್ನಿ), ಡಿ.ಎಸ್.ಶಶಿಕಲಾ, ಶೀಲಾ ಸ್ವಾಮಿ, ಉಮೇಶ್.ಎಚ್.ಎಸ್, ಮುಂತಾದವರು.

೨. ತುಮಕೂರು ಸಮುದಾಯ: ಸಣ್ಣ ಗುಡ್ಡಯ್ಯ, ಲೋಹಿತಾಶ್ವಟಿ.ಎಸ್, ನಿರಂಜನ ಆರಾಧ್ಯ(ವಿಜ್ಞಾನಿ), ಯತಿರಾಜ್, ಸಿದ್ಧಯ್ಯ, ಟಿ.ಎಸ್.ಅನಂತರಾಮ್, ಸೂರ್ಯಪ್ರಕಾಶ್ ನಾಯಕ್, ಕುಮಾರ ಮುಂತಾದವರು.

೩. ಕೋಲಾರ ಸಮುದಾಯ: ಎಸ್.ಕೃಷ್ಣ ಮೂರ್ತಿ(ಕಿಟ್ಟಿ), ಚೊಕ್ಕಲಿಂಗಂ, ಸೆಲ್ವ ಪಿಳ್ಳೆ(ಶೆಲ್ಲಿ), ಅಚ್ಯುತ, ಅರ್ಜುನ್, ರಾಧಕೃಷ್ಣ, ಜನಾರ್ಧನ, ಗಣೇಶ್.ಎ.ಜಿ, ಪ್ಲೋರಾ, ವೆಂಕಟರಾವ್, ಗಂಗಾಧರ ಮೂರ್ತಿ, ಚಂದ್ರಶೇಖರ್ ನಂಗ್ಲಿ, ಕೋಟಗಾನಹಳ್ಳಿ ರಾಮಯ್ಯ, ಮುನಿಸ್ವಾಮಿ, ಪಿಚ್ಚಳ್ಳಿ ಶ್ರೀನಿವಾಸ್, ರಂಗಾರೆಡ್ಡಿ ಕೋಡಿರಾಂಪುರ, ನಗರಗೆರೆ ರಮೇಶ್, ಹೆಚ್.ವಿ.ವೇಣುಗೋಪಾಲ್ ಮುಂತಾದವರು.

ಹೀಗೆ ಕರ್ನಾಟಕದ ಪ್ರಮುಖ ಜಿಲ್ಲೆಗಳನ್ನು ಇಟ್ಟುಕೊಂಡು 'ಸಮುದಾಯ'ದ ಘಟಕಗಳ ನಟ-ನಟಿಯರು ರಂಗನೇಪಥ್ಯರು, ನಿರ್ದೇಶಕರು, ಗಾಯಕರು, ಬೀದಿ ಮತ್ತು ರಂಗ ಸಂಘಟಕರನ್ನು ಈ ಮೇಲ್ಕಂಡಂತೆ ಸಂಕ್ಷಿಪ್ತ ಪಟ್ಟಿಯನ್ನು ನೀಡುರುತ್ತೇನೆ.

'ಸಮುದಾಯ'ದ ರಂಗ ನೇಪಥ್ಯ ತಂತ್ರಜ್ಞರು

'ಸಮುದಾಯ' ಸಂಘಟನೆಯಲ್ಲಿ ಪ್ರಮುಖವಾಗಿ ಎಲ್ಲರೂ ಎಲ್ಲಾ ರಂಗ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ವಿಶಿಷ್ಟವಾಗಿ ರಂಗ ಸಜ್ಜಿಕೆ, ರಂಗಪರಿಕರಗಳು, ರಂಗವಿನ್ಯಾಸ, ಮೇಕಪ್, ಸಂಗೀತ, ತಬಲ ಮುಂತಾದ ರಂಗ ಹಿಂಭಾಗದಲ್ಲಿ ನಡೆಯುವ ನಾಟಕದ ಪೂರಕ ಅಂಶಗಳಲ್ಲಿ ಪರಿಣಿತಿಯಾದವರನ್ನು ಈ ಕೆಳಗಿನಂತೆ ಪ್ರಮುಖರನ್ನು ಗುರುತಿಸಲಾಗಿದೆ.

ಶಶಿಧರ್ ಅಡಪ ಎಸ್.ಮಾಲತಿ, ಮೋಹನ್ ಚಂದ್ರ, ಶಿವರಾಂ, ಜಿ.ಕೆ.ಮಲ್ಲೇಶ್, ಎಲ್.ಕೃಷ್ಣಪ್ಪ, ಸಿದ್ದರಾಜ್.ಕೆ, ಕೇಶವ(ಕೇಶವಾಲು), ಬಿ.ಎಸ್.ಪರಮೇಶ್ವರ ಕುಮಾರ, ಮೀತಾಮಿಶ್ರ, ಬೆಳತೂರು ರಾಮಕೃಷ್ಣ(ಮೇಕಪ್), ಸರ್ವೆಶ್ ಹೆಣ್ಣೂರು, ಕಟ್ಟಹಳ್ಳಿ ಮುದ್ದಣ್ಣ ಹಾಗೂ ಕೋಲಾರದ ಮುದ್ದು ಕೃಷ್ಣ, ಎಸ್.ರಾಮು ಮುಂತಾದವರುಸ 'ಸಮುದಾಯ'ದ ಸಂಘಟನೆಯಲ್ಲಿ ನಿರಂತರವಾಗಿದ್ದರು. 'ಸಮುದಾಯ' ತಂಡಗಳಿಗೆ ಹಾಗೂ ಇತರ ತಂಡಗಳನ್ನು ರಂಗಸಜ್ಜಿಕೆ, ರಂಗವಿನ್ಯಾಸ, ರಂಗಪರಿಕರಗಳು, ಮೇಕಪ್ ವಾಸ್ತಾಲಂಕಾರ ಹಾಗೂ ಸಂಗೀತ ಬೆಳಕು ಪ್ರಸಾರ ರಂಗ ಸಂಘಟನೆ ಮುಂತಾದ ರಂಗ ನೇಪತ್ಯದ ಕಾರ್ಯದಲ್ಲಿ ರಾಜ್ಯ-ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಶಶಿಧರ್ ಅಡಪ ಅವರು ರಂಗಸಜ್ಜಿಕೆಗೆ ಅಗ್ರಗಣ್ಯ ಹಿರಿಯರು ಹಾಗೂ ಅನುಭವಸ್ಥರು. ಇವರು 'ಸಮುದಾಯ'ದ ಸಂಘಟನೆಗೆ ಹಾಗೂ ಇತರೆ ಕರ್ನಾಟಕದ ಹವ್ಯಾಸಿ ರಂಗ ತಂಡಗಳಿಗೆ ರಂಗಸಜ್ಜಿಕೆ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ ಎಂಬುದನ್ನು ಗುರುತಿಸಲಾಗಿದೆ.

೫.೬. ರಂಗ ನಿರ್ದೇಶಕರು, ಹೊಸ ಕ್ರಾಂತಿಗೀತೆಗಳ ರಚನೆ ಹಾಗೂ ಗಾಯಕರುಗಳ ಮೇಲೆ 'ಸಮುದಾಯ'ದ ಪ್ರಭಾವ

'ಸಮುದಾಯ' ಸಾಂಸ್ಕೃತಿಕ ಸಂಘಟನೆ ೧೯೭೫ರ ಪ್ರಾರಂಭದಲ್ಲಿ ಪ್ರಸನ್ನ, ಸಿ.ಜಿ.ಕೆ, ಗಂಗಾಧರ ಸ್ವಾಮಿ ಮುಂತಾದ ಕೆಲವೇ ರಂಗ ನಿರ್ದೇಶಕರಿಂದ 'ಸಮುದಾಯ' ಸಂಘಟನೆಯು ಆರಂಭಗೊಂಡಿತು. ೧೯೭೮ರ ಬೆಂಗಳೂರಿನ ಕುಂಬಳಗೋಡಿನಲ್ಲಿ ನಡೆದ ರಂಗ ತರಬೇತಿ ಕಾರ್ಯಗಾರದಲ್ಲಿ ಮೂವತ್ತಕ್ಕೂ ಹೆಚ್ಚು 'ಸಮುದಾಯ' ಹೊಸ ಕಾರ್ಯಕರ್ತರಿಗೆ ತರಬೇತಿ ನೀಡಿತು. ಕಲ್ಕತ್ತಾ ರಂಗಕರ್ಮಿ ಬಾದಲ್ ಸರ್ಕಾರ್ ಹಾಗೂ ಇತರರು ಇದನ್ನು ನಡೆಸಿಕೊಟ್ಟರು. ಈ ರಂಗ ತರಬೇತಿ ಶಿಬಿರದಲ್ಲಿ

ನಾಟಕದ ನಿರ್ದೇಶನ, ನಾಟಕದ ವಸ್ತು, ನಾಟಕದ ಸೈದ್ಧಾಂತಿಕತೆ, ನಾಟಕ ವಿವಿಧ ಪರಿಭಾಷೆಗಳನ್ನು ಕಲಿತ 'ಸಮುದಾಯ'ವು ಹೊಸ ಕಾರ್ಯಕರ್ತರು ಉತ್ತಮ ನಿರ್ದೇಶಕರಾದರು. ಆದರೂ ೧೯೮೦ರಲ್ಲಿ ಸಮುದಾಯ ಸಂಘಟನೆಯಿಂದ NSDಗೆ ೨೫ಕ್ಕಿಂತ ಹೆಚ್ಚು ಕಲಾವಿದರು ರಂಗ ತರಬೇತಿ ಪಡೆಯಲು ಮುಂದಾದರು. ಇಂಥವರಿಗೆ ಸಹಕಾರ ನೀಡಿದ 'ಸಮುದಾಯ' ಹಿರಿಯ ಮುಖಂಡರಾದ ಪ್ರಸನ್ನ, ಬಿ.ವಿ.ಕಾರಂತ, ಗೀರಿಶ ಕಾರ್ನಾಡ್ ಮುಂತಾದವರ ಸಹಕಾರದೊಂದಿಗೆ ಎನ್.ಎಸ್.ಡಿಗೆ ಪದವಿಧರಾಗಿ ಮತ್ತೆ ಕರ್ನಾಟಕ ವಿವಿಧ ಘಟಕಗಳಲ್ಲಿ ರಂಗ ನಿರ್ದೇಶಕರು ತರಬೇತಿಯ ಕಾರ್ಯಗಾರಗಳನ್ನು ನಡೆಸಿದ ಕಾರಣದಿಂದ 'ಸಮುದಾಯ' ನೂರಾರು ರಂಗ ನಿರ್ದೇಶಕರು ಹೆಚ್ಚಿದರು. ಅದು ನಿರ್ದೇಶನದ ಹೊಸ ದಿಕ್ಕನ್ನೇ ಬದಲಿಸಿ ಸಮುದಾಯದ ರಂಗಭೂಮಿಯಲ್ಲಿ ದುಡಿದ ನಿರ್ದೇಶಕರು ಮುಂದೆ ಕನ್ನಡ ಸಿನಿಮಾಗಳನ್ನು ನಿರ್ದೇಶನ ಮಾಡಲು ಮುಂದಾದರು. ಅವರುಗಳಲ್ಲಿ ಎಂ.ಎಸ್.ಸತ್ಯು, ಶೇಷಾದ್ರಿ ಗಿರೀಶ್ ಕಾಸರವಳ್ಳಿ, ಕೃಷ್ಣ ಮಾಸಡಿ, ನಿಜಗುಣ, ಬರುಗೂರು ರಾಮಚಂದ್ರಪ್ಪ, ಬಿ.ಸುರೇಶ್ ಮುಂತಾದವರನ್ನು ಕಾಣುತ್ತೇವೆ. ಜೊತೆಗೆ ಸಮುದಾಯ ರಂಗ ನಿರ್ದೇಶಕರು ಹಾಗೂ ಬೀದಿರಂಗಭೂಮಿ ನಿರ್ದೇಶಕರು ಭಾರತ ಪ್ರಮುಖ ರಂಗ ಪ್ರಶಸ್ತಿಗಳನ್ನು ಪಡೆದಿದ್ದಾರೆ ಸಮುದಾಯ ನಿರ್ದೇಶಕರು ಈ ಕೆಳಗಿನಂತೆ ಪಟ್ಟಿಯನ್ನು ನೀಡಲಾಗಿದೆ.

'ಸಮುದಾಯ'ದ ರಂಗ ನಿರ್ದೇಶಕರು

ಎಂ.ಎಸ್. ಸತ್ಯು	ವಾಸುದೇವ್ ಉಚ್ಚಿಲ್	ಗುಂಡಣ್ಣ.ಸಿ.ಕೆ
ಪ್ರಸನ್ನ	ಜಿ.ವಿ.ಕಾರಂತ	ಶಿವಮಿತ್ರ
ಸಿ.ಜಿ.ಕೃಷ್ಣಸ್ವಾಮಿ	ಬಿ.ಐ.ಈಳಿಗೇರ	ನಾರಾಯಣ ಸ್ವಾಮಿ
ಗಂಗಾಧರ ಸ್ವಾಮಿ	ಜೀವನ ಮಾನಕರ	ಗೋಪಾಲ ಕೃಷ್ಣ ನಾಯರಿ
ಎಸ್.ಮಾಲತಿ	ಎಂ.ಸಿ.ಆನಂದ್	ಶಂಕರಯ್ಯ ಆರ್ ಘಂಟಿ
ದೇವೆಂದ್ರರಾಜ್ ಅಂಕುರ್	ಎಚ್.ಎಸ್.ವೇಣುಗೋಪಾಲ್	ಎಸ್.ಆರ್.ತೋಂಟದಾರ್ಯ
ಐ.ಕೆ.ಬೋಳುವಾರು ಮಹಮದ್	ಕುಇಂಎಸ್.ಎಸ್.ಹಿರೇಮಠ	ಶೇಷಗಿರಿ ರಾವ್
ಆರ್.ಕೆ.ಹುಡುಗಿ	ಇಕ್ಬಾಲ್ ಹುಸೇನ್	ಜಿ.ವಿಕ್ರಮ್
ಬಿ.ವಿ.ಕಾರಂತ	ಲೋಹಿತಾಶ್ವ	ಸಿ.ಅನೋಜಿರಾವ್
ನರಸಿಂಹನ್ ಟಿ.ಎಸ್	ವಾಸುದೇವ್ ಗಂಗೇರ	ಎಂ.ಎ.ಪಾಷ
ರಘುನಂದನ್	ಬಸವರಾಜು ಕೊಡುಗೆ	ಬಿ.ಸುರೇಶ
ಐ.ಕೆ.ಬೋಳಾವರ್	ಲಕ್ಷ್ಮಣ	ಶಶಿಧರ್ ಬಾರಿಘಾಟ್

ಸುರೇಶ್ ಆನಗಳ್ಳಿ	ನರೇಂದ್ರ ಪಾಣಿ	ರಮೇಶ್ ಮೋಟೆಬೆನ್ನೂರ
ಸಿ.ಬಸವಲಿಂಗಯ್ಯ	ತಾಯಣ್ಣ ಯರಗೇರಾ	ಸೋಮಶೇಖರ ಜಾಡಾರ
ಜನಾರ್ಧನ್	ಧನಂಜಯ ಕುಲಕರ್ಣಿ	ಬಸವರಾಜು ಮೂಲಿಮನೆ
ವಿ.ಎನ್.ಲಕ್ಷ್ಮೀ ನಾರಾಯಣ	ದಿಲವಾರ ರಾಮದುರ್ಗ	ಬಸವರಾಜು ಕಂಬಳಿ
ಲಿಂಗದೇವರ ಹಳೆಮನೆ	ದೇವ ನಾಗೇಶ್	ಸತೀಶ್(ಮಂಡ್ಯ)
ಎಂ.ಜಿ.ವೆಂಕಟೇಶ್	ರವಿ ಪಾಟೀಲ	ಅಚ್ಯುತ್
ರಂಗರೆಡ್ಡಿ ಕೋಡಿರಾಂಪುರ	ಆರ್.ಜಯಕುಮಾರ್	ವಿ.ಗಣೇಶ್ ಕಾರಂತ
ಲಕ್ಷ್ಮೀಚಂದ್ರಶೇಖರ್	ರಾಮಚಂದ್ರ	ಫ್ಲೋರಾ
ಚೊಕ್ಕಲಿಂಗಂ	ನಾಗರಾಜು	ಕೃಷ್ಣಮೂರ್ತಿ ಕರ್ವಾಡಿ
ರಮೇಶ್.ಎಸ್.ಆರ್	ಶೆಜತ್	ಪಿ. ವೈಷಂಪರ್ಯ
ಕೊಟಿಗಾನಹಳ್ಳಿ ರಾಮಯ್ಯ	ವೆಂಕಟರಮಣ ಐತಾಳ	ಕೃಷ್ಣ ಕುಮಾರ್ ಯಾದವ್
ವಿಶ್ವನಾಥ ಮಿರ್ಲೆ	ಮೋಹಾನ್ ಚಂದ್ರ	ಪ್ರಮೋದ್ ಶಿಗ್ಗಾವ್
ಶ್ರೀಕಾಂತ್ ಕೆಕ್ಕೇರಿ	ಹನುಮಂತಪ್ಪ	ಮಹಂತೇಶ್ ರಾಮದುರ್ಗ
ಕೃಷ್ಣರಾಜ ದರ್ಬ	ಸಂತೋಷ್ ಹುಡಿ ಅಂಗಡಿ	ಸಿದ್ಧನಗೌಡ ಪಾಟೀಲ
ರಾಂಬಾಬು	ಭಾಗ್ಯ	ವಸಂತ
ಎನ್.ಸೂರಿ	ಜಿ.ಟಿ.ದೇಸಾಯಿ	ಚನ್ನಬಸಯ್ಯ
ನೀಲಾಗರಡಿ	ಮೇಘರಾಜು	ಮಾಲತೇಶ್ ಬಡಿಗೇರ

ಈ ಮೇಲಿನವರು 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿಗೆ ಪೂರಕವಾಗಿ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಅದರಲ್ಲಿ ನಾಟಕ ಸಾಹಿತ್ಯ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹುತ್ತವ ಬಡಿದರೆ, ತಾಯಿ, ಗೆಲಿಲಿಯೋ, ಬೆಲ್ಚಿ, ಪಂಚಮ, ಪತ್ರೆ ಸಂಗಪ್ಪನ ಕೊಲೆ, ಛಸನ್ನಾಲಾ, ದಂಗೆಯ ಮುಂಚಿನ ದಿನಗಳು, ಕತ್ತಲೆ ರಾಜ್ಯ, ತೊಘಲಕ್, ಮಹಾಚೈತ್ರ ಅಲ್ಲಮನ ಅದ್ಬುತ ನ್ಯಾಯ, ರಾವಿನದಿಯ ದಂಡೆಯಲ್ಲಿ, ಜೊಗತಿಕಲ್ಲು, ಬುದ್ದ ಪ್ರಬುದ್ಧ, ಕುಲಂ, ಮೃತ್ಯುಂಜಯ, ಕಾವ್ಯರಂಗ, ಸೂರ್ಯಶಕಾರಿ, ದಲಿತ ಬರುವರು, ಜೀತದ ಹಟ್ಟಿರಂಗ, ಹೀಗೆ ಅನೇಕ ಅಂದರೆ ೫೦೦ಕ್ಕೂ ಹೆಚ್ಚು ಬೀದಿ ಹಾಗೂ ರಂಗ ನಾಟಕಗಳನ್ನು ರಚಿಸಿ ನಿರ್ದೇಶನವನ್ನು ಮಾಡಿದ್ದಾರೆ. ಇನ್ನೂ ಕೆಲವು ನಾಟಕಗಳನ್ನು ಇಂಗ್ಲೀಷ್, ಹಿಂದಿ, ಬೆಂಗಾಲಿ, ತೆಲುಗು, ತಮಿಳು ಭಾಷೆಗಳಿಂದ ಅನುವಾದಿಸಿ ಕನ್ನಡಮಯ ರೂಪಕೊಟ್ಟು ನಾಟಕಗಳನ್ನು ನೂರಾರು ಪ್ರದರ್ಶನಗಳನ್ನು ಕರ್ನಾಟಕ

ಹಾಗೂ ಭಾರತದಾದ್ಯಂತ ಜಾಥಾಗಳ ಮೂಲಕ ಪ್ರದರ್ಶನ ಕಂಡಿವೆ. ಹೀಗೆ ಸಮುದಾಯ ನಿರ್ದೇಶಕರು ನಟರಾಗಿ ರಂಗನೇಪಥ್ಯ ತಜ್ಞರಾಗಿ ಹಾಗೂ ರಂಗಸಂಘಟಕರಾಗಿ ಕಾರ್ಯನಿರ್ವಹಿಸುವ ಬಹುಶಿಸ್ತಿನ ತರಬೇತಿ ಪಡೆದ ಪ್ರತಿಭಟನೆಯನ್ನು ಅಥವಾ ಸಮಾಜದಲ್ಲಿ ಶೋಷಣೆಯ ಅಂಶಗಳನ್ನು ರಂಗದ ಮೇಲೆ ನೇರವಾಗಿ ಹೇಳುವ ಆಶಯವು 'ಸಮುದಾಯ' ರಂಗ ನಾಟಕ ಹಾಗೂ ಬೀದಿನಾಟಕಗಳಿಗೆ ಸಲ್ಲುತ್ತದೆ.

ಹೊಸ ಕ್ರಾಂತಿಗೀತೆಗಳ ರಚನೆ

'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ಮೂಲತಃ ರಷ್ಯಾ ಕ್ರಾಂತಿ ಹಾಗೂ ಚೀನಾ ಕ್ರಾಂತಿ ಹಾಗೂ ಕ್ಯೂಬಾ ಕ್ರಾಂತಿಗಳ ಪ್ರಭಾವಕ್ಕೆ ಹಾಗೂ ಭಾರತದ ಇಪ್ಟಾಂತಹ ರಂಗ ಸಂಸ್ಥೆಯಿಂದ ಕ್ರಾಂತಿಗಳ ಪ್ರಭಾವಕ್ಕೆ ಒಳಗಾಗಿತ್ತು. ಅದರಲ್ಲೂ ಕಮ್ಯುನಿಸ್ಟ್ ಚಳವಳಿಯ ಕ್ರಾಂತಿ ಗೀತೆಗಳು ದಲಿತ ಸಂಘಟನೆ, ಬಂಡಾಯ ಸಂಘಟನೆಯ ಸಾಹಿತ್ಯವು ಹೊಸ ಅಲೆಯ ಮಾದರಿಯ ಕ್ರಾಂತಿ ಗೀತೆಗಳು ರಚನೆಯಾದವು. ಅವುಗಳ ಕೆಲವು ಈ ಹಿನ್ನೆಲೆಯಲ್ಲಿ ಇದ್ದಾವೆ. ದೊಡ್ಡಗೌಡರ ಬಾಗಲಿಗೆ, ನಮ್ಮ ಮೂಳೆಯ ತೊರಣ, ನಮ್ಮ ಜನಗಳ ಕಾಲುಕೈ ಕಂಬ ಅವರ ಹಟ್ಟಿಗೆ, ಎಂಬ ಹಾಡು ಕರ್ನಾಟಕ ನಾಟಕಗಳಲ್ಲಿ ಸಂಚಲನ ಮೂಡಿಸಿತ್ತು. ಕಟ್ಟುತ್ತೇವಾ ನಾವು ಕಟ್ಟುತ್ತೇವಾ ಕಟ್ಟೆ ಕಟ್ಟುತ್ತೇವಾ ನೆನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು ಕಪ್ಪು ಮುಖ ಬಿಳಿಗಡ್ಡ ಮೂಲಕ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬ ಕ್ರಾಂತಿ ಗೀತೆ ಮುಂತಾದವುಗಳು ಸಿದ್ದಲಿಂಗಯ್ಯ, ಕೋಟಗಾನಹಳ್ಳಿ ರಾಮಯ್ಯ, ಜನಾರ್ಧನ್ ಬರಗೂರು ರಾಮಚಂದ್ರಪ್ಪ, ಎಸ್. ಮಾಲತಿ, ಸತೀಶ ಕುಲಕರ್ಣಿ, ಪಿಚ್ಚಳ್ಳಿ ಶ್ರೀನಿವಾಸ್ ಇವರುಗಳ ಆಂಧ್ರ ಪ್ರಜಾ ನಾಟ್ಯ ಮಂಡಳಿ ತೆಲುಗಿನ ಹಾಡುಗಳ ಪ್ರಭಾವಕ್ಕೆ ಒಳಗಾಗಿ ಅದರಲ್ಲೂ ವಿಶೇಷವಾಗಿ ಕ್ರಾಂತಿಕಾರಿ ಗದ್ದರ್ ಹಾಡು ಕಟ್ಟುಲಿಕೆ ಪ್ರೇರಣೆಯಿಂದ ಕರ್ನಾಟಕದಲ್ಲಿ ಕೂಡ ಕಮ್ಯುನಿಸ್ಟ್ ಕ್ರಾಂತಿ ಬಯಸುವ ಹಾಗೂ ಶೋಷಣೆ ವಿರುದ್ಧ ಹಾಡುಗಳ ಅಂದರೆ ಕ್ರಾಂತಿ ಗೀತೆಗಳ ಬಂದವು. ಅವುಗಳ ಸಂಕ್ಷಿಪ್ತ ಸಂದೇಶವನ್ನು ಈ ಕೆಳಗಿನಂತೆ ನೀಡಲಾಗಿದೆ.

ಸಿದ್ಧಲಿಂಗಯ್ಯ, ಕೆ.ರಾಮಯ್ಯ, ಬರಗೂರು ಅವರ ಕಾವ್ಯಗಳಿಗೆ ಕ್ರಾಂತಿಗೀತೆಗಳ ರೂಪುಕೊಟ್ಟಿತು. ಹಾಡುವ ಮೂಲಕ ಜನ್ನಿ ಹಾಗೂ ಪಿಚ್ಚಳ್ಳಿ ಶ್ರೀನಿವಾಸ ಸಮುದಾಯ ಜಾಥಾಗಳ ನಾಟಕಗಳೂ ಹಾಗೂ ವಿಚಾರ ಸಂಕಿರಣದ ಹೋರಾಟಗಳ ಬಹಿರಂಗ ಸಭೆಗಳಲ್ಲಿ ಈ ಕ್ರಾಂತಿ ಗೀತೆಗಳನ್ನು ಹಾಡುವ ಮೂಲಕ ಕರ್ನಾಟಕ ಹಾಗೂ ಭಾರತದ ಇತರೆ ನಗರಗಳಲ್ಲಿ ಪ್ರಶಂಸೆ ಕಂಡಿದ್ದು ಕಾಣಬಹುದು. ಚಳವಳಿಗೆ ಸ್ಫೂರ್ತಿನೀಡುವ ಈ ಕ್ರಾಂತಿ ಗೀತೆಗಳು ಸಾಮಾನ್ಯ ಜನರಲ್ಲಿ ಬೇಗ ಅರ್ಥವಾಗುವ ರೀತಿಯಾಗಿತ್ತು. ಏಕೆಂದರೆ ದಲಿತ-ಹಿಂದುಳಿದ-ಶೋಷಣೆಗೆ ಒಳಗಾದ ಜನರ ಸಮಸ್ಯೆ ಬಗ್ಗೆ ಹಾಡುಗಳು ಬರೆಯುತ್ತಿರುವುದರಿಂದ ಈ ಕ್ರಾಂತಿ ಗೀತೆಗಳು ಹೋರಾಟಗಾರಿಗೆ ಪ್ರಭಾವ ಬೀರಿದವು ಎಂದರೆ ತಪ್ಪಗಲಾರದು.

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖದ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ ॥ನೆನ್ನೆದಿನ ನನ್ನಜನ॥
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದಿಂದಿಗೂ ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರುತುಂಬ ಹರಿದರು ಪಾತಾಳಕ್ಕೆ ಇಳಿದರು
ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿ ಮಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ದನಿಕೂರುವ ಪಟ್ಟದಲ್ಲಿ
ಎಲ್ಲೇಲ್ಲೊ ನನ್ನ ಜನ ನೀರಿನಂತೆ ನಿಂತರು. ॥ನೆನ್ನೆದಿನ ನನ್ನಜನ॥
ಇವರು ಬಾಯಿ ಬಿಟ್ಟೊಡನೆ ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು
ಪೋಲೀಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದ ಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆ ಕಸಕಡ್ಡಿಯಾಗಿ
ತೇಲಿತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು ॥ನೆನ್ನೆದಿನ ನನ್ನಜನ॥

ಹೀಗೆ ಮಾರ್ಕ್ಸ್‌ವಾದಿ ಸಿದ್ಧಲಿಂಗಯ್ಯ ಎಂದು ಗುರುತಿಸಿಕೊಂಡಿದ್ದ ಕವಿಯಾಗಿ 'ಸಮುದಾಯ' ದಲಿತ-ಬಂಡಾಯ ಸಂಘಟನೆಗಳ ಹೋರಾಟಗಳಿಗೆ ಹಾಡುಗಳನ್ನು ಬರೆದರು ರಾಜ್ಯದಾದ್ಯಂತ ಹೆಸರುಗಳಿಸಿದ್ದು ನೋಡುತ್ತೇವೆ. ಈ ಕ್ರಾಂತಿ ಗೀತೆಗೆ ಜನಾರ್ಧನ ಅವರ ಮಿಂಚಿನ ಕಂಠದಿಂದ ಶೋಷಿತರ ಜನರು ಹೋರಾಟಗಳಿಗೆ ಹೆಚ್ಚೆಚ್ಚು ಬರಲು ಸಾಧ್ಯವಾಗಿದ್ದು ಚಾರಿತ್ರಿಕ ಸಂಗತಿಯಾಗಿದೆ.

'ಸಮುದಾಯ' ನಾಟಕವಾದ 'ಬೆಲ್ಚಿ' ನಾಟಕದ ಪ್ರಭಾವದಿಂದ ಕೋಲಾರದ ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಇದ್ದ ಕೋಟಗಾನಹಳ್ಳಿ ರಾಮಯ್ಯ ಅವರ ಕ್ರಾಂತಿ ಗೀತೆಗಳ ರಚನೆಯನ್ನು ಅವರು ಬರೆದ 'ಹೆಜ್ಜೆ ಮಾತಾಡು' ಹೋರಾಟದ ಹಾಡುಗಳ ಮೂಲಕ ಈ ಕೆಳಗಿನಂತ ಕೆಲವು ಕ್ರಾಂತಿ ಗೀತೆಗಳನ್ನು ಗುರುತಿಸಬಹುವಾಗಿದೆ.

ಬರುತಿಹೆವು   ನಾವು ಬರುತಿಹೆವು
ಬರುತಿಹೆವು   ನಾವು ಬರುತಿಹೆವು
ಯುಗ ಯುಗಗಳಿಂದ ನೀವು ತುಳಿದ ಜನಗಳ
ಕೊರಳ ಧ್ವನಿಗಳು ನಾವು   ॥ ಬರುತಿಹೆವು ॥
ಅಸಮಾನತೆಯನ್ನು ಸುಟ್ಟುಬಿಡಲು
ಬುಗಿಲೆದ್ದ ಬೆಂಕಿಯ ಜ್ವಾಲೆಗಳು
ಬೆಲ್ಚಿ ಗ್ರಾಮದಲ್ಲಿ ನೀವು ಸುಟ್ಟ
ಬಡಜನರ ಬೂದಿಯಿಂದೆದ್ದವರು
ಪಂಥ ನಗರದಲ್ಲಿ ಕೂಲಿ ಜನಗಳ
ಬಸಿದ ನೆತ್ತರ ಬಾಂಬುಗಳಾಗಿ
ಬೆಳೆದು ಬಂದಿಹ ದೀರರು   ॥ ಬರುತಿಹೆವು ॥
ಹಸಿದ ಜನಗಳ ಬೆವೆರ ಮೈಗಳು
ನೊಂದವರೆದೆಯ ನೋವಿನ ಕೂಗು
ನಮ್ಮನು ನಡೆಸುವ ಸಿದ್ಧಾಂತ
ಕೂಲಿ ಜನಗಳ ಗೋಳು ತೊಡೆಯಲು
ನಡೆದಿದೆ ನಮ್ಮ ಹೋರಾಟ   ॥ ಬರುತಿಹೆವು ॥
ಧರ್ಮ ಗುರುಗಳ ಮಠಾಧಿಪತಿಗಳ
ದಗಲುಬಾಜಿತನ ಬೀದಿಗೆಳೆಯುತ
ಖಾದಿ ಕಾವಿಗಳ ತಾಯಿಗಂಡರ
ಬಡತನವು ಬಯಲು ಮಾಡುತ   ॥ ಬರುತಿಹೆವು ॥
ಭಾಷೆ ಧರ್ಮದ ವಿಷದ ಬೇಲಿಯ

ಕಡಿದು ಕೀಳುತ ಆಚೆಗೆ ಚಲ್ಲುತ
ಜಾತಿಮತಗಳ ಆಚೆಗೆ ನಿಂತ
ಬಡವರೆಲ್ಲರ ಒಂದು ಮಾಡುತ ॥ ಬರುತಿಹೆವು ॥
ಸಿರಿವಂತರ ಸೊಕ್ಕಿನ ಭದ್ರಕೋಟೆಗೆ
ಬರಸಿಡಿಲಾಗಿ ಬಂದಿಹೆವು ನಾವು
ಉಳ್ಳವರೆದೆಗೆ ಕೊಳ್ಳಿಗಳಾಗಿ
ಸುಲಿಗೆಕೋರರ ಒಡಲು ಸೀಳಲು ॥ ಬರುತಿಹೆವು ॥
ಸಮತಾ ರಾಜ್ಯದ ಕನಸುಗಳೊತ್ತು
ಹೊಸ ನಾಡೊಂದರ ಬಯಕೆಗಳೊತ್ತು
ಕೆಂಪು ಮಣ್ಣಿನಲಿ ಒಕ್ಕಲೂಡಲು
ಬರುವತಲಿರುವ ಬಂಡಾಯಗಾರರು ॥ ಬರುತಿಹೆವು ॥

ಹೀಗೆ ಕೋಟಿಗಾನಹಳ್ಳಿ ರಾಮಯ್ಯ ಅವರು ತಮ್ಮ ಕ್ರಾಂತಿಗಳನ್ನು ಬರೆದು ಸಮುದಾಯ–ದಲಿತ–ಬಂಡಾಯ ಸಂಘಟನೆಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು. ಎಪ್ಪತ್ತರ ದಶಕ ಹಾಗೂ ಎಂಬತ್ತರ ದಶಕದ ಎಲ್ಲಾ ಚಳವಳಿಯಲ್ಲಿ ಭಾಗವಹಿಸಿ ತಮ್ಮ ಕಾವ್ಯಗಳ ಮೂಲಕ ಹಾಗೂ ಕ್ರಾಂತಿ ಗೀತೆಗಳ ಮೂಲಕ ಶೋಷಿತ ಜನರ ಚಳವಳಿಯ ಪ್ರಜ್ಞೆಯನ್ನು ಮೂಡಿಸಿದ್ದಾರೆ. ಇವರ ಜೊತೆಗೆ ಕ್ರಾಂತಿಗೀತೆಗಳ ರಚನೆಯಲ್ಲಿ ಸತೀಶ್ ಕುಲಕರ್ಣಿ ಹಾಗೂ ಪಿಚ್ಚಳ್ಳಿ ಶ್ರೀನಿವಾಸ್, ಜನಾರ್ಧನ್(ಜನ್ನಿ), ದಾಸಪ್ಪ, ನಿಲೋಗಲ್, ರಮೇಶ್ ಕಬ್ಬೂರ್ ಮುಂತಾದವರು ತಮ್ಮ ಕ್ರಾಂತಿ ಗೀತೆಗಳ ಮೂಲಕ 'ಸಮುದಾಯ' ದಲಿತ–ಬಂಡಾಯ ಸಂಘಟನೆಗಳಲ್ಲಿ ಹೋರಾಟದ ಗೀತೆಗಳು ಹಾಡುಗಳ ಹಾಡಬೇಕಾಗಿತ್ತು. ಇದರಿಂದ ಕರ್ನಾಟಕದಾದ್ಯಂತ ನೂರಾರು ಹೋರಾಟಗಾರರು ಹಾಡುಗಳನ್ನು ಕಲಿತು ವಿವಿಧ ಹೋರಾಟಗಳಲ್ಲಿ ಹಾಗೂ ಚಳವಳಗಳಲ್ಲಿ ಮತ್ತು ವಿಚಾರ ಸಂಕಿರಣಗಳಲ್ಲಿ ಈ ಕ್ರಾಂತಿಗೀತೆ ಪಾತ್ರ ಮಹತ್ವವಾದದ್ದು ಎಂದು ಗುರುತಿಸಬಹುದು. ಇನ್ನೂ ಕೆಲವು ಮುಖ್ಯ ಹೋರಾಟ ಕ್ರಾಂತಿಗಳು ಈ ಕೆಳಗಿನಂತೆ ಪಟ್ಟಿಯನ್ನು ನೀಡಲಾಗಿದೆ.

'ನಿಜದನಿ' ಹೋರಾಟಕ್ಕೆ ಹಾಡಿನ ರಂಗು ಎಂಬ ಕ್ರಾಂತಿ ಗೀತೆಗಳ ಕೃತಿಯು ಯಮುನಾ ಗಾವಂಕರ್ ಸಂಪಾದಕರಾಗಿದ್ದ ಇದು ಬಂಡಾಯ ಪ್ರಕಾಶನದಿಂದ ಹೊರ ಬಂದಿದೆ. ಈ ಕೃತಿಯ ಕೆಲವು ಕ್ರಾಂತಿ ಗೀತೆಗಳು ಹಾಗೂ ಕೋಟಿಗಾನಹಳ್ಳಿ ರಾಮಯ್ಯನ ಅವರ 'ಹೆಜ್ಜೆ ಮಾತಾಡು' ಹೋರಾಟದ ಹಾಡುಗಳು ಮತ್ತು ಜೋಡುಗುಂಡಿಗೆ ಹೋರಾಟದ ಹಾಡುಗಳನ್ನು ಸಿ.ದಾಸಪ್ಪ ನಿಲೋಗಲ್ ಅವರ ಕೃತಿಗಳ ಕೆಲವು ಪ್ರಮುಖ ಕ್ರಾಂತಿ ಗೀತೆಗಳ ಪಟ್ಟಿಯನ್ನು ನೀಡಲಾಗಿದೆ.

೧. ಕೆಂಪು ಸೂರ್ಯ
೨. ದೇಶನಾ ಉಳಿಸೋರು
೩. ವಿಮೋಚನಾ ಸಂಗಾತಿ
೪. ನೀ ನಡೆದ ಹಾದಿಯ ನಡೆದು

೫. ಕನಸು ಕಟುತ್ತೇವಾ

೬. ಭಿನ್ನಬೇಧವ ಮಾಡಬ್ಯಾಡಿರಿ

೭. ಯಾವ ಕುಲವಯ್ಯ

೮. ಸೃಷ್ಟಿಯ ಚಲನ

೯. ಯಾವ ಕಾಲದ ಶಾಸ್ತ್ರ

೧೦. ಬರುತಿಹೆವು

೧೧. ದೇಹದೊಳಗಿನ ರಕ್ತ ಒಂದೇ

೧೨. ನಿರುದ್ಯೋಗಿಗಳ ಹಾಡು

೧೩. ಕುರುಡು ಕಾಂಚಾಣ

೧೪. ನನ್ನ ಜನಗಳು

೧೫. ದೊಡ್ಡ ಗೌಡರ ಬಾಗಿಲಿಗೆ

೧೬. ಚೂರು ಗಂಜಿಗಾಗಿ

೧೭. ಮಣ್ಣು ಕೂಡ ಮಾರಾಟಕ್ಕಿದೆ

೧೮. ರಕ್ತದ ಬಣ್ಣ

೧೯. ಯಾತಕೋ ತಮ್ಮ ಅಜ್ಞಾನ

೨೦. ಕೆಂಪು ಬಾವುಟ

೨೧. ಸಾವಿರಾರು ನದಿಗಳು

೨೨. ಈ ಬಾವುಟ ಯಾರದೋ

೨೩. ಮೂಡಿ ತೊಂದು ಕೆಂಪು ಚುಕ್ಕೆ

೨೪. ಕೂಲಿಯವರು ನಾವಯ್ಯ

೨೫. ಈ ದೇಶವು ಯಾರದೋ?

೨೬. ಕಪ್ಪು ಕಪ್ಪು ಮೋಡ

೨೭. ತಂಗಿ ಅನುಸೂಯ

೨೮. ಜನಾಧಿಕಾರಿ

೨೯. ಕಾಕಾನ ಕೋಟೆಯ ಕಾಡಿನ ಮಕ್ಕಳು

೩೦. ಚುನಾವಣೆಯ ಹಿಂದಿನ ದಿನ

೩೧. ಶರಣಯ್ಯ ಶರಣು

೩೨. ಜೈ ಭೀಮ್ ಕಾಮ್ರೇಡ್

೩೩. ಕರಿದೊಗಲ ಹೆಣ್ಣು

೩೪. ಅಂಬೇಡ್ಕರಾ ಹೇಳಿದ ಮಾತು

೩೫. ಬೋಳ ಬಂಡೆಪ್ಪ

೩೬. ಕೇಳೋ ನಮ್ಮಣ್ಣ ಕೇಳೋ

೩೭. ಕೊರಮಣ್ಣ

೩೮. ಧಣಿಗಳು ದುಡಿಯಬೇಕು

೩೯. ಜೋಡು ಗುಂಡಿಗೆ

೪೦. ಬಾಬ ಬುಡನ್ ಗಿರಿ

೪೧. ಎಲೆಕ್ಷನ್ ಬಂದ್ಯೆತಯ್ಯ

೪೨. ರಾಮ ಬಂದಾನೋ

೪೩. ಗೌಡ ನೋಡಮ್ಮ

೪೪. ಕೈಗಾ ಬಂದರೆ

ಹೀಗೆ ಮೇಲಿನಂತೆ 'ಸಮುದಾಯ' ದಲಿತ-ಬಂಡಾಯದ ಚಳವಳಿಗಳಲ್ಲಿ ಕ್ರಾಂತಿ ಗೀತೆಗಳು ಹೋರಾಟದ ಗೀತೆಗಳ ಮೌಢ್ಯ ವಿರೋಧಿ ಗೀತೆಗಳ ಪರಿಸರ ರಕ್ಷಣೆಯ ಗೀತೆಗಳ ಸಮಗ್ರವಾಗಿ ನೋಡುವ ಗೀತೆಗಳ ರಚನೆಯ ಎಪ್ಪತ್ತರ ದಶಕ ಹಾಗೂ ಎಂಬತ್ತರ ದಶಕದಲ್ಲಿ ತುಂಬ ಪರಿಣಾಮಕಾರಿಯಾಗಿ ಬಂದಿತ್ತು. ಕನ್ನಡ ಸಾಹಿತ್ಯಕ್ಕೆ ಹೊಸ ಭಾಷ್ಯಾ ಬರೆದ ಜಾಗೃತಿ ಕ್ರಾಂತಿಗಳೆಂದೇ ಗುರುತಿಸಿಕೊಂಡಿವೆ. ಇದರ ಜೊತೆಯಲ್ಲಿ ಹಾಡುಗಾರರ ಸೃಷ್ಟಿಯಾಯಿತು. ಅದೇ ರೀತಿಯಲ್ಲಿ

'ಸಮುದಾಯ' ಸಂಘಟನೆಯಲ್ಲಿ ಹಲವಾರು ಜನಪದ, ಜಾಗೃತ ಸಂಗೀತ ಹಾಗೂ ಶೋಷಣೆ ವಿರುದ್ಧದ ಸಂಗೀತ ಗಾಯಕರು ಹುಟ್ಟಿಕೊಂಡರು ಈ ಗಾಯಕರು 'ಸಮುದಾಯ'ದ ನಾಟಕಗಳಲ್ಲಿ ಹಿನ್ನೆಲೆ ಗಾಯಕರಾಗಿ ಹೆಚ್ಚು ಪ್ರಭಾವಿತಾರಾದರು. ಅವರುಗಳು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಗಾಯಕರ ಮೇಲೆ 'ಸಮುದಾಯ'ದ ಸಂಘಟನೆಯ ಪ್ರಭಾವ

'ಸಮುದಾಯ'ದ ರಂಗನಾಟಕಗಳಲ್ಲಿ ರಂಗದ ನೇಪತ್ಯದ ನಾಟಕಗಳ ಮಧ್ಯದಲ್ಲಿ ಹಿನ್ನೆಲೆ ಗಾಯಕರ ಪ್ರಭಾವವೂ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿತ್ತು. ಇಂಥ ಗಾಯಕರಲ್ಲಿ ಅತ್ಯಂತ ಮುಖ್ಯವಾದವರನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ. ಉತ್ತರ ಭಾರತದಲ್ಲಿ ಹಿಂದಿಯ ಗಾಯಕರಿಂದ ಪ್ರಭಾವಿತರಾಗಿದ್ದ ರಂಗನಾಯಕ ಬಿ.ವಿ. ಕಾರಂತರನ್ನು ಕರ್ನಾಟಕ ರಂಗಭೂಮಿಗೆ ಕರೆತರುವಲ್ಲಿ 'ಸಮುದಾಯ'ದ ಮುಖಂಡರ ಪಾತ್ರ ಬಹುಮುಖ್ಯವಾಗಿತ್ತು. ಅದೇ ರೀತಿಯಲ್ಲಿ ಸರೋದ್ ವಾದಕಾರದ ರಾಜೀವ್ ತಾರಾನಾಥ್, ಎನ್.ಎಲ್.ಶಂಕರ್, ಪದ್ಮಚರಣ್ ಜನಾರ್ಧನ್, ಪಿಚ್ಚಳ್ಳಿ ಶ್ರೀನಿವಾಸ್, ಲಕ್ಷ್ಮಣ ಸಿಂಧನೂರು, ಶಾಂತಕುಲಕರ್ಣಿ, ವಾಸುದೇವ ಗಂಗೇರ, ವೆಂಕಟರಾಮ್, ಮಾನಪ್ಪ, ಸತ್ಯನಾರಾಯಣ್ ಭಟ್, ವಸುಂದರಾ ಬಾರಿಘಾಡ್, ಬಿ.ಜಯಶ್ರೀ, ಎಸ್.ಕೆ.ಮಾಧವರಾವ್, ಕಳ್ಳ ರಾಮಚಂದ್ರ, ರಾಮಚಂದ್ರ ಹಡಪದ, ಶಾಂತ(ಹರಪನಹಳ್ಳಿ) ಕರಣಾನಿಧಿ, ಬಿ.ಎಸ್.ಶಶಿಕಲಾ, ಎಸ್.ಮಾಲತಿ, ಲಕ್ಷ್ಮೀ ಚಂದ್ರಶೇಖರ್, ರಮಾ, ಸುಶೀಲ ಬಸವಲಿಂಗಯ್ಯ, ಕೆ.ಷರೀಫಾ, ಮೀನಾಕ್ಷಿ ಬಾಳಿ, ಕೆ.ನೀಲಾ, ಕೆ.ಎಸ್.ಲಕ್ಷ್ಮೀ, ವಿಮಲಾ, ವೀಣಾ, ಶಿವಕುಮಾರಿ ಮುಂತಾದವರು 'ಸಮುದಾಯ' ನಾಟಕಗಳಲ್ಲಿ ಹಿನ್ನೆಲೆ ಗಾಯಕರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಅದರಲ್ಲಿಯೂ ಬಿ.ವಿ.ಕಾರಂತ ಹಾಗೂ ರಾಜೀವ್ ತಾರಾನಾಥ್, ಬಿ.ಜಯಶ್ರೀ ಅವರು ಹಲವಾರು ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿಗಳನ್ನು ಪಡೆದು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. 'ಸಮುದಾಯ' ಸಂಘಟನೆಯಿಂದ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಗಾಯಕರಾಗಿ ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ. ಉದಾಹರಣೆಗೆ: ಕನ್ನಡದಲ್ಲಿ ಪಲ್ಲವಿಯವರು ಸಹ 'ಸಮುದಾಯ'ದ ಪ್ರಸನ್ನ ಅವರ ಶಿಷ್ಯೆಯಾಗಿ ಸಿನಿಮಾ ಗಾಯನದಲ್ಲಿ ಪ್ರಖ್ಯಾತಿ ಹೊಂದಿದ್ದಾರೆ. ಹೀಗೆ 'ಸಮುದಾಯ'ವು ರೂಪಿಸಿದ ನಾಟಕಗಳು ಹಿನ್ನೆಲೆ ಗಾಯಕರ ಮೇಲೆ ಪ್ರಭಾವ ಬೀರಿದ್ದು ಚಾರಿತ್ರಿಕ ಸಂಗತಿಯಾಗಿದೆ.

೫.೭ 'ಸಮುದಾಯ' ಹಾಗೂ ಸಿನಿಮಾರಂಗ

ಕನ್ನಡ ಸಿನಿಮಾರಂಗದ ಚರಿತ್ರೆಗೆ ಒಂದು ಶತಮಾನದ ಇತಿಹಾಸವಿದೆ. ಕನ್ನಡ ಸಿನಿಮಾರಂಗದ ಸಿನಿಮಾಕ್ಕೆ ಸಹ ವಿಭಾಗಗಳು ಇವೆ. ಅಂದರೆ ನಿರ್ದೇಶನ, ಸಿನಿಮಾದ ಕಥೆ ರಚನೆ, ಸ್ವರೂಪ, ಮುಖ್ಯ ವಿಷಯ, ತಂತ್ರಜ್ಞಾನದ ಬೆಳವಣಿಗೆ, ಹಿನ್ನಲೆ ಸಂಗೀತ, ಕಲೆ ಹಾಗೂ ಸಾಹಿತ್ಯ ಎಲ್ಲವೂ ಮುಖ್ಯವಾಗಿರುತ್ತವೆ. ಪ್ರಸ್ತುತ ಸಾಮಾನ್ಯ ಜನಸಮುದಾಯ ನಿರೀಕ್ಷೆಗಳನ್ನು ಒಳಗೊಂಡ ಸಿನಿಮಾಗಳು ಹೆಚ್ಚು ಬಿಡುಗಡೆಯಾಗುತ್ತಿರುವುದನ್ನು ಕಾಣುತ್ತೇವೆ. ಇಂದಿನ ಸಿನಿಮಾಗಳಿಗೆ ವಿಷಯ ಹೆಚ್ಚು ಮುಖ್ಯವಾಗುತ್ತದೆ. ಅದು ಸಿನಿಮಾರಂಗದ ಚಾರಿತ್ರಿಕ ನೆಲೆಘಟ್ಟುಗಳ ಬೆಳವಣಿಗೆಯಿಂದ ಬಂದಿರುವುದು.

ಕೂಲಂಕೂಷವಾಗಿ ಸಿನಿಮಾರಂಗವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಸಿನಿಮಾಗಳು ಜನರ ಅಭಿರುಚಿಗೆ ತಕ್ಕಂತೆ ಹೇಗೆ ಬದಲಾಗುತ್ತಿವೆ ಎಂಬುದನ್ನು ಕಾಣುತ್ತೇವೆ. ಹೀಗೆ ಸ್ವಾತಂತ್ರ್ಯ ಪೂರ್ವದ ಕಪ್ಪು-ಬಿಳುಪು ಕನ್ನಡ ಸಿನಿಮಾಗಳ ನಂತರ ಸ್ವಾತಂತ್ರ್ಯೋತ್ತರ ಕನ್ನಡ ಸಿನಿಮಾರಂಗ ನಿರಂತರವಾಗಿ ತಾಂತ್ರಿಕವಾಗಿ ಬೆಳವಣಿಗೆಯಾಗುತ್ತ ಬಂದಿರುವುದು ನೋಡಬಹುದಾಗಿದೆ. ಹೀಗೆ ಎಪ್ಪತ್ತರ ದಶಕದ ಸಿನಿಮಾ ರಂಗವು ಚಳವಳಿಗಳ ಪ್ರಭಾವಕ್ಕೆ ಒಳಗಾದ ಚಾರಿತ್ರಿಕ ಅಂಶಗಳನ್ನು ಒಳಗೊಂಡ ಸಿನಿಮಾಗಳು ಬಂದಿರುವುದನ್ನು ಹಾಗೂ ಧೃವತಾರೆ, ಶಾಂತಿಕ್ರಾಂತಿ ಮುಂತಾದ ಸಿನಿಮಾಗಳು ಕರ್ನಾಟಕದ ಜನರಲ್ಲಿ ಹೋರಾಟದ ಮನೋಭಾವವನ್ನು ಬೆಳಸಿಕೊಳ್ಳುವಂತೆ ಪ್ರೇರಣೆ ನೀಡಿರುವುದು ಚಾರಿತ್ರಿಕವಾಗಿ ಗುರುತಿಸಬಹುದಾಗಿದೆ.

ಸಿನಿಮಾರಂಗ ಮತ್ತು 'ಸಮುದಾಯ' ಬೇರೆ-ಬೇರೆಯಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ 'ಸಮುದಾಯ'ವು ರೂಪಿಸಿದ ಬಹುಮುಖ-ಪ್ರತಿಭೆಗಳು ನಂತರ ಸಿನಿಮಾರಂಗದಲ್ಲಿ ಗುರುತಿಸಿಕೊಂಡಿದ್ದಾರೆ. ಅವರು ನಾಟಕ, ಸಂಗೀತ, ಕಥೆ ರಚನೆ, ನಿರ್ದೇಶನ, ಮೇಕಪ್, ತಂತ್ರಜ್ಞಾನ ಮುಂತಾದ ಸಿನಿಮಾರಂಗದ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿ ಬೆಳೆದಿದ್ದಾರೆ. ಇದಕ್ಕೆ ಬಹು ಮುಖ್ಯ ಉದಾಹರಣೆ ಅಂದರೆ ಈಗಿನ ಹಿರಿಯ ನಟ ಲೋಹಿತಾಶ್ವ ಅವರು. ಹಾಗೇ ದತ್ತಣ್ಣ, ಬಿ.ಸುರೇಶ್, ಗೀರಿಶ್ ಕಾಸರವಳ್ಳಿ, ಬರಗೂರು ರಾಮಚಂದ್ರಪ್ಪ, ಸಿ.ಬಸವಲಿಂಗಯ್ಯ, ಸಂಚಾರಿ ವಿಜಯ್, ವೆಂಕಟೇಶ್ ಪ್ರಸಾದ್ ಇವರ ಜೊತೆಗೆ 'ಸಮುದಾಯ' ಸಂಘಟನೆಯ ಪ್ರಸನ್ನರ ಶಿಷ್ಯ ಬಳಗ ಹಾಗೂ ಸಿ.ಜಿ.ಕೃಷ್ಣಸ್ವಾಮಿ ಶಿಷ್ಯ ಬಳಗದ ಜೊತೆಗೆ, ಗಂಗಾಧರಸ್ವಾಮಿ ಹಾಗೂ ಸುರೇಶ್ ಆನಗಳ್ಳಿ ಶಿಷ್ಯ ಬಳಗವು 'ಸಮುದಾಯ'ದ ಜೊತೆ-ಜೊತೆಗೆ ಸಿನಿಮಾರಂಗದಲ್ಲಿಯೂ ಕೂಡ ಕೆಲಸ ನಿರ್ವಹಿಸಿರುವುದನ್ನು ಕಾಣುತ್ತೇವೆ.

'ಸಮುದಾಯ' ಸಂಘಟನೆಯಿಂದ ವಿಶೇಷ ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಅಂಥದರಲ್ಲಿ 'ಚಿತ್ರಸಮುದಾಯ'ವೂ ಒಂದು. ಈ 'ಚಿತ್ರಸಮುದಾಯ'ದ ಪರಿಕಲ್ಪನೆಯನ್ನು ವಿಶೇಷವಾಗಿ ರೂಪಿಸಿದ ಕೊಡುಗೆ 'ಸಮುದಾಯ' ಸಂಘಟನೆಗೆ ಸಲ್ಲುತ್ತದೆ. ಏಕೆಂದರೆ ಒಂದು ಸಿನಿಮಾದ ಬಗ್ಗೆ ಚಿತ್ರವೀಕ್ಷಣೆಯ ನಂತರ ಆ ಚಿತ್ರವನ್ನು ವಿಶ್ಲೇಷಣೆ ಹಾಗೂ ವಿಮರ್ಶೆಗೆ ಒಳಪಡಿಸುವ ಕಾರ್ಯಕ್ರಮ ಕರ್ನಾಟಕದ ಎಲ್ಲಾ ೨೬ ಸಮುದಾಯದ ಘಟಕಗಳಲ್ಲಿಯೂ ನಡೆಯುತ್ತಿತ್ತು. ಅದರಲ್ಲಿ 'ಬೆಂಗಳೂರು ಸಮುದಾಯ'ದ ಪಾಲು ಹೆಚ್ಚು. ಇಂಥ ಸಿನಿಮಾರಂಗದ ಆಶಯದ ಬಗೆಗೆ ಸಿನಿಮಾ ಯಾವ ಜನರ ಸಮಸ್ಯೆಗಳನ್ನು ಎತ್ತಿಕೊಳ್ಳುತ್ತದೆ ಎಂಬುವುದನ್ನು ಕುರಿತು ಚರ್ಚೆ ಮಾಡಲಾಗುತ್ತಿತ್ತು. ಇಂಥ ಸಂಗತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸಿನಿಮಾರಂಗದ ತತ್ವ-ಸಿದ್ಧಾಂತ, ಸೃಜನಶೀಲತೆಯಿಂದ ಜನರು ಸಿನಿಮಾದಿಂದ ಪ್ರಭಾವಿತರಾಗುತ್ತಾರೆ. ಸಮಾಜದ ನೈಜ ಘಟನೆಗಳ ಜೊತೆಗೆ ಇತರೆ ಸಾಮಾಜಿಕ ವಿಷಯಗಳನ್ನು ಒಳಗೊಂಡ ಸಿನಿಮಾಗಳನ್ನು ಆಯ್ಕೆ ಮಾಡಿಕೊಂಡು ಸಿನಿಮಾ ವೀಕ್ಷಿಸುತ್ತಾರೆ. ಸಿನಿಮಾ ಸಂವಾದ ಕಾರ್ಯಕ್ರಮಗಳನ್ನು ಈ ಮೂಲಕ ಚಿತ್ರ ವಿಮರ್ಶೆಗೆ ಒಳಪಡಿಸುವ

ಮತ್ತು ಮುಂದಿನ ಚಿತ್ರಗಳು ಹೇಗೆ ಮಾಡಬೇಕು ಎಂಬುವುದನ್ನು ಚರ್ಚಿಸಿ ಕಾರ್ಯರೂಪಕ್ಕೆ ತರುವ ಆಶಯವಾಗಿರುತ್ತದೆ. ಎಪ್ಪತ್ತರ ದಶಕದ ರಂಗಭೂಮಿ ಹಾಗೂ ಸಿನಿಮಾರಂಗ ಜೊತೆ-ಜೊತೆಯಲ್ಲಿ ಪ್ರಗತಿಯೊಂದಿದ್ದು ಕಾಣುತ್ತೇವೆ. ಏಕೆಂದರೆ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡಂಥ ಸಂಘಟನೆಗಳು, ಚಳವಳಿಯ ಸಂದರ್ಭ ರಂಗಭೂಮಿ ಮತ್ತು ಸಿನಿಮಾರಂಗದಲ್ಲಿ ಹೊಸ ಬಗೆಯ ಆವಿಷ್ಕಾರಗಳ ಕಾರಣದಿಂದಾಗಿ ಸಿನಿಮಾ ರಂಗ ಯಶಸ್ಸು ಕಂಡಿತು. ರಂಗಭೂಮಿ ಮತ್ತು ಸಿನಿಮಾ ಜನರ ನಿಜಸಮಸ್ಯೆಗಳ ಆಶಯವನ್ನು ಹೊಂದಿದ್ದು, ಈ ಹಿನ್ನೆಲೆಯಲ್ಲಿ ಸಿನಿಮಾಗಳು, ನಾಟಕಗಳು ಹೆಚ್ಚು ಬಂದಿದ್ದು ಕಾಣುತ್ತೇವೆ. ಇದಕ್ಕೆ ಕ್ಲಾಸಿಕಲ್ ಚಿತ್ರಗಳು ಬಹುಮುಖ್ಯವಾಗಿ ಪ್ರಭಾವಕ್ಕೆ ಒಳಗಾಗಿದ್ದನ್ನು ಕಾಣುತ್ತೇವೆ, ಬೆಂಗಾಲಿ ಸಿನಿಮಾಗಳಿಂದ ಅದರಲ್ಲೂ ಪಶ್ಚಿಮ ಬಂಗಾಳದ ನಿರ್ದೇಶಕ ಸತ್ಯಜಿತ್ ರೈ ಅವರ ಸಿನಿಮಾಗಳಿಂದ ಕನ್ನಡ ಸಿನಿಮಾರಂಗವು ಪ್ರಭಾವಕ್ಕೆ ಒಳಗಾಯಿತು. ಕನ್ನಡ ಸಿನಿಮಾರಂಗವು ೬೦-೭೦ರ ದಶಕದಲ್ಲಿ ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಗಿರೀಶ್ ಕಾಸರವಳ್ಳಿ, ಎಂ.ಎಸ್. ಸತ್ಯು, ನಾಗತಿಹಳ್ಳಿ ಚಂದ್ರಶೇಖರ್, ಕೃಷ್ಣಮಾಸಡಿ ಹಾಗೂ ಬರಗೂರು ರಾಮಚಂದ್ರಪ್ಪ ಮುಂತಾದವರು ಸಿನಿಮಾದಲ್ಲಿ ಸಮಾಜದ ಜೀವಂತ ಸಮಸ್ಯೆಗಳನ್ನು ಚರ್ಚೆಗೆ ಒಳಪಡಿಸಬೇಕೆಂಬ ಎಡಪಂಥೀಯ ಚಿಂತನೆಯಿಂದ ಸಿನಿಮಾಗಳನ್ನು ಮಾಡುತ್ತಿದಿದ್ದು ಕಾಣುತ್ತೇವೆ.

ಜನಪ್ರಿಯ ಸಿನಿಮಾಗಳು ಎಂದರೆ ಕೇವಲ ಸಿನಿಮಾಕ್ಕೆ ಹೆಚ್ಚು ಬಂಡವಾಳ ಹಾಕಿ ಬಂಡವಾಳವನ್ನು ತೆಗೆಯುವ ಚಲನಚಿತ್ರಗಳ ಯೋಜನೆಯಲ್ಲಿ ಕ್ಲಾಸಿಕಲ್ ಪರ್ಯಾಯ ಸಿನಿಮಾಗಳ ಸಮಾಜಮುಖಿಯಾಗಿವೆ. ಜನರ ನಿಜ ಸಮಸ್ಯೆಗಳ ಬಗ್ಗೆ ಚರ್ಚಿಸುವ, ಜನರಲ್ಲಿ ವೈಚಾರಿಕತೆಯನ್ನು ಮೂಡಿಸುವ, ಜೊತೆಗೆ ಈ ಸಿನಿಮಾ ನೋಡಿದ ಜನರು ಚಳವಳಿಗಳಲ್ಲಿ ಭಾಗವಹಿಸುವಂತೆ ಪ್ರೇರಣೆಯಾಗಿತ್ತು. ಸಿನಿಮಾದ ಆಶಯ-ಸಿದ್ಧಾಂತಗಳ-ಸೃಜನಶೀಲತೆವುಳ್ಳ ಕ್ಲಾಸಿಕಲ್ ಸಿನಿಮಾರಂಗವನ್ನು ಅಭಿವೃದ್ಧಿಪಡಿಸುವಲ್ಲಿ 'ಸಮುದಾಯ'ದಂಥ ಸಾಂಸ್ಕೃತಿಕ ಸಂಘಟನೆಯಿಂದ ಇದು ಸಾಧ್ಯವಾಗಿದ್ದು ಚಾರಿತ್ರಿಕವಾಗಿ ಗುರುತಿಸುತ್ತೇವೆ. ಅರವತ್ತರ ದಶಕದ ಆರಂಭದ ಸಿನಿಮಾಗಳು ಸಂಸ್ಕಾರ, ಪಲ್ಲವಿ, ಕಾಕನಕೋಟೆ, ಅವಸ್ಥೆ, ದೃವತಾರೆ, ಸಂಪತ್ತಿಗೆ ಸವಾಲು, ಕಸ್ತೂರಿನಿವಾಸ, ಮಾರ್ಚ್-೨೨ ಮುಂತಾದ ಸಿನಿಮಾಗಳು ಸಮುದಾಯದ ಪ್ರಭಾವಕ್ಕೆ ಒಳಗಾಗಿದ್ದವು. ಎಪ್ಪತ್ತರ ದಶಕದಿಂದ 'ಸಮುದಾಯ'ದಿಂದ ಪ್ರಭಾವಿತರಾಗಿ 'ಸಮುದಾಯ' ನಾಟಕಗಳ ಅನುಭವದಿಂದ ಸಿನಿಮಾಗಳಾಗಿ ಬಂದಿದ್ದು ಕಾಣುತ್ತೇವೆ. ಅವುಗಳಲ್ಲಿ ವಿಗಡವಿಕ್ರಮರಾಯ, ತಾಯಿ, ಕೆರೆಗೆಹಾರ ಮುಂತಾದವು. 'ಸಮುದಾಯ'ದಿಂದ ಸಿನಿಮಾರಂಗದಲ್ಲಿ ಹಲವಾರು ಸಮಾಜಮುಖಿ ಸಿನಿಮಾಗಳು ಬಂದಿದ್ದು ಚಾರಿತ್ರಿಕವಾಗಿ ಗುರುತಿಸಲಾಗಿದೆ. 'ಸಮುದಾಯ' ಸಂಘಟನೆಯ ಆರಂಭದಿಂದ ಕೂಡ 'ಚಿತ್ರಸಮುದಾಯ' ಮೂಲಕ, ಫಿಲ್ಮಿ ಸೊಸೈಟಿ ಮೂಲಕ ಚಿತ್ರಗಳ ವೀಕ್ಷಣೆಯ ನಂತರ ಸಿನಿಮಾದ ಬಗ್ಗೆ ಚರ್ಚೆಯನ್ನು ಮಾಡಲಾಗುತ್ತಿತ್ತು. ಜೊತೆಗೆ 'ಗ್ರಂಥ ಸಮುದಾಯ', 'ಕತೆವಾಚನ', ಸಿನಿಮಾದ ಬಗೆಗಿನ ವಿಚಾರ ಸಂಕಿರಣಗಳು ಸಿನಿಮಾರಂಗವನ್ನು ಸೃಜನಶೀಲ ಸಂವಾದಗಳನ್ನು ಮಾಡುವಲ್ಲಿ 'ಸಮುದಾಯ' ಸಂಘಟನೆಯೇ ಮೊದಲು ಎಂದು ಚಾರಿತ್ರಿಕವಾಗಿ ಗುರುತಿಸಲಾಗಿದೆ.

ಎಪ್ಪತ್ತರ ದಶಕದಲ್ಲಿ ಮೂಡಿಬಂದ ಹೊಸ ಅಲೆಯ ಸಂಘಟನೆಗಳು ಚಳವಳಿಗಳನ್ನು ಮಾಡುತ್ತಿರುವುದರ ಪರಿಣಾಮದಿಂದ ಎಪ್ಪತ್ತರ ದಶಕದ ಎಲ್ಲಾ ಕ್ಷೇತ್ರಗಳು ಅಂದರೆ ರಂಗಭೂಮಿ, ಸಿನಿಮಾ, ಶಿಕ್ಷಣ, ಕೃಷಿ, ಕೈಗಾರಿಕೆ, ಸೇವಾಕ್ಷೇತ್ರವು ಸೇರಿದಂತೆ ದುಡಿಯುವ ಜನರಲ್ಲಿ ಸಂಘಟನಾತ್ಮಕ ಐಕ್ಯ ಭಾವನೆ ಮೂಡಿಬಂದಿತ್ತು. ವಿವಿಧ ಕ್ಷೇತ್ರದಲ್ಲಿ ಸಂಘಟಿತ ಮನೋಭಾವ ಬೆಳೆಸಿಕೊಂಡು ಅದರಲ್ಲಿ ಹೊಸ ಸೃಜನಶೀಲ ಪ್ರಯೋಗಗಳನ್ನು ಮಾಡಿದರು. ಮುಖ್ಯವಾಗಿ ರಂಗಭೂಮಿ ಹಾಗೂ ಸಿನಿಮಾರಂಗದಲ್ಲಿ ಮಾಡಿದ ಪ್ರಯೋಗವು ಇಂದಿಗೂ ಸಮಾಜದಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆ ತರಲು ಕಾರಣವಾಗಿದೆ. ಏಕೆಂದರೆ ಅಂದು ಹಲವಾರು ರಂಗಭೂಮಿ ತಂಡಗಳು ಹುಟ್ಟಿಕೊಂಡವು. ಬೆನಕ, ನಟರಂಗ, ಚಿತ್ರತಂಡ, ಕಲಾಗಂಗೋತ್ರಿ, ಸ್ಪಂದನ, ರಂಗಸಂಪದ, ಜೊತೆಗೆ 'ಸಮುದಾಯ' ಸಂಘಟನೆಯು ವಿಭಿನ್ನ ಬೀದಿ-ರಂಗಚಟುವಟಿಕೆಗಳು ಹೊಸ ರೀತಿಯ ರಂಗಚಳವಳಿಯ ಮೂಲಕ ಸಮಾಜದ ಜನಸಾಮಾನ್ಯರನ್ನು ಹಾಗೂ ಮಧ್ಯಮವರ್ಗದವರನ್ನು ಎಚ್ಚರಿಸುವ ಕೆಲಸ ಮಾಡಿದವು.

ಸಿನಿಮಾರಂಗವು ಹೊಸ ಚಿಂತನೆಗಳನ್ನು ತಂದವು. ಅದು ಕೂಡ ರಂಗಭೂಮಿಯಲ್ಲಿ ಪರಿಣಿತಿ ಹೊಂದಿದ ನಟನ ವರ್ಗವೇ ಸಿನಿಮಾದಲ್ಲಿ ಕಾರ್ಯಪ್ರವೃತ್ತರಾಗಿದ್ದರಿಂದ ರಂಗಭೂಮಿಯ ಸೃಜನಶೀಲ ಪ್ರಯೋಗವು ಸಿನಿಮಾರಂಗದಲ್ಲಿ ಪ್ರಭಾವಿಸಿತು. ಹೀಗೆ ಹೊಸ ಮೌಲ್ಯಗಳನ್ನು ಹೊತ್ತ ರಂಗಭೂಮಿಯು ಸಿನಿಮಾರಂಗದಲ್ಲಿ ಕೂಡ ಹೊಸ ಮೌಲ್ಯಗಳನ್ನು ದುಡಿಯುವ ಜನರಿಗೆ ಕಾಡುವ ಸಮಸ್ಯೆ ಹಾಗೂ ಪರಿಹಾರಗಳನ್ನು ನೀಡುವ ಆಶಯದ ಸಾರಾಂಶದ ಸಿನಿಮಾಗಳು ಬಂದಿದ್ದು ಚಾರಿತ್ರಿಕವಾಗಿ ಗುರುತಿಸುತ್ತೇವೆ.

ಸಮಾಜಮುಖಿ ಸಿನಿಮಾಗಳ ನಿರ್ದೇಶಕರಾದ ಬಿ.ಸುರೇಶ್ ಅವರ ಅರ್ಥ, ಗಿರೀಶ್ ಕಾಸರವಳ್ಳಿ ಅವರ ದ್ವೀಪ, ಬರಗೂರು ರಾಮಚಂದ್ರಪ್ಪ ಅವರ ಕೆರೆಗೆಹಾರ, ನಾಗತೀಹಳ್ಳಿ ಚಂದ್ರಶೇಖರ ಅವರ ಒಲವೇ ಜೀವನ ಲೆಕ್ಕಚಾರ ಸಿನಿಮಾಗಳು ಸೇರಿದಂತೆ ಇನ್ನು ಹಲವಾರು ಸಮಾಜಮುಖಿ ಸಿನಿಮಾಗಳ ಜನರ ಕಷ್ಟಗಳನ್ನು ಎತ್ತಿಹಿಡಿಯುವ ಕಾರ್ಯಪ್ರವೃತ್ತರಾದದ್ದು ನೋಡುತ್ತೇವೆ. ಅದರಲ್ಲಿ ಅನೇಕ ಸಿನಿಮಾಗಳು ಸೇರಿಕೊಳ್ಳುತ್ತವೆ. ಅವುಗಳಲ್ಲಿ ಪ್ರಮುಖವಾದ ಸಿನಿಮಾಗಳು ತಾಯಿ, ಬೇರು, ಭಾರತ್ ಸ್ಟೋರ್, ಕಿರಗೂರಿನ ಗಯ್ಯಾಳಿಗಳು, ಶಾಂತಿ, ಹಸೀನಾ, ಪುಟ್ಟಕ್ಕನ ಹೈವೇ, ಕನಸೆಂಬ ಕುದರೆನೇರಿ, ದೊರೆ, ಹಗಲುವೇಶ, ಮೈತ್ರಿ, ಅರಿವು, ಪ್ರಕೃತಿ, ತಬರನಕಥೆ, ನಾನು ಅವನಲ್ಲ ಅವಳು, ಗುಲಾಬಿ ಟಾಕೀಸ್, ದೇವರನಾಡಲ್ಲಿ, ಉಪ್ಪಿನಕಾಗದ, ಬರ, ಶಾಂತಿಕ್ರಾಂತಿ ಮುಂತಾದ ಸಿನಿಮಾಗಳು ಜನಜೀವನದ ಸಮಸ್ಯೆಗಳಿಗೆ ಕಾರಣಗಳನ್ನು ಹುಡುಕುತ್ತಾ ಜನರಿಗೆ ವೈಚಾರಿಕಪ್ರಜ್ಞೆ ಹಾಗೂ ಪ್ರತಿಭಟನೆಯಲ್ಲಿ ತೊಡಗಿಕೊಳ್ಳುವ ಪ್ರೇರಣ ಅಂಶಗಳನ್ನು ಗುರಿತಿಸಿಬಹುದಾಗಿದೆ.

ಜನಸಾಮಾನ್ಯರ ಪರವಾದ ಸೃಜನಶೀಲ ಸಿನಿಮಾಗಳು ಒಂದು ಕಡೆ ಆದರೆ, ಪ್ರಸ್ತುತ ಇವುಗಳಿಗೆ ಸರ್ಕಾರದಿಂದ ಸೌಲಭ್ಯಗಳ-ಸಹಾಯಗಳು ಇನ್ನು ಹೆಚ್ಚು ಸಿಗಬೇಕಾಗಿದೆ. ಕನ್ನಡ ಸಿನಿಮಾಗಳಿಗೆ ಥೀಯೆಟರ್‌ಗಳ ಕೊರತೆ ಇದ್ದು, ಉದ್ಯಮಶೀಲ ಮಾಡಿಕೊಂಡಿರುವ ಆರ್ಭಟದ

ಸಿನಿಮಾರಂಗ ಮತ್ತೊಂದು ಕಡೆಯಾಗಿದೆ. ಪ್ರಸ್ತುತ ಇಂಥ ಸಿನಿಮಾಗಳ ಸಮಾಜ-ವಿದ್ಯಾರ್ಥಿ-ಯುವಜನರನ್ನು ಸೇರಿದಂತೆ ಜನರಲ್ಲಿ ಹೊಡಿ-ಬಡಿ-ಕಡಿ ಎಂಬ ಸಾಹಿತ್ಯವಲ್ಲದ ಭಾಷೆಯಿಂದ ಕೂಡಿದ್ದಾಗಿವೆ. ಇದು ಹಣದ ಕಡೆಗೆ ಹಾಗೂ ಹಿಂಸೆ-ಕ್ರೌರ್ಯವನ್ನು ವೈಭವಿಕರಿಸುವ ವಿಧಾನಗಳಿಂದ ಹೊರಬರಬೇಕಾಗಿದೆ. ಇಂಥ ಸಿನಿಮಾಗಳಿಗೆ ಸಿನಿಮಾ ಅಕಾಡೆಮಿಗಳ ಸಹಕಾರ ಇರುವುದು ದುರಂತದ ಸಂಗತಿಯಾಗಿದೆ.

ಸಿನಿಮಾರಂಗವನ್ನು ವಾಣಿಜೋದ್ಯಮದಿಂದ ಬಿಡಿಸುವ ಸಮಗ್ರವಾದ ಸಿನಿಮಾ ನೀತಿ-ನಿಯಮಗಳು ಇದ್ದರೂ, ಅದರ ಜಾರಿಯಲ್ಲಿ ರಾಜಕಾರಣದ ಕರಿನೆರಳು ಬಿದ್ದಿರುವುದನ್ನು ಕಾಣುತ್ತೇವೆ. ಏಕೆಂದರೆ ಸಿನಿಮಾ ಕೂಡ ಬಂಡವಾಳಶಾಹಿಗಳ ಕೈಯಲ್ಲಿರುವುದು ನೋಡುತ್ತೇವೆ. ಉದಾಹರಣೆಗೆ ಇತ್ತೀಚೆಗೆ ಬಿಡುಗಡೆಯಾದ ಹಿಂದಿ ಸಿನಿಮಾ 'ಪದ್ಮಾವತಿ' ಹಾಗೂ ತಮಿಳುಭಾಷೆಯ 'ಮರ್ಸೆಲ್' ಹಾಗೂ '೨.೦' ಸಿನಿಮಾಗಳ ವಿವಾದಗಳು 'ಬಲಪಂಥೀಯ ಬಂಡವಾಳಶಾಹಿ'ಗಳ ಹಿಡಿತಕ್ಕೆ ಒಳಗಾಗಿರುವುದನ್ನು ಕಾಣುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರದ ಬೆಂಬಲ ಕೂಡ ಇರುವುದು ನೋಡುತ್ತೇವೆ. ಈ ಸಿನಿಮಾರಂಗದಲ್ಲಿ ಪ್ರತಿಭೆಗೆ ಅವಕಾಶವಿದ್ದರೂ ಅದು ನಿರಂತರವಾಗಿ ಬೆಳವಣಿಗೆಗೆ ಸಹಕಾರಿಯಾಗಿಲ್ಲ. ಸಿನಿಮಾರಂಗದಲ್ಲಿ ಇತ್ತೀಚೆಗೆ ಸಾಮಾಜಿಕ ಅಸಮಾನತೆ ಪ್ರಶ್ನೆಗಳನ್ನು ಎತ್ತಿಕೊಂಡ ಸಿನಿಮಾಗಳು ಬರುತ್ತಿರುವುದು ಕಾಣುತ್ತೇವೆ. ಇಂಥ ಸಿನಿಮಾಗಳಿಗೆ ಸರ್ಕಾರ ಸಬ್ಸಿಡಿಗಳನ್ನು ಹೆಚ್ಚಿಸುವುದರಿಂದ ಕನ್ನಡ ಸಿನಿಮಾರಂಗದಲ್ಲಿ 'ಸರ್ಕಾರಿ ಪ್ರಾಥಮಿಕ ಶಾಲೆ ಕಾಸರಗೋಡು ಜಿಲ್ಲೆ' ಎಂಬಂಥ ಸಮಾಜಮುಖಿ ಸಿನಿಮಾಗಳು ಇನ್ನಷ್ಟು ಬರಲು ಅನುಕೂಲವಾಗುತ್ತವೆ.

ಈ ಮೇಲಿನಂತೆಯೇ 'ಸಮುದಾಯ'ವು ರೂಪಿಸಿದ ಎಪ್ಪತ್ತು ಹಾಗೂ ಎಂಬತ್ತರ ದಶಕದ ರಂಗ ಚಳವಳಿಗಳಿಂದ ಉಂಟಾದ ಸಿನಿಮಾರಂಗವು ಜನಪರವಾದ ಸೈದ್ಧಾಂತಿಕ ಅಂಶಗಳನ್ನು ಒಳಗೊಂಡ ಸಿನಿಮಾಗಳು ಬರಲು ಕಾರಣವಾಗಿದ್ದನ್ನು ಕಾಣುತ್ತೇವೆ. ಜೊತೆಗೆ ಈ ಸಿನಿಮಾಗಳು ಕರ್ನಾಟಕದ ಬಹುಜನರಿಗೆ ತಲುಪುವ ಕಾರ್ಯಯೋಜನೆಗಳ ಪ್ರಸ್ತುತ ಅಗತ್ಯವಿದ್ದು, ಇದರ ಕಡೆ ಸಮಾಜದಲ್ಲಿನ ಸಂಘ ಸಂಸ್ಥೆಗಳು ಹಾಗೂ ಸರ್ಕಾರವು ಕಾರ್ಯೋನ್ಮುಖವಾಗಬೇಕು. ಹೀಗೆ ಸಿನಿಮಾರಂಗವು ಸಮಾಜದ ಎಲ್ಲಾ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವ ಯೋಚನೆಯನ್ನು ಜನಸಾಮಾನ್ಯರಲ್ಲಿ ಬಿತ್ತುವ ಕಾರ್ಯ ಬಹುಮುಖ್ಯವಾಗುತ್ತದೆ. ಇಂಥ ಪ್ರಯತ್ನಗಳು ವೇಗವಾಗಿ ಅಭಿವೃದ್ಧಿಯಾಗುತ್ತಿರುವುದು ಸಿನಿಮಾರಂಗದ ತಂತ್ರಜ್ಞಾನ ಬೆಳವಣಿಗೆಯ ಒಂದು ಭಾಗವಾಗಿ ಗುರುತಿಸಲಾಗಿದೆ.

೫.೮ ಮಾಧ್ಯಮರಂಗ-ವ್ಯಂಗ್ಯಚಿತ್ರ ರಚನೆ ಹಾಗೂ ವಿಜ್ಞಾನಕ್ಕೆ 'ಸಮುದಾಯ'ದ ಕೊಡುಗೆ

ಕರ್ನಾಟಕ ಸಾಂಸ್ಕೃತಿಕ ರಂಗ ಚಳವಳಿಗೆ ಮಾಧ್ಯಮರಂಗ, ವ್ಯಂಗ್ಯಚಿತ್ರ(ಕಾರ್ಟೂನ್) ಹಾಗೂ ವಿಜ್ಞಾನಕ್ಕೆ 'ಸಮುದಾಯ' ಪ್ರಮುಖ ಪಾತ್ರ ವಹಿಸಿದೆ ಎಂದರೆ ತಪ್ಪಾಗಲಾರದು. ೧೯೭೮ರಲ್ಲಿ ಪ್ರಾರಂಭವಾದ 'ಸಮುದಾಯ' ವಾರ್ತಾಪತ್ರದ ಸಂಚಿಕೆಗಳು ಕನ್ನಡ ರಂಗ ಸಾಹಿತ್ಯ ಬಗ್ಗೆ ತನ್ನದೇ

ಆದ ಮಾಧ್ಯಮ ಪ್ರಸಾರವನ್ನು ಹುಟ್ಟುಹಾಕಿವೆ. ಜೊತೆಗೆ ಕನ್ನಡ ಪತ್ರಿಕೆಗಳಲ್ಲಿ ಪ್ರಜಾವಾಣಿ, ವಿಜಯ ಕರ್ನಾಟಕ, ಉದಯ ಟಿ.ವಿ ಹಾಗೂ ಈ.ಟಿ.ವಿ. ಕನ್ನಡ ಮತ್ತು ಇಂಗ್ಲೀಷ್ ಮುಖ್ಯ ಪತ್ರಿಕೆಯಾದ ದ.ಹಿಂದೂ ಪತ್ರಿಕೆಗಳಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಬೆಂಬಲವಾಗಿ ಹಾಗೂ ಸಂಘಟನೆ ಬೆಳವಣಿಗೆ ಪೋಷಕರಾಗಿ ಕಾರ್ಯನಿರ್ವಹಿಸುತ್ತಿವೆ. ಪತ್ರಿಕಾ ವರದಿಗಾರರು, ಸಂಪಾದಕರು ದೃಶ್ಯ ಮಾಧ್ಯಮದವರನ್ನು ಸೇರಿದಂತೆ ಸಾಂಸ್ಕೃತಿಕ ಪತ್ರಿಕೆಗಳ ಮೂಲಕ ಸಾಂಸ್ಕೃತಿಕ ರಂಗ ಚಳವಳಿಗಳಿಗೆ ಬೆಂಬಲವಾಗಿ ನಿಂತರು. ಅಂತವರಲ್ಲಿ ಪ್ರಮುಖರು ಎನ್.ರಾಮ್, ಹಿಂದೂ ಪತ್ರಿಕೆ ಪ್ರಜಾವಾಣಿಯ ಪೂರ್ಣಿಮಾ, ಶಾಂತ್‌ಕುಮಾರ್, ವಿಜಯ ಕರ್ನಾಟಕ ಕಾರ್ಯ ನಿರ್ವಹಿಸಿದ ಜಯಕುಮಾರ್, ಈ ಟಿ.ವಿಯ ಮುಖ್ಯಸ್ಥರಾಗಿದ್ದ ಜಿ.ಎನ್ ಮೋಹನ್, ಉದಯ ಟಿ.ವಿ ಕಾರ್ಯನಿರ್ವಹಿಸಿದ್ದ ನಿರಂಜನರಾಧ್ಯ ಅವರು ಜೊತೆಗೆ ಪ್ರಮುಖವಾಗಿ ಚಂದನ, ದೂರದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಜಣ್ಣ ಸೇರಿದಂತೆ ಇನ್ನೂ ಅನೇಕರು 'ಸಮುದಾಯ'ದ ನಾಟಕಗಳು ಹಾಗೂ ಜಾಥಾಗಳು–ಹೋರಾಟಗಳು–ಚಳವಳಿಗಳಿಗೆ ಬಗ್ಗೆ ಸುದ್ದಿ ಮಾಡುತ್ತಿದ್ದುದು ಕಾಣುತ್ತೇವೆ. ವಿಶೇಷವಾಗಿ 'ಸಮುದಾಯ' ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಖಚಿತವಾಗಿ ಸುದ್ದಿ ಮಾಡುತ್ತಿದ್ದದ್ದು ಐಕ್ಯರಂಗ ವಾರಪತ್ರಿಕೆ(ಅಂದರೆ ಇಂದಿನ ಜನ ಶಕ್ತಿವಾದ ಪತ್ರಿಕೆ). ಜೊತೆಗೆ 'ಸಮುದಾಯ' ಪ್ರಕಾಶ, ಕ್ರಿಯಾ ಪ್ರಕಾಶನ ಮತ್ತು ಚಿಂತನಾ ಪುಸ್ತಕದ ಪ್ರಕಟನೆಗಳು ಪತ್ರಿಕಾ ಮಾಧ್ಯಮ ಮೇಲೆ ಹೆಚ್ಚು ಪರಿಣಾಮಕಾರಿಯಾದ ರಂಗ ಚಳವಳಿಗಳ ಸಾಂಸ್ಕೃತಿಕ ಚರ್ಚೆಗಳನ್ನು ಹುಟ್ಟುಹಾಕಿರುವುದನ್ನು ನೋಡುತ್ತೇವೆ.

'ಸಮುದಾಯ ವಾರ್ತಾಪತ್ರ' ಸಮುದಾಯದ ಒಂದು ದಶಕದ ಚಾರಿತ್ರಿಕ ಬೆಳವಣಿಗೆ ಬಗ್ಗೆ ಬೆಳಕು ಚೆಲ್ಲುತ್ತಾ, ಕನ್ನಡ ರಂಗ ಪತ್ರಿಕೆಗಳಲ್ಲಿಯೇ ಅತ್ಯಂತ ಮುಖ್ಯವಾದ ಮಾಸ ಪತ್ರಿಕೆಯಾಗಿ ಪ್ರಸಾರ–ಪ್ರಚಾರವಾಗಿದ್ದು ಕಾಣುತ್ತೇವೆ. ಪ್ರಸ್ತುತ ಈ ಪತ್ರಿಕೆ ಸ್ಥಗಿತಗೊಂಡಿದೆ. ಯಾಕೆಂದರೆ ಯಾವುದೇ ಪತ್ರಿಕೆಗಳು ಬಂಡವಾಳಶಾಹಿಗಳ ಜಾಹೀರಾತುಗಳ ಮೂಲಕ ಜೀವಂತವಾಗಿರುತ್ತವೆ. 'ಸಮುದಾಯ' ವಾರ್ತಾಪತ್ರದಂಥ ಪತ್ರಿಕೆಗಳು ಇಂಥ ಬಂಡವಾಳಶಾಹಿಗಳ ಜಾತಿಗಳಿಗೆ ಬಲಿಯಾದರು. ತನ್ನ ಸೈದ್ಧಾಂತಿಕ ಬದ್ಧತೆಯನ್ನು ತೋರುತ್ತಾರೆ. ಸಾಮಾನ್ಯರ ಜನರಿಂದ ಸಂಗ್ರಹಿಸಿದ ಆರ್ಥಿಕ ಸಹಾಯದಿಂದ ಈ ಪತ್ರಿಕೆಯು ನಡೆಯುತ್ತಿತ್ತು. ಯಾವಾಗ ಎಂಬತ್ತರ ಕೊನೆಯ ದಶಕದ ನಂತರ 'ಸಮುದಾಯ' ಸಂಘಟನೆ ರಾಜ್ಯ ಮಟ್ಟದಲ್ಲಿ ಹಿನ್ನೆಡೆಯನ್ನು ಕಂಡಿತು ಹಾಗೂ ಪತ್ರಿಕೆ ನಡೆಸಲು ಸಾಧ್ಯವಾಗಿಲ್ಲದ ಪ್ರಸ್ತುತ ಸಂದರ್ಭದಲ್ಲಿ ಎಪ್ಪತ್ತರ ದಶಕದ ರೀತಿಯಲ್ಲಿ ಯುವರಂಗ ಕೂಲಿಕಾರರು ಈ ನಿಟ್ಟಿನಲ್ಲಿ 'ಸಮುದಾಯ' ಸ್ವಯಂ ವಿಮರ್ಶೆಗೆ ಒಳಪಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾಧ್ಯಮರಂಗದಲ್ಲಿ 'ಸಮುದಾಯ'ವು ತನ್ನದೇ ಆದ ಕೊಡುಗೆ ನೀಡಿದೆ.

ವ್ಯಂಗ್ಯ ಚಿತ್ರ ರಚನೆ ಹಾಗೂ ವಿಜ್ಞಾನಕ್ಕೆ 'ಸಮುದಾಯ'ದ ಕೊಡುಗೆ

ವ್ಯಂಗ್ಯ ಚಿತ್ರ ಎಂದರೆ ಕೇವಲ ಗೆರೆಗಳ ಚಿತ್ರಕಲೆ ಅಲ್ಲ, ಅದು ಒಂದು ನೂರಾರು

ಪುಸ್ತಕಗಳಿಗೆ ಸಮ. ನೇರವಾಗಿ ಹೇಳಲಾಗದ್ದನ್ನು ವ್ಯಂಗ್ಯ ಚಿತ್ರ ತನ್ನ ಚಿತ್ರ ಕಲೆಯ ಮೂಲಕ ಆಳವಾಗಿ ಅರ್ಥ ಮಾಡಿಸುತ್ತದೆ. ಜೊತೆಗೆ ವ್ಯಂಗ್ಯಚಿತ್ರ ರಚನೆಗೆ ಎಲ್ಲರಿಗೂ ಸಾಧ್ಯವಿಲ್ಲ. ಅದಕ್ಕೆ ತನ್ನದೇ ಆದ ತರಬೇತಿ, ಸೈದ್ಧಾಂತಿಕತೆ, ಅಧ್ಯಯನ ಅಗತ್ಯ ಎಂದು ಹೇಳುತ್ತಾರೆ. 'ಮುಂಬಾಯಿ ಮಡ್ ಡೇ' ಪತ್ರಿಕೆಯ ವ್ಯಂಗ್ಯ ಚಿತ್ರಗಾರ ಸತೀಶ್ ಆಚಾರ್ಯ ಇವರು ಹೇಳುವ ಹಾಗೇ, ವ್ಯಂಗ್ಯಚಿತ್ರ ಒಂದು ಸಾವಿರ ಪದಗಳಿಗೆ ಸಮಾನ'. ಅದೇ ಅಳತೆಗೊಲಿನಲ್ಲಿ ಒಂದು ಸಾವಿರ ಪದಗಳಿಗೆ ಸಮಾನ ಅಂತಾರೆ. ಅದೇ ಅಳತೆ ಗೋಲಿನಲ್ಲಿ ಒಂದು ವ್ಯಂಗ್ಯ ಚಿತ್ರ ಸಾವಿರ ಪುಸ್ತಕಗಳಿಗೆ ಸಮಾನ ಬರೀ ಗೆರೆಯಲ್ಲಿ ಅಷ್ಟೋಂದು ತಾಕತ್ತಿದೆಯಾ ಅಂತೀರಾ? ಬರಿಗೆರೆಯಲ್ಲ ಗೆರೆಯ ನೆಪದಲ್ಲಿ ತೀಕ್ಷಣತೆ ಪಡೆದುಕೊಳ್ಳುವ ವ್ಯಂಗ್ಯಚಿತ್ರದ ಸಂದೇಶದಲ್ಲಿ ತಾಕತ್ತಿದೆ. ನೀವು ಪತ್ರಿಕೆ ಬಿಚ್ಚಿದಾಗೆಲ್ಲ ಒಂದು ಮಾತು ನೆನಪಿಡಿ. ಪ್ರತಿದಿನ ಆ ಪತ್ರಿಕೆಯಲ್ಲಿ ಅಭಿಪ್ರಾಯ ನೀಡುವವನಿದ್ದರೆ ಅದು ವ್ಯಂಗ್ಯ ಚಿತ್ರಕಾರ ಮಾತ್ರ ಸಂಪಾದಕರೂ ಅಲ್ಲ. ಅಭಿಪ್ರಾಯ, ಅನಿಸಿಕೆಯಿಲ್ಲದ ಕಾರ್ಟೂನ್ ತಳವಿಲ್ಲದ ಪಾತ್ರೆಯಷ್ಟೇ ಟೊಳ್ಳು. ಇಲ್ಲಿ ಕಾರ್ಟೂನು ಎಂದರೆ ಸಂಪಾದಕೀಯ ಕಾರ್ಟೂನು ಎನ್ನುವುದನ್ನು ನೆನಪಿಡಬೇಕಾದ ಅಂಶ.

ಈ ಪರಿಯಲ್ಲಿ ಕಾರ್ಟೂನ್ ಶಕ್ತಿ ಹಾಗೂ ತೀಕ್ಷ್ಣತೆಯ ಹೊಂದಿರುವ ಕಾರ್ಟೂನ್ ಬ್ರಶ್, ಜವಬ್ದಾರರ ಕೈಯಲ್ಲಿರೋದು ತುಂಬಾ ಅಗತ್ಯ. ಕಾರ್ಟೂನ್‌ನಲ್ಲಿ ಸಾಮಾಜಿಕ ಜವಾಬ್ದಾರಿ ರಾಜಕೀಯ ನಿರಪೇಕ್ಷತೆ ವೃತ್ತಿಪರ ಬದ್ದತೆಗಳಿದ್ದರೆ ಮಾತ್ರ ಕಾರ್ಟೂನ್‌ನು ಒಂದು ಸಮಾಜದ ಧ್ವನಿಯಾಗಿ ಅಬ್ಬರಿಸಬಹುದು. ಪ್ರಜಾಪ್ರಭುತ್ವದ ಚಕ್ರಗಳು ಸಲೀಸಾಗಿ ಕಾರ್ಯನಿರ್ವಹಿಸಲು ಈ ಜನದನಿ ಆಗಾಗ್ಗೆನ ಮೋಳಗಬೇಕಾದ್ದು ತೀರ ಅಗತ್ಯ ಎಂದು ಸತೀ ಆಚಾರ್ಯರ ವಾದ. ಹೀಗೆ ಒಂದೆಡೆ ಸಂತುಲಿತ(ಆದರೂ ತೀಕ್ಷತೆ) ಸಂದೇಶ ಕಾರ್ಟೂನ್‌ಗಳ ಮೂಲಕ ಬಿತ್ತರಿಸುವ ಜವಾಬ್ದಾರಿಯಿದ್ದರೆ, ಇನ್ನೊಂದೆಡೆ ಅಂತರ್ಜಾಲದ ವ್ಯಾಪ್ತಿಯನ್ನು ಅರ್ಥೈಸಿಕೊಂಡು ಧನಾತ್ಮಕವಾಗಿ ಬಳಸಿಕೊಳ್ಳುವ ನಿರಂತರ ಬದ್ಧತೆಯಿದೆ. ಒಂದು ಕಾರ್ಟೂನು, ಫೇಸುಬುಕ್, ಟ್ವೀಟರ್, ಬ್ಲಾಗುಗಳ ಮೂಲಕ ಲಕ್ಷಾಂತರ ಓದುಗರನ್ನು ತಲುಪು, ಆ ಲಕ್ಷ ಬರೀ ಅಂಕೆ ಸಂಖ್ಯೆಯಾಗಿರುವುದಿಲ್ಲ ಅದು ಲಕ್ಷ ಮೆದುಳಾಗಿರುತ್ತದೆ. ಆ ಲಕ್ಷ ಮೆದುಳುಗಳು ನಮ್ಮ ದೇಶದ ಪ್ರಜಾಪ್ರಭುತ್ವದ ಅಳಿವು-ಉಳಿವಿನ ಹೊಣೆ ಹೊತ್ತಿರುತ್ತಾರೆ.

ಕಾರ್ಟೂನ್ ಮನದನಿ, ಒಬ್ಬ ವ್ಯಕ್ತಿ ಹೇಳದನ್ನು ಕಾರ್ಟೂನು ಹೇಳುತ್ತಾರೆ. ಕಾರ್ಟೂನ್ ಹೇಳಿದನ್ನು ಒದುಗ ಹೇಳ ತೊಡುಗುತ್ತಾನೆ. ಅದಕ್ಕೆ ಇದೊಂದು ಬಲಿಷ್ಠ ಮಾಧ್ಯಮ ಎಂದು ಪಿ.ಮಹಮದ್ ಅವರ ಅಭಿಪ್ರಾಯ. ಹೀಗೆ ಕರ್ನಾಟಕದಲ್ಲಿ ದ ಹಿಂದೂ ಪತ್ರಿಕೆಯ ಕಿಶೋರ್, ಹಾಗೂ ಸುರೇಂದ್ರ ಮತ್ತು ವಿಜಯ ಕರ್ನಾಟಕ ಚಂದ್ರ ಗಂಗೊಳ್ಳಿ ಮುಂತಾದವರು ಕಾರ್ಟೂನಿಸ್ಟ್ ಕಾರ್ಯನಿರ್ವಹಿಸುವಾಗ ಮಾಡುವ ಅಂಶಗಳು 'ಸಮುದಾಯ' ಸಾಂಸ್ಕೃತಿಕ ಸಂಘ ಮುಖ್ಯ ಆಶಯವಾಗಿ ಧಾರವಾಡ ಹಾಗೂ ಬೆಂಗಳೂರಿನಲ್ಲಿ ವ್ಯಂಗ್ಯಚಿತ್ರ ತರಬೇತಿ ಕಾರ್ಯಗಾರವನ್ನು

ಹಮ್ಮಿಕೊಂಡಿತ್ತು. ನಂತರ ೧೯೯೭ರಲ್ಲಿ ಬೆಂಗಳೂರಿನಲ್ಲಿ ಭ್ರಷ್ಟಚಾರ ಮತ್ತು ಬೆಲೆ ಏರಿಕೆ ವಿರುದ್ಧ ವ್ಯಂಗ್ಯಚಿತ್ರ ಕಲಾಜಾಥಾವನ್ನು ಬೆಂಗಳೂರು 'ಸಮುದಾಯ' ಸಂಘಟನೆ ಸಂಘಟಸಿ ಕಾರ್ಟೂನ್ ಮೂಲಕ ಚಳವಳಿಗೆ ಪೂರಕವಾಗಿರುವ ವ್ಯಂಗ್ಯಚಿತ್ರ ಕಲಾವಿದರನ್ನು ಕರ್ನಾಟಕ, ಮುಂಬಾಯಿ, ದೆಹಲಿ ಹಾಗೂ ಚನ್ನೈಗಳಲ್ಲಿ ಕಾರ್ಟೂನಿಸ್ಟ್‌ಗಳಾಗಿ ಕನ್ನಡ ಮತ್ತು ಇಂಗ್ಲೀಷ್ ಇತರೆ ಪ್ರತಿಕೆಗಳಲ್ಲಿ ಕಾರ್ಯನಿರ್ವಸುತ್ತಿರುವುದು 'ಸಮುದಾಯ' ರೂಪಿಸಿದ ಸಾಂಸ್ಕೃತಿಕ ರಂಗ ಚಳವಳಿಯ ಭಾಗವೆಂದು ಚಾರಿತ್ರಿಕವಾಗಿ ಗುರುತಿಸಲಾಗಿದೆ.

ಕಾರ್ಟೂನ್‌ಗೆ ಹೇಗೆ ತರಬೇತಿ ನೀಡಿತೋ ನಂತರ ಕಾರ್ಟೂನ್ ಚಿತ್ರಗಳ ಗ್ಯಾಲರಿಯನ್ನು ಬೆಂಗಳೂರಿನ ಎಂ.ಜಿ.ರೋಡ್ 'ಕಾರ್ಟೂನ್ ಗ್ಯಾಲರಿ'ಯಲ್ಲಿ ಅಗತ್ಯ ಸಂದರ್ಭಗಳ ಕಾರ್ಟೂನ್ ಎಗ್ಸಬೀಷನ್ ಮಾಡಲಾಗುತ್ತದೆ. ಇದರ ಜೊತೆಗೆ ಪೂರಕವಾಗಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ವಿಜ್ಞಾನಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ವೈಜ್ಞಾನಿಕ ನಾಟಕಗಳಿಗೆ ಆದ್ಯತೆಯನ್ನು ನೀಡಲು 'ಸಮುದಾಯ' ಸಾಂಸ್ಕೃತಿಕ ಸಂಘಟನೆ ವಿಜ್ಞಾನವನ್ನು ಅಧ್ಯಯನ ಮಾಡಿದವರು ಬಹುತೇಕರಿದ್ದರು. ಅದರಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯು ಹುಟ್ಟಲು 'ಸಮುದಾಯ'ದ ಸಂಘಟನೆಯಲ್ಲಿ ಕಾರ್ಯ ನಿರ್ವಹಿಸಿದವರು. ಭಾರತೀಯ ಜ್ಞಾನ ವಿಜ್ಞಾನ ಸಮಿತಿಯ (ಬಿ.ಜಿ.ವಿ.ಎಸ್) ಸಂಘಟನೆಯಲ್ಲಿ ಕ್ರೋಢಿಕರಣಗೊಂಡು ವಿಜ್ಞಾನ ಜಾಥಾವನ್ನು ೧೯೮೫ ಕೇರಳ ವಿಜ್ಞಾನ ಸಮಿತಿಯ ಜೊತೆ ಸೇರಿಕೊಂಡ ವಿಜ್ಞಾನ ಜಾಥಾವನ್ನು ಪ್ರಾರಂಭಿಸಿದರು.

ಇದರ ಭಾಗವಾಗಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ 'ವೈಜ್ಞಾನಿಕ ಪ್ರಾಧ್ಯಾಪಕರು ಹೆಚ್ಚಿನ ರೀತಿಯಲ್ಲಿ ತೊಡಗಿಕೊಂಡರು. ತುಮಕೂರು 'ಸಮುದಾಯ' ಘಟಕದಲ್ಲಿ ನಿರಂಜನರಾದ್ಯ ವಿಜ್ಞಾನಿಯು 'ಸಮುದಾಯ' ನಾಟಕಗಳ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಭಾರತದ ಖಗೋಳ ವಿಜ್ಞಾನಿಯಾದ ಚಟರ್ಜಿ ಹಾಗೂ ಕರ್ನಾಟಕದಲ್ಲಿ ವಿಜ್ಞಾನ ಉಪನ್ಯಾಸಕರು ಹಾಗೂ ಇಂಜಿನಿಯರ್‌ಗಳು, ಬ್ಯಾಂಕ್, ವಿಮಾ, ಕಾರ್ಖಾನೆ ಹಾಗೂ ಕರ್ನಾಟಕ ವಿದ್ಯುತ್ ಕೇಂದ್ರಗಳ ನೌಕರರು ಶಿಕ್ಷಕರು ಬೆಂಗಳೂರು ಬಿ.ಇ.ಎಂ.ಎಲ್ ಕಾರ್ಖಾನೆ ಹಾಗೂ ಮೈಕೊ ಕಾರ್ಖಾನೆ ಇತರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಾ 'ಸಮುದಾಯ' ರಂಗ ಚಟುವಟಿಕೆ ಹಾಗೂ ಚಳವಳಿಯಲ್ಲಿ ಕಾರ್ಯನಿರ್ವಹಿಸುದ್ದು ಬದ್ಧತೆವುಳ್ಳ 'ಸಮುದಾಯ' ಕಾರ್ಯಕರ್ತರ ಶ್ರಮಿಕರು, 'ಸಮುದಾಯ' ಸಾಂಸ್ಕೃತಿಕ ಸಾಹಿತ್ಯ ಕ್ಷೇತ್ರಕ್ಕೆ ತನ್ನ ಆದ ಕೊಡುಗೆ ನೀಡಿತ್ತು. 'ಸಮುದಾಯ' ಮುಖ್ಯ ನಾಟಕಗಳಲ್ಲಿ ಮುಖ್ಯ ನಾಟಕ 'ಗೆಲಿಲೆಯೋ' ನಾಟಕ.

ಇದು ಖಗೋಳ ವಿಜ್ಞಾನ ಜೀವನ ಹೋರಾಟದ ಬಗ್ಗೆ ಇದ್ದ ನಾಟಕವೆಂದು ನೋಡಿದರೆ ತಪ್ಪಗಲಾರದು. ವಿಜ್ಞಾನ ಮತ್ತು ವೈಚಾರಿಕ, ವೈಜ್ಞಾನಿಕ ತಿಳಿವಳಿಕೆವುಳ್ಳ ಬಹುತೇಕ 'ಸಮುದಾಯ' ನಾಟಕಗಳಲ್ಲಿ ಗುರುತಿಸಬಹುದಾಗಿದೆ. ಮೌಢ್ಯತೆಗೆ ಪ್ರತಿಯಾಗಿ ವಿಜ್ಞಾನ ಬೆಳೆಯಬೇಕು ಎಂಬ ಆಶಯದಿಂದಲೇ ೧೯೮೬ರಲ್ಲಿ ನೂರ ಅಡಿಗಳ ಬಣ್ಣದ ನಡೆ ಅಣುಸಮರಕ್ಕೆ ಜನತೆಯ ತಡೆ

ಎಂಬ ಜಾಥಾವು ಬಹುತೇಕ ವಿಜ್ಞಾನ ಜಾಥಾವಾಗಿ ಇಡೀ ಕರ್ನಾಟಕವನ್ನು ಸುತ್ತುತಿತ್ತು. 'ಸಮುದಾಯ' ಸಂಘಟನೆಗೆ ಸಲ್ಲುತ್ತದೆ. ಬೆಂಗಳೂರು ಐಐಎಸಿ ಕೇಂದ್ರದಲ್ಲಿ 'ಸಮುದಾಯ' ನಾಟಕಗಳು ಮತ್ತು ವಿಚಾರ ಸಂಕಿರಣಗಳು ನಡೆಯುತ್ತಿದ್ದವು. ನಿರಂತರವಾಗಿ ಬೆಂಗಳೂರು 'ಸಮುದಾಯ' ಸಂಘಟನೆ ಎಲ್ಲಾ ರೀತಿಯ ಬೆನ್ನಲುಬಾಗಿ ನಿಂತಿದ್ದು ಕಮ್ಯುನಿಸ್ಟ್ ಪಕ್ಷಗಳ ರೀತಿಯಲ್ಲಿ (Indian institute of science of center) ಎಂದು 'ಸಮುದಾಯ'ದೊಂದಿಗೆ ನಿರಂತರ ಸಂಪರ್ಕದಲ್ಲಿ ಇದ್ದು ನಾಟಕಗಳಲ್ಲಿ ಹೆಚ್ಚು ಇವರುಗಳು ಭಾಗವಹಿಸುತ್ತಿದ್ದರು. ಹೀಗೆ 'ಸಮುದಾಯ' ಸಂಘಟನೆ ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಕಿರುಹೊತ್ತಿಗೆ 'ಸಮುದಾಯ' ಸಂಘಟನೆ ಲೇಖನಗಳನ್ನು ಪ್ರಕಟಿಸಿದೆ. ಬಿ.ಜಿ.ವಿ.ಎಸ್ ಸ್ಮರಣೆ ಗ್ರಂಥಗಳ ಮತ್ತು ಟೀಚರ್ ಪತ್ರಿಕೆಯಲ್ಲಿ ನಿರಂತರವಾಗಿ ವಿಜ್ಞಾನಕ್ಕೆ ಸಂಬಂಧಿಸಿ 'ಸಮುದಾಯ' ಸಂಘಟಕ ಲೇಖನಗಳ ಬರೆದುದನ್ನು ಗಮನಿಸಬಹುದು. ಸಮುದಾಯ ನರೇಂದ್ರನಾಯಕ ಮತ್ತು ಹುಲಿಕಲ್ ನಟರಾಜ್ ಮತ್ತು ಲೋಹಿತಾಶ್ವ ಎಂಬ ಕರ್ನಾಟಕ ಮತ್ತು ಭಾರತದಲ್ಲಿ ಗುರುತಿಸುವ ಪವಾಡ ಬಂಜಕರನ್ನು ಸಿದ್ಧಗೊಳಿಸಿ ಪವಾಡಗಳ ಗುಟ್ಟು ಬಯಲು ಕಾರ್ಯಕ್ರಮದ ಮೂಲಕ ಹೊಸ ರೀತಿಯ ಚಿಂತನ ಕ್ರಾಂತಿಯನ್ನು ಮೂಡಿಸಿದೆ.

ಇದರ ಹಿಂದೆ ಎಡ ಸಮುದಾಯದಂಥ ಸಂಘಟನೆಗಳಿಂದ ಬೆಳೆದು ಈ ಮೂರು ಜನರು ಕರ್ನಾಟಕದ ಅನೇಕ ಶಾಲೆ, ಗ್ರಾಮಗಳಿಗೆ ತೆರಳಿ ಕಡಿಮೆ ದರದಲ್ಲಿ ಪವಾಡ ಕಾರ್ಯಕ್ರಮಗಳು ನಡೆಸಿ ಕೊಟ್ಟ ಸೇವಾ ಮನೋಭಾವದಿಂದ ಕರ್ನಾಟಕದಲ್ಲಿ ಗಾಢವಾಗಿರುವ ಮೌಢ್ಯತೆಯನ್ನು ವಿಜ್ಞಾನದ ಮೂಲಕ ಬಹಿರಂಗಗೊಳಿಸಿ ಮೌಢ್ಯತೆಯನ್ನು ತುಂಬುವ ಜೋತಿಷ್ಯಗಳಿಗೆ ಹಾಗೂ ಧಾರ್ಮಿಕ ಸಂಪ್ರದಾಯವಾದಿಗಳ ವಿರೋಧವನ್ನು ಕಟ್ಟಿಕೊಂಡಿದ್ದಾರೆ. ಕರ್ನಾಟಕದಲ್ಲಿ ಅನಕ್ಷರಸ್ಥರು ಹೆಚ್ಚಿರುವುದು ಇಂದಿಗೂ ಕಾಣಬಹುದು. ಅಂದರೆ ಸಹಿಮಾಡಿದವರೆಲ್ಲ ಅಕ್ಷರಸ್ಥರಲ್ಲ ಎಂಬ ತಿಳಿವಳಿಕೆಯಾಗಿ ಹಾಗೂ ಶಿಕ್ಷಣ ಪಡೆದವರೆಲ್ಲರೂ ವೈಚಾರಿಕವಾಗಿ ಯೋಚಿಸುತ್ತಾರೆ ಎಂಬ ನಂಬಿಕೆ ಇಲ್ಲ. ಹೆಚ್ಚು ಅವರೇ ಮೌಢ್ಯತೆಗೆ ಬಲಿಯಾಗುತ್ತಿರುವುದನ್ನು ಕಾಣುತ್ತೇವೆ. ಆಧುನಿಕ ಯುಗದಲ್ಲಿ ಕೆಲವು ಪ್ರಕರಣಗಳನ್ನು ನೋಡಿದಾಗ, ಉದಾಹರಣೆ: ಜೋತಿಷ್ಯರ ಮೇಲೆ ಅತೀ ನಂಬಿಕೆ.

ಹೀಗೆ ಸಮುದಾಯವು ಸಾವಿರಾರು ಪವಾಡ ಬಯಲು ಕಾರ್ಯಕ್ರಮಗಳನ್ನು ಮಾಡುವ ಕಾರ್ಯಕ್ರಮಗಳನ್ನು ರೂಪಿಸಿದ್ದು ಕರ್ನಾಟಕದಲ್ಲಿ ನರೇಂದ್ರ ನಾಯಕ, ಹುಲಿಕಲ್ಲು ನಟರಾಜ ಹಾಗೂ ಲೋಹಿತಾಶ್ವ ಅವರಿಗೆ ರಾಜ್ಯ ಮಟ್ಟದ ಹಾಗೂ ಹಲವಾರು ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಬಂದಿದ್ದು ಕಾಣಬಹುದು. ಜೊತೆಗೆ ಧಾರ್ಮಿಕ ಅಂಧತ್ವದ ಮೂಢನಂಬಿಕೆ ಪ್ರತಿಪಾದಿಸುವ ಧಾರ್ಮಿಕವಾದಿಗಳ ದಾಳಿಗಳು ಹಾಗಾಗೇ ನಡೆಯುತ್ತಿವೆ. ಆದ್ದರಿಂದ ಸರ್ಕಾರಗಳು ಇಂಥವರಿಗೆ ಹೆಚ್ಚು ಭದ್ರತೆಯನ್ನು ಒದಗಿಸಬೇಕು. ಮಹಾರಾಷ್ಟ್ರದ ನರೇಂದ್ರ ದಾಬೋಲ್ಕರ್ ಕೊಲೆ ರೀತಿಯಲ್ಲೇ ಇವರನ್ನು ಕೊಲ್ಲಲು ಮುಂದಾಗಿರುವುದು ಪ್ರಗತಿಪರರೆಲ್ಲರೂ ವಿರೋಧಿಸಿ ಈ ಪವಾಡ ಬಂಜಕರ

ಪರವಾಗಿ ನಿಲ್ಲಬೇಕು 'ಸಮುದಾಯ' ಸಂಘಟನೆಯು ಇಂಥವರ ಬೆಂಬಲದಿಂದ ವಿಜ್ಞಾನ ಬೆಳೆಯಲು ಸಾಧ್ಯ. ನಂತರ ಜಾಥಾವು ಕರ್ನಾಟಕದಾದ್ಯಂತ ಸುತ್ತಿದ ನಂತರ ೧೫-೧೧-೯೮೯ರಂದು ಬೆಂಗಳೂರಿನಲ್ಲಿ ಸಮಾರೋಪ ಕಾರ್ಯಕ್ರಮದ ಜಾಥಾದ ಉದ್ದಕ್ಕೂ ಈಗಾಗಲೇ ಎರಡು ಮಹಾಯುದ್ಧಗಳಲ್ಲಿ ನಡೆದ ಧಾರುಣ ಸಾವುಗಳ ಘಟನೆಗಳನ್ನು ಕುರಿತು ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿನ ವಿಮೋಚನಾ ಹೋರಾಟಗಳ ಕುರಿತು, ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಮೇರಿಕಾದ ಅಣುಬಾಂಬ್ ಸ್ಫೋಟಿಸಿದ ದುಷ್ಪರಿಣಾಮಗಳ ಕುರಿತು ಪರಿಚಯಿಸಲಾಯಿತು. ಈ ಸಮಾರೋಪದ ಅಂಗವಾಗಿ ಭಿತ್ತಿ ಚಿತ್ರಗಳು, ಚಿತ್ರಕಲೆಗಳನ್ನು ಪ್ರದರ್ಶಿಸಲಾಯಿತು. ಈ ಜಾಥಾವು ಕರ್ನಾಟಕಕ್ಕೆ ಸಿಮಿತವಾಗಿದೆ. ದೆಹಲಿ, ಕಲ್ಕತ್ತ, ಚೆನ್ನೈ, ವಿಜಯವಾಡ, ಭೂಪಾಲ್, ಹರಿಯಾಣ ಹಾಗೂ ತಿರುವಂತನಪುರಗಳಲ್ಲಿ ಪ್ರದರ್ಶಿಸಿದ ಭಾರತದ ಮೊದಲ ವರ್ಣ ತೈಲ ಚಿತ್ರಕಲೆ ಜಾಥಾ ಎನ್ನಬಹುದಾಗಿದೆ.

ಈ ಜಾಥಾದಲ್ಲಿ ಬಿ.ಕೆ.ಚಂದ್ರಶೇಖರ್ ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಿ.ಪಿ.ಐ(ಎಂ) ಮುಖಂಡರು, ಸಿ.ಐ.ಟಿ.ಯು ಕಾರ್ಮಿಕ ಸಂಘಟನೆಯ ಮುಖಂಡರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿ.ಪಿ.ಎಂ ಶಾಸಕರದ ಎಸ್.ಸೂರ್ಯ ನಾರಾಯಣರಾವ್ ಮುಂತಾದವರು ಶುಭಕೋರಿ ಮಾತನಾಡಿದರು. ಹಿಗಾಗಲೇ 'ಸಮುದಾಯ'ದ ೧೯೭೭ರಲ್ಲಿ 'ಹೊಸಮೌಲ್ಯಗಳತ್ತ 'ಸಮುದಾಯ' ಜಾಥಾ'ವು ಕರ್ನಾಟಕದಾದ್ಯಂತ ಸುದ್ದಿಯಾಗಿ ದೆಹಲಿ, ಉತ್ತರಪ್ರದೇಶ, ಚೆನ್ನೈ, ಕಲ್ಕತ್ತ ಮುಂತಾದ ನಗರಗಳಲ್ಲಿ ಬೆಲ್ಚಿ ನಾಟಕ ೧೬೦೦ ಕ್ಕೂ ಹೆಚ್ಚು ಪ್ರದರ್ಶನ ಕಂಡು ಭಾರತದಾದ್ಯಂತ ರಂಗಚಳವಳಿಗೆ ಸ್ಫೂರ್ತಿಯನ್ನು ನೀಡಿತು. ಅದಾದ ಕೆಲವು ವರ್ಷಗಳಲ್ಲಿ ಅಂದರೆ 'ಸಮುದಾಯ' ಹುಟ್ಟಿ ದಶಕಕ್ಕಾಗಿ, ಐತಿಹಾಸಿಕ 'ವಿಶ್ವಶಾಂತಿ'ಗಾಗಿ 'ಬಣ್ಣದ ನಡೆ ಅಣುಸಮರಕ್ಕೆ ಜನತೆಯ ತಡೆ' ಎಂಬ ಘೋಷಣೆಯೊಂದಿಗೆ ಭಾರತದ್ಯಾಂತ ಪ್ರಮುಖಗಳ ೧೪೦ x ೪ ತೈಲ ವರ್ಣ ಚಿತ್ರದ ಜಾಥಾವನ್ನು ಕೈಗೊಂಡಿದ್ದು 'ಸಮುದಾಯ' ಸಾಂಸ್ಕೃತಿಕ ರಂಗಚಳವಳಿಯನ್ನು ಇನ್ನಷ್ಟು ಗಟ್ಟಿಗೊಳಿಸುತು ಎಂದರೆ ತಪ್ಪಾಗಲಾರದು.

೫.೯. 'ಸಮುದಾಯ' : ಚಿತ್ರಕಲೆ ಹಾಗೂ ೧೯೮೯ರ ಬಣ್ಣದ ನಡೆ

೧೯೮೬ರಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯಿಂದ ೧೨೦x೪ ರ ತೈಲ ವರ್ಣಚಿತ್ರದ ಕಲಾ ಜಾಥಾ ಭಾರತದ ಐತಿಹಾಸಿಕ ಕಲಾ ಜಾಥಾ ಎನ್ನಬಹುದು. ಏಕೆಂದರೆ ೧೯೮೬ರಲ್ಲಿ ವಿಶ್ವ ಸಂಸ್ಥೆ 'ವಿಶ್ವ ಶಾಂತಿ ವರ್ಷ'ವನ್ನು ಆಚರಿಸಲು ನೀಡಿದ ಕರೆಗೆ 'ಸಮುದಾಯ' ಕೂಡ ತನ್ನ ಕಾರ್ಯಕ್ರಮಗಳ ಮೂಲಕ ಸ್ಪಂದಿಸಿತು. ಕನ್ನಡ ಪ್ರಸಿದ್ಧ ಕವಿಗಳಿಂದ ರಚಿಸಿಲ್ಪಟ್ಟ ಯುದ್ಧ ವಿರೋಧಿ ಗೀತೆಗಳ ಹಾಡುವ ತರಬೇತಿ ಶಿಬಿರಗಳನ್ನು ನಡೆಸಿಕೊಟ್ಟಿತು. ಇದರ ಜೊತೆಗೆ ದಾವಣಗೆರೆ 'ಸಮುದಾಯ' ತಂಡದ ಕಲಾವಿದರು ೧೨೦x೪ ಅಡಿಗಳ ವಿಸ್ತೀರ್ಣದ ತೈಲವರ್ಣಚಿತ್ರವನ್ನು ಸೊಲಬಕ್ಕನವರ, ಕರಿರಾಜು ಹಾಗೂ ಇವರ ಸಹಪಾಠಿಗಳು 'ಸಮುದಾಯ' ನೇತೃತ್ವದಲ್ಲಿ ಜಾಥಾಕ್ಕಾಗಿ

ಭೂಮಿಯ ಉಗಮ ಮಂಗನಿಂದ ಆಧುನಿಕ ಮಾನವನವರಿಗೆ ಸಮಾಜ ವಿವಿಧ ಸ್ತರಗಳನ್ನು ಚಿತ್ರಿಸುವ ತೈಲವರ್ಣಚಿತ್ರವು ಐತಿಹಾಸಿಕ ವಿಶ್ವಶಾಂತಿಯ ಜಾಥಾವಾಗಿತ್ತು. ೭-೬-೧೯೮೬ ರಿಂದ ೫-೧೧-೧೯೮೬ರವರಗೆ ಸುಮಾರು ೯೦ ದಿನಗಳ ಕಾಲ ರಾಜ್ಯದಾದ್ಯಂತ ಜಾಥಾದ ಅಂಗವಾಗಿ, ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು, ಮಡಿಕೇರಿ, ದಕ್ಷಿಣ ಕನ್ನಡ, ಚಿಕ್ಕಮಂಗಳೂರು, ಹಾಸನ, ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆ, ಧಾರವಾಡ, ಬೆಳಗಾಂ, ಬಿಜಾಪುರ, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲಾ ಕೇಂದ್ರಗಳೂ ಸೇರಿದಂತೆ ನೂರಾರು ಗ್ರಾಮಗಳಲ್ಲಿ ಪ್ರದರ್ಶಿಸಲಾಯಿತು. ಅನೇಕ ಕಡೆ ವಿಚಾರ ಸಂಕಿರಣ, ಸಭೆ ಮೆರವಣಿಗೆಗಳು ಹಾಡಿನ ಕಾರ್ಯಕ್ರಮಗಳು ಬೀದಿನಾಟಕಗಳ ಮೂಲಕ 'ನೂರು ಅಡಿ ಬಣ್ಣದ ನಡೆ, ಅಣು ಸಮರಕ್ಕೆ ಜನತೆಯ ತಡೆ' ಎಂಬ ಘೋಷಣೆಯೊಂದಿಗೆ ಕರ್ನಾಟಕದಲ್ಲಿ ಪ್ರತಿ ಧ್ವನಿಸಿದ್ದು ಚಾರಿತ್ರಿಕವಾಗಿತ್ತು.

ಈ ಜಾಥಾವು ಬೆಂಗಳೂರಿನ ಕೆನ್ ಸ್ಕೂಲ್ ಆಫ್ ಆರ್ಟ್ಸನ ಆರ್. ಎನ್. ಹಡಪದ್ ಉದ್ಘಾಟಿಸಿದರು. ಬೆಂಗಳೂರು ನಂತರ ಜಾಥಾವು ಕರ್ನಾಟಕದಾದ್ಯಂತ ಸುತ್ತಿದ ನಂತರ ೧೫-೧೧-೧೯೮೯ ರಂದು ಬೆಂಗಳೂರಿನ ಸಮಾರೋಪ ಕಾರ್ಯಕ್ರಮದಲ್ಲಿ ಜಾಥಾದ ಉದ್ದಕ್ಕೂ ಈಗಾಗಲೇ ಎರಡು ಮಹಾಯುದ್ದಗಳಲ್ಲಿ ನಡೆದ ಧಾರುಣ ಸಾವುಗಳ ಘಟನೆಗಳನ್ನು ಕುರಿತು ಏಷ್ಯಾ, ಆಫ್ರೀಕಾ, ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿನ ವಿಮೋಚನಾ ಹೋರಾಟಗಳ ಕುರಿತು, ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಮೇರಿಕಾದ ಅಣುಬಾಂಬ್ ಸ್ಪೋಟಿಸಿದ ದುಷ್ಪರಿಣಾಮಗಳ ಕುರಿತು ಪರಿಚಯಿಸಲಾಯಿತು. ಈ ಸಮರೋಪದ ಅಂಗವಾಗಿ ಭಿತ್ತಿ ಚಿತ್ರಗಳು, ಚಿತ್ರಕಲೆಗಳನ್ನು ಪ್ರದರ್ಶಿಸಲಾಯಿತು. ಈ ಜಾಥವು ಕರ್ನಾಟಕಕ್ಕೆ ಸೀಮಿತಾವಾಗದೆ, ದೆಹಲಿ, ಕಲ್ಕತ್ತ, ಚೆನ್ನೈ, ವಿಜಯವಾಡ, ಭೂಪಾಲ್, ಹರಿಯಾಣ ಹಾಗೂ ತಿರುವನಂತಪುರಗಳಲ್ಲಿ ಪ್ರದರ್ಶಿಸಿದ ಭಾರತದ ಮೊದಲ ವರ್ಣ ತೈಲ ಚಿತ್ರಕಲೆ ಜಾಥ ಎನ್ನಬಹುದಾಗಿದೆ. ಈ ಜಾಥಾದಲ್ಲಿ ಬಿ.ಕೆ.ಚಂದ್ರಶೇಖರ್ ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಿ.ಪಿ.ಐ.ಎಂ ಮುಖಂಡರು, ಸಿ.ಐ.ಟಿಯು ಕಾರ್ಮಿಕ ಸಂಘಟನೆಯ ಮುಖಂಡರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿ.ಪಿ.ಎಂ ಶಾಸಕರಾದ ಎಸ್.ಸೂರ್ಯ ನಾರಾಯಣರಾವ್ ಮುಂತಾದವರು ಶುಭ ಕೋರಿ ಮಾತನಾಡಿದರು. ಈಗಾಗಲೇ ೧೯೭೭ರಲ್ಲಿ ಹೊಸ ಮೌಲ್ಯಗಳತ್ತ ಸಮುದಾಯ ಜಾಥಾವು ಕರ್ನಾಟಕದಾದ್ಯಂತ ಸುದ್ದಿಯಾಗಿ ದೆಹಲಿ, ಚೆನ್ನೈ, ಕಲ್ಕತ್ತ, ಉತ್ತರ ಪ್ರದೇಶ ಮುಂತಾದ ನಗರಗಳಲ್ಲಿ ಬೆಲ್ಚಿ ನಾಟಕ ೧೬೦೦ ಕ್ಕೂ ಹೆಚ್ಚು ಪ್ರದರ್ಶನ ಕಂಡು ಭಾರತದಾದ್ಯಂತ ರಂಗ ಚಳವಳಿಗೆ ಸ್ಪೂರ್ತಿಯನ್ನು ನೀಡಿತು. ಅದರ ಕೆಲವು ವರ್ಷಗಳಲ್ಲಿ ಅಂದರೆ 'ಸಮುದಾಯ' ಹುಟ್ಟಿ ದಶಕಕ್ಕೆ ಐತಿಹಾಸಿಕ 'ವಿಶ್ವಶಾಂತಿ'ಗಾಗಿ ಬಣ್ಣದ ನಡೆ ಅಣು ಸಮರಕ್ಕೆ ಜನತೆಯ ತಡೆ. ಎಂಬ ಘೋಷಣೆಯೊಂದಿಗೆ ಭಾರತದಾದ್ಯಂತ ಪ್ರಮುಖವಾಗಿ ೧೨೦xಳಗಳ ತೈಲ ವರ್ಣ ಚಿತ್ರದ

ಜಾಥಾವನ್ನು ಕೈಗೊಂಡಿದ್ದು 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿಯನ್ನು ಇನ್ನುಷ್ಟು ಗಟ್ಟಿಗೊಳಿಸಿತು ಎಂದರೆ ತಪ್ಪಾಗಲಾರದು.

೫.೧೦. ಕನ್ನಡ ಸಾಹಿತ್ಯ ಹಾಗೂ 'ಸಮುದಾಯ'

ಕನ್ನಡ ಸಾಹಿತ್ಯದ ೧೫೦೦ ವರ್ಷಗಳ ಚರಿತ್ರೆಯನ್ನು ಹೊಂದಿದ್ದು ಅದರಲ್ಲಿ ಮೂರು ಭಾಗಗಳಾಗಿ ಕನ್ನಡ ಸಾಹಿತ್ಯವನ್ನು ವಿಭಾಗಿಸಿಕೊಳ್ಳಲಾಗಿದೆ.

೧. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ

೨. ಮಧ್ಯಯುಗದ ಕನ್ನಡ ಸಾಹಿತ್ಯ ಚರಿತ್ರೆ

೩. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಹೀಗೆ ಮೂರು ವಿಭಾಗಗಳನ್ನು ಕನ್ನಡ ಸಾಹಿತ್ಯ ಚರಿತ್ರೆ ಭಾಷೆಯ ಬೆಳವಣಿಗೆ ನಿರಂತರವಾಗಿ ಬದಲಾಗುತ್ತಾ ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆ ಹೊಸ ಹಿನ್ನೋಟವನ್ನು ನೀಡಿ ಕವಿರಾಜಮಾರ್ಗ ಕೃತಿಯ ಸಾಹಿತ್ಯ ಹಾಗೂ ಚರಿತ್ರೆಯು ಒಂದಕ್ಕೊಂದು ಪೂರಕ ಅಂಶಗಳ ಗುಣಲಕ್ಷಣಗಳನ್ನು ಹೊಂದಿವೆ ಎಂದು ತಿಳಿಸಲಾಗಿದೆ. ಕನ್ನಡ ನಾಟಕ ಚರಿತ್ರೆಯು ಪ್ರಾಚೀನ ಕಾಲದಿಂದ ಬೇಟೆಗಾರಿಕೆ ನಂತರ ಗುಹೆಗಳಲ್ಲಿ ಮನರಂಜನೆ ಕಾರ್ಯಕ್ರಮಗಳ ನಡೆಸುತ್ತಿದ್ದ ಕಥೆಗಳನ್ನು ಹೇಳುವುದೇ ನಾಟಕ ಮೂಲ ಪರಿಭಾಷೆಯಾಗಿತ್ತು. ನಂತರ ಜಾನಪದ ಕಲಾ ಪ್ರಕರಗಳ ಮೂಲಕ ನಾಟಕಗಳ ಪ್ರದರ್ಶನಗಳು, ಹಬ್ಬಗಳ, ಭಾಷೆಗಳ ಮೂಲಕ ನಾಟಕಗಳ ಪ್ರದರ್ಶನಗಳ ಪ್ರಾರಂಭವಾದವು. ನಂತರ ರಾಜರ ಆಸ್ಥಾನದಲ್ಲಿ ಮುಂದೆ ನೃತ್ಯ, ನಾಟಕಗಳ ಪ್ರದರ್ಶನಗಳು ನಡೆಯುತ್ತಿದ್ದವು. ನಂತರ ಆಧುನಿಕ ಕನ್ನಡ ನಾಟಕ ಚರಿತ್ರೆ ಪ್ರಾರಂಭವಾಯಿತು. ವಸಾಹತುಶಾಹಿ ಬ್ರಿಟಿಷರ ಆಳ್ವಿಕೆ ಸಂದರ್ಭದಲ್ಲಿ ಹೀಗೆ ಬ್ರಿಟಿಷರ ವಿರುದ್ಧ ಭಾರತ ಹಾಗೂ ಕರ್ನಾಟಕದ ಸಂಪ್ರಾದಾಯಿಕ ವೃತ್ತಿರಂಗ ಕಂಪನಿಗಳು ಪ್ರಾರಂಭವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯು ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಕನ್ನಡ ಸಾಹಿತ್ಯ ಘಟಕಗಳಲ್ಲಿ ಹಾಗೇ ನಾಟಕಗಳಲ್ಲಿಯೂ ಕೂಡ ವೃತ್ತಿರಂಗಭೂಮಿ ಜನಪದ ರಂಗಭೂಮಿ, ಹವ್ಯಾಸಿ ರಂಗಭೂಮಿ, ಬಯಲಾಟ ರಂಗಭೂಮಿ, ಕೇಳಿಕೆಗಳು, ಹರಿಕಥೆಗಳು, ಪಂಡರಿಬಾಯಿ ಭಜನೆಗಳು ಹಾಗೂ ಎಪ್ಪತ್ತರ ದಶಕದಲ್ಲಿ ಪ್ರಾರಂಭವಾದ ಹೊಸ ಅಲೆಯ ಸಾಹಿತ್ಯ ಪ್ರಕಾರದ ನಾಟಕಗಳು ಪ್ರಾರಂಭವಾದವು. ಅದರಲ್ಲೂ ಬೀದಿ ರಂಗಭೂಮಿ ಹೆಚ್ಚು ಪ್ರಚಲಿತಕ್ಕೆ ಬಂದಿತು. ೧೯೧೭ರ ರಷ್ಯಾ ಕ್ರಾಂತಿಯ ಮೇಲೆ ಬೀದಿ ರಂಗಭೂಮಿ ಪ್ರಭಾವವನ್ನು ಕಾಣಬಹುದು. ನಂತರ ೧೯೫೧ರಿಂದ ೧೯೮೬ರವರಿಗೆ ಭಾರತದ ತೆಲಂಗಾಣ ಸಶಸ್ತ್ರ ಹೋರಾಟ ಹಾಗೂ ಸ್ವಾತಂತ್ರ್ಯ ಚಳವಳಿಯ 'ಇಪ್ಟಾ'ದ ಸಾಂಸ್ಕೃತಿಕ ಸಂಘಟನೆ ರಂಗ ಚಳವಳಿಯ ಭಾಗವಾಗಿ ಏಕೀಕರಣ ಹುಟ್ಟಿಕೊಂಡಂಥ ಗದಗ ಜಿಲ್ಲೆ ಶಾಂತಕವಿಗಳ ಸೃಷ್ಟಿ ಮಾಡಿದ ನಾಟಕಗಳು ಕನ್ನಡಭಿಮಾನದ ಮೂಲಕ ಭಾಷಾ ಏಕೀಕರಣಕ್ಕೆ ನಾಂದಿ ಹಾಡಿತು.

ಸ್ವಾತಂತ್ರ್ಯ ಚಳವಳಿ ಹಾಗೂ ಏಕೀಕರಣದ ಆಶಯವಾದ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಕನಸು ನನಸಾಗದೆ, ಉಳ್ಳವರು ನಿರಂತರವಾಗಿ ಇಲ್ಲದವರ ಮೇಲೆ ಶೋಷಣೆ, ದಬ್ಬಾಳಿಕೆ, ಅಸ್ಪೃಶ್ಯತೆ, ಜೀತ ಪದ್ಧತಿ, ದೇವದಾಸಿ ಪದ್ದತಿ, ಬಾಲ್ಯ ವಿವಾಹ, ಕೋಮುವಾದ, ಭಯೋತ್ಪಾದನೆ ಕಡಿಮೆಯಾಗುವ ಬದಲು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋದ ಕಾರಣದಿಂದ ಎಪ್ಪತ್ತರ ದಶಕದಲ್ಲಿ ರೈತ, ಕೃಷಿ ಕೂಲಿಕಾರ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆಯರ ಪರವಾದ ಸಂಘಟನೆಗಳು ಹುಟ್ಟಿಕೊಂಡವು. ಅದೇ ಸಮಯದಲ್ಲಿ 'ಜಾತಿ ವಿನಾಶ ವೇದಿಕೆ ೧೯೬೮ರಲ್ಲಿ 'ನವ ಯುವಜನ ಸಭಾ', ೧೯೭೫ ರಲ್ಲಿ 'ಸಮುದಾಯ', ೧೯೭೭ ರಲ್ಲಿ 'ದಲಿತ ಸಂಘರ್ಷ ಸಮಿತಿ', ೧೯೭೯ 'ಬಂಡಾಯ ಸಾಹಿತ್ಯ ಸಂಘಟನೆ' ಪ್ರಾರಂಭವಾದವು. ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಬಲಿಷ್ಠಗೊಂಡವು. ಇದರ ಅಂಗವಾಗಿ ಹುಟ್ಟಿಕೊಂಡ 'ಸಮುದಾಯ' ಕಮ್ಯುನಿಸ್ಟ್ ಸಾಹಿತ್ಯ ಹುಟ್ಟಿಹಾಕಿದರೆ.೫೦ 'ಸಮಾಜವಾದಿ ಯುವಜನ ಸಭಾ', 'ಲೋಹಿಯಾ ಸಮಾಜವಾದಿ ಸಾಹಿತ್ಯ' ಹುಟ್ಟುಹಾಕಿತು. ದಲಿತ ಸಂಘರ್ಷ ಸಮಿತಿಯು ಅಂಬೇಡ್ಕರ್‌ವಾದಿ ಸಾಹಿತ್ಯ ಹುಟ್ಟುಹಾಕಿತು. ಜೊತೆಗೆ ಬಂಡಾಯ ಸಾಹಿತ್ಯ ಸಂಘಟನೆ ಈ ಮೇಲಿನ ಎಲ್ಲರನ್ನು ಒಂದುಗೂಡಿಸಿ 'ಬಂಡಾಯ' ಪ್ರತಿಭಟನಾ ಸಾಹಿತ್ಯವನ್ನು ಹುಟ್ಟುಹಾಕಿತು. ಹೀಗೆ ಈ ಎಲ್ಲಾ ಎಡ-ಪ್ರಜಾಪ್ರಭುತ್ವವು ಸಮಾಜವಾದಿ, ಮಾನವತಾವಾದಿ, ದಲಿತ ನಾಯಕರಾದ, ಬಿ.ಕೃಷ್ಣಪ್ಪರನ್ನು ಒಳಗೊಂಡಂತೆ 'ಸಮುದಾಯ' ತೆಕ್ಕಗೆ ತೆಗೆದುಕೊಂಡು ಕ್ರಾಂತಿಯ ವಿಚಾರಗಳನ್ನು ಈ ಎಲ್ಲಾ ಸಂಘಟನೆಗಳ ಮುಖಂಡರಲ್ಲಿ ಮೂಡಿಸಿದ್ದು 'ಸಮುದಾಯ' ಸಂಘಟನೆಗಳಿಗೆ ಸಲ್ಲುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ದೇಶಿಯ ಬಂಡಾವಾಳಶಾಹಿಗಳ ಜೊತೆಯಲ್ಲಿ ಅಧಿಕಾರ ಹಂಚಿಕೊಂಡಂಥ ಕಾಂಗ್ರೆಸ್ ಸರ್ಕಾರವನ್ನು ಮೊದಲ ಬಾರಿಗೆ ತುರ್ತುಪರಿಸ್ಥಿತಿಯಲ್ಲಿ ಅಧಿಕಾರದಿಂದ ಕೆಳಗಿಸಿದ್ದು ಜಯಪ್ರಕಾಶ ನಾರಾಯಣರ ಸಂಪೂರ್ಣಕ್ರಾಂತಿ ಮೂಲಕವೆಂದು ರಾಜಕೀಯ ಚರಿತ್ರೆಯನ್ನು ತಪ್ಪಾಗಿ ಅರ್ಥೈಯಿಸುತ್ತಾರೆ. ಕಾಂಗ್ರೆಸ್‌ನ ನೇರ ವಿರೋಧ ಪಕ್ಷವಾಗಿದ್ದರಿಂದ ಕಮ್ಯುನಿಸ್ಟ್ ಪಕ್ಷಗಳ ಮುಖಂಡರನ್ನು ಕೊಲೆ ಮಾಡಿ, ಜೈಲುಗಳಿಗೆ ಹಾಕಿದ್ದನ್ನು ನೋಡಬಹುದು. ಇದಕ್ಕೆ ಕೇರಳ ರಾಜನ್ ಪ್ರಕರಣ ಒಂದು ಉದಾಹರಣೆಯಾಗಿದೆ. ಇದರ ಭಾಗವಾಗಿ ಹುಟ್ಟಿಕೊಂಡಂಥ ಕನ್ನಡ ಸಾಹಿತ್ಯ ಹೊಸ ದಿಕ್ಕನ್ನು ಉಂಟುಮಾಡಿತು.

೧೯೭೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಿವಾದವು ಬಂಡಾಯ ಸಾಹಿತ್ಯ ಸಂಘಟನೆಯನ್ನು ಉಗಮ ಮಾಡುವ ಸ್ಥಿತಿಗೆ ಬಂದಿದ್ದು ಕನ್ನಡ ಸಾಹಿತ್ಯಕ್ಕೆ ಹೊಸ ಜನಮುಖಿಯಾದ ಸಾಹಿತ್ಯ-ನಾಟಕ-ಕ್ರಾಂತಿಗಳು, ಕಾವ್ಯ, ಕಥೆ, ಕಾದಂಬರಿಗಳು, ಜೀವನ ಕಥೆಗಳು ಹಾಗೂ ಅನುವಾದಗಳಿಂದ ಕನ್ನಡ ಸಾಹಿತ್ಯ ಚರಿತ್ರೆ ಇನ್ನುಷ್ಟು ಪ್ರಚಾರ ಹಾಗೂ ಆವಿಷ್ಕಾರ ಉಂಟಾಗಿದ್ದು ಕನ್ನಡ ಸಾಹಿತ್ಯ ಚರಿತ್ರೆ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡಂಥ ಸಂಘಟನೆಗಳಿಂದ ಬಹುತೇಕ ಎಡ-ಪ್ರಜಾಸತಾತ್ಮಕ ವಿದ್ಯಾರ್ಥಿ, ಯುವಜನ, ಮಹಿಳೆ, ರೈತ, ಕಾರ್ಮಿಕ ಸಂಘಟನೆಗಳ ಸಾಹಿತ್ಯ ಆಸಕ್ತಿ ಉಳ್ಳವರು ನಟನೆ ಕ್ರಾಂತಿಗಳ ರಚನೆ, ನಿರ್ದೇಶನ ರಂಗನೇಪಥ್ಯ ಹಾಗೂ ಸಂಗೀತ ಮುಂತಾದವರುಗಳಲ್ಲಿ

ತಮ್ಮದೇ ಆದ ಪ್ರತಿಭೆಗಳ ಮೂಲಕ ಹೊಸ ಜನಮುಖಿ ಸಾಹಿತ್ಯವನ್ನು ನೈಜ ಅನುಭವಗಳನ್ನು ಹೊಂದಿರುವಂಥ ಪಿ.ಲಂಕೇಶ, ಕೆ.ವಿ.ಸುಬ್ಬಣ್ಣ, ಕೆ.ರಾಮಯ್ಯ, ಬಿ.ವಿ.ಕಾರಂತ, ಗಿರೀಶ್ ಕಾರ್ನಾಡ್, ದೇವನೂರು ಮಹಾದೇವ, ಯು.ಆರ್. ಅನಂತಮೂರ್ತಿ, ಶೂದ್ರ ಶ್ರೀನಿವಾಸ್, ಸಿ.ಜಿ.ಕೃಷ್ಣ ಸ್ವಾಮಿ, ಡಿ.ಆರ್.ನಾಗರಾಜ್, ಸಿದ್ಧಲಿಂಗಯ್ಯ, ಎಸ್.ಎಸ್.ಹಿರೇಮಠ, ಆರ್.ಕೆ.ಹುಡುಗಿ ಹಾಗೂ ಲಿಂಗದೇವರು ಹಳೆಮನೆ, ರಂಗಾರೆಡ್ಡಿ ಕೋಡಿರಾಂಪುರ, ಬರಗೂರು ರಾಮಚಂದ್ರಪ್ಪ, ಲಕ್ಷ್ಮೀಪತಿ ಕೋಲಾರ, ಸಿ.ಬಸವಲಿಂಗಯ್ಯ, ಜನಾರ್ದನ (ಜನ್ನಿ), ಎಸ್.ಮಾಲತಿ, ಲಕ್ಷ್ಮೀ ಚಂದ್ರಶೇಖರ, ವಸುಂದರಾ ಬಾರಿಘಾಟ್, ಕೆ.ಷರೀಫಾ, ಸಿ.ವೀರಣ್ಣ, ಪೂರ್ಣಿಮಾ.ಆರ್, ಜಿ.ಎನ್.ಮೋಹನ್, ಬಿ.ಸುರೇಶ್, ಪ್ರಸನ್ನ, ಮೀನಾಕ್ಷಿ ಬಾಳಿ, ಕೆ.ನೀಲಾ, ಕೆ.ಎಸ್.ವಿಮಲಾ ಮುಂತಾದವರು ಹೊಸ ಸಾಹಿತ್ಯ ಸಂಸ್ಥೆಗೆ ಸಹಕಾರವನ್ನು ಹೊಂದಿದ್ದರು. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಗೆ 'ಸಮುದಾಯ' ಸಂಘಟನೆಯು ಅದರಲ್ಲೂ ದಲಿತ–ಬಂಡಾಯ–ಸಾಹಿತ್ಯ ಬೆಳವಣಿಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಪ್ರೇರಣೆ ಮತ್ತು ಪ್ರಭಾವವನ್ನು ಬೀರಿದೆ. ಕನ್ನಡ ಆಧುನಿಕ ಸಾಹಿತ್ಯ ಚರಿತ್ರೆಯು ಬಹುಮುಖ್ಯವಾಗಿ ಬೇರೆ–ಬೇರೆ ರೀತಿಯ ತಳಸ್ಪರ್ಶಿಯವಾಗಿ ಅಧ್ಯಯಗಳನ್ನು ಕೈಗೊಂಡಿದ್ದು ಅಲಕ್ಷ್ಯಕ್ಕೆ ಒಳಗಾದ– ವ್ಯಕ್ತಿ, ಸಂಸ್ಥೆ ಅಥವಾ ಸಾಹಿತ್ಯ ಹಾಗೂ ಚರಿತ್ರೆ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರುವುದು ನೋಡಬಹುದು. ಸ್ಲಂ ಹುಡುಗರನ್ನು ನಾಟಕದಲ್ಲಿ ಸೇರಿಸಿಕೊಂಡ ಅವರನ್ನು ರಾಷ್ಟ್ರೀಯ ಮಟ್ಟದಲ್ಲಿ ಕವಿ–ಸಾಹಿತಿ ಹಾಗೂ ಹೋರಾಟವನ್ನು ರೂಪಿಸಿದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆ ಸೌಲಭ್ಯವನ್ನು ಪಡೆದವರು ಯಾವಾಗಲೂ 'ಸಮುದಾಯ' ಸಂಘಟನೆಯ ಮರೆತರೇ ರಂಗ ಚಳವಳಿಯ ಸಾಹಿತ್ಯ ಚರಿತ್ರೆ ಮರೆತಂತೆ!

ಟಿಪ್ಪಣಿಗಳು

೧. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು,** ಪುಟ–೮೦.

೨. ಅದೇ., ಪುಟ–೮೨.

೩. ಅದೇ., ಪುಟ–೮೩

೪. ಶ್ರೀನಿವಾಸರಾಜು, ೨೦೧೩, **ಡಾ.ರಾಜಕುಮಾರ್ ಅವರ ಚಿಂತನೆ ಹಾಗೂ ಕನ್ನಡ ಅಸ್ಮಿತೆಯ ಹಾಡುಗಳು,** ಪುಟ–

೫. ಹಣಮಂತ್ರಾಯ ದೊಡಮನಿ, ೨೦೧೧, **ದೇವರಾಜ ಅರಸು ಮತ್ತು ಕರ್ನಾಟಕ ರಾಜಕಾರಣ,** ಪುಟ–೬೬.

೬. ಭಟ್.ಸಿ.ಆರ್ ಹಾಗೂ ಸಿ.ಕೆ.ಗುಂಡಣ್ಣ (ಸಂ), ೨೦೦೦, **'ಸಮುದಾಯ ೨೫' ಜನ ಸಾಂಸ್ಕೃತಿ ಜಾಥಾ ಉತ್ಸವಗಳು,** ಪುಟ–೫೬.

೭. ಕೃಷ್ಣ ಸ್ವಾಮಿ.ಸಿ.ಜಿ, ೨೦೦೨, **ಕತ್ತಲೆ ಬೆಳದಿಂಗಳೊಳಗ,** ಪುಟ–೨೪೭.

೮. ನಾಗೇಶ್ ಭಟ್ಟಕೋಟೆ, ೨೦೦೫, **ಬೀದಿ ರಂಗಭೂಮಿ,** ಪುಟ–೨೦೭.

೯. ಕೃಷ್ಣಸ್ವಾಮಿ.ಸಿ.ಜಿ, ೨೦೦೨, **ಕತ್ತಲೆ ಬೆಳದಿಂಗಳೊಗಳ,** ಪುಟ–೨೮೧.

೧೦. ಕೃಷ್ಣಸ್ವಾಮಿ.ಸಿ.ಜಿ, ೨೦೦೨, **ಕತ್ತಲೆ ಬೆಳದಿಂಗಳೊಳಗ,** ಪುಟ–೨೪೧.

೧೧. ಶೇಷಗಿರಿರಾವ್.ಹೆಚ್, ೨೦೧೪, **ಮನುಷ್ಯನ ಹುಡುಕಾಟದಲ್ಲಿ ಎಸ್.ಎಸ್.ಹಿರೇಮಠ (ಸಂಸ್ಮರಣ ಗ್ರಂಥ).** ಪುಟ–೩೫.

೧೨. ಭಟ್.ಸಿ.ಆರ್ ಹಾಗೂ ಸಿ.ಕೆ.ಗುಂಡಣ್ಣ(ಸಂ), ೨೦೦೦, **'ಸಮುದಾಯ ೨೫' ಜನ ಸಾಂಸ್ಕೃತಿ ಜಾಥಾ ಉತ್ಸವಗಳು,** ಪುಟ–೬೮.

೧೩. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು,** ಪುಟ–೯೧.

೧೪. ಸಾಯಿನಾಥ್.ಪಿ(ಮೂಲ), ಜಿ.ಎನ್.ಮೋಹಾನ್(ಅನು),೨೦೧೨, **ಬರ ಅಂದ್ರೆ ಎಲ್ಲರಿಗೂ ಇಷ್ಟ(ಭಾರತದ ಕಡು ಬಡ ಜಿಲ್ಲೆಗಳ ಕಥನ),** ಪುಟ–೩೪.

೧೫. ನಾಗಮೋತಿ.ಬಿ.ಡಿ, ೨೦೦೨, **ರಾಯಚೂರು ಸಮುದಾಯ, ಬೆಳ್ಳಿ ಹಬ್ಬ–೨೦೦೨,** ಜನ ಸಂಸ್ಕೃತಿ ಉತ್ಸವ–ಕಲೆ ಬದುಕಿಗಾಗಿ, ಪುಟ–೨೫.

೧೬. ರವಿಕುಮಾರ್ ಬಾಗಿ, ೨೦೧೬, **ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು,** ಪುಟ–೯೨.

೧೭. ಶೇಷಗಿರಿರಾವ್.ಹೆಚ್, ೨೦೧೪, **ಮನುಷ್ಯನ ಹುಡುಕಾಟದಲ್ಲಿ ಎಸ್.ಎಸ್.ಹಿರೇಮಠ(ಸಂಸ್ಮರಣ ಗ್ರಂಥ).** ಪುಟ–೪೫.

೧೮. ಉತ್ತಮ ಕಾಂಬಳೆ (ಮೂಲ), ಸಿದ್ರಾಮ ಕಾರಣಿಕ(ಅನು), ೨೦೧೩, **ದೇವದಾಸಿ ಮತ್ತು ಬೆತ್ತಲೆ ಸೇವೆ,** ಪುಟ–೮೩.

೧೯. ಕರಪತ್ರಗಳ ಸಂಗ್ರಹ, **ಸಮುದಾಯ ನಡೆದ ಹಾದಿಯ ಆಸ್ಫೋಟ, ಸಮುದಾಯ ಕುಂದಪುರ** ಪುಟ–೬.

೨೦. ಹುಬ್ಬಳ್ಳಿ–ಧಾರವಾಡ ಘಟಕ, ೨೦೦೪, **ಅಮರ ಕಲಾವಿದ ಸಫ್ದರ್ ಹಶ್ಮಿ ಸ್ಮರಣಾರ್ಥ ಶಾಂತಿ ಹಾಗೂ ಸೌಹಾರ್ದತೆಗಾಗಿ,** ಪುಟ–೧೩.

೨೧. ಕಾರಂತ.ಜಿ.ವಿ(ಪ್ರ.ಸಂ).೨೦೧೧, **ರಂಗ (ಸಮುದಾಯ ಕುಂದಾಪು–ನೆನಪಿನ ಸಂಚಿಕೆ),** ಪುಟ–೩೯.

೨೨. ಫಣಿರಾಜ್.ಕೆ, ೨೦೦೧, **ಭಯೋತ್ಪಾದನೆ ಹಾಗೂ ಕೋಮುವಾದ ಒಂದು ಇಣುಕು ನೋಟ, (ಸಮುದಾಯ-೨೫)**, ಪುಟ-೮.

೨೩. ಅದೇ., ಪುಟ-೧೦.

೨೪. 'ಸಮುದಾಯ' ರಾಜ್ಯ ಸಮಿತಿ, ೨೦೦೯, **ಹಸಿದ ಹೊಟ್ಟೆಯ ಮೇಲೆ ಲಾಭದ ಕೇಕೆ,** ಪುಟ-೧೧.

೨೫. ಅದೇ., ಪುಟ-೨೦.

೨೬. ರಾಮಚಂದ್ರ ದೇವ (ಸಂ), ೧೯೮೩(ಮಾರ್ಚ್), **ಸಮುದಾಯ ವಾರ್ತಾಪತ್ರ,** ಪುಟ-೬

೨೭. ನಾಗೇಶ್ ಬೆಟ್ಟಕೋಟೆ, ೨೦೦೫, **ಬೀದಿ ರಂಗಭೂಮಿ,** ಪುಟ-೧೫೨.

೨೮. ಅದೇ., ಪುಟ-೧೫೦

೨೯. ಅದೇ., ಪುಟ-೧೫೧.

೩೦. ಕಾರಂತ.ಜಿ.ವಿ (ಪ್ರ.ಸಂ),೨೦೧೧, **ರಂಗಮನ,** ಪುಟ-೩೯.

೩೧. ನಾಗೇಶ್ ಬೆಟ್ಟಕೋಟೆ, ೨೦೦೫, **ಬೀದಿ ರಂಗಭೂಮಿ,** ಪುಟ-೧೦೯.

೩೨. ಅದೇ., ಪುಟ-೧೧೨.

೩೩. ವೀರಣ್ಣ.ಸಿ, ೧೯೮೩, **ಸಾಹಿತ್ಯ ಮತ್ತು ಸಮುದಾಯ,** ಪುಟ-೪೩.

೩೪. ಅದೇ., ಪುಟ-೪೯

ಅಧ್ಯಾಯ : ಆರು

ರಾಜ್ಯ–ರಾಷ್ಟ್ರ ರಾಜಕಾರಣ : 'ಸಮುದಾಯ'ದ ಸಾಂಸ್ಕೃತಿಕತೆ ಹಾಗೂ ಸೈದ್ಧಾಂತಿಕ ನೆಲೆಗಳು

ಅಧ್ಯಾಯ: ಆರು

ರಾಜ್ಯ–ರಾಷ್ಟ್ರ ರಾಜಕಾರಣ : 'ಸಮುದಾಯ'ದ ಸಾಂಸ್ಕೃತಿಕತೆ ಹಾಗೂ ಸೈದ್ಧಾಂತಿಕ ನೆಲೆಗಳು

೬.೧. ಕರ್ನಾಟಕ ರಂಗಭೂಮಿಯ ತಾತ್ವಿಕ ನೆಲೆಗಟ್ಟುಗಳ ಹಿನ್ನೆಲೆ

ಆಧುನಿಕ ಕನ್ನಡ ರಂಗಭೂಮಿಯನ್ನು ಚಾರಿತ್ರಿಕವಾಗಿ ಜನಪದ ರಂಗಭೂಮಿ, ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಟಿಪ್ಪುಸುಲ್ತಾನನ ಕಾಲದಿಂದ ಮೈಸೂರು ಅರಸರ ಕಾಲದವರೆಗೂ ವೃತ್ತಿರಂಗಭೂಮಿಯು ಜನಪದ ರಂಗಭೂಮಿಯ ಜೊತೆ–ಜೊತೆಯಲ್ಲಿಯೇ ಸಾಂಪ್ರದಾಯಿಕ ಹಿನ್ನೆಲೆಯ ರಂಗಭೂಮಿಯಂತೆ ಕೆಲಸ ಮಾಡಿದೆ. ಹಾಗೂ ಪೌರಾಣಿಕ ವಸ್ತುವನ್ನು ಇಟ್ಟುಕೊಂಡಿರುವ ನಾಟಕ ಮಂಡಳಿಗಳ ಮೂಲಕ ಪ್ರದರ್ಶನಗಳು ನಡೆಸುವ ಕಲೆಯಾಗಿತ್ತು. ಇದರ ಜೊತೆಗೆ ಜನಪದ ರಂಗ ಪ್ರಕಾರಗಳಾದ ಡಬ್ಬಿನಾಟ, ಬಯಲಾಟ, ಗೀಗೀಪದ, ಕೇಳಿಕೆ, ಹರಿಕಥೆ, ಭಜನೆಗಳು, ಯಕ್ಷಗಾನ, ಬುರ್ರಕಥೆಗಳು ಹೀಗೆ ಹಲವು ರಂಗಭೂಮಿಯ ಮೂಲ ಅಂಶಗಳನ್ನು ಒಳಗೊಂಡಿದ್ದವು. ಕನ್ನಡ ಲಾವಣಿಗಳು, ಜನಪದ ಕಾವ್ಯ ಹಾಗೂ ಬುಡಕಟ್ಟು ಮಹಾಕಾವ್ಯಗಳನ್ನು ವೃತ್ತಿ ರಂಗಭೂಮಿಯ ಕಲಾವಿದರಿಗೆ ವಂಶ ಪಾರಂಪರ್ಯವಾಗಿ ಕಲಾರೂಪಕಗಳನ್ನಾಗಿ ಕಲಿಸಿಕೊಡುವ ಗ್ರಾಮೀಣ ಕಲೆಗಳಾಗಿದ್ದವು.

ಕ್ರಿ.ಶ. ೧೬೦೦ರ ನಂತರ ಭಾರತದ ಆಡಳಿತದ ಜೊತೆಗೆ ಸ್ಥಳೀಯ ಕಲಾವಿದರ ಮೂಲಕ ಮನರಂಜನೆಯ ಕಾರ್ಯಕ್ರಮಗಳನ್ನು ದೇಶಿಯ ರಾಜರ ರಂಗಮಂಟಪಗಳ ರೀತಿಯಲ್ಲಿಯೇ ಬ್ರಿಟಿಷರು ಕೂಡ ಆರಂಭಿಸಿದರು. ವೃತ್ತಿ ರಂಗಭೂಮಿಯ ಮೂಲಕ ಹಲವಾರು ನಾಟಕಗಳ ಪ್ರದರ್ಶನಗಳಿಗೆ ರಾಜರುಗಳ ಆರ್ಥಿಕ ಸಹಾಯದಂತೆ, ಬ್ರಿಟಿಷರಲ್ಲಿಯು ನಾಟಕದ ಪ್ರದರ್ಶನ ಅಂಗವಾಗಿ ಸಹಾಯವನ್ನು ಪಡೆಯುತ್ತಿದ್ದರು. ಕನ್ನಡ ವೃತ್ತಿರಂಗಭೂಮಿ ನಾಟಕಗಳು ಪ್ರಾರಂಭವಾಗಲು ಅದರಲ್ಲೂ ಹೆಚ್ಚೆಚ್ಚು ರಂಗಕಂಪನಿಗಳು ಸ್ಥಾಪನೆಯಾಗಲು ಮರಾಠಿ ವೃತ್ತಿರಂಗಭೂಮಿ ಹಾಗೂ ಆಂಧ್ರಪ್ರದೇಶದ ವೃತ್ತಿರಂಗಭೂಮಿಯ ಕಂಪನಿಗಳೇ ಕಾರಣವಾದವು. ಏಕೆಂದರೆ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರ ದಬ್ಬಾಳಿಕೆಯನ್ನು ತೀವ್ರವಾಗಿ ವಿರೋಧಿಸಿ ಮುಂಬೈ ಪ್ರಾಂತ್ಯದಲ್ಲಿ ಕೆಲವು ರಂಗಕಂಪನಿಗಳು

ಹುಟ್ಟಿಕೊಂಡಿದ್ದವು. ಈ ನಾಟಕ ಕಂಪನಿಗಳು ಮುಂಬೈ ಕರ್ನಾಟಕದ ಬಹುತೇಕ ನಗರಗಳಲ್ಲಿ ವೃತ್ತಿರಂಗಭೂಮಿಯಾಗಿ ಸ್ಥಳಾವಕಾಶವನ್ನು ಗಿಟ್ಟಿಸಿಕೊಂಡವು. ಇದನ್ನು ಅರಿತ ಕನ್ನಡದ ಸಾಹಿತ್ಯ ವರ್ಗವು ಕನ್ನಡ ವೃತ್ತಿರಂಗಭೂಮಿ ಕಂಪನಿಗಳನ್ನು ಹುಟ್ಟು ಹಾಕಲು ಪ್ರೇರಣೆ ನೀಡಿತು. ಹೀಗೆ ಕನ್ನಡ ವೃತ್ತಿ ನಾಟಕಗಳನ್ನು ಮೊದಲ ಬಾರಿಗೆ ದೇಶಿ ಹಿನ್ನೆಲೆಯಲ್ಲಿ ಅಂದರೆ ಸ್ಥಳೀಯ ಕನ್ನಡರಿಗೆ ಅರ್ಥ ಆಗುವ ರೀತಿಯಲ್ಲಿ ೧೮೭೮ರ ಸುಮಾರಿಗೆ ಸಕ್ರಿ ಬಾಳಚಾರ್ಯರು(ಶಾಂತಕವಿ) ನಾಟಕಗಳನ್ನು ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣ ಚಳವಳಿಗಳಿಗೆ ಪೂರಕವಾಗಿ ಪ್ರೇರಣೆ ನೀಡುವಂಥ ರೀತಿಯಲ್ಲಿಯೂ ನಾಟಕಗಳನ್ನು ರಚಿಸತೊಡಗಿದರು.

ಕರ್ನಾಟಕದ ರಂಗಭೂಮಿಯ ತಾತ್ವಿಕ ನೆಲೆಗಳ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ಭಾರತದ ಹವ್ಯಾಸಿ ರಂಗಭೂಮಿಯೂ ಪ್ರೇರಣೆಯಾಗಿದೆ. ಕೃತಕವಾಗಿ ಭಾರತದಲ್ಲಿ ಪರಿಕಿಯರ ಶೋಷಣೆಯಿಂದ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡವು. ಸಾಮಾಜ ಹಾಗೂ ರಾಜಕಾರಣದ ಸಮಸ್ಯೆಗಳಿಂದ ಪ್ರಭಾವಿತವಾಗಿದ್ದ ಬುದ್ಧಿಜೀವಿಗಳ ಚಿಂತನೆಯು ಜಾಗತಿಕವಾಗಿ ಜನಪದ, ಹವ್ಯಾಸಿಗಳ ಮೂಲಕ ೧೯೩೭ರಲ್ಲಿ ನಾಟಕಗಳ ರಚನೆಗೆ ನಾಂದಿಯಾಯಿತು. ಭಾರತದಲ್ಲಿಯೂ ಹವ್ಯಾಸಿ ರಂಗಭೂಮಿಯ ಅರಿವು ಬಹಳ ವಿಶಾಲವಾದುದು. ಅದರಲ್ಲಿಯೂ ಉತ್ತರ ಕಾಶ್ಮೀರದಿಂದ ದಕ್ಷಿಣದ ತಮಿಳುನಾಡಿನವರೆಗೆ, ಪಶ್ಚಿಮದ ಗುಜರಾತ್‌ನಿಂದ ಪೂರ್ವದ ಕೊಲ್ಕತ್ತವರೆಗೆ ಹವ್ಯಾಸಿ ರಂಗಭೂಮಿ ತಂಡಗಳು ಕಾರ್ಯಪ್ರವೃತ್ತವಾಗಿವೆ.[೧] ಅವುಗಳೆಂದರೆ ಇಪ್ಟಾ, ಜನಮ್, ಮೂರನೆಯ ರಂಗಭೂಮಿ, ಗರಜ್ ಥಿಯೇಟರ್, ಗ್ರೂಪ್, ನಿಹಾರಿಕಾ, ನುಕ್ಕಡಾ ನಾಟಕ ಮಂಚ್, ದುಗ್ಗರ್ ಮಂಚ್, ಪ್ರಯೋಗ ಲೋಕ ಕಲಾಮಂಚ್, ಹಗರವಾಲ್ ನಾಟ್ಯ ಮಂಚ್, ಪೀಪಲ್ಸ್ ಥೀಯೇಟರ್ ಗ್ರೂಪ್, ಪ್ರಜಾ ನಾಟ್ಯ ಮಂಡಳಿ, ಜನ ನಾಟ್ಯ ಮಂಡಳಿ, ಕವ್ಯೆಕುಜಂ, ಕೇರಳ ಪುರೋಗಮನ ಕಲಾ ಸಾಹಿತ್ಯ ಸಂಗಮ, ಕೇರಳ ಪೀಪಲ್ಸ್ ಆರ್ಟ್ಸ್ ಕ್ಲಬ್, ಜಾಗಾರ್ ಮೊದಲಾದ ತಂಡಗಳು ಆಯಾ ರಾಜ್ಯಗಳಲ್ಲಿ ಸಂದರ್ಭಕ್ಕನುಸಾರವಾಗಿ ಸಕ್ರಿಯವಾಗಿ ಹವ್ಯಾಸಿ ರಂಗಭೂಮಿಯನ್ನು ಬೆಳೆಸಿದವು.

ಕನ್ನಡ ರಂಗಭೂಮಿಯ ಅದರಲ್ಲೂ ಜನಪದ ರಂಗಭೂಮಿಯ ಸಾಂಪ್ರದಾಯಿಕ ಮಾತೃಪ್ರಧಾನ ದೇವಿ ಆರಾಧನೆಯಿಂದ ಹಿಡಿದು ಪುರಾಣ ಕಥೆ, ಐತಿಹ್ಯ, ಲಾವಣಿಗಳನ್ನು ರಂಜಿತವಾಗಿ ಅಥವಾ ಅರಂಜಿತವಾಗಿ ಹಾಡು ಕುಣಿತಗಳಿಂದ ಜೀವನ ನಿರ್ವಹಣೆಗಾಗಿ ನಾಟಕಗಳ ರೂಪಗಳ ಪ್ರದರ್ಶಿಸಲಾಗುತ್ತಿತ್ತು. ೧೭ನೇ ಶತಮಾನದಿಂದಲೂ ವೃತ್ತರಂಗಭೂಮಿಯೂ ತಾತ್ವಿಕವಾಗಿ ಸಾಂಪ್ರದಾಯಿಕ ಶೈಲಿಯ ರಂಗಭೂಮಿಯೇ ಆಗಿದೆ. ೧೮ನೇ ಶತಮಾನದಲ್ಲಿ ಕೊನೆಯ ಭಾಗದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯ ಹಾಗೂ ಕನ್ನಡ ರಂಗಾಸಕ್ತ ಕಲಾವಿದವರ್ಗ ಬಿಡುವಿನ ವೇಳೆಯಲ್ಲಿ ರಂಗಭೂಮಿಗಾಗಿ ದುಡಿದರು. ಜೀವನೋಪಾಯಾಕ್ಕಾಗಿ ರಂಗಭೂಮಿಯನ್ನು ಆಶ್ರಯಿಸಲಿಲ್ಲ. ಬದಲಾಗಿ ತಮ್ಮ ತಾತ್ವಿಕ ಆಶೋತ್ತರಗಳನ್ನು ಬಿಂಬಿಸಲು (ಸ್ವಾತಂತ್ರ್ಯ) ಕಂಡು ಕೊಂಡ ಪ್ರಯತ್ನವೇ ರಂಗಭೂಮಿಯಾಗಿದೆ. ೧೯ನೇ ಶತಮಾನದ ಕೊನೆಯಲ್ಲಿ ಕನ್ನಡದಲ್ಲಿ ಹವ್ಯಾಸಿ ರಂಗಭೂಮಿಯು

ಕಣ್ತೆರೆಯಿತು. ಇಂತಹ ಹವ್ಯಾಸಿ ತಂಡಗಳಿಗೆ ತನ್ನದೆ ಆದ ಚರಿತ್ರೆ ಇದೆ. ಸ್ವಾತಂತ್ರ್ಯ ನಂತರ ೧೯೬೨ರಲ್ಲಿ ಹವ್ಯಾಸಿ ರಂಗಭೂಮಿಗೆ ಹೊಸ ವಿನ್ಯಾಸ ಹಾಗೂ ತಾತ್ವಿಕತೆಯನ್ನು ಪಡೆಯಲು ಹೀಗೆ 'ಗತಿಶೀಲಾ ಬರಹಗಾರರ ಬಳಗ'ವು ಅಂದರೆ ಅ.ನ.ಕೃಷ್ಣರಾಯರ ಶಿಷ್ಯ ಬಳಗವು ಹವ್ಯಾಸಿ ರಂಗಭೂಮಿಯನ್ನು ತಾತ್ವಿಕವಾಗಿ ಕಟ್ಟಿತು. ಸಾಮಾಜಿಕ ಹಾಗೂ ಚಾರಿತ್ರಿಕ ಅಂಶಗಳನ್ನೊಳಗೊಂಡ ನಾಟಕಗಳು ಹೆಚ್ಚು ಹೆಚ್ಚು ಬಂದವು. ಶ್ರೀರಂಗರು, ಟಿ.ಪಿ.ಕೈಲಾಸಂ, ಕುವೆಂಪು ಮತ್ತು ಶಿವರಾಮ ಕಾರಂತರ ನಾಟಕಗಳಿಗೆ ಹೆಚ್ಚು ಪ್ರೇರಣೆ ಬಂದಿದ್ದನ್ನು ಸಹ ಕಾಣುತ್ತೇವೆ. ಶ್ರೀರಂಗರ 'ಹರಿಜನ್ವಾರ' ನಾಟಕ, ಟಿ.ಪಿ.ಕೈಲಾಸಂ ಅವರ 'ಟೊಳ್ಳು-ಗಟ್ಟಿ' ನಾಟಕ, ಕುವೆಂಪು ಅವರ 'ಜಲಗಾರ' ಮತ್ತು ಶಿವರಾಮಕಾರಂತರ ನಾಟಕಗಳಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದನ್ನು ನೋಡುತ್ತೇವೆ. ಎಪ್ಪತ್ತರ ದಶಕದಲ್ಲಿ ಗಿರೀಶ್ ಕಾರ್ನಾಡ್, ಬಿ.ವಿ.ಕಾರಂತ, ಕೆ.ವಿ.ಸುಬ್ಬಣ್ಣ, ಪಿ.ಲಂಕೇಶ್, ಚಂದ್ರಶೇಖರ ಕಂಬಾರ, ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಎಸ್.ಮಾಲತಿ, ಬಿ.ಜಯಶ್ರೀ, ಚಂದ್ರಶೇಖರ ಪಾಟೀಲ, ಎ.ಎಸ್.ಮೂರ್ತಿ, ವಿಜಯಮ್ಮ, ಕೋಟಿಗಾನಹಳ್ಳಿ ರಾಮಯ್ಯ, ಸಿ.ಬಸವಲಿಂಗಯ್ಯ, ಬಿ.ವಿ.ವೈಕುಂಠರಾಜು, ಆರ್.ನಾಗೇಶ್ ಮುಂತಾದವರು ಎಪ್ಪತ್ತರ ದಶಕದ ಹವ್ಯಾಸಿ ರಂಗಭೂಮಿಗೆ ಒಂದು ರಾಜಕಾರಣದ ಆಯಾಮ ನೀಡಿ ಬೀದಿ-ರಂಗನಾಟಕಗಳಿಗೆ ಹೆಚ್ಚು ಪ್ರಾಸಸ್ತ್ಯ ಕೊಟ್ಟರು. ಬೀದಿ ನಾಟಕಗಳನ್ನು ಕರ್ನಾಟಕ ಮತ್ತು ಭಾರತದಲ್ಲಿ ಪ್ರತಿಭಟನಾ ಅಸ್ತ್ರಗಳನ್ನಾಗಿ ಬಳಸಲಾಯಿತು. ಹೀಗೆ ಕರ್ನಾಟಕ ಹವ್ಯಾಸಿ ರಂಗಭೂಮಿಯ ತಾತ್ವಿಕ ಚಿಂತನೆಗಳ ನೆಲೆಗಳು ರಾಷ್ಟ್ರೀಯವಾದ, ಎಡಪಂಥೀಯ, ಸಮಾಜವಾದಿ, ಪ್ರಜಾಪ್ರಭುತ್ವ ಸಿದ್ಧಾಂತಗಳ ನೆಲೆಗಳ ಮೇಲೆ ರೂಪುಗೊಂಡಿದ್ದನ್ನು ದಾಖಲಿಸಬಹುದು.

೬.೨. ಚರ್ಚೆ ಹಾಗೂ ವಿವಾದಕ್ಕೆ ಒಳಗಾದ 'ಸಮುದಾಯ'ದ ಪ್ರಮುಖ ನಾಟಕಗಳು

೧೯೭೫ರ ಹೊತ್ತಿಗೆ ಕರ್ನಾಟಕದಲ್ಲಿ ಪ್ರಾರಂಭವಾದ 'ಸಮುದಾಯ'ವು ಹವ್ಯಾಸಿ ರಂಗಭೂಮಿಯ ತಂಡಗಳಲ್ಲಿ ಬಹುಮುಖ್ಯವಾದ ಚಾರಿತ್ರಿಕ ನೆಲೆಘಟ್ಟನ್ನು ಹೊದಿರುವ ಸಂಘಟನೆಯಾಗಿದೆ. ಏಕೆಂದರೆ 'ಸಮುದಾಯ'ವು ಅಂದಿನಿಂದ-ಇಂದಿನವರಗೂ ಸುಮಾರು ೫೦೦ಕ್ಕೂ ಹೆಚ್ಚು ಬೀದಿ ಹಾಗೂ ರಂಗನಾಟಕಗಳನ್ನು ಪ್ರದರ್ಶಿಸಿದೆ. ಅಲ್ಲದೆ ಕರ್ನಾಟಕ ಹಾಗೂ ಭಾರತದಾದ್ಯಂತ ಜಾಥಾಗಳ ಮೂಲಕ ಹಾಗೂ ನಾಟಕೋತ್ಸವಗಳ ಮೂಲಕ ಸಾವಿರಾರು ಪ್ರದರ್ಶನಗಳನ್ನು ಕಂಡಿದ್ದನ್ನು ನೋಡುತ್ತೇವೆ. 'ಸಮುದಾಯ'ದ ನಾಟಕಗಳು ತನ್ನದೆ ಆದ ತಾತ್ವಿಕತೆಯ ಸೈದ್ಧಾಂತಿಕತೆಯನ್ನು ಹೊಂದಿ, ಇದೊಂದು ಎಡಪಂಥೀಯ ಚಿಂತನೆಯ ಸಾಂಸ್ಕೃತಿಕ ಸಂಘಟನೆಯೂ ಆಗಿದೆ. ಬೀದಿನಾಟಕಗಳ ಮೂಲಕ ಜನರ ಸಮಸ್ಯೆಗಳನ್ನು ರಂಗಚಳವಳಿಗೆ ಪೂರಕವಾಗಿ ಸಂಘಟಿಸುವ ಶಕ್ತಿ 'ಸಮುದಾಯ'ದ ಸಂಘಟನೆಗೆ ಇದೆ. ಹೀಗೆ 'ಸಮುದಾಯ'ವು ಜನ ಸಮುದಾಯದ ಅದರಲ್ಲೂ ಶೋಷಣೆಗೆ ಒಳಗಾದ ಅಸ್ಪೃಶ್ಯರಿಗೆ ಹಾಗೂ ಹಿಂದುಳಿದವರ್ಗದ ಬಡವರಿಗೆ ಬೆನ್ನೆಲುಬಾಗಿರುವ ತನ್ನ ಧೋರಣೆಯನ್ನು ಹೊಂದಿದೆ. ಹೀಗೆ ಸಮುದಾಯದ ನಾಟಕಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚರ್ಚೆಗೆ ಹಾಗೂ ಹೆಚ್ಚು ಪ್ರಚಾರಕ್ಕೆ ಒಳಗಾದ ನಾಟಕಗಳು ಎಂದು

ಹೇಳುತ್ತೇವೆ. ಇದಕ್ಕೆ ಕಾರಣ ನಿಜ ಘಟನೆಗಳನ್ನು (ಸಮಾಜದಲ್ಲಿ ನಡೆದ ಶೋಷಣೆಗೆ ಸಂಬಂಧಿಸಿದ) ಬಿತ್ತರಿಸುವುದು. ಇಂಗ್ಲಿಷ್, ಹಿಂದಿ, ಬೆಂಗಾಲಿ, ತಮಿಳು, ತೆಲುಗು ಮುಂತಾದ ಭಾಷೆಗಳಿಂದ ನಾಟಕಗಳನ್ನು ಅನುವಾದಿಸಿ ಅಥವಾ ರೂಪಾಂತರಿಸಿ ಜನ ಸಾಮಾನ್ಯರು ಮಾತಾನಾಡುವ ಭಾಷಾ ಶೈಲಿಯ ಮೂಲಕ ಪ್ರದರ್ಶಿಸಿದ್ದು ಗಮನಾರ್ಹ. ಇದರ ಮೂಲಕ ಅವರನ್ನು ಚಿಂತನಾಶೀಲರಾಗಿನ್ನಾಗಿ ಮಾಡಿ ಪ್ರತಿಭಟನೆ-ಹೋರಾಟ-ಚಳವಳಿ ಹಾಗೂ ಕಲೆಗಳಂಥ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು ಸಮುದಾಯ ಸಂಘಟನೆಯ ಮುಖ್ಯ ಉದ್ದೇಶವಾಗಿತ್ತು.

ಚರ್ಚೆಗೆ ಒಳಗಾದ 'ಸಮುದಾಯ'ದ ನಾಟಕಗಳನ್ನು ಹಾಗೂ ಸಮುದಾಯಕ್ಕೆ ಹೆಚ್ಚು ಪ್ರಚಾರವನ್ನು ತಂದು ಕೊಟ್ಟು ನಾಟಕಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಚರ್ಚೆಗೆ ಮತ್ತು ವಿವಾದಕ್ಕೆ ಒಳಗಾದ ಪ್ರಮುಖ ನಾಟಕಗಳು

೧. ಮಹಾಚೈತ್ರ

೨. ಕುರಿ

೩. ಕೇಸರಿ ಬಿಳಿ ಹಸಿರು

೪. ಸುಳ್ಳಾಗಿ ಕಾಡಿತ್ತು ನೋಡಾ

೫. ಅಕ್ಷರ

೬. ಬೆಲ್ಚಿ

ಈ ಮೇಲಿನ 'ಸಮುದಾಯ'ದ ನಾಟಕಗಳ ಮೇಲೆ ಚರ್ಚೆಗಳು-ಪ್ರತಿಭಟನೆಗಳು ಹಾಗೂ ವಿವಾದಗಳು ನಡೆದಿವೆ. ಇವುಗಳನ್ನು ಕರ್ನಾಟಕದ ತುಂಬಾ ವಿವಾದಕ್ಕೆ ಕಾರಣವಾದ 'ಸಮುದಾಯ' ಪ್ರಮುಖ ನಾಟಕಗಳೆಂದು ಗುರುತಿಸಲಾಗಿದೆ.

ಜನಪ್ರಿಯವಾಗಿ ಹೆಚ್ಚು ಪ್ರಚಾರಕ್ಕೆ ಒಳಪಟ್ಟ 'ಸಮುದಾಯ'ದ ಪ್ರಮುಖ ನಾಟಕಗಳು

ಹುತ್ತವ ಬಡಿದರೆ	ಹಲ್ಲಾ ಬೋಲ್
ತಾಯಿ	ಇಂದಿರಾ ಗಾಂಧಿಯ ಸುಳ್ಳಿನ ಪ್ರಮಾಣ ಪತ್ರ
ಗೆಲಿಲಿಯೋ	ಮೆರವಣಿಗೆ
ದಂಗೆಯ ಮುಂಚಿನ ದಿನಗಳು	ರುಡಾಲಿ
ಬೆಲ್ಚಿ	ಅಲ್ಲಮನ ಅದ್ಭುತ ನ್ಯಾಯ

ಸಂಸ್ಕಾರ	ಪೋಸ್ಟರ್
ಪತ್ರೆ ಸಂಗಪ್ಪನ ಕೊಲೆ	ಸ್ಪಾರ್ಟ್‌ಕಸ್
ಭಾರತ ದರ್ಶನ	ಬೆಳೆದವರು
ತುಘಲಕ್	ಜಲಗಾರ
ಕತ್ತಲೆ ದಾರಿ ದೂರ	ಸಾಯಿ ಬಾಬಾ ಮಹಾತ್ಮ
ಟಿಪ್ಪು ಕಂಡ ಕನಸು	ಪಂಚತಾರ
ಹೋರಾಟ	ಟ್ರೈನ್ ಟು ಪಾಕಿಸ್ತಾನ್
ಹಶ್ಮಿ ಅಮರ	ಮಾ ಭೂಮಿ
ಹೈದಾರಬಾದ್ ಗೋಲಿ	ಬೆಲೆ ಏರಿಕೆ
ತಿರುಕನ ಕನಸು	ಶೇಷಗಿರಿಯಪ್ಪನ ಕೊಲೆ
ರಾವಿ ನದಿಯ ದಂಡೆಯಲ್ಲಿ	ಬಾಕಿ ಇತಿಹಾಸ
ಭಗತ್ ಸಿಂಗ್	ಸ್ವಾತಂತ್ರ್ಯ ಯಾರಿಗೆ?
ಓ ಛಸ್ನಾಲಾ	ಸೂರ್ಯಶಿಕಾರಿ
ಚೋರ ಚರಣದಾಸ	ನರಗುಂದ ರೈತ ಬಂಡಾಯ

ಹೀಗೆ 'ಸಮುದಾಯ'ದ ಪ್ರಮುಖ ನಾಟಕಗಳು ನೂರಕ್ಕೂ ಹೆಚ್ಚು ಬಾರಿ ಪ್ರದರ್ಶನಗಳನ್ನು ಕಂಡಿವೆ. 'ಬೆಲ್ಚಿ'ಯಂಥ ನಾಟಕ ೧೫೦೦ಕ್ಕೂ ಹೆಚ್ಚು ಪ್ರದರ್ಶಗಳನ್ನು ಕಂಡ ಪ್ರಮುಖ ನಾಟಕವಾಗಿದೆ. 'ಬೆಲ್ಚಿ' ನಾಟಕವೂ ಸಿ.ಜಿ.ಕೆ ಅವರನ್ನು ಉತ್ತಮ ನಿರ್ದೇಶಕರನ್ನಾಗಿ ಮಾಡಿದ 'ಸಮುದಾಯ'ದ ಪ್ರಮುಖ ನಾಟಕಗಳಲ್ಲಿ ಒಂದು. ಇಡೀ ಭಾರತದಾದ್ಯಂತ ಹೆಚ್ಚು ಪ್ರದರ್ಶನಗಳನ್ನು ಹಾಗೂ ಪ್ರಚಾರವನ್ನು ನೀಡಿದ ನಾಟಕವಾಗಿದೆ. ಹೀಗೆ ಇನ್ನೂ ಹಲವಾರು ನಾಟಕಗಳು ಭಾರತ ಇತರೆ ಪ್ರಮುಖ ನಗರ ಹಾಗೂ ನಾಟಕೋತ್ಸವಗಳಲ್ಲಿ ಪ್ರದರ್ಶನಗಳನ್ನು ಕಂಡು ಪ್ರಶಸ್ತಿಗಳನ್ನು ಪಡೆದುಕೊಂಡಿವೆ. ಇದರ ಜೊತೆಗೆ 'ಸಮುದಾಯ'ದ ನಾಟಕಗಳು ಸಿನಿಮಾಗಳಾಗಿ ಬಂದಿರುವುದನ್ನು ಕಾಣುತ್ತೇವೆ. ಅದರಲ್ಲಿ ಪ್ರಮುಖವಾಗಿ ಸಂಸ್ಕಾರ, ತಾಯಿ, ಕೆರೆಗೆ ಹಾರ, ಏಕಲವ್ಯ, ಮುಂತಾದವುಗಳನ್ನು ಹೆಸರಿಸಬಹುದು.

'ಸಮುದಾಯ'ದ 'ಮಹಾಚೈತ್ರ' ನಾಟಕ

ಮಹಾಚೈತ್ರ ನಾಟಕವನ್ನು ರಚಿಸಿದವರು ಎಚ್.ಎಸ್.ಶಿವಪ್ರಕಾಶ ಅವರು. ಬೆಂಗಳೂರು 'ಸಮುದಾಯ' ತಂಡವು ಈ ನಾಟಕವನ್ನು ಪ್ರದರ್ಶಿಸಿದೆ. ೧೯೭೫ಕ್ಕಿಂತ ಮುಂಚೆ ಕರ್ನಾಟಕದ

ಪ್ರಮುಖ ವಿಶ್ವವಿದ್ಯಾಲಯಗಳಾದ ಮಂಗಳೂರು, ಗುಲಬರ್ಗಾ, ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿತ್ತು. ೧೯೯೫ರಲ್ಲಿ ಬೆಂಗಳೂರು 'ಸಮುದಾಯ' ಸಂಘಟನೆಯು ಈ ನಾಟಕವನ್ನು ಬೆಂಗಳೂರಿನ ಕಾಲೇಜುಗಳಲ್ಲಿ ಪ್ರದರ್ಶಿಸಿತು. ಗಿರೀಶ್ ಕಾರ್ನಾಡರ 'ತಲೆದಂಡ' ಹಾಗೂ ಪಿ.ಲಂಕೇಶ್‌ರ 'ಸಂಕ್ರಾಂತಿ' ನಾಟಕದಲ್ಲಿ ಬಸವಣ್ಣರ ಹಾಗೂ ವಚನ ಚಳವಳಿ ಮತ್ತು ಬಿಜ್ಜಳನ ಕಲ್ಯಾಣ ರಾಜ್ಯದ ಆಡಳಿತವನ್ನು ಚಿತ್ರಿಸುವಂತೆ ಎಚ್.ಎಸ್.ಶಿವಪ್ರಕಾಶ ಅವರ 'ಮಹಾಚೈತ್ರ' ನಾಟಕವು ಚಿತ್ರಿತವಾಗಿದೆ. ಈ ನಾಟಕವು ಕರ್ನಾಟಕ ಹಾಗೂ ಇತರೆ ರಾಜ್ಯಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ರಂಗ ಪ್ರಯೋಗಗಳನ್ನು ಕಂಡಿದೆ. ಇದು ಅಪಾರ ಜನಪ್ರಿಯತೆ ಪಡೆದ ನಾಟಕವಾಗಿದೆ. ಈ ನಾಟಕ ರಂಗತಜ್ಞರಿಂದ, ಸಾಹಿತಿಗಳಿಂದ, ವಿಮರ್ಶಕರಿಂದ ಪ್ರಶಂಸೆಗೆ ಒಳಗಾಗಿದೆ. ವಿಶ್ವವಿದ್ಯಾಲಯ, ರಾಜ್ಯ ಹಾಗೂ ಕೇಂದ್ರದ ಅಕಾಡೆಮಿಗಳಿಂದ ಮೆಚ್ಚುಗೆ ಹಾಗೂ ಪ್ರಶಸ್ತಿಗಳನ್ನು ಪಡೆದಿದೆ. ಬಸವಣ್ಣನವರು ಹಲವು ಶತಮಾನಗಳ ಹಿಂದೆಯೇ ಪ್ರಸ್ತುತ ಹಿಂದೂ ಧರ್ಮದಲ್ಲಿದ್ದ ಜಾತಿ ಪದ್ಧತಿ ಹಾಗೂ ವರ್ಣಾಶ್ರಮ ಪದ್ಧತಿ, ಅಸಮಾನತೆ, ತಾರತಮ್ಯ, ಶೋಷಣೆ ಮುಂತಾದವುಗಳ ವಿರುದ್ಧ ಶ್ರಮಜೀವಿಗಳನ್ನು ಒಗ್ಗೂಡಿಸಿ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ್ದರು. ಈ ರೀತಿಯ ಆಶಯಗಳನ್ನು ಹೊತ್ತಿರುವ ಈ ನಾಟಕಕ್ಕೆ ಅರ್ಥ ಪೂರ್ಣವಾಗಿ 'ಮಹಾಚೈತ್ರ' 'ಮಹಾನ್ ವಿಜಯ' ಎಂದೇ ಹೆಸರಿಸುವುದನ್ನು ಗಮನಿಸಿದರೆ, ಇದರಲ್ಲಿ ಬಸವಣ್ಣನವರನ್ನಾಗಲಿ ಅಥವಾ ಅವರ ತತ್ವಗಳನ್ನಾಗಲಿ ನಾಟಕಾರರು ಯಾವುದೇ ಅವಹೇಳನ ರೀತಿಯ ಮಾತುಗಳನ್ನಾಡಿಲ್ಲ. ಆದರೆ ಮಾತೆಮಹಾದೇವಿಯ 'ಬಸವದಳ'ದವರು ಹಾಗೂ ಸಂಘಪರಿವಾರದವರು ಈ ನಾಟಕವನ್ನು ಕುರಿತು ವಿವಾದ ಸೃಷ್ಟಿಸಿದ್ದರು. ಬುದ್ಧನ ಸಾಮಾಜಿಕ ಚಿಂತನೆಗಳ ಮುಂದುವರೆದ ಭಾಗವೇ ಬಸವಣ್ಣನವರ ಚಿಂತನೆಗಳಾಗಿವೆ. ಆದರೆ ಮೂಲಭೂತವಾದಿಗಳು, ಪಟ್ಟಭದ್ರಹಿತಾಸಕ್ತಿಗಳು ಬಸವಣ್ಣನವರ ಚಿಂತನೆಗಳನ್ನು ಮತ್ತು ಆದರ್ಶಗಳನ್ನು ಪಾಲಿಸದೇ ಒಂದೇ ಜಾತಿಗೆ ಸೀಮಿತವಾಗಿಸಿರುವುದು ದುರಂತವೇ ಸರಿ. ಬಸವಣ್ಣನವರನ್ನು ದೈವತ್ವಕ್ಕೆ ಏರಿಸುವುದರ ಮೂಲಕ ಅವರ ನಿಜವಾದ ಸಾಮಾಜಿಕ ಕಳಕಳಿಯ ಚಿಂತನೆಗಳನ್ನು ಮರೆಮಾಚಿಸುವ ತಂತ್ರವನ್ನು ಎಚ್.ಎಸ್.ಶಿವಪ್ರಕಾಶ್ ಅವರ ಮಹಾಚೈತ್ರ ನಾಟಕ ಪ್ರಸ್ತುತ ಪಡಿಸಿದೆ. ಬುದ್ಧ ಬಸವಣ್ಣವರಂತಹ ಜನಪರ ಸಾಮಾಜಿಕ ಕ್ರಾಂತಿಕಾರರನ್ನು ದೈವತ್ವಕ್ಕೇರಿಸಿ, ಅವರ ಸುತ್ತ ಮಠ, ಮಂದಿರ, ಸಂಸ್ಥಾನ, ಪಲ್ಲಕಿ, ಕಿರೀಟ, ರಥ, ಪುರಾಣ, ಪ್ರಸಾದ, ಜಗದ್ಗುರು ಪರಂಪರೆಯಂಥ ಅಂಶಗಳನ್ನು ಬೆಳಸಿಕೊಂಡು ಬಂದಂತಹ ಪಟ್ಟಭದ್ರ ಪುರೋಹಿತಶಾಹಿಗಳ ಹಿತಾಸಕ್ತಿಗಳಿಗೆ, ಸಾಮಾಜಿಕ ಕ್ರಾಂತಿಕಾರರ ಸಂದೇಶದ ಬಗ್ಗೆ ಅಪಾಯ ತಂದೊಡ್ಡಿದಂತೆ ಈ 'ಮಹಾಚೈತ್ರ'ದಂತಹ ಸಾಹಿತ್ಯ ಪಠ್ಯಗಳ ವಿರುದ್ಧ ಸುಮ್ಮನೆ ಅಪಪ್ರಚಾರ ಮಾಡಿರುವುದನ್ನು ಗಮನಿಸಬಹುದು.

ಭಾರತದ ಜಾತ್ಯತೀತತೆಯ ಮೌಲ್ಯಗಳಿಗೆ ಬದ್ಧವಾಗಿರುವ ಬಸವಣ್ಣನವರ ಅಸಂಖ್ಯಾತ ಅನುಯಾಯಿಗಳನ್ನು ಹಿಂದೂ ಧಾರ್ಮಿಕ ಮೂಲಭೂತವಾದಕ್ಕೆಳೆಯುವ ಕುಟಿಲ ರಾಜತಾಂತ್ರಿಕತೆ ಈ ನಾಟಕದ ವಿರೋಧಿಗಳಾದ ಬಸವದಳದವರಾದ್ದಾಗಿದೆ. ಇದನ್ನು 'ಸಮುದಾಯ'ವು ಪ್ರತಿಭಟನೆಯ

ಮೂಲಕ ಎಚ್ಚರಿಸಿತು. ರಾಜ್ಯ ಸರ್ಕಾರ 'ಮಹಾಚೈತ್ರ' ನಾಟಕವನ್ನು ಪಠ್ಯಪುಸ್ತಕದ ಪಟ್ಟಿಯಿಂದ ಹಿಂತೆಗೆಯುವಂತೆ'ಅಂದಿನ ಸರಕಾರವನ್ನು ಒತ್ತಾಯಿಸಿ ಯಶಸ್ವಿಗೊಂಡವರು ಸಹ ಬಸವಳದವರೆ. ಈಗ ಆ ಪುಸ್ತಕವನ್ನೇ ಕಾನೂನು ಬಾಹಿರಗೊಳಿಸಬೇಕು ಹಾಗೂ ನಾಟಕಕಾರರಿಗೆ ನೀಡಿದ ಪ್ರಶಸ್ತಿಗಳನ್ನು ಹಿಂತೆಗೆಂದುಕೊಳ್ಳಬೇಕೆಂದು ಮತ್ತು ನಾಟಕಾರರು ಕ್ಷಮೆಯಾಚಿಸಬೇಕೆಂದು ಕಲಾವಿದರಿಗೆ ಗೆರಾವೋ ಮಾಡಿ, ಜೀವ ಬೆದರಿಕೆ ಹಾಕಲಾಗಿತ್ತು. ಈ ವಿವಾದವನ್ನು ಗಮನಿಸಿ ಸಾಹಿತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟು ಬಿದ್ದಾಂತಾಗಿದೆ ಎಂದು 'ಸಮುದಾಯ'ವು ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿರುವುದು ಕಾಣುತ್ತೇವೆ.

'ಮಹಾಚೈತ್ರ' ನಾಟಕ ಮಾತ್ರ, ಅದು ಧರ್ಮ ಗ್ರಂಥವಲ್ಲ. ಯಾವುದೇ ಒಂದು ಕೃತಿಯನ್ನು ವೈಚಾರಿಕ ನೆಲೆಯಲ್ಲಿ ಆರೋಗ್ಯಕರವಾಗಿ ಚರ್ಚಿಸುವ ಅವಕಾಶವಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರವಿದೆ. ಚರಿತ್ರೆ ಮತ್ತು ಪುರಾಣಗಳನ್ನು ಪ್ರಶ್ನಿಸಿ ಅವುಗಳನ್ನು ವರ್ತಮಾನದ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯಿಸಿರುವ ಹಲವು ಪಠ್ಯಗಳನ್ನು ಕನ್ನಡ ಸಾಹಿತ್ಯದ ಉದ್ದಕ್ಕೂ ಕಾಣಬಹುದಾಗಿದೆ. ಪ್ರಾಚೀನ ಕವಿಗಳಿಂದ ಹಿಡಿದು, ಆಧುನಿಕ ಸಾಹಿತಿಗಳವರೆಗೂ ಈ ಕೆಲಸ ನಡೆಯುತ್ತ ಬಂದಿದೆ. ಎಚ್.ಎಸ್.ಶಿವಪ್ರಕಾಶ್ ಅವರು ಕೂಡ ಅದೇ ರೀತಿಯ ಮಾದರಿಯನ್ನು ಈ ನಾಟಕದಲ್ಲಿ ಅಳವಡಿಸಿದ್ದಾರೆ. ಈ ಕೃತಿಯನ್ನು ನಿಷೇಧ ಮಾಡುವ ಬದಲಾಗಿ ಆ ನಾಟಕವನ್ನು ಕುರಿತ ವಿಚಾರ ಸಂಕಿರಣ, ಚರ್ಚೆಗಳನ್ನು ಮಾಡುವ ಅವಕಾಶವಿತ್ತು. ತಾತ್ವಿಕ ಚರ್ಚೆಗಳ ಮೂಲಕ ಈ ನಾಟಕವು ಸಾಮಾಜಕ್ಕೆ ಮಾರಕವೋ ಅಥವಾ ಪೂರಕವೋ ಎಂಬುದು ತಿಳಿಯುತ್ತಿತ್ತು ಎಂದೆನಿಸಿದೆ. ಈ ನಾಟಕದ ಆಶಯ ಮತ್ತು ಧೋರಣೆಯನ್ನು ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿ ಅರ್ಥೈಸಬೇಕಾಗಿತ್ತು. ಈ ನಾಟಕದಲ್ಲಿನ ಆಶಯಕ್ಕೆ ಸಂಬಂಧಿಸಿದಂತೆ ಅಸ್ಪಷ್ಟತೆ ಅಥವಾ ಅಪೂರ್ಣತೆಗಳಿದ್ದರೆ ಹೆಚ್ಚಿನ ಸಂಶೋಧನಗಳಿಂದ ಸತ್ಯಾಂಶವನ್ನು ಕಂಡು ಕೊಳ್ಳುವುದು ಶಿಕ್ಷಣದ ವೈಜ್ಞಾನಿಕ ವಿಧಾನವಾಗಿದೆ. 'ಮಹಾಚೈತ್ರ' ಒಂದು ಸೃಜನಶೀಲ ಪಠ್ಯವಾಗಿದೆ. ಪಠ್ಯ ಪುಸ್ತಕಗಳ ವಿಷಯಗಳಲ್ಲಿ ರಾಜಕೀಯ–ಧಾರ್ಮಿಕ ಹಸ್ತಕ್ಷೇಪವನ್ನು 'ಸಮುದಾಯ' ತೀವ್ರವಾಗಿ ಖಂಡಿಸಿತ್ತು. ಅಂದಿನ ಸರ್ಕಾರವು 'ಮಹಾಚೈತ್ರ' ಪಠ್ಯವನ್ನು ವಾಪಾಸಾತಿಯಂತಹ ತನ್ನ ತಪ್ಪು ನಿರ್ಧಾರಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ ೧೯೯೫ರಲ್ಲಿ ಪ್ರತಿಭಟಿಸಿತ್ತು.[೨] ಆ ವರ್ಷದ ವಿದ್ಯಾರ್ಥಿಗಳ ಅಂತಿಮ ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಈ ನಾಟಕ ಕೃತಿಯನ್ನು ಪುನಃ ಪಠ್ಯಪುಸ್ತಕನ್ನಾಗಿ ಮುಂದುವರೆಸಲು ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್‌ಗಳಿಗೆ ಪೂರ್ಣ ಸ್ವಾಯತ್ತತೆ ನೀಡಬೇಕೆಂದು 'ಸಮುದಾಯ' ಸಂಘಟನೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದನ್ನು ಸಹ ಕಾಣಬಹುದು.

'ಮಹಾಚೈತ್ರ' ನಾಟಕ ಪ್ರದರ್ಶನಕ್ಕೆ 'ಬಸವದಳ' ಸಂಘಟನೆಯಿಂದ ಅಡ್ಡಿ

ಧಾರವಾಡ ಕಲಾಭವನದಲ್ಲಿ ೧೪–೬–೧೯೯೫ರಲ್ಲಿ ಹುಬ್ಬಳ್ಳಿ–ಧಾರವಾಡ 'ಸಮುದಾಯ' ಘಟಕದ ಸಹಕಾರದೊಂದಿಗೆ ಹಾಗೂ ಬೆಂಗಳೂರು 'ಸಮುದಾಯ'ದ ವತಿಯಿಂದ 'ಮಹಾಚೈತ್ರ'

ನಾಟಕದ ಪ್ರದರ್ಶನ ನಡೆಯುವುದಿತ್ತು. ಆದರೆ ಈ ನಾಟಕದ ಪ್ರದರ್ಶನ ಏರ್ಪಾಡಾಗುವ ಮೊದಲೇ ಕೆಲವು ಮತೀಯ ಶಕ್ತಿಗಳು ನಾಟಕದ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದರು. ಅಂದು ಸಂಜೆ ರಾಷ್ಟ್ರೀಯ ನಾಟಕ ಶಾಲೆಯ ವತಿಯಿಂದ ನಡೆಯುವ 'ರಂಗ ತರಬೇತಿ' ಶಿಬಿರ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಈ ನಾಟಕ ಪ್ರದರ್ಶನ ನಡೆಯುವುದಿತ್ತು. ಕಾರ್ಯಕ್ರಮ ನಡೆಯುವ ಮೊದಲೇ ಮಾತೆ ಮಹಾದೇವಿಅವರ ಅನುಯಾಯಿಗಳು ಮತ್ತು ಗೂಂಡಾಗಳು ಕಲಾಭವನದ ಎದುರು ಘೋಷಣೆ ಕೂಗುತ್ತಿದ್ದರು. ನಂತರ ಸಭಾ ಭವನದಲ್ಲಿ ಕಾರ್ಯಕ್ರಮ ಪ್ರಾರಂಭವಾದಾಗ ವೇದಿಕೆ ಮೇಲಿದ್ದ ಗಣ್ಯರನ್ನು ಸೇರಿದಂತೆ, ಎಲ್ಲಾರನ್ನು ಅವ್ಯಾಚ್ಯ ಶಬ್ದಗಳಿಂದ ಪೇಕ್ಷಕರ ಮಧ್ಯದಲ್ಲಿ ನಿಂತು ನಿಂದಿಸಿದರು. ಅಂದು ವೇದಿಕೆಯಲ್ಲಿ ಏಣಿಗಿ ಬಾಳಪ್ಪ ವೃತ್ತಿರಂಗಕರ್ಮಿ, ಶ್ರೀರಾಮೇಗೌಡ (ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ), ದೇವೇಂದ್ರರಾಜ್ ಅಂಕುರ್ (ಭಾರತದ ಹಿರಿಯ ರಂಗ ನಿರ್ದೇಶಕರು) ಹಾಗೂ ಬಂಡಾಯ ಸಾಹಿತಿ ಚಂದ್ರಶೇಖರ್ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು. ಆದರೂ ಬಸವದಳದ ಸಂಘಟನೆಯವರು ಅವರನ್ನು ಲೆಕ್ಕಿಸದೆ ಪ್ರಸಾಧನ(ಅಲಂಕಾರ ಕೊಠಡಿ) ಕೋಣೆಗೆ ನುಗ್ಗಿ ಗೂಂಡಾಗಳು ಹಲ್ಲೆ ಮಾಡಿದರು. (ಅದರಲ್ಲಿ ಅಂದ ಭಕ್ತರ ಗುಂಡಾಗಳ ಗುಂಪಿನಲ್ಲಿ ಮಾಜಿ ಕಾಂಗ್ರೆಸ್ ಶಾಸಕರ ಮೊಮ್ಮಗನು ಕೂಡ ಮುಂದಾಳತ್ವ ವಹಿಸಿದ್ದನು) ಅಂತಿಮವಾಗಿ ನಾಟಕ ನಡೆಯದಂತೆ ತಡೆದರು.

ಬೆಂಗಳೂರು ಹಾಗೂ ಧಾರವಾಡ ಘಟಕದ 'ಸಮುದಾಯ' ಸಂಘಟನೆಗಳು ಈ ಹಲ್ಲೆಯನ್ನು ಪ್ರತಿಭಟಸಿ ಮರುದಿನ ಅಂದರೆ ೧೫-೬-೧೯೯೫ರಂದು ಸಂಜೆ ೫ಗಂಟೆಯಿಂದ ಮೌನ ಪ್ರತಿಭಟನೆ ಕಾರ್ಯಕ್ರಮವನ್ನು 'ಸಮುದಾಯ' ಆಯೋಜಿಸಿದಾಗ ಉತ್ತಮ ಪ್ರತಿಕ್ರಿಯೆ ಬಂತು. 'ಸಮುದಾಯದ' ಕಲಾವಿದರನ್ನು ಒಳಗೊಂಡು ಎಂ.ಜಿ.ವೆಂಕಟೇಶ್, ಪ್ರಸನ್ನ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ವಿ.ಎಸ್.ದೇಶಪಾಂಡೆ, ಸಿದ್ಧನಗೌಡ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಬಿ.ಐ.ಈಳಿಗೇರ ಇನ್ನೂ ಹಲವಾರು ಸಾಹಿತಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಈ ಮೌನ ಪ್ರತಿಭಟನೆಯು ಕ್ರಮೇಣ ರಂಗಗೀತೆಗಳ(ಮಹಾಚೈತ್ರ ನಾಟಕದ ಗೀತೆಗಳು) ಹಾಡುವುದರ ಮುಖಾಂತರ ಮುಂದುವರೆದು ಅಲ್ಲೇ ದೊಡ್ಡ ಚರ್ಚೆ ಪ್ರಾರಂಭವಾಯಿತು. ಈ ಚರ್ಚೆಯಲ್ಲಿ ಪ್ರಸನ್ನ, ವೆಂಕಟೇಶ್, ಸಿದ್ಧನಗೌಡ ಪಾಟೀಲ ಇನ್ನೂ ಮುಂತಾದವರು ಭಾಗವಹಿಸಿದ್ದರು.

ಈ ನಾಟಕ ಪ್ರದರ್ಶನದ ವಿರುದ್ಧ ಪ್ರತಿಭಟಿಸುತ್ತಿದ್ದವರೆಲ್ಲಾ ಯಾರು ನಾಟಕವನ್ನು ಓದಿರಲಿಲ್ಲ ಎಂದು 'ಸಮುದಾಯ'ದ ಮಾಜಿ ಕಾರ್ಯದರ್ಶಿಯಾದ ಎಂ.ಜಿ.ವೆಂಕಟೇಶ್ ಅವರು ತಮ್ಮ ಅಭಿಪ್ರಾಯವನ್ನು ನಾನು ಸಂದರ್ಶಿಸಿದಾಗ ವ್ಯಕ್ತಪಡಿಸಿದರು. ಈ 'ಸಮುದಾಯ'ದ ಪ್ರತಿಭಟನೆ ಕಾರ್ಯಕ್ರಮದಲ್ಲಿ ೨೦೦ ರಿಂದ ೩೦೦ ಜನ ಭಿತ್ತಿ ಪತ್ರಗಳನ್ನು ಹಿಡಿದುಕೊಂಡು ಕಲಾಭವನದಿಂದ ಗಾಂಧಿ ಚೌಕದವರೆಗೆ ಮೆರವಣಿಗೆ ನಡೆಸಿದರು. ಆನಂತರ ಕಲಾಭವನದ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಧಾರವಾಡದ ನಾಗರೀಕರಿಗೆ ಎಂ.ಜಿ.ವೆಂಕಟೇಶ ಅವರು ಕೃತಜ್ಞತೆ ಸಲ್ಲಿಸಿದರು.೩

ಜಾತಿವಾದಿ ಮತ್ತು ಮತೀಯವಾದಿ ಶಕ್ತಿಗಳ ಪ್ರಚೋದನೆಗೆ ಜನರು ನಿರಂತರವಾಗಿ ಮರಳಾಗುವುದಿಲ್ಲ ಎಂಬುದನ್ನು ಈ ಪ್ರತಿಭಟನೆಯಿಂದ ರುಜುವಾತಾಗಿದೆ ಎಂದು ಹೇಳಿದರು.

'ಮಹಾಚೈತ್ರ' ನಾಟಕ ರದ್ಧತಿ ವಿರೋಧಿಸಿ ಧರಣಿ ಸತ್ಯಾಗ್ರಹ

ಗುಲಬರ್ಗಾ ಹಾಗೂ ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿದ್ದ 'ಮಹಾಚೈತ್ರ' ನಾಟಕವನ್ನು ಅಂದಿನ ರಾಜ್ಯ ಸರ್ಕಾರ ಏಕ ಪಕ್ಷೀಯವಾಗಿ ಮಾತೆಮಹಾದೇವಿ ಹಾಗೂ ಬಸವದಳ ಸಂಘಟನೆಗಳಿಗೆ ಮಣಿದು, ನಾಟಕವನ್ನು ರದ್ದು ಪಡಿಸಿತು. ಸೃಜನಶೀಲತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ರಕ್ಷಣೆಗೆ ಒತ್ತಾಯಿಸಿ ವಿಧಾನಸೌಧದ ಎದುರು ಸಾಹಿತಿ, ಕೂಲಿಕಾರರು, ವಿದ್ಯಾರ್ಥಿ-ಯುವಜನ ಮತ್ತು ಪ್ರಗತಿಪರ ಚಿಂತಕರು ಸತ್ಯಾಗ್ರಹದಲ್ಲಿ ಭಾಗವಹಿಸಿ ೨೦-೩-೯೬ರಂದು ಧರಣಿ ಸತ್ಯಾಗ್ರಹ ನಡೆಸಿದರು. ಇದೇ ಸಂದರ್ಭದಲ್ಲಿ ನಿಯೋಗ ಹೋಗಿ ಮುಖ್ಯಮಂತ್ರಿಗಳಿಗೆ ಮನವಿ ನೀಡಲಾಯಿತು. ಸರಕಾರದ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿದರು. ಮತೀಯವಾದಿಗಳಿಗೆ ಮಣಿದು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರಲ್ಲಿ ಸರಕಾರ ಸೋತಿದೆ ಎಂದು ಸತ್ಯಾಗ್ರಹದಲ್ಲಿ ಸಾಹಿತಿಗಳು ಮಾತಾನಾಡಿದರು. ಮುಖ್ಯಮಂತ್ರಿಯಾದ ಹೆಚ್.ಡಿ.ದೇವೇಗೌಡ ಅವರು ನಿಯೋಗದ ನಾಯಕರ ಜೊತೆ ಮಾತನಾಡುತ್ತಾ 'ಮಹಾಚೈತ್ರ' ರದ್ಧತಿಗೆ ಸಂಪೂರ್ಣವಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ರುದ್ರಯ್ಯ ಹಾಗೂ ವಿ.ವಿ.ಶಿಕ್ಷಣ ಮಂಡಳಿ ಶಿಫಾರಸ್ಸೇ ಮುಖ್ಯ ಕಾರಣವೆಂದು ಮುಖ್ಯಮಂತ್ರಿಗಳು ತಿಳಿಸುತ್ತ ಈ ಎಲ್ಲಾ ವಿದ್ಯಮಾನಗಳನ್ನು ಕುರಿತು ಹಿಂದೆ ರಚಿಸಿರುವ ತಜ್ಞರ ಸಮಿತಿಯಿಂದ ವರದಿ ತರಸಿಕೊಳ್ಳುವುದಾಗಿ ತಿಳಿಸಿದರು.

ಅಂದಿನ ಮುಖ್ಯಮಂತ್ರಿಗಳಾದ ಎಚ್.ಡಿ.ದೇವೇಗೌಡ ಈ ಧರಣಿ ಸತ್ಯಾಗ್ರಹದ ಮನವಿ ಪತ್ರವನ್ನು ಪಡೆದರು. ಈ ಸತ್ಯಾಗ್ರಹದಲ್ಲಿ ಸಿ.ಪಿ.ಐ(ಎಂ) ಪಕ್ಷದ ಶಾಸಕಾರದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಪಠ್ಯಪುಸ್ತಕ ರದ್ಧತಿ ಏಕೆಂಬ ಪ್ರಶ್ನೆಗಳ ಕುರಿತು ವಿಧಾನಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು. ಈ ಧರಣಿಯನ್ನು ಬೆಂಗಳೂರು 'ಸಮುದಾಯ', ಎಸ್.ಎಫ್.ಐ, ಡಿ.ವೈ.ಎಫ್.ಐ, ಡಿ.ಎಸ್.ಎಸ್. ಶಿಕ್ಷಕರ ಸಂಘಟನೆಗಳು, ಬಂಡಾಯ ಸಾಹಿತ್ಯ ಸಂಘಟನೆ ಮುಂತಾದ ಸಂಘಟಕರು ಸಂಘಟಿಸಿರುವುದನ್ನು ಕಾಣುತ್ತೇವೆ. ಜೊತೆಗೆ ಹಿರಿಯ ಸಾಹಿತಿಗಳು ಮತ್ತು ಕಲಾವಿದರಾದ ಜಿ.ಎಸ್. ಶಿವರುದ್ರಪ್ಪ, ಜಿ.ಕೆ.ಗೋವಿಂದರಾವ್, ವಿಜಯಮ್ಮ, ಸಿ.ಜಿ.ಕೃಷ್ಣಸ್ವಾಮಿ, ಕಿ.ರಂ.ನಾಗರಾಜ, ಎಲ್.ಹನುಮಂತಯ್ಯ, ಸಿದ್ಧಲಿಂಗಯ್ಯ, ಟಿ.ಎಸ್.ನಾಗಭರಣ, ವಿವಿಧ ಸಂಘಟನೆಗಳ ಮುಖಂಡರುಗಳಾದ ಶಾಂತರಾಮ ನಾಯಕ, ಕೆ.ಪ್ರಕಾಶ್, ಎಸ್.ವೈ.ಗುರುಶಾಂತ್, ವೈ.ಎಸ್.ವಿ.ದತ್ತ, ಎಂ.ಜಿ.ವೆಂಕಟೇಶ್, 'ಸಮುದಾಯ'ದ ಸಿ.ಕೆ.ಗುಂಡಣ್ಣ, ಟಿ.ಸುರೇಂದ್ರರಾವ್ ಇನ್ನೂ ಮುಂತಾದವರು ಭಾಗವಹಿಸಿದ್ದರು. ಇದರ ಜೊತೆಯಲ್ಲಿ ಸಿಂಧನೂರು 'ಸಮುದಾಯ'ದಿಂದ ಹಾಗೂ ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ತಾಲೂಕು ಘಟಕಗಳಿಂದ ಈ 'ಮಹಾಚೈತ್ರ' ನಾಟಕದ ಬಗ್ಗೆ ವಿಚಾರ ಸಂಕಿರಣ ನಡೆಯಿತು. ಈ ವಿಚಾರ ಸಂಕಿರಣದಲ್ಲಿ ಹಿರಿಯ ಸಾಹಿತಿಯಾದ ಅಲ್ಲಮಪ್ರಭು ಬೆಟ್ಟದೂರು ಹಾಗೂ ಮಾರ್ಕ್ಸ್‌ವಾದಿ

ಚಿಂತಕರಾದ ಜಿ.ಎನ್.ನಾಗರಾಜ್ ಅವರು 'ಮಹಾಚೈತ್ರ' ನಾಟಕವನ್ನು ಕುರಿತು ವಿಚಾರಗಳನ್ನು ಮಂಡಿಸಿ ಮತೀಯವಾದಿಗಳಾದ 'ಬಸವದಳ'ದವರನ್ನು ವಿಶ್ಲೇಷಣೆಗೆ ಒಳಪಡಿಸಿದ್ದರು. 'ಮಹಾಚೈತ್ರ' ನಾಟಕದ ಪ್ರಮುಖ ಹಾಡನ್ನು ಎಲ್ಲೆಡೆ ಹಾಡಲಾಯಿತು. ಕರ್ನಾಟಕದ ಪ್ರತಿಭಟನೆಗಳಲ್ಲಿ 'ಸಮುದಾಯ'ದ ಘಟಕಗಳಲ್ಲಿ ಈ ಹಾಡು ಮೊಳಗಿತು.

ವಸಂತದಲಿ
'ಚೈತ್ರ'ದ ಕುಡಿ ಮುರಿದರಯ್ಯ
ನೀನತ್ತ ನುಡಿ ಮುತ್ತ ನಾಲಿಗೆಯನ್ನ
ಇಂದು ಮಾತೆ ಕಸಿದರಯ್ಯ
ಅಯ್ಯ! ಬಸವಯ್ಯ
ಮಠದಗುಳದ ಸುಲಿಗೆ ಮಾಡಿ
ಈ ಕೆಡುಕ ನಿವಾರಸೊ ನಿನಾದ
ಕಲ್ಯಾಣ ದೂರಲ್ಲಿ
ಮಹಾಮನೆಯ ಬಾಗಿಲಲ್ಲಿ
ನಿಜ ಕೆಡಹಿ, ನಡೆ ಕೆಡಹಿ
ಅಂತರಂಗ ಬಹಿರಂಗಗಳ ಕತ್ತಲೆ
ಕೆಡಹಿ ಕುಣಿದವರಿಗೆರಗಿ
ಮಣಿದರೂ ಪ್ರಭುವೆ!
ಧನ ದರ್ಪಗರ ಬಡಿದ
ಮತಿಹೀನ ಮೂಢರಿಗೆ
ಮತಿಯಿತ್ತು ಮನವಿತ್ತು ಸತ್ಯ
ನೀ ನಡೆದತ್ತ ನಡೆವ ಗತಿ ಹೊತ್ತು
('ಸಮುದಾಯ'ದ ಧರಣಿ ಸತ್ಯಾಗ್ರಹದ ವೇಳೆ ಹಾಡಿದ ಹಾಡು)

ಮಹಾಚೈತ್ರದ ನಾಟಕವನ್ನು ಪಠ್ಯಪುಸ್ತಕದಿಂದ ತಗೆದಿದ್ದು ಕಾನೂನು ಬಾಹಿರವಾಗಿತ್ತು. ಏಕೆಂದರೆ ರಾಜ್ಯ ಸರ್ಕಾರವೇ ಪಠ್ಯಪುಸ್ತಕದ ಬಗ್ಗೆ ಹಾಗೂ ನಾಟಕದ ವಿವಾದದ ಬಗ್ಗೆ ತಜ್ಞರ ಸಮಿತಿ ನೇಮಿಸಿ ವರದಿ ಸಿದ್ಧಪಡಿಸಿಕೊಡುವ ಮುಂಚಿತವಾಗಿಯೇ ಕರ್ನಾಟಕದ ರಾಜ್ಯಪಾಲರ ಮೂಲಕ ನಾಟಕದ ಪಠ್ಯವನ್ನು ರದ್ದುಪಡಿಸಿದ್ದನ್ನು ಸರಿಕಂಡಿರಲಿಲ್ಲ. ಆದ್ದರಿಂದ ಈ ನಾಟಕವು ಕರ್ನಾಟಕ ಸಾಂಸ್ಕೃತಿಕ ರಂಗ ಚಳವಳಿಯಲ್ಲಿಯೇ ವಿವಾದಕ್ಕೆ ಒಳಗಾದ ಒಂದು ಚಾರಿತ್ರಿಕ ಸಂಗತಿಯಾಗಿದೆ. ಏಕೆಂದರೆ ಬಸವಣ್ಣನವರ ತತ್ವಗಳನ್ನು ಪಾಲಿಸದ ಕರ್ನಾಟಕ ಬಹತೇಕ ಮಠಗಳ ಅಧೀನದಲ್ಲಿ ರಾಜಕಾರಣಿಗಳು ಗುಲಾಮರಂತೆ ಕಾರ್ಯ ನಿರ್ವಹಿಸುವುದನ್ನು ನಾಟಕದ ಮೂಲಕ ಹೇಳುವ 'ಸಮುದಾಯ' ಸಂಘಟನೆಯು ಒಂದು ಪ್ರತಿಭಟನೆಯ ಅಸ್ತ್ರವಾಗಿತ್ತು. 'ಸಮುದಾಯ'ವು

ಸಮಾಜದ ಮೌಢ್ಯ, ಶೋಷಣೆ, ಅನ್ಯಾಯ, ದಬ್ಬಾಳಿಕೆಗಳ ವಿರುದ್ಧ ಬೀದಿನಾಟಕ, ಜಾಥಾ ಹಾಗೂ ಬರವಣಿಗೆಗಳ ಮೂಲಕ ಅಭಿವ್ಯಕ್ತಿಪಡಿಸುವ ಸಾಂಸ್ಕೃತಿಕ ಸಂಘಟನೆಯಾಗಿ ಪರಿವರ್ತಿತವಾಗಿತ್ತು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರತಿಭಟನೆ

೧೪-೬-೧೯೯೫ ರಲ್ಲಿ ಧಾರವಾಡದ ಕಲಾಭವನದಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ವತಿಯಿಂದ 'ರಂಗ ತರಬೇತಿ' ಶಿಬಿರದ ಉದ್ಘಾಟನಾ ಸಮಾರಂಭವನ್ನು ಧಾರವಾಡದ 'ಬಸವದಳ'ದ ಸಂಘಟಕರು ನಿಲ್ಲಿಸಿದ್ದೂ ಅಲ್ಲದೇ, ಈ ಸಮಾರಂಭದ ನಂತರ 'ಸಮುದಾಯ' ತಂಡದಿಂದ ನಡೆಯಬೇಕಾದ 'ಮಹಾಚೈತ್ರ' ನಾಟಕ ಪ್ರದರ್ಶನ ನಡೆಯಬೇಕಿತ್ತು. ಆದರೆ, ಈ ನಾಟಕದ ನಟ-ನಟಿಯರ ಮೇಲೆ 'ಬಸವದಳ'ದ ಸಂಘಟಕರು ದಾಳಿಮಾಡಿ ದೈಹಿಕ ಹಲ್ಲೆ ಮಾಡಿದರು. ಈ ಘಟನೆಯು ಕರ್ನಾಟಕದ ತುಂಬೆಲ್ಲ ಸುದ್ಧಿಯಾಯಿತು. ಈ ಹಿನ್ನೆಲೆಯಲ್ಲಿ ಧಾರವಾಡ, ಬೆಂಗಳೂರು, ಮಂಗಳೂರು ಹಾಗೂ ಇತರೆ 'ಸಮುದಾಯ' ಘಟಕಗಳಲ್ಲಿ ಪ್ರತಿಭಟನೆಗಳು ಪ್ರಾರಂಭವಾದವು. ಈ ಕಾರಣಕ್ಕಾಗಿ ಕನ್ನಡ ವಿಶ್ವವಿದ್ಯಾಲಯದಲ್ಲಿ 'ಸಮುದಾಯ'ದ ನಟ-ನಟಿಯರ ಮೇಲಿನ 'ಬಸವದಳ' ಸಂಘಟನೆಯ ದಾಳಿಯನ್ನು ಖಂಡಿಸಿ ಪ್ರಾಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳು ಒಟ್ಟಾಗಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನಾ ಕಾರ್ಯಕ್ರಮವನ್ನು ೧೯೯೫ ಸೆಪ್ಟಂಬರ್ ತಿಂಗಳಲ್ಲಿ ಹಮ್ಮಿಕೊಂಡಿದ್ದರು.

೧೯೭೭ರಲ್ಲಿ 'ಸಮುದಾಯ'ದ ಬೀದರ್‌ನಿಂದ ಹೊರಟಂಥ ಜಾಥಾದಲ್ಲಿ ಸುರುಪುರದ ಬಂಡಾಯ ಸಾಹಿತಿ ಲಿಂಗಣ್ಣ ಸತ್ಯಂಪೇಟ ಅವರು ಭಾಗವಹಿಸಿದ್ದರು. 'ಸಮುದಾಯ'ದ ರಂಗ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿರುತ್ತಾರೆ. ಇವರ ಬರವಣಿಗೆಯು ಧಾರ್ಮಿಕ ಕಂದಾಚಾರಗಳಂಥ ವಿಷಯಗಳನ್ನು ಒಳಗೊಂಡಿದ್ದರಿಂದ ಇವರನ್ನು ೨೦೦೪ರಂದು ಗುಲ್ಬರ್ಗಾದಲ್ಲಿ ಅನುಮಾನಾಸ್ಪದವಾಗಿ ಕೊಲೆಗೈಯುತ್ತಾರೆ. ಹಾಗೆಯೇ ೨೦೧೩ರಿಂದ ಇಚೇಗೆ ಮಹಾರಾಷ್ಟ್ರದಲ್ಲಿ ಮೌಢ್ಯತೆಗಳ ವಿರುದ್ಧ ಪವಾಡ ಬಂಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಡಪಂಥೀಯ ಸಾಂಸ್ಕೃತಿಕ ಚಿಂತಕರಾದ ನರೇಂದ್ರ ದಾಬೋಲ್ಕರ್ ಹತ್ಯೆಯನ್ನು ಇದೇ ಮಾದರಿಯಲ್ಲಿ ಕಾಣಬಹುದು. ಸಿ.ಪಿ.ಐ ಪಕ್ಷದ ರೈತ ಮುಖಂಡರಾದ ಗೋವಿಂದ ಪನ್ಸಾರೆ, ಎಂ.ಎಂ.ಕಲಬುರ್ಗಿ ಹಾಗೂ ಗೌರಿ ಲಂಕೇಶ್‌ರಂಥ ಚಿಂತಕರೂ ಸಹ ಧಾರ್ಮಿಕ ಮೌಢ್ಯಗಳ ವಿರುದ್ಧ ಬರವಣಿಗೆ, ಭಾಷಣ ಹಾಗೂ ಚಳವಳಿಗಳನ್ನು ಮಾಡಿದ್ದರ ಫಲವಾಗಿ ಧಾರ್ಮಿಕ ಮತೀಯವಾದಿಗಳು ಅವರನ್ನು ಹತ್ಯೆಗೈಯ್ಯುತ್ತಾರೆ. ಈ ರೀತಿಯ ವಿಷಯಗಳನ್ನಾಧರಿಸಿ ಆರೋಪಿಗಳನ್ನು ಬಂದಿಸಲು 'ಸಮುದಾಯ' ಸಂಘಟನೆ, ಎಸ್.ಎಫ್.ಐ, ಡಿ.ವೈ.ಎಫ್.ಐ, ದಲಿತ ಸಂಘರ್ಷ ಸಮಿತಿ ಹಾಗೂ ಇತರೆ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರಿನ ಟೌನ್‌ಹಾಲ್ ಬಳಿ ೨೦೧೮, ಸೆಪ್ಟಂಬರ್ ೫ ರಂದು (ಗೌರಿ ಹತ್ಯೆಯಾದ ದಿನ) ಎಲ್ಲರೂ ಸೇರಿ ಪ್ರತಿಭಟನೆಯನ್ನು ರಾತ್ರಿ ೯ ಗಂಟೆಗೆ ಪ್ರಾರಂಭಿಸಿ ಮುಂಜಾನೆ ೨ ಗಂಟೆಯವರೆಗೂ ನಡೆಯುತ್ತದೆ. ಈ ರಿತಿಯಾದ ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕರ ಸರಣಿ ಹತ್ಯೆಗಳನ್ನು ಖಂಡಿಸಿ

'ಸಮುದಾಯ' ಸಂಘಟನೆಯು ನಾಡಿನ ಮೂಲೆ-ಮೂಲೆಗಳಲ್ಲಿ ನಾಟಕ, ವಿಚಾರ ಸಂಕಿರಣ, ಚಳವಳಿ, ಜಾಥಾಗಳನ್ನು ಮಾಡುತ್ತಾ ಬಂದಿದೆ.

'ಸಮುದಾಯ'ದ 'ಕುರಿ' ನಾಟಕ

ಈ ನಾಟಕವು ಮೂಲತಃ ಹಿಂದಿಯ 'ಬಕ್ರಿ' ನಾಟಕದ ಅನುವಾದವಾಗಿದೆ. ಇದನ್ನು ಸೋಮೇಶ್ವರ ದಯಾಳ್ ಸಕ್ಸೇನ ಅವರು ರಚಿಸಿದ್ದಾರೆ. ಈ ನಾಟಕವನ್ನು ಕನ್ನಡಕ್ಕೆ ರವಿಕುಮಾರ್ ಅವರು ಅನುವಾದಿಸಿದ್ದಾರೆ. ಎಂ.ಎಸ್.ಸತ್ಯು ಅವರು ಸಮುದಾಯದಲ್ಲಿ ಈ ನಾಟಕವನ್ನು ನಿರ್ದೇಶಿಸಿದ್ದಾರೆ. ಈ ನಾಟಕಕ್ಕೆ ಸರೋದ್ ವಾದಕರಾದ ರಾಜೀವ್ ತಾರನಾಥ ಅವರು ಸಂಗೀತ ನಿರ್ದೇಶಕರಾಗಿದ್ದರು. ಈ ನಾಟಕವು ಸಹ ರಾಜಕಾರಣದ ಅಂಶವುಳ್ಳ ನಾಟಕವಾಗಿದೆ. 'ಕುರಿ' ನಾಟಕವು ರಾಜಕೀಯ ವಿಡಂಬನೆಯನ್ನು ಕುರಿತದ್ದು. ೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸಮಯದಲ್ಲಿ ಹೆಚ್ಚು ಚರ್ಚೆಗೆ ಒಳಗಾದ ನಾಟಕವೂ ಹೌದು.

ಇಂದಿನ ಎಲ್ಲಾ ಬೂರ್ಜ್ವಾ ಪಕ್ಷಗಳೂ ಗಾಂಧಿವಾದವನ್ನು ತನ್ನದೆಂದು ಘೋಷಿಸಿಕೊಂಡಿದೆ. ಕಾಂಗ್ರೆಸ್ಸಿನಿಂದ ಹಿಡಿದು ಇಂದಿನ ಜನಸಂಘಟನೆಗಳಿಗೆ ಗಾಂಧಿವಾದ ಆದರ್ಶದಂತೆ. ಈ ಎಲ್ಲಾ ಪಕ್ಷಗಳ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನೀತಿ ರೂಪಿತವಾಗಿರುವುದು ಗಾಂಧಿವಾದದ ಅಡಿಪಾಯದ ಮೇಲೆಯೇ. ಈ ಎಲ್ಲಾ ಪಕ್ಷಗಳೂ ಜನಗಳ ಸಂಕಷ್ಟಗಳನ್ನು ದೂರ ಮಾಡುವಲ್ಲಿ ಪೂರ್ಣವಾಗಿ ಸೋತಿವೆ. ಹೊಲೆ-ಮಾದಿಗರು ಹೆಸರಿನಲ್ಲಿ ಮಾತ್ರ 'ಹರಿಜನ'ರಿದ್ದಾರೆ ಭೂ ಹೀನರು ಇನ್ನೂ ಹೆಚ್ಚು ಬಡವರಾಗುತ್ತಿದ್ದಾರೆ. ಉದಾಹರಣೆಗೆ ಖಾದಿ ಬಟ್ಟೆ ಕೊಳೆತ ರಾಜಕಾರಣಿಗಳ ಮೈಯನ್ನು ಮಾತ್ರ ಮುಚ್ಚುತ್ತಿದೆ. ಹಾಗೆಯೇ ದೊಡ್ಡ ಬಂಡವಾಳಶಾಹಿ ಬೆಳೆಯುತ್ತಲೇ ಇವೆ. ಪ್ರಸ್ತುತ ಆರ್ಥಿಕ ಸ್ವಾವಲಂಬನೆ ಕನಸಿನ ಮಾತಾಗಿದೆ. ಈ ಉಪನ್ಯಾಸದ ಮೂಲ ಗಾಂಧಿವಾದದಲ್ಲಿ ಇದೆಯೆ! ಅಥವಾ ಇಂದಿನ ಗಾಂಧಿವಾದ ರಾಜಕಾರಣದಲ್ಲಿದೆಯೇ ಎಂದು ಸಕ್ಸೇನ ಅವರು ಕುರಿ ನಾಟಕದಲ್ಲಿ ಗಾಂಧಿಯನ್ನು ಮುಟ್ಟುವುದೇ ಇಲ್ಲ. ಅಥವಾ ಇಂದಿನ ಕಳ್ಳರು (ದರೋಡೆಗಾರರು ಎಂದರೆ ಹೆಚ್ಚು ಸಮಂಜಸ) ಹಳ್ಳಿಯ ಹೆಂಗಸೊಬ್ಬಳ ಕುರಿಯನ್ನು ಹಿಡಿದು ತಂದು 'ಇದು ಗಾಂಧಿ ಕುರಿ' ಎಂದು ಸಾರಿ ಸಭೆ ಮಾಡುತ್ತಾರೆ, ಭಜನೆ ಮಾಡುತ್ತಾರೆ, ಆಶ್ರಮ ಕಟ್ಟುತ್ತಾರೆ, ಕಳ್ಳರು ಪುಂಡರಾಗುತ್ತಿದ್ದಾರೆ. ಪುಡಾರಿಗಳು ರಾಜಕಾರಣಿಗಳಾಗುತ್ತಾರೆ, ಮಂತ್ರಿಗಳಾಗುತ್ತಾರೆ, ಮುಖ್ಯ ಮಂತ್ರಿಯಾಗುತ್ತಾರೆ, ರಾಜಕೀಯ ದರೋಡೆಯ ಎಲ್ಲಾ ಮಜಲನ್ನೂ ಏರಿದ ಮೇಲೆ ಬಕ್ರೀ ಮಾತೆಯ ಉಪಯುಕ್ತತೆ ಇನ್ನಿಲ್ಲ ಎನ್ನಿಸಿ ಬಿರಿಯಾನಿ ಮಾಡಿ ತಿಂದು ಬಿಡುತ್ತಾರೆ. ಅಂತೆಯೇ ಹಳ್ಳಿಯ ಕಲಿತ ಯುವಕನೊಬ್ಬ ಅನಕ್ಷರಸ್ಥ ಹಳ್ಳಿಗರನ್ನು ಎಚ್ಚರಿಸುತ್ತಾನೆ. ಬಿರಿಯಾನಿ ತಿಂದು ಭಾಷಣದಲ್ಲಿ ತೊಡಗಿದ್ದವನನ್ನು ಜನ ಸುತ್ತುಗಟ್ಟಿ ಸದೆಬಡಿಯುತ್ತಾರೆ.[೪] ಈ ಆಶಾವಾದೊಟ್ಟಿಗೆ ಕುರಿ ನಾಟಕ ಮುಗಿಯುತ್ತದೆ. ಹೀಗೆ ಈ ಕುರಿ ನಾಟಕವು ರಾಜಕಾರಣದ ವಿಡಂಬನೆಯಾಗಿ ಹೆಚ್ಚು ೧೯೭೮ರಲ್ಲಿ ಪ್ರಚಾರವನ್ನು ಗಿಟ್ಟಿಸಿಕೊಂಡಿತು. ಇದರ ಸಂಗೀತ ಗಾಯಕರು ಪಂಡಿತ್ ತಾರಾನಾಥ್

ಅವರ ಮಗ ಸರೋದ್ ರಾಜೀವ್ ತಾರಾನಾಥ್ ಮೂಲತಃ ಇಂಗ್ಲೀಷ್ ಉಪನ್ಯಾಸಕರು ಈ ನಾಟಕದಲ್ಲಿ ವಿವಾದ ಹಾಗೂ ಚರ್ಚೆಗೆ ಒಳಗಾದ ಅಂಶವೆಂದರೆ, ಈ ರಾಜಕಾರಣದ 'ಕುರಿ' ನಾಟಕದ ಸನ್ನಿವೇಶವೊಂದರಲ್ಲಿ ರಾಷ್ಟ್ರಗೀತೆಯ (ಧ್ವನಿ-ಟ್ಯೂನ್)ಯನ್ನು ಬಳಸಿದ್ದಾರೆ ಎಂಬುವುದಕ್ಕಾಗಿ ಕೆಲವರು ವಿರೋಧವನ್ನು ವ್ಯಕ್ತಪಡಿಸಿದರು. ಇದು ನಡೆದದ್ದು ಬೆಂಗಳೂರಿನ ನಾಟಕ ಪ್ರದರ್ಶನದ ಸಂದರ್ಭದಲ್ಲಿ. ಆದರೆ ದೇಶದ ಇತರೆ ನಗರಗಳಲ್ಲಿ ಈ ನಾಟಕ ಪ್ರದರ್ಶನ ಮಾಡಿದಾಗ ವಿರೋಧವು ವ್ಯಕ್ತವಾಗಿರಲಿಲ್ಲ.

'ಸಮುದಾಯ'ದ 'ಕೇಸರಿ ಬಿಳಿ ಹಸಿರು' ನಾಟಕ

ಟಿಪ್ಪು ಸುಲ್ತಾನ್‌ನ ೩೦೦ನೇ ಜನ್ಮ ಶತಮಾನೋತ್ಸವದ ಅಂಗವಾಗಿ ಬೆಂಗಳೂರಿನ 'ಸಮುದಾಯ' ಸಂಘಟನೆಯು ೧೯೯೯ರ ಏಪ್ರಿಲ್ ೨೮ರಂದು ದೇವನಹಳ್ಳಿಯಿಂದ ಶ್ರೀರಂಗಪಟ್ಟಣ(ಟಿಪ್ಪುವಿನ ರಾಜಧಾನಿ)ವರೆಗೆ ಜಾಥಾ ಹಮ್ಮಿಕೊಂಡಿತ್ತು. ಬೆಂಗಳೂರಿನ 'ಸಮುದಾಯ' ತಂಡದವರು ಬೊಳುವಾರು ಮಹಮದ್ ಕುಂಞ ಅವರು ರಚಿಸಿದ 'ಕೇಸರಿ ಬಿಳಿ ಹಸಿರು' ನಾಟಕವನ್ನು ಜಾಥಾದ ಭಾಗವಾಗಿ ಪ್ರದರ್ಶಿಸಿದರು. ದೇವನಹಳ್ಳಿಯಲ್ಲಿ ಏಪ್ರಿಲ್ ೨೮ರಂದು ಆರಂಭಗೊಂಡ 'ಸಮುದಾಯ'ದ ಜಾಥಾವು ನಂತರ ದೇವನಹಳ್ಳಿಯ ಸೂಲಿಬೆಲೆ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ ತಲುಪಿ ಏಪ್ರಿಲ್ ೩೦ರಂದು ಈ ನಾಟಕವನ್ನು ಪ್ರದರ್ಶನ ಮಾಡಿತು. ತದನಂತರ 'ಸಮುದಾಯ' ಜಾಥವು ಆನೇಕಲ್ ಮೂಲಕ ಶ್ರೀರಂಗಪಟ್ಟಣದಲ್ಲಿ ಸಮಾರೋಪಗೊಳ್ಳಬೇಕಿತ್ತು. ಮುಂದೆ ಆನೇಕಲ್‌ನಲ್ಲಿಯು ಮೇ ೧ರಂದು ಇದೇ ನಾಟಕದ ಪ್ರದರ್ಶನದ ತಯಾರಿ ನಡೆದಿತ್ತು. ಆದರೆ ಈ ನಾಟಕದ ಪ್ರದರ್ಶನವನ್ನು ಮೊದಲೇ ಗಮನಿಸಿದ ಆನೇಕಲ್ಲಿನ ಆರ್.ಎಸ್.ಎಸ್. ಸಂಘಟನೆಯವರು 'ಸಮುದಾಯ'ದ ಸಂಘಟಕರು ಹಾಗೂ ನಟರ ಮೇಲೆ ಏಕಾಏಕಿ ದಾಳಿ ಮಾಡಿದರು. ಈ ದಾಳಿಯಿಂದ 'ಸಮುದಾಯ'ದ ಗುಂಡಣ್ಣನವರ ತಲೆಗೆ ತೀವ್ರವಾಗಿ ಹೊಡೆತ ಬಿದ್ದಿತ್ತು, ಹಾಗೆ ಕೃಷ್ಣಕುಮಾರ್ ಯಾದವ್ ಕೈಗೆ ತೀವ್ರ ಪೆಟ್ಟು ಆಗಿತ್ತು. 'ಸಮುದಾಯ'ದ ಸಂಘಟಕರು ಮತ್ತು ನಟ-ನಟಿಯರ ಮೇಲಿನ ಹಲ್ಲೆಯನ್ನು ಖಂಡಿಸಿ, ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟ ನಂತರ, ಈ ಘಟನೆ ಮತ್ತು ನಾಟಕ ಹೆಚ್ಚು ಚರ್ಚೆ ಹಾಗೂ ವಿವಾದಕ್ಕೆ ಈಡಾಯಿತು. ನೇರವಾಗಿ ಬಿಜೆಪಿಯವರು ಇದರಲ್ಲಿ ಸೇರಿಕೊಂಡಿದ್ದರಿಂದ. 'ಬಿ.ಜೆ.ಪಿ' ಹಾಗೂ 'ಕಮ್ಯುನಿಸ್ಟ್' ಎಂಬ ಚರ್ಚೆಯ ಭಾಗವಾದದ್ದರಿಂದ ಈ ಪ್ರಕರಣದಲ್ಲಿ ಆರ್.ಎಸ್.ಎಸ್ ಅವರಿಗೆ ಶಿಕ್ಷೆ ಆಗಲಿಲ್ಲ. ಇದನ್ನು 'ರಾಜಕೀಯ ಗಲಭೆ' ಎಂದು ತಿರಸ್ಕರಿಸಲಾಯಿತು. ನಟ-ನಟಿಯರಿಗೆ ತೀವ್ರ ಪೆಟ್ಟು ಬಿದ್ದು ಆಸ್ಪತ್ರೆಗೆ ಸೇರಿದ್ದರಿಂದ ಈ ಜಾಥಾ ನಡೆಯಲಿಲ್ಲ. ಇದು 'ಸಮುದಾಯ' ಸಂಘಟನೆಯು ಹಿನ್ನೆಡೆಯಾಗಲು ಇಂಥ ಕಾರಣಗಳು ಸಹ ಇವೆ.

೧೯೯೫ರಲ್ಲಿ ಧಾರವಾಡದಲ್ಲಿ ಮಹಾಚೈತ್ರ ನಾಟಕದ ಪ್ರದರ್ಶನದ ಸಂದರ್ಭದಲ್ಲಿನ ನಟರ ಮೇಲಿನ ಹಲ್ಲೆ, ಬೆಂಗಳೂರಿನ ಕುರಿ ನಾಟಕ ಪ್ರದರ್ಶನದ ಸಮಯದಲ್ಲಿನ ಹಲ್ಲೆ, ಹಾಗೂ

ಅನೇಕಲ್‌ನಲ್ಲಿ ಟಿಪ್ಪುವಿನ ೩೦೦ನೆಯ ಶತಮಾನೋತ್ಸವದ ಅಂಗವಾಗಿ ಕೆಸರಿ ಬಿಳಿ ಹಸಿರು ನಾಟಕ ಪ್ರದರ್ಶನದ ವೇಳೆ ನಡೆದ ಹಲ್ಲೆಯಲ್ಲಿ ನಾನು ಉಳಿದಿದ್ದು ಹೆಚ್ಚು ಎನ್ನುತ್ತಾರೆ 'ಸಮುದಾಯ'ದ ಗುಂಡಣ್ಣ. ಈ ಘಟನೆಗಳ ಸಮಯದಲ್ಲಿ 'ಸಮುದಾಯ' ಸಂಘಟನೆವು ಬಲಿಷ್ಟ ಗೊಂಡಿರಲಿಲ್ಲ. ಹಾಗೂ 'ಸಮುದಾಯ'ಕ್ಕೆ ಬೆನ್ನೆಲುಬು ಆಗಿದ್ದ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಪಕ್ಷಗಳು ಈ ಹಲ್ಲೆಗಳ ವಿರುದ್ಧ ರಾಜ್ಯವ್ಯಾಪಿ ಹೋರಾಟ ನಡೆಸದೇ ಇರುವುದು, 'ಸಮುದಾಯ'ದಲ್ಲಿ ಹೊಸ ನಟ–ನಟಿಯರು ಹಿಂದೆ ಸರಿಯಲು ಕಾರಣವಾಗುತ್ತದೆ. ಜೊತೆಗೆ ಎಸ್.ಎಫ್.ಐ ರೀತಿಯಲ್ಲಿ ಬಂದಂತಹ ಎಪ್ಪತ್ತರ ದಶಕದ 'ಸಮುದಾಯ'ದ ಮುಖಂಡರಲ್ಲಿ ೨೧ನೇ ಶತಮಾನದ ಬದ್ಧತೆ ಕಡಿಮೆಯಾಯಿತು. ವಿದ್ಯಾರ್ಥಿಗಳು ಬೇರೆ ಬೇರೆ ಆಮಿಷಗಳಗೆ ಒಳಗಾದರು ಎಂಬ ಮಾತುಗಳು ಇವೆ. ಇದನ್ನು ಬದಲಾಯಿಸಿ ಸೇವಾಮನೋಭಾವ, ಕ್ರಾಂತಿಯ ವಿಚಾರಗಳು ಹಾಗೂ ರಾಜಕಾರಣದ ಚರ್ಚೆಗಳು ವಿದ್ಯಾರ್ಥಿ–ಯುವಜನರಲ್ಲಿ ಹೆಚ್ಚು ಪ್ರಕರತೆ ಉಂಟಾಗಬೇಕು. ಆಗ 'ಸಮುದಾಯ' ಎಸ್.ಎಫ್.ಐ, ಡಿ.ವೈಎಫ್.ಐ ರೈತ–ಕಾರ್ಮಿಕ–ಮಹಿಳಾ ಇತರೆ ಎಲ್ಲಾ ಸಂಘಟನೆಗಳು ಗಟ್ಟಿಗೊಳ್ಳುತ್ತವೆ ಎಂಬುದು 'ಸಮುದಾಯ'ದ ಹಿರಿಯ ಸಂಗಾತಿಗಳ ಅಭಿಮತ.

'ಸಮುದಾಯ'ದ 'ಸುಳ್ಳಾಗಿ ಕಾಡಿತೋ ನೋಡಾ' ನಾಟಕ

ಕೆ.ಜಿ.ಎಫ್ 'ಸಮುದಾಯ' ಘಟಕದ ವತಿಯಿಂದ 'ಸುಳ್ಳಾಗಿ ಕಾಡಿತೋ ನೋಡಾ' ನಾಟಕವನ್ನು ೧೯೮೬ರಲ್ಲಿ ಪ್ರದರ್ಶಿಸಲಾಯಿತು. ರಂಗಮಿತ್ರ ಅವರಿಂದ ಈ ನಾಟಕವನ್ನು ರಚಿತವಾಯಿತು. ಈ ನಾಟಕದ ನಿರ್ದೇಶನವನ್ನು ಪ್ಲೋರಾ ಹಾಗೂ ಜಯಶ್ರೀ ಅವರು ಮಾಡಿದ್ದರು. 'ಸತ್ಯಹರಿಶ್ಚಂದ್ರ' ರಾಜನು ಸತ್ಯಕ್ಕಾಗಿ ತನ್ನ ಹೆಂಡತಿ ಮತ್ತು ಮಗನನ್ನು ಮಾರಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ 'ಸಮುದಾಯ'ದ ಕೆ.ಜಿ.ಎಫ್ ತಂಡದಿಂದ ಈ ನಾಟಕದಲ್ಲಿ ಸತ್ಯ ಹರಿಶ್ಚಂದ್ರನನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಈ ನಾಟಕ ಪ್ರದರ್ಶನದ ನಂತರ ನಾಟಕ ನೋಡಿದವರು ಈ ನಾಟಕದ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಇದು ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಎಂಬುದು ಅವರ ವಿಚಾರವಾಗಿತ್ತು. ಈ ಚರ್ಚೆಗೆ ಕಾರಣವಾದ ನಾಟಕದ ಕೆಲವು ಅಂಶಗಳನ್ನು ಈ ಕೆಳಗಿನಂತೆ ಗಮನಿಸಬಹುದು.

೧. ಈ ನಾಟಕವನ್ನು ಮಹಿಳಾ ದೃಷ್ಟಿಕೋನದ ನೆಲೆಯಲ್ಲಿ ಚಿತ್ರಿಸಲಾಗಿದೆ. ಸತ್ಯಕ್ಕಾಗಿ ಸತ್ಯಹರಿಶ್ಚಂದ್ರ ತನ್ನ ಹೆಂಡತಿಯನ್ನು ಮಾರಿದ್ದು ಮಹಿಳಾ ವಿರೋಧಿ ನೆಲೆಯಾಗಿದೆ. ಎಂಬುವುದನ್ನು 'ಸಮುದಾಯ' ತಂಡ ಪ್ರದರ್ಶಿಸಿದ್ದು ಪ್ರೇಕ್ಷಕರಿಂದ ವಿವಾಧಾತ್ಮಕ ಚರ್ಚೆಗೆ ಕಾರಣವಾಯಿತು.

೨. ಸತ್ಯಹರಿಶ್ಚಂದ್ರ ತನ್ನ ಮಗನ ಬಗ್ಗೆ ಯೋಚಿಸಲಿಲ್ಲವೇ ಎಂಬ ಪ್ರಶ್ನೆಯನ್ನು ಈ ನಾಟಕದಲ್ಲಿ ಎತ್ತಿದ್ದು ಕೂಡ ವಿವಾದಾತ್ಮಕ ಚರ್ಚೆಗೆ ಕಾರಣವಾಯಿತು.

೩. ವಿಶ್ವಾಮಿತ್ರನ ಕುತಂತ್ರವನ್ನು ಹಾಗೂ ಸುಳ್ಳನ್ನು ಸತ್ಯವೆಂದು ಹರಿಶ್ಚಂದ್ರ ನಂಬಿದ್ದು ಸರಿಯೇ ಎಂಬ ಪ್ರಶ್ನೆ ಕೂಡ ವಿವಾಧಾತ್ಮಕ ಚರ್ಚೆಗೆ ಕಾರಣವಾಯಿತು.

ಹೀಗೆ ಸತ್ಯಹರಿಶ್ಚಂದ್ರನ ಸತ್ಯದ ವಿವಿಧ ಆಯಾಮಗಳ ಹುಡುಕಾಟದ ಪ್ರಶ್ನೆಗಳೊಂದಿಗೆ ರಾಜ್ಯ, ಹೆಂಡತಿ, ಮಗು, ಸಮಾಜ, ಶೋಷಣೆ ಮುಂತಾದ ಅಂಶಗಳು ತನ್ನ ಮೇಲೆ ಏರಿಕೆಯಾಗಿದ್ದರೂ ಪ್ರತಿಭಟನೆ ಮನೋಭಾವ ಇರಲಿಲ್ಲವೇ? ಎಂಬ ಪ್ರಶ್ನೆಗಳು ಈ 'ಸುಳ್ಳಾಗಿ ಕಾಡಿತೋ ನೋಡಾ' ಎಂಬ ನಾಟಕವನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಸತ್ಯ–ಅಸತ್ಯ, ಅರ್ಧಸತ್ಯ, ಪೂರ್ಣಸತ್ಯಗಳ ನಡುವಿನ ಸಂಘರ್ಷಗಳ ತೊಳಲಾಟಗಳನ್ನು ವಿಡಂಬನೆ ಮಾಡಿ, ಸತ್ಯಹರಿಶ್ಚಂದ್ರನ ನಿಜ ಚರಿತ್ರೆಯನ್ನು ಮರೆಮಾಚಿ, ಅವನನ್ನು ದೇವತಾ ಮನುಷ್ಯನು ಎಂದು ಬಿಂಬಿಸುವ ಅಂಶಗಳನ್ನು ವಿರೋಧಿಸಿರುವುದು ಈ ನಾಟಕದ ಗಂಭೀರ ಪ್ರಯತ್ನವೇ ಆಗಿದೆ. ಆದ್ದರಿಂದ ಕೆ.ಜಿ.ಎಫ್ 'ಸಮುದಾಯ' ತಂಡದ ನಾಟಕ ನೋಡಿದ ಕಲಾವಿದರು, ಆಸಕ್ತರು ಅದರಲ್ಲೂ ಸಂಪ್ರದಾಯವಾದಿಗಳು ಈ ನಾಟಕದ ಅಂಶಗಳು ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಎಂದು 'ಸಮುದಾಯ'ದ ಸಂಘಟಕರೊಡನೆ ಚರ್ಚೆಗೆ ಇಳಿಯುತ್ತಾರೆ. ಈ ಚರ್ಚೆಯಲ್ಲಿ ಪಾಲುಗೊಂಡಿದ್ದ ವೀಕ್ಷಕರಿಗೆ 'ಸಮುದಾಯ'ದ ಸಂಘಟಕರಾದ ಚೊಕ್ಕಲಿಂಗಂ, ಅಚ್ಯುತ್, ಕೃಷ್ಣಮೂರ್ತಿ ಮುಂತಾದವರು ಅವರ ಪ್ರಶ್ನೆಗಳಿಗೆ ಉತ್ತರ ನೀಡಿ ವಿವಾದವನ್ನು ಬಗೆಹರಿಸಿಕೊಳ್ಳಲಾಯಿತು.

'ಸಮುದಾಯ'ದ 'ಅಕ್ಷರ' ನಾಟಕ

ಈ ನಾಟಕವನ್ನು ಗುಲಬರ್ಗಾ 'ಸಮುದಾಯ' ಘಟಕದಿಂದ ಪ್ರದರ್ಶನ ಮಾಡಲಾಯಿತು. ಈ ನಾಟಕವನ್ನು 'ಸಮುದಾಯ'ದ ವಿಶ್ರಾಂತ ಅಧ್ಯಕ್ಷರಾದ ಆರ್.ಕೆ.ಹುಡುಗಿ ಅವರು ರಚಿಸಿದ್ದಾರೆ. ಈ ನಾಟಕವನ್ನು 'ಸಮುದಾಯ'ದ ಸಂಘಟಕರಾದ ಶಂಕರಯ್ಯ. ಆರ್.ಘಂಟಿ ಅವರು ನಿರ್ದೇಶನ ಮಾಡಿದ್ದಾರೆ. ಈ ಅಕ್ಷರ ನಾಟಕದ ಸಾರಾಂಶ ಆರ್.ಕೆ.ಹುಡುಗಿ ಅವರು ಹೇಳವಂತೆ 'ಅಕ್ಷರ' ಎಂದರೆ ಶಿಕ್ಷಣ ಅಲ್ಲ 'ಅಕ್ಷರ' ಎಂದರೆ 'ಕಲಿಯಬೇಕು' ಅಥವಾ ಅಂಬಲ, ಆಸಕ್ತಿ ಎಂಬ ಅರ್ಥದಲ್ಲಿ ಅಂದರೆ ಹೊಸ ಜ್ಞಾನವನ್ನು ಕಲಿಯಬೇಕು ಎಂದು ಅಕ್ಷರ ನಾಟಕವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಮಹಾಭಾರತದಲ್ಲಿ ಶೂದ್ರ ಏಕಲವ್ಯ ಗುರುವಿಲ್ಲದೇ ಬಿಲ್ಲು ವಿದ್ಯೆಯನ್ನು ಕಲಿತಿರುವುದನ್ನು ಅವನ ಕಲಿಯಬೇಕೆಂಬ ಅಂಬಲದಿಂದ. ಈ ಅಂಬಲವನ್ನು ಮೊಟಕು ಮಾಡಲು ಬ್ರಾಹ್ಮಣಶಾಹಿತ್ವವು ಕ್ಷತ್ರೀಯನಾದ ಅರ್ಜುನನು ತನ್ನ ಗುರುಗಳಾದ ದ್ರೋಣಚಾರ್ಯ(ಬ್ರಾಹ್ಮಣ) ಅವರನ್ನು ಬಳಸಿಕೊಂಡು ಏಕಲವ್ಯನಿಗೆ ಗುರುದಕ್ಷಿಣೆ ಎಂಬ ತಂತ್ರಗಾರಿಕೆ ನೋಡುತ್ತೇವೆ. ಈ ಮೂಲಕ ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯ ಮೂಲಕ ಅಕ್ಷರ(ವಿಧ್ಯೆ) ಕಲಿಯಬೇಕು ಎಂಬ ಅವಕಾಶ ಇಲ್ಲದ ಹಾಗೇ ಮಾಡಿದರು. ಅಲ್ಲದೇ ಈ ಅಂಶದ ರೀತಿಯಲ್ಲಿ ರಾಮಾಯಣದಲ್ಲಿಯೂ ಸಹ ಶಂಬುಕನ ಜ್ಞಾನದ ತಪಸ್ಸಿನ್ನು ಸಹಿಸಲಾಗದೆ ಬ್ರಾಹ್ಮಣಶಾಹಿಗಳು ರಾಮನನ್ನು(ಕ್ಷತ್ರಿಯ) ಬಳಸಿಕೊಂಡು ಶಂಬುಕನನ್ನು ಕೊಲೆ ಮಾಡಿದ್ದು, ವರ್ಣಶ್ರಮ ಪದ್ಧತಿ ಆಚರಣೆಯ ಹಿನ್ನೆಲೆಯಲ್ಲಿ ಶೂದ್ರರಿಗೆ

ವಿದ್ಯೆ ನಿಷೇಧ ಎಂಬ ಸಾಂಪ್ರದಾಯಿಕ ಮೌಢ್ಯ ಪದ್ಧತಿಯ ಆಚರಣೆಯನ್ನು ಮಾಡಿರುವುದನ್ನು ಪ್ರಾಚೀನ ಕಾವ್ಯ, ಪುರಾಣ, ಚರಿತ್ರೆಯ ಮೂಲಕ ತಿಳಿಯಬಹುದಾಗಿದೆ.

ಈ ಮೇಲಿನ ಅಂಶವನ್ನು ಹೊಂದಿರುವ ಅಕ್ಷರ ನಾಟಕವನ್ನು ಗುಲಬರ್ಗಾ 'ಸಮುದಾಯ'ದ ಘಟಕದ ವತಿಯಿಂದ ಅಯ್ಯಾಳಹಳ್ಳಿ ಸುತ್ತಮುತ್ತ ಎರಡು ಮೂರು ಹಳ್ಳಿಗಳಲ್ಲಿ ಪ್ರದರ್ಶನ ಮಾಡುವಾಗ ಅಲ್ಲಿನ ಆರ್.ಎಸ್.ಎಸ್ ಸಂಘಟನೆಯವರು ಈ ನಾಟಕವನ್ನು ತಡೆದರು. ಆರ್.ಕೆ.ಹುಡುಗಿ ಹಾಗೂ ಶಂಕರಯ್ಯ ಆರ್.ಘಂಟಿ ಅವರೊಂದಿಗೆ ಆರ್.ಎಸ್.ಎಸ್ ಸಂಘಟಕರು ಚರ್ಚೆಗಿಳಿದು ವಿವಾದವನ್ನು ಸೃಷ್ಟಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಆರ್.ಎಸ್.ಎಸ್ ಸಂಘಟಕರಿಗೆ ನಾಟಕದಲ್ಲಿದ್ದ ಗೊಂದಲಗಳ ಬಗ್ಗೆ ತಮ್ಮ ಭಾಷಣದ ಮೂಲಕ ಉತ್ತರ ನೀಡಿದ್ದರು.

'ಸಮುದಾಯ'ದ 'ಬೆಲ್ಚಿ' ನಾಟಕ

ಈ ನಾಟಕವನ್ನು ಸಿ.ಜಿ.ಕೃಷ್ಣಸ್ವಾಮಿ ಅವರು ರಚಿಸಿ ನಿರ್ದೇಶಿಸಿದ್ದಾರೆ. ೧೯೭೮ರ 'ಸಮುದಾಯ'ದ ಹೊಸ ಮೌಲ್ಯಗಳತ್ತ 'ಸಮುದಾಯ' ಜಾಥಾದ ಪ್ರಮುಖ ನಾಟಕ 'ಬೆಲ್ಚಿ'ಯಾಗಿದೆ. ಈ ನಾಟಕವು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ೧೬೦೦ಕ್ಕೂ ಹೆಚ್ಚು ಪ್ರದರ್ಶನ ಕಂಡ ನಾಟಕವಾಗಿದೆ. ಅಲ್ಲದೇ ಈ ನಾಟಕ ರಾಜ್ಯ ಮಟ್ಟದ ಜಾಥಾದಲ್ಲಿ ಒಂದು ತಿಂಗಳ ಕಾಲ ಪ್ರದರ್ಶನ ಕಂಡ ನಾಟಕವಾಗಿದೆ. ಎರಡು ವಿಭಾಗದಲ್ಲಿ ಅಂದರೆ ಬೀದರ್ ಮತ್ತು ಕೆ.ಜಿ.ಎಫ್ ಎರಡು ತಂಡಗಳಿಂದ ಈ ನಾಟಕಕ್ಕೆ ಅಭೂತ ಪೂರ್ವ ಜನಮನ್ನಣೆ ಸಿಕ್ಕಿತು. ಈ ನಾಟಕ ಸಾರಾಂಶವೆನೆಂದರೆ ಉತ್ತರ ಪ್ರದೇಶದ ಬೆಲ್ಚಿ ಗ್ರಾಮದಲ್ಲಿ ೭ ಜನ ದಲಿತರನ್ನು ಸಜೀವವಾಗಿ ಸುಟ್ಟು ಹಾಕಿದ ಪ್ರಕರಣವಾಗಿದೆ. ೧೯೭೭ರಲ್ಲಿ ಈ ಘಟನೆ ನಡೆದಿದು ಭಾರತದದ್ಯಾಂತ ಹೆಚ್ಚು ಚೆರ್ಚೆಯಾದ ಘಟನೆಯಾಗಿದ್ದು, ದೇಶದಲ್ಲಿ ಸ್ವಾತಂತ್ರ್ಯ ಬಂದರೂ ಜಮೀನ್ದಾರಿ ವ್ಯವಸ್ಥೆಯು ದಲಿತರನ್ನು ಹೀಗೆ ಹೀನಾಯವಾಗಿ ಪ್ರಾಣಿಗಳಂತೆ ಸುಟ್ಟಿದ್ದನ್ನು ಈ ನಾಟಕದಲ್ಲಿ ಕಾಣಬಹುದು. ಈ ಪ್ರಕರಣ ಅಂದಿನ ರಾಜಕಾರಣಿಗಳ ಕೆಸರು ಎರಚಾಟದ ಸನ್ನಿವೇಶವನ್ನು ಮನೋಜ್ಞವಾಗಿ ಸಿ.ಜಿ.ಕೆ ಅವರು ಈ ನಾಟಕದಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ನಾಟಕವು 'ಸಮುದಾಯ' ಜಾಥಾದಲ್ಲಿ ಹಲವಾರು ಕಡೆ ಚರ್ಚೆ ಹಾಗೂ ವಿವಾದಕ್ಕೆ ಒಳಗಾಗಿದ್ದು ಕಾಣುತ್ತೇವೆ. ೧೯೭೮ರಲ್ಲಿ ಈ ಜಾಥಾವು ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಗೆ ಬಂದಾಗ ನಾಟಕ ಜಾಥಾ, ಪ್ರದರ್ಶನದ ಸಂದರ್ಭದಲ್ಲಿ ಈ ನಾಟಕವನ್ನು ತಡೆಯಲು ಆರ್.ಎಸ್.ಎಸ್ ಕಾರ್ಯಕರ್ತರು ಮುಂದಾದರು. ಆಗ 'ಸಮುದಾಯ' ಸಂಘಟಕರು ಚರ್ಚೆಗೆ ಇಳಿದಾಗ, ದಲಿತರನ್ನು ಯಾರ ಕೊಲೆ ಮಾಡಲಿಲ್ಲ. ಇದನೆಲ್ಲ ನೀವೆ ಸುಮ್ಮನೆ ತೋರಿಸುತ್ತಿದ್ದಿರಿ. ನಾಟಕ ಆಡಬೇಡಿ ಎಂದು ತಡೆಯಲು ಮುಂದಾದರು. ಈ ಜಾಥಾ ಸಂದರ್ಭದಲ್ಲಿ ಆರ್.ಎಸ್.ಎಸ್ ಒಂದು ವಿಷವೃಕ್ಷ ಎಂಬ ಕಿರು ಹೊತ್ತಿಗೆಯನ್ನು ಮಾರಾಟ ಮಾಡಬಾರದು ಎಂದು ಜಗಳಕ್ಕೆ ಮುಂದಾದರು. ಅವರ ಜೊತೆ ಚರ್ಚೆಯ ನಂತರ ಬಹಿರಂಗ ಸಭೆಯಲ್ಲಿ ಆರ್.ಕೆ.ಹುಡುಗಿ ಹಾಗೂ ಇತರರು ಉತ್ತರ ನೀಡಿದ್ದು ಬಹು ಮುಖ್ಯ ಅಂಶವಾಗಿರುತ್ತದೆ. ಹೀಗೆ ಸಾಗರದಲ್ಲೂ ಪ್ರಶ್ನೆಗಳ ಪತ್ರವನ್ನು

'ಕರ ಸೇವಕರು' ಕೊಟ್ಟು ಉತ್ತರ ನೀಡುವಂತೆ ಕೆ.ಜಿ.ಎಫ್‌ನ 'ಸಮುದಾಯ' ತಂಡದವರಿಗೂ ಕೂಡ ಹೇಳಿದ್ದರು. ಈ ಕರ ಪತ್ರಕ್ಕೆ ಉತ್ತರಿಸಿದ ಪ್ರಸನ್ನ ಹಾಗೂ ಎಸ್.ಮಾಲತಿ ಇತರರು ಚರ್ಚೆಗೆ ಇಳಿದರು. ಹೀಗೆ 'ಬೆಲ್ಚಿ' ನಾಟಕವು ಹೆಚ್ಚು ವಿವಾದವನ್ನು ಸೃಷ್ಟಿಸಿದೆ.

ಹೀಗೆ 'ಸಮುದಾಯ' ಸಾಂಸ್ಕೃತಿಕ ರಂಗ ಚಳವಳಿಯಲ್ಲಿ ಚರ್ಚೆ ಹಾಗೂ ವಿವಾದಕ್ಕೆ ಒಳಗಾದ ನಾಟಕಗಳು ಇನ್ನೂ ಹಲವು ಇವೆ. ಏಕೆಂದರೆ 'ಸಮುದಾಯ'ದ ಬಹುತೇಕ ನಾಟಕಗಳು ಪ್ರಸ್ತುತ ಸಮಾಜದಲ್ಲಿನ ಶೋಷಣೆಯ ಹಾಗೂ ಈ ನಾಟಕಗಳು ಬೀದಿ ರಂಗಭೂಮಿಯ ಮೂಲಕ ರಂಗ ಚಳವಳಿಗಾಗಿ ರೂಪಗೊಂಡಿದೆ. ಈ ಚಾರಿತ್ರಿಕ ಘಟನೆಗಳನ್ನು ಇಟ್ಟುಕೊಂಡು ನಾಟಕಗಳ ರಚನೆ ಅಥವಾ ಅನುವಾದ ಅಂಶಗಳನ್ನು ಒಳಗೊಂಡ ನಾಟಕಗಳಾಗಿವೆ. ಈ ನಾಟಕಗಳು ವಿವಿಧ ದೇಶದ ಹಾಗೂ ವಿವಿಧ ರಾಜ್ಯಗಳಿಂದ ಅನುವಾದಗೊಂಡ ನಾಟಕಗಳ ಆಶಯ ಮತ್ತು ಧೋರಣೆಗಳು ಶೋಷಣೆ, ಬಂಡವಾಳಶಾಹಿ ಜೀತಪದ್ಧತಿ, ಜಮೀನ್ದಾರಿ ಪದ್ಧತಿ, ಧರ್ಮ, ಜಾತಿ ರಾಜಕಾರಣದಂತಹ ಅಂಶಗಳನ್ನು ಈಗಲೂ ನಾಡಿನಲ್ಲಿ ಹೊಂದಿರುವುದರಿಂದ 'ಸಮುದಾಯ' ದಂಥಹ ನಾಟಕಗಳು ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲದಲ್ಲಿ ಚರ್ಚೆಗೆ ಒಳಗಾಗುತ್ತದೆ. 'ಸಮುದಾಯ'ದ ರಂಗ ಚಳವಳಿಯನ್ನು ಮುಂದುವರಿಸಲು ಸಹಕರಿಸುತ್ತವೆ.

೬.೩. ಕರ್ನಾಟಕ ಕಮ್ಯುನಿಸ್ಟ್ ಚಳವಳಿಗಳು ಹಾಗೂ 'ಸಮುದಾಯ' ತಾತ್ವಿಕ ಚಿಂತನೆ

ಸ್ವಾತಂತ್ರ್ಯ ಚಳವಳಿಯಲ್ಲಿ ಕಮ್ಯುನಿಸ್ಟ್ ಚಳವಳಿ ಹಾಗೂ ೧೯೧೭ರ ರಷ್ಯಾ ಸಮಾಜವಾದಿ ಕ್ರಾಂತಿಯ ಪ್ರಭಾವಕ್ಕೆ ಒಳಗಾದ ಭಾರತದ ವಿದ್ಯಾರ್ಥಿ-ಯುವಜನ, ಪ್ರಾಧ್ಯಾಪಕರು ಮತ್ತು ಬುದ್ಧಿಜೀವಿವರ್ಗದವರ ಕಮ್ಯುನಿಸ್ಟ್ ಚಳವಳಿಗೆ ಪ್ರೇರಣೆಯಾಯಿತು. ಭಾರತದ ಸ್ವಾತಂತ್ರ್ಯ ಚಳವಳಿಯ 'ಸಮಾನತೆ'ಗೆ ಮಾದರಿಯಾದ ಸಮಾಜವಾದ ಬರಬೇಕು ಎಂಬ ಆಶಯವನ್ನು ಇಟ್ಟುಕೊಂಡು ಎಂ.ಎನ್.ರಾಯ್, ಎಸ್.ಎ.ಡಾಂಗೆ, ಹರಿಕಿಶನ್‌ಸಿಂಗ್ ಸುರ್ಜಿತ್, ಎ.ಕೆ.ಗೋಪಾಲನ್, ಬಿ.ಟಿ.ರಣದಿವೆ, ಬಸವಪೋನ್ನಯ್ಯ, ಪಿ.ಸುಂದರಯ್ಯ, ಇ.ಎಂ.ಎಸ್.ನಂಬೂದರಿ ಪಾಡ್ ಮುಂತಾದವರು ಕಮ್ಯುನಿಸ್ಟ್ ಪಕ್ಷ ಹಾಗೂ ಕಮ್ಯುನಿಸ್ಟ್ ಚಳವಳಿಯ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಮುಂದಾಗಿದನ್ನು ಕಾಣುತ್ತೇವೆ. ಇದರ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಚಳವಳಿಯ ಅಧೀನವಾಗಿ ಸಾಂಸ್ಕೃತಿಕ ರಂಗ ಚಳವಳಿಯನ್ನು ಕಟ್ಟಲು ಕಾರ್ಯನಿರ್ವಹಿಸುತ್ತಿದೆ. ಕವಿ ಮುನ್ಷಿ ಪ್ರೇಮ್‌ಚಂದ್ ಅವರ ನೇತೃತ್ವದಲ್ಲಿ ಇಪ್ಟಾ(ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್) ಎಂಬ ರಂಗಭೂಮಿಯ ಮೂಲಕ ೧೯೩೦ರ ಸಂದರ್ಭದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಬೇಕೆನ್ನುವ ಆಶಯ ಹೊಂದಿತ್ತು. ಇದರ ಭಾಗವಾಗಿ ಇಪ್ಟಾ ಭಾರತದಾದ್ಯಂತ ತನ್ನ ಸಾಂಸ್ಕೃತಿಕ ಚಳವಳಿಯನ್ನು ಆರಂಭಿಸಿತು. ಹೀಗೆ ಸ್ವಾತಂತ್ರ್ಯ ನಂತರದರಲ್ಲಿ ೧೯೫೧ರಲ್ಲಿ ತೆಲಂಗಾಣ ಹೋರಾಟ ಮುಕ್ತಾಯವಾಗಿದ್ದು ನೋಡುತ್ತೇವೆ. ಇದೇ ಸಂದರ್ಭದಲ್ಲಿ ಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷದ ಮುಖಂಡರ ನಡುವೆ ಒಡುಕು ಪ್ರಾರಂಭವಾಯಿತು. ನಂತರ ೧೯೬೨ರ ಭಾರತ-ಚೀನಾ ಯುದ್ಧದ ನಂತರ ಭಾರತೀಯ

ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ)ನಲ್ಲಿ ಮೂರು ಕಮ್ಯುನಿಸ್ಟ್ ಪಕ್ಷಗಳಾಗಿ ವಿಂಗಡನೆಯಾದವು. ಇದೇ ರೀತಿಯಲ್ಲಿ ಕಾಂಗ್ರೆಸ್ ಪಕ್ಷವು ಎರಡು ಪಕ್ಷಗಳಾಗಿ ವಿಂಗಡನೆಯಾಗಿದ್ದನ್ನು ೬೦ರ ದಶಕದಲ್ಲಿ ಚಾರಿತ್ರಿಕವಾಗಿ ವಿಮರ್ಶೆಗೆ ಒಳಪಡಿಸಿದರೇ ಗೋಚರಿಸುತ್ತದೆ.

ಇದೇ ಸಂದರ್ಭದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದ ಕಮ್ಯುನಿಸ್ಟ್ ಚಟುವಟಿಕೆಗಳು ಹಾಗೂ ಚಳವಳಿಗಳು ಪ್ರಾರಂಭವಾಗಿ, ಹೆಚ್ಚು ಬೆಳವಣಿಗೆ ಆಗಿದ್ದು ಎಪ್ಪತ್ತರ ದಶಕದಲ್ಲಿ ಎಂದು ಹೇಳಬಹುದಾಗಿದೆ. ೧೯೭೦ ರಿಂದ ೮೦ರ ದಶಕದವರೆಗೆ ಕಮ್ಯುನಿಸ್ಟ್ ಚಳವಳಿಯು ಅಂದರೆ 'ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)' ಸಿ.ಪಿ.ಐ(ಎಂ) ಪಕ್ಷದ ಸಾಮೂಹಿಕ ಸಂಘಟನೆಗಳು ಸ್ಥಾಪನೆಗೊಂಡು ತೀವ್ರವಾಗಿ ಬೆಳೆಯುತ್ತವೆ.೫ ಅಲ್ಲದೇ ಮೊದಲ ಬಾರಿಗೆ ೧೯೭೦ರಲ್ಲಿ ಹುಟ್ಟಿಕೊಂಡ ಕರ್ನಾಟಕದ ಭಾರತ ವಿದ್ಯಾರ್ಥಿ ಪೇಡರೇಷನ್(ಎಸ್.ಎಫ್.ಐ) ಇದರ ನಂತರ ೧೯೭೫ರಲ್ಲಿ ಪ್ರಾರಂಭವಾದ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಪ್ರಾರಂಭವಾಗಿ, ಕಮ್ಯುನಿಸ್ಟ್ ಎಲ್ಲಾ ರೈತ–ಕಾರ್ಮಿಕ–ವಿದ್ಯಾರ್ಥಿ–ಯುವಜನ–ಮಹಿಳೆ–ಕೂಲಿಕಾರರ ಸಂಘಟನೆಗಳ–ಸರ್ಕಾರಿ ನೌಕರ ಸಂಘಟನೆ, ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆ, ಪಂಚಾಯಿತಿ ನೌಕರರ ಸಂಘಟನೆ, ಹಾಲು ಒಕ್ಕೂಟದ ಸಂಘಟನೆ, ಬೀಡಿ ಕಾರ್ಮಿಕ ಸಂಘಟನೆ, ಮೀನುಗಾರರ ಸಂಘಟನೆ, ಬೀದಿ ಬದಿ ವ್ಯಾಪಾರಿಗಳ ಸಂಘಟನೆ, ಫ್ರೀ ಸಾಪ್ಟ್ ವೇರ್ ಮೂವ್‌ಮೆಂಟ್ಸ್(ಐಟಿ.ಬಿಟಿ) ಸಂಘಟನೆ, ಎಲ್.ಐ.ಸಿ.ಯೂನಿಯನ್, ಬ್ಯಾಂಕ್ ಎಂಪ್ಲಾಯರ್ಸ್ ಸಂಘಟನೆ ಹಾಗೂ ಆಟೋ ಮತ್ತು ಟ್ಯಾಕ್ಸಿಗಳ ಡ್ರೈವರ್ ಸಂಘಟನೆ, ರಾಜ್ಯ ರಸ್ತೆ ಸಾರಿಗೆ ಸಂಘಟನೆ, ಬುಡಕಟ್ಟು–ಆದಿವಾಸಿ ಹಕ್ಕುಗಳ ಸಂಘಟನೆ, ಈ ಎಲ್ಲಾ ಸಂಘಟನೆಗಳ ಜೊತೆಗೆ ಕಳೆದ ದಶಕದಿಂದ ಕಾರ್ಯ ಸ್ವರೂಪಕ್ಕೆ ನೂತನವಾಗಿ ದಲಿತ ಹಕ್ಕುಗಳ ಸಮಿತಿ ಸೇರಿಕೊಂಡಿತು. ಹೀಗೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಸಿ.ಪಿ.ಐ(ಎಂ)ನ ಸಮೂಹಿಕ ಸಂಘಟನೆಗಳನ್ನು ಬಲಪಡಿಸಲು ಸಾಂಸ್ಕೃತಿಕವಾಗಿ 'ಸಮುದಾಯ' ಬೆಂಬಲವಾಗಿ ನಿಂತಿದ್ದು ಕಾಣುತ್ತೇವೆ.

ಎಪ್ಪತ್ತರ ದಶಕದಲ್ಲಿ ಪ್ರಾರಂಭವಾದ 'ಸಮುದಾಯ', ದಲಿತ–ಬಂಡಾಯ ಈ ಮೂರು ಸಂಘಟನೆಗಳು, ಚಳವಳಿಗಳ ದಿಕ್ಕನ್ನು ಬದಲಾಯಿಸಿದವು ಎಂದು ಚಾರಿತ್ರಿಕವಾಗಿ ಗುರುತಿಸಲಾಗಿದೆ. ಏಕೆಂದರೆ ೧೯೭೫ರಲ್ಲಿ 'ಸಮುದಾಯ', ೧೯೭೭ರಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ೧೯೭೯ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಪ್ರಾರಂಭವಾದವು. ಹೀಗೆ ಸಂಘಟನೆಗಳು ಒಂದಕ್ಕೊಂದು ಪೂರಕ ಸಂಬಂಧಗಳನ್ನು ಇಟ್ಟುಕೊಂಡು ಸ್ಥಾಪನೆಯಾದವು. ಹೀಗೆ 'ಸಮುದಾಯ'ವು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅಳವಡಿಸಿಕೊಂಡಿದ್ದರೂ ಇದರಲ್ಲಿ ಲೋಹಿಯಾ ಸಮಾಜವಾದಿಗಳು ಹಾಗೂ ಅಂಬೇಡ್ಕರ್–ಪೆರಿಯಾರ್ ಚಿಂತನೆಯವುಳ್ಳವರು ಇದ್ದರು. ಜೊತೆಗೆ ಕಮ್ಯುನಿಸ್ಟ್ ಚಿಂತನೆಗಳು ಹೆಚ್ಚು ಪ್ರೇರಿತವಾಗಿ ಬೆಳೆಯುತ್ತಿದ್ದ ಕಾಲವೆಂದು ಹೇಳುತ್ತೇವೆ. 'ಸಮಾಜವಾದ' ಸಿದ್ಧಾಂತ ಎಲ್ಲಾ ರಾಜಕಾರಣ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನ ಎಲ್ಲೆಯನ್ನು ವಿಸ್ತರಿಸಿಕೊಂಡಿತು.

ಎಪ್ಪತ್ತರ ದಶಕದ ಚಳವಳಿಯಲ್ಲಿ 'ಸಮಾಜವಾದ'ದ ಕ್ರಾಂತಿ ಹಾಗೂ ಸಮಾನತೆಯ ಆಶಯವನ್ನು ಇಟ್ಟುಕೊಂಡಂತಹ ಹೋರಾಟಗಾರರು ಪ್ರಚಲಿತಕ್ಕೆ ಬಂದರು. 'ಸಮುದಾಯ' ದಲಿತ-ಬಂಡಾಯ ಚಳವಳಿಗಳು ಸರ್ಕಾರವನ್ನೇ ಕೆಳಗೆ ಉರುಳಿಸುವಂತಹ ಸಂಘಟನಾ ಶಕ್ತಿಯನ್ನು ಪಡೆದಿದ್ದ ಕಾಲವದು. ಹಳ್ಳಿ-ನಗರಗಳಲ್ಲಿ ತಳಮಟ್ಟದಿಂದ ರಚನಾತ್ಮಕ ಹೋರಾಟದ ಚಳವಳಿಯನ್ನು ಕಟ್ಟಲು ಹೋರಾಟಗಾರರು ನಿಸ್ವಾರ್ಥ ಸೇವೆಯಿಂದ ಸಂಘಟನೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದರು. ಉದಾಹರಣೆಗೆ ಬೆಂಗಳೂರು ಹೋಟಲ್‌ಗಳಲ್ಲಿ ೫೦ ಪೈಸೆ ಇಡ್ಲಿ ಬೆಲೆ ಹೆಚ್ಚಿಗೆ ಮಾಡಿದರು. ಇದನ್ನು ವಿರೋಧಿಸಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದರು. ಪ್ರಸ್ತುತ ಹೋಟಲ್‌ಗಳು ಎಷ್ಟೇ ಬೆಲೆ ಏರಿಕೆ ಮಾಡಿದರು ಧ್ವನಿ ಎತ್ತದ ಸ್ಥಿತಿಯಲ್ಲಿ ವಿದ್ಯಾರ್ಥಿ-ಯುವಜನರನ್ನು ಕಾಣುತ್ತೇವೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಎಪ್ಪತ್ತರ ದಶಕದ ಶಿಕ್ಷಣದಲ್ಲಿ ಶಿಕ್ಷಕ ಹಾಗೂ ಪ್ರಾಧ್ಯಾಪಕರ ಪಾತ್ರ ಬಹುಮುಖ್ಯವಾದುದ್ದು ಎಂಬುದನ್ನು ಗಮನಿಸಬೇಕು. ಅಂದಿನ ಕಾಲದಲ್ಲಿ ಪ್ರಾಧ್ಯಾಪಕರು ಹೋರಾಟ-ಚಳವಳಿಯಲ್ಲಿ ಭಾಗವಹಿಸಲು ಪ್ರತ್ಯಕ್ಷವಾಗಿ ತನ್ನ ವಿದ್ಯಾರ್ಥಿಗಳಿಗೆ ಬೆಂಬಲಿಸುತ್ತಿದ್ದರು. ಇಂದು ಪರೋಕ್ಷವಾಗಿಯು ಹೋರಾಟ-ಚಳವಳಿಗೆ ಭಾಗವಹಿಸಲು ಬಿಡದ ಸ್ಥಿತಿಯನ್ನು ಶಾಲಾ-ಕಾಲೇಜುಗಳಲ್ಲಿ ಕಾಣುತ್ತೇವೆ.

ಪ್ರಸ್ತುತ ಪ್ರಜ್ಞಾವಂತ ವಿದ್ಯಾರ್ಥಿ-ಯುವಜನರು ತಮ್ಮದೇ ರೀತಿಯಲ್ಲಿ ಸಂಘಟನೆಗಳ ಮುಖೇನ ತಮ್ಮ ಧ್ವನಿಯನ್ನು ವಿವಿಧ ಕ್ಷೇತ್ರಗಳಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಸಾಮಾಜಿಕ ಕಾಳಜಿ ಮತ್ತು ಜಾಗೃತಿ ಮೂಡುತ್ತಿರುವುದನ್ನು ತೋರಿಸುತ್ತದೆ. ಜೀತಪದ್ಧತಿ, ಅಸ್ಪೃಶ್ಯತೆ, ದೌರ್ಜನ್ಯ, ಕೊಲೆ, ಸುಲಿಗೆ, ಅತ್ಯಾಚಾರ ಮುಂತಾದ ಸಾಮಾಜಿಕ ಶೋಷಣೆಗಳ ವಿರುದ್ಧ ಸಂಘಟನೆಗಳನ್ನು ಕಟ್ಟಿಬೆಳೆಸಲು ವಿದ್ಯಾರ್ಥಿ-ಯುವಜನರು ಪ್ರಮುಖ ಪಾತ್ರವಹಿಸಿದ್ದಾರೆ. ಮೂಡನಂಬಿಕೆ, ಕಂದಚಾರ, ಪುರಾಣ, ದೇವರು, ಧರ್ಮದ ಹೆಸರಿನಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶೋಷಣೆ ಮಾಡುವುದರ ವಿರುದ್ಧ 'ಸಮುದಾಯ' ನಾಟಕಗಳನ್ನು ರೂಪಿಸಲಾಗಿದೆ. ಮತ್ತು ದಲಿತ-ಬಂಡಾಯ ಸಂಘಟನೆಗಳನ್ನು ಕಟ್ಟಿದ್ದು ಚಾರಿತ್ರಿಕ ಅಂಶಗಳು ಎಂದು ಗುರುತಿಸಬಹುದು. ಎಪ್ಪತ್ತರ ದಶಕದಲ್ಲಿ ಮಾರ್ಕ್ಸ್‌ವಾದಿ ಸಿದ್ಧಲಿಂಗಯ್ಯ ಅವರ ಕಾವ್ಯವು ಹೋರಾಟಕ್ಕೆ ಪ್ರೇರಣೆ ನೀಡುವ ಶಕ್ತಿ ನೀಡಿತು. ಅದು ಅರಿವಿನ ಸ್ಫೋಟಕ್ಕೆ ಕಾರಣವಾದವು.

"ಇಕ್ರಲಾ – ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರುಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದು ತರಾ ಗುಡಿ ಕಟ್ಟವ್ರೆ
ಎಲ್ಲಾರು ದೇವ್ರ ಮಕ್ಕಳು ಅಂತಾರೆ
ಹೊಲಯರ್ನ ಕಂಡ್ರೆ ಹಾವ್ ಕಡದಂಗಾಡ್ತಾರೆ

ಹೋಟ್ಲು, ಬಾವಿ, ಮನೆ ಯಾವುದಕ್ಕೂ ಸೇರ್ಸಲ್ವರ್ರೋ
ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್‌ಕತಾರೆ
ನಾವ್ ಬೆಳೆದಿದ್ ತಿಂತಾರೆ, ನಾವ್ ದುಡಿದಿದ್ ತಗತ್ತಾರೆ
ನಾವ್ ಮಾತ್ರ ಬ್ಯಾಡ"

ಈ ರೀತಿಯ ಕಾವ್ಯ ರಚನೆಗಳು ಪ್ರಾರಂಭವಾದವು. ಈ ರೀತಿಯ ಕಾವ್ಯವು ಹೋರಾಟದ ದಿಕ್ಕುಗಳನ್ನು ಬದಲಾಯಿಸಿದವು. ಜಿ.ರಾಮಕೃಷ್ಣ, ರಂಜಾನ್‌ದರ್ಗ, ಲಿಂಗದೇವರು ಹಳೇಮನೆ, ದೇವಯ್ಯ ಹರವೆ, ಚನ್ನಣ್ಣ ವಾಲಿಕಾರ್, ರಾಮ್‌ದೇವ ರಾಕೆ, ಎಚ್.ಗೋವಿಂದಯ್ಯ, ಓ.ಶ್ರೀಧರನ್, ಚಂದ್ರಪ್ರಸಾದ್ ತ್ಯಾಗಿ, ಎಲ್.ಹನುಮಂತಯ್ಯ, ಬಂದಕುಂಟೆ ನಾಗರಾಜಯ್ಯ, ಡಿ.ಜಿ.ಸಾಗರ್, ಚಿಂತಾಮಣಿ ಶಿವಣ್ಣ, ವೆಂಕಟೇಶ್, ಇಂದೂಧರ ಹೊನ್ನಾಪುರ ಇವರೆಲ್ಲಾ ಬಂಡಾಯ ಸಾಹಿತಿಗಳಾಗಿದ್ದ. ಮತ್ತು ಸಮಾಜವಾದಿಗಳಾದ ಶಾಂತವೇರಿ ಗೋಪಾಲಗೌಡ ಅವರ ಶಿಷ್ಯಬಳಗ ಪಿ.ಲಂಕೇಶ್, ಎಂ.ಡಿ.ನಂಜುಂಡಸ್ವಾಮಿ, ಕಿ.ರಂ.ನಾಗರಾಜ, ಪೂರ್ಣಚಂದ್ರತೇಜಸ್ವಿ, ದೇವನೂರು ಮಹಾದೇವ, ರಾಮದಾಸ್, ದೇವರಾಜ ಅರಸು, ಕಾಗೋಡು ತಿಮ್ಮಪ್ಪ, ಕಡಿದಾಳು ಮಂಜಪ್ಪ, ಬಂಗಾರಪ್ಪ ಮುಂತಾದವರ ಇದ್ದರು. ಇವರ ಪ್ರಗತಿಪರ ಚಿಂತನೆಗಳಿಂದ ಸಾಹಿತ್ಯ–ಚರಿತ್ರೆಯನ್ನು ಒಳಗೊಂಡ ಚಳವಳಿಗಳನ್ನು ೭೦ರ ದಶಕದಲ್ಲಿ ಕಟ್ಟಿಕೊಟ್ಟರು. ಪ್ರತಿಯೊಂದು ಹಳ್ಳಿಯಲ್ಲಿ ಜಾಗೃತಿ ಮೂಡಿಸುವ ಪ್ರಚಾರ ಮಾಡಿದರು. ಈ ಸಿದ್ಧಾಂತಗಳ ಪ್ರಚಾರದ ಪ್ರಭಾವದಿಂದಾಗಿ ಹಲವಾರು ವಾದಗಳ ಪ್ರಭಾವ–ಪರಿಣಾಮ ಜನರ ಮೇಲೆ ಬೀರಿದವು. ಆ ಸಿದ್ಧಾಂತಗಳನ್ನು ಈ ಕೆಳಗಿನಂತೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಸಮುದಾಯ'ದ ತಾತ್ವಿಕ ಚಿಂತನೆ

ಈ ಸಾಮಾಜಿಕ ಚಲನಶೀಲತೆಯು ಪ್ರಕಟಪಡಿಸಿದ ಪ್ರತಿಭಟನೆಯಗಳನ್ನು ಎಡಪಂಥೀಯವೆಂದು ಕರೆಯಲು ಮುಂದಾಗುತ್ತದೆ. ಬ್ರಾಹ್ಮಣರ ಮಟ್ಟಿಗೆ ಎಡಪಂಥೀಯರಾದವರು ಹೊಲೆಯರು. ಆದರೆ ಹೊಲೆಯರ ವಿಷಯದಲ್ಲಿ ಬ್ರಾಹ್ಮಣರು ತೀವ್ರ ಬಲಪಂಥೀಯರಾಗುತ್ತಾರೆ. ಮೇಲ್ವರ್ಗದ ಶೂದ್ರರಿಗೆ ಎಡಪಂಥೀಯರೆಂದು ಕಾಣಿಸಿಕೊಳ್ಳುವವರು ಕೆಳಜಾತಿಯ ದಲಿತರು. ಆದರೆ ದಲಿತರೆಲ್ಲ ಎಡಪಂಥೀಯರಾಗದೆ ಚಳವಳಿಗಳಿಂದ ಹೊರಗುಳಿದಿದ್ದುಟು. ಸಮಾಜದಲ್ಲಿ 'ಜಾತಿ' ಅತ್ಯಂತ ಸೂಕ್ಷ್ಮವಾದ ಮತ್ತು ಜಟಿಲವಾದ ಸಮಸ್ಯೆಯಾಗಿದೆ. ಈ ಜಾತಿ ಬಿಕ್ಕಟ್ಟು ಎಡಪಂಥೀಯರನ್ನೇ ಒಗ್ಗೂಡದಂತೆ ಮಾಡಿದೆ. ಇದರ ಬಿಸಿ ಮುಟ್ಟಿರುವುದು ದಲಿತರಿಗೆ ಮಾತ್ರ. ಅರವಿಂದ ಮಾಲಗತ್ತಿ ಅವರು ದಲಿತರ ಬಗ್ಗೆ ಬರೆಯುವುದು ಹೀಗೆ, "ದಲಿತರಲ್ಲಿಯೆ ಇರುವ ಬೂರ್ಜ್ವಾಗಳನ್ನು ಮನ ಒಲಿಸಿದರೆ ಅವರು ಬದಲಾಗುವರು ಎಂಬುದನ್ನು ದಲಿತರು ಅರ್ಥೈಸಿಕೊಳ್ಳಬೇಕಾಗಿದೆ. ದಲಿತ ಬೂರ್ಜ್ವಾಗಳೆಂದು ಪಟ್ಟಿಯಲ್ಲಿರುವವರು ದಲಿತ ಬೂರ್ಜ್ವಾಗಳಲ್ಲಾ, ಅವರು ಬದುಕುವ ಸಂದಿಗ್ಧ ಸ್ಥಿತಿಯು ಅವರನ್ನು ಹಾಗೆ ವರ್ತಿಸಲು ಪ್ರೇರೇಪಿಸುತ್ತದೆ." ದಲಿತರಲ್ಲಿಯೇ ಹುಟ್ಟಿಕೊಳ್ಳುತ್ತಿರುವ

ಬಲಪಂಥೀಯ ಬೂರ್ಜ್ವಾಗಳನ್ನು ಪ್ರಶ್ನಿಸದೆ ಹಾಗೆ ಒಪ್ಪಿಕೊಳ್ಳುವುದಾದರೆ ಹೋರಾಟಕ್ಕೆ ಅರ್ಥವೇ ಉಳಿಯುವುದಿಲ್ಲ. ಸಾಮಾನ್ಯವಾಗಿ ಪುರೋಹಿತಶಾಹಿಗಳು ಹೇಳುವ ಮತ್ತು ಮನ ಒಲಿಸುವ ಮಾತು ಇಲ್ಲಿಯೂ ಬಂದಿದೆ. ಆ ಮೂಲಕವೆ ಅದು ವರ್ಗ ಹೋರಾಟಕ್ಕೆ ವಿರೋಧಿಯಾಗಿರುವುದು ಸ್ವತಃ ಬೂರ್ಜ್ವಾ ನಿಲುವಾಗುತ್ತದೆ. ಇಲ್ಲಿ ನಡೆಯುವ ಪ್ರತಿಭಟನೆಯನ್ನು ಸಂದೇಹಿಸಬೇಕಾಗುತ್ತದೆ.

ಎಪ್ಪತ್ತರ ದಶಕದಲ್ಲಿ ಕರ್ನಾಟಕದ ವಿಭಿನ್ನ ಚಟುವಟಿಕೆಗಳು ದಲಿತ–ಬಂಡಾಯ ಮತ್ತು 'ಸಮುದಾಯ' ಸಾಹಿತ್ಯಗಳು ಶೋಷಿತರ ನಿಲುವನ್ನು ಪ್ರಶ್ನಿಸಿದವು. ಪ್ರತಿಭಟನೆಯ ಸ್ವರೂಪವನ್ನು ಇಲ್ಲಿ ಪೂರ್ಣನಿರ್ಧಾರಿತ ಚೌಕಟ್ಟಿಗೆ ಒಳಪಡಿಸಲಾಯಿತು. ೧೯೭೮ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ತನ್ನ ಮೊದಲನೇ ಸಮ್ಮೇಳನದಲ್ಲಿ ಪ್ರಕಟಪಡಿಸಿದ ಪ್ರಣಾಳಿಕೆಯಲ್ಲಿ ಹೀಗೆ ಘೋಷಿಸಲಾಗಿದೆ. "ನಮ್ಮ ದೇಶದ ಚಾರಿತ್ರಿಕ ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ". ಜನವಿರೋಧಿ ನಿಲುವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಯ ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೆ ನಮ್ಮ ಉತ್ತರ– ಎಲ್ಲ ವಾಮಪಂಥೀಯ ಸಂಘಟನೆಗಳು ಮತ್ತು ಅವುಗಳ ನಿಲುವನ್ನು ಸ್ಪಷ್ಟಪಡಿಸುವುದಾದರೆ, ಸಮಕಾಲಿನ ಚರಿತ್ರೆ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲ ವಾಮಪಂಥೀಯರ ಸಾಂಸ್ಕೃತಿಕ ಒಗ್ಗಟ್ಟು ಈಗ ಅತ್ಯಂತ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಬಂಡಾಯ ಸಾಹಿತ್ಯ ಚಳವಳಿಯು ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲಿ ಒಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಪರಸ್ಪರ ಸಂಬಂಧ ಉಳ್ಳುವು ಎಂಬ ನಿಲುವಿನಿಂದ ಹೊರಟದ್ದು. ಸಾಹಿತಿಗೆ ರಾಜಕೀಯ, ಸಾಮಾಜಿಕ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ ಜಾತಿ ಪದ್ಧತಿ, ಲಿಂಗಭೇದ ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದಕ್ಕೆ ನಮ್ಮ ಬೆಂಬಲ. ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ನಮ್ಮ ಹೋರಾಟದ ಮುಖ್ಯದಾಖಲೆ"(ಉದ್ಧೃತ:ಬರಗೂರು ರಾಮಚಂದ್ರಪ್ಪ ೧೯೮೧:೨–೩) ಈ ಪ್ರಣಾಳಿಕೆ ಸ್ಪಷ್ಟಪಡಿಸುವಂತೆ ಬಂಡಾಯ ಸಾಹಿತ್ಯದ ಮುಖ್ಯ ಉದ್ದೇಶ ಜನಪರ ಸಾಹಿತ್ಯದ ನಿರ್ಮಾಣ, ಜನವಿರೋಧಿ ಮೌಲ್ಯಗಳ ವಿರುದ್ಧ ಹೋರಾಟ, ಪ್ರತಿಭಟನೆ ನಡೆಸುವುದು. ಹಾಗಾಗಿ ಇದು ಹಿಡಿಯಾಗಿ ಪ್ರತಿಭಟನಾ ಸಾಹಿತ್ಯ ಕ್ರೂರ ವ್ಯವಸ್ಥೆಯ ಸರ್ವಸೂತ್ರಗಳ ವಿರುದ್ಧ ಬಂಡೆದ್ದ ಮನೋಧರ್ಮವೇ ಬಂಡಾಯ ಸಾಹಿತ್ಯ ಚಳವಳಿಯ ಮೂಲ ಅಂಶ.

"ಹಸಿವಿನಿಂದ ಸತ್ತವರು ಸೈಜುಗಲ್ಲು ಹೊತ್ತವರೂ
ಒದಿಸಿಕೊಂಡು ಹೊರಗಿದವರೂ ನನ್ನಜನಗಳು
ಕೂಲಿನಾಲಿ ಮಾಡೋರು, ಕೈ ಮಡಚಿಕೊಳ್ಳುವರು,
ಭಕ್ತರಪ್ಪ ಭಕ್ತರೋ ನನ್ನ ಜನಗಳು
ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
ಬೆಂದು ಬೂದಿಯಾದರೋ ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡ ಜನಕೆ
ಬೂಟುಮೆಟ್ಟು ಹೊಲೆದೋರು ನನ್ನ ಜನಗಳು"

ಹೀಗೆ ಬಂಡಾಯ ಕಾವ್ಯಗಳು ಎಪ್ಪತ್ತರ ದಶಕದಲ್ಲಿ ಹೆಚ್ಚು ಪ್ರಕಟಕವಾಗಿ ಕ್ರಾಂತಿಕಾರಿ ವಿಚಾರಗಳನ್ನು ಮೈಗೂಡಿಸಿಕೊಂಡ ಕಮ್ಯುನಿಸ್ಟ್ ಚಿಂತನೆಯ 'ಸಮುದಾಯ' ದಲಿತ–ಬಂಡಾಯ ಚಳವಳಿಗಳು ತನ್ನದೇ ವಿಶಿಷ್ಟ ಸ್ವರೂಪದಲ್ಲಿ ಬೆಳವಣಿಗೆಯನ್ನು ಕಂಡಿದ್ದು ಚಾರಿತ್ರಾರ್ಹ ಅಂಶವೆಂದು ಗುರುತಿಸಲಾಗಿದೆ. ಹೀಗೆ 'ಸಮುದಾಯ', ದಲಿತ–ಬಂಡಾಯ ಚಳವಳಿಗೆ ಸಾಹಿತ್ಯ ಪ್ರೇರಣೆ ಆಗಿವೆ. ಸ್ಥೂಲವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ 'ಸಮುದಾಯ', ದಲಿತ–ಬಂಡಾಯ ಸಾಹಿತ್ಯದ ಮೇಲೆ ಗಾಡ ಪ್ರಭಾವ ಬೀರಿವೆ. ಆ ಮೂಲಕ ಎಪ್ಪತ್ತರ ಹಾಗೂ ಎಂಬತ್ತರ ಚಳವಳಿಗಗಳು ಪ್ರಮುಖ ಬರಹಗಾರರ ಸೃಜನಶೀಲತೆಗೆ ಪ್ರೇರಣೆ ನೀಡಿವೆ.

ಕನ್ನಡದಲ್ಲಿ ಪ್ರಗತಿಶೀಲ ಚಳವಳಿಗೆ ಪ್ರೇರಣೆ ನೀಡಿದ ಮಾರ್ಕ್ಸ್‌ವಾದವು 'ಸಮುದಾಯ', ದಲಿತ–ಬಂಡಾಯ ಸಾಹಿತ್ಯಕ್ಕೂ ಪ್ರಮುಖ ಪ್ರೇರಣೆ ನೀಡಿದೆ. ಅದರಲ್ಲಿಯೂ ದಲಿತೇತರ ಬಂಡಾಯದ ಬರಹಗಾರರಲ್ಲಿ ಹೆಚ್ಚಿನವರು ಮಾರ್ಕ್ಸ್‌ವಾದಿಗಳು. ಈ ಬರಹಗಾರರು ಎಲ್ಲಾ ಜಾತಿಯ ಬಡವರನ್ನು ಸಮಾನರೆಂದು ಗುರುತಿಸಿ ವರ್ಗ ಸಂಘರ್ಷಕ್ಕೆ ಪ್ರೇರಣೆ ನೀಡುತ್ತಾರೆ. ಜಾತಿಯನ್ನು ಇವರು ಅಷ್ಟಾಗಿ ಗಮನಿಸುವುದಿಲ್ಲ. ಬದಲು ಆರ್ಥಿಕತೆಗೆ ಮಹತ್ವ ನೀಡಿ, ಅದನ್ನು ಅಂತರಾಷ್ಟ್ರೀಯ ಚೌಕಟ್ಟಿನಲ್ಲಿ ನೋಡುತ್ತಾರೆ. ಸಾಹಿತ್ಯ ಕೃತಿ ತಿಳಿದು ತಿಳಿಯದೆಯೊ ಬರಹಗಾರರ ವರ್ಗದ ಮಾನಸಿಕ ಧೋರಣೆಗಳನ್ನು ಪ್ರತಿಬಿಂಬಿಸುತ್ತದೆ. ಅಲ್ಲದೇ ಸಾಮಾನ್ಯವಾಗಿ ವಿವಿಧ ವರ್ಗಗಳಿಂದ ಬರಹಗಾರರ ಮೇಲಾಗುವ ಪ್ರಭಾವಿತವಾದ ಬರವಣಿಗೆ ಅಂಶಗಳನ್ನು ಪ್ರತಿಬಿಂಬಿಸುತ್ತದೆ. ಎಂದು ಮಾರ್ಕ್ಸ್‌ವಾದಿ ವಿಮರ್ಶಕರು ಭಾವಿಸುತ್ತಾರೆ. ಇಂಥ ಕಡೆ ಸೃಜನಶೀಲ ಬರಹಗಾರರು ಕೃತಿ, ವಸ್ತುವಿನ ಬಗ್ಗೆ ಅದರಲ್ಲಿರುವ ಸಮಾಜ ರೂಪದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಾರೆ. ಕೃತಿಯ ರೂಪಕ್ಕೆ ಇವರಲ್ಲಿ ಅಷ್ಟಾಗಿ ಗಮನಿಸುವುದಿಲ್ಲ. ಪ್ರತಿ ಶ್ರೇಷ್ಠ ಕೃತಿಯಲ್ಲಿಯೂ ವಸ್ತುವೇ ರೂಪವನ್ನು ನಿರ್ಣಯಿಸುತ್ತದೆ ಎಂದು ನಂಬಿಯೆ ಇಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದರ ಜೊತೆಗೆ ಸಾಹಿತ್ಯ ಮತ್ತು ಸಾಹಿತಿಯ ಹುಟ್ಟು ಹಾಗೂ ಸಮಾಜದ ಒಟ್ಟು ಉತ್ಪಾದನಾ ವ್ಯವಸ್ಥೆಯ ಒಂದು ಭಾಗವೇ ಆಗಿರುತ್ತದೆಂಬ ನಂಬಿಕೆ ಪೂರ್ವಗ್ರಹವಾಗಿ ಇಲ್ಲಿ ಕೆಲಸ ಮಾಡುತ್ತದೆ. ಸಾಹಿತಿ ಮತ್ತು ಅವನ ಸಾಹಿತ್ಯ ಸಮಾಜದೊಂದಿಗೆ ಸ್ಪಂದಿಸಿ, ಅಂತಿಮವಾಗಿ ರಾಜಕೀಯ ಸಂಗತಿಗಳಲ್ಲೂ ಆಸಕ್ತನಾಗಿರಬೇಕು

ಎಂಬಲ್ಲಿಗೆ ಬಂದು ತಲುಪುತ್ತದೆ. ಇದು ಕಮ್ಯುನಿಸ್ಟ್ ಚಿಂತನೆಯ 'ಸಮುದಾಯ'ದ ತಾತ್ವಿಕ ಮುಖ್ಯ ಆಶಯವಾಗಿರುತ್ತದೆ.

೬.೪. 'ಸಮುದಾಯ' ಸಂಘಟಕರು ಹಾಗೂ ಪ್ರಗತಿಪರ ಚಿಂತಕರ ಭಿನ್ನ ಸೈದ್ಧಾಂತಿಕತೆ

'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಅಧ್ಯಯನದಲ್ಲಿ ಸಂಘಟಕರ ಸಿದ್ಧಾಂತಗಳು ಬಹುಮುಖ್ಯ ಎಂದು ತಿಳಿಯಲಾಗಿದೆ. ಏಕಂದರೆ 'ಸಮುದಾಯ' ಸಂಘಟನೆ ಪ್ರಾರಂಭವಾಗಲು ಮಾರ್ಕ್ಸ್‌ವಾದದ ಕಮ್ಯುನಿಸಂನ ಚಿಂತನೆಗಳ ಪ್ರಭಾವ ದಟ್ಟವಾಗಿದೆ ಎಂದರೆ ತಪ್ಪಾಗಲಾರದು. ಆದ್ದರಿಂದ ಕರ್ನಾಟಕದಲ್ಲಿ ಎಪ್ಪತ್ತರ ದಶಕದ ರಾಜಕಾರಣ ಮತ್ತು ಪ್ರಗತಿಪರ ಸಂಘಟನೆಗಳ ಚಳವಳಿಗಳನ್ನು ಅಧ್ಯಯನ ಮಾಡಬೇಕಾದರೆ ರಾಜಕೀಯ ಪಕ್ಷಗಳ ಸಿದ್ಧಾಂತಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅಗತ್ಯವಾಗಿದೆ. ೧೯೭೫ರಲ್ಲಿ 'ಸಮುದಾಯ' ಸಂಘಟನೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಪ್ರಾರಂಭವಾದರೂ ಮುಂದೆ ತನ್ನದೆ ಆದ ಸಾಹಿತ್ಯ ವರ್ಗ, ಪ್ರಗತಿಪರ ಚಿಂತಕರ ವರ್ಗವನ್ನು ಹೊಂದಿತ್ತು.

ಸಾಂಸ್ಕೃತಿಕ ಬಹುಮುಖಿ ಚಿಂತನೆಗಳ ಚಿಂತಕರು 'ಸಮುದಾಯ' ಸಂಘಟನೆಗಳಲ್ಲಿ ಪೂರ್ತಿಯಾಗಿ ಆರಂಭದಲ್ಲಿ ಭಾಗವಹಿಸುತ್ತಿದ್ದ ಪ್ರಮುಖರು ಪ್ರಸನ್ನ, ಸಿ.ಜಿ. ಕೃಷ್ಣಸ್ವಾಮಿ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ್, ಸಿದ್ಧಲಿಂಗಯ್ಯ, ಜಿ.ರಾಜಶೇಖರ್, ಎಸ್.ಎಸ್. ಹಿರೇಮಠ, ಆರ್.ಕೆ.ಹುಡಿಗಿ, ಎಸ್ ಮಾಲತಿ, ಶೀಲಾ ಸ್ವಾಮಿ, ಶಾಂತ ಕುಲಕರ್ಣಿ, ಲಕ್ಷ್ಮೀ ಚಂದ್ರಶೇಖರ್, ಕೆ.ಮರಳಸಿದ್ಧಪ್ಪ, ಕರೀಗೌಡ ಬೀಚನಹಳ್ಳಿ, ಜನಾರ್ಧನ(ಜನ್ನಿ), ಪಿ.ಲಂಕೇಶ್, ದೇವನೂರ ಮಹಾದೇವ, ಬಿ.ಕೃಷ್ಣಪ್ಪ, ಮೋಹನ್ ಕೊಂಡಜ್ಜಿ ಮುಂತಾದ ಚಿಂತಕರ ಕೂಟವೇ 'ಸಮುದಾಯ' ಕಾರ್ಯಕ್ರಮ ರಂಗ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು. ಕರ್ನಾಟಕದಲ್ಲಿ ಬಹುಮುಖ್ಯವಾಗಿ ಕಾಂಗ್ರೆಸ್ ಸರ್ಕಾರ ನಿರಂತರ ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿ ಆಗಾಗ ಕರಾವಳಿ ಭಾಗಗಳಲ್ಲಿ ಹಾಗೂ ಇತರ ಭಾಗಗಳಲ್ಲಿ ಸಮಾಜವಾದಿ ಪಕ್ಷದವರು ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಇದರ ಜೊತೆಗೆ ಪಿ.ರಾಮಚಂದ್ರ ರಾವ್, ಶಾಂತವೇರಿ ಗೋಪಾಲಗೌಡ, ಟಿ.ಎಸ್.ಮಣಿ, ಎಸ್.ಕೆ.ಕಾಂತ, ಎಂ.ಹೆಚ್.ಕೃಷ್ಣನ್, ಪಂಪಾಪತಿ ಮುಂತಾದವರು ಸಮಾಜವಾದಿ ಹಾಗೂ ಕಮ್ಯುನಿಸ್ಟ್ ಪಕ್ಷ ಹಿನ್ನೆಯ ನಾಯಕರು ರಾಜ್ಯ ವಿಧಾನಸಭಾ ಪ್ರವೇಶ ಮಾಡಿದ್ದರು.

೧೯೭೫ರ ನಂತರ ಸಾಂಸ್ಕೃತಿಕ ಚಳವಳಿಗಳು ಹೆಚ್ಚಾದಂತೆಲ್ಲ ಕರ್ನಾಟಕದಲ್ಲಿ ಪರ್ಯಾಯ ರಾಜಕಾರಣ ಬೆಳೆದು ಬಂದಿತು. ಅದು ರಾಮಕೃಷ್ಣ ಹೆಗಡೆ ಅವರ ಜನತಾಪಕ್ಷದ ಸರ್ಕಾರ ರಾಜಕೀಯವಾಗಿ ಬೆಳೆಯಲು ಮತ್ತು ಅಧಿಕಾರಕ್ಕೆ ಬರಲು ಸಹಾಯವಾದವು. ರಾಜಕೀಯ ಬಿಕ್ಕಟ್ಟು ಏನೇ ಇದ್ದರೂ ಕರ್ನಾಟಕದಲ್ಲಿ ಸಮಾಜವಾದಿ ಪಕ್ಷಗಳು ತಾತ್ವಿಕ ಬದ್ಧತೆಯಿಂದ ಆರಂಭದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಂಥ ಪಕ್ಷಗಳನ್ನು ಈ ಕೆಳಗಿನಂತೆ ಗುರುತಿಸಬಹುದು. ಕಮ್ಯುನಿಸ್ಟ್ ಪಕ್ಷಗಳು, ಪ್ರಜಾ ಸಮಾಜವಾದಿ ಪಕ್ಷ, ಸಮಾಜವಾದಿ ಪಕ್ಷ, ಕ್ರಾಂತಿರಂಗ ಪಕ್ಷ, ಸೈದ್ಧಾಂತಿಕವಾಗಿ ಮಾರ್ಕ್ಸ್‌ವಾದ,

ಸಮಾಜವಾದ, ಲೋಹಿಯಾ ಸಮಾಜವಾದ ನಂತರ ಎಂಬತ್ತರ ದಶಕದಲ್ಲಿ ಅಂಬೇಡ್ಕರ್‌ವಾದ-ಗಾಂಧಿವಾದದ ವಿರುದ್ಧ ತಾತ್ವಿಕ ಬಿನ್ನ ಅಂಶಗಳನ್ನು ಪ್ರಗತಿಪರ ಚಿಂತಕರಲ್ಲಿ ಮೂಡಿಸಿದವು. 'ಸಮುದಾಯ' ಸಂಘಟನೆಯಲ್ಲಿ ಪ್ರಗತಿಪರ, ಎಡಪಂಥೀಯ ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕದಲ್ಲಿ ಗುರುತಿಸಿಕೊಂಡಿತು. 'ಸಮುದಾಯ' ಸಂಘಟನೆಯ ನಿರ್ದಿಷ್ಟ ಸಂವಿಧಾನ ಅಂಶಗಳನ್ನು ಗಮನಿಸಿದಾಗ ಬೇರೆ ಸಾಂಸ್ಕೃತಿಕ ಸಂಘಟನೆಗಳು ತನ್ನದೆ ಆದ ಗುರಿ, ಉದ್ದೇಶಗಳು ಇದ್ದರೂ, ಒಂದು ತಾತ್ವಿಕ ಸೈದ್ಧಾಂತಿಕ ಅಂಶಗಳು ಕಂಡುಬರುವುದಿಲ್ಲ. ಉದಾಹರಣೆಗೆ:ನೀನಾಸಂ, ರಂಗಾಯಣ, ರಂಗ ನಿರಂತರ, ಚಿತ್ರ, ಕಲಾಗಂಗೋತ್ರಿ, ರಂಗಸಂಪದ, ನಟರಂಗ, ಈ ಸಾಂಸ್ಕೃತಿಕ ರಂಗಭೂಮಿ ಸಂಸ್ಥೆಗಳು, 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ರೀತಿಯಲ್ಲಿ ತನ್ನದೇ ಆದ ಒಂದು ಸಂವಿಧಾನವಿಲ್ಲ. ಅವುಗಳಲ್ಲಿ ಸಂಘಟನೆ ಚಳವಳಿಯ ತಾತ್ವಿಕ ಸಿದ್ಧಾಂತದ ಬಗೆ ಕುರಿತು ಯಾವುದೇ ಸೈದ್ಧಾಂತಿಕತೆ ಇಲ್ಲದಿರುವುದನ್ನು ಕಾಣುತ್ತೇವೆ. ಹೀಗೆ 'ಸಮುದಾಯ'ದ ಸಂವಿಧಾನದ ಕೃತಿಯ ಹಿಂಭಾಗದ ಶಿರ್ಷಿಕೆಯಲ್ಲಿ ತಾತ್ವಿಕತೆಯನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

ಸಂಘಟನೆಯಿಲ್ಲದ ಚಳವಳಿ
ಚಳವಳಿಯಿಲ್ಲದ ಸಂಘಟನೆ
ನಿಷ್ಪ್ರಯೋಜಕ
ಸಿದ್ಧಾಂತವಿಲ್ಲದ ಚಳವಳಿ
ಚಳವಳಿಯಿಲ್ಲದ ಸಿದ್ಧಾಂತ
ನಿಷ್ಪ್ರಯೋಜಕ
ಜನಸಮುದಾಯದ
ಕಷ್ಟಕೋಟಲೆಗೆ ಆಗಿಬರದ ತತ್ವ
ಒಣ ಸಿದ್ಧಾಂತವಷ್ಟೆ

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಂಘಟನೆ, ಸಿದ್ಧಾಂತ, ಚಳವಳಿ ಇವುಗಳು ಒಂದನ್ನು ಬಿಟ್ಟು ಒಂದು ಇರುವುದಿಲ್ಲ ಎಂದು ತಿಳಿಯುತ್ತದೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳವಳಿ ಹಾಗೂ ಸಮಾಜವಾದಿ ಚಳವಳಿ ಹುಟ್ಟಿದ್ದು ಸ್ವಾತಂತ್ರ್ಯ ಪೂರ್ವವಾದರೂ, ಅದು ಬೆಳವಣಿಗೆ ಕಂಡಿದ್ದು ಎಪ್ಪತ್ತು, ಹಾಗೂ ಎಂಬತ್ತರ ದಶಕದಲ್ಲಿ ಎಂದು ಹೇಳಬಹುದು. ಏಕೆಂದರೆ ತಳಸಮುದಾಯಕ್ಕೆ ಸೇರಿದ ಬಹುಸಂಖ್ಯಾತರು ಶಿಕ್ಷಣ ಪಡೆಯುವ ಮುಖೇನ ಸಾಹಿತ್ಯ, ಚರಿತ್ರೆ, ರಾಜಕಾರಣದ ಚಳವಳಿಗಳಲ್ಲಿ ಹೆಚ್ಚು ಭಾಗವಹಿಸುವಿಕೆಯಿಂದ ಹೊಸ ಸಿದ್ಧಾಂತಗಳ ಮರುಹುಟ್ಟು ಪಡೆದವು. ಉದಾಹರಣೆಗೆ ೧೯೭೫ ರಲ್ಲಿ 'ಸಮುದಾಯ' ಸಂಘಟನೆಯಿಂದ ೭೦ ರ ದಶಕದ ಕೊನೆ ಭಾಗದಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ಬಂಡಾಯ ಸಾಹಿತ್ಯ ಸಂಘಟನೆಗಳು ಆರಂಭವಾದವು. 'ಸಮುದಾಯ' ಸಂಘಟನೆ ದಲಿತ-ಬಂಡಾಯ ಸಂಘಟನೆಗಳು ಸಾಂಸ್ಕೃತಿಕವಾಗಿ ಒಂದು ವೇದಿಕೆಯಲ್ಲಿ ನಿಂತು ಸಾಂಸ್ಕೃತಿಕ ಚಳವಳಿ ನಡೆಸುತ್ತಿದ್ದವು. ನಂತರ

ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯ ಜಾತಿ ರಾಜಕಾರಣದಿಂದ ದಲಿತ ಸಂಘಟನೆ ಬೇರೆ ಬೇರೆಯಾಗಲು ಕಾರಣವಾಯಿತು. ಇದರಿಂದ ಬಂಡಾಯ ಚಳವಳಿ ಕುಂಠಿತವಾಯಿತು. ಏಕೆಂದರೆ 'ಸಮುದಾಯ' ಸಂಘಟನೆ ಬಂಡಾಯದ ಸಂಘಟನೆಯೊಂದಿಗೆ ರಾಜಕೀಯವಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲಿಸಿದರೆ, ದಲಿತ ಸಂಘರ್ಷ ಸಮಿತಿ ಬಲಪಂಥೀಯ ಪಕ್ಷಗಳಿಗೆ ಬೆಂಬಲಿಸಿತು. ಅದರಿಂದ ದೇವನೂರ ಮಹಾದೇವ ಅವರನ್ನು ಸಮಾಜವಾದಿ ಎಂದು, ಸಿದ್ಧಲಿಂಗಯ್ಯ ಅವರನ್ನು ಮಾರ್ಕ್ಸ್‌ವಾದಿ ಎಂದು, ಬಿ. ಕೃಷ್ಣಪ್ಪರವರನ್ನು ಮಾನವತಾವಾದಿ ಎಂದು ಸೈದ್ಧಾಂತಿಕವಾಗಿ ಗುರುತಿಸಿರುವುದು ಕಾಣುತ್ತೇವೆ. ಇದು ಮುಂದೆ ಎಂಬತ್ತರ ದಶಕದ ಕೊನೆಯಲ್ಲಿ ಈ ಚಿಂತಕರಲ್ಲಿ ಸೈದ್ಧಾಂತಿಕ ಭಿನ್ನತೆಗಳಿಂದ ಸ್ಥಿತ್ಯಂತರಗಳು ಆಗಿದ್ದು ನೋಡುತ್ತೇವೆ.

'ಸಮುದಾಯ'ದ ಸಂಘಟಕರು ಹಾಗೂ ಮಾರ್ಕ್ಸ್‌ವಾದ

'ಸಮುದಾಯ'ವು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿ.ಪಿ.ಐ.(ಎಂ) ಪಕ್ಷದ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಕರ್ನಾಟಕದಲ್ಲಿ ಗುರುತಿಸಿಕೊಂಡಿದೆ. ಏಕೆಂದರೆ ಮಾರ್ಕ್ಸ್‌ವಾದಿ ಪಕ್ಷದಲ್ಲಿ ಇದ್ದಂತಹ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಕಿ.ರಂ.ನಾಗರಾಜ, ಡಿ.ಆರ್.ನಾಗಾರಾಜ, ಸಿದ್ಧಲಿಂಗಯ್ಯ, ಕೆ.ರಾಮಯ್ಯ ಇತರರು ಹುಟ್ಟುಹಾಕಿದ 'ಸಮುದಾಯ' ಸಂಘಟನೆ ಭಾರತ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ) ಇಂಡಿಯನ್ ಪೀಪಲ್ಸ್ ಥೀಯೇಟರ್ ಅಸೋಸಿಯೇಶನ್(ಇಪ್ಟಾ) ಮಾದರಿಯಲ್ಲೇ ಎಡಪಂಥೀಯ ಸಾಂಸ್ಕೃತಿಕ ಸಂಘಟನೆಯಾಗಿದೆ. ೧೯೭೫ರಲ್ಲಿ ಸಿ.ಪಿ.ಐ.(ಎಂ)ರಾಜ್ಯ ಕಾರ್ಯದರ್ಶಿಯಾದ ಎಂ.ಕೆ.ಭಟ್ ಅವರು ವಿಜ್ಞಾನ್ನಿಯೂ ಕೂಡ ಆಗಿದ್ದರು. ಇವರನ್ನು ಭೇಟಿಯಾಗಿ ಡಿ. ಆರ್.ನಾಗರಾಜ್ ಮಾರ್ಕ್ಸ್‌ವಾದಿ ಹಾಗೂ ಕ್ರಾಂತಿಕಾರಿ ವಿಚಾರಗಳ ಬಗ್ಗೆ ಚರ್ಚೆಗಳು ನಿರಂತವಾಗಿ ಬೆಂಗಳೂರಿನ ಸುಲ್ತಾನ್ ಪೇಟೆಯ ಕಮ್ಯುನಿಸ್ಟ್ ಪಕ್ಷದ ಕಛೇರಿಯಲ್ಲಿ ನಡೆಸುತ್ತಿದ್ದರು. ಈ ಚರ್ಚೆಯಲ್ಲಿ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಸಿದ್ಧಲಿಂಗಯ್ಯ, ಕೆ ರಾಮಯ್ಯ ಸಹ ಭಾಗವಹಿಸುತ್ತಿದ್ದರು. ಕಮ್ಯುನಿಸ್ಟ್ ಪಕ್ಷ ರೈತ, ಕಾರ್ಮಿಕ ಹಾಗೂ ವಿದ್ಯಾರ್ಥಿ–ಯುವಜನ–ಮಹಿಳಾ–ಸರ್ಕಾರಿ ನೌಕರರ ಸಂಘಟನೆಗಳ ರೀತಿಯಲ್ಲೇ 'ಸಮುದಾಯ' ಒಂದು ಸಾಂಸ್ಕೃತಿಕ ಸಮನ್ವಯ ರಾಜ್ಯಸಮಿತಿಯಾಗಿ ಕಾರ್ಯನಿರ್ವಹಿಸಬೇಕು ಎಂಬುದು ಆಶಯವಾಗಿತ್ತು. 'ಸಮುದಾಯ' ಸಂಘಟನೆಯಲ್ಲಿ ಆರಂಭದ ಪೂರ್ಣಾವಧಿ ಕಾರ್ಯಕರ್ತರಾಗಿ ಪ್ರಸನ್ನ, ಸಿ.ಜಿ. ಕೃಷ್ಣಸ್ವಾಮಿ, ಗಂಗಾಧರ ಸ್ವಾಮಿ ಹಾಗೂ ಎಸ್.ಮಾಲತಿ ಅವರುಗಳಿಗೆ ಪ್ರತಿ ತಿಂಗಳು ೧೫೦ ರೂಪಾಯಿಗಳ ಗೌರವಧನ ಪಡೆದು ನಾಡಿನಾದ್ಯಂತ ನಾಟಕ, ಜಾಥಾಗಳ ಮೂಲಕ ಸಂಘಟನೆಯನ್ನು ಕಟ್ಟಿದರು. ಪ್ರಮುಖವಾಗಿ 'ಸಮುದಾಯ'ದ ಗುರಿ–ಉದ್ದೇಶಗಳು "ಜನತಾ ಪ್ರಜಾಪ್ರಭುತ್ವ ಕ್ರಾಂತಿ"ಗೆ ಸಾಂಸ್ಕೃತಿಕವಾಗಿ ಎಲ್ಲಾರನ್ನು ಒಟ್ಟಿಗೆ ಸೇರಿಸಿ ಚಳವಳಿಗೆ ಮುಂದಾಗುವುದು ಪ್ರಮುಖ 'ಸಮುದಾಯ'ದ ಗುರಿಯಾಗಿತ್ತು. ಒಂದು ಆದರ್ಶ 'ವೈಜ್ಞಾನಿಕ ಸಮಾಜವಾದ'ವನ್ನು ಒಪ್ಪುತ್ತಾ ಅದರ ತಾತ್ವಿಕ ಸಿದ್ಧಾಂತಕ್ಕೆ ಹಾಗೂ ನೀತಿ–ನಿಯಮಗಳಿಗೆ ಎಲ್ಲರೂ ನಡೆದುಕೊಳ್ಳುತ್ತಿದ್ದರು.

ಈ ಎಡ–ಸಮಾಜವಾದಿ ಚಿಂತನೆಯಿಂದ ಜನಸಮುದಾಯದ ಕಷ್ಟಗಳಿಗೆ ಸ್ಪಂದಿಸುವ ಸಾಹಿತ್ಯ–ಹಾಡು–ಬೀದಿನಾಟಕ–ರಂಗನಾಟಕ–ಸಿನಿಮಾ–ಚಿತ್ರಕಲೆ–ಜಾಥಾಗಳು–ವಿಚಾರಸಂಕಿರಣಗಳು–ಹೋರಾಟಗಳು ಹಾಗೂ ಚಳವಳಿಗಳನ್ನು ಕಟ್ಟುವ ಕೆಲಸದಲ್ಲಿ 'ಸಮುದಾಯ' ತೊಡಗಿತ್ತು. 'ಸಮುದಾಯ' ವೃತ್ತಿರಂಗಭೂಮಿಯ ಪರ್ಯಾಯವಾಗಿ ಹವ್ಯಾಸಿ ರಂಗಭೂಮಿಯನ್ನು ಬೆಳೆಸಿದ 'ಸಮುದಾಯ' ರಂಗ ಚಳವಳಿಗಳ ಮೂಲಕ ತನ್ನ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಸಾಮಾನ್ಯ ಜನರಿಗೂ ಅರಿವು ಮೂಡುವಂತೆ ಮಾಡುತ್ತಾ ಬಂದಿದೆ. ಹೀಗೆ ಮಾರ್ಕ್ಸ್‌ವಾದ ಸಾಮೂಹಿಕ ಸಂಘಟನೆಯಾಗಿ, ನಾಡಿನ ಸಾಂಸ್ಕೃತಿಕ ನೆಲೆಘಟ್ಟಗಳ ಚಾರಿತ್ರಿಕ ರಂಗ ಚಳವಳಿಯಾಗಿ ತನ್ನದೇ ಆದ ಸಾಮಾಜಿಕ ಚರಿತ್ರೆಯನ್ನು ಹುಟ್ಟು ಹಾಕಿದೆ ಎಂದರೆ ತಪ್ಪಾಗಲಾರದು.

ಪ್ರಗತಿಪರ ಚಿಂತಕರ ಸೈದ್ಧಾಂತಿಕತೆ

ಸಮಾಜದಲ್ಲಿ ಎಲ್ಲಾ ರೀತಿಯ ಸಂಪತ್ತು ಮತ್ತು ಅವಕಾಶಗಳು ಎಲ್ಲಾರಿಗೂ ಯಾವುದೇ ಭೇದಭಾವ ಇಲ್ಲದೆ ಸಮಾನವಾಗಿ ಸಿಗುವ, ಸಮಾನತೆಯಿಂದ ಬಾಳುವ ಸಮಾಜವೇ 'ಸಮಾಜವಾದ'ದ ಪರಿಕಲ್ಪನೆ. ಭಾರತ ಸ್ವಾಂತಂತ್ರ್ಯದ ನಂತರ ಪ್ರಜಾಪ್ರಭುತ್ವದಲ್ಲೇ ಸಮಾಜವಾದದ ಅಂಶಗಳು ಇರುವುದರಿಂದ ಭಾರತಕ್ಕೆ ಸಮಾಜವಾದದ ಅಗತ್ಯವಿಲ್ಲ ಎಂದು ಬಲಪಂಥೀಯ ರಾಜಕೀಯ ಪಕ್ಷಗಳು ಹೇಳಿದರೆ, ಸಮಾಜವಾದಿಗಳು ಇದನ್ನು ವಿರೋಧಿಸಿ ಬಡವರ–ಶ್ರೀಮಂತರ ನಡುವಿನ ಅಂತರದಿಂದ ಮಾನವರ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯ ಕುಂಠಿತವಾಗುತ್ತಿದೆ. ಇದಕ್ಕೆ ಸಮಾಜವಾದ ಒಂದೇ ಪರ್ಯಾಯವೆಂದು ಬಗೆದು ಕರ್ನಾಟಕದಲ್ಲಿ 'ಕ್ರಾಂತಿರಂಗ ಪಕ್ಷ', 'ಪ್ರಜಾ ಸಮಾಜವಾದಿ ಪಕ್ಷ' ಹಾಗೂ 'ಸಮಾಜವಾದಿ ಪಕ್ಷ'ಗಳು ಪ್ರಾರಂಭವಾದವು. ಇದರಲ್ಲಿ ಲೋಹಿಯಾ ಸಮಾಜವಾದಿ ರಾಜಕಾರಣಿಗಳು ಇರುವುದು ಕಾಣುತ್ತೇವೆ. ಮೊದಲಿಗೆ ಕರ್ನಾಟಕದಲ್ಲಿ ಸಮಾಜವಾದ ಸ್ಥಾಪನೆ ಮಾಡಿದಂತಹ ವ್ಯಕ್ತಿಗಳಲ್ಲಿ ಶಾಂತವೇರಿ ಗೋಪಾಲಗೌಡ, ಗಣಪತಿಯಪ್ಪ, ಪಿ.ಲಂಕೇಶ್, ಕಾಗೋಡು ತಿಮ್ಮಪ್ಪ, ಎಂ.ಡಿ.ನಜುಂಡಸ್ವಾಮಿ, ದೇವನೂರ ಮಹಾದೇವ, ಪಿ.ಜಿ.ಆರ್.ಸಿಂಧ್ಯಾ, ಎಂ.ಪಿ ಪ್ರಕಾಶ್, ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರ ತೇಜಸ್ವಿ, ಸುಂದರೇಶ್, ಬಂಗಾರಪ್ಪ ಇತರರು ಕರ್ನಾಟಕದಲ್ಲಿ ಆರವತ್ತರ ದಶಕದಲ್ಲಿ ಸಮಾಜವಾದ ಪಕ್ಷಗಳಿಂದ ರಾಜಕಾರಣದಲ್ಲಿ ಪ್ರಬಲವಾಗಿದ್ದರು. ಲೋಹಿಯಾ ಸಮಾಜವಾದವು ಭಾರತದಲ್ಲಿ ವರ್ಗಕ್ಕಿಂತ ಜಾತಿ ಪ್ರಶ್ನೆಗಳನ್ನು ಹೋಗಲಾಡಿಸಿ. ನಂತರ ವರ್ಗದ ಪ್ರಶ್ನೆಯನ್ನು ಎತ್ತಿ ಹಿಡಿಯುವುದು ಲೋಹಿಯಾ ಸಮಾಜವಾದದ ಪರಿಕಲ್ಪನೆಯಾಗಿದೆ. ಈ ಸಮಾಜವಾದಿ ಹಿನ್ನೆಲೆಯಿಂದ ಬಂದವರು ಸಾಹಿತ್ಯ, ನಾಟಕ, ಜಾಥಾ, ಸಿನಿಮಾಗಳು ಹಾಗೂ ಚಳವಳಿಗಳಲ್ಲಿ ಸಕ್ರಿಯವಾಗಿ ಸಾಂಸ್ಕೃತಿಕ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು.

ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಗಳ ನಡುವಣ ವ್ಯತ್ಯಾಸ ಎನೆಂದರೆ ಬಂಡವಾಳಶಾಹಿಯು ಉತ್ಪಾದನೆಗೆ ಮಿತಿಯಿಲ್ಲ ಎಂಬ ಸೂತ್ರ ಹಿಡಿದು ಕಾರ್ಯಪ್ರವೃತ್ತವಾಗುತ್ತದೆ. ಸಮಾಜವಾದವು ಅದಕ್ಕೊಂದು ಎಲ್ಲೆಯಿದೆ ಎಂಬ ಪ್ರಜ್ಞೆಯಿಂದ ಪ್ರೇರಣೆ ಪಡೆಯುತ್ತದೆ. ಆ

ಪ್ರೇರಣೆಗೆ ನೈತಿಕ ಮತ್ತು ಸೌಂದರ್ಯ ಪ್ರಜ್ಞೆ ಎಂಬ ಹೆಸರಿದೆ. ಅಂತಹ ಪ್ರೇರಣೆ ಇರುವಾಗಷ್ಟೇ ಮನುಕುಲದ ಪೂರ್ಣ ಬೆಳವಣಿಗೆಯು ಸೂಕ್ತ ಸ್ವರೂಪವನ್ನು ಹೊಂದುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಸಮಾಜವಾದ ಹಾಗೂ ಮಾರ್ಕ್ಸ್‌ವಾದವು ಮಾನವ ಸಂಸ್ಕೃತಿಯ ಸರ್ವಾಂಗೀಣ ಜೀವನದ ಎಲ್ಲಾ ವಿಭಾಗಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿದೆ. ಸಮಾಜವಾದವು ನಿರ್ದಿಷ್ಟವಾಗಿ ಹೇಳದಿದ್ದಾಗಲೂ, ಮಾನವನ ಚರಿತ್ರೆ, ಸಂಸ್ಕೃತಿ, ಸಂವೇದನೆ, ಆಕಾಂಕ್ಷೆ, ಸಾಧನೋಪಾಯ, ಸೃಜನಶೀಲತೆ, ಸಮಾನತೆ ಅಂಶಗಳು ಸೇರಿದಂತೆ ಮುಂತಾದವನ್ನು ಚರ್ಚಿಸುವಾಗ ಅಗತ್ಯವಾಗಿ ಸಮಾಜವಾದ ಹಾಗೂ ಮಾರ್ಕ್ಸ್‌ವಾದಿ ದೃಷ್ಟಿಕೋನ ಮತ್ತು ಸಿದ್ಧಾಂತದ ಛಾಯೆ ಅನಿವಾರ್ಯವಾಗಿ ಕಂಡುಬರುತ್ತದೆ.

ಇಂದು ಮಾನವರ ಉಳಿವಿಗೆ ಎರಡು ಪ್ರಬಲ ಆತಂಕಗಳಿವೆ ಒಂದು ಮಿಲಿಟರಿ, ಇನ್ನೊಂದು ಪರಿಸರ. ಕ್ರಮೇಣ ಅವೆರಡೂ ಸನಿಹಕ್ಕೆ ಬಂದು ಕೂಡಿಕೊಳ್ಳುತ್ತವೆ. ಹೇರಳವಾಗಿ ಲಭ್ಯವಿಲ್ಲದ ಸಂಪನ್ಮೂಲಗಳನ್ನು ದಕ್ಕಿಸಿಕೊಳ್ಳಲು ಸಂಘರ್ಷಗಳು ಯುದ್ಧದ ರೂಪ ಪಡೆಯುವ ಸಾಧ್ಯತೆ ಇರುತ್ತದೆ. ಕಳೆದ ಒಂದು ಶತಮಾನದಲ್ಲಿ ಶಾಂತಿಗಾಗಿ ತಹತಹಿಸಿರುವವರ ಪೈಕಿ ಸಮಾಜವಾದಿಗಳು ಹಾಗೂ ಕಮ್ಯುನಿಸ್ಟರು ಅಗ್ರಪಂಕ್ತಿಯಲ್ಲಿ ನಿಂತಿದ್ದಾರೆ. ಅದಕ್ಕೆ ಭಿನ್ನವಾಗಿ ಬಂಡವಾಳಶಾಹಿಯು ಯುದ್ಧವನ್ನು ಪ್ರಚೋದಿಸುವ ನೆಲೆಯಲ್ಲಿ ನಿಂತಿದೆ. ಹೀಗಿರುವಾಗ ಮನುಕುಲವು ಸಮಾಜವಾದದ ಬಗ್ಗೆ ಅಸಡ್ಡೆ ತೋರುವುದು ಸ್ವನಾಶದತ್ತ ನಡೆದಂತಾಗುತ್ತದೆಯೆಂಬ ಅರಿವು ನಮಗಿರಬೇಕು. ಇದು ಪರಿಸರದ ಬಗೆಗೂ ಹೇಳಬಹುದಾದ ಮಾತು. ಅಲ್ಲಿಯೂ ಬಂಡವಾಳಶಾಹಿಗಳು ಪರಿಸರದ ನಾಶಕ್ಕೆ ಹಾತೊರೆಯುತ್ತಾರೆ, ಸಮಾಜವಾದವು ಅದರ ರಕ್ಷಣೆಗೆ ಪಣತೊಟ್ಟಿದೆ. ಇಂತಹ ದುರ್ಬಲ ಸನ್ನಿವೇಶದಲ್ಲಿ ಸಮಾಜವಾದ ಬೇಕೋ? ಬರ್ಬರತೆಯತ್ತ ಹಿನ್ನಡೆ ಇಡಬೇಕೋ ಎಂಬುದು ಇಂದಿನ ಮನುಕುಲಕ್ಕೆ ಬಿಟ್ಟಿರುವ ತೀರ್ಮಾನ.

ಅಂಬೇಡ್ಕರ್‌ವಾದ–ಗಾಂಧಿವಾದದ ಭಿನ್ನ ಚಿಂತನೆಗಳು

'ಸಮುದಾಯ' ಸಂಘಟನೆಯಲ್ಲಿ ಇದ್ದವರು ದಲಿತ–ಬಂಡಾಯ ಸಂಘಟನೆಗಳನ್ನು ಹುಟ್ಟಿಹಾಕಿದರು. ನಂತರ 'ಸಮುದಾಯ'ದಿಂದ ದಲಿತ ಸಂಘಟನೆ ದೂರವಾಯಿತು. ಏಕೆಂದರೆ ಎಂಬತ್ತರ ದಶಕದ ಕೊನೆಯ ಭಾಗದಲ್ಲಿ ದಲಿತ ಸಂಘಟನೆಯಲ್ಲಿ ರಾಜಕೀಯ ಒಡಕುಗಳಿಂದ ಬೇರೆ ಬೇರೆಯಾಗಲು ಕಾರಣವಾಯಿತು. ೧೯೭೫ರಿಂದ ೮೦ರ ದಶಕದ ಕೊನೆಯವರೆಗೂ 'ಸಮುದಾಯ'ದ ಚಳವಳಿಗಳಿಗೆ ದಲಿತ ಸಂಘರ್ಷ ಸಮಿತಿ ಬೆಂಬಲವಾಗಿ ನಿಂತ್ತಿತ್ತು. ಅಂಬೇಡ್ಕರ್‌ವಾದದ ಪ್ರತಿಪಾದನೆ, ಜಾತಿ ತಾರತಮ್ಯ ವಿರುದ್ಧದ ಹೋರಾಟವಾಗಿದೆ. ಅಂಬೇಡ್ಕರ್ ಹಾಗೂ ಬುದ್ಧನ ತತ್ವಗಳೇ ಅಂಬೇಡ್ಕರ್ ವಾದವಾಗಿದೆ. ಇದಕ್ಕೆ ಗಾಂಧಿವಾದಕ್ಕೆ ಪರ್ಯಾಯಾಯವಾಗಿ ಅಂಬೇಡ್ಕರ್‌ವಾದ ಎಂಬತ್ತರ ದಶಕದಲ್ಲಿ ಹುಟ್ಟಿಕೊಂಡಿದ್ದಲ್ಲ. ಏಕೆಂದರೆ, ಗಾಂಧಿವಾದ 'ಪಾಪಪ್ರಜ್ಞೆ'ಯನ್ನು ಹೇಳಿದರೆ ಅಂಬೇಡ್ಕರ್‌ವಾದ 'ಜಾಗೃತಪ್ರಜ್ಞೆ'ಯನ್ನು ಪ್ರತಿಪಾದಿಸುತ್ತದೆ. ಗಾಂಧಿವಾದ 'ಹೃದಯ ಪರಿವರ್ತನ ಸಿದ್ಧಾಂತ' ಪ್ರತಿಪಾದನೆ

ಮಾಡಿದರೆ, ಅಂಬೇಡ್ಕರ್‌ವಾದ 'ಬುದ್ಧನ ಪರಿವರ್ತನ ಸಿದ್ಧಾಂತ'ವನ್ನು ಪ್ರತಿಪಾದಿಸುತ್ತದೆ. ಅಂಬೇಡ್ಕರ್‌ವಾದ ಮತ್ತು ಗಾಂಧಿವಾದ ನಿರಂತರವಾಗಿ ಮೆಲ್‌ನೋಟಕ್ಕೆ ವಿರುದ್ಧ ದಿಕ್ಕುಗಳಾಗಿ ಚರ್ಚೆಗೆ ಕಾರಣವಾಗುತ್ತಿದ್ದರೂ, ಎರಡರ ಮೂಲ ಆಶಯ ಒಂದೇ. ಎಂಬತ್ತರ ದಶಕದಲ್ಲಿ 'ಸಮುದಾಯ' ಸಂಘಟನೆಯು ಅಂಬೇಡ್ಕರ್ ಹಾಗೂ ಗಾಂಧಿ ಚಿಂತನೆಗಳನ್ನು ದೂರದೇ ಸಾಮಾಜಿಕ ಸಮಸ್ಯೆಗಳಾದ ಜಾತಿ, ಅಸ್ಪೃಶ್ಯತೆ, ಕೋಮುವಾದ, ಭಯೋತ್ಪದನೆ ಲಿಂಗತಾರತಮ್ಯ, ಧಾರ್ಮಿಕ ಕಂದಾಚಾರಗಳ ವಿರುದ್ಧವಾಗಿ ಕರ್ನಾಟಕದಾದ್ಯಂತ ಕಾರ್ಯಕ್ರಮಗಳನ್ನು ರೂಪಿಸಿ ಬೀದಿನಾಟಕ-ಜಾಥಾಗಳ ಮುಖೇನ 'ಸಮುದಾಯ'ಗಳಲ್ಲಿ ಜಾಗೃತಿ ಮೂಡಿಸಿ, ಹೋರಾಟ-ಚಳವಳಿಗಳನ್ನು ಕಟ್ಟಿ, ನಿರಂತರವಾಗಿ ಎಪತ್ತರ ದಶಕದಿಂದ ಇಂದಿನವರೆಗೂ 'ಸಮುದಾಯ' ಶ್ರಮಿಸುತ್ತಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಲಾಗಿದೆ.

'ಸಮುದಾಯ' ಸಂಘಟನೆಯನ್ನು ಬಹುತೇಕ ಅಂಬೇಡ್ಕರ್‌ವಾದಿಗಳು ಬೆಂಬಲಿಸುತ್ತಾ ಬಂದಿದ್ದಾರೆ. ಬಹಳ ಕಾಲದಿಂದಲೂ ಬುದ್ಧಿಜೀವಿಗಳ ವಲಯದಲ್ಲಿ ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪ್ಷಕದ ಬುದ್ಧಿಜೀವಿಗಳು ಅಂಬೇಡ್ಕರರ ಕೊಡುಗೆ ಮತ್ತು ಭಾರತದ ಚರಿತ್ರೆಯಲ್ಲಿ ಅವರ ಸ್ಥಾನಮಾನಗಳ ಕುರಿತು ಸ್ಪಷ್ಟವಾಗಿ ಚರ್ಚಿಸಿದ್ದಾರೆ. ಈ ಕುರಿತು ಬಿ.ಟಿ.ರಣದಿವೆ ಅವರ "ಜಾತಿ ಮತ್ತು ವರ್ಗ" ಕೃತಿಯನ್ನು ನೋಡಬಹುದು. ಆದರೆ ಬಹಳಷ್ಟು ಇತರೇ ಬುದ್ಧಿಜೀವಿಗಳಿಗೆ ಅಂಬೇಡ್ಕರ್ ಅವರು ಮಾರ್ಕ್ಸ್‌ವಾದಕ್ಕೆ ಅತಿನಿಕಟ ಎಂತಲೂ ಅಥವಾ ಅಂಬೇಡ್ಕರ್ ಅವರದ್ದೇ ನಿಜವಾದ ಮಾರ್ಕ್ಸ್‌ವಾದ ಎಂತಲೊ ಭ್ರಮೆಯಿದೆ. ಇತ್ತೀಚೆಗೆ ವಿಜಯ ಕರ್ನಾಟಕದಲ್ಲಿ ಬರಗೂರು ರಾಮಚಂದ್ರಪ್ಪನವರ 'ಕೆರಳಿದ ಕರುಳ ಧ್ವನಿ' ಎಂಬ ಲೇಖನ ಪ್ರಕಟವಾಗಿದೆ. ಇಲ್ಲಿಯೂ ಅಂತಹ ಒಂದು ಹುಚ್ಚು ಪ್ರಯತ್ನವನ್ನು ನೋಡಬಹುದು. ಈ ಕುರಿತು ಒಂದು ಚರ್ಚೆ ಪ್ರಸ್ತುತ ಲೇಖನದ ಉದ್ದೇಶ. ಮೊದಲಿಗೆ ಬರಗೂರರು ಅಂಬೇಡ್ಕರ್‌ರ ಮೂರು ಹೇಳಿಕೆಗಳನ್ನು (ಅವುಗಳಲ್ಲಿ೨,೩ ಮಾರ್ಕ್ಸ್‌ವಾದವನ್ನು ಎತ್ತಿ ಹಿಡಿಯುತ್ತವೆ) ಉಲ್ಲೇಖಿಸಿ ಅದರ ಮೇಲೆ ತಮ್ಮ ಚರ್ಚೆಯನ್ನು ಆರಂಭಿಸುತ್ತಾರೆ. ಅಂಬೇಡ್ಕರ್ ೧೯೪೭ನೆಯ ಮಾರ್ಚ್‌ನಲ್ಲಿ ಪತ್ರದ ಮುಖೇನ ತಮ್ಮ ಸಮಾಜವಾದಿ ವಿಚಾರಗಳನ್ನು ಮಂಡಿಸಿದ್ದಾರೆ. ಆ ವಿಚಾರಗಳು ಈ ಕೆಳಗಿನಂತಿವೆ "ಇಂಡಿಯಾಕ್ಕೆ ಸಮಾಜವಾದ ತೀರಾ ಅನಿವಾರ್ಯ. ಅದಿಲ್ಲದಿದ್ದರೆ ಖಾಸಗಿ ಸಂಸ್ಥೆಗಳು ಸಂಪತ್ತಿನ ಅಸಮಾನತೆಯನ್ನು ಬೆಳೆಸಿ ದ್ವೇಷಾಸೂಯಗಳಿಗೆ ಎಡೆಮಾಡಿಕೊಡುತ್ತವೆ. ಮಾರ್ಕ್ಸ್‌ವಾದ ಒಂದೇ ನಮಗೆ ಮದ್ದು. ಆದರೆ ಮಾರ್ಕ್ಸ್‌ವಾದವು ನಮಗೆ ಮಾರ್ಗದರ್ಶಕವಾಗಬೇಕೇ ಹೊರತು, ಉಲ್ಲಂಘಿಸಲಾಗದ ವೇದವಾಗಬಾರದು. "ಭೂಮಿ ರಾಷ್ಟ್ರೀಕರಣಗೊಳ್ಳಬೇಕು. ಸಾಮೂಹಿಕ ಬೇಸಾಯ ಕ್ಷೇತ್ರಗಳಿಗೆ ಆದ್ಯತೆ ಕೊಡಬೇಕು" ಎಂದು ಅಂಬೇಡ್ಕರ್ ಅವರು ತಿಳಿಸುತ್ತಾರೆ. ಹಾಗೆಯೇ ಗಾಂಧಿವಾದವು "ಸರಳಜೀವನ ನಡೆಸುತ್ತಾ ದೇಶಿತನಕ್ಕೆ ಆದ್ಯತೆ ನೀಡಿ, ಸರ್ವರ ಉದಯವಾಗಬೇಕು' (ಅಭಿವೃದ್ಧಿಯಾಗಬೇಕು) ಎಂಬ ಚಿಂತನೆಯನ್ನು 'ಸರ್ವೋದಯ'ದ ಪರಿಕಲ್ಪನೆಯನ್ನಾಗಿ ಗಾಂಧಿವಾದ ಪ್ರತಿಪಾದಿಸುತ್ತದೆ

೬.೫. 'ಸಮುದಾಯ'ದ ನಾಯಕರಲ್ಲಿನ ತಾತ್ವಿಕ ಸಂಘರ್ಷಗಳು ಹಾಗೂ ಸ್ಥಿತ್ಯಂತರಗಳು

ಕರ್ನಾಟಕ ಬಹುತೇಕ ರಂಗ ತಂಡಗಳಿಗೆ ತಾತ್ವಿಕವಾಗಿ ಹಾಗೂ ಸೈದ್ಧಾಂತಿಕವಾಗಿ ತನ್ನದೇ ಆದ ಆಶಯ ಹಾಗೂ ಸಿದ್ಧಾಂತಗಳು ಇರುವುದಿಲ್ಲ. ಅಂದರೆ ಕರ್ನಾಟಕದ ಮೂರು ಸಾಂಸ್ಕೃತಿಕ ಸಂಘಟನೆಗಳು ತನ್ನ ತಾತ್ವಿಕ ಸಿದ್ಧಾಂತದ ಮೇಲೆ ಕಾರ್ಯಯೋಜನೆಯಗಳ ಮೂಲಕ ವಿಸ್ತರಿಸಲು ಮುಂದಾಗಿದನ್ನು ನೋಡುತ್ತೇವೆ. ಆ ಸಾಂಸ್ಕೃತಿಕ ಸಂಘಟನೆಗಳು ಈ ಕೆಳಗಿನಂತಿವೆ.

೧. ಇಪ್ಟಾ(ಇಂಡಿಯನ್ ಪೀಪಲ್ಸ್ ಥಿಯೇಟರ್ ಅಶೋಸಿಯೇಷನ್)

೨. ನೀನಾಸಂ(ನೀಲಕಂಠೇಶ್ವರ ನಾಟ್ಯ ಸಂಘ)

೩. 'ಸಮುದಾಯ' ಕರ್ನಾಟಕ

ಈ ಮೂರು ಸಾಂಸ್ಕೃತಿಕ ರಂಗ ತಂಡಗಳ ಸಿದ್ಧಾಂತಗಳು ಹೀಗಿವೆ. ಕರ್ನಾಟಕ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಕಮ್ಯುನಿಸ್ಟ್ ಸೈದ್ಧಾಂತಿಕತೆಗೆ ಹೆಚ್ಚು ಆದ್ಯತೆಯನ್ನು ನೀಡಿದರೆ. ನೀನಾಸಂ ಲೋಹಿಯಾ ಸಮಾಜವಾದಿ ಸಿದ್ಧಾಂತಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಇದಕ್ಕೆ ಕಾರಣ ಕೆ.ವಿ.ಸುಬ್ಬಣ್ಣ ಅವರ ಸೈದ್ಧಾಂತಿಕವಾದ ಹಾಗೂ ತಾತ್ವಿಕ ವಿಚಾರಗಳು ಲೋಹಿಯಾ ಸಮಾಜವಾದ ತಾತ್ವಿಕತೆಗೆ ಬದ್ಧರಾಗಿ ಕರ್ನಾಟಕದಲ್ಲಿ ರಂಗ ಚಳವಳಿಯನ್ನು ಕಟ್ಟಿದ್ದರು. ಹೀಗೆ ೧೯೪೯ರಲ್ಲೇ ಪ್ರಾರಂಭವಾದ 'ನೀನಾಸಂ' ರಂಗತಂಡ, 'ಇಪ್ಟಾ' ರಂಗಸಂಘಟನೆಯು ೧೯೩೮ರಲ್ಲಿ ಪ್ರಾರಂಭವಾಯಿತು. ೧೯೭೫ರಲ್ಲಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗಳು ಪ್ರಾರಂಭವಾಗಿ ರಾಜ್ಯದಾದ್ಯಂತ ಸಾವಿರಾರು ರಂಗಕಲಾವಿದರನ್ನು ತಯಾರುಮಾಡಿತು. ಈ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಗೆ ಹಾಗೂ ರಂಗ ಸಾಹಿತ್ಯ ಚಳವಳಿಗೆ ಬೆನ್ನೆಲುಭಾಗಿ ತನ್ನ ಚಟುವಟಿಕೆಗಳ ಮೂಲಕ ಏರಿಳೀತಗಳ ಕಾಣುತ್ತಾ ಸಾಗುತ್ತಿದೆ. ಅರವತ್ತರ ದಶಕದ ಕೊನೆಯ ಭಾಗದಲ್ಲಿ ಹಾಗೂ ಎಪ್ಪತ್ತರ ದಶಕದ ಪ್ರಾರಂಭದಲ್ಲಿ ವಿದ್ಯಾರ್ಥಿ ಸಂಘಟನೆಗಳ ನಾಯಕರ ತಾತ್ವಿಕ ಚಿಂತನೆಗಳು ಹೆಚ್ಚು ಪ್ರಖವಾಗಿದ್ದವು. ಅವು ಕಾಂಗ್ರೆಸ್ ವಿರೋಧಿ ಸಿದ್ಧಾಂತವಾದ ಸಮಾಜವಾದ-ಮಾರ್ಕ್ಸ್‌ವಾದಕ್ಕೆ ಎಲ್ಲಾರೂ ಆಕರ್ಷಿತರಾಗುತ್ತಿದ್ದರು. ಇದರ ಜೊತೆಯಲ್ಲಿ ಕರ್ನಾಟಕದಲ್ಲಿ ರಾಮಮನೋಹರ ಲೋಹಿಯಾ ಚಿಂತನೆಯು ಸಮಾಜವಾದಕ್ಕೆ ಒಂದು ವರ್ಗದವರು ಆಕರ್ಷಿತರಾಗಿದ್ದರು. ಇವರ ರಾಜಕೀಯ ಸೈದ್ಧಾಂತಿಕ ಚಿಂತನೆಗಳಿಗೆ ಪೂರಕವಾದ ಸಮೂಹಿಕ ಸಂಘಟನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಎಲ್ಲಾ ತಾತ್ವಿಕ ಭಿನ್ನಪ್ರಾಯಗಳ ನಾಯಕರನ್ನು ಒಟ್ಟುಗೂಡಿಸಿದ್ದು ೧೯೭೩ರ 'ಬೂಸಾ ಪ್ರಕರಣ' ಒಟ್ಟು ಮಾರ್ಕ್ಸ್‌ವಾದಿಗಳ, ಸಮಾಜವಾದಿಗಳ ಹಾಗೂ ಅಂಬೇಡ್ಕರ್‌ವಾದಿಗಳನ್ನು ಒಟ್ಟುಗೂಡಿಸಿದರೆ ಇವರನ್ನು ರಾಜಕೀಯವಾಗಿ ಬಲಿಷ್ಟಗೊಳಿಸಿದ್ದು. ೧೯೭೫ರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಈ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕಾಂಗ್ರೆಸ್ ಹೊರತುಪಡಿಸಿ ಉಳಿದೆಲ್ಲಾ ಪಕ್ಷಗಳು ಒಂದಾಗಿದ್ದು ಕಾಣುತ್ತೆವೆ.

೧. ಕಾಂಗ್ರೇಸ್ ಪಕ್ಷ–ಸ್ವಾತಂತ್ರ್ಯ ಪೂರ್ವ(೧೮೮೫)

೨. ಕಮ್ಯುನಿಸ್ಟ್ ಪಕ್ಷ–ಸ್ವಾತಂತ್ರ್ಯ ಪೂರ್ವ(೧೯೨೦)

೩. ಪ್ರಜಾ ಸಮಾಜವಾದಿ ಪಕ್ಷ–೧೯೫೧

೪. ಸಮಾಜವಾದಿ ಪಕ್ಷ–೧೯೫೩

೫. ಕಾಂಗ್ರೆಸ್ ಪಕ್ಷ(ಐ)–೧೯೬೮

೬. ಕಾಂಗ್ರೆಸ್ ಪಕ್ಷ(ಒ)– ೧೯೬೮

೭. ಕ್ರಾಂತಿರಂಗ ಪಕ್ಷ–೧೯೮೦

೮. ಭಾರತೀಯ ಜನತಾ ಪಕ್ಷ–೧೯೮೦

೯. ಜನತಾ ದಳ–೧೯೮೧

ಹೀಗೆ ಪಕ್ಷಗಳು ಕರ್ನಾಟಕ ರಾಜಕಾರಣದಲ್ಲಿ ಹಲವಾರು ಸಂಘಟಕರು ಇದ್ದರೂ ಈ ಪಕ್ಷಗಳಿಗೆ ತನ್ನದೇ ಆದ ರಾಷ್ಟ್ರೀಯವಾದ, ಸಮಾಜವಾದ, ಮಾರ್ಕ್ಸ್‌ವಾದ ಚಿಂತನೆಗಳ ಮೂಲಕ ತನ್ನ ನೀತಿನಿಯಮ ಧೋರಣೆಗಳನ್ನು ಜಾರಿಗೆ ತರಲು ಮುಂದಾಗುತ್ತಿದ್ದರು. ಹೀಗೆ 'ಸಮುದಾಯ'ವು ೧೯೭೫ರ ತುರ್ತುಪರಿಸ್ಥಿತಿಯಲ್ಲಿ ಕಾಂಗ್ರೆಸ್ ಹಾಗೂ ಜನಸಂಘ(ಬಿ.ಜೆ.ಪಿ)ವನ್ನು ಹೊರತುಪಡಿಸಿ ಉಳಿದೆಲ್ಲ ರಾಜಕಾರಣದ ಚಿಂತಕರನ್ನು ರಾಜಕೀಯವಾಗಿ ಬಲಿಷ್ಟಗೊಳಿಸಿದ್ದನ್ನು ಕಾಣಬಹುದು. ಉಳಿದೆಲ್ಲ ಸಮಾಜವಾದಿ–ಜನತಾದಳದ ಚಿಂತಕರು ಹಾಗೂ ಮಾರ್ಕ್ಸ್‌ವಾದಿ ಚಿಂತಕರು ಪ್ರತ್ಯೇಕವಾಗಿ ಅಥವಾ ಪ್ರರೋಕ್ಷವಾಗಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮಗಳಲ್ಲಿ ಹಾಗೂ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದನ್ನು ಕಾಣುತ್ತೇವೆ. ಅವುಗಳು ಈ ಕೆಳಗಿನಂತೆ ಪ್ರಮುಖರನ್ನು ಮಾತ್ರ ವಿಭಾಗಿಸಲಾಗಿದೆ.

ಮಾರ್ಕ್ಸ್‌ವಾದಿಗಳು	ಲೋಹಿಯಾ ಸಮಾಜವಾದಿಗಳು (ಗಾಂಧಿವಾದಿಗಳು)	ಅಂಬೇಡ್ಕರ್ ವಾದಿಗಳು	ಲೆನಿನ್ ಮತ್ತು ಮಾವೋವಾದಿಗಳು
ಪ್ರಸನ್ನ	ಶಾಂತವೇರಿಗೋಪಾಲಗೌಡ	ಬಿ.ಕೃಷ್ಣಪ್ಪ	ನಗರಿ ಬಾಬಯ್ಯ
ಸಿ.ಜಿ.ಕೃಷ್ಣ ಸ್ವಾಮಿ	ಕೋಣದ್ದೂರು ಲಿಂಗಪ್ಪ	ಇಂದೂದರ ಹೊನ್ನಾಪುರ	ಸಾಕೇತ್ ರಾಜನ್
ಸಿ.ವೀರಣ್ಣ	ಗಣಪತಿಯಪ್ಪ	ಲಕ್ಷ್ಮೀನಾರಾಯಣ ನಾಗವರ	ಶ್ರೀಧರ್
ಡಿ.ಆರ್.ನಾಗರಾಜ	ಎಸ್.ವೆಂಕಟರಾವ್	ಎಲ್.ಹನುಮಂತಯ್ಯ	ಶ್ರೀಪಾದ್ ಭಟ್
ಕಿ.ರಂ.ನಾಗರಾಜ್	ಎಂ.ಡಿ.ನಂಜುಂಡಸ್ವಾಮಿ	ಡಿ.ಸಿ.ಸಾಗರ್	ಮುಳ್ಳೂರು ವಿಜಯಾ

ಕೆ.ವಿ.ನಾರಾಯಣ	ದೇವನೂರು ಮಹಾದೇವ	ಕೆ.ಬಿ.ಸಿದ್ದಯ್ಯ	ಶಿವಸುಂದರ್
ಬರಗೂರು ರಾಮಚಂದ್ರಪ್ಪ	ಡಿ.ಎಸ್.ನಾಗಭೂಷಣ್ ನಾಗರಾಜ್	ಮಾವಳ್ಳಿ ಶಂಕರ್	ಸಿರಿಮನೆ
ಸಿದ್ಧಲಿಂಗಯ್ಯ	ಚಂದ್ರಶೇಖರ ಪಾಟೀಲ	ಚನ್ನಣ್ಣ ವಾಲಿಕರ	ರುದ್ರಯ್ಯ
ಕೆ.ರಾಮಯ್ಯ	ಪೂರ್ಣಚಂದ್ರ ತೇಜಸ್ವಿ	ಪಿಚ್ಚಳ್ಳಿ ಶ್ರೀನಿವಾಸ	ಆರ್.ಮಾನಸಯ್ಯ
ಕೆ.ಮರಳುಸಿದ್ದಪ್ಪ	ಎನ್.ಡಿ.ಸುಂದರೇಶ್	ಚಂದ್ರಪ್ರಸಾದ್ ತ್ಯಾಗಿ	ಡಿ.ಉಮಾಪತಿ
ಎಸ್.ಎಸ್.ಹಿರೇಮಠ	ಕೆ.ವಿ.ಸುಬ್ಬಣ್ಣ	ಮುನಿಸ್ವಾಮಿ	ಲಕ್ಷ್ಮೀಪತಿ. ಸಿ.ಜಿ
ಆರ್.ಕೆ.ಹುಡುಗಿ	ರಘುನಂದನ್	ಸಿ.ಮುನಿಯಪ್ಪ	ಅಶೋಕ
ಲಿಂಗದೇವರು ಹಳೇಮನೆ	ಕೆ.ರಾಮದಾಸ್	ಎಂ.ವೆಂಕಟಸ್ವಾಮಿ	ವಡ್ಡಗೆರೆ ನಾಗರಾಜಯ್ಯ
ಅರವಿಂದ ಮಾಲಗಿತ್ತಿ	ಕೋಡಿಹಳ್ಳಿ ಚಂದ್ರಶೇಖರ್	ಮುನಿವೆಂಕಟಪ್ಪ	ಬಸವರಾಜ ಸೂಳಿಬಾವಿ
ಲಕ್ಷ್ಮಿಪತಿ ಕೋಲಾರ	ಎಚ್.ಎಸ್.ರುದ್ರಪ್ಪ	ಬಿ.ಗಂಗಾಧರ್‌ಮೂರ್ತಿ	ಎಚ್.ಎಸ್. ಅನುಪಮಾ
ಎಸ್.ಮಾಲತಿ	ಕಡಿವಾಳ ಶಾಮಣ್ಣ	ಮೋಹನ್ ರಾಜ್	ನೂರ್ ಶ್ರೀಧರನ್
ಗಂಗಾಧರ ಸ್ವಾಮಿ	ಕೆ.ಎಂ.ಶಂಕರಪ್ಪ	ಶಿವಣ್ಣ	ಮಲ್ಲಿಗೆ ಸಿರಿಮನೆ
ಜನಾರ್ಧನ್	ಜಿ.ಆರ್.ಜಿ.ನಗರ್	ಸತ್ಯ ಭದ್ರಾವತಿ	ವಾಸು
ಸಿ.ಬಸವಲಿಂಗಯ್ಯ	ಹನುಮಂತಪ್ಪ ವಾಳದ	ಓ ಶ್ರೀಧರನ್	ಪಾರ್ವತಿ
ಸುರೇಶ್ ಆನಗಳ್ಳಿ	ಪೇಪರ್ ವೆಂಕಟರಾಮ್	ಲಕ್ಷ್ಮಣ	
ಕೆ.ಎಸ್.ವಿಮಲಾ	ಎಂ.ನಾಗಪ್ಪ	ಹೆಣ್ಣೂರು ಶ್ರೀನಿವಾಸ್	

ಈ ಮೇಲಿನ ಸಿದ್ಧಾಂತಗಳು ಬೇರೆ ಬೇರೆಯಾಗಿದ್ದರೂ ಕೊನೆಗೆ ಗುರಿಯು 'ಸಮ ಸಮಾಜದ ಕನಸು' ಅದು 'ಸಮಾಜವಾದ' ದಿಂದ ಮಾತ್ರ ಸಾಧ್ಯವೆಂದು ಕನಸು ಕಂಡವರು. ಆ ಕನಸಿಗಾಗಿ ನಿರಂತರವಾಗಿ ತಮ್ಮ ಇಡೀ ಜೀವನವನ್ನು 'ಸಮ ಸಮಾಜವಾದ ಕ್ರಾಂತಿ'ಗೆ ದುಡಿದವರು. ಇವರಲ್ಲಿ ತಾತ್ವಿಕವಾಗಿ ಭಿನ್ನಾಭಿಪ್ರಾಯಗಳು ಇದ್ದರೂ ಕೂಡ ಶೋಷಣೆರಹಿತ ಸಮಾಜ ನಿರ್ಮಾಣಕ್ಕಾಗಿ ಸಂಘಟನೆಗಳ ಮೂಲಕ ದಲಿತ-ಹಿಂದೂಳಿದ-ಅಲ್ಪಸಂಖ್ಯಾತರಲ್ಲಿ ಸಂಘಟನೆಯ ಮಾನೋಭಾವವನ್ನು ಬೆಳೆಸಿದರು. ಎಪ್ಪತ್ತು ಹಾಗೂ ಎಂಬತ್ತರ ದಶಕದಲ್ಲಿ ಚಳವಳಿಗಳನ್ನು ಗಟ್ಟಿಗೊಳಿಸಿದ್ದು ಎಂದು ಹೇಳಿಬಹುದು.[೬] ನಂತರ ೧೯೮೮ 'ಸಮುದಾಯ' ಕೆಲಮುಂಖಂಡರು 'ಸಮುದಾಯ'ದಿಂದ ಸ್ವಲ್ಪ

ದೂರ ಉಳಿದರು. ಏಕೆಂದರೆ ರಾಜಕೀಯ ಕಾರಣ, 'ಸಮುದಾಯ', ದಲಿತ-ಬಂಡಾಯ ಹಾಗೂ ಇತರ ಪ್ರಗತಿಪರ ಸಂಘಟನೆಗಳು 'ಎಡಪಕ್ಷಗಳೊಂದಿಗೆ ಹಾಗೂ ಸಮಾಜವಾದಿ' ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದರು. ಆದರೆ ೧೯೮೮ರಲ್ಲಿ ರಾಮಕೃಷ್ಣ ಹೆಗಡೆ, ದೇವೆಗೌಡರು ವಿರೇಂದ್ರ ಪಾಟಿಲ್, ಎಲ್.ಹನುಮಂತಯ್ಯ, ಸಿದ್ಧಲಿಂಗಯ್ಯ, ದೇವನೂರು ಮಹಾದೇವ ಹಾಗೂ ಬಿ.ಕೃಷ್ಣಪ್ಪ ಅವರ ಮೂಲಕ ದಲಿತ-ಬಂಡಾಯ ಸಂಘಟನೆಗಳು ರಾಜಕೀಯವಾಗಿ ಸ್ಥಿತ್ಯಂತರಗಳು ಕಂಡವು. ೧೯೮೩ರ ಚುನಾವಣೆಯಲ್ಲಿ ೨೦ ಹೆಚ್ಚು ನಾಯಕರು ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಪಕ್ಷಗಳಿಂದ ಗೆಲವು ಸಾದಿಸಿದ್ದರು. ನಂತರ ೧೯೮೮ ವೇಳೆಗೆ ಜೆ.ಡಿ.ಎಸ್, ಕಾಂಗ್ರೆಸ್, ಬಿ.ಜೆ.ಪಿ ಪಕ್ಷಗಳ ನಾಯಕರು 'ಸಮುದಾಯ' 'ದಲಿತ-ಬಂಡಾಯ' ಸಂಘಟನೆಗಳಲ್ಲಿ ಬೆಳೆದ ನಾಯಕರನ್ನು ಈ ಮೇಲಿನ ಮೂರು ಪಕ್ಷಗಳಿಗೆ ರಾಜಕೀಯವಾಗಿ ಸೆಳೆಯುವಲ್ಲಿ ಯಶಸ್ವಿಯಾದವು. ಇದನ್ನು ಅರಿತ ಕಮ್ಯುನಿಸ್ಟ್ ಪಕ್ಷದ ಮುಖಂಡರು 'ಸಮುದಾಯ' ಸಂಘಟನೆಯನ್ನು ಮುಖಂಡತ್ವ ವಹಿಸಿದರು, (ಸಿಪಿ.ಎಂ) ಪಕ್ಷದ ಸದಸ್ಯರಾಗಿರಬೇಕು ಎಂದು ನಿಯಮ ರೂಪಿಸಿ ಜಾರಿಗೆ ಮುಂದಾದರು. ಈ ಕಾರಣದಿಂದ ಮೇಲಿನ ದಲಿತ-ಬಂಡಾಯ ಸಂಘಟನೆಯ ಮುಖಂಡರುಗಳು 'ಸಮುದಾಯ' ಸಂಘಟನೆಯಿಂದ ದೂರ ಉಳಿಯಲು ಕಾರಣವಾಯಿತು.

ಹೀಗೆ ಬಲಪಂಥೀಯ ಪಕ್ಷಗಳಲ್ಲಿ ಬಹಿರಂಗವಾಗಿ ಹಾಗೂ ಆಂತರಿಕವಾಗಿ ಗುರುತಿಗೊಂಡವರು 'ಸಮುದಾಯ' ತಂಥಹ ಸಂಘಟನೆಗೆ ಪ್ರಮುಖ ಸ್ಥಾನಮಾನ ನೀಡುವುದು ಅನಗತ್ಯವೆಂದು ಕಮ್ಯುನಿಸ್ಟ್ ಸಾಂಸ್ಕೃತಿಕ ಕಾರ್ಯಸೂಚಿಯ ಹಿನ್ನೆಲೆಯಲ್ಲಿ ಬಹುತೇಕ ದಲಿತ-ಬಂಡಾಯ ಸಂಘಟನೆಗಳು 'ಸಮುದಾಯ'ದಿಂದ ಸ್ವಲ್ಪ ಅಂತರವನ್ನು ಕಾಯ್ದುಕೊಂಡಿದ್ದು ಉಂಟು. ಇದು 'ಸಮುದಾಯ'ದ ನಾಯಕರಲ್ಲಿ ಸಂಘರ್ಷಕ್ಕೆ ಕಾರಣವಾಯಿತು. ಅದರಲ್ಲಿ ಕರ್ನಾಟಕ ಪ್ರಮುಖ ದಲಿತ ಮುಖಂಡರುಗಳಾದ ದೇವನೂರು ಮಹಾದೇವ ಅವರು ಸಮಾಜವಾದಿಗಳೊಂದಿಗೆ ಗುರುತಿಸಿಕೊಂಡು, ರಾಜಕೀಯವಾಗಿ ರಾಮಕೃಷ್ಣ ಹೆಗ್ಗಡೆ ಅವರಿಗೆ ಬೆಂಬಲಿಸಿದ್ದು ಪ್ರಮುಖ ಕಾರಣವಾಯಿತು. ಜೊತೆಗೆ ಬಿ.ಕೃಷ್ಣಪ್ಪ ಮಾನವತಾದಿಯಾಗಿ ೧೯೮೮ರ ನಂತರ ರಾಜಕೀಯವಾಗಿ ದಲಿತ ಸಂಘರ್ಷ ಸಮಿತಿಗೆ ಭಾರತೀಯ ಸಮಾಜವಾದಿ ಪಕ್ಷ(ಬಿ.ಎಸ್.ಪಿ)ದಲ್ಲಿ ರಾಜಕೀಯವಾಗಿ ಬೆಂಬಲಿಸಬೇಕೆಂದು ಬಿ.ಎಸ್.ಪಿ ಪಕ್ಷದ ಕಾನ್ಷಿರಾಂ ಅವರ ಸಹಕರಾದೊಂದಿಗೆ ಕರ್ನಾಟಕದಲ್ಲಿ ಬಿ.ಎಸ್.ಪಿ ಪಕ್ಷವನ್ನು ಕಟ್ಟಿದರು. ಆದರೆ ಮಾರ್ಕ್ಸ್‌ವಾದಿ ಸಿದ್ಧಲಿಂಗಯ್ಯ, ಕೆ.ರಾಮಯ್ಯ ಹಾಗೂ ಎಲ್.ಹನುಮಂತಯ್ಯ ಅವರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬಲಪಂಥೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದರು. ಇವರ ಸಹಪಾಠಿ ಹೋರಾಟಗಾರರು ಹಾಗೂ ಇವರ ಶಿಷ್ಯ ಬಳಗವೂ ಕೂಡ ಇದೆ ಹಾದಿಯಲ್ಲಿ ಮುಂದುವರಿತ್ತಿರುವುದು ಇಂದಿಗೂ ಕಾಣುತ್ತೇವೆ.

ಮಾರ್ಕ್ಸ್‌ವಾದಿ ನಾಯಕರಾದ ಕೆಲವರು ಜೆ.ಡಿ.ಎಸ್ ಹಾಗೂ ಕಾಂಗ್ರೆಸ್ ಪಕ್ಷಗಳ ಜೊತೆ ಗುರುತಿಸಿಕೊಂಡು ಅಧಿಕಾರದ ಲಾಭವನ್ನು ಪಡೆದರು. ಆದರೆ 'ಸಮುದಾಯ'ದ ಗುಂಡಣ್ಣ.ಸಿ.ಕೆ

ಈಗಲೂ ಮಾರ್ಕ್ಸ್‌ವಾದಿಯಾಗಿ, ಕೃಷ್ಣಪ್ಪ ಬಿ.ಎಸ್.ಪಿ ಪಕ್ಷದಲ್ಲಿ ಹಾಗೂ ಶಾಂತವೇರಿ ಗೋಪಾಲಗೌಡರು ಸಮಾಜವಾದಿಯಾಗಿ ತನ್ನ ಜೀವನ ಉದ್ದಕ್ಕೂ ಅದೇ ತಾತ್ವಿಕ ಸಿದ್ಧಾಂತಗಳಲ್ಲಿ ಇದ್ದದು ಚಾರಿತ್ರಿಕ ರಾಜಕಾರಣ ಘಟನೆಗಳ ನೆಲೆಗಳಲ್ಲಿ ವಿರ್ಮಶೆಗೆ ಒಳಪಡಿಸಿದಾಗ ಅರಿವು ಆಗುತ್ತದೆ. ಹೀಗೆ 'ಸಮುದಾಯ' ಸಂಘಟನೆಯಲ್ಲಿ ನಾಯಕತ್ವ ಕಮ್ಯುನಿಸ್ಟ್ ವಹಿಸಿದೇ. ಬಹುತೇಕರು ಮಾರ್ಕ್ಸ್‌ವಾದಿ ಸಾಹಿತಿಗಳನ್ನು ನಿರಂತರವಾಗಿ ಪಕ್ಷದಲ್ಲೇ ಉಳಿಸಿಕೊಳ್ಳಲು ಆಗಲಿಲ್ಲ. ಅದರಲ್ಲಿ ಪ್ರಸನ್ನ, ಸಿ.ಜಿ.ಕೃಷ್ಣಸ್ವಾಮಿ, ಕಿ.ರಂ.ನಾಗರಾಜ, ಡಿ.ಆರ್.ನಾಗರಾಜ, ಎಲ್.ಹನುಮಂತಯ್ಯ, ಸಿದ್ಧಲಿಂಗಯ್ಯ, ಜನಾರ್ಧನ, ಸಿ.ಬಸವಲಿಂಗಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಕೆ.ವಿ.ನಾರಾಯಣ, ಬಂಜೆಗೆರೆ ಜಯಪ್ರಕಾಶ ಮುಂತಾದವರು ಎಪ್ಪತ್ತರ ದಶಕದಲ್ಲಿ ಕಮ್ಯುನಿಸ್ಟ್‌ರಾಗಿ ಗುರುತಿಸಿಕೊಂಡರು. ನಂತರ ಸಮಾಜವಾದಿ ಪಕ್ಷ ಹಾಗೂ ಜನತಾದಳ(ಜಾತ್ಯತೀತ) ಪಕ್ಷಗಳ ಜೊತೆಯಲ್ಲಿ ನಂತರ ಕಾಂಗ್ರೆಸ್ ಪಕ್ಷ ಬೆಳವಣಿಗೆ ಪರೋಕ್ಷವಾಗಿ ಕೆಲವರು ಬೆಂಬಲಿಸಿದ್ದು ಕಾಣುತ್ತೇವೆ.[೭] ಇದರಿಂದ ಕರ್ನಾಟಕದ ಬುದ್ಧಿ ಜೀವಿಗಳು ಕರ್ನಾಟಕದ ಕಾಂಗ್ರೆಸ್-ಬಿ.ಜೆ.ಪಿ ಹಾಗೂ ಜೆ.ಡಿ.ಎಸ್ ಪಕ್ಷಗಳ ರಾಜಕಾರಣಿಗಳ ರಾಜತಾಂತ್ರಿಕತೆಗೆ ಸ್ಥಿತ್ಯಂತರಗಳಾಗಿದ್ದು ರಾಜ್ಯ ರಾಜಕಾರಣದ ಘಟನೆಗಳನ್ನು ಕೂಲಂಕಷವಾಗಿ ಗಮನಿಸಿದರೆ ತಿಳಿಯುತ್ತದೆ. ಹೀಗೆ ೧೯೯೫ರ ನಂತರ 'ಸಮುದಾಯ'ವು ಜಾಗತೀಕರಣ, ಉದಾರೀಕರಣ, ಖಾಸಗೀಕರಣ(ಎಲ್.ಪಿ.ಜಿ) ನೀತಿಗಳಿಗೆ ಇನ್ನೂ ಹೆಚ್ಚು ಬೀದಿನಾಟಕಗಳ ಮೂಲಕ ಪುನರ್ ಸಂಘಟನೆಯಾಗಿ 'ಸಮುದಾಯ'-ದಲಿತ-ಬಂಡಾಯ-ಚಳವಳಿಗಳ ಮೂಲಕ ಮತ್ತೊಂದು ರಂಗ ಚಳವಳಿ ಅಗತ್ಯವಿದೆ. ಈ ಮೂರು ಸಂಘಟನೆಗಳು ಕುಂಟಿತವಾಗಿ ಎಪ್ಪತ್ತು ಹಾಗೂ ಎಂಬತ್ತರ ದಶಕದಲ್ಲಿ ಇದ್ದ ಗಂಭೀರ ಸಂಘಟನೆ ತಾತ್ವಿಕತೆಯು ಸಿದ್ಧಾಂತವು ಪ್ರಸ್ತುತ ಪುನರ್‌ಮನನ ಮಾಡಿಕೊಳ್ಳುವಂತಾಗಬೇಕು. ಈ ಎಲ್ಲಾ ಸಂಘಟನೆಗಳನ್ನು ಮತ್ತೆ ಬಲಿಷ್ಟಗೊಳಿಸಲು ವಿದ್ಯಾರ್ಥಿ-ಯುವಜನರಲ್ಲಿ ರಾಜಕಾರಣ ಪ್ರಜ್ಞೆಯನ್ನು ಹಾಗೂ ಸೈದ್ಧಾಂತಿಕತೆ, ತಾತ್ವಿಕ ಗಟ್ಟಿತನವನ್ನು ಈ ಮೂರು ಸಂಘಟನೆಗಳು ಪ್ರಸ್ತುತ ಉಂಟುಮಾಡಲು ರಚನಾತ್ಮಕ ಕಾರ್ಯಯೋಜನೆ ರೂಪಿಸಿಬೇಕಿದೆ.

೬.೬.'ಸಮುದಾಯ'ವು ಬೀರಿದ ರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಪ್ರಭಾವ

೧೯೭೫ರಲ್ಲಿ ಪ್ರಾರಂಭವಾದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ತನ್ನ ವಿಶಿಷ್ಟ ಬೀದಿನಾಟಕಗಳ ಮೂಲಕ ರಂಗ ಚಳವಳಿಯನ್ನು ಆರಂಭಿಸಿದ್ದು ಅತ್ಯಂತ ಚಾರಿತ್ರಿಕ ಅಂಶವಾಗಿದೆ. ೧೯೭೭ರಲ್ಲಿ ತುರ್ತುಪರಿಸ್ಥಿತಿಯಲ್ಲಿ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮೊಟಕು ಮಾಡಿದ ಇಂದಿರಾ ಗಾಂಧಿ ಕ್ರಾಂಗ್ರೆಸ್ಸಿನ ಸರ್ಕಾರದ ವಿರುದ್ಧ ನಿಂತ ಸಂಘಟನೆಯಾಗಿದೆ. ಅಲ್ಲದೇ ಚಿಕ್ಕಮಂಗಳೂರು ಉಪಲೋಕಸಭಾ ಚುನಾವಣೆಯಲ್ಲಿ ನಿಂತಿದ್ದ ಇಂದಿರಾ ಗಾಂಧಿಯ ವಿರುದ್ಧ 'ಸರ್ವಾಧಿಕಾರಿ ಧೋರಣೆ ವಿರುದ್ಧ' 'ಸಮುದಾಯ' ಜಾಥಾಗಳಲ್ಲಿ ೩೫೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದ್ದು ಕಾಣುತ್ತೇವೆ. ಈ 'ಸಮುದಾಯ'ದ ನಾಟಕಗಳು ಚಿಕ್ಕಮಂಗಳೂರಿನ ಎಲ್ಲಾ ಹಳ್ಳಿಗಳನ್ನು ತಲುಪಲು ಸಾಧ್ಯವಾಯಿತು. ಈ ಜಾಥಾವು ಇಂದಿರಾ ಗಾಂಧಿಯರ ವಿರುದ್ಧ ನಡೆದ ನಾಟಕಗಳು ಪತ್ರಿಕೆಗಳು, ದೂರದರ್ಶನ, ರೇಡಿಯೋಗಳಲ್ಲಿ ರಾಷ್ಟ್ರೀಯ ಮಟ್ಟದ ಪ್ರಚಾರಾಂದೋಲನವಾದದ್ದು ಕಾಣುತ್ತೇವೆ.

ಇದರ ನಂತರ ೧೯೭೭ರಲ್ಲಿ 'ಹೊಸ ಮೌಲ್ಯಗಳನ್ನು ಹೊತ್ತ' 'ಸಮುದಾಯದ ಸಾಂಸ್ಕೃತಿಕ ಜಾಥಾ' ರಾಜ್ಯ ಮಟ್ಟದ ಅನುಭವವನ್ನು ಪಡೆದ ನಂತರ 'ಸಮುದಾಯ' ಪ್ರಮುಖ ನಾಟಕಗಳಾದ ಬೆಲ್ಚಿ, ಪತ್ರೆ ಸಂಗಪ್ಪನ ಕೊಲೆ, ತಾಯಿ, ಗೆಲಿಲಿಯೋ, ಓ ಭಸ್ಮಾಲ ಹಾಗೂ ದಂಗೆಯ ಮುಂಚಿನ ದಿನಗಳು ಮುಂತಾದ ನಾಟಕಗಳು ದೆಹಲಿ, ಕಲ್ಕತ್ತಾ, ಚೆನ್ನೈ, ಮುಂಬೈ, ಲಕ್ನೋ, ತಿರುವಂನತಪುರಂ, ವಿಜಯವಾಡಗಳಲ್ಲಿ ೧೯೭೭ರಿಂದ ೧೯೯೦ರವರೆಗೆ ಹೆಚ್ಚು ರಾಷ್ಟ್ರವ್ಯಾಪ್ತಿ ಸಾಂಸ್ಕೃತಿಕವಾಗಿ ಸದ್ದು ಮಾಡಿದ್ದು ನೋಡುತ್ತೇವೆ. 'ಸಮುದಾಯ' ಜೊತೆಯ ದೆಹಲಿಯ 'ಜನ ನಾಟ್ಯ ಮಂಚ್'ರ ಸಪ್ಧರ್ ಹಶ್ಮಿಯು ರಂಗ ಚಳವಳಿ ಹಾಗೂ 'ಸಮುದಾಯ' ಚಿಂತನೆಯ ತಾತ್ವಿಕವಾಗಿ ಬೀದಿ ರಂಗಚಳವಳಿಗೆ ಹೆಚ್ಚು ಆದ್ಯತೆ ನೀಡಿದ ಕಾರಣ, ೧೯೮೮ರಲ್ಲಿ ಕೇರಳದಿಂದ ಹಾಗೂ ದೇಶದ ವಿವಿಧ ಭಾಗಗಳಿಂದ ರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ವಿಜ್ಞಾನ ಜಾಥಾಗಳು ಪ್ರಾರಂಭವಾಯಿತು. ಕೇರಳದಿಂದ 'ಸಮುದಾಯ'ದ ಅಧ್ಯಕ್ಷರಾಗಿದ್ದ ಸಿ.ಬಸವಲಿಂಗಯ್ಯ ಅವರ ನೇತೃತ್ವ ವಹಿಸಿದರು. ಈ ಜಾಥಾವು ಕರ್ನಾಟಕದ ತುಮಕೂರು ಬೆಂಗಳೂರು ಇತರೆ ಕಡೆಗಳಿಂದ ಮಧ್ಯಪ್ರದೇಶದ ಭೂಪಾಲ್‌ನಲ್ಲಿ ಎಲ್ಲಾ ವಿಜ್ಞಾನ ಜಾಥಾಗಳು ವಿವಿಧ ತಂಡಗಳು ಐಕ್ಯವಾಗಿ 'ಭೂಪಾಲ್ ಅನಿಲ ದುರಂತ'ದ ವಿರುದ್ಧ ಹೊಸ ಸಾಂಸ್ಕೃತಿಕ ಆಂದೋಲನವನ್ನು ಕೈಗೊಂಡಿದ್ದು ರಾಷ್ಟ್ರಮಟ್ಟದಲ್ಲಿ 'ಸಮುದಾಯ'ವು ಪ್ರಭಾವಕ್ಕೆ ಒಳಗಾಗಿದ್ದು ಕಾಣುತ್ತೇವೆ. ದೇಶ ಇತರ ಪ್ರಮುಖ ನಗರಗಳಲ್ಲಿ ನಡೆದ ನಾಟಕೋತ್ಸವಗಳಲ್ಲಿ 'ಸಮುದಾಯ' ನಾಟಕಗಳ ಹೆಚ್ಚು ಪ್ರಸಿದ್ಧಿಗಳಿಸಿದ್ದ ಕಲ್ಕತ್ತಾದ ಪ್ರಖ್ಯಾತ ರಂಗಕರ್ಮಿ ಬಾದಲ್ ಸರ್ಕಾರ್ ಹಾಗೂ ಉತ್ಪಾಲ್ ದತ್ ಹಾಗೂ ದೆಹಲಿಯ ದೇವೆಂದ್ರ ರಾಜ್ ಅಂಕುರ್ ಕನ್ನಡದ ಪ್ರಖ್ಯಾತ ಹಿರಿಯ ರಂಗಕರ್ಮಿ ಹಾಗೂ ಸಿನಿಮಾ ನಿರ್ದೇಶಕರಾದ ಎಂ.ಎಸ್.ಸತ್ಯು ಮುಂತಾದವು 'ಸಮುದಾಯ'ದ ಜೊತೆ ಗುರುತಿಸಿಕೊಂಡಿದ್ದು ಚಾರಿತ್ರಿಕ ಸಂಗತಿಯಾಗಿದೆ.

'ಸಮುದಾಯ' ಕಾರ್ಯಕರ್ತರಿಗೆ ರಂಗತರಬೇತಿ ಮೂಲಕ ಪ್ರಸನ್ನ ಹಾಗೂ ಬಿ.ವಿ.ಕಾರಂತರ ಸಹಯೋಗದೊಂದಿಗೆ ಉತ್ತರ ಭಾರತದಲ್ಲಿಯೇ ಉಳಿದಿದ್ದ ಸರೋದ್ ಗಾಯಕಾರದ ಪಂಡಿತ್ ತಾರಾನಾಥ್ ಅವರು 'ಸಮುದಾಯ'ದ ಕುರಿ ಹಾಗೂ ಇತರೇ ನಾಟಕಗಳಿಗೆ ಸಂಗೀತ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುವಂತೆ ಮಾಡಿದರು. 'ಸಮುದಾಯ' ನಾಟಕಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲು ಸಹಕಾರಿಯಾಯಿತು ಎಂದು ಹೇಳಬಹುದಾಗಿದೆ. ಇದರ ಜೊತೆ 'ಸಮುದಾಯ'ದ ಮೊದಲ ಅಧ್ಯಕ್ಷರಾದ ಪ್ರಸನ್ನ ಅವರು 'ಸಮುದಾಯ'ದ ಅಧ್ಯಕ್ಷರಾಗುವ ಮೊದಲೇ ಎನ್.ಎಸ್.ಡಿ ಮೂಲಕ ಲಕ್ನೋ, ಭೂಪಾಲ್, ಬಾಂಬೆ ಇನ್ನಿತರ ಕಡೆಯಲ್ಲಿ ರಾಷ್ಟ್ರೀಯ ಮಟ್ಟದ ರಂಗ ತರಬೇತಿ ಕಾರ್ಯಗಾರಗಳನ್ನು ನಡೆಸಿದ್ದರು. ಜೊತೆಗೆ ಎನ್.ಎಸ್.ಡಿ(ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ)ನಲ್ಲಿ ಅನೇಕ ಶಿಷ್ಯಬಳಗವನ್ನು ಹುಟ್ಟಿಹಾಕಿದ್ದು, ೧೯೮೦ರಲ್ಲಿ 'ಸಮುದಾಯ'ದ ನಟ-ನಟಿಯರಾದ ಎಸ್.ಮಾಲತಿ, ಸಿ.ಬಸವಲಿಂಗಯ್ಯ, ಜನಾರ್ಧನ(ಜನ್ನಿ), ಸುರೇಶ್ ಅನಗಳ್ಳಿ ಮುಂತಾದ 'ಸಮುದಾಯ'ದ ೨೫ಕ್ಕೂ ಹೆಚ್ಚು ಕಲಾವಿದರು ತಮ್ಮ ಹೆಚ್ಚಿನ ತರಬೇತಿಗಾಗಿ ಎನ್.ಎಸ್.ಡಿ ಗೆ ಸೇರಿಸಿ ರಂಗತರಬೇತಿ ಪಡೆಯಲು ಆರ್ಥಿಕ ಸಹಕಾರ ನೀಡಿದ್ದು 'ಸಮುದಾಯ' ಸಾಂಸ್ಕೃತಿಕ

ತಂಡಕ್ಕೆ ಸಲ್ಲುತ್ತದೆ.[೮] ಹೀಗೆ ಎನ್.ಎಸ್.ಡಿ ಪದವಿ ಪಡೆದ ಎಲ್ಲರೂ ನಿಸ್ವಾರ್ಥವಾಗಿ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯನ್ನು ಕರ್ನಾಟಕದಲ್ಲಿ ಸಂಘಟನೆಯನ್ನು ಕಟ್ಟಲು ದುಡಿದು, ಚಾರಿತ್ರಿಕವಾಗಿ 'ಕನ್ನಡ ರಂಗ ಚಳವಳಿ'ಯನ್ನು ಇನ್ನಷ್ಟು ಬೆಳವಣಿಗೆ ಆಗಲು ಸಾಧ್ಯವಾಯಿತು.

ಹೀಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಭಾರತದ ಇತರ 'ತೃತೀಯ ರಂಗಭೂಮಿ' ಹವ್ಯಾಸಿ ತಂಡಗಳ ಜೊತೆಯ ನಿರಂತರವಾಗಿ ಸಹಕಾರದೊಂದಿಗೆ ಸಂಬಂಧದಲ್ಲಿಟ್ಟುಕೊಂಡು ಭಾರತದ ರಂಗ ಚಳವಳಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಈ ಚಾರಿತ್ರಿಕ ಹಿನ್ನೆಲೆಯಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯು ೫೦೦ಕ್ಕೂ ಹೆಚ್ಚು ಬೀದಿ-ರಂಗನಾಟಕಗಳಿಂದ ಕೂಡಿದ್ದು 'ಸಮುದಾಯ'ವು ರಾಷ್ಟ್ರಮಟ್ಟದಲ್ಲಿ ರಂಗ ಚಳವಳಿಯನ್ನು ಕಟ್ಟಿದ್ದು 'ಸಮುದಾಯ' ತಂಡಕ್ಕೆ ಮಾತ್ರ ಸಲ್ಲುತ್ತದೆ ಎಂದರೆ ತಪ್ಪಗಲಾರದು.

೬.೭. 'ಸಮುದಾಯ'ದ ನಾಟಕೋತ್ಸವಗಳು, ಕಾರ್ಯಗಾರಗಳು ಹಾಗೂ ಕೋಮು ಸೌಹಾರ್ದತಾ ಉತ್ಸವಗಳು

'ಸಮುದಾಯ' ಸಾಂಸ್ಕೃತಿಕವಾಗಿ ಐತಿಹಾಸಿಕ ಜಾಥಾಗಳ ಮೂಲಕ ಗುರುತಿಸಿಕೊಳ್ಳುತ್ತ, ಇತರ ರಂಗ ಚಟುವಟಿಕೆಗಳಲ್ಲಿ ತನ್ನ ಚಹರೆಯನ್ನು ಗುರುತಿಸಿಕೊಂಡಿದೆ. 'ಸಮುದಾಯ' ರಂಗತರಬೇತಿ ಕಾರ್ಯಗಾರಗಳು, ನಾಟಕೋತ್ಸವಗಳು, ಶಿಬಿರಗಳು, ಕೋಮು ಸೌಹಾರ್ದತಾ ಉತ್ಸವಗಳು, ಕಲಾಪದರ್ಶನಗಳು, ಹಾಗೂ ಕಾರ್ಟೂನ್ ಕಲಾ ಪ್ರದರ್ಶನಗಳ ಜಾಥಾಗಳು ಮುಂತಾದ ಕಾರ್ಯಕ್ರಮಗಳು 'ಸಮುದಾಯ'ದ ಘಟಕಗಳಿಂದ ನಡೆಸಿಕೊಡಲಾಗಿದೆ. ರಾಜ್ಯ ಮಟ್ಟದ ಪ್ರಮುಖ ಕಾರ್ಯಕ್ರಮಗಳನ್ನೂ ನಡೆಸಿಕೊಟ್ಟಿದೆ. ಅದರಲ್ಲಿ ಪ್ರಮುಖವಾಗಿ ನಾಟಕೋತ್ಸವಗಳ ಬಗ್ಗೆ ಈ ಕೆಳಗಿನಂತೆ ಚರ್ಚಿಸಲಾಗಿದೆ.

ಬೀದಿ ನಾಟಕೋತ್ಸವ-೧೯೮೨

೧೯೮೨ರ ಫೆಬ್ರವರಿ ೪ನೇ ತಾರೀಖಿನಿಂದ ೬ನೇ ತಾರಿಖಿನ ವರೆಗೆ ೪ದಿನಗಳ ಕಾಲ ಕೋಲಾರ ಜಿಲ್ಲೆಯಲ್ಲಿ ಮೊಟ್ಟಮೊದಲ ಬಾರಿಗೆ ಕೆ.ಜಿ.ಎಫ್‌ನ ಇಂಗ್‌ಜಾರ್ಜ್ ಹಾಲ್ ಆವರಣದಲ್ಲಿ ಬೀದಿ ನಾಟಕಗಳ ಉತ್ಸವವನ್ನು ಹಮ್ಮಿಕೊಳ್ಳಲಾಯಿತು. ಈ ನಾಟಕೋತ್ಸವದ ಉದ್ಘಾಟನೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು 'ಸಮುದಾಯ' ರಾಜ್ಯ ಸಮಿತಿಯ ಜಿಲ್ಲೆಯ ಹಿರಿಯ ನಟ ನಂಗಲಿ ಶಿವಾನಂದರವರು ನೆರವೇರಿಸಿದರು. ಪ್ರತಿದಿನ ಒಂದು ಕನ್ನಡ, ಒಂದು ತಮಿಳು ನಾಟಕಗಳು ಪ್ರದರ್ಶನಗೊಂಡವು. ಇದೇ ಸಂದರ್ಭದಲ್ಲಿ ಹೊರತಂದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ, ಈ ನಾಟಕೋತ್ಸವದ ನಾಟಕಗಳೆಂದರೆ 'ಬೆಲೆ ಏರಿಕೆ', 'ಕೂಲಿಯ ತಂಗಿ', 'ಪತ್ರೆ ಸಂಗಪ್ಪನ ಕೊಲೆ', 'ಯಂತ್ರಗಳು' ಇವು ಕನ್ನಡ ನಾಟಕಗಳಾದರೆ, ತಮಿಳು ನಾಟಕಗಳು 'ಬೆಲ್ಚಿ', 'ಪ್ರದಲಾಳ್ವೈ ನೋಕ(ಹೊಸ ಬಾಳಿನಡೆಗೆ)', 'ಮುನ್ನೊಡಿಗಳ್(ಬೆಳೆದವರು)', 'ಪರೆಂವನ್(ಪಂಚಮ)', ನಾಟಕಗಳಾಗಿವೆ. ಈ ನಾಟಕೋತ್ಸವದ ಉದ್ಘಾಟನೆಯನ್ನು ಮೈಸೂರಿನ

ಹಿರಿಯ ರಂಗಕರ್ಮಿ ಲಿಂಗದೇವರು ಹಳೆಮನೆ ನಡೆಸಿಕೊಟ್ಟರು.[೯] ಹೀಗೆ ರಾಜ್ಯದ್ಯಾಂತ 'ಸಮುದಾಯ' ಘಟಕಗಳಲ್ಲಿ ಜಿಲ್ಲಾ ಮಟ್ಟ ನಾಟಕೋತ್ಸವ ನಡೆಯುತ್ತವೆ. ಅವುಗಳು ಕುಂದಾಪುರ, ಬೀದರ್, ಪುತ್ತೂರು, ದಾವಣಗೆರೆ, ಬೆಂಗಳೂರು, ರಾಯಚೂರು, ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ಗುಲಬರ್ಗಾ, ಬಳ್ಳಾರಿ, ಮಂಗಳೂರು, ಮತ್ತು ಉಡಪಿಯ 'ಸಮುದಾಯ' ಘಟಕಗಳ ಮೂಲಕ ಹಲವಾರು ನಾಟಕಗಳು ಜಿಲ್ಲಾ ಮಟ್ಟದ ನಾಟಕೋತ್ಸವ ಮೂಲಕ ಪ್ರದರ್ಶನಗಳನ್ನು ಕಂಡವು.

'ಸಮುದಾಯ'ದ ಪ್ರಮುಖ ನಾಟಕೋತ್ಸವಗಳ ಪಟ್ಟಿ

೧. ಜಿಲ್ಲಾ ಮಟ್ಟದ 'ಸಮುದಾಯ' ಬೀದಿ ನಾಟಕೋತ್ಸವ-೧೯೮೨

೨. ಕೆ.ಜಿ.ಎಫ್ 'ಸಮುದಾಯ'ದ ಬೀದಿನಾಟಕೋತ್ಸವ-೧೯೮೨

೩. ಶಿವಮೊಗ್ಗ 'ಸಮುದಾಯ'ದ ನೆರೆಪೀಡಿತರ ಜನರಿಗೆ ಹಣ ಸಂಗ್ರಹದ ನಾಟಕೋತ್ಸವ-೧೯೮೩

೪. ಹುಬ್ಬಳ್ಳಿ-ಧಾರವಾಡ 'ಸಮುದಾಯ'ದ ರಂಗವೇಳೆ-೮೮ ಅಂವಾಗಿ ನಾಟಕೋತ್ಸವ-೧೯೮೮

೫. ಬೆಂಗಳೂರು 'ಸಮುದಾಯ'ದ ನಾಟಕೋತ್ಸವ-೧೯೯೫

೬. ಸಿಂಧನೂರು 'ಸಮುದಾಯ'ದ ನಾಟಕೋತ್ಸವ-೧೯೯೬

೭. ರಾಯಚೂರು 'ಸಮುದಾಯ'ದ ನಾಟಕೋತ್ಸವ-೨೦೦೨

೮. ಹುಬ್ಬಳ್ಳಿ-ಧಾರವಾಡ ಸಮುದಾಯದ ರಾಜ್ಯ ಮಟ್ಟದ ಬೀದಿ ನಾಟಕ ಉತ್ಸವ-೨೦೦೪

೯. ಸಿ.ಜಿ.ಕೆಯ ಮಾಸದ ನೆನಪುಗಳು ಬೀದಿ ನಾಟಕೋತ್ಸವ-೨೦೦೬

೧೦. ಸಿಂಧನೂರು 'ಸಮುದಾಯ'ದ 'ಸಮುದಾಯ' ನಾಟಕೋತ್ಸವ-೨೦೦೮

೧೧. ಕುಂದಾಪುರ 'ಸಮುದಾಯ'ದ ರಾಜ್ಯ ಮಟ್ಟದ ರಂಗೋತ್ಸವ-೨೦೧೧

'ಸಮುದಾಯ'ದ ಕಾರ್ಯಗಾರಗಳು ಮತ್ತು ಶಿಬಿರಗಳು

ಯಾವುದೇ ಒಂದು ಸಂಘಟನೆಗೆ ಕಾರ್ಯಗಾರ ಅಥವಾ ಶಿಬಿರಗಳು ಬಹುಮುಖ್ಯವಾಗಿರುತ್ತವೆ. ಏಕೆಂದರೆ ನಿರ್ಧಿಷ್ಟ ವಿಷಯದ ಕುರಿತು ಆಳವಾಗಿ ಅಧ್ಯಯನ ಮಾಡಲು ಭೌತಿಕವಾಗಿ ಹಾಗೂ ಭೌದ್ಧಿಕವಾಗಿ ತರಬೇತಿ ಪಡೆಯಲು ಕಾರ್ಯಗಾರ ಸಹಕಾರ ಆಗಿತ್ತು. ಹೀಗೆ 'ಸಮುದಾಯ' ನಿರಂತರವಾಗಿ ರಂಗಕರ್ಮಿಗಳನ್ನು ಬೇರೆ ರಾಜ್ಯಗಳಿಂದ ಕರೆಯಿಸಿ, 'ಸಮುದಾಯ' ರಾಜ್ಯಮಟ್ಟದ, ಜಿಲ್ಲಾಮಟ್ಟದ ಕಾರ್ಯಗಾರ ಶಿಬಿರಗಳನ್ನು ಕಳೆದ ದಶಕಗಳಿಂದ ನಡೆಸಿಕೊಂಡು ಬರುತ್ತಿರುವುದನ್ನು ನೋಡುತ್ತೇವೆ. ಈ ಕಾರ್ಯಗಾರ ಅಥವಾ ಶಿಬಿರದಲ್ಲಿ ಬಹುಮುಖ್ಯ ರಂಗತರಬೇತಿ ಶಿಬಿರ ಎಂದರೆ ಜನಪದ, ವೃತ್ತಿ, ಹವ್ಯಾಸಿ ರಂಗಭೂಮಿಯ ಬಗೆಗೆ ಆಳವಾಗಿ ತಿಳಿಸುವ ಶಿಬಿರವಾಗಿರುತ್ತದೆ.

೧೯೭೮ರ ಮೊದಲ ರಾಜ್ಯ ಮಟ್ಟದ ಬೀದಿನಾಟಕದ ಕಾರ್ಯಗಾರ ಬೆಂಗಳೂರಿನ ಕುಂಬಳಗೋಡಿನಲ್ಲಿ 'ಸಮುದಾಯ' ಸಂಘಟನೆ ಆಯೋಜಿಸಿತು. ಈ ಕಾರ್ಯಗಾರಕ್ಕೆ ಭಾರತ ಹೆಸರಾಂತ ರಂಗಕರ್ಮಿಯಾದ ಬಾದಲ್ ಸರ್ಕಾರ್ ಪಶ್ಚಿಮ ಬಂಗಾಳದಿಂದ ಬಂದಿದ್ದರು. ಜೊತೆಗೆ ಉತ್ಪಾಲ್ ದತ್, ದೇವೆಂದ್ರ ರಾಜ್ ಅಕಂರ್, ಸಫ್ದರ್ ಹಶ್ಮಿ, ಮುಂತಾದವರು 'ಸಮುದಾಯ'ದ ನಾಲ್ಕುವರೆ ದಶಕಗಳ ಅವಧಿಯಲ್ಲಿ ಕಾರ್ಯಗಾರ ಹಾಗೂ ಶಿಬಿರಗಳನ್ನು ಮಾಡಿದ್ದು ಚಾರಿತ್ರಾರ್ಹವಾದದ್ದು. ಈ ಕಾರ್ಯಗಾರದಿಂದ 'ಶೂನ್ಯ ರಂಗ ಭೂಮಿ'(ತೃತಿಯ ರಂಗಭೂಮಿ)ಯಾದ ಬೀದಿ ರಂಗಭೂಮಿಯಲ್ಲಿ ನಾಟಕಗಳಿಗೆ ಹೇಗೆ ಹೆಚ್ಚು ಪರಿಕರಗಳನ್ನು ಬಳಸದೇ ಬೀದಿ ನಾಟಕವನ್ನು ಪ್ರದರ್ಶನ ಮಾಡಬಹುದು, ಎಂಬುದನ್ನು ಕುರಿತು ಕಾರ್ಯಗಾರದಲ್ಲಿ ಸೃಜನಶೀಲತೆವುಳ್ಳ ಸಂಪನ್ಮೂಲ ವ್ಯಕ್ತಿಗಳನ್ನು ಬೇರೆ ಬೇರೆ ರಾಜ್ಯಗಳಿಂದ ಕರೆಯಿಸಿ ನಡೆಸಿದವು.

'ಸಮುದಾಯ'ದ ಪ್ರಮುಖ ಕಾರ್ಯಗಾರಗಳು ಮತ್ತು ಶಿಬಿರಗಳು

'ಸಮುದಾಯ'ದ ಕಾರ್ಯಗಾರ ಅಥವಾ ಅಧ್ಯಯನ ಶಿಬಿರ ಹಾಗೂ ರಂಗ ತರಬೇತಿ ಶಿಬಿರ ಮುಂತಾದ ಹೆಸರುಗಳಿಂದ ಕರೆದರು. ಅದು ಒಂದು ಸಾಂಸ್ಕೃತಿಕ ರಂಗತಂಡಕ್ಕೆ ಬಹುಮುಖ್ಯ ಎನಿಸುತ್ತದೆ. ಏಕೆಂದರೆ ಯಾವುದೇ ಒಂದು ಸಾಂಸ್ಕೃತಿಕ ರಂಗ ತಂಡ ಕಾರ್ಯಗಾರ ಅತ್ಯಂತ ಮುಖ್ಯವಾಗಿರುತ್ತದೆ. ಅಲ್ಲಿ ಒಂದು ವಿಷಯ ಅಥವಾ ಹಲವು ವಿಷಯಗಳ ಬಗ್ಗೆ ಸುಧೀರ್ಘವಾಗಿ ತಿಳಿದುಕೊಳ್ಳಬಹುದಾಗಿದೆ. ಆದ್ದರಿಂದ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ವಾರ್ಷಿಕವಾರು ಒಂದು ರಾಜ್ಯ ಮಟ್ಟದ್ದು ಹಾಗೂ ಅಗತ್ಯಕ್ಕೆ ತಕ್ಕಂತೆ ಜಿಲ್ಲಾಮಟ್ಟದಲ್ಲಿ ಕಾರ್ಯಗಾರ-ರಂಗತರಬೇತಿ ಕಾರ್ಯಗಾರ ಹಾಗೂ ಅಧ್ಯಯನ ಶಿಬಿರಗಳನ್ನು ನಡೆಸಿಕೊಳ್ಳುತ್ತಾ ಬಂದಿದೆ.[೧೦] ಹೀಗೆ ೧೯೭೮ರಿಂದ ಇಂದಿನವರೆಗೂ 'ಸಮುದಾಯ' ಪ್ರಮುಖ ಕಾರ್ಯಗಾರ ಮತ್ತು ಶಿಬಿರಗಳ ಪಟ್ಟಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

೧. ಬಾದಲ್ ಸರ್ಕಾರ್ ಅವರು ನಡೆಸಿಕೊಟ್ಟ 'ಸಮುದಾಯ ಕಾರ್ಯಗಾರ' ಕುಂಬಳಗೋಡುನಲ್ಲಿ (ಕೆಂಗೇರಿ)-೧೯೭೮.

೨. ಕುಂದಾಪುರ 'ಸಮುದಾಯ'ದ ಸಿನಿಮಾ, ಶಿಕ್ಷಣ ಪ್ರಾಥಮಿಕ ಶಿಬಿರ-೧೯೮೩.

೩. ಕುಂದಾಪುರ ಮತ್ತು ಗಂಗೋಳ್ಳಿ ಪರಿಸರ ಗ್ರಾಮೀಣ ಮೀನುಗಾರ ಯುವಕರಿಗಾಗಿ ರಂಗತರಬೇತಿ ಶಿಬಿರ-೧೯೮೩.

೪. ಬೆಂಗಳೂರು 'ಸಮುದಾಯ' ಯುದ್ಧ ವಿರೋಧಿ ಕ್ರಾಂತಿ ಗೀತೆಗಳನ್ನು ಹಾಡುವ ತರಬೇತಿ ಶಿಬಿರ-೧೯೮೬.

೫. ಕರ್ನಾಟಕ 'ಸಮುದಾಯ' 'ನೂರು ಅಡಿಗಳ ಬಣ್ಣದ ನಡೆ, ಅಣು ಸಮರಕ್ಕೆ ಜನತೆಯ ತಡೆ' ಜಾಥಾದ ಅಂಗವಾಗಿ ಪೂರ್ವಬಾವಿ ಚಿತ್ರಕಲಾ ಕಾರ್ಯಗಾರ-೧೯೮೬.

೬. ಹುಬ್ಬಳ್ಳಿ-ಧಾರವಾಡ ಜಿಲ್ಲಾ ಮಟ್ಟದ 'ಸಮುದಾಯ' ರಂಗತರಬೇತಿ ಶಿಬಿರ-೧೯೮೮.

೭. ಕುಂದಾಪುರ 'ಸಮುದಾಯ' ಶಿಕ್ಷಣದಲ್ಲಿ ರಂಗಕಲೆ ಕಾರ್ಯಗಾರ-೨೦೧೦.

೮. ಕುಂದಾಪುರ 'ಸಮುದಾಯ'ದಿಂದ ರಾಜ್ಯ ಮಟ್ಟದ ವ್ಯಂಗ್ಯ ಚಿತ್ರ ಕಾರ್ಯಗಾರ-೨೦೧೦.

೯. 'ಸಮುದಾಯ' ಕರ್ನಾಟಕದಿಂದ 'ರಾಜ್ಯಮಟ್ಟದ ಅಧ್ಯಯನ ಶಿಬಿರ' ಗೊಟುಗೋಡಿ(ಹಾವೇರಿ)-೨೦೧೫.

೧೦. ಬೆಂಗಳೂರು 'ಸಮುದಾಯ'ದಿಂದ ಮಕ್ಕಳ ಬೇಸಿಗೆ ರಂಗ-ವಿಜ್ಞಾನ ಶಿಬಿರ -೨೦೧೫.

ಹೀಗೆ 'ಸಮುದಾಯ'ದ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಯಗಾರ ಮತ್ತು ಅಧ್ಯಯನ ಶಿಬಿರ ಹಾಗೂ ರಂಗ ತರಬೇತಿ ಶಿಬಿರಗಳನ್ನು 'ಸಮುದಾಯ' ರಾಜ್ಯ ಸಮಿತಿ ಹಾಗೂ ಜಿಲ್ಲಾ ಘಟಕ ಸಮಿತಿಗಳನ್ನು ಹಮ್ಮಿಕೊಂಡಿರುವುದನ್ನು ಕಾಣಬಹುದು.

'ಸಮದಾಯ'ದ ಕೋಮುಸೌಹಾರ್ದತಾ ಉತ್ಸವಗಳು

ಕೋಮುವಾದ ಭಾರತದಲ್ಲಿ ಪ್ರಸರಣ ಆದಷ್ಟು, ಯಾವ ದೇಶದಲ್ಲೂ ಪ್ರಸರಣ ಆಗದಿರುವುದನ್ನು ಕಾಣುತ್ತೇವೆ. ಏಕೆಂದರೆ ಭಾರತ ಹತ್ತಕಿಂತ ಹೆಚ್ಚು ಧರ್ಮಗಳು ಹಾಗೂ ೪೫೦೦ಕ್ಕಿಂತ ಹೆಚ್ಚು ಜಾತಿ-ಉಪಜಾತಿಗಳನ್ನು ಹೊಂದಿರುವ ದೇಶವಾಗಿದ್ದು, ಇದು ದೇಶ ಅನಾಭಿವೃದ್ಧಿಗೆ ಈ ಜಾತಿ-ಧರ್ಮ-ಮತಗಳ ಮೇಲೆ ಹಾಗೂ ಭಾಷಾ ಪ್ರಾದೇಶಿಕತೆಯ ಮೇಲೆ 'ಕೋಮುವಾದವನ್ನು' ಕೃತಕವಾಗಿ ಉಂಟುಮಾಡುವ ಮನುಷ್ಯ ಮನುಷ್ಯರ ಬೀಕರ ಹತ್ಯೆ-ಕೊಲೆಗಳಿಗೆ ಕೋಮು ದ್ವೇಷವೇ ಕಾರಣ ಎಂದು ಹೇಳಬಹುದು. ಅದು ಹಿಂದೂ ಕೋಮುವಾದ ಆಗಿರಬಹುದು, ಮುಸ್ಲಿಂ ಕೋಮುವಾದ ಆಗಿರಬಹುದು, ಕ್ರೈಸ್ತ ಧರ್ಮ ಕೋಮುವಾದ ಅಗಿರಬಹುದು. ಜಾತಿ-ಜಾತಿಗಳ ಕೋಮು-ಕೋಮಿನ ನಡುವೆ ಜಾತಿ-ಧರ್ಮ-ಭಾಷೆ-ಪ್ರಾದೇಶಿಕ ವಿಚ್ಛಾರಗಳ ಮೇಲೆ ಗಲಭೆಗಳಾಗಿ ಪ್ರಾಣ ಹಾನಿಯಾಗುವುದನ್ನು ಕೋಮುವಾದವಾಗಿದ್ದು, ೧೯೯೨ರಲ್ಲಿ ಉತ್ತರ ಪ್ರದೇಶದ ಕರಸೇವಕರ ಬಾಬ್ರಿ ಮಸೀದಿ ಧ್ವಂಸದ ನಂತರ ಭಾರತದಲ್ಲಿ ಹಿಂದೂ ಮುಸ್ಲಿಂ ಕೋಮುಗಲಭೆಗಳು ಹೆಚ್ಚಾದವು ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಕೋಮುವಾದ ವಿರುದ್ಧ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಹಲವಾರು ಕೋಮುಸೌಹಾರ್ದತಾ ಉತ್ಸವಗಳ ಮೂಲಕ ಕೋಮುವಾದ ವಿರುದ್ಧ ಆಂದೋಲನವನ್ನು ಉಂಟು ಮಾಡಿದ್ದು ಚಾರಿತ್ರಿಕ ಸಂಗತಿಯಾಗಿದೆ.[೧೧] ಇಂತಹ ಕಾರ್ಯಕ್ರಮಗಳ ಮೂಲಕ ನಾಟಕ-ಸಂಗೀತ-ಚಿತ್ರಕಲೆ-ವ್ಯಂಗ್ಯಚಿತ್ರಕಲೆ, ರಂಗಮೇಳಗಳು-ನಾಟಕೋತ್ಸವ ಹಾಗೂ ಕ್ರಾಂತಿಗೀತೆಗಳ ಮೂಲಕ ಕೋಮುಸಾಮರಸ್ಯವನ್ನು ನಾಡಿನಾದ್ಯಂತ ಮೂಡಿಸಲು ಮುಂದಾಯಿತು. ಅಂಥಹ ಕೋಮು ಸೌಹಾರ್ದತಾ ಕಾರ್ಯಕ್ರಮಗಳ ಪಟ್ಟಿಯನ್ನು ಈ ಕೆಳಗಿನಂತೆ ಗಮನಿಸಬಹುದು.

'ಸಮುದಾಯ'ದ ಕೋಮುಸೌಹಾರ್ದತಾ ಉತ್ಸವಗಳು

೧. ಬೆಂಗಳೂರು 'ಸಮುದಾಯ'ದಿಂದ ಸಫ್ದರ್ ಹಶ್ಮಿ ಸ್ಮರಣಾರ್ಥ ಸಮಗ್ರತ ಉತ್ಸವ–೧೯೮೯.

೨. ಹುಬ್ಬಳ್ಳಿ–ಧಾರವಾಡ 'ಸಮುದಾಯ' ಘಟಕದ ವತಿಯಿಂದ ಏಕತಾಂದೋಲನ ಸಮಿತಿ, ಧಾರವಾಡ–ಬೆಳಗಾಂ ಘಟಕಗಳು ಮತ್ತು ಕೋಮು ಸೌಹಾರ್ದಾ ಸಮಿತಿ, ಧಾರವಾಡ ಇವರ ಸಹಯೋಗದಲ್ಲಿ 'ಕೋಮುಸೌಹಾರ್ದತಾ ಕಾರ್ಯಕ್ರಮ–೧೯೯೩.

೩. ರಾಯಚೂರು 'ಸಮುದಾಯ'ದಿಂದ ಜನಸಂಸ್ಕೃತಿ ಉತ್ಸವ–೧೯೯೬.

೪. ಹುಬ್ಬಳ್ಳಿ–ಧಾರವಾಡ 'ಸಮುದಾಯ'ದಿಂದ ಅಮರ ಕಲಾವಿದ ಸಫ್ದರ್ ಹಶ್ಮಿಯ ಸ್ಮರಣಾರ್ಥ ಶಾಂತಿ ಹಾಗೂ ಸೌಹಾರ್ದತೆಯ ಉತ್ಸವ–೨೦೦೪.

೫. ಕುಂದಾಪುರ 'ಸಮುದಾಯ'ದಿಂದ ಮಕ್ಕಳ ರಂಗ ರಂಗು ಉತ್ಸವ–೨೦೧೩.

೬. ಬೆಂಗಳೂರು 'ಸಮುದಾಯ' ಕರ್ನಾಟಕದಿಂದ ಸಂಸ್ಕೃತಿ–ಸಾಮರಸ್ಯ 'ಸಮುದಾಯ' ರಂಗ ಸಂಗಮ–೨೦೧೫.

೭. 'ಸಮುದಾಯ' ಕರ್ನಾಟಕದಿಂದ 'ಸ್ವರ ಸಾಮರಸ್ಯ'ದ ರಾಷ್ಟ್ರೀಯ ಸಂಗೀತೋತ್ಸವ–೨೦೧೫.

೮. 'ಸಮುದಾಯ' ಕರ್ನಾಟಕದಿಂದ ಬಿಡುಗಡೆ ರಂಗ ಸಂಚಾರ–ರೆಪರ್ಟರಿ–೨೦೧೫.

ಹೀಗೆ 'ಸಮುದಾಯ' ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ 'ಸಮುದಾಯ' ಕೋಮುಸಾಮರಸ್ಯಕ್ಕೆ ಉತ್ಸವಗಳ ಮೂಲಕ ಬಹುತೇಕ ಪ್ರಶ್ನೆಗಳೊಂದಿಗೆ ವಿಚಾರ ಸಂಕಿರಣ, ಸಮಾವೇಶ, ಕವಿಗೋಷ್ಠಿಗಳನ್ನು ನಡೆಸಿದೆ.

೬.೮. 'ಸಮುದಾಯ'ದ ಸದಸ್ಯತ್ವ ಮತ್ತು ಘಟಕಗಳ ಏರಿಳಿತ(೧೯೭೫ರಿಂದ ಇಂದಿನವರೆಗೆ)

ಕರ್ನಾಟಕ 'ಸಮುದಾಯ' ರಾಜ್ಯ ಸಮನ್ವಯ ಸಮಿತಿಯಾಗಿ ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರಂಗ ಚಳವಳಿಯನ್ನು ಚಾರಿತ್ರಿಕವಾಗಿ ಉಂಟುಮಾಡಿತು. 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಹಿಂದಿನ ಪ್ರಬಲ ಶಕ್ತಿಯೇ 'ಸಮುದಾಯ' ಸದಸತ್ವ, ಹಾಗೂ ಘಟಕಗಳು ಒಂದು ಸಂಘಟನೆಯ ಆಯಾಯ ಘಟಕಗಳ ಸದಸ್ಯ ಸಂಖ್ಯೆಯ ಮೇಲೆ ಯಾವ ಘಟಕ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸಂಘಟನೆಗಳಿಗೆ ಸದಸ್ಯ ಮತ್ತು ಘಟಕವೂ ಮೂಲ ಸಂಘಟನಾತ್ಮಕ ಶಕ್ತಿ ಎಂದು ಗುರುತಿಸಬಹುದು. ಏಕೆಂದರೆ ರಾಜ್ಯ ಸಮಿತಿಗೆ ಶಕ್ತಿ ಎಂದರೆ ಘಟಕಗಳ ಕಾರ್ಯ ವೈಖರಿ.[೨] 'ಸಮುದಾಯ'ವು ಘಟಕವು ಹೆಚ್ಚು ತಾಲ್ಲೂಕು ಮಟ್ಟದಲ್ಲಿ 'ಸಮುದಾಯ' ಸದಸ್ಯ ಮತ್ತು ಘಟಕಗಳು ಇರುವುದು ನೋಡಬಹುದಾಗಿದೆ. ೧೯೭೫ರಲ್ಲಿ ಬೆಂಗಳೂರಿನ 'ಸಮುದಾಯ' ಸದಸ್ಯತ್ವ ಮತ್ತು ಘಟಕವಾಗಿ ಪ್ರಾರಂಭ ಹೊಂದಿ ನಂತರ ತುಮಕೂರು–ಮೈಸೂರು, ಮಂಗಳೂರು ಧಾರವಾಡ, ಗುಲ್ಬರ್ಗಾ, ಹಾಗೂ ರಾಯಚೂರು, ಬಳ್ಳಾರಿ ದಾವಣಗೆರೆ ಹೀಗೆ ಜಿಲ್ಲೆಗಳಲ್ಲಿ


ಘಟಕಗಳ ಸ್ಥಾಪನೆಗೊಂಡು. ೧೯೮೨ಕ್ಕೆ ಸುಮಾರು ೨೫ಕ್ಕೂ ಹೆಚ್ಚು ಘಟಕಗಳಾಗಿ ಕಾರ್ಯನಿರ್ವಹಿಸಿದ್ದು ಚಾರಿತ್ರಿಕ ಸಂಗತಿಯಾಗಿದೆ.


ರಾಜ್ಯ ಮಟ್ಟದಲ್ಲಿ ಕರ್ನಾಟಕ 'ಸಮುದಾಯ' ಸಮನ್ವಯ ಸಮಿತಿ(ರಿ)ಯಾಗಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದು, 'ಸಮುದಾಯ' ತಂಡದ ಘಟಕಗಳ ತಾತ್ವಿಕವಾಗಿ ಕಾರ್ಯನಿರ್ವಹಿಸಿದ ಬದ್ಧತೆವುಳ್ಳ ಸಾಂಸ್ಕೃತಿಕ ಸಂಘಟನೆಯಾಗಿರುವುದು ನೋಡುತ್ತೇವೆ. ರಾಜ್ಯ ಹಾಗೂ ಜಿಲ್ಲಾ ಮಟ್ಟದ ಮತ್ತು ಘಟಕ ಮಟ್ಟದಲ್ಲಿ 'ಸಮುದಾಯ ಸಂಘಟನೆ ೧೯೮೬ರ ವೇಳೆಗೆ ೩೬ ಘಟಕಗಳು ಹೊಂದಿತು. ಇಡೀ ರಾಜ್ಯ ವ್ಯಾಪ್ತಿ 'ಸಮುದಾಯ' ಸಂಘಟನೆ ಹರಡಿದ್ದು ಮುಖ್ಯ ಸಂಗತಿ. ಇದರ ಜೊತೆ ದಲಿತ–ಬಂಡಾಯ ಸಂಘಟನೆಗಳು 'ಸಮುದಾಯ'ದೊಂದಿಗೆ ನಿರಂತರವಾಗಿ ಒಗ್ಗಟಾಗಿ ಪ್ರತಿಭಟನೆ, ಹೋರಾಟ ಹಾಗೂ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದವು. ೧೯೮೨ರಲ್ಲಿ ಪ್ರಸನ್ನ ಅವರು 'ಸಮುದಾಯ'ದಿಂದ ಸ್ವಲ್ಪ ಅಂತರ ಕಾದ್ದುಕೊಂಡರು ನಂತರ ೧೯೮೬ ರಿಂದ ಸಿ.ಜಿ.ಕೃಷ್ಣಸ್ವಾಮಿ ಅವರು 'ಸಮುದಾಯ'ದಿಂದ ಹೋರಬಂದು 'ರಂಗನಿರಂತರ' ಸಾಂಸ್ಕೃತಿಕ ತಂಡವನ್ನು ಸ್ಥಾಪಿಸಿದರು. ಹಾಗೆಯೇ ೧೯೮೮ರಲ್ಲಿ 'ಸಮುದಾಯ' ದಲಿತ–ಬಂಡಾಯ ಸಂಘಟನೆಗಳ ಐಕ್ಯತೆ ಕುಂಠಿತವಾಯಿತು. ಇದಕ್ಕೆ ಸಂಘಟನೆಯ ಮುಖಂಡರು ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷಗಳ ಜೊತೆಗೆ ಗುರುತಿಸಿಕೊಂಡಿದ್ದು ಕಾರಣವಾಗಿತ್ತು. ಇದಕ್ಕೆ ಪ್ರತಿಯಾಗಿ 'ಸಮುದಾಯ'ದಲ್ಲಿದ್ದ ಮುಖಂಡರಗಳಿಗೆ ಸರ್ಕಾರ ಒಂದು ಸಾಂಸ್ಕೃತಿಕ ೧೯೮೯ರಲ್ಲಿ ರಂಗ ಸಂಘಟನೆಯ್ನನು ಸ್ಥಾಪಿಸಿ, ಆರ್ಥಿಕ ನೆರವು ನೀಡಿತು ಅದುವೇ 'ರಂಗಾಯಣ' ಸಂಸ್ಥೆ. ಅಲ್ಲಿಂದ ರಂಗಾಯಣದಿಂದ ಕಾರ್ಯಕ್ರಮಗಳು ಹೆಚ್ಚಿದವು ಏಕೆಂದರೆ ಸರ್ಕಾರಿ ಆರ್ಥಿಕ ಸಹಕಾರ ನೀಡಿತು. ಬಿ.ವಿಕಾರಂತ, ಸಿ.ಬಸವಲಿಂಗಯ್ಯ, ಗಂಗಾಧರ ಸ್ವಾಮಿ, ಜನಾರ್ಧನ ಮುಂತಾದವರು ರಂಗಾಯಣದಲ್ಲಿ ರಂಗಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತರಾದರು. ನಂತರ 'ಸಮುದಾಯ' ಸಂಘಟನೆ ಪೂರ್ಣವಧಿ ಕಾರ್ಯಕರ್ತರಾಗಿ ರಂಗಚಟುವಟಿಕೆ ಮಾಡುವ ಕಾರ್ಯಕರ್ತರು ಕಡಿಮೆಯಾದರು. ಇದರ ಪರಿಣಾಮ ಮತ್ತು 'ಸಮುದಾಯ' ಘಟಕಗಳ ಸಲಹೆ ಮತ್ತು ಸೂಚನೆಗಳನ್ನು ರಾಜ್ಯ 'ಸಮುದಾಯ' ಘಟಕಗಳು ಕಡೆಗಣಿಸಿದ್ದರ ಫಲವಾಗಿ 'ಸಮುದಾಯ' ಸಂಘಟನೆ ಕುಂಟಿತ ವಾಗಲು ಕಾರಣವಾಯಿತು.

ಕೆಲವು ಘಟಕಗಳ ಸಕ್ರಿಯವಾಗಿದ್ದವು ಇದರ ಜೊತೆಗೆ 'ಸಮುದಾಯ' ಘಟಕಗಳು ಹಾಗೂ ಮುಖಂಡರೊಂದಿಗೆ ರಾಜ್ಯ ಸರ್ಕಾರ ೧೯೯೩ರಲ್ಲಿ ಜಾರಿಗೆ ತಂದ 'ರಾತ್ರಿ ಶಾಲೆಗಳ' ಸಾಕ್ಷರತಾ ಆಂದೋಲನದ ಭಾಗವಾಗಿ ಕಾರ್ಯಕ್ರಮ ಮಾಡಲು ಮುಂದಾದಾಗ 'ಸಮುದಾಯ'ದ ಮೇಲ್ ಸಮಿತಿಯಿಂದ ಸರ್ಕಾರ ಯೋಜನೆ ಪಡೆದು ಬೀದಿ ನಾಟಕಗಳು ಮಾಡಿದರೆ ಸರ್ಕಾರವು ಜನರನ್ನು ಶೋಷಣೆ ಮಾಡಿದಾಗ ನಾವು ಪ್ರತಿಭಟನೆ ಮಾಡಲು ಹೇಗೆ ಸಾಧ್ಯ ಎನ್ನುವ ಎಂಬ ಅರಿವೇ ಇಲ್ಲದೇ ತಾತ್ವಿಕವಾಗಿ ಟೊಳ್ಳಾದ 'ಸಮುದಾಯ' ಘಟಕದ ಮುಂಖಂಡರುಗಳು ಈ ಸಾಕ್ಷಾರತಾ ಕಾರ್ಯಕ್ರಮಗಳ ಮೂಲಕ ತಮ್ಮ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮುಂದಾದರು. ತೀರಾ ಒತ್ತಡ ಬಂದಾಗ 'ಸಮುದಾಯ' ಸಂಘಟನೆಯಿಂದ ದೂರವಾಗಿ ಹೊಸ

ರಂಗ ತಂಡಗಳನ್ನು ಕಟ್ಟಿಕೊಂಡರು. ಹೀಗೆ ದೂರವಾಗಿ ಹೊಸ ರಂಗ ತಂಡಗಳನ್ನು ಕಟ್ಟಿಕೊಂಡರು ಹೀಗೆ ಕಟ್ಟಿಕೊಂಡ ತಂಡಗಳು ತಾಲ್ಲೂಕು ಹಾಗೂ ಜಿಲ್ಲೆಗೆ ಸಿಮೀತವಾದವು. ಏಕೆಂದರೆ 'ಸಮುದಾಯ' ಬೆನ್ನಲುಬಾಗಿದ್ದ ಕಮ್ಯುನಿಸ್ಟ್ ಪಕ್ಷಗಳ ಹಾಗೂ ಸಮೂಹಿಕ ಸಂಘಟನೆಗಳ ಮುಖಂಡರಿಂದ ಬೆಂಬಲವಿರಲಿಲ್ಲ. ಇದರ ಪರಿಣಾಮವಾಗಿ ಈ ತಂಡಗಳು ಕಾಂಗ್ರೆಸ್, ಬಿ.ಜೆ.ಪಿ, ಜೆ.ಡಿ.ಎಸ್ ಪಕ್ಷಗಳ ಮುಖಂಡರುಗಳ ಸಹಕಾರಕ್ಕೆ ಮುಂದಾಗಿದ್ದು ಕಾಣುತ್ತೇವೆ. ಹೀಗೆ 'ಸಮುದಾಯ'ವು ರಾಜ್ಯಮಟ್ಟದ ಸಂಘಟಕರಲ್ಲಿ ಹಾಗೂ ಸ್ಥಳೀಯ ಘಟಕಗಳ ಮುಖಂಡರಗಳು ವಿಚಾರದಲ್ಲಿ ಸಾಂಸ್ಕೃತಿಕವಾಗಿ ರಾಜಕೀಯವಾಗಿ ಕೆಲವು ಐತಿಹಾಸಿಕ ತಪ್ಪು ಹೆಜ್ಜೆಗಳನ್ನು ಇಟ್ಟ ಕಾರಣ, 'ಸಮುದಾಯ' ಸಂಘಟನೆ ಪ್ರಸುತ್ತ ಕೆಲವೇ ಕೆಲವು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಆದರೂ ರಾಜ್ಯಮಟ್ಟದ ಸಮನ್ವಯ ಸಮಿತಿಯ ಮೂಲಕ ಹಾಗೆಯೇ ಕಾರ್ಯ ನಿರ್ವಹಿಸುತ್ತಿರುವುದು ಚಾರಿತ್ರಿಕ ಅಂಶವಾಗಿದೆ.

ಸಮುದಾಯ ಸಾಂಸ್ಕೃತಿಕ ಸಂಘಟನೆಯ ಘಟಕಗಳ ಏರಿಳಿತ(೧೯೭೫ ರಿಂದ ಇಂದಿನವರೆಗೆ) ರೇಖಾ ಚಿತ್ರ





೬.೯. 'ಸಮುದಾಯ'ದ ಘಟಕ-ರಾಜ್ಯ ಸಮ್ಮೇಳನಗಳು ಮತ್ತು ಸಮಾಜ

ಒಂದು ಯಾವುದೇ ಸಂಘಟನೆಯಲ್ಲಿ ಸದಸ್ಯತ್ವ ಹೇಗೆ ಮುಖ್ಯವೋ, ಸಮ್ಮೇಳನ ಅದಕ್ಕಿಂತ ಮುಖ್ಯವಾಗಿರುತ್ತದೆ. ಭಾರತ ಪ್ರಜಾಪ್ರಭುತ್ವ ದೇಶವಾಗಿರುವುದರಿಂದ ಸಂಘಟನೆಯ ಮುಖಂಡವನ್ನು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಬೇಕಾಗುತ್ತದೆ. ಜೊತೆಗೆ ಅದು ಸಮ್ಮೇಳನದಲ್ಲಿ ಚುನಾವಣೆಯ ಮೂಲಕ ಬಹುಮತ ಆಧಾರದ ಮೇಲೆ ಆಯ್ಕೆ ಮಾಡಬೇಕಾಗುತ್ತದೆ. ಹೀಗೆ ಮೇಲ್ ಸಮಿತಿಯಿಂದ ಸೂಚಿಸಿದ ಕಾರ್ಯದರ್ಶಿ, ಅಧ್ಯಕ್ಷರು ಹಾಗೂ ಖಜಾಂಚಿ ಒಬ್ಬರು, ಸಂಚಾಲಕರು ಒಬ್ಬರು ರಾಜ್ಯ-ಘಟಕ ಮಟ್ಟದ ಪದಾಧಿಕಾರಿಗಳು ಹಾಗೂ ರಾಜ್ಯ ಸಮಿತಿಯ ಸದಸ್ಯರು ಹೀಗೆ ಪ್ರತಿಯೊಂದು ಆಯ್ಕೆಯು ಪ್ರಜಾಸತ್ತಾತ್ಮಕವಾಗಿರುತ್ತದೆ. ಇದನ್ನು ಉಲ್ಲಂಘಿಸಿ ಕಟ್ಟುವ ಸಂಘಟನೆಯು, ವಿವಾದಗಳಿಂದ ಚರ್ಚೆಗಳ ಹಾಗೂ ಗುಂಪುಗಾರಿಕೆಯಿಂದ ಸಂಘಟನೆ ಒಡೆದು ವಿಂಗಡಣೆಗೆ ಕಾರಣವಾಗುತ್ತದೆ. ಇಂತಹ ಘಟನೆಗಳು ಎಲ್ಲಾ ಸಂಘಟನೆಗಳಲ್ಲಿ ಆಗುತ್ತದೆ. ಆದರೆ ಕೆಲವು ಸಂಘಟನೆಗಳಲ್ಲಿ ತೀರ ವಿರಳ ಇನ್ನೂ ಕೆಲವು ಸಂಘಟನೆಗಳಲ್ಲಿ ಹೆಚ್ಚು ಇರುವುದನ್ನು ಕಾಣಬಹುದಾಗಿದೆ. ಉದಾಹರಣೆ ಕನ್ನಡ ಸಂಘಟನೆಗಳು ದಲಿತ ಸಂಘಟನೆಗಳು ಇಂದಿನ ಸ್ಥಿತಿಗತಿಯನ್ನು ಕೂಲಂಕಷವಾಗಿ ನೋಡಿದರೆ ಗೋಚರಿಸುತ್ತದೆ.

ಯುವ ಸಂಘಟನೆಯ ನಾಯಕರುಗಳು ಹಾಗೂ ಕಾರ್ಯಕರ್ತರು ಹೆಚ್ಚಾಗಲು ಅಥವಾ ಆ ಸಂಘಟನೆ 'ಮಾಸ್ ಮೂಮೇಂಟ್' ಕಟ್ಟಬೇಕಾದರೆ, ಆ ಸಂಘಟನೆ ಚಟುವಟಿಕೆಗಳು ಸಮಾಜದೊಂದಿಗೆ ಸಂಬಂಧ ಹೊಂದಿರಬೇಕು. ನಿರಂತರವಾಗಿ ಚಟುವಟಿಕೆಗಳನ್ನು ಮಾಡಬೇಕು. ಏಕೆಂದರೆ ಸಮಾಜದಲ್ಲಿ ಶೋಷಿತರು-ಶೋಷಕರ ನಡುವೆ ನಿರಂತರವಾಗಿ ಸಂಘರ್ಷ ನಡೆಯುತ್ತದೆ.[೧೩] ಒಂದು ಸಂಘಟನೆ ಯಾರ ಪರವಾಗಿ ನಿಲ್ಲುತ್ತದೆ ಎಂಬ ವಾದ ಸಂಘಟನೆಯ ಬೆಳವಣಿಗೆ ಕಾರಣವಾಗುತ್ತದೆ. ಇದೇ ಕಾರಣದಿಂದ 'ಸಮುದಾಯ' 'ಶೋಷಿತ ಜನಸಮುದಾಯದ ಪರ' ಇದುದ್ದಕ್ಕೆ ಸಂಘಟನೆಯು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿತು. ಜೊತೆಗೆ ವಿಶ್ವದ ಬೇರೆ ಬೇರೆ ಪ್ರಗತಿಪರ ರಂಗ ತಂಡಗಳ ಜೊತೆಯಲ್ಲೂ ಗುರುತಿಸಿಕೊಂಡ 'ಸಮುದಾಯ' ಸಂಘಟನೆ ತನ್ನ ಕ್ಷೇತ್ರಕಾರ್ಯ ವಿಸ್ತರಿಸಿಕೊಂಡಿದೆ. ೨೦೧೫ರಲ್ಲಿ ಪ್ಯಾಲೆಸ್ಟೀನ್ ದೇಶದ ರಂಗಸಂಘಟನೆಯಾದ 'ಪ್ರೀಡಂ ಥಿಯೇಟರ್' ಮತ್ತು ದೆಹಲಿಯ 'ಜನ ನಾಟ್ಯ ಮಂಚ್'ನೊಂದಿಗೆ 'ಸಮುದಾಯ' ಸಹಕಾರದಿಂದ ಪ್ಯಾಲೆಸ್ಟೀನ್ ಮೂಲ ನಿವಾಸಿಗಳ ಮೇಲೆ ಇಸ್ರೇಲ್(ಅಮೇರಿಕ ಸಹಕಾರದಿಂದ) ಯುದ್ಧ ನೀತಿಯನ್ನು ಖಂಡಿಸಿ ಬೆಂಬಲವಾಗಿ ನಿಂತಿತು. ಈ ಅಮೇರಿಕಾದ ವಿರುದ್ಧವಾಗಿ 'ಪ್ರಿಡಂ ಥೀಯೇಟರ್' ಕಾರ್ಯ ನಿರ್ವಹಿಸತ್ತಾ ಭಾರತದ ಬಹುತೇಕ ನಗರಗಳಿಗೆ 'ಜನ ನಾಟ್ಯ ಮಂಚ್' ಸಹಕಾರದೊಂದಿಗೆ ವಿಚಾರ ಸಂಕಿರಣ ಹಾಗೂ ಬೀದಿ ನಾಟಕಗಳ ಮೂಲಕ ಪ್ಯಾಲೆಸ್ಟೀನ್ ಬಿಕ್ಕಟ್ಟು ಎದುರಿಸುತ್ತಿರುವುದನ್ನು ಬೀದಿ ನಾಟಕಗಳ ಮೂಲಕ ಅಮೇರಿಕಾದ ಯುದ್ಧ ವಿರೋಧಿ ನೀತಿಗಳ ವಿರುದ್ಧ ರಂಗ ಚಳವಳಿಯನ್ನು ಮಾಡುತ್ತಿದೆ. ಜೊತೆಗೆ ಭಾರತದ ಜನರನ್ನು ಪ್ಯಾಲೆಸ್ಟೀನ್ ಜನರ ಬಗ್ಗೆ 'ಸಮುದಾಯ' ಸಾಂಸ್ಕೃತಿಕ ಸಂಘಟನೆಯಿಂದ 'ಗೋಡೆಗಳಿಗೆ ಕಥೆ ಹೇಳಿ' ನಾಟಕದ ಮೂಲಕ ಪ್ಯಾಲೆಸ್ಟೀನ್

ಹಾಗೂ ಹಿಂದಿ ಮಿಶ್ರಿತ ಭಾಷೆಯ ಮೂಲಕ ನಾಟಕವಾದ 'ಹಮೇಶಾ ಸಾವಿದ' ನಾಟಕವು ಬೆಂಗಳೂರಿನ ಚಿತ್ರಕಲಾ ಪರಿಷತ್ತು, ರಂಗ ಶಂಕರ, ರವೀಂದ್ರ ಕಲಾಕ್ಷೇತ್ರ, ಹಾಗೂ ಇನ್ನೂ ಹಲವು ಕಡೆ ಪ್ರದರ್ಶನಗಳು ನೀಡಿತು. ಈ ನಾಟಕಕ್ಕೆ ದೆಹಲಿಯ ರಂಗಕಲಾವಿದರಾದ ಅನುರೂಪ ರಾಯ್ ಗೊಂಬೆ ಆಟ(ಪೇಪೆಟ್ಸ್ ಕಲೆ)ಮೂಲಕ ಹೊಸ ರಂಗ ಪ್ರಯೋಗವನ್ನು ತೋರಿಸಿಕೊಟ್ಟಿದ್ದು ಮಹತ್ವ ಕೆಲಸವಾಗಿದೆ.[೧೪] ಹೀಗೆ 'ಸಮುದಾಯ' ಜೊತೆಗೆ ಜನಮ್‌ನ ಸುಧನ್ವ ದೇಶಪಪಾಂಡೆ, ಮಾಲಯಶ್ರೀ(ಸಫ್ದರ್ ಹಶ್ಮಿ)ಯ ಹೆಂಡತಿ ಹಾಗೂ ಫ್ರೀಡಂ ಥೀಯೆಟರ್‌ನ 'ಪೈಸಲ್ ಅಬು ಅಲ್ಲಾಬ್' ಈ ಮುಖ್ಯ ಕಾರ್ಯಕ್ರಮಕ್ಕೆ ಎಂ.ಎಸ್.ಸತ್ಯು, ಡಿ.ಕೆ.ಭಟ್, ಆರ್.ಕೆ.ಹುಡುಗಿ, ಕೆ.ಎಸ್.ವಿಮಲಾ. ಟಿ.ಸುರೇಂದ್ರರಾವ್, ಎಚ್.ಎಸ್.ವೇಣುಗೋಪಾಲ್, ವೆಂಕಟೇಶ ಮೂರ್ತಿ, ಅಚ್ಯುತ್, ಶ್ರೀಪಾದಭಟ್, ಸುಶ್ಮಾ ಸೇರಿದಂತೆ 'ಸಮುದಾಯ' ರಾಜ್ಯ ಮುಖಂಡರು ಒಟ್ಟಾಗಿ ಪ್ಯಾಲೆಸ್ತೇನ ರೂಪಿಸಿದ ರಂಗ ಚಳವಳಿಯನ್ನು ಮುಂದಾಗಿದ್ದು 'ಸಮುದಾಯ' ರಾಜ್ಯ ಹಾಗೂ ರಾಷ್ಟ್ರ ಕೆಲವು ಇತರೆ ದೇಶಗಳಲ್ಲಿ ಪರಿಚಯವಾಗಿದ್ದು ಐತಿಹಾಸಿಕ ಸಂಗತಿಯಾಗಿದೆ.

'ಸಮುದಾಯ'ದ ರಾಜ್ಯ ಸಮ್ಮೇಳನಗಳು

ರಾಜ್ಯ ಸಮ್ಮೇಳನಗಳ ನಿರ್ದಿಷ್ಟವಾಗಿ ತನ್ನ 'ಸಂವಿಧಾನ' ಬೈಲದ ಮೂಲಕ ಇಂತಿಷ್ಟು ವರ್ಷಗಳಲ್ಲಿ ನಡೆಸಬೇಕು ಎಂದು ಇರುತ್ತಾರೆ. ಎರಡು ವರ್ಷಕ್ಕೆ ಅಥವಾ ಮೂರು ವರ್ಷಕ್ಕೆ ಅದರಂತೆಯ ಸಮ್ಮೇಳನಗಳ ನಡೆಸಿಕೊಂಡು ರಾಜ್ಯ ಸಮಿತಿ ಹೋಗುತ್ತದೆ. ಆಯ್ಕೆಯಾದ ರಾಜ್ಯ ಸಮ್ಮೇಳನಕ್ಕೆ ಘಟಕ ಅಥವಾ ಜಿಲ್ಲೆಯ 'ಸಮುದಾಯ' ಸದಸ್ಯಕ್ಕೆ ಆಧಾರಿತವಾಗಿ ಖೋಟವಾರು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳು ಪ್ರಜಾಸಾತ್ತತ್ಮಕಾವಾಗಿ ಆಯ್ಕೆ ಮಾಡುತ್ತಾರೆ.[೧೫] ೧೯೭೫ರಲ್ಲಿ ಹುಟ್ಟಿಕೊಂಡು ಈ 'ಸಮುದಾಯ' ಸಾಂಸ್ಕೃತಿಕ ಸಂಘಟನೆಗೆಯಲ್ಲಿ ಒಟ್ಟು ಇಂದಿಗೆ ಅಂದರೆ ೨೦೧೯ ಡಿಸೆಂಬರ್ ೧೩ರಕ್ಕೆ ರಾಜ್ಯ ಸಮ್ಮೇಳನಗಳು ಆಗಿರುತ್ತದೆ. ಅವುಗಳ ಪಟ್ಟಿಯನ್ನು ಈ ಕೆಳಗಿನಂತೆ ನೋಡೋಣ.

೧. ೧ನೇ ರಾಜ್ಯ ಸಮ್ಮೇಳನವು, ಬೆಂಗಳೂರು, ಅಧ್ಯಕ್ಷರಾಗಿ ಪ್ರಸನ್ನ, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಜಿ.ಕೃಷ್ಣಸ್ವಾಮಿ, ಖಜಾಂಚಿ ಎಸ್.ಮಾಲತಿ–೧೯೭೫.

೨. ೨ನೇ ರಾಜ್ಯ ಸಮ್ಮೇಳನವು, ಹುಬ್ಬಳ್ಳಿ–ಧಾರವಾಡ ಅಧ್ಯಕ್ಷರು, ಆರ್.ಕೆ.ಹುಡುಗಿ ಪ್ರಧಾನ ಕಾಯದರ್ಶಿ ಟಿ.ಸುರೇಂದ್ರರಾವ್, ಖಜಾಂಚಿ ಸುದಾ ಜೋಷಿ–೨೦೦೬.

೩. ೩ನೇ ಸಮ್ಮೇಳನವು ಕುಂದಾಪುರ, ಅಧ್ಯಕ್ಷರಾಗಿ ಬೋಳವಾರ್ ಮಹಮದ್ ಕುಂಞಿ ಪ್ರಧಾನ ಕಾರ್ಯದರ್ಶಿ ಹೆಚ್.ಜನಾರ್ಧನ ಖಜಾಂಚಿ ಸಿ.ಕೆ.ಗುಂಡಣ್ಣ

೪. ೪ನೇ ರಾಜ್ಯ ಸಮ್ಮೇಳನವು ಬೆಂಗಳೂರು ಅಧ್ಯಕ್ಷರು ಸಿ.ಬಸವಲಿಂಗಯ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಜನಾರ್ಧನ.

೫. ೫ನೇ ಸಮ್ಮೇಳನ ಅಧ್ಯಕ್ಷರು ಸಿ.ಬಸವಲಿಂಗಯ್ಯ ಪ್ರಧಾನ ಕಾರ್ಯದರ್ಶಿ ಎಂ.ಜಿ.ವೆಂಕಟೇಶ್, ಖಜಾಂಚಿ, ಸಿ.ಗುಂಡಣ್ಣ.

೬. ೬ನೇ ರಾಜ್ಯ ಸಮ್ಮೇಳನ ಮೈಸೂರು, ಅಧ್ಯಕ್ಷರು ಅಚ್ಯುತ್ ಪ್ರಧಾನ ಕಾರ್ಯದರ್ಶಿ ದೇವೇಂದ್ರಗೌಡ ಖಜಾಂಚಿ. ವಸಂತರಾಜ್

೭. ೭ನೇ ರಾಜ್ಯ ಸಮ್ಮೇಳನ ಕೋಲಾರ, ಅಧ್ಯಕ್ಷರು ಅಚ್ಯುತ್ ಪ್ರಧಾನ ಕಾರ್ಯದರ್ಶಿ; ದೇವೇಂದ್ರಗೌಡ ಖಜಾಂಚಿ. ವಸಂತರಾಜ್

ಈ ಮೇಲಿನ ರಾಜ್ಯಸಮ್ಮೇಳನ ಸ್ಥಳ, ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಕಾಲ 'ಸಮುದಾಯ'ದ ರಾಜ್ಯ ಸಮ್ಮೇಳನಗಳು ನಡೆದಿದ್ದು ಎಂಬ ಮಾಹಿತಿಯನ್ನು ಅಚ್ಯುತ್ ಅವರು ನೀಡಿರುತ್ತಾರೆ.

೬.೧೦. ಕಳೆದ ನಾಲ್ಕುವರೆ ದಶಕಗಳ 'ಸಮುದಾಯ' ರಾಜ್ಯ ಸಮಿತಿಗಳ ವಿಮರ್ಶೆ

ಒಂದು ಸಾಂಸ್ಕೃತಿಕ ಸಂಘಟನೆ ೪೫ ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತ ನಿರಂತರವಾಗಿ ತನ್ನ ಚಟುವಟಿಕೆಗಳನ್ನು ಮಾಡುವ ಜೀವಂತವಾಗಿ ಇರುವುದೆಂದರೆ ಆ ಸಂಘಟನೆ ತನ್ನದೆ ಆದ ಉದ್ದೇಶ, ಗುರಿ, ಧೋರಣೆ, ಆಶಯ, ತಾತ್ವಿಕತೆ ಹಾಗೂ ಸೈದ್ಧಾಂತಿಕ ಬದ್ಧತೆ ಇರುತ್ತದೆ ಎಂದು ಹೇಳಬಹುದು. ಏಕೆಂದರೆ ಒಂದು ಸಂಘಟನೆಯ ಹಿಂದೆ ಹಲವು ಜನರ ತ್ಯಾಗದ ಪರಂಪರೆ ಇದ್ದರೆ ಮಾತ್ರ ಆ ಸಂಘಟನೆ ಉಳಿದು ಬೆಳೆಯತ್ತದೆ. ಕೆಲವು ಗಣೇಶ ಹಬ್ಬದ ಸಮಯದಲ್ಲಿ ಹುಟ್ಟಿಕೊಂಡ ಸಂಘಟನೆಯು ಮತ್ತೆ ಚೇತರಿಕೆ ಕಂಡುಬರುವುದು ಮರು ವರ್ಷದ ಗಣೇಶ ಹಬ್ಬದಲ್ಲಿ ಮಾತ್ರ, ಇಂಥ ಸಂಘಟನೆಗಳಿಗೆ ಯಾವುದೇ ಸೈದ್ಧಾಂತಿಕ ಬದ್ಧತೆ ಹಾಗೂ ಆರ್ಥಿಕ ನೀತಿ ನಿಯಮಗಳು ಇಲ್ಲದೆ, ಅಲ್ಪಾವಧಿಯಲ್ಲಿ ಹುಟ್ಟಿ ಅಲ್ಪಾವಧಿಯಲ್ಲಿ ನಶಿಸಿ ಹೋಗುತ್ತವೆ.[೧೬] ಆದರೆ 'ಸಮುದಾಯ' ಸಂಘಟನೆಯು ತನ್ನದೆ ಆದ ಸಿದ್ಧಾಂತದ ಮೂಲಕ 'ಸಮ ಸಮಾಜದ' ಕನಸನ್ನು ಕಾಣುತ್ತಾ, ಕ್ರಾಂತಿ ವಿಚಾರಗಳನ್ನು ತನ್ನ ನಾಟಕಗಳಿಂದ ಹರಡುತ್ತಾ ಬೆಳೆದಿದೆ. ಜೊತೆಗೆ ಧೈರ್ಯವಾಗಿ ಸುಳ್ಳನ್ನು ಸುಳ್ಳೆಂದು ಸತ್ಯವನ್ನು ಸತ್ಯವೆಂದು ಹೇಳುವ ಪರಿಣಾಮದಿಂದ ಶೋಷಿಕರ, ಬಂಡವಾಳಶಾಹಿಗಳ, ಜಮೀನ್ದಾರಿಗಳ ಹಾಗೂ ದೊಡ್ಡ ಶ್ರೀಮಂತಶಾಹಿಗಳ ವಿರೋಧವನ್ನು ಕಟ್ಟಿಕೊಂಡಿದೆ.

